ಅಲೆಮಾರಿ ಕುರುಬರ ಆರ್ಥಿಕ ಅಧ್ಯಯನ

(ಪಿಎಚ್ ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು

ಯರ್ರಪ್ಪ ಡಿ

ಮಾರ್ಗದರ್ಶಕರು

ಪ್ರೊ ಕೆ ಎಂ ಮೇತ್ರಿ

ಬುಡಕಟ್ಟು ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

227

ಅಲೆಮಾರಿ ಕುರುಬರ ಆರ್ಥಿಕ ಅಧ್ಯಯನ

(ಪಿಎಚ್ ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು
ಯರ‍್ರಪ್ಪ ಡಿ

ಮಾರ್ಗದರ್ಶಕರು
ಪ್ರೊ ಕೆ ಎಂ ಮೇತ್ರಿ

ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪ್ರಮಾಣ ಪತ್ರ

ಅಲೆಮಾರಿ ಕುರುಬರ ಆರ್ಥಿಕ ಅಧ್ಯಯನ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್ ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪ್ರೊ ಕೆ ಎಂ ಮೇತ್ರಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

D. [Yerreppa D.]

ದಿನಾಂಕ : ೮.೯.೨೦೦೨
ಸ್ಥಳ : ವಿದ್ಯಾರಣ್ಯ

(ಯರ್‍ರಪ್ಪ ಡಿ.)
ಪಿಎಚ್ ಡಿ ಸಂಶೋಧನ ವಿದ್ಯಾರ್ಥಿ
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ದೃಢೀಕರಣ ಪತ್ರ

ಅಲೆಮಾರಿ ಕುರುಬರ ಆರ್ಥಿಕ ಅಧ್ಯಯನ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಶ್ರೀ ಯರ್ರಪ್ಪ ಡಿ. ಇವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಪಿಎಚ್ ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : ೦೬.೦೯.೨೦೧೨
ಸ್ಥಳ : ವಿದ್ಯಾರಣ್ಯ

(ಪ್ರೊ ಕೆ ಎಂ ಮೇತ್ರಿ)
ಮಾರ್ಗದರ್ಶಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

[illegible]

[illegible]

ಕೃತಜ್ಞತೆಗಳು

'ಅಲೆಮಾರಿ ಕುರುಬರ ಆರ್ಥಿಕ ಅಧ್ಯಯನ' ಎಂಬೀ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಒಪ್ಪಿಸಲು ಹರ್ಷವೆನಿಸುತ್ತದೆ. ಈ ಸಂದರ್ಭದಲ್ಲಿ ನನ್ನ ಅಧ್ಯಯನಕ್ಕೆ ಅವಕಾಶ ಕಲ್ಪಿಸಿಕೊಟ್ಟ ಹಿಂದಿನ ಕುಲಪತಿಗಳಾದ ಡಾ ಎಚ್ ಜೆ ಲಕ್ಕಪ್ಪಗೌಡ, ಡಾ ಬಿ ಎ ವಿವೇಕ ರೈ ಅವರಿಗೂ, ಪ್ರಭಾರಿ ಕುಲಪತಿಗಳಾದ ಡಾ ಕೆ ವಿ ನಾರಾಯಣ ಅವರಿಗೂ ಹಾಗೂ ಇಂದಿನ ಪ್ರಭಾರಿ ಕುಲಪತಿಗಳಾದ ಡಾ ಹಿ ಚಿ ಬೋರಲಿಂಗಯ್ಯ ಹಾಗೂ ಕುಲಸಚಿವರಾದ ಡಾ ವಿ ಶಂಕರ್ ಅವರಿಗೂ ಹಾಗೂ ಅಧ್ಯಯನಾಂಗದ ನಿರ್ದೇಶಕರಾದ ಡಾ ಪಾಂಡುರಂಗಬಾಬು ಅವರಿಗೂ, ಪ್ರಸಾರಾಂಗದ ನಿರ್ದೇಶಕರಾದ ಪ್ರೊ ಮಲ್ಲೇಪುರಂ ಜಿ ವೆಂಕಟೇಶ ಅವರಿಗೂ ನನ್ನ ಸಂಶೋಧನೆಯ ಮಾರ್ಗದರ್ಶಕರಾಗಿ ಅಧ್ಯಯನದುದ್ದಕ್ಕೂ ಸೂಕ್ತ ಸಲಹೆ, ಸಹಕಾರ ನೀಡಿ ಸಂಶೋಧಕನನ್ನಾಗಿ ರೂಪಿಸಿದ ಡಾ ಕೆ ಎಂ ಮೇತ್ರಿ ಅವರಿಗೂ ತುಂಬು ಹೃದಯದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ನನ್ನ ಅಧ್ಯಯನಕ್ಕೆ ಪ್ರೋತ್ಸಾಹಿಸುತ್ತಿದ್ದ ವಿಭಾಗದ ಮುಖ್ಯಸ್ಥರಾದ ಡಾ ಚೆಲುವರಾಜು ಅವರಿಗೂ ಪ್ರಾಧ್ಯಾಪಕರುಗಳಾದ ಡಾ ಕೇಶವನ್ ಪ್ರಸಾದ ಅವರಿಗೂ ಮತ್ತು ಹಿರಿಯ ಶ್ರೇಣಿ ಅಧ್ಯಾಪಕರುಗಳಾದ ಡಾ ಗಂಗಾಧರ ದೈವಜ್ಞ, ಡಾ ಎ ಎಸ್ ಪ್ರಭಾಕರ ಅವರಿಗೂ ವಿಭಾಗದ ಸಿಬ್ಬಂದಿವರ್ಗದವರಾದ ಶ್ರೀಮತಿ ದಿಲ್‌ಶಾದ್ ಬಾನು, ಶ್ರೀ ಅಜೀತ್ ಮತ್ತು ಶ್ರೀ ಮಲ್ಲೇಶ್ ಅವರುಗಳಿಗೂ ಅಭಾರಿಯಾಗಿದ್ದೇನೆ.

ಅಧ್ಯಯನದ ಅವಧಿಯಲ್ಲಿ ವಿವಿಧ ರೀತಿಯಲ್ಲಿ ಸಹಕರಿಸಿ ಪ್ರೋತ್ಸಾಹಿಸಿದ ಸಿರುಗುಪ್ಪ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರಾದ ಎಸ್ ಬಸವರಾಜ್, ಹಾಗೂ ಉಪನ್ಯಾಸಕ ಮಿತ್ರರಾದ ಚಂದ್ರಶೇಖರ, ಕುಸುಮ ರಾಮ ರಾವ್, ಬಸವರಾಜ್, ಪೊಂಪಪತಿಗೌಡ, ಶಿಕ್ಷಕ ವೃಂದದವರಿಗೂ, ಸಿಬ್ಬಂದಿ ವರ್ಗಕ್ಕೂ ಹಾಗೂ ಬಳ್ಳಾರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯರು, ಉಪನ್ಯಾಸಕರು ಮತ್ತು ಸಿಬ್ಬಂದಿ ವರ್ಗದವರಿಗೂ ಕೃತಜ್ಞತೆಗಳನ್ನು ಸಲ್ಲಿಸುವೆನು ಹಾಗೂ ನನ್ನ ಪ್ರೀತಿಯ ವಿದ್ಯಾರ್ಥಿಗಳಿಗೆ ಅಭಿನಂದನೆಗಳು.

ಸ್ನೇಹಿತರಾಗಿ, ಹಿತೈಷಿಗಳಾಗಿ ಯಾವತ್ತೂ ನನ್ನ ಏಳ್ಗೆಯನ್ನು ಬಯಸುತ್ತಿರುವ ಆತ್ಮೀಯರಾದ ಡಾ ಎ ಚನ್ನಪ್ಪ, ಡಾ ಸಿದ್ದಪ್ಪ, ಡಾ ಆರ್ ಬಿ ಕುಮಾರ, ಡಾ ಪಿ ಸಿ ಮಾರುತಿ, ಡಾ ಹೆಚ್ ರಾಮಕೃಷ್ಣ, ಡಾ ಕೃಷ್ಣ, ಡಾ ವೆಂಕಟೇಶ, ಡಾ ಬಸವರಾಜ್ ಹಿರೇಮಠ, ಡಾ ಡಿ ಲೋಕರಾಜ,

ಚಂದ್ರಪ್ಪ ಸೋಬಾಟೆ, ಲಿಂಗಪ್ಪ, ಅರುಣಕುಮಾರ, ಕಲ್ಲಪ್ಪ, ಸುರೇಶ್, ಬಸವರಾಜ್ ಎ ಡಿ, ಮಲ್ಲಿಕಾರ್ಜುನ ಮನ್ನಾಡೆ, ಸತೀಶ್, ಜ್ಯೋತಿ ಡಿ ಬಿ, ವಿಜಯಲಕ್ಷ್ಮಿ ಇವರೆಲ್ಲಾರಿಗೂ ತುಂಬು ಹೃದಯದ ಅಭಿನಂದನೆಗಳು ಸಲ್ಲಿಸುತ್ತೇನೆ.

ಅಳಿಯನ ಓದಿನ ಹೆಗ್ಗಳಿಕೆಯನ್ನು ಸಾರುತ್ತಾ ಅನೇಕ ಕನಸುಗಳನ್ನು ಕಟ್ಟಿಕೊಂಡು ಅವು ಕೈಗೂಡುವ ಮುನ್ನವೇ ದೈವಧೀನರಾದ ನಾಗೇಂದ್ರಪ್ಪ ಮಾಮನವರಿಗೂ, ಅಕ್ಕಂದಿರಾದ ದ್ರಾಕ್ಷಯಣಿ ಕೆ ಎಂ ಮೇತ್ರಿಯವರಿಗೂ, ನನ್ನ ಏಳ್ಗೆಯನ್ನು ಬಯಸುತ್ತಾ ಸದಾ ಮೂಕ ಪ್ರೇಕ್ಷಕರಂತೆ ಎದುರು ನೋಡುತ್ತಿರುವ ತಂದೆ ಕೆ ದೊಡ್ಡರುದ್ರಪ್ಪ ತಾಯಿ ಹನುಮಂತಮ್ಮ ಅವರಿಗೂ ನನ್ನ ನಮನಗಳು. ದೀರ್ಘಕಾಲದ ವ್ಯಾಸಂಗವನ್ನು ತಾಳ್ಮೆಯಿಂದ ಸಹಕರಿಸಿದ ಅಕ್ಕ ನಾಗಲಕ್ಷ್ಮಿ, ಅಣ್ಣ ಕಾಳೇಶಪ್ಪ, ವಕೀಲರಾದ ತಮ್ಮ ಸಣ್ಣ ಯರ್ರಪ್ಪ, ಅತ್ತಿಗೆ ಲಕ್ಷ್ಮಿ, ಸೊಸೆ ಕವಿತಾ ಹಾಗೂ ನನ್ನ ಅಣ್ಣನ ಮಕ್ಕಳಾದ ಲಲಿತ, ನೇತ್ರಾವತಿ, ಕರುಣೇಶ, ಜ್ಯೋತಿ ಹಾಗೂ ಅಕ್ಕನ ಮಕ್ಕಳಾದ ಪ್ರಕಾಶ, ಸುರೇಶ ಇವರಿಗೂ ನನ್ನ ಪ್ರೀತಿಯ ಸವಿ ನೆನೆಕೆಗಳು.

ಅಧ್ಯಯನದ ಅವಧಿಯಲ್ಲಿ ಸಹನೆಯಿಂದ ಸಹಕರಿಸಿದ ಬಾಳಸಂಗಾತಿಯಾಗಿರುವ ಸುಮ ಹಾಗೂ ಮಗಳಾದ ಐಶೂ, ಬರವಣಿಗೆಯ ದಿನಗಳಲ್ಲಿ ಆರು ತಿಂಗಳುಗಳ ಕಾಲ ಹೆಂಡತಿ ಮತ್ತು ಮಗಳನ್ನು ಮನೆಯಲ್ಲಿಟ್ಟುಕೊಂಡು ಆರೈಕೆ ಮಾಡಿದ ಅತ್ತೆ-ಮಾಮನವರಾದ ಶ್ರೀಮತಿ ಲಕ್ಷ್ಮಿದೇವಿ ಮತ್ತು ಶ್ರೀ ಕೆಂಚಲಿಂಗಪ್ಪ ಅವರಿಗೂ, ಅಳಿಯನಾದ ವಿರೂಪಾಕ್ಷಿ, ಸೊಸೆಯಂದಿರಾದ ರೂಪ ಮತ್ತು ಶ್ವೇತಾ ಹಾಗೂ ಪ್ರಕಾಶ ಅವರಿಗೂ ಚಿರಋಣಿಯಾಗಿರುವೆ.

ಸಂಶೋಧನ ಕ್ಷೇತ್ರಕಾರ್ಯಕ್ಕೆ ಹೋದಾಗಲೆಲ್ಲಾ ತಮ್ಮ ಮಗನಂತೆ ಕಂಡು, ಊಟ ವಸತಿ ನೀಡಿ, ಅಧ್ಯಯನಕ್ಕೆ ಅಗತ್ಯವಾದ ಮಾಹಿತಿಗಳನ್ನು ಒದಗಿಸಿದ ಅಲೆಮಾರಿ ಕುರುಬ ಸಮುದಾಯದ ಎಲ್ಲ ಮಾಹಿತಿದಾರರಿಗೂ ಹಾಗೂ ಸಮುದಾಯದ ಪ್ರತಿಯೊಬ್ಬ ಸದಸ್ಯರಿಗೂ ನಾನು ಅಭಾರಿಯಾಗಿರುವೆ.

ಕನ್ನಡ ವಿಶ್ವವಿದ್ಯಾಲಯದ ಗ್ರಂಥಪಾಲಕರಾದ ಡಾ ನಾಗವೇಣಿ ಮತ್ತು ಡಾ ಕೆ ಎ ರಾಧಕೃಷ್ಣ ಅವರಿಗೂ ಮತ್ತು ಸಿಬ್ಬಂದಿ ವರ್ಗದವರೆಲ್ಲರಿಗೂ ನಾನು ಋಣಿಯಾಗಿರುವೆ. ಈ ಮಹಾ ಪ್ರಬಂಧವನ್ನು ಪ್ರೀತಿಯಿಂದ ಹಾಗೂ ಆತ್ಮಿಯತೆಯಿಂದ ಅಂದವಾದ ಅಕ್ಷರ ರೂಪದಲ್ಲಿ ಸಂಯೋಜಿಸಿದ ಶ್ರೀನಿವಾಸ ಕೆ. ಕಲಾಲ್., ಭಾವನಾ ಗ್ರಾಫಿಕ್ಸ್, ಕಮಲಾಪುರ ಹಾಗೂ ಛಾಯಾಚಿತ್ರಗಳನ್ನು ಸಂಯೋಜಿಸಿದ ಗಿರೀಶ್ ದೇವಲಾಪುರ ಮತ್ತು ನನ್ನ ಅಧ್ಯಯನಕ್ಕೆ ಪ್ರತ್ಯೆಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲಾ ಮಿತ್ರರಿಗೂ ತುಂಬು ಹೃದಯದ ಕೃತಜ್ಞತೆಗಳು.

ಯರ್‍ರಪ್ಪ ಡಿ.

ಪರಿವಿಡಿ

ಅನುಬಂಧಗಳು

ಪರಿಶಿಷ್ಟಗಳು

ಪರಿಶಿಷ್ಟ V : ಪತ್ರಿಕಾ ವರದಿಗಳು

ಪರಿಶಿಷ್ಟ VI : ಛಾಯಾಚಿತ್ರಗಳು

ಅಧ್ಯಾಯ ೧

ಅಧ್ಯಯನ ಸ್ವರೂಪ - ವ್ಯಾಪ್ತಿ - ವಿಧಾನ

೧.೧ ಪ್ರವೇಶ

೧.೨ ಅಧ್ಯಯನಗಳ ಸಮೀಕ್ಷೆ

೧.೩ ಅಧ್ಯಯನದ ಪ್ರಾಮುಖ್ಯತೆ

೧.೪ ಅಧ್ಯಯನದ ಉದ್ದೇಶಗಳು

೧.೫ ಅಧ್ಯಯನದ ವ್ಯಾಪ್ತಿ

೧.೬ ಅಧ್ಯಯನದ ವಿಧಾನಗಳು

ಅಧ್ಯಯನ ಸ್ವರೂಪ - ವ್ಯಾಪ್ತಿ - ವಿಧಾನ

ಪ್ರವೇಶ

ಭೂಮಿಯ ಮೇಲೆ ಅವತರಿಸಿದ ಮಾನವ ತನ್ನ ಮೊದಲ ಕಾಲಘಟ್ಟದಲ್ಲಿ ಕಾಡು ಸ್ಥಿತಿಯಲ್ಲಿದ್ದು ಅಲೆಮಾರಿ ಬದುಕು ನಡೆಸುತ್ತಿದ್ದನೆಂಬುದು ಸರ್ವವೇದ್ಯವಾದ ಸಂಗತಿ. ಕಾಡು ಸ್ಥಿತಿಯಲ್ಲಿದ್ದಾಗ ಮಾನವನು ಆಹಾರಕ್ಕಾಗಿ ನಿಸರ್ಗದ ಮಡಿಲಲ್ಲಿ ದೊರೆಯುವ ಪ್ರಾಣಿ-ಪಕ್ಷಿ, ಗಡ್ಡೆ-ಗೆಣಸು ಹಣ್ಣು-ಹಂಪಲುಗಳನ್ನು ತಿಂದು ಜೀವಿಸುತ್ತಿದ್ದ. ಇವನ್ನು ಹುಡುಕಿಕೊಂಡು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸಂಚರಿಸುತ್ತಿದ್ದ. ಈ ಸಂದರ್ಭದಲ್ಲಿ ಬೆಟ್ಟ-ಗುಡ್ಡ, ಗವಿಗಳು, ಕಾಡಿನಲ್ಲಿರುವ ಮರಗಳ ಪೊಟರೆಗಳು ಆತನ ವಾಸಸ್ಥಳಗಳಾಗಿದ್ದವು. ಆಹಾರ ಮತ್ತು ಆಶ್ರಯಗಳೆರಡಕ್ಕೂ ಅವನು ನಿಸರ್ಗವನ್ನೇ ಅವಲಂಬಿಸಿದ್ದ. ನಿಸರ್ಗವು ಅಂದಿನ ಮಾನವನ ಜೀವಾಳವಾಗಿತ್ತು. ನಿಸರ್ಗದೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದ ಆದಿಮಾನವ ಕಾಲದ ಬದಲಾವಣೆಗಳಿಂದಾಗುವ ಏರು-ಪೇರುಗಳನ್ನು ಚೆನ್ನಾಗಿ ಅರಿತಿದ್ದ. ಪ್ರಕೃತಿಯ ವಿಕೋಪಗಳಾದ ಮಳೆ, ಗಾಳಿ, ಬಿಸಿಲು, ಚಳಿ, ಗುಡುಗು, ಮಿಂಚು, ಪ್ರವಾಹ, ಬೆಂಕಿ, ಕಾಡುಪ್ರಾಣಿಗಳ ಹಾವಳಿ ಇತ್ಯಾದಿಗಳಿಂದಾಗುವ ದುಷ್ಪರಿಣಾಮಗಳನ್ನು ಎದುರಿಸಲು ಉಪಾಯ ಕಂಡುಕೊಂಡಿದ್ದ.

ಮಾನವನು ಬೇಟೆ ಸಂಸ್ಕೃತಿಯ ಕಾಲಘಟ್ಟದಲ್ಲಿ ಮುಂದುವರೆದಾಗ ಪ್ರಾಣಿಗಳ ಮಾಂಸವೇ ಆತನ ಆಹಾರವಾಯಿತು. ಪ್ರಾಣಿಗಳ ಚರ್ಮವು ಅವನ ಹೊದಿಕೆಯಾಯಿತು. ಸಂಚಾರಿ ಜೀವನದಿಂದ ತಟಸ್ಥ ಜೀವನಕ್ಕೆ ಮುಂದುವರಿದಾಗ ಕಾಡಿನಲ್ಲಿ ಕಂಡ ಪ್ರಾಣಿಗಳನ್ನು ಬೇಟೆಯಾಡಿ ತರುವ ಬದಲು ತನ್ನ ಬುದ್ಧಿವಂತಿಕೆಯಿಂದ ಅವನ್ನು ಹಿಡಿದು ಪಳಗಿಸಿ ಸಾಕಿ ತಳಿ ಬೆಳೆಸುವ ವಿದ್ಯೆಯನ್ನು ಕಂಡುಕೊಂಡನು.

ಮಾನವನು ಭೌತಿಕವಾಗಿ ವಿಕಾಸವಾದಂತೆ ಬೌದ್ಧಿಕಮಟ್ಟದಲ್ಲಿ ಕೆಲವೊಂದು ಪರಿವರ್ತನೆಗಳು ಕಂಡುಬಂದವು. ಪರಿಣಾಮವಾಗಿ ಕಾಡಿನಲ್ಲಿರುವ ಕಾಡುಪ್ರಾಣಿಗಳನ್ನು ಪಳಗಿಸಿ ಅಲೆದಾಡಿ ಸಾಕಿ

[illegible]

ಸಲುಹುದರ ಜೊತೆಗೆ ಬದುಕಿನ ನೆಲೆ-ಬೆಲೆಯನ್ನು ಕಂಡುಕೊಂಡನು. ಕಾಲಾಂತರದಲ್ಲಿ ಬೌದ್ಧಿಕ ವಿಕಾಸವಾದಂತೆ ಕೃಷಿ ಸಂಸ್ಕೃತಿಗೆ ಬಂದನು. ಜೀವನದ ಮೂಲಭೂತ ಅನಿವಾರ್ಯತೆಗಳು ಏನೆಂಬುದನ್ನು ಕಂಡುಕೊಂಡನು. ಅಲೆಮಾರಿ ಜೀವನದ ಬದಲಾಗಿ ಒಂದು ನಿರ್ದಿಷ್ಟ ಪ್ರದೇಶದಲ್ಲಿ ನೆಲೆಗೊಳ್ಳಲು ಆರಂಭಿಸಿದನು. ತನ್ನ ವಾಸಕ್ಕೆ ಹಾಗೂ ಆಹಾರ ಬೆಳೆಯಲು ಯೋಗ್ಯವಾದ ಸ್ಥಳಗಳನ್ನು ಆಯ್ಕೆ ಮಾಡಿಕೊಂಡು ಹಟ್ಟಿಗಳನ್ನು ನಿರ್ಮಿಸಿಕೊಂಡನು. ಪರಿಣಾಮವಾಗಿ ಕೃಷಿ ಪದ್ಧತಿಯು ಅಸ್ತಿತ್ವಕ್ಕೆ ಬಂದಿತು. ಹಟ್ಟಿಗಳು ಗ್ರಾಮಗಳ ರೂಪಾಂತರಕ್ಕೆ ನಾಂದಿಯಾಯಿತು ಹಾಗೂ ವೈವಿಧ್ಯಮಯ ಸಂಸ್ಕೃತಿಯ ಬೆಳವಣಿಗೆಗೆ ಕಾರಣವಾಯಿತು. ಮಾನವನ ಬದುಕು ಹಲವು ಶೋಧನೆಗಳಿಗೆ ಪ್ರೇರಣೆಯಾಯಿತು.

ಕೃಷಿ ಮತ್ತು ಪಶುಪಾಲನೆಯು ಮಾನವನ ಮೂಲ ವೃತ್ತಿಗಳಾಗಿದ್ದು ಪ್ರಕೃತಿಯೊಡನೆ ನೇರ ಸಂಬಂಧ ಹೊಂದಿವೆ. "ಈ ಮೂಲ ವೃತ್ತಿಗಳನ್ನು ಅವಲಂಬಿಸಿಕೊಂಡು ಇತರ ವೃತ್ತಿಗಳು ಬೆಳೆಯುತ್ತವೆ. ಮೂಲವೃತ್ತಿಯು ನಾಗರೀಕ ಮಾನವನು ಪ್ರಥಮವಾಗಿ ಕೈಗೊಂಡಂತಹ ಕೆಲಸವಾಗಿರುತ್ತದೆ. ತನ್ನ ಆಹಾರ, ವಸತಿ, ಬಟ್ಟೆ ಈ ಮೂರು ಮೂಲ ಅವಶ್ಯಕತೆಗಳನ್ನು ಪೂರೈಸುವುದಕ್ಕಾಗಿ ಮಾಡುವ ಕೆಲಸ ಮೂಲ ವೃತ್ತಿಯಾಗಿರುತ್ತದೆ. ಸಾಮಾನ್ಯವಾಗಿ ಮೂಲ ವೃತ್ತಿ ಅಥವಾ ಪ್ರಥಮ ವೃತ್ತಿಯು ಮಾನವನಿಗೂ ಪ್ರಕೃತಿಗೂ ನೇರವಾದ ಸಂಬಂಧವನ್ನು ಕಲ್ಪಿಸುತ್ತದೆ" (ರಾ. ದಿನೇಶ್‌ರಾವ್:೧೯೯೬:೧೭೫). ಕೃಷಿಯು ಪಶುಪಾಲನೆಯನ್ನು ಒಳಗೊಂಡಿರುವುದರಿಂದ ಪಶುಪಾಲನೆಯನ್ನು ಬಿಟ್ಟು ಕೃಷಿ ಉಳಿಯಲಾರದು. ಅದೇ ರೀತಿ ಕೃಷಿಯನ್ನು ಬಿಟ್ಟು ಪಶುಪಾಲನೆಯು ಇರಲಾರದು. ಈ ಅವಿನಾಭಾವ ಸಂಬಂಧಕ್ಕೆ ಭಾರತದ ನೈಸರ್ಗಿಕ ಸಂಪನ್ಮೂಲಗಳೇ ಕಾರಣವಾಗಿವೆ. ಆದಿಕಾಲದ ಮಾನವ ಸಾಕು ಪ್ರಾಣಿಗಳಾದ ಕುರಿ-ಮೇಕೆಗಳನ್ನು ಸಂಗೋಪನೆ ಮಾಡುತ್ತ ತನ್ನ ಹೊಟ್ಟೆಯನ್ನು ತುಂಬಿಸಿಕೊಳ್ಳುತ್ತಿದ್ದ. ಪ್ರಸ್ತುತ ಕಾಲದಲ್ಲಿಯೂ ಅಲೆಮಾರಿ, ಅರೆ-ಅಲೆಮಾರಿ ಹಾಗೂ ಸ್ಥಾನಿಕ ವಿಧಾನಗಳನ್ನು ಅನುಸರಿಸಿ ಕುರಿಸಂಗೋಪನೆ ಮಾಡುತ್ತಿದ್ದಾನೆ. ನಿಸರ್ಗದ ಸಂಪನ್ಮೂಲಗಳನ್ನು ಅಭಿವೃದ್ಧಿ ಪಡಿಸುತ್ತಾ ತಾನು ಬದುಕುತ್ತಿದ್ದಾನೆ. ಈ ಅಧ್ಯಯನವು ಅಲೆಮಾರಿ ವಿಧಾನವನ್ನು ಅನುಸರಿಸಿ ಕುರಿ ಸಂಗೋಪನೆ ಮಾಡುವ ಅಲೆಮಾರಿ ಕುರುಬ ಸಮುದಾಯದ ವ್ಯಾಪ್ತಿಗೆ ಬರುತ್ತದೆ.

ಜೀವನ ನಿರ್ವಹಣೆಗೋಸ್ಕರ ಮೂಲ ವೃತ್ತಿಯನ್ನು ತೊರೆಯದೆ, ಕುಟುಂಬ ಸಮೇತ ವಲಸೆ ಬಂದು ಕುರಿಗಳಿಗೆ ಮೇವು-ನೀರು ಹುಡುಕಿಕೊಂಡು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವರ್ಷವಿಡೀ ಅಲೆದಾಡುತ್ತಾ ಕುರಿ ಸಂಗೋಪನೆ ಮಾಡುವವರೇ ಅಲೆಮಾರಿ ಕುರುಬರು. ಹೀಗೆ ಕುರಿಸಂಗೋಪನೆ ಮಾಡುವವರನ್ನು ಅಲೆಮಾರಿ ಕುರುಬ, ಸಂಚಾರಿ ಕುರುಬ, ಬೆಳಾಗಾವಿ ಕುರುಬರೆಂದು ಕರೆಯುತ್ತಾರೆ. ಕುರಿ ಸಂಗೋಪನೆಗೆಂದು ವಲಸೆ ಬಂದ ಇವರು ತಮಗೆ ಅನುಕೂಲವೆನಿಸಿದ ಭೂ ಪ್ರದೇಶದಲ್ಲಿ ಅಲೆದಾಡಿ ಕುರಿ ಸಂಗೋಪನೆ ಮಾಡದೆ, ತಮ್ಮ ಕುರಿ-ಮೇಕೆಗಳಿಗೆ ಮೇವು, ನೀರು ಎಲ್ಲಿ ಸಮಗ್ರವಾಗಿ ದೊರೆಯುತ್ತದೆಯೋ ಹಾಗೂ ಅವುಗಳ ಜೀವನ ಎಲ್ಲಿ ಚೆನ್ನಾಗಿರುತ್ತದೆಯೋ

ಆ ಪ್ರದೇಶಗಳಲ್ಲಿ ಅಲೆದಾಡುತ್ತಾ ಜೀವನವನ್ನು ಸಾಗಿಸುತ್ತಾರೆ. ಅವರ ಬದುಕು ಕುರಿ ಸಂಗೋಪನೆಯಿಂದಲೇ ನಡೆಯುವುದು. ಅವರು ಆ ವೃತ್ತಿಯನ್ನು ಬಿಟ್ಟು ಬೇರ್ಯಾವ ವೃತ್ತಿಯನ್ನು ಅರಿಯರು.

ಅಲೆಮಾರಿ ಕುರುಬರು ಬೆಳಗಾವಿ ಜಿಲ್ಲೆಯವರಾಗಿದ್ದು ಹೆಚ್ಚಾಗಿ ಚಿಕ್ಕೋಡಿ ತಾಲೂಕಿನ ವಿವಿಧ ಗ್ರಾಮಗಳಿಂದ ವಲಸೆ ಬಂದವರು. ಆ ಗ್ರಾಮಗಳಲ್ಲಿ ಇವರದೇ ಆದ ಸ್ವಂತ ಮನೆಗಳಿವೆ. ಆ ಮನೆಗಳಲ್ಲಿ ವಯಸ್ಸಾದ ಕುಟುಂಬದ ಹಿರಿಯರು, ಬಾಣಂತಿಯರು, ಕೆಲವೊಮ್ಮೆ ಚಿಕ್ಕ ಪುಟ್ಟ ಮಕ್ಕಳು ವಾಸಿಸುತ್ತಾರೆ. ಇವರು ಮನೆಗಳಲ್ಲಿ ಇರುವುದಿಲ್ಲವಾದರೆ ಬೀಗ ಹಾಕಿರುತ್ತಾರೆ. ಕುಟುಂಬದ ಚಿಕ್ಕ ಮಕ್ಕಳು, ಯುವಕ-ಯುವತಿಯರು ಹಾಗೂ ವಯಸ್ಕ ಸ್ತ್ರೀ-ಪುರುಷರೆಲ್ಲರು ಕುರಿ ಸಂಗೋಪನೆ ವೃತ್ತಿಯಲ್ಲಿ ಭಾಗಿಯಾಗಿರುತ್ತಾರೆ. ಹುಟ್ಟು ಮತ್ತು ಸಾವುಗಳಿಗೆ ಸಂಬಂಧಿಸಿದ ಆಚರಣೆಗಳನ್ನು ಸಾಮಾನ್ಯವಾಗಿ ಸ್ವಗ್ರಾಮಗಳಲ್ಲಿಯೇ ಆಚರಿಸಲಾಗುತ್ತದೆ. ಗರ್ಭಿಣಿ ಸ್ತ್ರೀಯರನ್ನು ಹಾಗೂ ವಯಸ್ಸಾದ ಹಿರಿಯರನ್ನು ಸ್ವಗ್ರಾಮಗಳಲ್ಲಿ ಬಿಟ್ಟು ಅವರನ್ನು ನೋಡಿಕೊಳ್ಳಲು ವ್ಯವಸ್ಥೆ ಮಾಡಿರುತ್ತಾರೆ. ಧಾರ್ಮಿಕ ಹಾಗೂ ಜೀವನಾವರ್ತಕ ಆಚರಣೆಗಳೆಲ್ಲಾವು ಸ್ವಗ್ರಾಮದಲ್ಲಿಯೇ ಜರುಗುತ್ತವೆ.

ಇವರಲ್ಲಿ ಕೆಲವರಿಗೆ ಅಲ್ಪ-ಸ್ವಲ್ಪ ಭೂಮಿ ಇದ್ದರೂ ಅದನ್ನು ಬೀಳು ಬಿಟ್ಟಿರುತ್ತಾರೆ. ಇಲ್ಲ ಯಾರಿಗಾದರೂ ಉಳುಮೆ ಮಾಡಲು ಕೊಟ್ಟಿರುತ್ತಾರೆ. ಅವರು ಭೂಮಿಯಿಂದ ಬರುವ ಆದಾಯದಿಂದಲೇ ಜೀವನ ಸಾಗಿಸುತ್ತೇವೆಂದು ಯಾವತ್ತೂ ನೀರಿಕ್ಷಿಸಿದವರಲ್ಲ. ಜೀವನಕ್ಕೆ ಕುರಿಗಳನ್ನು ನಂಬಿ ಅವುಗಳ ಸಂಗೋಪನೆಗಾಗಿ ಬೆಟ್ಟ-ಗುಡ್ಡ, ಹೊಲ-ಗದ್ದೆಗಳಲ್ಲಿ ಅಥವಾ ಹಳ್ಳ-ಕೊಳ್ಳ ನದಿ-ತೊರೆ, ಕೆರೆ-ಕಾಲುವೆಗಳ ಅಕ್ಕಪಕ್ಕದಲ್ಲಿ ತಾತ್ಕಾಲಿಕ ಗುಡಾರ ಹೂಡುತ್ತಾರೆ. ಕುರಿಗಳಿಗೆ ಮೇವು-ನೀರು ದೊರೆಯುವವರೆಗೆ ಗುಡಾರದಲ್ಲಿದ್ದು ಮೇವು-ನೀರಿನ ಕೊರತೆಯಾಗುತ್ತಿದ್ದಂತೆ, ಮೇವು-ನೀರು ದೊರೆಯುವ ಪ್ರದೇಶದ ಕಡೆ ಗುಡಾರ ವರ್ಗಾಯಿಸುತ್ತಾರೆ. ಗುಡಾರ ವರ್ಗಯಿಸಲು ಅಂದರೆ ಆಹಾರ ಧಾನ್ಯಗಳು ಹಾಗೂ ಕೌಟುಂಬಿಕ ಸರಕು ಸರಂಜಾಮುಗಳನ್ನು ಹೊತ್ತೊಯ್ಯಲು ಕುದುರೆಗಳನ್ನು ಹಾಗೂ ಕಾಡು ಪ್ರಾಣಿಗಳಿಂದ ಮತ್ತು ಕಳ್ಳರಿಂದ ಕುರಿಗಳನ್ನು ರಕ್ಷಿಸಿಕೊಳ್ಳಲು ನಾಯಿಗಳನ್ನು ಸಾಕಿರುತ್ತಾರೆ. ಕುರಿ-ಮೇಕೆ ಕುಟುಂಬ ಕಟ್ಟಿಕೊಂಡು ಬಹಳಷ್ಟು ದೂರ ವಲಸೆ ಬಂದು ಅಲೆದಾಡುತ್ತಾ ಜೀವನ ಸಾಗಿಸುವ ಈ ಅಲೆಮಾರಿ ಕುರುಬರು ಹಬ್ಬ, ಜಾತ್ರೆ, ಮದುವೆ, ದೈವಾಚರಣೆ ಇತ್ಯಾದಿ ಸಂದರ್ಭಗಳಲ್ಲಿ ಕುಟುಂಬದ ಹಿರಿಯರು ಅಥವಾ ಹೋಗಲೇ ಬೇಕಾದವರು ಮಾತ್ರ ಸ್ವಗ್ರಾಮಗಳಿಗೆ ಒಂದೆರಡು ದಿನಗಳ ಮಟ್ಟಿಗೆ ಹೋಗಿ ಬರುತ್ತಾರೆ. ಇವರು ಹೂಡಿದ ಗುಡಾರ, ಸಾಕಿದ ಕುರಿ- ಮೇಕೆಗಳನ್ನು ಯಾವ ಕಾರಣಕ್ಕೂ ಸ್ವಗ್ರಾಮಗಳಿಗೆ ವರ್ಗಾಯಿಸುವುದಿಲ್ಲ. ವಲಸೆ ಬಂದಿರುವ ಇವರು ಕುರಿಸಂಗೋಪನೆಗೋಸ್ಕರ ಹಗಲಿರುಳೆನ್ನದೆ ಚಳಿ, ಗಾಳಿ, ಮಳೆ ಬಿಸಿಲುಗಳಿಗೆ ಮೈಯೊಡ್ಡಿ ಪ್ರಕೃತಿ ವಿಕೋಪಗಳಾದ ಗುಡುಗು, ಮಿಂಚು, ನೆರೆಹಾವಳಿಗಳನ್ನು ಸಹಿಸಿಕೊಂಡು ಕಾಡುಪ್ರಾಣಿ ಹಾಗೂ ಕಳ್ಳರು ಕೊಡುವ ತೊಂದರೆಗಳನ್ನು ಅನುಭವಿಸುತ್ತಾ ಜೀವನವಿಡಿ ಪ್ರಕೃತಿಯ ಮಡಿಲಲ್ಲಿ ಜೀವನ ಸಾಗಿಸುತ್ತಾರೆ.

ನಾಗರಿಕತೆಯ ಸ್ಪರ್ಶ ಕಾಣದೇ ಮತದಾನದ ಪ್ರಜ್ಞೆ ಇರದ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ತೀರಾ ಹಿಂದುಳಿದಿರುವ ವಿಶಿಷ್ಟ ಅಲೆಮಾರಿ ಸಮುದಾಯವಾಗಿದೆ. ಈ ಸಮುದಾಯವನ್ನು ಪ್ರಸ್ತುತ ಸಮಾಜಕ್ಕೆ ಪರಿಚಯಿಸುವುದರ ಜೊತೆಗೆ ಸರ್ಕಾರದ ಗಮನಸೆಳೆಯಬೇಕಾಗಿದೆ. ಈ ದಿಸೆಯಲ್ಲಿ ಅಲೆಮಾರಿ ಕುರುಬರ ಆರ್ಥಿಕ ಅಂಶಗಳಿಗೆ ಮಹತ್ವ ನೀಡುವುದರ ಜೊತೆಗೆ ಅವರ ಅಲೆಮಾರಿ ಬದುಕು ಹಾಗೂ ಸಾಮಾಜಿಕ ಜೀವನ ಅನಾವರಣಗೊಳಿಸುವುದು ಪ್ರಸ್ತುತ ಅಧ್ಯಯನದ ಆಶಯವಾಗಿದೆ.

ಅಧ್ಯಯನಗಳ ಸಮೀಕ್ಷೆ

ಭಾರತೀಯ ಜಾತಿ ಮತ್ತು ಬುಡುಕಟ್ಟುಗಳನ್ನು ಕುರಿತು ಬಹಳಷ್ಟು ಅಧ್ಯಯನಗಳು ಹಾಗೂ ಪುಸ್ತಕಗಳು ಪ್ರಕಟವಾಗಿವೆ. ಅವುಗಳಲ್ಲಿ ಪ್ರಮುಖವಾದವು ಎಡ್ಗರ್ ಥರಸ್ಟನ್ ಅವರ Caste and Tribes of Suthern India (೧೯೦೯), ಎಲ್.ಕೆ. ಅನಂತ ಕೃಷ್ಣಅಯ್ಯರ್ ಅವರ The Mysore Tribes and Caste (೧೯೩೫), ಕೆ.ಎಸ್. ಸಿಂಗ್‌ರವರ People of India (Karnataka) ೨೦೦೩, ಜಿ.ಡಿ. ಸೊಂತೇಮೆರ್ ಅವರ Pastoral Deities of Westran India (೧೯೯೩) ಡಾ. ಕೆ.ಎಂ. ಮೈತ್ರಿಯವರ 'ಬುಡಕಟ್ಟು ಕುಲಕಸುಬುಗಳು' (೨೦೦೨) ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಿಸಿದ 'ಉಪಸಂಸ್ಕೃತಿ ಮಾಲೆಗಳು' (೧೯೯೩) ಇತ್ಯಾದಿ ಗ್ರಂಥಗಳು ದೇಶದ ವಿವಿಧ ಸಮುದಾಯಗಳ ವೃತ್ತಿ, ದೈವ, ಸಂಸ್ಕೃತಿ ಭಾಷೆ, ಭೌಗೋಳಿಕ ಪರಿಸರ ಇತ್ಯಾದಿ ಅಂಶಗಳನ್ನು ಕುರಿತು ಮಾಹಿತಿ ನೀಡುತ್ತವೆ.

ಎಸ್.ಎಸ್. ಶಶಿ ಅವರ Shephards of India (೧೯೭೮), ಮತ್ತು The Gaddi Tribe of Himachala Predesh, ಪ್ರಗ್ಯಾ ಶರ್ಮ ಅವರ Tribal Society in a Flux-Rajasthan (೨೦೦೫), ವಿ.ಆರ್. ಹನುಮಂತಯ್ಯನವರ 'ಕುರುಬರ ಚರಿತ್ರೆ', ಕನ್ನಡ ಪುಸ್ತಕ ಪ್ರಾಧಿಕಾರದ ಶಂಬಾ ಕೃತಿ ಸಂಪುಟ-೩. ಶ್ರೀ ಕನಕ ಗುರುಪೀಠ ಮಹಾಸಂಸ್ಥಾನ, ಕಾಗಿನೆಲೆ ಪ್ರಕಟಿಸಿದ 'ಪಾವನ' (೧೯೯೨) ಡಾ. ಶಿವನಂದಾ ಗುಬ್ಬಣ್ಣ ಅವರ 'ಕರ್ನಾಟಕದ ಕುರುಬರು' (೧೯೯೩) ಡಾ. ಶ್ರೀರಾಮ ಇಟ್ಟಣ್ಣವರ 'ಹಾಲಕೆನೆ' (೨೦೦೨), ಬ.ಪ. ನಾಯ್ಕರವರ 'ಹಾಲಮತಸ್ಥರು' (೨೦೦೩), ಚಂದ್ರಕಾಂತ ಬಿಜ್ಜರಗಿ ಅವರ 'ಕುರುಬರ ಹೆಜ್ಜೆಗಳು' (೨೦೦೬), ಪ್ರೊ. ಒಡೆಯರ ಡಿ. ಹೆಗ್ಗಡೆಯವರ 'ಹಾಲುಮತ ಕುರುಬ ಜನಾಂಗದ ಇತಿಹಾಸ' (೨೦೦೫), ವಾಯ್.ಕೆ. ಗುಂಡಕರ್ಜಗಿಯವರ 'ಹಂಡೆ ಕುರುಬರು: ಒಂದು ಅಧ್ಯಯನ' ಪಿಎಚ್.ಡಿ. ಮಹಾಪ್ರಬಂಧ (೨೦೦೩) ಇತ್ಯಾದಿ ಗ್ರಂಥ ಮತ್ತು ಅಧ್ಯಯನಗಳು ಕುರುಬ ಜನಾಂಗದ ಹಿನ್ನೆಲೆ, ಪಂಗಡಗಳು, ಸಂಸ್ಕೃತಿ, ಧರ್ಮ, ಸಾಮಾಜಿಕ ಜೀವನ ಇತ್ಯಾದಿ ಅಂಶಗಳನ್ನು ಕುರಿತು ಮಾಹಿತಿ ನೀಡುತ್ತವೆ.

ಪಿ. ದೇವೇಂದ್ರ ಮತ್ತು ಜಿ.ಬಿ. ಮ್ಯಾಲರಿ ಅವರ Goat and Sheep Production in

Tropics (೧೯೮೨). ಜಿ.ಸಿ. ಬ್ಯಾನರ್ಜಿಯವರ A Text book of Animal Husbandary (೧೯೬೪) ಡಾ. ರಾಮರಾವ್ ಜೋಶಿಯವರ 'ಆಡು ಮತ್ತು ಕುರಿಸಾಕಣೆ' (೧೯೮೯) ಎಂ. ಕೃಷ್ಣ ಶಾಸ್ತ್ರೀಯವರ 'ಪಶುಪಾಲನೆ' (೧೯೪೫) ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಪ್ರಕಟಿಸಿದ 'ಅಧಿಕ ಉತ್ಪಾದನೆಗೆ ಸುಧಾರಿತ ಪಶುಪಾಲನಾ ಪದ್ಧತಿಗಳು' (೧೯೯೩), ಪ್ರೊ. ಗೋವಿಂದಯ್ಯ ಮತ್ತು ಡಾ. ಆರ್. ಜನಾರ್ದನರವರ 'ಗ್ರಾಮೀಣ ಅಭಿವೃದ್ಧಿಯಲ್ಲಿ ಕುರಿಸಾಕಣೆ' (೨೦೦೪), ಮುಂತಾದ ಪುಸ್ತಕಗಳು ದೇಶದಲ್ಲಿಯ ಕುರಿ-ತಳಿಗಳು, ಭೌಗೋಳಿಕ ಪರಿಸರ ಮತ್ತು ಲಕ್ಷಣಗಳನ್ನು ಕುರಿತು ಮಾಹಿತಿ ಒದಗಿಸುತ್ತವೆ.

ಮೇಲಿನ ಜಾತಿ ಮತ್ತು ಬುಡಕಟ್ಟು ಹಾಗೂ ಸಮುದಾಯ ಕುರಿತ ಗ್ರಂಥಗಳನ್ನು ಪರಿಶೀಲಿಸಲಾಗಿ ಕುರುಬ ಸಮುದಾಯದ ಬಗ್ಗೆ ಹೆಚ್ಚಿನ ಮಾಹಿತಿ ನೀಡುತ್ತವೆ. ಆದರೆ ಅಲೆಮಾರಿ ಕುರುಬರನ್ನು ಕುರಿತು ಇಲ್ಲಿಯವರೆಗೆ ಸಮಗ್ರವಾಗಿ ಅಧ್ಯಯನ ಮಾಡದೇ ನಿರ್ಲಕ್ಷಿಸಲ್ಪಟ್ಟ ಸಮುದಾಯವಾಗಿರುವುದು ಸ್ಪಷ್ಟವಾಗುತ್ತದೆ.

ಸಮಸ್ಯೆಯ ಶೋಧನೆ

ಪ್ರಸ್ತುತ ಅಧ್ಯಯನವು ಅಲೆಮಾರಿ ಕುರುಬರ ಮೂಲ ಯಾವುದು? ವಲಸೆಗೆ ಕಾರಣಗಳೇನು? ಅಲೆದಾಡುವ ಪ್ರದೇಶಗಳಲ್ಲಿ ಅನುಭವಿಸುತ್ತಿರುವ ನೈಸರ್ಗಿಕ ಮತ್ತು ಮಾನವ ನಿರ್ಮಿತ ಸಮಸ್ಯೆಗಳು ಯಾವುವು? ಅವರ ಶೈಕ್ಷಣಿಕ ಮಟ್ಟ ಹೇಗಿದೆ? ಆದಾಯದ ಮೂಲಗಳು ಹಾಗೂ ಖರ್ಚಿನ ಮೂಲಗಳು ಯಾವುವು? ಅಲೆಮಾರಿತನದ ಬದುಕು ಹೇಗಿದೆ? ಪರಂಪರಗತವಾಗಿ ಬಂದ ನಾಟಿ ವೈದ್ಯ ಪದ್ಧತಿ ಅಲೆಮಾರಿ ಕುರುಬರಿಗೆ ಹಾಗೂ ಕುರಿಗಳ ರೋಗ ನಿಯಂತ್ರಿಸಲು ಇಂದು ಎಷ್ಟರ ಮಟ್ಟಿಗೆ ಸಹಕಾರಿಯಾಗಿದೆ. ಕುರಿಗಳಿಗೂ ವಾಯುಗುಣಕ್ಕೂ ಯಾವ ತರಹದ ಸಂಬಂಧ ದೆ? ನಿಸರ್ಗದಲ್ಲಿ ದೈವತ್ವವನ್ನು ಹೇಗೆ ಕಾಣುತ್ತಾರೆ? ಅವರ ಸಾಮಾಜಿಕ ಧಾರ್ಮಿಕ ಹಾಗೂ ಸಾಂಸ್ಕೃತಿಕ ವೈಶಿಷ್ಟ್ಯತೆಗಳೇನು? ಸರ್ಕಾರಿ ಸೌಲಭ್ಯಗಳು ಇವರಿಗೆ ಮುಟ್ಟಿವೆಯೇ? ಇತ್ಯಾದಿಯಾಗಿ ಸಂಶೋಧನಾ ಅಧ್ಯಯನಕ್ಕೆ ಒಳಪಡಿಸುವುದರ ಜೊತೆಗೆ ಪರಿಹಾರೋಪಾಯಗಳನ್ನು ಕಂಡುಕೊಂಡು ಪ್ರಬಂಧದಲ್ಲಿ ವಿಶ್ಲೇಷಿಸಲಾಗಿದೆ.

ಅಧ್ಯಯನದ ಪ್ರಾಮುಖ್ಯತೆ

ಭಾರತ ದೇಶದಲ್ಲಿ ಹಲವಾರು ಸಮುದಾಯಗಳು ನೆಲೆಗೊಂಡಿವೆ. ಕೆಲವು ಸಮುದಾಯಗಳು ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಬದಲಾವಣೆಗಳನ್ನು ಕಂಡುಕೊಂಡು ಅಭಿವೃದ್ಧಿಗೊಂಡಿವೆ. ಇನ್ನೂ ಕೆಲವು ಸಮುದಾಯಗಳು ಮೂಲವೃತ್ತಿಗೆ ಅಂಟಿಕೊಂಡು ಹಿಂದುಳಿದಿವೆ. ಆ ಸಮುದಾಯಗಳಿಂದ ಜನರಿಗೆ ಮತ್ತು ದೇಶಕ್ಕೆ ಅನುಕೂಲಗಳಿವೆ. ಅಂತಹ ಸಮುದಾಯಗಳಲ್ಲೊಂದಾದ ಅಲೆಮಾರಿ ಕುರುಬ ಸಮುದಾಯವು ಹೊಟ್ಟೆಪಾಡಿಗಾಗಿ ಕುರಿ ಮತ್ತು ಕುಟುಂಬ ಕಟ್ಟಿಕೊಂಡು ಅಲೆದಾಡುತ್ತಾ

ಜೀವನ ಸಾಗಿಸುತ್ತಿದೆ. ಆ ಸಮುದಾಯದಿಂದ ಸಮಾಜ ಹಾಗೂ ಸರ್ಕಾರಕ್ಕೆ ಅನೇಕ ಅನುಕೂಲಗಳು ಲಭಿಸುತ್ತವೆ. ಅವೆಂದರೆ ಕುರಿಗಳ ಹಿಕ್ಕೆ ಮತ್ತು ಮೂತ್ರಗಳಿಂದ ಭೂ ಫಲವತ್ತತೆ ಹೆಚ್ಚುತ್ತದೆ. ತುಪ್ಪಟ್ಟದಿಂದ ಉಣ್ಣೆ ಉದ್ದಿಮೆ ಅಭಿವೃದ್ಧಿಯಾಗುತ್ತದೆ. ಚರ್ಮದಿಂದ ವಿವಿಧ ವಿನ್ಯಾಸದ ಚರ್ಮದ ಉಡುಪುಗಳು ತಯಾರಾಗುತ್ತವೆ. ಕುರಿಗಳಿಂದ ಮಾನವನಿಗೆ ಆಹಾರ ದೊರೆಯುತ್ತದೆ. ಇಂದು ಜಗತ್ತು ಜಾಗತೀಕರಣದ ಪ್ರಭಾವದಿಂದ ಒಂದೇ ಮಾರುಕಟ್ಟೆಯಾಗಿ ಪರಿವರ್ತನೆಯಾಗಿದೆ. ಈ ಮಾರುಕಟ್ಟೆ ಕೆಲವು ಶ್ರೀಮಂತ ರಾಷ್ಟ್ರಗಳ ಕೈವಶವಾಗುತ್ತಿರುವ ಸಂದರ್ಭದಲ್ಲಿ ಕೃಷಿ ಅವಲಂಬಿತ ಭಾರತ ದೇಶವು ಪೈಪೋಟಿ ಮಾಡದೆ ನಿಶ್ಯಕ್ತವಾಗಿ ಬಿಡಬಹುದು. ಜನಸಂಖ್ಯೆ ಬೆಳವಣಿಗೆಯಿಂದ ಆಹಾರ ಕೊರತೆ ಉಂಟಾಗಿ ಇನ್ನೂಳಿದ ಅಲ್ಪ-ಸ್ವಲ್ಪ ಹುಲ್ಲುಗಾವಲು ಹಾಗೂ ಅರಣ್ಯ ಪ್ರದೇಶ ಕೃಷಿ ಸಾಗುವಳಿ ಭೂಮಿಯಾಗಿ ಪರಿವರ್ತನೆಯಾಗುತ್ತಿದೆ. ಮೂಲ ವೃತ್ತಿಗೆ ಅಂಟಿಕೊಂಡ ಅಲೆಮಾರಿ ಕುರುಬರು ತೀರಾ ಕಷ್ಟ ಅನುಭವಿಸುವುದಲ್ಲದೆ ವೃತ್ತಿಯಲ್ಲಿ ಮುಂದುವರಿಯುವುದು ಅಸಾಧ್ಯವಾಗುತ್ತಿದೆ. ಈ ಸಮುದಾಯವು ಮೂಲ ವೃತ್ತಿಯಲ್ಲಿರುವಾಗಲೇ ಅವರ ಜೀವನಶೈಲಿ ಸಂಸ್ಕೃತಿ, ಆಚಾರ, ವಿಚಾರ, ಸಂಪ್ರದಾಯ ಇತ್ಯಾದಿಗಳನ್ನು ದಾಖಲಿಸಿ ವಿಶ್ಲೇಷಿಸುವುದು ಅವಶ್ಯಕವಾಗಿ ಆಗಬೇಕಾಗಿದೆ. ಪ್ರಸ್ತುತ ದಿನಗಳಲ್ಲಿ ಅಲೆಮಾರಿ ಕುರುಬರು ಎದಿರುಸುತ್ತಿರುವ ಸಮಸ್ಯೆಗಳನ್ನು ಸಮಾಜ ಹಾಗೂ ಸರ್ಕಾರಕ್ಕೆ ಮನವರಿಕೆ ಮಾಡಿಕೊಡಬೇಕಾಗಿದೆ. ಈ ದೃಷ್ಟಿಯಿಂದ ಅಲೆಮಾರಿ ಕುರುಬರ ಆರ್ಥಿಕ ನೆಲೆಯಲ್ಲಿ ಅಧ್ಯಯನ ಮಾಡುವುದು ಪ್ರಮುಖವಾಗಿದೆ.

ಕುರುಬ ಸಮುದಾಯ ಕುರಿತು ಒಂದೆರಡು ಅಧ್ಯಯನಗಳು ನಡೆದಿವೆ. ಜೊತೆಗೆ ಆ ಸಮುದಾಯದ ಇತಿಹಾಸ, ಸಂಪ್ರದಾಯ, ಆಚಾರ, ವಿಚಾರ, ಸಂಸ್ಕೃತಿ ಇತ್ಯಾದಿಗಳ ಬಗ್ಗೆ ಕೆಲವು ಪುಸ್ತಕಗಳು ಹಾಗೂ ಕಿರು ಲೇಖನಗಳು ಮಾತ್ರ ದೊರೆಯುತ್ತವೆ. ಆದರೆ ಅಲೆಮಾರಿ ಕುರುಬ ಸಮುದಾಯ ಕುರಿತು ಇಲ್ಲಿಯವರೆಗೆ ಯಾವುದೇ ಅಧ್ಯಯನ ನಡೆದಿಲ್ಲ. ಬೆರಳಣಿಕೆಯಷ್ಟು ಕಿರು ಲೇಖನಗಳು ಪ್ರಕಟಗೊಂಡಿವೆ. ಹಾಗಾಗಿ ಪ್ರಸ್ತುತ ಅಧ್ಯಯನವು ಹೆಚ್ಚಿನ ಪ್ರಾಮುಖ್ಯತೆ ಪಡೆದುಕೊಂಡಿದೆ.

ಉದ್ದೇಶಗಳು

೧. ಅಲೆಮಾರಿ ಕುರುಬರ ಚಾರಿತ್ರಿಕ ಹಿನ್ನೆಲೆ ತಿಳಿಯುವುದು.

೨. ಕುರಿಗಳ ಹುಟ್ಟು, ಪಳಗಿಸುವಿಕೆ, ಬೆಳವಣಿಗೆಯನ್ನು ವಿಶ್ಲೇಷಿಸುವುದು.

೩. ಕುರಿಯ ತಳಿಗಳು ಮತ್ತು ಅವುಗಳ ಗುಣಲಕ್ಷಣಗಳನ್ನು ಅರಿಯುವುದು.

೪. ಅಲೆಮಾರಿ ಕುರುಬರ ವಲಸೆ ಮಾರ್ಗ ಮತ್ತು ಪ್ರಸರಣ ಅರಿಯುವುದು.

೫. ಅಲೆಮಾರಿ ಕುರುಬರ ಅಲೆಮಾರಿತನದ ಬದುಕನ್ನು ತಿಳಿಯುವುದು.

೬. ಅಲೆಮಾರಿ ಕುರುಬರ ಕೌಟುಂಬಿಕ ಆದಾಯ ಹಾಗೂ ಖರ್ಚಿನ ಮೂಲಗಳ ವಿಶ್ಲೇಷಣೆ ಮಾಡುವುದು.

೭. ಭೂ ಫಲವತತ್ತೆ ಕಾಪಾಡಿಕೊಂಡು ಬರಲು ಅಲೆಮಾರಿ ಕುರುಬರ ಪಾತ್ರ ಏನು ಎಂಬುದನ್ನು ಅರಿಯುವುದು.

೮. ಅಲೆಮಾರಿ ಕುರುಬರ ಸಾಮಾಜಿಕ, ಶೈಕ್ಷಣಿಕ ಹಾಗೂ ಧಾರ್ಮಿಕ ಅಂಶಗಳ ವಿಶ್ಲೇಷಣೆ ಮಾಡುವುದು.

೯. ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಕಾರ್ಯಕ್ರಮಗಳನ್ನು ಅರಿಯುವುದು.

೧೦. ಅಲೆಮಾರಿ ಕುರುಬರು ಎದುರಿಸುತ್ತಿರುವ ಸಮಸ್ಯೆಗಳನ್ನು ಶೋಧಿಸುವುದು ಹಾಗೂ ಆ ಸಮಸ್ಯೆಗಳಿಗೆ ಪರಿಹಾರ ಸೂಚಿಸುವುದು.

ಊಹೆಗಳು

೧. ಕುರಿ ಸಂಗೋಪನೆಯಿಂದಲೇ ಜೀವನ ನಿರ್ವಹಣೆ ಮಾಡುತ್ತಾರೆ.

೨. ಕುರಿಗಳಿಗೆ ಮೇವು-ನೀರು ಅರಸಿಕೊಂಡು ವಲಸೆ ಬಂದಿದ್ದಾರೆ.

೩. ಕುರಿ ಸಂಗೋಪನೆಯಲ್ಲಿ ಪುರುಷರು, ಮಹಿಳೆಯರು ಮತ್ತು ಮಕ್ಕಳು ಕಾರ್ಯನ್ಮುಖರಾಗಿದ್ದಾರೆ.

ಅಧ್ಯಯನದ ವ್ಯಾಪ್ತಿ

ಕುರುಬ ಎಂಬ ಪದದ ಮೂಲ ಅರ್ಥ ಕುರಿಕಾಯುವ ವೃತ್ತಿ. ಬಹಳಷ್ಟು ಕುರುಬ ಕುಟುಂಬಗಳು ಮೂಲ ವೃತ್ತಿಯನ್ನು ಬಿಟ್ಟು ಬೇರೆ ಬೇರೆ ವೃತ್ತಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಕುರುಬರ ಸಂಪತ್ತಾಗಿರುವ ಕುರಿ-ಮೇಕೆಗಳಿಗೆ ಮೇವು ನೀರು ಹುಡುಕಿಕೊಂಡು ಇಡೀ ಜೀವನವನ್ನು ಅಲೆಮಾರಿತನಕ್ಕೆ ಮುಡುಪಾಗಿಟ್ಟಿರುವ ಕುರುಬರನ್ನೆ ಅಲೆಮಾರಿ ಕುರುಬರು ಎಂದು ಗುರುತಿಸಿ ಪ್ರಸ್ತುತ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ.

ಪ್ರಸ್ತುತ ಸನ್ನಿವೇಶದಲ್ಲಿ ಕುರಿಸಂಗೋಪನಾ ವೃತ್ತಿಯಲ್ಲಿ ತೊಡಗಿಸಿಕೊಂಡ ಕುರುಬರೆಲ್ಲರೂ ಅಲೆಮಾರಿ ಕುರುಬರಲ್ಲ. ವಿಶೇಷವಾಗಿ ಬೆಳಗಾವಿ ಜಿಲ್ಲೆಯ ಕುರುಬರು ತಮ್ಮ ಮೂಲವೃತ್ತಿಯನ್ನು ಉಳಿಸಿಕೊಂಡು ಅಲೆಮಾರಿತನದ ಬದುಕನ್ನು ಕುರಿಗಳೊಡನೆ ಗುರುತಿಸಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಅಲೆಮಾರಿ ಕುರುಬರೆಂದರೆ ಬೆಳಗಾವಿ ಕುರುಬರು ಅಥವಾ ಬೆಳಗಾಂವ್ ಕುರೇರು ಎಂದು ಕರೆಯಿಸಿ ಕೊಳ್ಳುವ ಕುರುಬರನ್ನು ಅಲೆಮಾರಿ ಕುರುಬರು ಎಂದು ಪ್ರಸ್ತುತ ಅಧ್ಯಯನದಲ್ಲಿ ಗುರುತಿಸಿಕೊಳ್ಳಲಾಗಿದೆ. ಬೆಳಗಾವಿ ಜಿಲ್ಲೆಯಿಂದ ಕುರು ಸಂಗೋಪನೆಗಾಗಿ ವಲಸೆ ಬಂದ ಇವರ ಚಲನವಲನಗಳು ಕರ್ನಾಟಕ ರಾಜ್ಯದ ಬಳ್ಳಾರಿ, ರಾಯಚೂರು, ಕೊಪ್ಪಳ, ಗದಗ, ಹಾವೇರಿ, ಧಾರವಾಡ, ದಾವಣಗೆರೆ, ಶಿವಮೊಗ್ಗ

ಮತ್ತು ಚಿಕ್ಕಮಗಳೂರು ಜಿಲ್ಲೆಗಳ ಭೂಪ್ರದೇಶಗಳವರೆಗೆ ಪ್ರಸರಣ ಹೊಂದಿವೆ. ಪ್ರಸ್ತುತ ಅಧ್ಯಯನವನ್ನು ಬಳ್ಳಾರಿ ಜಿಲ್ಲೆಗೆ ಸೀಮಿತವಾಗಿರಿಸಿಕೊಳ್ಳಲಾಗಿದೆ. ಬಳ್ಳಾರಿ ಜಿಲ್ಲೆಯ ಭೂಪ್ರದೇಶದಲ್ಲಿ ಅಲೆದಾಡುತ್ತಾ ಕುರಿ ಸಂಗೋಪನೆ ಮಾಡುವ ಬೆಳಗಾವಿ ಕುರುಬರನ್ನು ಸಮಗ್ರ ಸಮೀಕ್ಷೆಗೊಳಪಡಿಸಿ ವಿಷಯಗಳನ್ನು ಪ್ರಸ್ತುತ ಪಡಿಸಲಾಗಿದೆ. ಪ್ರಸ್ತುತ ಅಧ್ಯಯನದ ಅವಧಿಗೂ ಮೊದಲು ವಲಸೆ ಬಂದು ಹೋದವರು ಹಾಗೂ ನಂತರದ ಅವಧಿಯಲ್ಲಿ ವಲಸೆ ಬರುವವರು ಈ ಅಧ್ಯಯನದ ವ್ಯಾಪ್ತಿಗೆ ಬರುವುದಿಲ್ಲವೆಂದು ಸ್ಪಷ್ಟಪಡಿಸುತ್ತಿದ್ದೇನೆ.

ಪ್ರಸ್ತುತ ಅಧ್ಯಯನವು ಬಳ್ಳಾರಿ ಜಿಲ್ಲೆಯ ವ್ಯಾಪ್ತಿಗೊಳಪಟ್ಟ ಭೂಪ್ರದೇಶದಲ್ಲಿ ಅಲೆದಾಡುತ್ತಿರುವ ಅಲೆಮಾರಿ ಕುರುಬ ಸಮುದಾಯದವನ್ನು ಸಮಗ್ರವಾಗಿ ಅಧ್ಯಯನಕ್ಕೊಳಪಡಿಸಲಾಗಿದೆ. ಜಿಲ್ಲೆಯಲ್ಲಿ ಅಲೆದಾಡುತ್ತಾ ಕುರಿಸಂಗೋಪನೆ ಮಾಡುತ್ತಿರುವ ಒಟ್ಟು ಕುಟುಂಬಗಳ ಸಂಖ್ಯೆ ೩೮೬. ಈ ಕುಟುಂಬಗಳ ಒಟ್ಟು ಜನಸಂಖ್ಯೆ ೨೩೧೦. ಅದರಲ್ಲಿ ೧೨೧೨ ಪುರುಷರು ಮತ್ತು ೧೦೯೮ ಮಹಿಳೆಯರು. ಚಿಕ್ಕೋಡಿ ತಾಲೂಕಿನಿಂದ ವಲಸೆ ಬಂದ ಕುಟುಂಬಗಳ ಸಂಖ್ಯೆ ೩೦೭. ವಲಸೆ ಬಂದ ತಾಲೂಕುಗಳಲ್ಲಿ ಈ ತಾಲೂಕಿನವರೇ ಹೆಚ್ಚು. ಬೆಳಗಾವಿ ೫೧, ಖಾನಾಪುರ ೧೧, ರಾಯಬಾಗ್ ೫, ಗೋಕಾಕ್ ೪, ಹುಕ್ಕೇರಿ ೪, ರಾಮದುರ್ಗ ೨ ಹಾಗೂ ಅಥಣಿ ಮತ್ತು ಸವದತ್ತಿ ತಾಲ್ಲೂಕುಗಳಿಂದ ತಲಾ ಒಂದೊಂದು ಕುಟುಂಬ ಮಾತ್ರ ವಲಸೆ ಬಂದಿದೆ. ಬೈಲಹೊಂಗಲ ತಾಲೂಕಿನಿಂದ ಯಾವುದೇ ಕುಟುಂಬ ವಲಸೆ ಬಾರದಿರುವುದು ಕ್ಷೇತ್ರಕಾರ್ಯದಿಂದ ತಿಳಿದುಬಂದಿದೆ. ಬಹುಶಃ ಬಳ್ಳಾರಿ ಜಿಲ್ಲೆಗೆ ಕಡಿಮೆ ಸಂಖ್ಯೆಯಲ್ಲಿ ವಲಸೆ ಬಂದ ತಾಲೂಕುಗಳ ಹಾಗೂ ಬೈಲಹೊಂಗಲ ತಾಲೂಕಿನ ಅಲೆಮಾರಿ ಕುರುಬ ಕುಟುಂಬಗಳು ಬೇರೆ ಜಿಲ್ಲೆಗಳಿಗೆ ವಲಸೆ ಹೋಗಿರಬಹುದು.

ಅಧ್ಯಯನದ ವಿಧಾನಗಳು

ಪ್ರಸ್ತುತ ಅಧ್ಯಯನವು ಅಲೆಮಾರಿ ಕುರುಬರು ಅಲೆದಾಡುತ್ತಿರುವ ಎಲ್ಲ ಸ್ಥಳಗಳಿಗೂ ಮಾಹಿತಿ ಸಂಗ್ರಹಣೆಗಾಗಿ ಅವರ ಜೊತೆಯಲ್ಲಿಯೇ ಅಲೆದಾಡಿ, ಅವರ ಗುಡಾರಗಳಲ್ಲಿ ಬಹಳಷ್ಟು ದಿನಗಳನ್ನು ಕಳೆಯಲಾಗಿದೆ. ಆದಿತ್ಯವಾರ, ಅಮಾವಾಸ್ಯೆ, ಹುಣ್ಣಿಮೆ, ಹಬ್ಬಗಳು ಹಾಗೂ ವಿಶೇಷ ಆಚರಣೆಗಳಿಗೆ ಚಾಚೂತಪ್ಪದೆ ಹಾಜರಾಗಿದ್ದೇನೆ. ಜೀವನಾವರ್ತನ ಮತ್ತು ದೈವಿಕ ಆಚರಣೆಗಳನ್ನು ವಾಸ್ತವಿಕವಾಗಿ ಕಂಡುಕೊಳ್ಳುವ ಸಲುವಾಗಿ ಸಂದರ್ಭಾನುಸಾರ ಅವರ ಸ್ವಗ್ರಾಮಗಳಿಗೆ ಹಾಗೂ ದೈವದ ಗುಡಿಗಳಿಗೆ, ಭೇಟಿ ನೀಡಲಾಗಿದೆ. ಕಳೆದ ನಾಲ್ಕು ವರ್ಷಗಳ ನಿರಂತರ ಅಲೆಮಾರಿ ಕುರುಬರ ಜೊತೆಗಿನ ಅಲೆದಾಟದ ಅನುಭವ ಮತ್ತು ಅವರಿಂದ ಪಡೆದ ತಿಳಿವಳಿಕೆಯನ್ನು ಈ ಪ್ರಬಂಧದಲ್ಲಿ ಅನಾವರಣ ಗೊಳಿಸಲಾಗಿದೆ.

ಸಮಾಜ ವಿಜ್ಞಾನಗಳ ಸಂಶೋಧನೆಯ ಕ್ಷೇತ್ರ ಬಹಳ ವಿಶಾಲವಾದದ್ದರಿಂದ ನನ್ನ ಸಂಶೋಧನೆಗೆ

ಮಿತಿಯಿರುವ ಸಮಯದಲ್ಲಿ ನ್ಯಾಯಯುತವಾಗಿ ಕ್ಷೇತ್ರಕಾರ್ಯ ಮಾಡಿದ್ದೇನೆ. ಪ್ರಸ್ತುತ ಸಂಶೋಧನೆಗೆ ಬಳಸಿಕೊಂಡ ವಿಧಾನಗಳು ಈ ಕೆಳಗಿನಂತಿವೆ.

ಪ್ರಶ್ನಾವಳಿ ವಿಧಾನ

ಸಮುದಾಯದ ಮಾಹಿತಿ ಪಡೆಯಲು ಪ್ರಶ್ನಾವಳಿಗಳು ಅನಿವಾರ್ಯ. ಆದ್ದರಿಂದ ಅಲೆಮಾರಿತನ ಕುರುಬ ಸಮುದಾಯಕ್ಕೆ ಸಂಬಂಧಿಸಿದಂತೆ ಸಮಗ್ರವಾಗಿ ಚರ್ಚಿಸಿ ಸೂಕ್ತ ಪ್ರಶ್ನಾವಳಿಯನ್ನು ರಚಿಸಿಕೊಂಡು ಸಮೀಕ್ಷಿಸಲಾಗಿದೆ. ಫಲಿತಗಳನ್ನು ಪ್ರಬಂಧದಲ್ಲಿ ನಮೂದಿನಸಲಾಗಿದೆ. ಪ್ರಮುಖ ಪ್ರಶ್ನೆಗಳ ಜೊತೆಗೆ ಸಂದರ್ಭಕ್ಕನುಗುಣವಾಗಿ ಉಪಪ್ರಶ್ನೆಗಳನ್ನು ಕೇಳುವುದರೊಂದಿಗೆ ಅಲೆಮಾರಿ ಕುರುಬರಿಂದ ಮಾಹಿತಿ ಪಡೆಯಲಾಗಿದೆ.

ಸಂದರ್ಶನ ವಿಧಾನ

ವಲಸೆ ಬಂದ ಅಲೆಮಾರಿ ಕುರುಬರನ್ನು ವಯೋಮಿತಿಗನುಗುಣವಾಗಿ ಅಂದರೆ ಸಮುದಾಯದ ಹಿರಿಯರು, ಸ್ತ್ರೀಯರು, ಪುರುಷರು, ಮಕ್ಕಳನ್ನೊಳಗೊಂಡಂತೆ ಸಂದರ್ಶನ ನಡೆಸಲಾಗಿದೆ. ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿದ್ದ ವೈ.ಎನ್. ಗೌಡರ್ ಹಾಗೂ ನಿರ್ದೇಶಕರಾಗಿದ್ದ ಡಾ. ಜಗನ್ನಾಥ್, ಕರ್ನಾಟಕ ಕುರುಬ ಸಂಘದ ಅಧ್ಯಕ್ಷರಾದ ಲಕ್ಷ್ಮಣರಾವ್ ಚಿಂಗಳೆ, ಬಳ್ಳಾರಿ ಜಿಲ್ಲೆಯ ಪಶುವೈದ್ಯಕೀಯ ಆಸ್ಪತ್ರೆಯ ಸಹಾಯಕ ನಿರ್ದೇಶಕರಾಗಿದ್ದ ಡಾ. ಪ್ರಕಾಶ ಕುಲಕರ್ಣಿ ಹಾಗೂ ಡಾ. ಗಾದಿಲಿಂಗನ ಗೌಡ, ಸಿಂದನೂರಿನ ಸಗಟು ಕುರಿ ವ್ಯಾಪಾರಸ್ಥರಾದ ಖಾಜಸಾಬ್ ಮತ್ತು ಇತರೆ ಕುರಿ ವ್ಯಾಪಾರಸ್ಥರು ಹಾಗೂ ವಿವಿಧ ಭೂಮಾಲಿಕರನ್ನು ಸಂದರ್ಶಿಸಿ ಅವಶ್ಯವಿರುವ ಮಾಹಿತಿಗಳನ್ನು ಕಲೆ ಹಾಕಲಾಗಿದೆ.

ಐತಿಹಾಸಿಕ ವಿಧಾನ

ಇವರ ಅಧ್ಯಯನಕ್ಕೆ ಅಗತ್ಯವಿರುವ ಗ್ರಂಥಗಳನ್ನು, ಸರ್ಕಾರಿ ಪ್ರಕಟಣೆಗಳು, ಪತ್ರಿಕೆಯಲ್ಲಿಯ ಲೇಖನಗಳು ಮತ್ತು ಇತರೆ ಅಂಕಿ ಅಂಶಗಳು ಮೊದಲಾದ ಅನುಷಂಗಿಕ ಆಕರಗಳನ್ನು ಅಧ್ಯಯನಕ್ಕೆ ಬಳಸಿಕೊಂಡಿದ್ದೇನೆ.

ಅವಲೋಕನ ವಿಧಾನ

ಸಂಶೋಧನಾ ಕ್ಷೇತ್ರಕಾರ್ಯಗಳಲ್ಲಿ ಮಾಹಿತಿ ಪಡೆಯಲು ಈ ವಿಧಾನ ಅನಿವಾರ್ಯ. ಇಲ್ಲಿ ಎರಡು ತರಹದ ಅವಲೋಕನ ವಿಧಾನ ಬಳಸಿಕೊಂಡಿದ್ದೇನೆ. ಒಂದು ಸಹಭಾಗಿತ್ವ ಅವಲೋಕನ ಮೂಲಕ ಸಮುದಾಯದ ಜೊತೆಯಲ್ಲಿಯೆ ಇದ್ದು ಅವರ ಗುಡಾರ ಹೂಡುವ ಪದ್ಧತಿ, ಕುರಿಸಂಗೋಪನಾ ವಿಧಾನ, ವಲಸೆಯ ರೀತಿ, ಕುರಿ ಮಾರಾಟ, ಮದುವೆ ಮತ್ತು ಹಬ್ಬ ಆಚರಣೆ ಇತ್ಯಾದಿಗಳಲ್ಲಿ

ಭಾಗಿಯಾಗಿ ನೋವು-ನಲಿವುಗಳನ್ನು ಹಂಚಿಕೊಂಡು ಅಧ್ಯಯನಕ್ಕೆ ಬೇಕಾದ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಎರಡು ಅಂತರ ಅವಲೋಕನ ಮೂಲಕ ಸಮುದಾಯದಿಂದ ದೂರವಿದ್ದುಕೊಂಡು ಸಮುದಾಯದ ಚಲನವಲನೆಗಳನ್ನು ಗಮನಿಸಿ ಅವರ ಸಂಪೂರ್ಣ ಚಟುವಟಿಕೆಗಳನ್ನು ಅವರಿಗೆ ಗೊತ್ತಿಲ್ಲದಂತೆ ವೀಕ್ಷಿಸಿ ಅಧ್ಯಯನಕ್ಕೆ ಮಾಹಿತಿ ಪಡೆಯಲಾಗಿದೆ.

ತೌಲಾನಿಕ ವಿಧಾನ

ಒಂದು ಸಮುದಾಯದಲ್ಲಿನ ಪ್ರಾದೇಶಿಕ ಭಿನ್ನತೆಗಳನ್ನು ಅರಿಯಲು ತುಲನಾತ್ಮಕ ವಿಧಾನಗಳು ಹೆಚ್ಚು ಪ್ರಾಮುಖ್ಯತೆ ಪಡೆದುಕೊಳ್ಳುತ್ತವೆ. ಈ ಸಮುದಾಯವು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಕುರಿ ಸಂಗೋಪನೆಗಾಗಿ ಅಲೆಯುತ್ತಿರುವುದರಿಂದ ವಿಷಯ ವಿಚಾರಗಳಲ್ಲಿ ವ್ಯತ್ಯಾಸವಿರುತ್ತದೆ. ಆದ್ದರಿಂದ ವಿಷಯಗಳನ್ನು ಸಂಗ್ರಹಿಸಿ ತೌಲನಿಕವಾಗಿ ಹೇಳುವಲ್ಲಿ ಈ ವಿಧಾನವನ್ನು ಬಳಸಿಕೊಳ್ಳಲಾಗಿದೆ.

ಸಂಖ್ಯಾಶಾಸ್ತ್ರೀಯ ವಿಧಾನ

ಸಮುದಾಯದ ಸಮೀಕ್ಷೆಯಿಂದ ಸಂಗ್ರಹಿಸಿದ ಅಂಕಿ ಅಂಶಗಳನ್ನು, ಸರ್ಕಾರದ ವಿವಿಧ ಇಲಾಖೆಗಳು ಪ್ರಕಟಿಸಿದ ಅಂಕಿ-ಅಂಶಗಳನ್ನು ಸಂದರ್ಭಕ್ಕನುಗುಣವಾಗಿ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಧ್ವನಿ ಮುದ್ರಣ ಮತ್ತು ಛಾಯಾಚಿತ್ರ ವಿಧಾನ

ಈ ಸಮುದಾಯದ ಸಂದರ್ಶನದ ಸಮಯದಲ್ಲಿ ಅವರು ಹೇಳಿಕೊಂಡ ಸಮುದಾಯದ ಸಮಸ್ಯೆಗಳನ್ನು, ಬದುಕಿನ ಚಿತ್ರಣವನ್ನು ಮೂಡಿಸುವ ಗುಡಾರ, ಊಟ, ವೇಷ-ಭೂಷಣ, ಕುರಿ ಸಂಗೋಪನೆ, ದೈವಾಚರಣೆ ಇತ್ಯಾದಿಗಳನ್ನು ಅಧ್ಯಯನದ ಮಾಹಿತಿಗಾಗಿ ಬಳಸಿಕೊಳ್ಳಲು ಅವರ ಧ್ವನಿಮುದ್ರಿತ ಹಾಗೂ ಛಾಯಾಚಿತ್ರಗಳನ್ನು ತೆಗೆಯಲಾಗಿದೆ.

ಆಧಾರ ಗ್ರಂಥಗಳು

೧. ಡಾ. ದಿನೇಶ್‌ರಾವ್ ರಾ., **ಭೂಗೋಳಶಾಸ್ತ್ರ**, ದ್ವಿತೀಯ ಪಿ.ಯು.ಸಿ., ವಿಶ್ವವಿದ್ಯಾ ಪ್ರಕಾಶನ ಸಂಸ್ಥೆ, ಬೆಂಗಳೂರು. ೧೯೯೬

ಅಧ್ಯಾಯ ೨

ಅಲೆಮಾರಿ ಕುರುಬರ ಹಿನ್ನೆಲೆ

೨.೧ ಕುರುಬ ಪದದ ಪದ ನಿಷ್ಪತ್ತಿ

೨.೨ ಪೌರಾಣಿಕ ಹಿನ್ನೆಲೆ

೨.೩ ಚಾರಿತ್ರಿಕ ಹಿನ್ನೆಲೆ

೨.೪ ಧಾರ್ಮಿಕ ಹಿನ್ನೆಲೆ

೨.೫ ಪಂಗಡಗಳು

ಅಲೆಮಾರಿ ಕುರುಬರ ಹಿನ್ನೆಲೆ

ಭಾರತ ಹಲವಾರು ಸಮುದಾಯಗಳ ದೇಶ ಎಂಬುದು ಎಲ್ಲರಿಗೂ ಗೊತ್ತಿರುವ ಸಾಮಾನ್ಯ ಸಂಗತಿ. ಇಲ್ಲಿ ನೆಲೆಸಿರುವ ಸಮುದಾಯಗಳಲ್ಲಿ ಅಲೆಮಾರಿ ಕುರುಬ ಸಮುದಾಯವೂ ಒಂದು. ಈ ಸಮುದಾಯದವರು ಭಾರತದ ತುಂಬಾ ವ್ಯಾಪಿಸಿರುವುದರಿಂದ ಇವರಲ್ಲಿ ಪ್ರಾದೇಶಿಕ ಭಿನ್ನ ಹೆಸರು, ಭಾಷೆ, ಆಚಾರ, ವಿಚಾರ, ಸಂಸ್ಕೃತಿ ಕಂಡುಬರುತ್ತದೆ. ಮೂಲತಃ ಒಂದೇ ಕುಲಗೋತ್ರಕ್ಕೆ ಸೇರಿದ ಇವರು ಕಾಲಕ್ರಮೇಣ ಬೇರೆ ಬೇರೆ ಪ್ರದೇಶಗಳಲ್ಲಿ ಹರಿದು ಹಂಚಿ ಹೋಗಿರುವರು. ಆದರೂ ಅಲೆಮಾರಿ ಕುರುಬರು ತಮ್ಮ ಮೂಲ ವೃತ್ತಿ, ಸಂಸ್ಕೃತಿ, ಆಚಾರ, ಸಂಪ್ರದಾಯಗಳನ್ನು ಪರಂಪರಾಗತವಾಗಿ ಉಳಿಸಿಕೊಂಡು ಬಂದಿರುವರು. ಈ ಹಿನ್ನೆಲೆಯಲ್ಲಿ ಈ ಸಮುದಾಯವನ್ನು "ಒಂದು ವಂಶದಿಂದ ನಿಷ್ಪನ್ನವಾದ ಮತ್ತು ಮೂಲತಃ ಬದಲಾಯಿಸಲಾಗದ ಅಂಗವಿಕಾಸ ಮತ್ತು ಪರಿಮಾಣಗಳ ವಿಶೇಷ ರೀತಿಯ ಹೊಂದಾಣಿಕೆಯ ಆಧಾರದಿಂದಾದ ಒಂದು ಮಾನವ ಪಂಗಡವೆಂದು ವರ್ಣಿಸಬಹುದು" (ಗುಂಡಕರ್ಜಗಿ ವೈ.ಕೆ:೨೦೦೨:೧೩). ಯಾವುದೇ ಸಮುದಾಯದಲ್ಲಿ ಮೂಲಭೂತ ಸಂಸ್ಕೃತಿಯ ಕೆಲವು ಅಂಶಗಳು ಕಾಲ ಗತಿಸಿದರೂ ಉಳಿದುಕೊಂಡು ಬಂದಿರುತ್ತವೆ. ಭಾರತದಲ್ಲಿ ಸಂಸ್ಕೃತಿ ವಿಕಾಸವಾಗುವಲ್ಲಿ ಅಲೆಮಾರಿ ಕುರುಬರು ತಮ್ಮದೇ ಆದ ರೀತಿಯಲ್ಲಿ ವಿಶಿಷ್ಟ ಕೊಡುಗೆ ನೀಡಿದ್ದಾರೆ.

೨.೧ ಕುರುಬ ಪದದ ಪದ ನಿಷ್ಪತ್ತಿ

ಪುರಾತನ ಕಾಲದಲ್ಲಿ ಜನರು ಯಾವ ವೃತ್ತಿಯಲ್ಲಿ ವೈಶಿಷ್ಟ್ಯತೆಯನ್ನು ಪಡೆದಿರುತ್ತಿದ್ದರೋ ಆ ವೃತ್ತಿಯು ಆ ಸಮುದಾಯದಲ್ಲಿ ಪರಂಪರಾಗತವಾಗಿ ಮುಂದುವರೆದುಕೊಂಡು ಬರುತಿತ್ತು. ಸಾಕು ಪ್ರಾಣಿಗಳಾದ ಕುರಿ-ಮೇಕೆಗಳನ್ನು ಸಾಕಿಕೊಂಡು ಜೀವಿಸುವವರು ಕುರುಬರೆಂದು ಕರೆಯಿಸಿಕೊಂಡರು.

ಶಂಬಾ ಜೋಶಿಯವರ ಪ್ರಕಾರ, ‘ಕುರು’ ಅಂದರೆ ಮರಡಿಗಳಲ್ಲಿರುವ ಪ್ರಾಣಿಗಳನ್ನು ತಾನಿದ್ದ ಬೆಟ್ಟಗಳಲ್ಲಿ ಕಂಡು ಅವನ್ನು ದಿನಾಲು ಬೇಟೆಯಾಡಿ ತರುವ ಬದಲು ಅವನ್ನು ಸಾಕಿ ತಳಿ ಬೆಳೆಸುವ ಹಂಚಿಕೆಯನ್ನು ಹುಡುಕಿದ ಶ್ರೇಯಸ್ಸು ಈ ಜನಕ್ಕಿದೆ. ಪ್ರಾಣಿಗಳನ್ನು ಸಾಕಿ ಬದುಕುವ ವಿಧಾನವನ್ನು ಕಂಡುಕೊಂಡ ಜನರನ್ನು ಕುರುಬರೆಂದು ಕರೆಯಿಸಿಕೊಂಡಿರುವುದಾಗಿ ವಿದ್ವಾಂಸರ ಅಭಿಪ್ರಾಯವಾಗಿದೆ.

ಕುರುಬ ಎನ್ನುವ ಶಬ್ದಕ್ಕೆ ಹಲವಾರು ವಿದ್ವಾಂಸರು ಭಿನ್ನವಾದ ಅರ್ಥವನ್ನು ಸೂಚಿಸಿದ್ದಾರೆ. “ತಮಿಳು, ತೆಲುಗು ಮತ್ತು ಕನ್ನಡ ಭಾಷೆಗಳಲ್ಲಿ ‘ಕೋ’ ಎಂದರೆ ‘ಪರ್ವತ’ವೆಂದು ಅರ್ಥವಿದ್ದರೆ, ‘ಕುರು’ ಎಂಬುದಕ್ಕೆ ‘ಎತ್ತರ’ ಎಂಬ ಅರ್ಥವಿದೆ. ಪರ್ವತ ಇಲ್ಲವೆ ಬೆಟ್ಟ, ಅರಣ್ಯ ಪ್ರದೇಶಗಳಲ್ಲಿ ವಾಸಿಸುವವನು ಕುರುಬ ಅಥವಾ ಕುರುಂಬ ಎಂದು ಸೂಚಿತವಾಗುತ್ತದೆ. ಗುಡ್ಡ-ಬೆಟ್ಟಗಳ ಹುಲ್ಲಿನ ಪ್ರದೇಶವನ್ನು ಅರಸಿಕೊಂಡು ಹೋಗಿ ಈ ಸಮುದಾಯ ಜೀವನ ನಡೆಸುತ್ತಿದ್ದುದರಿಂದ ಈ ಅರ್ಥ ಅಸಂಭನೀಯವೆನಿಸುವುದಿಲ್ಲ. ಪ್ರಾಚೀನ ತಮಿಳು ಕಾವ್ಯಗಳಲ್ಲಿ ಕುರುಬರನ್ನು ಮಲೆಯರು ಎಂದು ವರ್ಣಿಸಲಾಗಿದೆ” (ಲಕ್ಕಪ್ಪಗೌಡ ಎಚ್.ಜಿ:೧೯೮೭:೨). ಹಾಗಾಗಿ ಎತ್ತರವಾದ ಪ್ರದೇಶಗಳಲ್ಲಿ, ಬೆಟ್ಟ-ಗುಡ್ಡಗಳಲ್ಲಿ ವಾಸಿಸುವರು ಕುರುಬರಾದರು. ಅವರಿಗೆ ಪ್ರಿಯಪಾತ್ರವಾದ ಪ್ರಾಣಿ ಕುರಿ. ಅದರ ಸಾಕಣಿಕೆ ಅವರ ಪ್ರಮುಖ ಉದ್ಯೋಗವಾದುದ್ದರಿಂದ ಕುರುಬರೆಂಬ ಪದಕ್ಕೆ ಪಾತ್ರರಾದರು.

ಇದೇ ರೀತಿಯಲ್ಲಿ ಸಂಸ್ಕೃತ ಸಾಹಿತ್ಯದಲ್ಲಿ ಕುರುದೇಶ ಎನ್ನುವ ಪದ ಉಪಲಬ್ಧವಿದ್ದು, ಅದು ಮಹಾಭಾರತದಲ್ಲಿ ಸುಪ್ರಸಿದ್ಧವಾದ ಕುರುವಂಶದವರಿಂದ ಆಳಲ್ಪಟ್ಟಿತೆಂದು ಹೇಳಲಾಗಿದೆ. ಕುರುವಂಶಕ್ಕೆ ಸೇರಿದ ಕೌರವರು ಕಾಲಾಂತರದಲ್ಲಿ ಕುರುವ, ಕುರುಬ ಎಂದಾಗಿ ಮಾರ್ಪಡಾಗಿರುವ ಸಾಧ್ಯತೆಯಿದೆ. “ಕುರುದೇಶ ಕೆಲಭಾಗಗಳಲ್ಲಿ ‘ಕುರು’ ಎನ್ನುವುದು ‘ಪ’ ಎನ್ನುವ ಪದದೊಂದಿಗೆ ಸೇರಿಕೊಂಡು ಅದು ಎಲ್ಲಾ ದ್ರಾವಿಡ ಭಾಷೆಗಳಲ್ಲಿ ಒಡೆಯ, ಅರಸ, ಕುರಿಯ ಯಜಮಾನ, ಗೋಪಾಲ ಎನ್ನುವ ಅರ್ಥವನ್ನು ಸೂಚಿಸುತ್ತದೆ. ಅದು ಕಾಲಾಂತರದಲ್ಲಿ ‘ಕುರಪ’ ಎಂಬ ಪದ ಬಳಕೆಗೆ ಬರಲು ಕಾರಣ ವಾಯಿತು. ‘ಕುರುಪ’ ಎಂದರೆ ಬೆಟ್ಟದಲ್ಲಿ ವಾಸಿಸುವವರು. ಕುರುಪದಿಂದ ಕುರುಬ ಎನ್ನುವ ಪದ ಉತ್ಪತ್ತಿಗೊಂಡಿರಬೇಕು”(ಶಿವಾನಂದ ಗುಬ್ಬಣ್ಣನವರ:೧೯೯೩:೩).

ಹದಿನಾರನೆಯ ಶತಮಾನದಲ್ಲಿದ್ದ ರಸ್ತಾಪುರ ಭೀಮ ಕವಿ ತನ್ನ ‘ಹಾಲುಮತ್ತೋತ್ತೇಜ ಪುರಾಣ’ದಲ್ಲಿ ಕೌರುಬ ಋಷಿಯ ತಪಸ್ಸಿನ ಫಲವಾಗಿ ಕುರುಬ ಜನಾಂಗ ಸೃಷ್ಟಿಯಾಯಿತೆಂದು ಹೇಳಿದ್ದಾನೆ.

> “ಕುರುರೇ ಮೃಗವಸ್ತ್ರಾಣಿ ಕೃತ್ತ್ವವೈ
> ಕೌರುಭ ಋಷಿ
> ತನ್ಮಾ ಸಾರ್ಥಕಂ ಚಕ್ರದೇವಾನಾಂ
> ಹಿತಕಾವ್ಯ” (ಬ.ಪ.ನಾಯ್ಕರ್:೨೦೦೩:೮)

“ಕುರಿಪಾಲನೆ ಮಾಡುವ ಕುರುಬರನ್ನು ತಮಿಳುನಲ್ಲಿ ಕುರುಂಬ ಇಡೈಯರ್ ಎಂದೂ ತೆಲುಗಿನಲ್ಲಿ ಕುರುಂಬ ಗೊಲ್ಲಲು ಎಂದು ಕರೆಯುತ್ತಾರೆ. ಇಲ್ಲಿಯ ‘ಗೊಲ್ಲ’ ಎಂಬ ಶಬ್ದ ಸಂಸ್ಕೃತದ ‘ಗೋ’ ಎಂಬುವುದರಿಂದ ಉತ್ಪನ್ನವಾದುದಲ್ಲ. ತೆಲುಗಿನಲ್ಲಿ ‘ಗೊರ್ರೆ’ ಎಂದರೆ ‘ಕುರಿ’. ಇದರ ಬಹುವಚನ ರೂಪ ‘ಗೂರ್ರೆಲು’ ಅಥವಾ ‘ಗೊರ್ಲು’. ಇದೆ ಮುಂದೆ ಗೊಲ್ಲು ಎಂದಾಗುತ್ತದೆ. ಆದ್ದರಿಂದ ಕುರುಂಬಗೊಲ್ಲಲು ಎಂದರೆ (ಕುರುಬ ಎಂದರೆ ಕುರಿಪಾಲಕ ಎಂದು ಭಾವಿಸಿದಾಗ) ದ್ವಿರುಕ್ತಿ ದೋಷವಾಗುತ್ತದೆ. ಈ ದೃಷ್ಟಿಯಿಂದಲೂ ಕುರು ಅಥವಾ ಕುರುಂಬ ಎಂದರೆ ಬೆಟ್ಟ-ಗುಡ್ಡಗಳಲ್ಲಿ ವಾಸಿಸುವವರು ಎಂಬುದು ಹೆಚ್ಚು ಸಮಂಜಸವಾಗಿ ಕಾಣುತ್ತದೆ. ಆದರೆ ಈಗ ಈ ಸಮುದಾಯವು ಭಾರತದ ಎಲ್ಲಾ ಪ್ರಾಂತಗಳಲ್ಲೂ ವಾಸಿಸುತ್ತಿರುವುದರಿಂದ ಮೂಲಾರ್ಥದ ಬಗೆಗೆ ಸಂಶಯ ಬರುವುದು ಸಹಜವಾಗಿದೆ”(ಹನುಮಂತಯ್ಯ ವಿ.ಆರ್:೧೯೯೬:೧೨).

“ಮೈಮೇಲೆ ಏಳುವ ಗಡ್ಡೆಗಳಿಗೆ ನಾವು ‘ಕುರು’ ಎಂದು ಕರೆಯುತ್ತೇವೆ. ‘ಕುರು’ ಎಂದರೆ ಎತ್ತರವಾದ ಭಾಗವೆಂದು ಅರ್ಥವಾಗುತ್ತದೆ. ಪುರಾತನ ಕಾಲದಲ್ಲಿ ಗುಡ್ಡೆಗಳಿಗೆ ಕುರು ಇಲ್ಲವೆ ಕುರ್ರಿಗಳೆಂದು ಕರೆಯುತ್ತಿದ್ದರು. ಮೂಲ ಮಾನವರು ಆಹಾರ ಮತ್ತು ಬಟ್ಟೆಗಾಗಿ ಸಾಕಲಾದ ಆ ಸಭ್ಯ ಜೀವಿಗಳು ಆಹಾರಕ್ಕಾಗಿ ಕುರುಗಳನ್ನು ಇಲ್ಲವೇ ಕುರ್ರಿಗಳನ್ನು ಆಶ್ರಯಿಸಬೇಕಾಯಿತು. ಹೀಗೆ ಕುರುಗಳಲ್ಲಿ ಇಲ್ಲವೆ ಕುರ್ರಿಗಳಲ್ಲಿ ಆಶ್ರಯ ಪಡದವುಗಳನ್ನು ಕುರಿಗಳೆಂದು ಕರೆಯಲಾಯಿತು. ನಂತರ ಕುರಿಗಳನ್ನು ಪಾಲನೆ ಮಾಡುವನನ್ನು ಕುರಿಪನೆಂದು ಕರೆಯಲ್ಪಟ್ಟರು. ಕಾಲಾಂತರದಲ್ಲಿ ಈ ಕುರುಪ ಶಬ್ದವೇ ಕುರುಬನಾಗಿ ಉಳಿದುಕೊಂಡಿತು. ಕುರಿಗಾರಿಕೆಯಲ್ಲಿ ಕೌರಬರದೂ ಮೂಲ ಪಾತ್ರವಿತ್ತು. ಅದಕ್ಕಾಗಿ ಶಿವನು ಕುರಿಗಳ ಪಾಲಕನನ್ನು ಕೌರಬನೆಂದು ಕರೆದನು. ಕಾಲಾಂತರದಲ್ಲಿ ಈ ಕೌರಬ ಶಬ್ದವೇ ಕುರುಬವಾಯಿತು. ಹೀಗೆ ಕುರಿಗಾರಿಕೆಗೆ ನಿಂತ ಮೂಲ ಪುರುಷನು ಕುರುಬನಾದನು” (ಬೋಸಾ ಬಸವರಾಜ:ಹಾಲುಮತದ ಹುಟ್ಟು). ಬೇಟೆಯಾಡಿ ಬದುಕುವ ಮಾನವನು ಮುಂದೆ ತಟಸ್ಥ ಬದುಕಿಗೆ ಬಂದಾಗ ದಿನಾಲು ಬೇಟೆಯಾಡಿ ತರುವ ಬದಲು ಅವನ್ನು ಸಾಕಿ, ಅವುಗಳ ಮುಖಾಂತರ ಬದುಕನ್ನು ರೂಪಿಸಿಕೊಂಡವರು ಕುರುಬರೆಂದು ಕರೆಯಿಸಿಕೊಂಡರು. ಪ್ರಾಚೀನ ಕಾಲದಲ್ಲಿ ತಮ್ಮ ಸಾಕುಪ್ರಾಣಿಗಳ ಸಂರಕ್ಷಣೆಗಾಗಿ ಶತ್ರುಗಳ ತೊಂದರೆಯಿಲ್ಲದೆ ಎತ್ತರವಾದ ಮತ್ತು ಭದ್ರವಾದ ಸ್ಥಳಗಳನ್ನು ಹುಡುಕಿ ಅಲ್ಲೆ ವಾಸಿಸುತ್ತಿದ್ದರು. ಅಂದು ಮಾನವನ ವಾಸಸ್ಥಳಗಳು ಬೆಟ್ಟ-ಗುಡ್ಡಗಳೇ ಆಗಿದ್ದವು. ಹೀಗೆ ಸಾಕುಪ್ರಾಣಿಗಳೊಂದಿಗೆ ಬದುಕುವ ಜನರು ಕುರುಬರಾದರು.

ಸಮುದಾಯಗಳ ಸಾಂಸ್ಕೃತಿಕ ನೆಲೆಯಲ್ಲಿ ಡಾ. ಕೆ.ಎಂ. ಮೈತ್ರಿ ಅವರು ‘ಕುರುಬ’ ಪದಕ್ಕೆ ಭಿನ್ನರೀತಿಯ ಅರ್ಥಗಳನ್ನು ಅನಾವರಣಗೊಳಿಸಲು ಪ್ರಯತ್ನಿಸಿದ್ದಾರೆ. ಅವರ ಪ್ರಕಾರ “ಮೇಷದ ಇನ್ನೊಂದು ಹೆಸರು ಕುರಿ. ಆದರೆ ಕುರಿ ಮೇಷದ ಮೂಲ ಹೆಸರಲ್ಲ. ಹಾಗೆಯೇ ಮೇಷಪಾಲಕರ ಮೂಲ ಹೆಸರು ಕುರುಬ ಅಲ್ಲ. ಮೇಷದಿಂದ ಉತ್ಪನ್ನಗೊಂಡ ಇನ್ನೊಂದು ಹೆಸರೇ ಕುರಿ. ಇದಕ್ಕೆ

ಅಧ್ಯಾತ್ಮದ ನೆಲೆಯಿರುವುದು. ಮೇಷ ಮ್ಯಾ... (ಮ+ಉ+ಅ) ಎಂದು ಜಪಿಸುವುದು. ಇದು ಮಾನವನ ಮೂಲಮಂತ್ರ. ಇಲ್ಲಿಂದಲೇ ಭಾಷೆಯ ಉಗಮವಾಗಿರುವುದು. ಮಾನವ ಅದನ್ನು ಅನುಸರಿಸುತ್ತ ಭಾಷೆ ಕಲಿತ ಮೇಷರು ಧ್ವನಿ ಮ್ಯಾ... ದಲ್ಲಿ ಮ+ಉ+ಅ ಎಂಬೀ ಮೂರು ಅಕ್ಷರಗಳಿವೆ. ಮೇಷಪಾಲಕ ಮೇಷದ ಧ್ವನಿಗೆ ಅನುಕರಿಸಲಾಗಿ ಮ+ಉ+ಅ ತಿರುಮುರುವಾಗಿ ಅ+ಉ+ಮ ಎಂದು ಉಚ್ಚರಿಸಲಾರಂಭಿಸಿದೆ. ಮೇಷದ ಧ್ವನಿ ಮ್ಯಾ.... > (ಮ+ಉ+ಅ) ಮೇಷ ಪಾಲಕನ ಅನುಕರಣೆಯಲ್ಲಿ > (ಅ+ಉ+ಮ)ವಾಗಿ > ಓಂ ಆಗಿರುವುದು. ಓಂ ಮಾವನ ಬೀಜಮಂತ್ರ. ಅನಂತರ ಮಾನವ ಓಂಕಾರಕ್ಕೆ ಸಹಸ್ರಾರು ಅರ್ಥಗಳನ್ನು ಕಲ್ಪಿಸಿದ. ಮಾನವ ಅಧ್ಯಾತ್ಮ ಶಿಖರವೇರಲು ಮೇಷ (ಓಂ)ಕ್ಕೆ ಗುರಿಯಾಗಿಟ್ಟುಕೊಂಡನು. ಅವನ ಗುರಿಯೇ (ಮೇಷ) > ಕುರಿಯಾಯಿತೆಂದು ಗೊಂಡರ ಧರ್ಮಗುರುಗಳ ವಾದವಾಗಿದೆ (ಶ್ರೀ ಸಿದ್ಧಯ್ಯ ಆಧುನಿಕ ಒಡೆಯರ:೧೯೯೨). ಓಂಕಾರ ಜಪಿಸುವ ಮೇಷ ಮಾನವನಿಗೆ ಪ್ರಕೃತಿಯ ರಹಸ್ಯದ ಅರಿವು ಮೂಡಿಸಿತು. ಅದು ಜ್ಞಾನದ ಪ್ರತೀಕವಾಯಿತು. ಅಹಿಂಸೆಯು ಅದರ ಪರಮೋಧರ್ಮವಾಯಿತು. ಹೀಗೆ ಮೇಷದ ಇನ್ನೊಂದು ಹೆಸರು ಅಧ್ಯಾತ್ಮದಲ್ಲಿ ಕುರಿಯಾಗಿ, ಅದರ ಪಾಲಕನಿಗೆ ಗು[ಕು]ರುಬ > ಕುರುಬ ಎಂಬೀ ಹೆಸರುಗಳಿಂದ ಕರೆಯಲಾರಂಭಿಸಿದರು. ಹೀಗಾಗಿ ಕುರುಬ ಎಂದರೇ ಜ್ಞಾನಿ ಎಂದರ್ಥ. ಮೂಲತಃ ಅದೊಂದು ಜಾತಿ ಸೂಚಕ ಅಥವಾ ಕುಸುಬು ಸೂಚಕ ಪದವಲ್ಲ. ಅದು ಅಧ್ಯಾತ್ಮವನ್ನು ಪ್ರತಿನಿಧಿಸುವ ಪದ. ಆ ಕಾರಣಕ್ಕಾಗಿಯೇ ಏಸು ಕ್ರಿಸ್ತರು ನಾನೇ ಒಳ್ಳೆಯ ಕ್ರೈಸ್ತ ಎಂದುಕೊಳ್ಳದೆ ನಾನೇ ಒಳ್ಳೆಯ ಕುರುಬ; ಒಳ್ಳೇ ಕುರುಬ ತನ್ನ ಕುರಿಗಳಿಗೋಸ್ಕರ ತನ್ನ ಪ್ರಾಣವನ್ನೇ ಕೊಡುತ್ತಾನೆ ಎಂದು ಕೊಂಡಿದ್ದಾರೆ. ಎಲ್ಲಾ ಧರ್ಮಗಳು ಜ್ಞಾನ ಮತ್ತು ಅಧ್ಯಾತ್ಮದ ಪ್ರತೀಕವಾಗಿರುವುದರಿಂದ ಅವೆಲ್ಲವು ಕುರುಬನ(ಜ್ಞಾನಿಯ) ಕೊಡುಗೆಯಾಗಿವೆ. ಎಲ್ಲಾ ವೇದಗಳಿಗೂ ಮೂಲ ವೇದ ಅಜಪವೇದ (ಕಲ್ಯಾಣ ಶ್ರೀ ಬಸವೇಶ್ವರ ಪಂಚಾಂಗ ೧೯೯೯-೨೪) ಇಂದು ಪ್ರಚಾರದಲ್ಲಿಲ್ಲ. ಅಜ ಅಂದರೂ ಆಡು, ಕುರಿ (ಜ್ಞಾನ) ಇದು 'ಅ' ಮತ್ತು 'ಜ' ಎಂಬೀ ಎರಡು ಅಕ್ಷರಗಳ ಜೋಡು ನುಡಿ. 'ಅ' ಎಂದರೆ ಇಲ್ಲ 'ಜ' ಎಂದು ಹುಟ್ಟು ಎಂದರ್ಥ. ಅಜ [ಕುರಿ (ಜ್ಞಾನ)]ಕ್ಕೆ ಸಮನವಾದ ಜ್ಞಾನ ಇನ್ನೊಂದು ಹುಟ್ಟಿಲ್ಲ ಎಂದರ್ಥ. ಇದರ ಅರ್ಥ ಪ್ರಕೃತಿಯ ಸತ್ಯಜ್ಞಾನ.

"ಕುರುಬ ಹುಟ್ಟುವ ಮುನ್ನ
ಕುಲವಿಲ್ಲ ಗೋತ್ರವಿಲ್ಲಾ
ಕುರುಬನ ಫಲ ಕಾಣೋ ಬಸವಣ್ಣ"

ಎಂಬ ಮೇಲಿನ ಅಲ್ಲಮ ಪ್ರಭುಗಳ ವಚನದಲ್ಲಿಯ ಕುರುಬ ಎಂಬ ಪದವು ಜ್ಞಾನಿ ಎಂಬ ಅರ್ಥವನ್ನು ಧ್ವನಿಸುತ್ತದೆ. ಕುರುಬ (ಜ್ಞಾನ) ಹುಟ್ಟುವ ಮುನ್ನ ಕುಲಗೋತ್ರಗಳು ಹುಟ್ಟಿಲ್ಲ. ಕುರುಬ (ಜ್ಞಾನಿಯ) ಪ್ರತಿಫಲಗಳೇ ಕುಲಗೋತ್ರಗಳು ಎಂಬುದರಲ್ಲಿ ಅರ್ಥವಿದೆ. ಬೆಳಗಾಗುತ್ತಲೆ ಕುರುಬನ

ಮುಖ ನೋಡಬೇಕು, ಕುರುಬನಿಂದಲೇ ಬೋಣಿಗೆ ಮಾಡಬೇಕು. ಇದರಿಂದ ಒಳ್ಳೆಯದಾಗುತ್ತದೆಂಬ ನಂಬಿಕೆ ಇಂದಿನದೇನಲ್ಲ. ಇಲ್ಲಿಯೂ ಕುರುಬ ಜ್ಞಾನದ ಸಂಕೇತವೆ ಜ್ಞಾನಿಯಿಂದಲೆ ಒಳಿತಾಗುವುದು ಅಜ್ಞಾನಿಯಿಂದಲ್ಲ"(ಕೆ.ಎಂ. ಮೈತ್ರಿ:೨೦೦೨:೧೫೪:೧೫೫) ಎಂಬುದು ಸ್ಪಷ್ಟವಾಗುತ್ತದೆ.

ಪಶುಪಾಲಕರಾದ ಮ್ಯಾಸನಾಯಕರು, ಗೊಲ್ಲರು, ದನಗಾರರು, ಕುರುಬರು ಹಾಗೂ ಗೊಂಡ ಬಡುಕಟ್ಟಿನವರು ಸಹಸ್ರಾರು ವರ್ಷಗಳಿಂದ ತಮ್ಮ ಪಶುಗಳೊಂದಿಗೆ ಅಲೆಯುತ್ತಾ ಪ್ರಕೃತಿ ಜ್ಞಾನ ಅರ್ಜಿಸಿಕೊಂಡವರು. ಈ ಅಲೆಮಾರಿ ಪಶುಪಾಲಕ ಬುಡಕಟ್ಟುಗಳು ಭಿನ್ನ ಭಿನ್ನ ಭೌಗೋಳಿಕ ಪ್ರದೇಶಗಳಲ್ಲಿ ಹಾಗೂ ವಿಭಿನ್ನ ಪಶುಗಳು ಪಾಲಕರಾದ್ದರಿಂದ ದನಗಳನ್ನು ಸಲುಹವವರಿಗೆ ದನಗಾರ ಹಾಗೂ ಗೊಲ್ಲರೆಂದು ಕರೆಯಲಾರಂಭಿಸಿದರು. ಬಹುದಿನಗಳವರೆಗೆ ಒಂದೇ ಬುಡಕಟ್ಟಿನಲ್ಲಿ ಮೇಷ [ಕುರಿ (ಜ್ಞಾನ)]ಗಳ ಪಾಲನೆ ಉಳಿದು ಕಾಲಾಂತರದಲ್ಲಿ ಮೇಷ[ಕುರಿ (ಜ್ಞಾನ)]ದ ಕಲ್ಪನೆ ಮರೆತು ಮೇಷ[ಕುರಿ (ಜ್ಞಾನ)] ಪಾಲಕರಿಗೆ ಮೇಷ ಪಾಲಕರ ಬದಲಾಗಿ ಕುರಿಪಾಲಕರನ್ನುತ್ತ ಕುರುಬರೆನ್ನ ಲಾರಂಭಿಸಿದರು. ಇಂದು ಕುರುಬರು ಸಹ ಜ್ಞಾನದ ಪ್ರತೀಕವೆಂದು ಪರಿಗಣಿಸದೆ ಅವರೊಂದು ಪಶುಪಾಲಕರ ಬುಡಕಟ್ಟೆಂದು ಪರಿಗಣಿಸಲ್ಪಡುವರು.

ಬಿಸೆಪ್ ಕಾಲ್ಡವಲ್ ಅವರ ಪ್ರಕಾರ "ಕುರುಂಬ ಎಂಬುದು ಕನ್ನಡ ಪದದಿಂದ ಉತ್ಪನ್ನ ಗೊಂಡಿರುವುದು. ಅದು ತಮಿಳುನದ್ದಲ್ಲ ಎಂಬುದಾಗಿ ಅಭಿಪ್ರಾಯ ಪಡುತ್ತಾರೆ. ಹೀಗಾಗಿ ಕುರುಂಬ ಪದವು ಎರಡು ಮೂಲದಿಂದ ಬಂದಿರಬಹುದೆಂದು ಶಂಕಿಸುವುದಲ್ಲದೆ ಎರಡು ವಿಭಿನ್ನ ರೀತಿಯ ಜನರ ಗುಂಪುಗಳಿಗೆ ಇದು ಅನ್ವಯಿಸುತ್ತದೆ ಎಂದಿರುವರು. ಕುರುಬರು ಗುಡ್ಡಗಾಡಿನಲ್ಲಿ ಒಂದೇ ಉದ್ಯೋಗಕ್ಕೆ ನೆಲೆಯಾಗಿ ನಿಂತು ಅದನ್ನು ಮುಂದುವರೆಸಿಕೊಂಡು ಬಂದವರು"(ಲಲಿತಾ ಎ.ಸಿ: ೧೯೯೩:೧೧). ಯಾವುದೇ ಬದಲಾವಣೆಗೆ ಒಳಗಾಗದೆ ಕಾಡಿನಲ್ಲಿಯೇ ಕೆಲವೊಂದು ಕಷ್ಟಗಳೊಂದಿಗೆ ತಮ್ಮ ಬದುಕನ್ನು ರೂಪಿಸಿಕೊಂಡು ಕಾಡಿನಲ್ಲಿಯೇ ಉಳಿದು ಕಾಡು ಕುರುಬರಾದರು. ಅನಂತರ ಬಯಲು ಪ್ರದೇಶಕ್ಕೆ ಬಂದು ಗ್ರಾಮಕಟ್ಟಿಕೊಂಡು ಊರು ಕುರುಬರೆಂದು ಕರೆಯಿಸಿಕೊಂಡರು. ಇವರು ಕೃಷಿ ಮತ್ತು ಕುರಿಗಳ ಸಾಕಣಿಕೆಯ ಉದ್ಯೋಗದಲ್ಲಿ ಮುಂದುವರೆದರು.

"ಕುರುಬ ಪದದ ಪರ್ಯಾಯ ಹೆಸರು ಗೊಂಡ. ಗೊಂಡ ಪದವು ತೆಲುಗು ಭಾಷಿಕವಾಗಿದ್ದು ಅದರರ್ಥ ಕೊಂಡ ಎಂದಾಗುತ್ತದೆ. ಅಂದರೆ ಗುಡ್ಡ, ಬೆಟ್ಟ, ಪರ್ವತ ಅಥವಾ ಭೂಮಿ ಎಂದರ್ಥ. ಗೊಂಡರೆಂದರೆ ಭೂಪುತ್ರರು, ಬೆಟ್ಟದ ವಾಸಿಗಳೆಂಬ ಅರ್ಥಗಳು ಬರುತ್ತವೆ"(ಕೆ.ಎಂ. ಮೈತ್ರಿ:೨೦೦೨:೬೪).

ಕುರುಬ ಎನ್ನುವ ಶಬ್ದವು ಬಹು ಪ್ರಾಚೀನ ಪದವಾಗಿದ್ದು ಇದು ಕುರುಬ ಸಮುದಾಯಕ್ಕೆ ಅನ್ವಯಿಸುತ್ತದೆ. ಉದ್ಯೋಗ ನಿಮಿತ್ತವಾಗಿ ಹಲವಾರು ಉಪಪಂಗಡಗಳು ಹುಟ್ಟಿಗೆ ಕಾರಣವಾಗಿವೆ. ಕುರುಬರು ಕಾಲಘಟ್ಟದಲ್ಲಿ ಕಾರಣಾಂತರಗಳಿಂದ ಬೇರೆ ಬೇರೆ ಪ್ರದೇಶಗಳಿಗೆ ಚದುರಿಹೋದ ಮೇಲೆ

[illegible]

ದೇಶ, ಭಾಷೆ, ಉದ್ಯೋಗಗಳಿಂದಾಗಿ ಅನೇಕ ಹೆಸರುಗಳನ್ನು ಪಡೆದಿರುವರು. ಆದರೂ ಇವರೆಲ್ಲರೂ ಕುರುಬರು ಎಂಬ ಶಬ್ದವನ್ನು ಕಾಪಾಡಿಕೊಂಡು ಬಂದವರಾಗಿದ್ದಾರೆ.

೨.೨ ಪೌರಾಣಿಕ ಹಿನ್ನೆಲೆ

ಯಾವುದೇ ಸಮುದಾಯದ ಹಿನ್ನೆಲೆ ಅಥವಾ ಮೂಲವನ್ನು ಹೆಚ್ಚಾಗಿ ಪುರಾಣಗಳ ಆಧಾರದಿಂದ ಹೇಳಲಾಗುತ್ತದೆ. ಋಷಿ ಮತ್ತು ನದಿ ಮೂಲವನ್ನು ನೋಡಬಾರದೆಂದು ಲೋಕ ರೂಢಿಯಾದ ಮಾತಿದೆ. ಖ್ಯಾತ ಸಂಶೋಧಕರಾದ ಶಂಬಾ ಜೋಶಿಯವರು "ನದಿಯ ಮೂಲವೆಂಬಲ್ಲಿ ಜನಾಂಗದ ಮೂಲವೆಂದು ಸ್ವಲ್ಪ ಬದಲಾಯಿಸಿಕೊಂಡರಾಯಿತು. ಈ ಲೋಕೋಕ್ತಿಯಲ್ಲಿ ನಮ್ಮ ಪೂರ್ವಜರ ಅನುಭವವು ಬಹಳ ಚೆನ್ನಾಗಿ ಸಂಗ್ರಹಿಸಿಟ್ಟಿದೆ. ನದಿಯ ಪ್ರವಾಹವು ದೊಡ್ಡದಾಗಿರುವ ಸ್ಥಳದಲ್ಲಿರುವ ಸೌಂದರ್ಯವು ಉಗಮ ಸ್ಥಾನದಲ್ಲಿರುವುದಿಲ್ಲ"(ಶಂ.ಬಾ.ಜೋಶಿ:೮) ಎಂದಿದ್ದಾರೆ. ಇದಕ್ಕೆ ಅಲೆಮಾರಿ ಕುರುಬ ಸಮುದಾಯವು ಹೊರತಾಗಿಲ್ಲ. ಅಲೆಮಾರಿ ಕುರುಬ ಸಮುದಾಯದ ಮೂಲವನ್ನು ತಿಳಿದು ಕೊಳ್ಳಲು ಹಲವಾರು ಪುರಾಣಗಳಿವೆ. ಹಾಲುಮತದ ಪುರಾಣ, ಹಾಲುಮತದ ಚರಿತ್ರೆ, ಕುರುಬರ ಚರಿತ್ರೆ, ತಗರ ಪವಾಡ ಇತ್ಯಾದಿ ಗ್ರಂಥಗಳು ಪ್ರಮುಖವಾಗಿವೆ.

ಅಲೆಮಾರಿ ಕುರುಬ ಸಮುದಾಯ ಕುರಿತು ಭೀಮ ಕವಿಯ 'ಹಾಲು ಮತೋತ್ತೇಜಕ ಪುರಾಣ' ಹೆಚ್ಚಿನ ಬೆಳಕು ಚೆಲ್ಲುತ್ತದೆ. ಭೀಮ ಕವಿ ಕುರುಬ ಸಮಾಜದ ಉಗಮ ಕುರಿತು ಹೇಳಿದ್ದು, ಸಂಸ್ಕೃತದಲ್ಲಿ ಬರೆದ ಆಗ್ನೇಯ ಪುರಾಣದ ಮೂಲಧಾರ ಕೊಡುತ್ತಾನೆ. ಇದರ ಪ್ರಕಾರ ಒಂದಾನೊಂದು ಕಾಲದಲ್ಲಿ ಕೌರುಭನು ಉಗ್ರತಪಸ್ಸು ಮಾಡಿ ಗಳಿಸಿದ ಶಕ್ತಿಯಿಂದಾಗಿ ಕುರುಬ ಸಮಾಜ ಹುಟ್ಟಿತೆಂದು ಹೇಳಲಾಗಿದೆ.

ಹಾಲುಮತದ ಚರಿತ್ರೆಯ ಪ್ರಕಾರ ಬ್ರಹ್ಮನಿಂದ ರಚಿತವಾದ ಬ್ರಹ್ಮಾಂಡವನ್ನು ನೋಡಲು ಒಮ್ಮೆ ಶಿವ ಪಾರ್ವತಿಯರು ಭೂಲೋಕದಲ್ಲಿ ಸಂಚಾರ ಮಾಡುತ್ತಾ ಸುಂದರ ತಾಣದಲ್ಲಿ ವಿಶ್ರಾಂತಿ ಪಡೆಯುತ್ತಾರೆ. ಆಗ ಈ ಬ್ರಹ್ಮಾಂಡಕ್ಕೆ ಒಬ್ಬ ಕರ್ತನನ್ನು ನೇಮಿಸಿ ಪ್ರಾಣಿಗಳ ಸಂರಕ್ಷಣೆ ಮಾಡ ಬೇಕೆಂದು ಪಾರ್ವತಿ ಶಿವನನ್ನು ಕುರಿತು ಬೇಡಿಕೊಳ್ಳುತ್ತಾಳೆ. ಹಾಲುಮತ ಉತ್ಪತ್ತಿಯಾಗಬೇಕೆಂಬ ಉದ್ದೇಶದಿಂದದು ಪಾರ್ವತಿಯ ಮೊಲೆ ಹಾಲು ನೆಲಕ್ಕೆ ಬಿದ್ದವಂತೆ. ನೆಲಕ್ಕೆ ಬಿದ್ದ ಹಾಲು ವ್ಯರ್ಥವಾಗಬಾರದೆಂದು ಬಲ ಮೊಲೆ ಹಾಲನ್ನು ಕೈಯಲ್ಲಿ ಹಿಡಿದು ಮಣ್ಣಿನಲ್ಲಿ ಬೆರೆಸಿ, ಪುರುಷ ರೂಪವನ್ನು ಮಾಡಿದಳು, ಎಡ ಮೊಲೆಯ ಹಾಲಿನಲ್ಲಿ ಮಣ್ಣನ್ನು ಬೆರೆಸಿದ ಮುದ್ದೆಯಿಂದ ಸ್ತ್ರೀ ರೂಪವನ್ನು ಮಾಡಿದಳು. ಮಣ್ಣಿನ ಎರಡು ಮೂರ್ತಿಗಳನ್ನು ಶಿವನ ಮುಂದೆ ಇಟ್ಟು ಇವರು ಈ ಪೃಥ್ವಿಯ ಆದಿಗೆ ಕರ್ತರಾಗಬೇಕೆಂದು ಬೇಡಿಕೊಂಡಳು. "ಶಿವನು ಪಾರ್ವತಿಯ ಬೇಡಿಕೆಗೆ ಮುಗಳ್ನಗೆ ಬೀರಿ ಸಮ್ಮತಿಸಿ ಆ ಎರಡು ಮಣ್ಣಿನ ಬೊಂಬೆಗಳಿಗೆ ಜೀವ ಕಳೆಯನ್ನು ತುಂಬಿದನು. ಮಣ್ಣಿನ

ಮುದ್ದೆಯಿಂದ ನಿರ್ಮಿತರಾದ್ದರಿಂದ ಪುರುಷ ಬೊಂಬೆಗೆ ಮುದ್ದಪ್ಪ ಸ್ತ್ರೀ ಬೊಂಬೆಗೆ ಮುದ್ದವ್ವ ಎಂದು ನಾಮಕರಣ ಮಾಡಿದರು"(ಯಲ್ಲನಗೌಡ ಫ. ಅತ್ತಿಕೊಳ್ಳ:೩). ಇವರಿಗೆ ಅದಿಗೊಂಡನೆಂಬ ಮಗ ಹುಟ್ಟಿದನು. ಅದಿಗೊಂಡನಿಗೆ ಅಮರಗೊಂಡ, ಶಿವಗೊಂಡ, ಬೀರಗೊಂಡ, ಮಾರುಗೊಂಡ, ಮುದ್ದಗೊಂಡ, ಪದ್ಮಗೊಂಡ ಹೀಗೆ ಆರು ಮಂದಿ ಮಕ್ಕಳು. ಆರನೆಯ ಮಗ ಪದ್ಮಗೊಂಡ ಇಲ್ಲವೆ ಶಿವಪದ್ಮ. ಶಿವನಾಜ್ಞೆಯಂತೆ ಕುರಿಕಾಯುವ ವೃತ್ತಿ ಕೈಗೊಂಡು ಕುರುಬ ಸಮುದಾಯದ ಹುಟ್ಟಿಗೆ ಕಾರಣವಾದನು. ಹೀಗೆ ಪಾರ್ವತಿಯ ಹಾಲಿನಿಂದ ಹುಟ್ಟಿದ ಮಣ್ಣಿನ ಮುದ್ದೆಗಳಾದ ಮುದ್ದಪ್ಪ-ಮುದ್ದವ್ವ ಶಿವನಿಂದ ಜೀವಕಳೆ ಪಡೆದು ಸಂತಾನಭಾಗ್ಯ ಪಡೆದ ವಂಶಜರನ್ನು ಹಾಲುಮತದ ಸಮುದಾಯದವರೆಂದು ಕರೆಯಲಾಗಿದೆ.

ಹಾಲುಮತ ಪುರಾಣ, ಕುರುಬರ ಚರಿತ್ರೆ, ರೇಣುಕ ಕಾವ್ಯ ಮುಂತಾದ ಪುರಾಣಗಳಲ್ಲಿ ಅಲೆಮಾರಿ ಕುರುಬ ಸಮಾಜದ ಮೂಲ ಕುರಿತು ಈ ರೀತಿ ಹೇಳಲಾಗಿದೆ. ಒಮ್ಮೆ ಶಿವನ ಒಡ್ಡೋಲಗದಲ್ಲಿ ಒಂದು ಕೈಯಿಂದ ಶಿವನಿಗೆ ನಮಸ್ಕರಿಸಿದ ಭೃಂಗಿಯನ್ನು ಪಾರ್ವತಿ ತರಾಟೆಗೆ ತೆಗೆದುಕೊಳ್ಳುತ್ತಾಳೆ. ಭೃಂಗಿಯ ಪಾರ್ವತಿ ಮರಿ-ಮಾಂಸಗಳಿಗೆ ತಾನು ಕಾರಣಳೆಂದು ಹೇಳುತ್ತಾಳೆ. ಆಕೆ ಅವನ ಮಜ್ಜೆ-ಮಾಂಸಗಳನ್ನು ತಿರುಗಿ ಪಡೆದಾಗ ಅದರಿಂದಲೆ ಭೃಂಗಿ ಜೋತಾಡುತ್ತಾನೆ. ಭೃಂಗಿ ಶಿವನ ಸ್ತುತಿಗೈದಾಗ ತನ್ನ ತ್ರಿಶೂಲವನ್ನೇ ಅವನಿಗೆ ನೀಡುವ ಮೂಲಕ ಭಕ್ತ ರಕ್ಷಕನೆಂಬ ಬಿರುದನ್ನು ಶಿವ ಉಳಿಸಿಕೊಳ್ಳುತ್ತಾನೆ. ಪಾರ್ವತಿಗೆ ಇದರಿಂದ ಅಪಮಾನವಾಗಿ ನೆರೆದವರ ಹಾಸ್ಯಕ್ಕೆ ಗುರಿಯಾಗುತ್ತಾಳೆ. ಕೋಪಗೊಂಡ ಪಾರ್ವತಿಯು ಮುಂದೆ ನಕ್ಕವರು ಕುರಿಗಳಾಗಿ ಹಿಂದೆ ನಕ್ಕವರು ಮೇಕೆಗಳಾಗಿ ಭೂಲೋಕದಲ್ಲಿ ಜನಿಸಿರೆಂದು ಶಾಪ ಕೊಡುತ್ತಾಳೆ. ದೇವಾನುದೇವತೆಗಳು ಹಾಗೂ ಪಾರ್ವತಿ ಪರಮೇಶ್ವರರು ಕೆಲಕಾಲ ಕುರಿ-ಮೇಕೆಗಳನ್ನು ಕಾಯ್ದು ಬೇಸತ್ತು ಹೋಗುತ್ತಾರೆ. ಆಗ ಒಂದು ಗವಿಯಲ್ಲಿ ಅವನ್ನು ಕೂಡಿಟ್ಟು ಬಾಗಿಲು ಮುಚ್ಚಿ ಬಾಗಿಲ ಕೊಂಡಿಗೆ ಪಾರ್ವತಿಯ ಮೂಗುತಿಯನ್ನು ಸಿಕ್ಕಿಸಿ ಶಿವಪಾರ್ವತಿಯರು ಕೈಲಾಸಕ್ಕೆ ಹಿಂತಿರುಗುತ್ತಾರೆ. ಕಾಲಾಂತರದಲ್ಲಿ ಮೂಗುತಿ ಮುತ್ತಲ ಮರವಾಗಿ ಬೆಳೆಯುತ್ತದೆ. "ಈ ಜಾಗವು ಮಹಾಭಾರತದ ಕುರುಕ್ಷೇತ್ರದ ಸಮೀಪವಿರುವ ಕುರುವೇಶ್ವರ ಹತ್ತಿರವಿತ್ತು. ಹಿಂದೆ ಈ ಪ್ರದೇಶವನ್ನು ಕುರುಪತಿಪುರವೆಂದು ಕರೆಯಲಾಗುತ್ತಿತ್ತು. ಅಲ್ಲಿ ಒಕ್ಕಲಿಗ ಜಾತಿಗೆ ಸೇರಿದ ಆದಿಗೊಂಡ ನೆಲೆಸಿದ್ದು ಆತನಿಗೆ ಆರು ಮಕ್ಕಳಿದ್ದರು. ಆರು ಜನ ಮಕ್ಕಳಲ್ಲಿ ಕೊನೆಯವನು ಉಂಡಾಡಿ ಪದ್ಮಣ್ಣ. ಸಹೋದರರ ಒತ್ತಾಯಕ್ಕೆ ಮಣಿದು ಹೊಲ ಹಸನು ಮಾಡುತ್ತಿರುವಾಗ ಅರಿಯದಲೇ ಹುತ್ತದ ಮೇಲಿರುವ ಮುತ್ತಲ ಮರ ಕಡಿದೊಡನೆ ಅದರಡಿಯಿಂದ ನೂರಾರು ಕುರಿಗಳು ಹೊರಬಂದಾಗ ಆಶ್ಚರ್ಯಚಕಿತನಾಗಿ ಶಿವನನ್ನು ಪ್ರಾರ್ಥಿಸುತ್ತಾನೆ. ಶಿವ ಪ್ರತ್ಯಕ್ಷನಾಗಿ ಪದ್ಮಣ್ಣನಿಗೆ ಕುರಿ ಕಾಯುವ ವೃತ್ತಿಯನ್ನು ಕೈಗೊಳ್ಳಬೇಕೆಂದು ಹೇಳುವುದಲ್ಲದೆ ಆತನ ರಕ್ಷಣೆಗೆ ಬೀರೇಶನನ್ನು ಕಳುಹಿಸಿ ಕೊಡುತ್ತಾನೆ. ಹೀಗೆ ಪದ್ಮಣ್ಣನು ಕುರುಬ ಸಮಾಜದ ಮೂಲ ಪುರುಷನಾದರೆ ಆತನ ಕುರಿಗಳ ರಕ್ಷಣೆಗಾಗಿ

ಭೂಮಿಯಲ್ಲಿ ಅವತರಿಸಿದ ಬೀರೇಶ ಬೀರದೇವರಾಗಿ ಅಲೆಮಾರಿ ಕುರುಬರಿಂದ ಪೂಜಿಸಲ್ಪಡುತ್ತಿದ್ದಾನೆ"(ಶಿವಾನಂದ ಗುಬ್ಬಣ್ಣನವರ: ೧೯೯೩:೧೨).

ಅಲೆಮಾರಿ ಕುರುಬರ ಹುಟ್ಟನ್ನು ವಿವರಿಸುವ ಇನ್ನೊಂದು ಪೌರಾಣಿಕ ಕಥೆ ಪ್ರಚಾರದಲ್ಲಿದೆ. ಶಿವನ ಆಜ್ಞೆಯಂತೆ ಪದ್ಮಣ್ಣ ಕುರಿಕಾಯುತ್ತ ಕುರಿಹಾಲು ಕಾಯಿಸಿ ಹೈನು ಮಾಡುವುದಕ್ಕೆ ಬೆಂಕಿಯ ಅವಶ್ಯಕತೆಯಿಂದ ಗುಡ್ಡದ ತುದಿಯ ಮೇಲೆ ನಿಂತು ಸುತ್ತಲು ದೃಷ್ಟಿ ಹರಿಸಿದನು. "ಆತನಿಗೆ ದೂರದಲ್ಲಿ ಹೊಗೆ ಬರುತ್ತಿರುವುದು ಕಂಡು ಅಲ್ಲಿಗೆ ಹೋಗಿ ನೋಡಲು ರಾಕ್ಷಸಿಯ ಬಂಧನದಲ್ಲಿದ್ದ ಕನ್ಯೆಯ ಪರಿಚಯವಾಗಿ ತನ್ನನ್ನು ಬಂಧಮುಕ್ತಳನ್ನಾಗಿ ಮಾಡಿದರೆ ಬೆಂಕಿ ಕೊಡುವುದಾಗಿ ಪದ್ಮಣ್ಣನಿಗೆ ಹೇಳುತ್ತಾಳೆ. ಆಕೆಯ ಬೇಡಿಕೆಯನ್ನು ಮನ್ನಿಸಿದ ಪದ್ಮಣ್ಣ ಆಕೆಯ ಅಪೇಕ್ಷೆಯಂತೆ ವಿವಾಹವಾಗುತ್ತಾನೆ. ವಿವಾಹ ಸಮಯದಲ್ಲಿ ಕಾಡಿನಲ್ಲಿ ಹತ್ತಿಯು ದೊರೆಯಲಾರದ ಕಾರಣ ಉಣ್ಣೆಯ ಕಂಕಣ ಕಟ್ಟಿದರು. ಇವಳ ಸಂತತಿಯವರು ಉಣ್ಣೆ ಕಂಕಣದವರಾದರು. ಪದ್ಮಣ್ಣ ಈ ಮೊದಲು ಸ್ವಜಾತಿಯ ಹೆಣ್ಣಿನೊಂದಿಗೆ ಮದುವೆಯಾಗಿದ್ದ ಅವಳ ಸಂತತಿಯವರಿಗೆ ಹತ್ತಿಕಂಕಣದವರೆಂದು ಕರೆಯಲಾಗುತ್ತಿದೆ"(ಚಂದ್ರಕಾಂತ ಬಿಜ್ಜರಗಿ:೨೦೦೬:೧೬೯).

ಅಲೆಮಾರಿ ಕುರುಬರ ಮೂಲವನ್ನು ವಿವರಿಸುವ ಮತ್ತೊಂದು ಪುರಾಣ ಕಥೆಯುಂಟು. ಇವರು ಮೂಲತಃ ಕಾಪುಗಳು. ಅವರ ಪೂರ್ವಜರು ಮಾಸಿರೆಡ್ಡಿ ಮತ್ತು ನೀಲಮ್ಮ. ಇವರು ಪೂರ್ವಘಟ್ಟದಲ್ಲಿ ಕಟ್ಟಿಗೆ ಮಾರಿ ಜೀವಿಸುತ್ತಿದ್ದರು. ಅವರಿಗೆ ಐದು ಜನ ಗಂಡುಮಕ್ಕಳು. ಅವರ ಬಡತನವನ್ನು ಕಂಡು ಮರುಗಿದ ಶಿವನು ಜಂಗಮ ವೇಷಧಾರಿಯಾಗಿ ಅವರ ಮನೆಗೆ ಬಂದು "ನಿಮಗೆ ಮತ್ತೊಬ್ಬ ಗಂಡು ಮಗು ಜನನವಾಗುತ್ತಲೇ ಬಡತನ ನಿವಾರಣೆಯಾಗುವುದೆಂದು ಹೇಳಿ ಭಸ್ಮ ಕೊಟ್ಟು ಹೋದನು." ಆ ಆರನೇ ಮಗನೇ ಉಂಡಾಳ ಪದ್ಮಣ್ಣ. ಅವರ ಕುಟುಂಬ ವ್ಯವಸಾಯ ಮಾಡುತ್ತಾ ಅಭಿವೃದ್ಧಿ ಹೊಂದುತ್ತದೆ. ಆದರೆ ಪದ್ಮಣ್ಣ ಮಾತ್ರ ಕೆಲಸಕ್ಕೆ ಹೋಗದೆ ಉಂಡಾಡಿಯಾಗಿ ಕಾಲಕಳೆಯುತ್ತಿರುತ್ತಾನೆ. ತಾಯಿ ನೀಲಮ್ಮ ಪದ್ಮಣ್ಣನಿಗೆ ಬುದ್ಧಿವಾದ ಹೇಳಿ ಅಣ್ಣಂದಿರ ಜೊತೆ ಹೊಲ ಹಸನು ಮಾಡಲು ಕಳುಹಿಸುತ್ತಾಳೆ. ಪದ್ಮಣ್ಣ ಅರಿಯದಲೇ ಹುತ್ತದ ಮೇಲಿರುವ ಮುತ್ತಲ ಮರ ಕಡಿಯುತ್ತಾನೆ. ಅದರಡಿಯಿಂದ ಅಸಂಖ್ಯಾತ ಕುರಿಗಳು ಹೊರಬರುತ್ತವೆ. ಶಿವನ ಆಜ್ಞೆಯಂತೆ ಅವನು ಕುರಿಗಳನ್ನು ಕಾಪಾಡುವುದಕ್ಕಾಗಿ ಅರಣ್ಯ, ಹುಲ್ಲುಗಾವಲು, ನೀರು ಇರುವಲ್ಲಿ ಸಂಚರಿಸಲು ಪ್ರಾರಂಭಿಸುತ್ತಾನೆ. ಕುರಿಗಳ ಲಾಲನೆ ಪಾಲನೆಯಲ್ಲಿ ಮಗ್ನನಾಗುತ್ತಾನೆ. ಆತನಿಗೆ ಆಗ ಅರಣ್ಯದಲ್ಲಿ ಬದುಕುವ ರೀತಿ-ನೀತಿಯನ್ನು ಶಿವನು ಉಪದೇಶಿಸಿದನು. ಆಹಾರಕ್ಕಾಗಿ ಹಾಲುಹಿಂಡಿ ಹೈನ ಮಾಡುವುದಕ್ಕೆ ಬೇಕಾದ ಬೆಂಕಿಯನ್ನು ಅರಸುತ್ತ ಆತ ಅಡವಿಯಲ್ಲಿ ಅಲೆಯುತ್ತಿರುತ್ತಾನೆ. ಆಗ ರಾಕ್ಷಸಿಯ ಬಂಧನದಲ್ಲಿರುವ ಕನ್ಯೆಯ ಪರಿಚಯ ಪ್ರಣಯಕ್ಕೆ ತಿರುಗಿ ವಿವಾಹವಾಗುತ್ತದೆ. ರಾಕ್ಷಸಿ ಹೆಂಡತಿಯಲ್ಲಿ ಸಂತಾನ ಪಡೆಯುತ್ತಾನೆ ಮತ್ತು ಈ ಮೊದಲೇ ವಿವಾಹವಾಗಿ ಸ್ವಜಾತಿ ಹೆಂಡತಿಯಲ್ಲಿ ವಿವಾಹವಾದ ಸಂತಾನ

ಪಡೆದಿರುತ್ತಾನೆ. ಹೀಗೆ ಸ್ವಜಾತಿ ಹೆಂಡತಿ ಸಂತಾನಗಳ ಮದುವೆಯಲ್ಲಿ ಹತ್ತಿಕಂಕಣ ಹಾಗೂ ಅನ್ಯಜಾತಿ (ರಾಕ್ಷಸಿಯ ಬಂಧನದ ಕನ್ಯೆ) ಹೆಂಡತಿ ಸಂತಾನಗಳ ಮದುವೆಯಲ್ಲಿ ಉಣ್ಣೆ ಕಂಕಣ ಕಟ್ಟುವ ಸಂಪ್ರದಾಯ ಬೆಳೆಯುತ್ತದೆ. ಇವು ಕಾಲಾಂತರದಲ್ಲಿ ಹತ್ತಿಕಂಕಣ ಹಾಗೂ ಉಣ್ಣೆ ಕಂಕಣ ಎಂಬ ಎರಡು ಪ್ರತ್ಯೇಕ ಉಪಜಾತಿಗಳ ಹುಟ್ಟಿಗೆ ಕಾರಣವಾಗಿದೆ. ಈ ಕುರಿತು ಯಾವ ಐತಿಹಾಸಿಕ ದಾಖಲೆ ಇರುವುದಿಲ್ಲ. ಇದೊಂದು ಕಲ್ಪಿತ ಕಥೆ ಎಂಬುದು ವಿದ್ವಾಂಸರ ತರ್ಕ ವಿಚಾರ.

೨.೩ ಚಾರಿತ್ರಿಕ ಹಿನ್ನೆಲೆ

ಪರಂಪರಾಗತವಾದ ಕಥೆಯ ಪ್ರಕಾರ ಅಲೆಮಾರಿ ಕುರುಬ ಜನಾಂಗದ ಹುಟ್ಟು ಶಿವ ಮತ್ತು ಪಾರ್ವತಿಯ ಮೂಲವನ್ನು ಮುಟ್ಟುತ್ತದೆ. ಈ ಕಥೆಗಳನ್ನು ದಂತಕಥೆಗಳೆಂದು ತಳ್ಳಿಹಾಕಿದರೂ ಇವು ಎರಡು ಅಂಶಗಳನ್ನು ಸ್ಪಷ್ಟಪಡಿಸುತ್ತವೆ. ಒಂದು : ಈ ಜನಾಂಗದ ಮುಖ್ಯ ದೇವತೆ ಶಿವ. ಎರಡು : ಇದು ಪ್ರಾಚೀನವಾದ ಜನಾಂಗ. ಮೊದಲನೆಯದಕ್ಕೆ ಸಾಕ್ಷಿಯಾಗಿ ಇಂದು ಅಲೆಮಾರಿ ಕುರುಬರಲ್ಲಿ ಪ್ರಧಾನವಾಗಿ ಪೂಜೆಗೊಳ್ಳುವ ಬೀರೇಶ್ವರ ದೇವತೆ ಈಶ್ವರನ ಬೇರೊಂದು ರೂಪನಾಗಿರುವುದೆ ಆಗಿದೆ. ಆದರೆ ಈ ಸಮುದಾಯದ ಪ್ರಾಚೀನತೆಯ ಬಗ್ಗೆ ಇತರ ಬೇರೆ ಮೂಲವನ್ನು ಹುಡುಕಬಹುದು.

ಅಲೆಮಾರಿ ಕುರುಬರು ಭಾರತದ ಮೂಲ ನಿವಾಸಿಗಳೆಂಬವುದರಲ್ಲಿ ಎರಡು ಮಾತಿಲ್ಲ. "ಪರಸ್ಪರ ಎಷ್ಟೋ ಬೇರೆ ಬೇರೆಯಾಗಿದ್ದರೂ ತಾವು ವಾಸಿಸುತ್ತಿದ್ದ ದ್ರಾವಿಡ ಪಂಗಡದಿಂದ ಎಷ್ಟೋ ಚದರಿ ಚೆಲ್ಲಾಪಿಲ್ಲಿಯಾಗಿ ಹೋಗಿದ್ದರೂ ಮತ್ತು ಈಗ ಪರಸ್ಪರ ಎಷ್ಟೇ ದೂರ ದೂರವಾಗಿ ಜೀವಿಸುತ್ತಿದ್ದರೂ ಪ್ರಾಚೀನ ಕಾಲದಲ್ಲಿ ಈ ಜನಾಂಗ ಅಸ್ತಿತ್ವದಲ್ಲಿತ್ತೆನ್ನುವುದಕ್ಕೆ ಕೆಲವು ಅವಶೇಷಗಳನ್ನಾದರೂ ಹೊಂದಿರದ ಯಾವ ಪ್ರಾಂತವೂ ಭರತ ವರ್ಷದಲ್ಲಿಲ್ಲ"(ಲಕ್ಕಪ್ಪಗೌಡ ಎಚ್.ಜಿ:೧೯೯೭:೪). ಇದಕ್ಕೆ ಆಧಾರವೆಂಬಂತೆ Gustau oppert ರವರು ತಮ್ಮ The original Inhabitants of India ಎಂಬ ಗ್ರಂಥದಲ್ಲಿ ಈ ರೀತಿಯಾಗಿ ಹೇಳಿದ್ದಾರೆ. "Indeed the kurubas must be regarded as very old inhabitants of this land who contest with thier Dravidian Kinsmen the Priorty of accupation of the Indian soil" [Gustau oppert the original inhabitants of India P.126]

"They (The Kurubas) are the modern representatives of the ancient Kurubas or pallvas, who were once so powerful through out south india". (Madras census report, 1891)

"........the Kurubas are the most impartant element in the early population of south india" [(R.E. Enthovan, 1922) Tribes and castes of Bombay Vol. II Pp.317]

“ದಕ್ಷಿಣ ದೇಶದಲ್ಲಿ ಸಿಕ್ಕಿರುವ ಪ್ರಾಚೀನ ನಾಣ್ಯಗಳೆಂದರೇ ಕುರುಬರವೇ”(J.C.,Brown:58). ಎಂದು ಶಂಬಾ ಜೋಶಿಯವರಿಂದ ಉದ್ಧೃತವಾಗಿದೆ. ಮೇಲಿನ ಅಭಿಪ್ರಾಯಗಳನ್ನು ಗಮನಿಸಿದಾಗ ಅಲೆಮಾರಿ ಕುರುಬರು ಎಂದು ಇಂದು ಕರೆಸಿಕೊಳ್ಳುತ್ತಿರುವ ಒಂದು ಜನಾಂಗ ತುಂಬಾ ಪ್ರಾಚೀನ ಕಾಲದಿಂದಲೂ ಭಾರತ ಖಂಡದಲ್ಲಿತ್ತು ಎಂಬ ಅಂಶ ತಿಳಿದುಬರುತ್ತದೆ.

ಇವರು ಆರ್ಯರೋ, ದ್ರಾವಿಡರೋ ಎಂಬ ಬಗ್ಗೆ ಬೇರೆ ಬೇರೆ ಅಭಿಪ್ರಾಯಗಳಿವೆ. ಈ ದೇಶಕ್ಕೆ ಬೇರೆ ಕಡೆಯಿಂದ ಬಂದು ಇಲ್ಲಿನ ಮೂಲ ನಿವಾಸಿಗಳನ್ನು ಗೆದ್ದು, ಒತ್ತರಿಸಿ ಅವರೊಡನೆ ಸಂಕರಗೊಂಡು ಸಾಮ್ರಾಜ್ಯವನ್ನು ಸ್ಥಾಪಿಸಿ ನಾಗರಿಕತೆಯನ್ನು ಹರಡಿದ ಆರ್ಯರ ಪ್ರಧಾನ ಕಸುಬು ಪಶುಪಾಲನೆಯಾಗಿತ್ತು. ಅಲೆಮಾರಿ ಕುರುಬರ ಮುಖ್ಯ ಕಸುಬು ಇಂದಿಗೂ ಪಶುಪಾಲನೆಯೆ ಆಗಿದೆ. ವೇದಗಳಲ್ಲಿ ಕುರುಬ ಜನಾಂಗವನ್ನು ಸೂಚಿಸುವ ಕೆಲವು ಪದಗಳು ಕಾಣಬರುತ್ತವೆ. ಆದುದರಿಂದ ಇಂದಿನ ಅಲೆಮಾರಿ ಕುರುಬರು ಆರ್ಯರು ಎಂಬ ವಾದವೊಂದಿದೆ. ಆದರೆ ಇದು ಆರ್ಯಪೂರ್ವ ಜನಾಂಗವೆಂಬುದಕ್ಕೆ ಬಲವಾದ ಆಧಾರಗಳು ಕಂಡುಬರುತ್ತವೆ. “ಬೇರೆ-ಬೇರೆ ಧರ್ಮ ಮತ್ತು ಬೇರೆ-ಬೇರೆ ಜನಾಂಗಗಳ ಸಂಪರ್ಕದಿಂದಾಗಿ ಕಾಲಕ್ರಮದಲ್ಲಿ ಇವರಲ್ಲಿ ಹಲವು ಜಾತಿಗಳು ಉದ್ಭವಿಸಿದವು. ಅನ್ನ ವ್ಯವಹಾರಗಳು ನಿಂತು ಹೋದವು. ಆದರೆ ಇತಿಹಾಸವನ್ನು ಗಮನಿಸಿದಾಗ ಇಂದು ಬೇರೆ-ಬೇರೆಯಾಗಿ ಕಾಣುವ ಹಲವು ಜಾತಿಗಳು ಮೂಲಭೂತವಾಗಿ ಕುರುಬ ಜನಾಂಗಕ್ಕೆ ಸೇರಿದವುಗಳೆಂದೂ, ಅವರಲ್ಲಿ ಅನ್ನ ವ್ಯವಹಾರ ಸಂಬಂಧವಷ್ಟೇ ಅಲ್ಲ, ಮದುವೆಗಳೂ ನಡೆದಿವೆ ಎಂಬುದು ವಿಧಿತವಾಗುತ್ತದೆ. ರಾಷ್ಟ್ರಕೂಟರಿಗೂ, ಗಂಗರಿಗೂ ಈ ವಿವಾಹ ಸಂಬಂಧ ನಡೆದಿದೆ. ಚಾಲುಕ್ಯರ ಮನೆಯ ಹೆಣ್ಣು ರಾಷ್ಟ್ರಕೂಟರಲ್ಲಿವೆ. ಶಾತವಾಹನರಲ್ಲಿ ಅಗ್ನಿ ಕುಲದ ಹೆಣ್ಣುಗಳಿದ್ದುದು ಸಿದ್ಧವಾಗಿದೆ. ಆದಕಾರಣ ಇಂದಿನ ತಮ್ಮ ಒಡಕು ಸಮಾಜ ಸ್ಥಿತಿಯ ಮೇಲಿಂದ ಹಿಂದಿನ ಕಾಲದ ಚಿತ್ರವನ್ನು ಚಿತ್ರಿಸಿಕೊಳ್ಳಲಾಗದು”(ಎಚ್.ಜೆ. ಲಕ್ಕಪ್ಪಗೌಡ:೧೯೯೭:೪).

ದಕ್ಷಿಣ ದೇಶದಲ್ಲಿ ಸಿಕ್ಕಿರುವ ಅತಿ ಪ್ರಾಚೀನ ನಾಣ್ಯಗಳೆಂದರೆ ಅಲೆಮಾರಿ ಕುರುಬರವೇ ಎಂಬುದಾಗಿ ಸರ್ ಇಲಿಯಟ್ ಅಭಿಪ್ರಾಯ ಪಟ್ಟಿದ್ದಾರೆ. ಇವು ಕ್ರಿ.ಶ. ಮೂರನೇ ಶತಮಾನದ ನಾಣ್ಯಗಳು “ಪ್ರಾಚೀನ ಶಾಸನಗಳಲ್ಲಿ ಕುರುಬರ ಹಟ್ಟಿ, ಕುರುಬರ ಹಳ್ಳಿ, ‘ಕುರುಬರ ವಿಷಯ’ ಇಂತಹ ವಿಷಯಗಳನ್ನು ಹೇರಳವಾಗಿ ಕಾಣಬಹುದು. ದಕ್ಷಿಣ ಭಾರತದಲ್ಲಂತೂ ಅತ್ಯಂತ ಪ್ರಾಚೀನ ರೆಂದರೇ ಇವರೇ. ಇವರು ಮೊದಲು ರಾಜ್ಯಸ್ಥಾಪನೆ ಮಾಡಿದ ಪಟ್ಟಣ ಪುಲಾಲ. ಆ ರಾಜನ ಹೆಸರು ಕಾಮಂದಪ್ರಭು. ಆ ರಾಜ್ಯದ ಹೆಸರು “ಕುರುಬರು ನಾಡು”. ಮಲಬಾರು ಜಿಲ್ಲೆಯಲ್ಲಿ ಈಗಲೂ ಈ ಹೆಸರಿನ ಪ್ರದೇಶವಿದೆ. ರೆವರೆಂಡ್ ಎಫ್. ಮೆಟ್ಜ್ ಅವರು ಕುರುಬರು ನೀಲಗಿರಿ ಪ್ರದೇಶಗಳಲ್ಲಿ ನೆಲೆಸಿದ ಬಗ್ಗೆ ಬರೆಯುತ್ತಾ ಒಂದು ಕಾಲದಲ್ಲಿ ಇದು ಕುರುಬರು ಪ್ರಬಲ ನೆಲೆಯಾಗಿತ್ತು. ...ಮೊಟ್ಟ ಎಂಬ ಹೆಸರಿನ ಹಳ್ಳಿಗಳೂ, ಅವರ ಮನೆಗಳ ಅವಶೇಷಗಳೂ ಇಂದು ಕಾಣಬರುತ್ತವೆ. ಹಲವು

[illegible]

ವರ್ಷಗಳ ಹಿಂದೆ ಹಿಂದಿನ ಕುರುಬ ಪಟ್ಟಣದ ಒಂದು ನಿವೇಶನವನ್ನು ನಾನು ಕಂಡುಹಿಡಿದೆ"(ಎಚ್.ಜೆ. ಲಕ್ಕಪ್ಪಗೌಡ:೧೯೯೭:೫೪೬) ಇತ್ಯಾದಿಯಾಗಿ ಹೇಳುತ್ತಾರೆ.

"ದಕ್ಷಿಣ ಭಾರತದ ಕುರುಬರ ಇತಿಹಾಸ ಉತ್ತರ ಭಾರತದವರಿಗಿಂತ ಉಜ್ವಲವಾಗಿದೆ ಎನ್ನಬಹುದು. ಪ್ರಾಚೀನ ತೊಂಡಮಂಡಲದ ಕುರುಬರು ಪಲ್ಲವ ರಾಜರ ಮೂಲ ಪುರುಷರೆಂದು ತಿಳಿದು ಬರುತ್ತದೆ. ಇವರು ಸುಮಾರು ಕ್ರಿ.ಶ. ೪ನೇ ಶತಮಾನದಿಂದ ೮ನೇ ಶತಮಾನದವರೆಗೆ ದಕ್ಷಿಣ ಭಾರತದ ರಾಜಕೀಯ ಜೀವನದಲ್ಲಿ ಸಾರ್ವಭೌಮತ್ವವನ್ನು ಸ್ಥಾಪಿಸಿದ್ದರು. ತೊಂಡಮಂಡಲವು ಉತ್ತರ ಪೆನ್ನಾರ್ ಮತ್ತು ಉತ್ತರ ವೇಲಾರ್ ನದಿಗಳ ಪ್ರದೇಶದ ನಡುವೆ ಬರುತ್ತದೆ. ಇದನ್ನು 'ಕುರುಬರ ಭೂಮಿ', 'ಕುರುಬರ ನಾಡು' ಎಂದು ಕರೆಯಲಾಗಿತ್ತು. ಚೋಳರಿಂದ ಸೋಲಿಸಲ್ಪಟ್ಟ ಮೇಲೆ ಅವರು ಅವನತಿ ಹೊಂದಿದರು. ಇಂದಿನ ನೀಲಗಿರಿ, ವೈನಾಡು, ಕೇರಳದ ಗುಡ್ಡ ಪ್ರದೇಶ, ಮೈಸೂರಿನ ಗುಂಡ್ಲುಪೇಟೆ, ಹೆಗ್ಗಡದೇವನಕೋಟೆ, ಹುಣಸೂರು, ಕೊಡಗು ಪ್ರದೇಶಗಳಲ್ಲಿ 'ಗಿರಿಜನ' ರೂಪದಲ್ಲಿ ಕಾಣಿಸುತ್ತಿರುವವರೇ ಪ್ರಾಚೀನ ತೊಂಡಮಂಡಲದ ಕುರುಬ ಪ್ರತಿನಿಧಿಗಳೆಂದು ಜನಾಂಗದ ಶಾಸ್ತ್ರಜ್ಞರು ಗುರುತಿಸಿದ್ದಾರೆ"(ಮಾದೇಗೌಡ:೨೫).

ದಕ್ಷಿಣ ಭಾರತದ ಪ್ರಭಾವಶಾಲಿ ರಾಜಮನೆತನಗಳಲ್ಲಿ ಪಲ್ಲವರು ಒಬ್ಬರು. ಅತ್ಯಂತ ಬಲಾಢ್ಯರಾದ ಇವರು ಮೊಟ್ಟಮೊದಲಿಗೆ ದಕ್ಷಿಣ ಭಾರತದಲ್ಲಿ ನಾಣ್ಯಗಳನ್ನು ಜಾರಿಗೆ ತಂದರು. ಶ್ರೀ ಕೃಷ್ಣಸ್ವಾಮಿ ಅಯ್ಯಂಗಾರ್ ಅವರು ಪಲ್ಲವ ಅರಸರ ಬಗ್ಗೆ ಬರೆಯುತ್ತಾ "ಪಲ್ಲವರು ತಮಿಳು ಕುರುಂಬರು ಎಂದೂ ಕೆಲವೊಮ್ಮೆ ಕುರುನೀಲ ಮನ್ನೆರ ಎಂದೂ ಕರೆಯುತ್ತಿದ್ದರು ಎಂದಿದ್ದಾರೆ. 'ಕುರುಂಬರು' ಅಥವಾ 'ಕುರುಬರು' ಪ್ರಾಚೀನ ಪಲ್ಲವರ ಆಧುನಿಕ ಪ್ರತಿನಿಧಿಗಳು ಎಂಬುದಾಗಿ ೧೮೯೧ರ ಮದ್ರಾಸ ಗ್ಯಾಜಿಟಿಯರ್‌ನಲ್ಲಿ ಉಲ್ಲೇಖಿಸಲಾಗಿದೆ"(ಎಚ್.ಜೆ. ಲಕ್ಕಪ್ಪಗೌಡ:೧೯೯೭:೯). ಈ ರಾಜ್ಯವನ್ನು ಹ್ಯೂಯನತ್ಸಾಂಗ ಮನದುಂಬಿ ವರ್ಣಿಸಿದ್ದಾನೆ. ಚೋಳರು ಈ ರಾಜ್ಯವನ್ನು ವಶಪಡಿಸಿಕೊಂಡ ನಂತರ ಕುರುಬರ ಆಸ್ತಿ-ಪಾಸ್ತಿಗೆ, ಜೀವಕ್ಕೆ ರಕ್ಷಣೆ ಇಲ್ಲದಾಯಿತು. ಹೀಗಾಗಿ ಪಲ್ಲವ ಮೂಲದ ಕುರುಬರು ಕಾಡು, ಬೆಟ್ಟ, ಗುಡ್ಡಗಳನ್ನು ಸೇರಿಕೊಂಡರು.

ಕುರುಬರೇ ಕದಂಬರೆಂಬ ಹೆಸರಿನಿಂದ ರಾಜ್ಯಭಾರ ಮಾಡಿದ್ದರೆಂದೂ, ಕುರುಂಬ ಶಬ್ದವು ಸಂಸ್ಕೃತದ ಸಂಸರ್ಗದಿಂದ ಕದಂಬ ಎಂದಾಗಿರಬಹುದೆಂದೂ ಆಂಗ್ಲ ಲೇಖಕ ಲೂಯಿಸ್ ರೈಸ್ ಅವರು ಮೈಸೂರು ಮತ್ತು ಕೊಡಗು ಜಿಲ್ಲೆಯ ಗ್ಯಾಜಿಟಿಯರ್‌ದಲ್ಲಿ ಉಲ್ಲೇಖಿಸಿದ್ದಾರೆ. "The Kurbar have a special interest in Kanara, if as seems poslible, Kadambs the name of the leading dynasties of Banavasi is a brahminical form of Kurubas" ಎಂದು ಒಬ್ಬ ಚರಿತ್ರಕಾರರು ಹೇಳುತ್ತಾರೆ. "I suspect that behind the name Kadamba Irkul that of Kadamba or Kurumba" ಎಂದು Gustav Oppert

ಅವರು ಹೇಳುತ್ತಾರೆ. ಅವರು ಮುಂದುವರಿದು ಕುರುಂಬರೇ ಕದಂಬರೆಂದೂ ಕುರುಂಬ ಎಂಬ ಹೆಸರಲ್ಲಿ ಸ್ವಲ್ಪ ಬದಲಾವಣೆ ಮಾಡಿಕೊಂಡು ಕದಂಬ ಎಂದು ಕರೆದುಕೊಂಡರೆಂದೂ ಕದಂಬ ವೃಕ್ಷಕ್ಕೆ ಸಂಬಂಧಿಸಿದ ಕಥೆಗಳು ಅನಂತರ ಹುಟ್ಟಿಕೊಂಡವೆಂದೂ ಹೇಳುತ್ತಾರೆ. ತಮಿಳಿನಲ್ಲಿ 'ಕುರುಂಬ' ಮತ್ತು 'ಕದಂಬ' ಎಂಬ ಪದಗಳೆರಡೂ ಸಮಾನಾರ್ಥಗಳೆಂಬ ಬಹುಮುಖ್ಯವಾದ ಅಂಶದೆಡೆಗೆ ಅವರು ಗಮನ ಸೆಳೆಯುತ್ತಾರೆ. ಗ್ರಿಗೆ ಅವರು ತಮ್ಮ "Manual of the Nilagiri District" ಎಂಬ ಕೃತಿಯಲ್ಲಿ "May not this word (Kadamba) be a compound of Katu or Katam (both meaning forest) and Kurumba and perhapes the same as Kad-Kurumba?" ಎಂದು ಪ್ರಶ್ನಿಸುತ್ತಾರೆ. ವಿಜಯನಗರದ ಸಂಸ್ಥಾಪಕರು ಕುರುಬರೆಂದು ಇತಿಹಾಸಕರರು ಒಪ್ಪುವುದಾದರೆ ಕದಂಬರನ್ನು ಕುರುಬರೆಂದು ಒಪ್ಪಲೇಬೇಕಾಗುತ್ತದೆ" (ಎಚ್.ಜೆ. ಲಕ್ಕಪ್ಪ ಗೌಡ:೧೯೯೭:೮-೯). ಕಾರಣ ವಿಜಯನಗರದ ಮೂಲ ಪುರುಷರು ಕದಂಬರೆಂದು ಈಚೆಗೆ ತಿಳಿದು ಬಂದಿದೆ.

ವಿಜಯನಗರ ಸಾಮ್ರಾಜ್ಯ ಸ್ಥಾಪಕರು ಹಾಲುಮತ ಕುರುಬ ಸಮಾಜದವರೆಂದು ಅನೇಕ ವಿದ್ವಾಂಸರು, ಇತಿಹಾಸಕಾರರು ಹಾಗೂ ಸಂಶೋಧಕರು ಏಕಕಂಠದಲ್ಲಿ ಸಾರಿದ್ದಾರೆ. ಹರಿಹರ ಮತ್ತು ಬುಕ್ಕರು ವಿಜಯನಗರ ಸಾಮ್ರಾಜ್ಯ ಸ್ಥಾಪಕರೆಂಬುದು ಎಲ್ಲಾರಿಗೂ ಗೊತ್ತಿರುವ ಸಂಗತಿ. ಆದರೂ ಅವರು ಯಾವ ಸಮುದಾಯಕ್ಕೆ ಸೇರಿದವರು ಎಂಬುದು ಚರ್ಚೆಯ ವಿಷಯವಾಗಿದೆ. ಹರಿಹರ ಮತ್ತು ಬುಕ್ಕರು ಕುರುಬರು ಎಂಬುದಕ್ಕೆ ಹಲವಾರು ಆಧಾರಗಳಿವೆ. ಹೊರೇಸ್ ಎಚ್. ವಿಲ್ಸನ್ ಅವರು "ವಿಜಯನಗರದ ರಾಜರು ಕುರುಬ ಕುಟುಂಬದವರಾಗಿದ್ದರು" ಎಂದು ಹೇಳುತ್ತಾರೆ. ಹಕ್ಕ-ಬುಕ್ಕರು ಕುರುಂಬರೆಂದು ಕೆಳದಿ ನೃಪವಿಜಯದಲ್ಲಿ ಹೇಳಿದೆ. ವಿದ್ಯಾರಣ್ಯ ಕಾಲಜ್ಞಾನದಲ್ಲಿ ಅವರನ್ನು 'ಕುರುವಂಶ ಪ್ರಸೂತಿಜಾ' ಎಂದು ವರ್ಣಿಸಲಾಗಿದೆ. ಸಾಲೆಂ ಗೆಜಿಟಿಯರ್‌ನಲ್ಲಿ ರಾಜ ಕುಲ, ನಾಡ ಕುಲ, ಅರಸುಕುಲ, ಸಂಗಮ ಕುಲ, ಒಡೆಯರ ಕುಲ, ಸಾಮಂತ ಕುಲ ಎಂಬುದಾಗಿ ಕುರುಬರ ಒಳಪಂಗಡ ಗಳನ್ನು ಗುರುತಿಸಲಾಗಿದೆ. ಈಗಲೂ ಕುರುಬರಲ್ಲಿ ಈ ಒಳಪಂಗಡಗಳುಂಟೆಂಬುದನ್ನು ಮರೆಯುವಂತಿಲ್ಲ. ವಿಜಯನಗರದ ಪ್ರಸಿದ್ಧ ರಾಜರು ಸಂಗಮ ಕುಲದವರೆಂಬುದು ಅರ್ಥಪೂರ್ಣವಾಗಿದೆ.

ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ ಅವರು "The Sources of Vijayanagara" ಎಂಬ ಇತಿಹಾಸ ಗ್ರಂಥದಲ್ಲಿ ಮತ್ತು ತಿರುಮಲಾರ್ಯನು ಚಿಕ್ಕದೇವರಾಜ ವಂಶಾವಳಿಯಲ್ಲಿ ಹೀಗೆ ಬರೆದಿದ್ದಾರೆ. "ಅತ್ತಲುತ್ತರ ದೇಶದೊಳ್ ತುಂಗಭದ್ರಾ ತೀರದೋಳ್ ವಿದ್ಯಾನಗರಿಯನಾಳ್ದ ಹರಿಹರ ಬುಕ್ಕರ್ಮೊದಲಾದ ಕುರುಂಬರಾಯರ ಅನಂತರದೊಳ್ ಅರಸುಗೈಯ್ದು ತುಳುವ ಕುಲಾಧೀಶ್ವರ ನರಸವೀರ ನರಸಿಂಗ ಕೃಷ್ಣಚ್ಯುತರೆಂಬ ರಾಯರೈವರ ತರುವಾಯಂ...."(ಒಡೆಯರ್ ಡಿ. ಹೆಗ್ಗಡೆ:೭). ಈ ಪದ್ಯದಿಂದ ವಿಜಯ ನಗರ ಸಂಸ್ಥಾಪಕ ವಂಶವಾದ ಸಂಗಮ ಸಹೋದರರಾದ ಹರಿಹರ ಬುಕ್ಕರು ಕುರುಬರೆನ್ನುವುದು

ಸರ್ವವಿಧಿತವಾಗುತ್ತದೆ. ಹಾಗೆಯೇ ಬಳ್ಳಾರಿಯ ಪ್ರಸಿದ್ಧ ಪಾಳೆಯಗಾರ ಹಂಡೆ ಬಾಲದ ಹನುಮಪ್ಪ ನಾಯಕ ಕುರುಬರೆಂದು ತಿಳಿದುಬಂದಿದೆ. “The first of the palegars of the Bellary was apparently a Kuruba, named Balada Hanumanthappa Naik” ಎಂಬುದಾಗಿ ೧೯೭೨ರ ಬಳ್ಳಾರಿ ಜಿಲ್ಲಾ ಗೆಜಿಟಿಯರ್ ತಿಳಿಸುತ್ತದೆ. ಈ ವಂಶದವರು ಇಂದು ಕುರುಬರಿಗೆ ಗುರುಗಳಾಗಿದ್ದಾರೆ.

೨.೪ ಧಾರ್ಮಿಕ ಹಿನ್ನೆಲೆ

ಅಲೆಮಾರಿ ಕುರುಬರ ಧಾರ್ಮಿಕ ಆಚರಣೆಗಳನ್ನು ನೋಡಿದಾಗ ಶೈವ ಪಂಥದವರೆಂಬುದು ತಿಳಿದುಬರುತ್ತದೆ. ಈ ಸಮುದಾಯದ ಮೂಲಪುರುಷರಾದ ಮುದ್ಧಪ್ಪ-ಮುದ್ದವ್ವರು ಶಿವಪಾರ್ವತಿಯ ರಿಂದಲೇ ಜನನವಾಗಿರುವುದನ್ನು ಕುರುಬರ ಮೂಲವನ್ನು ನಿರೂಪಿಸುವ ಪುರಾಣಗಳು ತಿಳಿಸುತ್ತವೆ. ಹಾಗೆಯೇ ಅವರ ಆರಾಧ್ಯ ದೈವರುಗಳಾದ ರೇವಣ್ಣಸಿದ್ಧ, ಬೀರೇಶ್ವರ, ಮಾಳಿಂಗರಾಯ, ಅಮೋಘಸಿದ್ಧ, ಮೈಲಾರಲಿಂಗ ಮುಂತಾದವನ್ನು ಕುರಿತು ಬರೆಯಲ್ಪಟ್ಟ ಪುಸ್ತಕಗಳಿಂದ ಅಲೆಮಾರಿ ಕುರುಬರು ಶೈವ ಮತಾವಲಂಬಿಗಳು, ಶಿವಾರಾಧಕರು ಎಂಬುದು ಗೋಚರವಾಗುತ್ತದೆ. ಶಿವ ಅಥವಾ ಲಿಂಗದ ಮೇಲೆ ಇವರಿಗಿರುವ ಭಕ್ತಿಯನ್ನು ಗಮನಿಸಿದರೆ ಕುರಿಯ ಹಿಕ್ಕೆಯನ್ನೇ ಲಿಂಗವೆಂದು ಭಾವಿಸಿಕೊಂಡು ಪೂಜೆ ಗೈಯುವ ಮುಗ್ಧ ಜನರಿವರು. ಇವರು ದೇವಾಲಯ ನಿರ್ಮಾಣ ಮಾಡುವ ಪದ್ಧತಿ ಮತ್ತು ದೇವಾಲಯದಲ್ಲಿ ಮೂರ್ತಿ ಪ್ರತಿಷ್ಠಾಪನೆ ಇವು ಶೈವ ಧರ್ಮದ ಅನುಸಾರವಾಗಿರುವುದು ಕಾಣುತ್ತದೆ. ದೇವಾಲಯ ಸಂಪ್ರದಾಯವು ಶೈವ ಧರ್ಮಕ್ಕೆ ಸಂಬಂಧಿಸಿದ್ದು ಎಂಬುದು ವಿದ್ವಾಂಸರ ಅಭಿಮತವಾಗಿದೆ.

ಮೂಲತಃ ಶಿವರಾಧಕರಾಗಿದ್ದ ಅಲೆಮಾರಿ ಕುರುಬ ಜನಾಂಗದ ಮೆಲೆ ವೈಷ್ಣವ ಪಂಥದ ಪ್ರಭಾವವು ವಿಜಯನಗರದ ಪ್ರಖ್ಯಾತ ದೊರೆಯಾದ ಶ್ರೀಕೃಷ್ಣದೇವರಾಯನ ಕಾಲದಲ್ಲಿ ಆಗಿರುವುದು ಕಂಡಬರುತ್ತದೆ. ರಾಮಾನುಜಾಚಾರ್ಯರಂಥ ವೈಷ್ಣ ಆಚಾರ್ಯರು ಕರ್ನಾಟಕದಲ್ಲಿ ಬಹಳ ಕಾಲ ನೆಲೆಸಿದ್ದರಿಂದ ಅನೇಕರು ಅವರ ಪ್ರಭಾವಕ್ಕೆ ಒಳಗಾಗಿ ತಿರುಪತಿ ವೆಂಕಟೇಶ್ವರನನ್ನು ಪೂಜಿಸಲಾರಂಭಿಸಿದರು. ಹಾಗೆಯೇ ಕರ್ನಾಟಕದ ಶ್ರೇಷ್ಠ ದಾಸರೂ, ಕವಿಗಳಾಗಿ ಕೀರ್ತಿಯನ್ನು ಪಡೆದಿರುವ ಕನಕದಾಸರು ಈ ಸಮುದಾಯದಿಂದ ಬಂದವರು. ಕನಕದಾಸರು ವೈಷ್ಣವ ಧರ್ಮದ ಅನುಯಾಯಿ ಆಗಿ ಮೆರೆದಿರುವ ಪ್ರಭಾವದಿಂದ ಕೆಲವು ಕುಟುಂಬಗಳು ವೈಷ್ಣವ ಧರ್ಮದ ಅನುಯಾಯಿಗಳಾಗಿರುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಇಂಥ ವೈಷ್ಣವ ಧರ್ಮದ ಅನುಯಾಯಿಗಳನ್ನು ಕನಕಯ್ಯನ ಕುರುಬರೆಂದು ಕರೆಯುತ್ತಾರೆ. ಇವರು ಜಾತಿಯಿಂದ ಕುರುಬರಾಗಿಯೇ ಇದ್ದು ತಿರುಪತಿಯ ತಿಮ್ಮಪ್ಪನ ಅಥವಾ ಕಾಗಿನೆಲೆಯ ಆದಿಕೇಶವನನ್ನು ಆರಾಧಿಸುತ್ತಾರೆ. ಈ ಸಮುದಾಯದ ಭಕ್ತವರ್ಗವನ್ನು ದಾಸಯ್ಯಗಳೆಂದು ಕರೆಯುತ್ತಾರೆ. ಆದರೆ ಇಂತಹ ಕನಕಯ್ಯನ ಕುರುಬರ ಸಂಖ್ಯೆ ತುಂಬಾ ಕಡಿಮೆ ಪ್ರಮಾಣದಲ್ಲಿದೆ.

ಇದನ್ನು ಹೊರತುಪಡಿಸಿದರೆ ಅಲೆಮಾರಿ ಕುರುಬ ಸಮುದಾಯದ ದೈವಾಚರಣೆ, ಆರಾಧನ ವಿಧಾನ, ಧಾರ್ಮಿಕ ಮಹಾಪುರುಷರಾದ ಬೀರೇಶ್ವರ, ಮಾಳಿಂಗರಾಯ, ರೇವಣ್ಣಸಿದ್ಧೇಶ್ವರ, ಮುಂತಾದವರನ್ನು ಶಿವನ ಅವತಾರಿಗಳೆಂದು ಭಾವಿಸಿಕೊಂಡು ಪೂಜಿಸುತ್ತಾ ಬಂದಿರುವುದು ಇವರು ಶಿವಾರಾಧಕರೆಂದು ಗುರುತಿಸಲು ಸಾಧ್ಯಮಾಡಿದೆ.

೨.೫ ಪಂಗಡಗಳು

ಭಾರತೀಯ ಸಮಾಜದಲ್ಲಿ ಪ್ರತಿಯೊಂದು ಸಮುದಾಯವು ಒಟ್ಟಿಗೆ ಇದ್ದುಕೊಂಡು ಬೆಳೆದುಬಂದಿವೆ. ತಮ್ಮದೇ ಸಾಮಾಜಿಕ ಕಟ್ಟುಪಾಡುಗಳೊಂದಿಗೆ ಜೀವಿಸುತ್ತಿವೆ. ಮಾನವನ ದೈಹಿಕ ಮತ್ತು ಬೌದ್ಧಿಕ ವಿಕಾಶವಾಗುತ್ತ ನಡೆದಂತೆಲ್ಲಾ ತನ್ನ ಮನೋಭಾವನೆಗಳಿಗೆ ಅನುಗುಣವಾಗಿ ಬದುಕನ್ನು ರೂಪಿಸಿಕೊಂಡ ಹಾಗೂ ತನ್ನ ಮನೋಧರ್ಮಕ್ಕೆ ಒಪ್ಪುವ ಧರ್ಮವನ್ನು ಸ್ವೀಕರಿಸಿ ಒಂದು ಪ್ರತ್ಯೇಕವಾದ ಸಮುದಾಯ ವನ್ನು ನಿರೂಪಿಸಿಕೊಂಡಿದೆ. ಒಂದೇ ಸಮುದಾಯದಲ್ಲಿ ಆಚಾರ-ವಿಚಾರಗಳು ಭಿನ್ನವಾಗುತ್ತಲೇ ಆ ಸಮುದಾಯದಲ್ಲಿಯೇ ಪಂಗಡ ಹಾಗೂ ಉಪಪಂಗಡಗಳು ಉದ್ಭವಿಸಲು ಕಾರಣವಾಗಿವೆ. ಭಾರತದ ಸಂದರ್ಭದಲ್ಲಿ ಅದರಲ್ಲೂ ವಿಶೇಷವಾಗಿ ಹಿಂದೂ ಧರ್ಮೀಯರಲ್ಲಿ ಸಾಮಾಜಿಕ, ಧಾರ್ಮಿಕ ರೀತಿ-ರಿವಾಜುಗಳು ಹಾಗೂ ರಕ್ತ ಸಂಬಂಧದ ಆಧಾರದಲ್ಲಿ ಒಂದೇ ಸಮುದಾಯ ಅಥವಾ ಜಾತಿಯನ್ನು ವಿವಿಧ ಪಂಗಡ ಹಾಗೂ ಉಪ-ಪಂಗಡಗಳಾಗಿ ವಿಭಜಿಸಲಾಗಿದೆ. ಇದು ಒಂದು ಬಗೆಯ ಸಾಮಾಜಿಕ ವರ್ಗೀಕರಣವಾಗಿದ್ದು, ಜನತೆಯೇ ಪಾಲಿಸುವಂತದ್ದು ಆಗಿದೆ. ಈ ಮಾನದಂಡದ ಆಧಾರದಲ್ಲಿ ಅಲೆಮಾರಿ ಕುರುಬ ಸಮುದಾಯವನ್ನು ಮೂರು ಬಗೆಯಾಗಿ ವರ್ಗೀಕರಿಸಲಾಗುವುದು. ಅವೆಂದರೆ ಉಣ್ಣೆ ಕಂಕಣದವರು, ಹತ್ತಿಕಂಕಣದವರು ಹಾಗೂ ಹಂಡೆ(ಅಂಡೆ) ಕುರುಬರು.

೧೮೭೭ರ ಬಾಂಬೆ ಗ್ಯಾಜಿಟಿಯರ್‌ದಲ್ಲಿ ಕುರುಬ ಜನಾಂಗವನ್ನು ಈ ರೀತಿ ವಿಂಗಡಿಸಲಾಗಿದೆ. "There are two main division of Karubas, Hatti Kankana or cotton wristle weavers and Unnikanakanas or wool wristle weavers, who eat toghether but do not inter-marry. In Dharwad two more divisions are found jande and Uarasaliyava. The Hathi Kankanas are divided into Khailari Sanagar, Hatkar and Hande. Kurubas of these the first three eat together and inter marry"(R.E. Enthoven:319).

ಮೂಲತಃ ಮೂರೂ ಪಂಗಡಗಳು ಒಂದೇ ಆಗಿದ್ದು ಕಾಲಾಂತರದಲ್ಲಿ ಭಿನ್ನವೆಂದು ಗುರುತಿಸ ಲಾಗಿದೆ. ಹತ್ತಿಕಂಕಣ ಮತ್ತು ಉಣ್ಣೆಕಂಕಣ ಭಿನ್ನತೆಗೆ ಆದಿಗೊಂಡನ ಕಿರಿಯ ಮಗನಾದ ಪದ್ಮಗೊಂಡನು ಸ್ವಜಾತಿ ಹಾಗೂ ಅರಣ್ಣ ಸ್ತ್ರೀಯರಿಬ್ಬರನ್ನು ವಿವಾಹವಾಗಿರುವುದನ್ನು ಆಧಾರವಾಗಿಟ್ಟುಕೊಂಡು ಭಿನ್ನತೆ ಗುರುತಿಸಲಾಗಿದೆ. ರಾಕ್ಷಸ ಸ್ತ್ರೀಯೊಡನೆ ಮದುವೆ ಅಡವಿಯಲ್ಲಾದ್ದರಿಂದ ಅಡವಿಯಲ್ಲಿ ಹತ್ತಿ

ದೊರೆಯದ ಕಾರಣ ಕುರಿಯ ಉಣ್ಣೆ ಬಳಸಲಾಯಿತು. ಹಾಗಾಗಿ ಕುಲದ ಸ್ತ್ರೀಗೆ ಜನಿಸಿದ ಸಂತತಿಯವರನ್ನು ಹತ್ತಿಕಂಕಣ ಮತ್ತು ರಾಕ್ಷಸಿ ಸ್ತ್ರೀಗೆ ಜನಿಸಿದ ಸಂತತಿಯವರನ್ನು ಉಣ್ಣೆ ಕಂಕಣದವರೆಂದು ಕರೆಯಲಾಗಿದೆ. ಹಂಡೆಕುರುಬ ಅಥವಾ ಹಂಡೇವಜೀರರು ಇನ್ನೊಂದು ಪಂಗಡ. ಇವರು ಆಕಳು, ಎಮ್ಮೆ ಸಾಕಿಕೊಂಡು ಹಾಲು, ಮೊಸರು, ಹೈನು ಪದಾರ್ಥಗಳನ್ನು ಸಂಗ್ರಹಿಸಿ ಇಡಲು, ವ್ಯವಹಾರ ಮಾಡಲು ಪೊಳ್ಳಾದ ಬಿದರಿನ ಬೊಂಬಿನ ಹಂಡೆಗಳನ್ನು ಉಪಯೋಗಿಸುತ್ತಿದ್ದರು. ಆದ್ದರಿಂದ ಇವರಿಗೆ ಹಂಡೆಕುರುಬರೆಂದು ಹೆಸರು ಬಂದಿದೆ. ಇವರು ಮದುವೆಯಲ್ಲಿ ಹತ್ತಿಯ ನೂಲನ್ನೇ ಕಂಕಣಕ್ಕೆ ಬಳಸುತ್ತಾರಾದರೂ ಇದು ಪ್ರಮುಖವಾಗಿ ಪರಿಗಣಿತವಾಗಿಲ್ಲ. ಈ ರೀತಿ ಹತ್ತಿಕಂಕಣ, ಉಣ್ಣೆಕಂಕಣ ಹಾಗೂ ಹಂಡೆಕುರುಬರೆಂಬ ವರ್ಗೀಕರಣಕ್ಕೆ ಪ್ರಮುಖ ಆಕರ ಹಾಲುಮತದ ಪುರಾಣ, ತಗರ ಪವಾಡ ಮೊದಲಾದ ಪುರಾಣ ಕೃತಿಗಳು, ಗ್ರಂಥಗಳು, ಹಳೆಯ ಕಾಲದ ರಾಜ್ಯ ಗ್ಯಾಜಿಟಿಯರ್ ಗಳು, ಕಾವ್ಯ, ಶಾಸನಗಳು, ಸರ್ಕಾರಿ ಆಡಳಿತದ ದಾಖಲಾತಿಗಳು ಇತ್ಯಾದಿ. ರಾಜ್ಯದ ಗ್ಯಾಜಿಟಿಯರ್, ಕೈಫಿಯತ್ತುಗಳು ಮತ್ತು ಕುರುಬರ ಚರಿತ್ರೆಯ ಲೇಖಕರು ಮೂರು ಪಂಗಡಗಳನ್ನು ಸೂಚಿಸಿದರೆ ಹಾಲುಮತ ಪುರಾಣ, ಹಾಲುಮತ ಚರಿತ್ರೆಗಳು ಹತ್ತಿಕಂಕಣ ಮತ್ತು ಉಣ್ಣೆಕಂಕಣವೆಂದು ಮಾತ್ರ ಸೂಚಿಸುತ್ತದೆ.

ಕುರುಬರನ್ನು ಹತ್ತಿಕಂಕಣದವರು, ಉಣ್ಣೆಕಂಕಣದವರು, ಹಂಡೆ ಕುರುಬರೆಂದು ವರ್ಗೀಕರಿಸಲಾಗಿದ್ದು, ಇವರಲ್ಲಿ ಮೊದಲ ಕುರುಬರು ಹತ್ತಿಕಂಕಣದವರೇ ಅಥವಾ ಉಣ್ಣೆಕಂಕಣದವರೇ ಎಂಬ ಪ್ರಶ್ನೆ ಉದ್ಭವಿಸುವುದು ಸಾಮಾನ್ಯ. ಪುರಾಣ ಪುಸ್ತಕಗಳಲ್ಲಿ ಹತ್ತಿಕಂಕಣದ ಕುರುಬರೆ ಮೊದಲಿಗರೆಂದು ಹೇಳಲ್ಪಟ್ಟಿದೆ. ಕುಟುಂಬದ ಬದುಕಿನ ಚಿತ್ರಣದ ಆಧಾರದ ಅನುಭವದಿಂದ ಹತ್ತಿಕಂಕಣದ ಕುರುಬರೇ ಮೊದಲಿಗರೆಂದು ಹೇಳುವರು. ಆದರೆ ಇದೊಂದು ಕಲ್ಪಿತ ಕಥೆಯಾಗಿರುವುದೆಂದು ವಿದ್ವಾಂಸರು ತರ್ಕಿಸಿದ್ದಾರೆ. ಶಂಬಾ ಜೋಶಿಯವರ ಪ್ರಕಾರ "ಹತ್ತಿಗಿಂತ ಮೊದಲು ಉಣ್ಣೆಯೆಂಬುದು ಗೊತ್ತಿರುವ ಸಂಗತಿ. ಒಕ್ಕಲುತನವು ಗೊತ್ತಾದ ಬಳಿಕ, ಕಾಡು ಹತ್ತಿಯ ಗಿಡಗಳು ದೊರೆತ ನಂತರ ಅದು ಮನುಷ್ಯನಿಗೆ ತಿಳಿಯಿತು. ಅಲ್ಲಿಯವರೆಗೆ ಹಟ್ಟಿಕಾರ, ದನಾಗಾರನಾಗಿದ್ದಾಗ ಸುಲಭವಾಗಿ ಸಿಕ್ಕುವ ಉಣ್ಣೆಯಿಂದ ಬಟ್ಟೆಯನ್ನು ಮಾಡಿಕೊಳ್ಳುವ ಬಗೆಯನ್ನು ಮನುಷ್ಯನು ಮೊಟ್ಟಮೊದಲಿಗೆ ಕಲಿತಿರಬೇಕು" (ಶಂ.ಬಾ.ಜೋಶಿ:೧೯೬೬:೧೫). ಆದುದರಿಂದ ಮೊಟ್ಟ ಮೊದಲಿಗೆ ಉಣ್ಣೆಕಂಕಣದವರು, ನಂತರದವರು ಹತ್ತಿ ಕಂಕಣದವರು ಎಂಬುದು ಈ ವಿದ್ವಾಂಸರ ಅಭಿಪ್ರಾಯವಾಗಿದೆ.

"ಕುರುಬರು ಜೈನ, ಬೌದ್ಧಧರ್ಮಗಳನ್ನು ಅವಲಂಬಿಸಿ ಕದಂಬ ಪಲ್ಲವರೆಂಬ ಹೆಸರು ಪಡೆದ ಮೇಲೆ 'ಅಹಿಂಸಾ ಪರಮೋಧರ್ಮ' ಎಂಬ ತತ್ವವನ್ನು ಅನುಸರಿಸಿ ಉಣ್ಣೆಯ ಸಂಗ್ರಹದಿಂದ ಪ್ರಾಣಿ ಹಿಂಸೆಯಾಗಬಹುದೆಂಬ ಅಭಿಪ್ರಾಯದಿಂದ ಇವರು ಹತ್ತಿಯ ಕಂಕಣವನ್ನು ಕಟ್ಟಲಾರಂಭಿಸಿದರು. ಬೌದ್ಧ, ಜೈನ ಧರ್ಮಗಳಲ್ಲಿ ಈ ಪದ್ಧತಿ ಈಗ ರೂಢಿಯಲ್ಲಿರುವುದು. ಉಳಿದವರು ಹತ್ತಿಯ ಕಂಕಣ

ಕಟ್ಟುತ್ತಾ ಬಂದರು. ಇದರಿಂದ ಹತ್ತಿಯ ಕಂಕಣದವರು ಮತ್ತು ಉಣ್ಣೆಯ ಕಂಕಣದವರು ಎಂಬ ಎರಡು ಭಾಗಗಳಾಗಿವೆಂದು ಹೇಳುವುದು ತುಂಬಾ ಸಮಂಜಸವಾಗಿದೆ''(ಹನುಮಂತಯ್ಯ ವಿ.ಆರ್: ೧೯೯೬:೧೫). ಭಾರತದಲ್ಲಿ ಕಾಲ ಕಾಲಕ್ಕೆ ಹಲವಾರು ಧರ್ಮಗಳು ಉದಯಿಸಿವೆ. ಧರ್ಮಗಳ ಸ್ಥಾಪಕರಾದ ಪುಣ್ಯಪುರುಷರು, ಮಹಾತ್ಮರು, ಜನಾಂಗದ ಮೇಲೆ ತಮ್ಮದೆ ಆದ ಪ್ರಭಾವ ಬೀರಿದ್ದಾರೆ. ಹೀಗಾಗಿ ಕುರುಬ ಸಮುದಾಯವರ ಮೇಲೆ ಕಾಲ ಕಾಲಕ್ಕೆ ಬದಲಾಯಿಸಿದ ಧರ್ಮಗಳ ಪ್ರಭಾವ, ಪ್ರೇರಣೆಯಿಂದ ಕಾಲಾಂತದಲ್ಲಿ ಸಾಂಸ್ಕೃತಿಕವಾಗಿ ಬದಲಾವಣೆಗಳಾಗಿವೆ.

ಕುರುಬ ಸಮುದಾಯದಲ್ಲಿ ಹತ್ತಿಕಂಕಣ, ಉಣ್ಣೆಕಂಕಣ ಮತ್ತು ಹಂಡೆಕುರುಬರ ಜೊತೆಗೆ ಒಡೆಯರು, ಬೆಟ್ಟ ಕುರುಬರು, ಜೇನು ಕುರುಬರು, ಒಕ್ಕೈ ಕುರುಬರು ಮೊದಲಾದ ಉಪಪಂಗಡಗಳಿವೆ. ಒಡೆಯರು ಕುರುಬರ ಪುರೋಹಿತ ವರ್ಗವಾಗಿದ್ದು ಧಾರ್ಮಿಕ ಹಾಗೂ ಮದುವೆ ಸಂದರ್ಭಗಲ್ಲಿ ಗುರುಗಳಾಗಿ ಕಾರ್ಯನಿರ್ವಹಿಸುತ್ತಾರೆ. ಬೆಟ್ಟ ಕುರುಬರು ಕಾಡಿನಲ್ಲಿ ದೊರೆಯುವ ಉತ್ಪನ್ನಗಳನ್ನು ಸಂಗ್ರಹಿಸುವರು. ಪ್ರಾಣಿಗಳನ್ನು ಬೇಟೆಯಾಡುವುದರ ಜೊತೆಗೆ ಅಂದಂದಿಗೆ ಅಗತ್ಯವಾದ ಆಹಾರವನ್ನು ಸಂಗ್ರಹಿಸಿ ಉಪಜೀವನ ನಡೆಸುತ್ತಾರೆ. ಇವರು ಮೈಸೂರು ಜಿಲ್ಲೆ ಮತ್ತು ಕೊಡಗು ಜಿಲ್ಲೆಯ ದಟ್ಟವಾದ ಅರಣ್ಯ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಹೆಸರೇ ಸೂಚಿಸುವಂತೆ ಜೇನು ಸಂಗ್ರಹಣೆಯೇ ಜೇನು ಕುರುಬರ ಕಸುಬು ಆಗಿದೆ. ಅರಣ್ಯದಲ್ಲಿ ದೊರೆಯುವ ಜೇನನ್ನು ಸರ್ಕಾರದ ಅರಣ್ಯ ಇಲಾಖೆಯ ಜೇನು ಸಂಗ್ರಹಕಾರರಿಗೆ ಅಥವಾ ಖಾಸಗಿ ಜನರಿಗೆ ಮಾರಾಟ ಮಾಡಿ ಜೀವನ ನಡೆಸುತ್ತಾರೆ. ಇವರು ಮೈಸೂರು ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಬಂಡೀಪುರ, ಹುಣಸೂರು, ಪಿರಿಯಾಪಟ್ಟಣ, ನಾಗರಹೊಳೆ, ಹೆಗ್ಗಡೆದೇವನಕೋಟೆ ಅರಣ್ಯಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬರುತ್ತಾರೆ. ಕೊಳ್ಳೆಗಾಲದ ಕಡೆ ಎಡಗೈಗೆ ಮಾತ್ರ ಬಳೆ ಧರಿಸುವ ಒಂದು ಪಂಗಡವಿದ್ದು. ಅವರಿಗೆ ಒಕ್ಕೈ ಕುರುಬರು ಎಂದು ಕರೆಯಲಾಗುತ್ತದೆ.

ಆಧಾರ ಗ್ರಂಥಗಳು

೧. ಲಕ್ಕಪ್ಪಗೌಡ ಎಚ್.ಜಿ. (ಸಂ) ಪ್ರೊ. ಚನ್ನಪ್ಪಕಟ್ಟಿ ಮತ್ತು ಪ್ರೊ. ಆರ್.ಎಸ್.ವಾಡೇದ., ***ಕುರುಬರ ಜನಪದ***, ಪ್ರಕಾಶಕರು ಕನಕ ಜಯಂತ್ಯೋತ್ಸವ, ಸಿಂದಗಿ, ೧೯೯೭

೨. ಶಿವಾನಂದ ಗುಬ್ಬಣ್ಣವರ., ***ಕರ್ನಾಟಕದ ಕುರುಬರು***, ಅಕ್ಷಯ ಪ್ರಕಾಶನ, ಧಾರವಾಡ, ೧೯೯೩

೩. ಬ.ಪ. ನಾಯ್ಕರ್., ***ಹಾಲುಮತಸ್ಥರು***, ವಿಧ್ಯಾನಿಧಿ ಪ್ರಕಾಶನ, ಗದಗ, ೨೦೦೩

೪. ಹನುಮಂತಯ್ಯ ವಿ.ಆರ್., (ಸಂ) ಪ್ರೊ. ಸುಧಾಕರ, ***ಕುರುಬರ ಚರಿತ್ರೆ***, ಪ್ರತಿಭಾ ಪ್ರಕಾಶನ, ಮೈಸೂರು, ೧೯೯೬

೫. ಬೋನಾ ಬಸವರಾಜ., ***ಹಾಲುಮತದ ಹುಟ್ಟು***, ಲೇಖಕರ ಎದೆಯಾಳದಿಂದ

೬. ಮೈತ್ರಿ ಕೆ.ಎಂ., ***ಬುಡಕಟ್ಟು ಕುಲ ಕಸುಬುಗಳು***, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

೭. ಲಲಿತಾ ಎ.ಸಿ., ***ಕಾಡುಕುರುಬರು ಮತ್ತು ಜೇನು ಕುರುಬರು***, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩

೮. ಶಂ.ಬಾ.ಜೋಶಿ., ***ಕರ್ನಾಟಕ ವೀರಕ್ಷತ್ರಿಯರು***, ಮನೋಹರ ಪಾಣೇಕರ ಪ್ರಕಾಶಕರು, ಸಮಾಜ ಬುಕ್ ಡಿಪೋ, ಧಾರವಾಡ

೯. ಯಲ್ಲನಗೌಡ ಫ. ಅತ್ತಿಕೊಳ್ಳ., ***ಹಾಲುಮತದ ಚರಿತ್ರೆ***, ಚಂದ್ರೋದಯ ಮುದ್ರಣಾಲಯ, ಧಾರವಾಡ, ೧೯೪೯

೧೦. ಚಂದ್ರಕಾಂತ ಬಿಜ್ಜರಗಿ., ***ಕುರುಬರ ಹೆಜ್ಜೆಗಳು***, ಶೈಲೇಂದ್ರ ಪ್ರಕಾಶನ, ಬಿಜಾಪುರ, ೨೦೦೬

೧೧. ಮಾದೇಗೌಡ., ***ಭಾರತೀಯರ ಕುರುಬರ ಸಾಮಾಜಿಕ ಮತ್ತು ರಾಜಕೀಯ ಹಿನ್ನೆಲೆ***,

೧೨. ಒಡೆಯರ್ ಡಿ. ಹೆಗ್ಗಡೆ., ***ಹಕ್ಕ-ಬುಕ್ಕರು***, ತನುಮನ ಪ್ರಕಾಶನ, ಮೈಸೂರು

೧೩. ಗುಂಡಕರ್ಜಗಿ ವೈ.ಕೆ., *ಹಂಡೆ ಕುರುಬರು : ಒಂದು ಅಧ್ಯಯನ*, ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೦೨

14. Enthovan R.E., ***Tribes and Castes of Bombay***, Vol. II, 1922

15. Brown C.I., ***The Coins of India***,

16. Gustav oppert., ***The Original inhabitants of India***, Asain Education society, New Delhi, 1988

17. Madras Censes Report, 1891

ಅಧ್ಯಾಯ ೩

ಕುರಿ-ಮೇಕೆಗಳ ಹುಟ್ಟು ಮತ್ತು ಬೆಳವಣಿಗೆ

ಕುರಿ-ಮೇಕೆಗಳ ಹುಟ್ಟು ಮತ್ತು ಬೆಳವಣಿಗೆ

ಶಿಲಾಯುಗದಲ್ಲಿ ಮನುಷ್ಯ ಪ್ರಾಣಿಗಳನ್ನು ಬೇಟೆಯಾಡಿ ಜೀವನ ಸಾಗಿಸುತ್ತಿದ್ದ. ಕಾಲಕ್ರಮೇಣ ತನ್ನ ಸಂತತಿ ಬೆಳೆದಂತೆಲ್ಲ ಪ್ರಾಣಿಗಳನ್ನು ಬೇಟೆಯಾಡಿ ಆಹಾರ ಸಂಗ್ರಹಿಸುವುದು ಅವನಿಗೆ ಕಷ್ಟವಾಯಿತು. ಈ ಸಮಸ್ಯೆಯು ಮಾನವನನ್ನು ನೆಲೆ ನಿಲ್ಲುವಂತೆ ಮಾಡಿ ಪ್ರಾಣಿಗಳನ್ನು ಸಾಕಲು, ನಂತರ ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಲು ಅನುವು ಮಾಡಿಕೊಟ್ಟಿತು. ಕೃಷಿ ಚಟುವಟಿಕೆ ಕೈಗೊಳ್ಳುವುದಕ್ಕಿಂತ ಮುಂಚೆ ತನ್ನ ದಿನನಿತ್ಯದ ಆಹಾರ ಪಡೆಯಲು ಮತ್ತು ದೇಹ ಮುಚ್ಚಿಕೊಳ್ಳಲು ಸಾಧು ಹಾಗೂ ಸರಳ ಸ್ವಾಭಾವದ ಕುರಿ-ಮೇಕೆಗಳನ್ನು ಪಳಗಿಸಿ ಸಾಕಲು ಆರಂಭಿಸಿದ. ಈ ಪಳಗಿಸುವ ಕ್ರಿಯೆಯು ಎಲ್ಲಿಂದ, ಯಾವ ಕಾಲದಿಂದ ಆರಂಭವಾಯಿತು ಎಂಬ ಬಗ್ಗೆ ಸ್ಪಷ್ಟತೆಯಿಲ್ಲ. ಕುರಿಗಳನ್ನು ಪಶ್ಚಿಮ ಏಶಿಯಾದಲ್ಲಿ ಮೊದಲು ಪಳಗಿಸಲಾಯಿತೆಂದು ದೊರೆತ ಮಾಹಿತಿಯಂತೆ ತಿಳಿದುಬರುತ್ತದೆ. ಇಂದು ಈ ಪ್ರದೇಶವನ್ನು ಇರಾಕ್, ಇರಾನ್, ಇಸ್ರೇಲ್, ಜೊರ್ಡಾನ್, ಲೆಬನಾನ್, ಸಿರಿಯಾ ಮತ್ತು ಟರ್ಕಿ ರಾಷ್ಟ್ರಗಳು ವಶಪಡಿಸಿಕೊಂಡಿವೆ.

೩.೧ ಮೂಲ : ಸಾಕಣೆ ಇತಿಹಾಸ : ಹರಡುವಿಕೆ

i) ಮೂಲ (Origin) : ಮೇಕೆ, ಆಕಳು (Bovine) ಕುಟುಂಬಕ್ಕೆ ಸೇರಿದ್ದಾಗಿದ್ದು ತಲೆಯ ಮೇಲೆ ಟೊಳ್ಳಾದ ಕೊಂಬುಗಳನ್ನುಳ್ಳ ಕಾರ್ಪ (Carpa) ವರ್ಗಕ್ಕೆ ಸೇರಿದ ಮೆಲಕು ಹಾಕುವ ಸಸ್ಯ ಪ್ರಾಣಿ (ಕಾರ್ಪ ವರ್ಗವೆಂದರೆ ಭಿನ್ನವಾಗಿ ಕಾಣುವ ೭ ಕಾಡು ಪ್ರಾಣಿಗಳನ್ನು ೪೦ ವರ್ಗಗಳನ್ನಾಗಿ ಮಾಡಲಾಗಿದೆ. ಅದರಲ್ಲಿ Carpa ಎನ್ನುವುದೊಂದು ವರ್ಗ). ಪಳಗಿಸಿದ ಮೇಕೆಯ ಸಂತತಿ ಯುರೋಪಿನ ಕ್ರೇಟನ್ (Cretan) ಮತ್ತು ಸೈಕ್ಲೇಡ್ಸ್ (Cyclades) ಕುಲದಿಂದ ಬಂದಿದೆ. ಬಹುಮಟ್ಟಿಗೆ ಪಶ್ಚಿಮ ಏಶಿಯಾ ಮೇಕೆಯ ಮೂಲಸ್ಥಳವಾಗಿದ್ದು, 'ಪರ್ಶಿಯನ್' ಕುಲವೆಂದು ದಾಖಲಾಗಿದೆ.

ಆಕಳು ಕುಟುಂಬಕ್ಕೆ ಮೇಕೆ ಸೇರಿದ್ದರೆ, ಮೇಕೆಯ ಉಪಕುಟುಂಬಕ್ಕೆ ಕುರಿ ಬರುತ್ತದೆ. ಕೊಂಬಿರುವ ಮತ್ತು ಕೊಂಬಿಲ್ಲದಿರುವ ಕಾಲುಬೆರಳುಗಳಿರುವ ಮೆಲಕು ಹಾಕುವ ಪ್ರಾಣಿಯದು. ಈ ರೀತಿಯ ಗುಣಲಕ್ಷಣವನ್ನು ಎಲ್ಲಾ ತಳಿ (ಜಾತಿ) ಕುರಿಗಳಲ್ಲಿ ಕಾಣುತ್ತೇವೆ. ಇವು ಮೂಲತಃ ಎತ್ತರ ಮತ್ತು ಬೆಟ್ಟ-ಗುಡ್ಡಗಳ ಪ್ರದೇಶಗಳಲ್ಲಿ ಪ್ರತ್ಯೇಕ ಗುಂಪುಗಳಾಗಿ ಅಸಂಖ್ಯಾ ಪ್ರಮಾಣದಲ್ಲಿ ಜಾತಿ, ಉಪಜಾತಿ, ಮತ್ತು ಸ್ಥಳೀಯ ಸಂತತಿಗಳಾಗಿ ಅಭಿವೃದ್ಧಿ ಹೊಂದಿವೆ. ಪ್ರಾಣಿಶಾಸ್ತ್ರದ ವರ್ಗೀಕರಣದಲ್ಲಿ ಕುರಿ-ಮೇಕೆಗಳ ವಂಶಪರಂಪರೆ ಕಲ್ಪನೆಗೆ ಸಂಬಂಧಿಸಿದಂತೆ ಇತರೆ ಪಳಗಿಸಿದ ಪ್ರಾಣಿಗಳಿಗಿಂತ ಬಹಳಷ್ಟು ಭಿನ್ನ ವಾದಗಳಿವೆ. ಭಿನ್ನವಾಗಿ ಕಾಣುವ ೭ ಕಾಡು ಪ್ರಾಣಿಗಳನ್ನು ೪೦ ಬೇರೆ ಬೇರೆ ವರ್ಗಗಳನ್ನಾಗಿ ಗುರುತಿಸಲಾಗಿದೆ. ಕಾಡು ಮತ್ತು ಬೆಟ್ಟ-ಗುಡ್ಡಗಳಲ್ಲಿ ವಾಸಿಸುವ ಎಲ್ಲಾ ಪ್ರಾಣಿಗಳಲ್ಲಿ ಪ್ರಾಮುಖ್ಯತೆ ನೀಡಿ ಪಳಗಿಸಿದ ಮೊದಲ ಪ್ರಾಣಿ ಕುರಿ ಆಗಿದೆ. ಮೊದಲ ಮೂರು ಕುರಿ ತಳಿಗಳೆಂದರೆ ೧. ಮಧ್ಯ ಏಷ್ಯಾದ Argali (Ovis mamman) ೨. ಏಷ್ಯಾದ ಮತ್ತೊಂದು ತಳಿ Urial (Ovis Vignei) ಮತ್ತು ೩. ಯುರೋಪಿನ Moufflon (Ovis musimon) ತಳಿಗಳು.

ii) ಸಾಕಣೆ ಇತಿಹಾಸ (History of Domestication) : ಪಶ್ಚಿಮ ಏಷ್ಯಾದ "ಆರ್ಲೋ-ಕಾಸ್ಪಿಯನ್ ಸ್ಟೆಪೇ" (Arolo-Caspion steppe) ಪ್ರಾಣಿಗಳನ್ನು ಪಳಗಿಸಿದ ಮೂಲಸ್ಥಳವಾಗಿದೆ. ಈ ಪ್ರದೇಶ ಇಂದು ಇರಾನ್ ಮತ್ತು ಇರಾಕ್ ರಾಷ್ಟ್ರಗಳ ವ್ಯಾಪ್ತಿಯಲ್ಲಿದೆ. ಉತ್ತರ ಇರಾಖ್‌ದ Zawi-chemi Shanidar ಸ್ಥಳದಲ್ಲಿ ೧೦,೫೦೦ ವರ್ಷಗಳ ಹಿಂದೆ ಕುರಿ-ಮೇಕೆಗಳನ್ನು ಸರಿಯಾದ ಮಾರ್ಗದಲ್ಲಿ ಪಳಗಿಸಲಾಯಿತೆಂದು ತಿಳಿದು ಬಂದಿರುತ್ತದೆ. ಈಗಲೂ ಅಮೇರಿಕದಲ್ಲಿ ಚಾಲ್ತಿಯಲ್ಲಿರುವ ದೊಡ್ಡ ಕೊಂಬಿನ (Ovis canadensis) ಕುರಿ ತಳಿಯನ್ನು ಪಳಗಿಸಲಾಗಿಲ್ಲ ಹಾಗೂ ಇದು ಆಧುನಿಕ ವಂಶಾವಳಿಗೆ ಯಾವುದೇ ಕೊಡುಗೆ ನೀಡಿಲ್ಲವೆಂದು ತಿಳಿದುಬಂದಿದೆ. ಆದರೆ ಕ್ರಿ.ಶ. ೧೪೯೩ರಲ್ಲಿ ಕೊಲಂಬಸ್‌ನು ೩ನೇ ಜಲ ಪರ್ಯಾಟನೆ ಕೈಗೊಂಡನಂತರ ಕುರಿ-ಮೇಕೆಗಳನ್ನು ಪಳಗಿಸಿದ ಇತಿಹಾಸ ಅಮೇರಿಕಾದ ದಿನಚರಿಯಲ್ಲಿ ವಾಸ್ತವವಾಗಿ ದಾಖಲಾಗಿದೆ. ಯುರೋಪಿನಲ್ಲಿ ನೆಲೆನಿಂತ ನಂತರವೇ ಆಸ್ಟ್ರೇಲಿಯಾದಲ್ಲಿ ನಿಜವಾದ ಸಸ್ತನಿ(ಕುರಿ-ಮೇಕೆ Mammalas)ಗಳನ್ನು ಪಳಗಿಸಲಾಯಿತು. ಕಾಡು ಜಾತಿಯ ಕುರಿ-ಮೇಕೆಗಳು ಆಫ್ರಿಕಾದಲ್ಲಿ ಯಾವ ಕಡೆಯೂ ನೆಲೆಸಿರುವುದು ಕಂಡುಬರುವುದಿಲ್ಲ. ಉತ್ತರ ಏಶ್ಯಿಯಾದ 'ಕಾಡು ಕುರಿ'(Ammotragus lervia) ಎಂದು ಕರೆಸಿಕೊಳ್ಳುವ ಕುರಿತಳಿ ದಕ್ಷಿಣ ಸೂಡಾನ್‌ದಲ್ಲಿರುವುದಾದರೂ ಅವು ನಿಜವಾದ ಕುರಿ ಅಥವಾ ಆಡುಗಳಲ್ಲ. ಈ ತಳಿಯ ಕುರಿಗಳಿಗೆ ಉದ್ದವಾದ ಕೂದಲುಗಳಿದ್ದು, ಗಡ್ಡ ಇರುವುದಿಲ್ಲ. ಇವುಗಳ ನಡುವೆ ಮುಖ ಲಕ್ಷಣ ಮತ್ತು ಕಾಲುಭಾಗದ ಲಕ್ಷಣಗಳು ಹೋಲಿಕೆಯಾಗುವುದಿಲ್ಲವೆಂದು ಹೇಳಲಾಗಿದೆ. ಹಾಗಾಗಿ ದಕ್ಷಿಣ ಸೂಡಾನ್ ಕುರಿಗಳು ಉತ್ತರ ಏಶಿಯಾ ಕಾಡು ಕುರಿ ತರಹದ ಕಾಡು ಆಡು ಎಂದು ಗುರುತಿಸಲಾಗಿದೆ.

ಏಶಿಯಾ ಮೂಲದ ಕುರಿ-ಮೇಕೆಗಳು ಪಶ್ಚಿಮದವರೆಗೆ ಮತ್ತು ಭಾರತದ ಉಪಖಂಡವನ್ನು

ದಾಟಿ ಯುರೋಪ್ ಮತ್ತು ಆಫ್ರಿಕಾವನ್ನೊಳಗೊಂಡು ವಿಸ್ತರಿಸಿವೆ. ಇತ್ತೀಚಿನ ದಿನಗಳಲ್ಲಿ ಏಶಿಯಾ ಮೂಲದ ಕುರಿಗಳನ್ನು ಅಮೇರಿಕಾ ಮತ್ತು ಒಸೇನಿಯಾ ರಾಷ್ಟ್ರಗಳಿಗೆ ಪರಿಚಯಿಸಲಾಗಿದೆ ಎಂದು ಕುರಿಗಳ ಇತಿಹಾಸದ ಮೂಲಕ ತಿಳಿದುಬರುತ್ತದೆ.

ಕುರಿ-ಮೇಕೆಗಳನ್ನು ಪ್ರಮುಖವಾಗಿ ಜೀವನಧಾರಕ್ಕಾಗಿ ಬಳಸಲಾಗುತ್ತಿತ್ತು ಎಂದು ಪ್ರಾಚ್ಯವಸ್ತು ಸಂಶೋಧನೆಯು ತಿಳಿಸುತ್ತದೆ. ಮೇಕೆಗಳನ್ನು ಮಾಂಸಕ್ಕಾಗಿ ಬಳಸಲಾಗುತ್ತಿತ್ತು ಎಂದು ಟೆಂಕೋ ಮತ್ತು ತಸ್ಮ ನಾಗರಿಕತೆಗಳ ಸ್ಮಾರಕ ವಸ್ತುಗಳಿಂದ ತಿಳಿದುಬರುತ್ತದೆ. ಮೇಕೆಯ ಎಲುಬಿನ ಅವಶೇಷಗಳಿಂದ ಮೇಕೆಯ ಜೀವಂತಿಕೆಯನ್ನು ಗುರುತಿಸಲಾಗಿದೆಯಾದರೂ ಇದು ಕಾಡು ಪ್ರಾಣಿಯೋ ಪಳಗಿಸಿದ ಪ್ರಾಣಿಯೋ ಎಂಬುವುದನ್ನು ನಿರ್ದಿಷ್ಟವಾಗಿ ಗುರುತಿಸಲಾಗಿಲ್ಲ. ೨೦,೦೦೦ ವರ್ಷಗಳ ಹಿಂದಿನ ಗುಹೆ ಕಲೆಗಳಲ್ಲಿ ಬಹಳಷ್ಟು ವಿವಿಧ ಪ್ರಾಣಿಗಳನ್ನು ಕೆತ್ತಲಾಗಿದೆ. ಅವುಗಳಲ್ಲಿ ಕುರಿ-ಮೇಕೆ ಗಳು ಪ್ರಮುಖವಾದವು. ಪದೇ ಪದೆ ಅಲಂಕಾರಿಕ ಮತ್ತು ಭೂಷಣ ವಸ್ತುಗಳನ್ನಾಗಿ ಮಾಡಿರುವುದು, ಗುಹೆ ಕಲೆಗಳಲ್ಲಿ ಕುರಿ-ಮೇಕೆಗಳನ್ನು ಬಳಸಿರುವುದು ಏನನ್ನು ಸೂಚಿಸುತ್ತದೆ. ಮಾನವನ ದೀರ್ಘಾವಧಿ ಜೀವನದಲ್ಲಿ ಕುರಿ-ಮೇಕೆಗಳಿರುವ ಸ್ಥಾನ ಮೌಲ್ಯವನ್ನು ತಿಳಿಸುತ್ತದೆ ಅಲ್ಲವೇ?.

iii) ಹರಡುವಿಕೆ (Dispersion) : ಪ್ರಾಣಿಗಳ ಪಳಗಿಸುವಿಕೆ ಮೂರು ಹಳೆಯ ನಾಗರಿಕತೆಗಳಿಗೆ ಸಂಬಂಧಿಸಿದೆ ಎಂದು ತಿಳಿಯುತ್ತದೆ. ಅವನ್ನು ಈಶಾನ್ಯ ಆಫ್ರಿಕಾದ ನೈಲ್ ನಾಗರಿಕತೆ, ಪಶ್ಚಿಮ ಏಷ್ಯಾದ 'ಟೈಗ್ರಿಸ್ ಯುಫಾರೆಟ್ಸ್' ನಾಗರಿಕತೆ (Tigris Euphrates) ಭಾರತ ಉಪಖಂಡದ ಸಿಂಧು (Indus) ನಾಗರಿಕತೆಗಳು ಎಂದು ಹೇಳಬಹುದು. ಮತ್ತೊಂದು ಆಧಾರದ (Evidence) ಪ್ರಕಾರ ಆಗ್ನೇಯ ಏಶಿಯಾದಲ್ಲಿ ಪಳಗಿಸುವಿಕೆ ಪ್ರಾರಂಭಿಕ ಹಂತದಲ್ಲಿಯೇ ಜಾರಿಯಲ್ಲಿತ್ತು ಎಂದು ತಿಳಿದುಬರುತ್ತದೆ. ಈ ಸ್ಥಳಗಳಲ್ಲಿ ಪಳಗಿಸಿದ ಜನ ಸಮುದಾಯಗಳು ಪ್ರಾಣಿಗಳನ್ನು ಇತಿಹಾಸದ ಪೂರ್ವಕಾಲದಲ್ಲಿ ಕುರಿ-ಮೇಕೆ ಮತ್ತು ಇತರ ಪ್ರಾಣಿಗಳ ಜೊತೆ ಪ್ರಪಂಚದ ಹಲವಾರು ಭಾಗಗಳಿಗೆ ವಲಸೆ ಹೋದವು. ಜಾನುವಾರುಗಳು ಅಥವಾ ಕುರಿ-ಮೇಕೆಗಳು ಅಲೆದಾಡಿದ ದಾರಿಗಳು ಈ ಎಲ್ಲಾ ವಲಸೆಗಳಿಗೆ ವಲಸೆ ಮಾರ್ಗಗಳಾಗಿ ಬಳಸಿಕೊಂಡಿರುವುದು ಬಹುಮಟ್ಟಿಗೆ ಕಂಡುಬರುತ್ತದೆ. ಇದು ಕುರಿ-ಮೇಕೆಗಳನ್ನು ಪಳಗಿಸಿದ ಕಾಲ ಮತ್ತು ವಲಸೆಗಳು ಬೆಳೆದಿರುವ ದೂರವನ್ನು ಹೇಳುತ್ತದೆ.

ಪಶ್ಚಿಮ ಏಷ್ಯಾದ ಮೂಲ ಸ್ಥಳದಿಂದ ಕುರಿ-ಮೇಕೆಗಳು ಕ್ರಿ.ಪೂ. ೨೦೦೦ ವರ್ಷಗಳಿಗಿಂತ ಪೂರ್ವದಲ್ಲಿ ಎರಡು ಪ್ರಮುಖ ಮಾರ್ಗಗಳ ಮೂಲಕ ಜಗತ್ತಿನೆಲ್ಲೆಡೆ ಚದುರಿದವು.

೧. ಪರ್ಶಿಯಾ ಮತ್ತು ಅಫಘಾನಿಸ್ತಾನದಿಂದ ಮಂಗೋಲಿಯಾ ಮತ್ತು ಉತ್ತರ ಚೈನಗಳಿಗೆ ತುರ್ಕಿಸ್ತಾನದ ಮಾರ್ಗ ಹಿಡಿದು ರೇಷ್ಮೆ ರಸ್ತೆ (Silk Road) ಮೂಲಕ ವಲಸೆ ಹೋಗಲಾಯಿತು.

೨. ಇಂಡೋ-ಆರ್ಯನ್ ಜನರ ಸಮುದಾಯಗಳು ಭಾರತದ ಉಪಖಂಡಕ್ಕೆ ಖೈಬರ್ ಪಾಸ್ (Kyber-Pass) ಮಾರ್ಗ ಹಿಡಿದು ವಲಸೆ ಹೋದವು.

ಈ ಪ್ರಕಾರವಾಗಿ ಅಲೆಮಾರಿ ಪಶುಪಾಲಕರು ತಮ್ಮ ಪಳಗಿಸಿದ ಕುರಿ-ಮೇಕೆಗಳೊಂದಿಗೆ ಪಶ್ಚಿಮ ಏಷ್ಯಾ ಮತ್ತು ಮಧ್ಯ ಏಷ್ಯಾದಿಂದ ಮಂಗೋಲಿಯಾ, ಚೈನಾ ಮತ್ತು ಭಾರತ ದೇಶಗಳಿಗೆ ಮೇಲಿನ ಎರಡು ಮಾರ್ಗಗಳ ಮೂಲಕ ವಲಸೆ ಹೋಗಿರಬಹುದು ಎಂದು ಹೇಳಲಾಗಿದೆ.

೩.೨ ಮೇಕೆ ಮತ್ತು ಕುರಿಗಳಲ್ಲಿಯ ವ್ಯತ್ಯಾಸ

ಮೇಕೆ ಟೊಳ್ಳಾದ ಕೊಂಬುಗಳುಳ್ಳ ಸಸ್ತನಿ ವರ್ಗಕ್ಕೆ ಸೇರಿದ ಮೆಲಕು ಹಾಕುವ ಪ್ರಾಣಿಯಾಗಿದ್ದು, ಆಕಳು ಕುಟುಂಬದ ಕಾರ್ಪ್ ಅಥವಾ ಹೆಮಿಟ್ರಗಸ್ ಗುಂಪಿಗೆ ಸೇರಿದೆ. ಆಕಳು ಕುಟುಂಬಕ್ಕೆ ಸೇರಿದ ಮೇಕೆಯ ಉಪಕುಟುಂಬದಲ್ಲಿ ಕುರಿ ಕಂಡುಬರುತ್ತದೆ ಎಂದು ಈಗಾಗಲೇ ಪ್ರಸ್ತಾಪಿಸಲಾಗಿದೆ. ಕುರಿ ಮತ್ತು ಮೇಕೆಗಳಲ್ಲಿ ವ್ಯತ್ಯಾಸ ಸ್ಪಷ್ಟವಾಗಿದ್ದು, ಎರಡರಲ್ಲೂ ಬಾಹ್ಯ ಚಹರೆ ಹಾಗೂ ದೇಹ ರಚನೆ ಭಿನ್ನವಾಗಿವೆ. ಸಾಮಾನ್ಯವಾಗಿ ಮೇಕೆಗಳಿಗೆ ಕೊಂಬುಗಳಿದ್ದು ಮೈಮೇಲೆ ಕೂದಲು ಬೆಳೆದರೆ, ಕುರಿಗಳಿಗೆ ಕೊಂಬುಗಳಿರದೆ ಮೈಮೇಲೆ ಉಣ್ಣೆ ಬೆಳೆದಿರುತ್ತದೆ. ಗಂಡು ಮೇಕೆಗೆ (ವೋತುವಿಗೆ) ಗಡ್ಡವಿರುತ್ತದೆ ಮತ್ತು ಬಾಲದ ಭಾಗ ಗಟ್ಟಿಯಾಗಿರುತ್ತದೆ. ವೋತದ ಕೊಂಬುಗಳು ಹಿಂದಕ್ಕೆ ಬಾಗಿದ್ದರೆ ಟಗರಿನ ಕೊಂಬುಗಳು ಸುರಳಿಯಾಕಾರದಲ್ಲಿ ಸುತ್ತುತ್ತಿರುತ್ತವೆ. ಮೇಕೆಯ ಬಾಲ ಉದ್ದವಾಗಿದ್ದು ನೇರವಾಗಿ ಮೇಲೆದಿದ್ದರೆ, ಕುರಿಯ ಬಾಲ ಚಿಕ್ಕದ್ದಾಗಿದ್ದು ಮುದುರಿಕೊಂಡಿರುತ್ತದೆ. ಮೇಕೆಯ ಕಾಲಿನ ಹಿಂಬಾಗ ಗಟ್ಟಿಯಾಗಿರುತ್ತದೆ. ಹಾಗೆಯೇ ತಲೆಬುರುಡೆ ಕಣ್ಣು ಹಾಗೂ ಕಾಲಿನ ಭಾಗಗಳಲ್ಲಿ ವ್ಯತ್ಯಾಸ ಎದ್ದು ಕಾಣುತ್ತವೆ.

ಮೇಕೆ ಎಂಥ ಪ್ರತಿಕೂಲ ಪರಿಸ್ಥಿತಿ ಮತ್ತು ಹವಾಮಾನಕ್ಕೂ ಹೊಂದಿಕೊಂಡು ಹೋಗುವ ವಿಶಿಷ್ಟ ಗುಣವನ್ನು ಸಾಮಾನ್ಯವಾಗಿ ಹೊಂದಿದೆ. "ಮೇಕೆ ಆಹಾರ ಮೇಯುವ ಪದ್ಧತಿ ಬಹಳ ವಿಚಿತ್ರ ಪೂರ್ಣವಾಗಿದೆ. ಅವು ತಿನ್ನುವಷ್ಟು ವಿವಿಧ ಸೊಪ್ಪು, ತಪ್ಪಲು, ಎಲೆ ಬೇರೆ ಯಾವ ಪ್ರಾಣಿಯು ತಿನ್ನುವುದಿಲ್ಲ. ಆದ್ದರಿಂದಲೇ 'ಆಡುಮುಟ್ಟದ ಸೊಪ್ಪು ಇಲ್ಲ' ಎಂಬ ನಾಣ್ಣುಡಿ ಇದೆ. ದನ-ಕುರಿಗಳು ಮೇಯಲು ಹೋಗಲು ಅಸಾಧ್ಯವಾದ, ಕಡಿದಾದ, ಗುಡ್ಡಗಾಡು ಪ್ರದೇಶದಲ್ಲಿ ಆಡುಗಳು ಹೋಗಿ ಮೇಯುವವು. ಅಲ್ಲಿಯೂ ಸಹ ಮೇಯುವಾಗ ಅಲ್ಲೊಂದು ಕಡೆ, ಇಲ್ಲೊಂದು ಕಡೆ ಬಾಯಿ ಹಾಕುತ್ತಾ, ತಿನ್ನುತ್ತಾ, ತಿರುಗಾಡುತ್ತ ಮೇಯುವುದೇ ಅವು ಆಹಾರ ತಿನ್ನುವ ಪದ್ಧತಿ. ಒಂದು ಕಡೆ ನಿಂತು ಮೇಯುವುದು ಆಡುಗಳಿಗೆ ಗೊತ್ತಿಲ್ಲ. ಸಣ್ಣ-ಸಣ್ಣ ಗಿಡಗಳನ್ನು, ಪೊದೆಗಳನ್ನು ಹುಡುಕಿಕೊಂಡು ಹೋಗಿ ಅಲ್ಲಿಯ ಬಳ್ಳಿಯ ಕುಡಿಗಳನ್ನು, ಮೊಗ್ಗು, ಹೂ, ಕಾಯಿಗಳನ್ನು ಕತ್ತರಿಸಿ ತಿನ್ನುವುದು ಆಡುಗಳಿಗೆ ಬಹಳ ಪ್ರೀತಿ. ಬರಗಾಲದ ಪರಿಣಾಮವಾಗಿ ದನಗಳು ಹೊಟ್ಟೆಗಿಲ್ಲದ ಸತ್ತವು ಎಂದು ನಾವು ಕೇಳುತ್ತವೆ. ಆದರೆ ಆಡುಗಳು ಬರಗಾಲದಲ್ಲಿಯೂ ಸಹ ತಮ್ಮ ಆಹಾರವನ್ನು ಹುಡುಕಿ ಕೊಳ್ಳುತ್ತವೆ" (ರಾಮರಾವ್ ಜ್ಯೋತಿ:೧೯೮೯:೩).

ಕುರಿ ಮೂರು ಮುಖ ಎತ್ತಿ ಮೇಯದ ಪ್ರಾಣಿಯಾಗಿದೆ. ಅದು ಹುಲ್ಲಿನ ಎಸಳುಗಳನ್ನು ಮೇಕೆ ಮತ್ತು ದನಗಳಿಗಿಂತಲೂ ಬುಡಮಟ್ಟಕ್ಕೆ ಆಗಿದು ತಿನ್ನಬಲ್ಲದು. ಆದ್ದರಿಂದ ದನ-ಮೇಕೆಗಳಿಗೆ ಮೇಯಲು ಆಗದ ಕಡೆ ಇವು ಜೀವಿಸಬಲ್ಲವು. ಕುರಿಗಳು ಹುಲ್ಲನ್ನು ಬುಡಮಟ್ಟದವರೆಗೆ ತಿನ್ನುವುದರಿಂದ ಹುಲ್ಲಿನ ಬೇರು ಬಗೆದ ಹಾಗೆ ಆಗಿ ಹುಲ್ಲು ಹರಡಿಕೊಂಡು ಬೆಳೆಯುತ್ತದೆ. ಕುರಿ ಬಿಟ್ಟಕಡೆ ಹುಲ್ಲುಗಾವಲು ಉತ್ತಮವಾಗಿ ಬೆಳೆಯುವುದೆಂಬ ಮಾತು ರೂಢಿಯಲ್ಲಿದೆ. ಕುರಿಗಳಿಗೆ ರಸಭರಿತವಾದ ಹಸಿರು ಚಿಗುರುಹುಲ್ಲು, ತಪ್ಪಲು, ಸತ್ವಯುತವಾದ ಆಹಾರ ಬೇಕು. ಎಳೆಯ ಚಿಗುರು ಹುಲ್ಲನ್ನು ಬಹಳ ಪ್ರೀತಿಯಿಂದ ಅವು ತಿನ್ನುತ್ತವೆ. ಹಸಿರು ಹುಲ್ಲು ಬಹಳ ಉದ್ದವಾಗಿ ಬೆಳೆದಲ್ಲಿ ಅದು ಮೇಕೆ, ದನಕರುಗಳಿಗೆ ಮೇಯಲು ಅನುಕೂಲವೇ ಹೊರತು ಕುರಿಗಳಿಗಲ್ಲ. ಉದ್ದವಾಗಿ ಬೆಳೆದ ಹುಲ್ಲನ್ನು ತಿನ್ನಲು ಮೇಕೆ - ದನಗಳಂತೆ ಕುರಿಗಳ ನಾಲಿಗೆ ಅಷ್ಟು ಉದ್ದವಾಗಿ ಇಲ್ಲದಿರುವುದು ಇದಕ್ಕೆ ಮುಖ್ಯ ಕಾರಣ. ಮೇಕೆ - ದನಗಳು ಮೇವನ್ನು ಮೇಯಲು ನಾಲಿಗೆಯನ್ನು ಉಪಯೋಗಿಸಿ ಕೊಳ್ಳುತ್ತವೆ. ಕುರಿಗಳು ಕೇವಲ ತುಟಿಗಳು ಮತ್ತು ಮುಂದಿನ ಹಲ್ಲುಗಳನ್ನು ಬಳಸುತ್ತವೆ. ಅದಕ್ಕಾಗಿ ಕುರಿಗಳು ಹುಲ್ಲುಗಾವಲುಗಳಲ್ಲಿ ಎತ್ತರವಾಗಿ ಬೆಳೆಯದ, ಅಗಲವಾಗಿ ಹೆಚ್ಚು ಕವಲು-ಕವಲಾಗಿ ಕುಡಿಯೊಡೆಯುವ ಜಾತಿಯ ಹುಲ್ಲುಗಳನ್ನು ಮೇಯುವುದು ಸಾಮಾನ್ಯವಾಗಿ ಕಂಡುಬರುತ್ತದೆ.

೩.೩ ಕುರಿ ತಳಿಗಳು

ಉಷ್ಣವಲಯ ಮತ್ತು ಉತ್ತರ ಧ್ರುವ ಪ್ರದೇಶಗಳಲ್ಲಿ ಕುರಿಗಳ ಸಾಂದ್ರತೆ ಹೆಚ್ಚು. ಉಷ್ಣ ವಾತವರಣ, ತಂಪು ವಾತವರಣ, ಮರುಭೂಮಿ ಮತ್ತು ತೇವ ಪ್ರದೇಶಗಳಲ್ಲಿಯೂ ಸಾಕಣೆ ಮಾಡ ಲಾಗುತ್ತದೆ. "ವಿಶ್ವದಲ್ಲಿ ಸುಮಾರು ೨೦೦ ಬೇರೆ ಬೇರೆ ತಳಿಗಳಿವೆಯೆಂದು ಅಂದಾಜು ಮಾಡಲಾಗಿದೆ. ಆಯಾ ವಿಭಾಗಗಳ ಭೂಗುಣ, ಹವೆ, ಮೊದಲಾದ ಲಕ್ಷಣಗಳಿಗೆ ಒಗ್ಗುವ ಹಾಗೂ ಹಾಲು, ಮಾಂಸ, ಮತ್ತು ಉಣ್ಣೆ ಕೊಡುವಂಥ ವೈವಿಧ್ಯಪೂರ್ಣ ತಳಿಗಳನ್ನು ಉತ್ಪಾದಿಸಲಾಗಿದೆ" (ಶಿವಾನಂದ ಗುಬ್ಬಣನವರ:೧೯೯೩:೭೯). ಪ್ರಪಂಚದ ಒಟ್ಟು ೧೦೨೪ ದಶಲಕ್ಷ (೨೦೦೩) ಕುರಿಗಳಲ್ಲಿ ಭಾರತದಲ್ಲಿ ೫೯ ದಶಲಕ್ಷ ಕುರಿಗಳಿವೆ. ಭಾರತವು ಕುರಿ ಸಂಖ್ಯೆಯಲ್ಲಿ ೩ನೇ ಸ್ಥಾನದಲ್ಲಿದೆ. ಸುಮಾರು ನಮ್ಮ ದೇಶದಲ್ಲಿ ೪೦ ವಿವಿಧ ಕುರಿ ತಳಿಗಳಿವೆ. ನಮ್ಮ ದೇಶದಲ್ಲಿ ಶೇ. ೫.೭೬ರಷ್ಟು ಪ್ರಪಂಚದ ಕುರಿ ಸಂಖ್ಯೆಯಿದ್ದಾಗೂ ಸಹ ಶೇ. ೨.೬ರಷ್ಟು ಉಣ್ಣೆ ಮಾತ್ರ ಗುಣಮಟ್ಟದ್ದಾಗಿರುತ್ತದೆ. ಭಾರತದ ಭೂ-ಪ್ರದೇಶದಲ್ಲಿ ಸಾಕಣೆ ಮಾಡುವ ಕುರಿಗಳನ್ನು ವಿಶಾಲವಾಗಿ ಮೂರು ಗುಂಪುಗಳಲ್ಲಿ ವಿಂಗಡಿಸಲಾಗಿದೆ.

ಹಿಮಾಲಯ ವಲಯದ ಉಷ್ಣವಲಯದ ಕುರಿಗಳು (The Temperate Himalayan region) (ಉತ್ತಮ ಉಣ್ಣೆ ನೀಡುತ್ತೇವೆ).

ಈಶಾನ್ಯ ವಲಯದ ಕುರಿಗಳು (North Western region) (ಕಂಬಳಿ ತಯಾರು ಮಾಡಲು ಯೋಗ್ಯ).


ದಕ್ಷಿಣ ವಲಯದ ಕುರಿಗಳು (Southern region) (ಉಣ್ಣೆಯ ಜೊತೆಗೆ ಮಾಂಸ, ಹಾಲು ನೀಡುತ್ತವೆ).

೩.೩.೧. ಹಿಮಾಲಯ ವಲಯದ ಉಷ್ಣವಲಯದ ಕುರಿಗಳು

ಈ ಪ್ರದೇಶವು ಜಮ್ಮು-ಕಾಶ್ಮೀರ, ಹಿಮಾಚಲ ಪ್ರದೇಶ, ಪಂಜಾಬಿನ ಬೆಟ್ಟ-ಗುಡ್ಡಗಳ ಜಿಲ್ಲೆಗಳಿಂದ ಉತ್ತರ ಪ್ರದೇಶದ ಗಾರ್ಫವಾಲ್ ಜಿಲ್ಲೆಯವರೆಗೆ ವಿಸ್ತರಿಸಿದೆ. ಇದು ಬಹಳಷ್ಟು ಬೆಟ್ಟ-ಗುಡ್ಡಗಳು, ನದಿ-ಕಣಿವೆಗಳು, ವಿಶಾಲ ಅರಣ್ಯ, ಹುಲ್ಲುಗಾವಲು ಹಾಗೂ ತಗ್ಗುಗಳಿಂದ ಕೂಡಿದೆ. ಈ ವಲಯದ ಕುರಿಗಳು ಕಾಂಗ್ರಾ, ಚಾಂಬಾ, ಕುಲರ್ ಮತ್ತು ಕಾಶ್ಮೀರ ನದಿ ಕಣಿವೆಗಳಲ್ಲಿ ಮಾನ್‌ಸೂನ್ ಮಳೆಯ ಪ್ರಮಾಣವು ಸಾಧಾರಣವಾಗಿ ಹೆಚ್ಚಾಗಿರುತ್ತದೆ. ೨೫೦೦ ಮೀಟರ್ ಎತ್ತರದವರೆಗೆ ಬೆಟ್ಟ-ಗುಡ್ಡಗಳಿವೆ. ಚಳಿಗಾಲವನ್ನು ಹೊರತುಪಡಿಸಿ ವರ್ಷದ ಉಳಿದ ಅವಧಿಯಲ್ಲಿ ಬೆಟ್ಟ-ಗುಡ್ಡಗಳ ತುದಿಯವರೆಗೆ ಕುರಿ ಮೇಯಿಸಲಾಗುತ್ತದೆ. ಕುರಿ ಮೇಯಿಸುವ ಪದ್ಧತಿ ವಲಸೆ ಜೀವನ ವಿಧಾನವಾಗಿದೆ. ಈ ವಲಯದಲ್ಲಿ ಕುರಿ ಸಂಗೋಪನೆ ಮಾಡುವವರು "ಋತುಗಳ ಬದಲಾವಣೆ ಮತ್ತು ಹುಲ್ಲು ಹಾಗೂ ನೀರಿನ ಲಭ್ಯತೆಗಳಿಗೆ ಅನುಗುಣವಾಗಿ ಪರ್ವತ ಪ್ರದೇಶದಲ್ಲಿ ಸ್ಥಳದಿಂದ ಸ್ಥಳಕ್ಕೆ ಅಲೆಯುವರು. ಅವರು ಋತುಮಾನಿಕ ಪ್ರವಾಸ ಮಾಡುವರು. ಬೇಸಿಗೆ ಕಾಲದಲ್ಲಿ ಪರ್ವತ ಪ್ರದೇಶದಲ್ಲಿ ಅವರು ತಮ್ಮ ಜಾನುವಾರುಗಳನ್ನು ಮೇಯಿಸುವರು. ಚಳಿಗಾಲದಲ್ಲಿ ಅವರು ಕಣಿವೆ ಪ್ರದೇಶಕ್ಕೆ ಹಿಂದಿರುಗುವರು. ಹಿಮಾಲಯ ಪ್ರದೇಶದಲ್ಲಿ ಗುಜರ್ಸ್, ಗಡ್ಡಿಸ್, ಬಕರವಾಲಗಳು ಮತ್ತು ಬೋಟಿಯಾ ಬುಡಕಟ್ಟಿನವರು ಋತುಮಾನಿಕ ಪ್ರವಾಸವನ್ನು ಅನುಸರಿಸುವರು" (ಎಸ್.ಎಸ್. ನಂಜಣ್ಣನವರ ಮತ್ತು ಪಿ. ಮಲ್ಲಪ್ಪ: ೨೦೦೫:೩೪೩) ಈ ಪ್ರದೇಶದಲ್ಲಿ ದೇಶದ ಒಟ್ಟು ಕುರಿಗಳ ಸಂಖ್ಯೆಯಲ್ಲಿ ಶೇ. ೭.೬ (೩.೦೯ ಮಿಲಿಯನ್)ರಷ್ಟು ಇದ್ದು ಶೇ. ೬ (೨.೦೬)ಮಿಲಿಯನ್ ಕೆ.ಜಿ. ಉಣ್ಣೆ ಉತ್ಪನ್ನವಾಗುತ್ತದೆ.

ಈ ವಲಯದಲ್ಲಿ ಸಾಕಣೆ ಮಾಡುವ ಪ್ರಮುಖ ಕುರಿ ತಳಿಗಳು

ಅ. ಗಡ್ಡಿ (Gaddi) : ಈ ತಳಿಯ ಹೆಸರನ್ನು ಸಾಮನ್ಯವಾಗಿ ಕುರಿ ಸಾಕಣೆ ಪ್ರದೇಶದಿಂದ ಕರೆಯಲಾಗುತ್ತದೆ. ಗಡ್ಡಿ ಎಂಬುದು ಕುರಿ ತಳಿಯ ಹೆಸರು ಮತ್ತು ಸಾಕಣೆ ಮಾಡುವ ಸಮುದಾಯದ ಹೆಸರುಗಳೆರಡೂ ಒಂದೇ ಆಗಿದೆ. 'ಗಡ್ಡಿ' ಎಂಬ ಅಲೆಮಾರಿ ಕುರಿಗಾಯಿ ಸಮುದಾಯ ಗಡ್ಡಿ ತಳಿಯನ್ನು ಸಾಕಣೆ ಮಾಡುತ್ತದೆ. ಆದಕಾರಣ ಸಮುದಾಯದಿಂದ ಕುರಿಯ ತಳಿಗೂ ಹೆಸರು ಬಂದಿದೆ (ಮಾಹಿತಿದಾರ: ಬಿ.ಕೆ. ರವಿ:ಬೆಂಗಳೂರು) ಈ ಜನ ಸಮುದಾಯ ಹಿಮಾಚಲಪ್ರದೇಶದ ಕುಲು ಮತ್ತು ಕಾಂಗ್ರ ನದಿ ಹಾಗೂ ಚಾಂಬಾ ಮತ್ತು ಮಂಡಿ ಜಿಲ್ಲೆಯವರೆಗೂ ಅಲೆದಾಡುತ್ತದೆ. ಈ ತಳಿಯ ಕುರಿಗಳು ಗಾತ್ರದಲ್ಲಿ ಚಿಕ್ಕವಾಗಿದ್ದು ಬೆಟ್ಟ-ಗುಡ್ಡ ಹತ್ತಲು ಸದೃಢವಾಗಿವೆ. ಚಿಕ್ಕದಾದ ಬಾಲ ಹಾಗೂ ಕಿವಿಗಳನ್ನು ಹೊಂದಿವೆ. ಕುರಿಹಿಂಡುಗಳು ಬೇಸಿಗೆಕಾಲದಲ್ಲಿ ಎತ್ತರದ ಬೆಟ್ಟ-ಗುಡ್ಡಗಳ ಪ್ರದೇಶದವರೆಗೂ



ಮೇಯುತ್ತವೆ. ಚಳಿಗಾಲದಲ್ಲಿ ಬೆಟ್ಟದ ಕೆಳ ಭಾಗದಲ್ಲಿ ಇರುತ್ತವೆ. ಇವುಗಳ ಉಣ್ಣೆಯು ಸಾಪೇಕ್ಷವಾಗಿ ಉತ್ತಮವಾಗಿದ್ದು ೫ ಇಂಚು ಉದ್ದದವರೆಗೆ ಬೆಳೆಯುತ್ತದೆ. ವರ್ಷದಲ್ಲಿ ಮೂರು ಸಾರಿ ಅಂದರೆ ಫೆಬ್ರವರಿ, ಜೂನ್ ಮತ್ತು ಆಕ್ಟೋಬರ್ ತಿಂಗಳುಗಳಲ್ಲಿ ಉಣ್ಣೆ ಕತ್ತರಿಸುತ್ತಾರೆ. ವರ್ಷದಲ್ಲಿ ಪ್ರತಿಯೊಂದು ಕುರಿ ೧ ರಿಂದ ೧.೫ ಕೆ.ಜಿ.ಯವರೆಗೆ ಉತ್ತಮ ಉಣ್ಣೆಯನ್ನು ನೀಡುತ್ತದೆ.

ಬ. ಬಾಕರವಾಲ : ಈ ತಳಿಯ ಮೂಲ ಹಿಮಾಲಯದ ಬೆಟ್ಟಗಳ ಸಾಲಿನ ಕೆಳಭಾಗದಲ್ಲಿ ವ್ಯಾಪಿಸಿದೆ. ಇದೇ ಹೆಸರಿನಿಂದ ಕರೆಯುವ ಅಲೆಮಾರಿ ಬುಡಕಟ್ಟು ಕುರಿಗಾಯಿ ಸಮುದಾಯವು ಇವುಗಳ ಸಾಕಣೆ ಮಾಡುತ್ತದೆ. ಹಾಗಾಗಿ ಈ ತಳಿಗೆ 'ಭಾಕರವಾಲ್' ಎಂದು ಕರೆಯಲಾಗುತ್ತದೆ. ಬೇಸಿಗೆ ಕಾಲದಲ್ಲಿ ಪಿರ್‌ಪುಂಚಾಲ್ ಬೆಟ್ಟಗುಡ್ಡದ ಮೇಲೆ ಕುರಿ-ಹಿಂಡುಗಳು ಮೇದರೆ, ಚಳಿಗಾಲದಲ್ಲಿ ಜಮ್ಮು-ಕಾಶ್ಮೀರದ ಬೆಚ್ಚನೆಯ ಕೆಳಮಟ್ಟದ ಬೆಟ್ಟಗಳಲ್ಲಿ ಮೇಯುತ್ತವೆ. ಈ ತಳಿಯ ಟಗರಿಗೆ ಕೊಂಬುಗಳಿದ್ದರೆ, ಕುರಿಗೆ ಕೊಂಬುಗಳಿರುವುದಿಲ್ಲ. ಅಗಲವಾದ ಮತ್ತು ಚಾಚಿದ ಕಿವಿಗಳನ್ನು ಹೊಂದಿರುತ್ತವೆ. ಇವು ಉದ್ದವಾಗಿದ್ದು ಗಟ್ಟಿಯಾಗಿರುತ್ತವೆ. ಬೆಟ್ಟ-ಗುಡ್ಡದಲ್ಲಿ ಅಲೆದಾಡಲು ಶ್ರೇಷ್ಠ ವಾಗಿರುತ್ತವೆ.

ಇವುಗಳ ಉಣ್ಣೆಯನ್ನು ವರ್ಷದಲ್ಲಿ ಮೂರು ಸಾರಿ ಅಂದರೆ ಮಾರ್ಚ್, ಜೂನ್ ಮತ್ತು ಸೆಪ್ಟೆಂಬರ್ ತಿಂಗಳುಗಳಲ್ಲಿ ಕತ್ತರಿಸಲಾಗುತ್ತದೆ. ವಾರ್ಷಿಕವಾಗಿ ೧.೫ ರಿಂದ ೨ ಕೆ.ಜಿ.ವರೆಗೆ ಉಣ್ಣೆ ದೊರಕುತ್ತದೆ. ಉಣ್ಣೆಯು ಒರಟಾಗಿದ್ದು ಬಹಳ ಉದ್ದವಾಗಿರುತ್ತದೆ.

ಕ. ಗುರೇಜ್ (Gureg) : ಈ ತಳಿಯು ಕಾಶ್ಮೀರದ ಎತ್ತರ ಪ್ರದೇಶವಾದ 'ಗುರೇಜ್ ತಹಸಿಲ್'ದಿಂದ ಬಂದಿದೆ. ಬೇಸಿಗೆ ಕಾಲದಲ್ಲಿ ಉತ್ಕೃಷ್ಟವಾದ ಮೇವನ್ನು ಮೇಯುತ್ತವೆ. ಆದರೆ ಚಳಿಗಾಲದಲ್ಲಿ ಸಂಗ್ರಹಿಸಿಟ್ಟ ಹುಲ್ಲು, ಮೆಕ್ಕೆಜೋಳ ಮತ್ತು ಒಣಮೇವನ್ನು ನೀಡಲಾಗುತ್ತದೆ.

ಇವು ಕಾಶ್ಮೀರ ತಳಿಗಳೆಲ್ಲೇ ದೊಡ್ಡವು. ಚಿಕ್ಕ ಕಿವಿಗಳಿದ್ದು ಬಹಳಷ್ಟು ಕುರಿಗಳಿಗೆ ಕೊಂಬು ಗಳಿರುವುದಿಲ್ಲ. ಟಗರು ಹೆಚ್ಚು ಪೌರುಷ ಯುಕ್ತವಾಗಿರುತ್ತದೆ. ಹೆಣ್ಣುಕುರಿ ಹೆಚ್ಚು ಹಾಲು ಕರೆಯುತ್ತದೆ. ಇವುಗಳ ಬಾಲ ಚಿಕ್ಕದ್ದಾಗಿದ್ದು ಅಗಲವಾಗಿರುತ್ತದೆ. ಸಾಮಾನ್ಯವಾಗಿ ಕುರಿಗಳ ಬಣ್ಣ ವೈವಿಧ್ಯ. ಅವುಗಳಲ್ಲಿ ಬಿಳಿಯ ಬಣ್ಣ ಹೆಚ್ಚು. ಇವುಗಳ ಉಣ್ಣೆ ಆರು ಇಂಚು ಉದ್ದ ಬೆಳೆಯುತ್ತದೆ. ಉತ್ತಮ

ಗುಣಮಟ್ಟದ್ದಾಗಿರುತ್ತದೆ. ಒಂದು ವರ್ಷಕ್ಕೆ ಸರಾಸರಿಯಾಗಿ ೧.೫ ಕೆ.ಜಿ. ಉಣ್ಣೆ ದೊರಕುತ್ತದೆ. ಮಾಂಸವೂ ಉತ್ತಮವಾಗಿರುತ್ತದೆ.

೩.೩.೨. ಈಶಾನ್ಯ ವಲಯದ ಕುರಿಗಳು (North-western Region)

ರಾಜಸ್ತಾನ, ಪಂಜಾಬ್‌ದ ದಕ್ಷಿಣ ಪೂರ್ವ ಭಾಗ, ಗುಜರಾತ್ ಮತ್ತು ಉತ್ತರ ಪ್ರದೇಶದ ಪಶ್ಚಿಮ ಭಾಗವನ್ನು ಈ ವಲಯ ಒಳಗೊಂಡಿದೆ. ಇದು ಕುರಿ ಸಾಕಣೆ ಮಾಡಲು ಮತ್ತು ಅಭಿವೃದ್ಧಿ ಪಡಿಸಲು ಒಳ್ಳೆಯ ಭೂ-ಪ್ರದೇಶವಾಗಿದೆ. ಈ ಭಾಗದಲ್ಲಿ ನೆಲೆನಿಂತು, ಅರೆ-ಅಲೆಮಾರಿ ಮತ್ತು ಅಲೆಮಾರಿ ಸಮುದಾಯಗಳು ವಲಸೆ ಹೋಗಿ ಕುರಿ ಮೇಯಿಸುವ ಪದ್ಧತಿ ಕಂಡುಬರುತ್ತದೆ. ಕುರಿಗಳಿಂದ ದೊರೆಯುವ ಉಣ್ಣೆಯು ಒಳ್ಳೆಯ ಗುಣಮಟ್ಟವನ್ನು ಹೊಂದಿಲ್ಲದ ಕಾರಣ ಕಂಬಳಿ ತಯಾರು ಮಾಡಲು ಹೆಚ್ಚಾಗಿ ಬಳಸಲಾಗುತ್ತದೆ. ದೇಶದ ಒಟ್ಟು ಕುರಿಗಳ ಸಂಖ್ಯೆಯಲ್ಲಿ ಈ ಪ್ರದೇಶದ ಪಾಲು ಶೇ. ೩೨.೪ ರಷ್ಟು. ಇಲ್ಲಿ ಶೇ. ೬೪ ರಷ್ಟು ಉಣ್ಣೆ ದೊರಕುತ್ತದೆ.

ಅ. ಹಿಸ್ಸಾರ ದಾಲೆ (Hissar Dale) : ಈ ತಳಿಯನ್ನು ಸರ್ಕಾರಿ 'ಪಶು-ಸಾಕಣೆ ಕೇಂದ್ರ' ಹಿಸ್ಸಾರದಲ್ಲಿ ಸ್ಥಳೀಯ ಬಿಕನರಿ ಹೆಣ್ಣು ಕುರಿಯೊಂದಿಗೆ ಆಮದು ಮಾಡಿಕೊಂಡ ಮರಿನೋ ಗಂಡು ಕುರಿಯ ಸಂಕರಣದಿಂದ ಮಿಶ್ರ ತಳಿಯನ್ನು ಅಭಿವೃದ್ಧಿ ಪಡಿಸಲಾಗಿದೆ. ಇಂದು ಈ ತಳಿಯನ್ನು ಕಾಂಗ್ರ ಜಿಲ್ಲೆಯ ಕುಲುಕಣಿವೆ ಸುತ್ತಮುತ್ತಲಿನ ಪ್ರದೇಶದಲ್ಲಿ ವ್ಯಾಪಕವಾಗಿ ಸಾಕಣೆ ಮಾಡಲಾಗುತ್ತಿದೆ. ಇವು ಗಟ್ಟಿ ಎಲುಬುಗಳನ್ನು ಹೊಂದಿದ್ದು, ಕೊಂಬುಗಳು ಬೆಳೆದಿರುವುದಿಲ್ಲ. ಬಹುಪಾಲು ಕುರಿಗಳಲ್ಲಿ ವಿಶೇಷವಾಗಿ ಟಗರುಗಳಿಗೆ ರೋಮಾನ್ ಮೂಗು ಇರುತ್ತದೆ.

ಈ ತಳಿಯಿಂದ ನುಣುಪಾದ ಉತ್ತಮ ಗುಣಮಟ್ಟದ ಉದ್ದನೆಯ ಉಣ್ಣೆ ಸಿಗುತ್ತದೆ. ಪ್ರತಿಕೂಲ ವಾತಾವರಣದಲ್ಲಿ ರೋಗಗಳನ್ನು ನಿಗ್ರಹಿಸಿಕೊಳ್ಳುವ ಶಕ್ತಿಯನ್ನು ಹೊಂದಿರುವುದರ ಜೊತೆಗೆ ಉತ್ತಮ ಗುಣಮಟ್ಟದ ಮಾಂಸ ದೊರಕುತ್ತದೆ.

ಆ. ಚೋಕ್ಲಾ (Chokla) : ಈ ತಳಿಯು ರಾಜಸ್ತಾನದ ಚುರು, ಜುಂಜುನು, ಸಿಕಾರ್, ನಾಗೌರ್ ಜಿಲ್ಲೆಗಳ ಬಹಳಷ್ಟು ಸಾಕಣೆ ಮಾಡಲಾಗುತ್ತದೆ. ಇತರೆ ತಳಿಗಳೊಂದಿಗೆ ಹೋಲಿಸಿದರೆ ಈ ತಳಿಯ ತಲೆ ಚಿಕ್ಕದಾಗಿದ್ದು ಕಂದು ಬಣ್ಣವನ್ನು ಹೊಂದಿರುತ್ತದೆ. ಮುಖದ ಮೇಲೆ ಉಣ್ಣೆ ಇರದೆ ರೋಮನ್ ಮೂಗನ್ನು ಹೊಂದಿರುತ್ತದೆ. ದೇಹದ ರಚನೆ ಮಧ್ಯಮ ಗಾತ್ರ ಹೊಂದಿದ್ದು ಚೌಕಾಕಾರದಿಂದ ಅಚ್ಚುಕಟ್ಟಾಗಿರುತ್ತದೆ. ಕಾಲುಗಳು ಚಿಕ್ಕವಾಗಿದ್ದು ನಿಧಾನವಾಗಿ ನಡೆದಾಡುತ್ತವೆ. ಮಾಂಸದಲ್ಲಿ ಕೊಬ್ಬಿನಾಂಶ ಕಡಿಮೆ ಇರುತ್ತದೆ. ರಾಜಸ್ತಾನದಲ್ಲಿರುವ ಇತರೆ ತಳಿಗಳಿಗಿಂತ ಉತ್ತಮ ಉಣ್ಣೆ ಇವುಗಳಿಂದ ದೊರಕುತ್ತದೆ. ವರ್ಷದಲ್ಲಿ ಮೂರು ಸಲ ಉಣ್ಣೆ ಕತ್ತರಿಸಲಾಗುತ್ತಿದ್ದು, ಸರಾಸರಿಯಾಗಿ ೧.೫ ರಿಂದ ೨.೫ ಕೆ.ಜಿ. ಉಣ್ಣೆ ಸಿಗುತ್ತದೆ.

ಇ. ಮಾಗ್ರ (Magra) : ಈ ತಳಿಯು ರಾಜಸ್ತಾನದ ಬಿಕನೇರ್, ಚುರು ಮತ್ತು ನಾಗೌರ್ ಜಿಲ್ಲೆಗಳಲ್ಲಿ ಹಂಚಿಕೆಯಾಗಿದೆ. ಇವು ಒಳ್ಳೆಯ ದೇಹವನ್ನು ಹೊಂದಿದ ಗುಲಾಬಿ ಬಣ್ಣದ ತಳಿಯಾಗಿದೆ. ತಲೆಯಲ್ಲಿ ಉಣ್ಣೆಯಿರುವುದಿಲ್ಲವಾದರೂ ಬಿಳಿಕೂದಲಿನಿಂದ ಕೂಡಿರುತ್ತದೆ. ಕಣ್ಣಿನ ಸುತ್ತ ಕಂದು ಬಣ್ಣವಿದ್ದು ಕೊಂಬುಗಳಿರುವುದಿಲ್ಲ. ಇವು ಮಧ್ಯಮ ಗಾತ್ರದ್ದಾಗಿದ್ದು ತಲೆಯ ಭಾಗ ಉದ್ದವಾಗಿರುತ್ತದೆ. ಇವುಗಳಿಂದ ವರ್ಷಕ್ಕೆ ಸರಾಸರಿಯಾಗಿ ೨.೦೦ ರಿಂದ ೨.೫ ಕೆ.ಜಿ. ಉಣ್ಣೆ ದೊರಕುತ್ತದೆ. ಬಲಿತ ಟಗರು ೩೩ ಕೆ.ಜಿ. ಹಾಗೂ ಕುರಿ ೨೫ ರಿಂದ ೩೦ ಕೆ.ಜಿ. ತೂಗುತ್ತದೆ.

ಈ. ನಾಳಿ (Nali) : ಈ ತಳಿಯ ಕುರಿಗಳನ್ನು ರಾಜಸ್ತಾನದ ಗಂಗಾನಗರ, ಚುರು ಮತ್ತು ಜುಂಜುರು ಜಿಲ್ಲೆಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಸಾಕಣೆ ಮಾಡಲಾಗುತ್ತದೆ. ಇವು ಗಾತ್ರದಲ್ಲಿ ದೊಡ್ಡವಾಗಿದ್ದು ಅಚ್ಚುಕಟ್ಟಾದ ತಲೆಯನ್ನು, ದೊಡ್ಡದಾದ ಎಲೆಯಾಕಾರದ ಕಿವಿಗಳು, ಚಿಕ್ಕದಾದ ಕಾಲುಗಳನ್ನು ಹೊಂದಿವೆ. ದೇಹದ ಭಾಗವು ಉಣ್ಣೆಯಿಂದ ಕೂಡಿದ್ದು, ಮುಖವು ಬಿಳಿ ಕಂದುಬಣ್ಣದ ಕೂದಲನ್ನು ಹೊಂದಿರುತ್ತದೆ. ಇವುಗಳ ಉಣ್ಣೆಯನ್ನು ಮಾರ್ಚ್ ಮತ್ತು ಸೆಪ್ಟೆಂಬರ್ ತಿಂಗಳಲ್ಲಿ ಕತ್ತರಿಸಲಾಗುತ್ತದೆ. ವಾರ್ಷಿಕ ಸರಾಸರಿಯಾಗಿ ೨.೫ ರಿಂದ ೩.೫ ಕೆ.ಜಿ.ಯವರೆಗೆ ಉಣ್ಣೆ ಸಿಗುತ್ತದೆ. ಟಗರು ೩೫ ರಿಂದ ೪೦ ಕೆ.ಜಿ. ತೂಗಿದರೆ ಕುರಿಯು ೨೫ ರಿಂದ ೩೦ ಕೆ.ಜಿ. ತೂಗುತ್ತದೆ.

ಉ. ಮಾರವಾರಿ (Marwari) : ರಾಜಸ್ಥಾನದ ಜೋದಪುರ, ನಾಗೌರ್, ಪಾಲಿ ಮತ್ತು ಬರಮರ್ ಜಿಲ್ಲೆಗಳಲ್ಲಿ ಈ ತಳಿಗಳನ್ನು ಸಾಕಲಾಗುತ್ತದೆ. ಇವು ಕಪ್ಪು ಬಣ್ಣದವುಗಳಾಗಿದ್ದು ಚಿಕ್ಕ ಕಿವಿಗಳನ್ನು ಹೊಂದಿವೆ. ಕಾಲುಗಳು ತೆಳುವಾಗಿ ಉದ್ದವಾಗಿವೆ. ಸಾಮಾನ್ಯವಾಗಿ ದೇಹ ಗಟ್ಟಿಯಾಗಿದ್ದು ಮಧ್ಯಮ ಗಾತ್ರವನ್ನು ಹೊಂದಿರುತ್ತವೆ. ಇವುಗಳ ಉಣ್ಣೆ ಬಿಳಿಯದಾಗಿದ್ದು ಒರಟಾಗಿರುತ್ತದೆ. ವರ್ಷದಲ್ಲಿ ಎರಡು ಸಲ ಉಣ್ಣೆ ಕತ್ತರಿಸಲಾಗುತ್ತಿದ್ದು ಸರಾಸರಿಯಾಗಿ ೧.೫ ರಿಂದ ೨.೫ ಕೆ.ಜಿ.ಯವರೆಗೆ ದೊರಕುತ್ತದೆ. ಟಗರು ೩೦ ರಿಂದ ೪೦ ಕೆ.ಜಿ. ತೂಗಿದರೆ ಕುರಿ ೨೫ ರಿಂದ ೩೦ ಕೆ.ಜಿ. ತೂಗುತ್ತದೆ.

ಊ. ಸೋನಾಡಿ (Sonadi) : ಈ ತಳಿಯು ರಾಜಸ್ತಾನದ ಉದಯಪುರ ವಿಭಾಗದಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಅಲ್ಲದೆ ಗುಜರಾತ್ ರಾಜ್ಯದವರೆಗೂ ವಿಸ್ತರಿಸಿದೆ. ಇವು ಒಳ್ಳೆಯ ದೇಹವನ್ನು ಹೊಂದಿದ್ದು ಬಿಳಿ ಮಿಶ್ರಿತ ಕಂದು ಮುಖ ಹೊಂದಿವೆ. ಎದ್ದು ಕಾಣುವ ಮೂಗು ಮತ್ತು ಇಳಿ ಬಿದ್ದಿರುವ ಕಿವಿ ಇದ್ದು ಇವುಗಳಿಗೆ ಉದ್ದನೆಯ ದೇಹ ಮತ್ತು ಬಾಲ ಇರುತ್ತದೆ. ಕಾಲು ಮತ್ತು ತಲೆಯಲ್ಲಿ ಕೂದಲು ಕಂಡುಬರುವುದಿಲ್ಲ. ಇವುಗಳ ಉಣ್ಣೆಯನ್ನು ವರ್ಷಕ್ಕೆ ಎರಡೂ ಸಲ ಕತ್ತರಿಸಲಾಗುತ್ತದೆ. ವಾರ್ಷಿಕವಾಗಿ ೦.೬ ರಿಂದ ೧.೨ ಕೆ.ಜಿ. ಉಣ್ಣೆ ದೊರಕುತ್ತದೆ ಹಾಗೂ ಮರಿ ಹಾಕಿದ ಅವಧಿಯಲ್ಲಿ ದಿನನಿತ್ಯ ೧ ರಿಂದ ೧.೫ ಲೀಟರ್ ಹಾಲು ಕರೆಯುತ್ತವೆ.

ಋ. ಕಾಠಿವಾರಿ (Kathiwari) : ಈ ತಳಿಯ ಮೂಲ ಸ್ಥಳ ರಾಜಸ್ಥಾನದ ಕಾಠಿವಾರಿ.

ಅಕ್ಕ ಪಕ್ಕದ ಪ್ರದೇಶವಾದ ಕಚ್, ದಕ್ಷಿಣ ರಾಜಸ್ಥಾನ ಮತ್ತು ಉತ್ತರ ಗುಜಾರಾತಿನಲ್ಲಿ ಕೂಡ ಕಂಡುಬರುತ್ತವೆ. ಮಧ್ಯಮ ಗಾತ್ರ ಹೊಂದಿದ, ಬಿಳಿಯ ಬಣ್ಣದ ಈ ತಳಿಯ ಕುರಿಗಳ ಕಾಲು ಮತ್ತು ಮುಖದ ಮೇಲೆ ಕಪ್ಪು ಮತ್ತು ಕಂದು ಬಣ್ಣದ ಕೂದಲಿರುತ್ತವೆ. ಇವುಗಳ ಉಣ್ಣೆ ಒರಟಾಗಿದ್ದರೂ ಗುಣಮಟ್ಟದ್ದಾಗಿದ್ದು, ಉದ್ದನೆಯ ಎಳೆಗಳನ್ನು ಮಾಡಲು ಸಹಕಾರಿಯಾಗಿದೆ. ಕಂಬಳಿ ತಯಾರಿಕೆಗೆ ಇದು ಉತ್ತಮ ಉಣ್ಣೆಯಾಗಿದ್ದು 'ಜೋರಿಯಾ' (Joriya) ಉಣ್ಣೆ ಎಂದು ಹೆಸರು ಪಡೆದಿದೆ. ಇದನ್ನು ಯುರೋಪ್ ರಾಷ್ಟ್ರಗಳಿಗೆ ರಫ್ತು ಮಾಡಲಾಗುತ್ತದೆ. ವರ್ಷದಲ್ಲಿ ಎರಡು ಸಲ ಕತ್ತರಿಸಲಾಗುವ ಉಣ್ಣೆ ಜನವರಿಯಲ್ಲಿ ೦.೫ ಕೆ.ಜಿ. ಮತ್ತು ಸೆಪ್ಟೆಂಬರ್‌ನಲ್ಲಿ ೧ ಕೆ.ಜಿ. ಸಿಗುತ್ತದೆ.

೩.೩.೩. ದಕ್ಷಿಣ ವಲಯದ ಕುರಿಗಳು

ದಕ್ಷಿಣ ವಿಭಾಗವು ಮಹಾರಾಷ್ಟ್ರ, ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು ಮತ್ತು ಮಧ್ಯಪ್ರದೇಶದ ಕೆಲವು ಭಾಗಗಳನ್ನು ಒಳಗೊಂಡಿದೆ. ಮೂಲತಃ ಈ ವಿಭಾಗದಲ್ಲಿ ಎರಡು ವಿಧಧ ಕುರಿಗಳಿವೆ. ಒಂದು ಉಣ್ಣೆಯ ಕುರಿಗಳು, ಮತ್ತೊಂದು ಮಾಂಸದ ಕುರಿಗಳು. ದೇಶದ ಒಟ್ಟು ಕುರಿ ಸಂಖ್ಯೆಯಲ್ಲಿ ಶೇ. ೫೦ ರಿಂದ ೫೫ ರಷ್ಟು ಕುರಿಗಳು ಈ ವಿಭಾಗದಲ್ಲಿವೆ. ಈ ವಲಯದ ಬಹುಪಾಲು ಕಡೆ ವರ್ಷವಿಡೀ ಉಷ್ಣ ವಾತವರಣ ಇರುತ್ತದೆ. ಚಳಿಗಾಲದಲ್ಲಿ ಕೆಲವೊಂದು ದಿನಗಳು ಮಾತ್ರ ತಂಪಾಗಿರುತ್ತದೆ. ಮಳೆ ಸಾಮಾನ್ಯದಿಂದ ಹೆಚ್ಚಿನ ಪ್ರಮಾಣದಲ್ಲಿ ಬಿಳುತ್ತದೆ. ರಾಷ್ಟ್ರದ ಒಟ್ಟು ಕುರಿಗಳಲ್ಲಿ ಶೇ. ೫೦ರಷ್ಟು ಈ ವಲಯದಲ್ಲಿದೆ. ಇವುಗಳಲ್ಲಿ ಹಲವು ಕುರಿಗಳು ಉಣ್ಣೆ ಉತ್ಪನ್ನ ಮಾಡುವುದಿಲ್ಲ. ಉಳಿದವುಗಳಿಂದ ಮಿಶ್ರ ಬಣ್ಣದ ಒರಟು ಉಣ್ಣೆ ಸಿಗುತ್ತವೆ. ಈ ವಿಭಾಗದಲ್ಲಿ ೯.೬೮ ಮಿಲಿಯನ್ ಕೆ.ಜಿ. ಉಣ್ಣೆ ಅಥವಾ ಒಟ್ಟು ಉಣ್ಣೆಯಲ್ಲಿ ಶೇ. ೨೮ರಷ್ಟು ದೊರಕುತ್ತದೆ. ಈ ವಿಭಾಗದ ತಳಿಗಳು ಈ ಕೆಳಗಿನಂತಿವೆ.

ಅ. ಡೆಕ್ಕನಿ (Deccani) : ದಕ್ಷಿಣ ಪ್ರಸ್ಥಭೂಮಿಯಲ್ಲಿ ಈ ತಳಿಯನ್ನು ಸಾಕುವುದರಿಂದ 'ಡೆಕ್ಕನಿ' ಎಂದು ಕರೆಯಲಾಗುತ್ತದೆ. ಇವು ಮಹಾರಾಷ್ಟ್ರದ ದಕ್ಷಿಣ ಪೂರ್ವಭಾಗ, ಆಂಧ್ರಪ್ರದೇಶ ಮತ್ತು ಕರ್ನಾಟಕದಲ್ಲಿ ಕಂಡುಬರುತ್ತವೆ. ಮಹಾರಾಷ್ಟ್ರದ ನಾಸಿಕ್, ಪೂನಾ, ಕೊಲ್ಹಾಪುರ, ಸೊಲ್ಲಾಪುರ ಮತ್ತು ಔರಂಗಬಾದ್ ಜಿಲ್ಲೆಗಳಲ್ಲಿ ಹೆಚ್ಚಾಗಿ ಹರಡಿಕೊಂಡಿವೆ (ಈ ತಳಿಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯನ್ನು ಕರ್ನಾಟಕ ರಾಜ್ಯದ ತಳಿಗಳ ವಿವರಣೆಯಲ್ಲಿ ನೋಡಬಹುದು).

ಆ. ತಿರುಚಿ (Tiruchi) : ಈ ತಳಿಯ ಮೂಲಸ್ಥಳ ತಮಿಳುನಾಡಿನ ತಿರುಚಿಯಾದ್ದರಿಂದ ಈ ತಳಿಯನ್ನು ಪ್ರಾದೇಶಿಕ ಸ್ಥಳದ ಹೆಸರಿನಿಂದ ಕರೆಯಲಾಗುತ್ತದೆ. ಇದರ ಸಾಕಣೆ ತಮಿಳುನಾಡಿನಲ್ಲಿ ಹೆಚ್ಚಾಗಿದ್ದು, ಕರ್ನಾಟಕದ ಹಾಸನ ತಳಿಯನ್ನು ಹೋಲುತ್ತದೆ. ಗಾತ್ರ ಸಣ್ಣದಿದ್ದು ಹೆಚ್ಚಾಗಿ ಕಪ್ಪು ಬಣ್ಣದ್ದಾಗಿರುತ್ತದೆ. ಜೋಲು ಕಿವಿಯನ್ನು ಹೊಂದಿವೆ. ಇವುಗಳ ಉಣ್ಣೆಯನ್ನು ವರ್ಷದಲ್ಲಿ ಎರಡು

ಸಲ ಕತ್ತರಿಸಲಾಗುತ್ತದೆ. ವಾರ್ಷಿಕ ಸರಾಸರಿಯಾಗಿ ೦.೫ ರಿಂದ ೦.೭ ಕೆ.ಜಿ. ಉಣ್ಣೆ ಸಿಗುತ್ತದೆ. ಈ ಉಣ್ಣೆ ಕಂಬಳಿ ನೆಯ್ಯಲು ಮಾತ್ರ ಉಪಯುಕ್ತವಾಗಿದೆ. ಟಗರು ೨೫ ರಿಂದ ೩೫ ಕೆ.ಜಿ. ತೂಗಿದರೆ ಕುರಿ ೨೦ ರಿಂದ ೨೮ ಕೆ.ಜಿ. ತೂಗುತ್ತದೆ.

ಇ. ನಿಲಗಿರಿ (Nilgiri) : ಈಸ್ಟ್ ಇಂಡಿಯಾ ಕಂಪನಿ ಆಡಳಿತದ ಸಮಯದಲ್ಲಿ ತಮಿಳುನಾಡಿನ 'ಒಟಕ್ ಮುಂಡ' ಎಂಬ ಸ್ಥಳೀಯ ಕುರಿಯೊಂದಿಗೆ ವಿದೇಶಿ ತಳಿಯನ್ನು ಸಂಕರಣಗೊಳಿಸಿ 'ನೀಲಗಿರಿ' ಎಂಬ ಮಿಶ್ರ ತಳಿ ಬ್ರಿಟೀಷ್ ಅಧಿಕಾರಿಗಳಿಂದ ಅಭಿವೃದ್ಧಿಗೊಂಡಿದೆ. ಇಂದು ಮಿಶ್ರತಳಿ ಮತ್ತು ಸ್ಥಳೀಯ ತಳಿಗಳೆರಡನ್ನು ತಮಿಳುನಾಡಿನಲ್ಲಿ ಕಾಣಸಿಗುತ್ತಿದ್ದು, ಇವೆರಡನ್ನೂ 'ನೀಲಗಿರಿ' ತಳಿಯೆಂದು ಕರೆಯಲಾಗುತ್ತದೆ. ಇವು ಬಿಳಿಯ ಬಣ್ಣದಾಗಿದ್ದು, ಉತ್ತಮ ದರ್ಜೆಯ ಕಡಿಮೆ ಉದ್ದದ ಉಣ್ಣೆಯನ್ನು ನೀಡುತ್ತವೆ. ಇವುಗಳ ಉಣ್ಣೆಯನ್ನು ವರ್ಷದಲ್ಲಿ ಎರಡು ಸಲ ಕತ್ತರಿಸಲಾಗುತ್ತಿದ್ದು ವಾರ್ಷಿಕವಾಗಿ ೦.೮ ರಿಂದ ೧.೨ ಕೆ.ಜಿ.ಯವರೆಗೆ ಉಣ್ಣೆ ದೊರಕುತ್ತದೆ. ಟಗರು ೩೦ ರಿಂದ ೩೫ ಕೆ.ಜಿ ತೂಗಿದರೆ, ಕುರಿಯು ೨೫ ರಿಂದ ೩೦ ಕೆ.ಜಿ. ತೂಗುತ್ತದೆ.

ಈ. ನೆಲ್ಲೂರು (Nellur) : ಇದರ ಮೂಲ ಸ್ಥಳ ಆಂಧ್ರ ಪ್ರದೇಶದ ನೆಲ್ಲೂರು. ಈ ತಳಿಯ ಕುರಿಯನ್ನು ಯಾಲಗ್ ಅಥವಾ ಕೆಂಗುರಿ ಎಂದು ಕರೆಯಲಾಗುತ್ತದೆ. ಇದರ ಮೂಲಸ್ಥಳ ಇವುಗಳ ಬಣ್ಣ ಬಿಳಿಯದಾಗಿದ್ದು ಉದ್ದನೆಯ ಕಾಲು, ಮೊಟಕು ಬಾಲ, ಮೈತುಂಬಾ ಉದ್ದನೆಯ ಕೂದಲಿದ್ದು ಕಿವಿಯ ಜೋತಾಡುತ್ತವೆ. ಗಡುಸಾದ ಕತ್ತನ್ನು ಹೊಂದಿದ್ದು ಕತ್ತಿನ ಕೆಳಗೆ ಎರಡು ಮೊಲೆಗಳು ನೇತಾಡುತ್ತವೆ. ಇವುಗಳ ಉಣ್ಣೆಯನ್ನು ವರ್ಷದಲ್ಲಿ ಎರಡು ಸಲ ಕತ್ತರಿಸಲಾಗುತ್ತದೆ. ವಾರ್ಷಿಕವಾಗಿ ೦.೬ ರಿಂದ ೦.೮ ಕೆ.ಜಿ.ಯವರೆಗೆ ಉಣ್ಣೆ ಸಿಗುತ್ತದೆ. ಟಗರು ೩೫ ರಿಂದ ೪೫ ಕೆ.ಜಿ. ತೂಗಿದರೆ ಕುರಿಗಳು ೩೦ ರಿಂದ ೩೫ ಕೆ.ಜಿ ತೂಗುತ್ತವೆ.

೩.೪ ಮೇಕೆ ತಳಿಗಳು

ಮೇಕೆಗಳಿಗೆ ಮತ್ತೊಂದು ಹೆಸರು ಆಡು. ಇವನ್ನು ಮಾನವ ಅತಿ ಪ್ರಾಚೀನ ಕಾಲದಿಂದಲೂ ತನ್ನ ನಿತ್ಯ ಜೀವನಕ್ಕಾಗಿ ಬೇಕಾದ ಹಾಲು, ಮಾಂಸ, ಚರ್ಮ ಮತ್ತು ಗೊಬ್ಬರಗಳಿಗಾಗಿ ಸಾಕಿಕೊಂಡು ಬಂದಿದ್ದಾನೆ. ಮಾನವನ ವಿಕಾಸದಲ್ಲಿ ಆಡುಗಳೂ ಇತರೆ ಸಾಕು ಪ್ರಾಣಿಗಳಂತೆ ಸಮಭಾಗಿಗಳಾಗಿವೆ. ಜಗತ್ತಿನ ಅನೇಕ ಭಾಗಗಳಲ್ಲಿ ಮಾನವನ ಜೀವನದ ಬಳಕೆಯಲ್ಲಿ ಆಡು ಒಂದು ಮುಖ್ಯವಾದ ಸಾಕು ಪ್ರಾಣಿ ಎಂದು ಪರಿಗಣಿಸಲ್ಪಟ್ಟಿದೆ.

ಭಾರತದಲ್ಲಿ ಸಾಕಣೆ ಮಾಡುತ್ತಿರುವ ಆಡುಗಳನ್ನು ಅವುಗಳ ಉಪಯೋಗದ ಆಧಾರದ ಮೇಲೆ ಮೂರು ವಿಧವಾಗಿ ವಿಂಗಡಿಸಬಹುದು. ಅವನ್ನು ಹಾಲಿಗಾಗಿ, ಮಾಂಸ ಚರ್ಮಗಳಿಗಾಗಿ ಮತ್ತು ಉಣ್ಣೆ ಅಥವಾ ಕೂದಲುಗಳಿಗಾಗಿ ಸಾಕುವ ಮೇಕೆಗಳು ಎಂದು ಗುರುತಿಸಬಹುದು. ಹಾಲಿಗೋಸ್ಕರ

ಕೆಲವೊಂದು ಆಡುಗಳನ್ನು ಹಳ್ಳಿಗಳಲ್ಲಿ ಸಾಕಣೆ ಮಾಡಲಾಗುತ್ತದೆ. ಮಾಂಸ-ಚರ್ಮಗಳಿಗಾಗಿ ಸಾಕುವ ಮೇಕೆಗಳು ಸಾಮಾನ್ಯವಾಗಿ ಕುರಿ ಹಿಂಡಿನೊಂದಿಗೆ ಓಡಾಡಿಕೊಂಡಿರುವ ನಿರ್ದಿಷ್ಟ ತಳಿಯನ್ನಿಸಿಕೊಳ್ಳದ ನಾಡ ಆಡುಗಳಾಗಿವೆ. ಕರ್ನಾಟಕದಲ್ಲಿ ಈ ಆಡುಗಳನ್ನು ಅಲೆದಾಡುವ ಅಲೆಮಾರಿ ಕುರುಬರು ಸಾಕುತ್ತಾರೆ. ಹಿಮಾಲಯ ಪ್ರದೇಶದಲ್ಲಿ ಮಾಂಸದ ಜೊತೆಗೆ ಉಣ್ಣೆ ಅಥವಾ ಕೂದಲಿಗಾಗಿ ಆಡುಗಳನ್ನು ಸಾಕಣೆ ಮಾಡಲಾಗುತ್ತದೆ. ಇವುಗಳಿಗೆ ಅಂಗೋರ ಆಡು ಅಥವಾ ಪಟ್ಟು ಆಡುಗಳೆಂದು ಕರೆಯುತ್ತಾರೆ. ಈ ಆಡುಗಳ ಮೈ ಕೂದಲಿಗೆ ಬಹಳಷ್ಟು ಬೇಡಿಕೆ ಇದೆ.

ಅಲೆದಾಡುವ ಅಲೆಮಾರಿ ಕುರುಬರು ಕರ್ನಾಟಕ ರಾಜ್ಯದಲ್ಲಿ ತಮ್ಮ ಜೀವನೋಪಾಯಕ್ಕಾಗಿ ಹೆಚ್ಚಾಗಿ ಕುರಿಗಳನ್ನು ಸಾಕುತ್ತಾರೆಯೇ ವಿನಹಃ ಆಡುಗಳನ್ನು ಸಾಕುವುದು ಬಹಳ ಕಡಿಮೆ. ಇವರು ಆಡುಗಳನ್ನು ಕಡಿಮೆ ಸಾಕಲು ಪ್ರಮುಖ ಕಾರಣಗಳನ್ನು ಹೀಗೆ ಗುರುತಿಸಬಹುದು.

- ಅಲೆಮಾರಿ ಕುರುಬರು ವರ್ಷವಿಡಿ ಅಡವಿಯಲ್ಲಿ ಅಥವಾ ನಿಸರ್ಗದ ಮಡಿಲಲ್ಲಿದ್ದುಕೊಂಡು ಕುರಿಗಳಿಗೆ ಮೇವು ನೀರು ಹುಡುಕಿಕೊಂಡು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಅಲೆಯುವುದು ಸಾಮಾನ್ಯವಾಗಿದೆ. ವಲಸೆ ಹೋದ ಸ್ಥಳಗಳಿಗೆ ಮತ್ತು ಬದಲಾದ ವಾತಾವರಣಕ್ಕೆ ಹೊಂದಿಕೊಳ್ಳುವ ಪ್ರಾಣಿಗಳನ್ನು ಸಾಕಣೆ ಮಾಡುವುದು ಅನಿವಾರ್ಯ. ಹೀಗಾಗಿ ಕುರಿಗಳನ್ನೇ ಹೆಚ್ಚಾಗಿ ಸಾಕುತ್ತಾರೆ.

- ಮೇಕೆಗಳು ಕುರಿಗಳಿಗಿಂತ ಚುರುಕಾಗಿದ್ದು ಆಹಾರವನ್ನು ಆಡ್ಡಾಡಿ-ಓಡಾಡಿ ತಿನ್ನುವುದು ಅದರ ಲಕ್ಷಣವಾಗಿದೆ. ಎಲ್ಲಾ ಮೇಕೆಗಳು ಮೇವು ತಿನ್ನುವಾಗ ಗುಂಪಾಗಿ ಒಂದೇ ಕಡೆ ಮೇಯದೆ ಚದುರಿದಂತೆ ಮೇಯುತ್ತವೆ. ಇದರಿಂದ ಅಲೆಮಾರಿ ಕುರುಬರಿಗೆ ಮೇಕೆ ಹಿಂಡುಗಳ ನಿಯಂತ್ರಣ ಮತ್ತು ನಿರ್ವಹಣೆ ಮಾಡುವುದು ಬಹುಕಷ್ಟದ ಕಾರ್ಯವಾಗುತ್ತದೆ.

- ರಾತ್ರಿ ಮೇಕೆ ಹಿಂಡನ್ನು ಹೊಲಗದ್ದೆಗಳಲ್ಲಿ ತಬ್ಬಿದಾಗ ಅವು ಒಂದು ಕಡೆ ಮಲಗದೆ ಮಧ್ಯರಾತ್ರಿಯಲ್ಲಿ ಬೆಳೆ ಇರುವ ಹೊಲ-ಗದ್ದೆಗಳ ಕಡೆ ಮೇವು ಅರಸಿಕೊಂಡು ಹೋಗುತ್ತವೆ. ಹಗಲು ಹೊತ್ತಿನಲ್ಲಿ ಕುರಿಗಳು ಜೊತೆ ತಿರುಗಾಡಿ ಸುಸ್ತಾದ ಅಲೆಮಾರಿ ಕುರುಬರು ರಾತ್ರಿ ಹೊತ್ತೂ ವಿಶ್ರಾಂತಿಯಿಲ್ಲದೆ ಅವನ್ನು ಕಾಯುವುದು ಕಷ್ಟಕರವಾಗುತ್ತದೆ.

- ಪ್ರಮುಖವಾಗಿ ಕುರಿ ಹಾಗೂ ಅವುಗಳ ಮರಿಗಳಿಗೆ ಹೋಲಿಸಿದರೆ ಮೇಕೆ ಮತ್ತು ಮೇಕೆಮರಿಗಳ ಮಾರುಕಟ್ಟೆ ಮೌಲ್ಯ ಕಡಿಮೆ ಇದೆ.

ಈ ಕಾರಣಗಳಿಂದ ಮೇಕೆಗಳ ಸಾಕಣೆಯನ್ನು ಸಂಪೂರ್ಣವಾಗಿ ತಿರಸ್ಕರಿಸಲು ಬರುವಂತಿಲ್ಲ. ಕುರಿ ಸಂಗೋಪನೆಯ ಅನುಕೂಲಗೋಸ್ಕರವಾದರೂ ಕೆಲವು ಮೇಕೆಗಳನ್ನು ಕುರಿಗಳ ಜೊತೆ ಸಾಕುವುದು ಅನಿವಾರ್ಯವಾಗಿದೆ. "ಮೇಕೆ ಕುರಿಗಳಿಗಿಂತ ಚುರುಕು ಪ್ರಾಣಿಯಾಗಿದ್ದು ಆಹಾರವನ್ನು ಹೆಚ್ಚು

ಚಟುವಟಿಕೆಯಿಂದ ಹುಡುಕಿ ತಿನ್ನುತ್ತದೆ. ಮೇಕೆ, ಕುರಿ ಹಿಂಡಿನ ಜೊತೆ ಇರುವುದರಿಂದ ಕುರಿಗಳನ್ನು ಮೇವು ಇರುವ ಸ್ಥಳಕ್ಕೆ ಹೋಗಲು ಹಾಗೂ ತಾನು ಮೇವು ತಿನ್ನುವಂತೆ ವರ್ತಿಸಿ, ಕುರಿಗಳಿಗೂ ಮೇವು ತಿನ್ನುವಂತೆ ಸೂಚಿಸುತ್ತದೆ. ಒಂದು ವೇಳೆ ಕುರಿಹಿಂಡಿನಲ್ಲಿ ಮೇಕೆಗಳು ಇಲ್ಲದಿದ್ದರೆ ಅವು ತಲೆ ತಗ್ಗಿಸಿ ಗುಂಪಾಗಿ ಒಂದುಕಡೆ ನಿಂತು ಬಿಡುತ್ತವೆ. ಇಂತಹ ಪರಿಸ್ಥಿತಿಯಲ್ಲಿ ಕುರಿಹಿಂಡನ್ನು ಮುಂದಕ್ಕೆ ನಡೆಸುವುದು ಕಷ್ಟವಾಗುತ್ತದೆ" (ಮಾಹಿತಿದಾರ: ಅಪ್ಪಣ್ಣಪೂಜಾರಿ:ಸೌಂದಲಗ). ಆದ್ದರಿಂದ ಕುರಿಗಳ ಜೊತೆಗೆ ಮೇಕೆ ಇರಲೇಬೇಕು. ಇದರಿಂದ ವ್ಯಕ್ತವಾಗುವುದೆನೆಂದರೆ ಮೇಕೆ ಸಾಕಣಿಕೆಯಿಂದ ಅನುಕೂಲ ಹಾಗೂ ಅನಾನುಕೂಲಗಳೆರಡೂ ಇದ್ದು, ಅಲೆಮಾರಿ ಕುರುಬನು ತನ್ನ ಕುರಿಹಿಂಡನ್ನು ಮುನ್ನಡೆಸಿಕೊಂಡು ಹೋಗಲು ಅಗತ್ಯವಾದ ಮೇಕೆಗಳನ್ನು ಸಾಕುತ್ತಾನೆ.

ಭಾರತದ ಭೂಪ್ರದೇಶದಲ್ಲಿ ಸಾಕಣೆ ಮಾಡುವ ಆಡುಗಳನ್ನು ಪ್ರಾದೇಶಿಕ ಹಿನ್ನೆಲೆಯಲ್ಲಿ ಗುರುತಿಸಿದೆ. ಅವನ್ನು ಸಾಕಣೆ ಮಾಡುವ ರಾಜ್ಯದಲ್ಲಿರುವ ಆಡಿನ ತಳಿಗಳನ್ನು ಈ ಕೆಳಗಿನ ಪಟ್ಟಿಯಲ್ಲಿ ಹೇಳಲಾಗಿದೆ.

ಕೋಷ್ಟಕ ೩.೧ ಭಾರತದ ಭೂಪ್ರದೇಶದಲ್ಲಿ ಸಾಕಣೆ ಮಾಡುವ ಆಡಿನ ತಳಿಗಳು

ಸಾಕಣೆ ಮಾಡುವ ಪ್ರದೇಶ	**ತಳಿಗಳು**
ಹಿಮಾಚಲ ಪ್ರದೇಶದ ಕಾಂಗ್ರ ಮತ್ತು ಕುಲುಕಣಿವೆ ಪ್ರದೇಶ	ಚಂಬಾ, ಗಡ್ಡಿ, ಮತ್ತು ಕಾಶ್ಮೀರ
ಜಮ್ಮು, ಕಾಶ್ಮೀರ	ಸಿರಮೂರ ಮತ್ತು ಸಿಮ್ಲಾ
ಪಂಜಾಬ್	ಜಮನಾಪಾರಿ, ಬೀಟಲ್, ಬಿಕನೇರ್
ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳ	ಜಮನಾಪಾರಿ
ಬಿಹಾರ	ಬಾರ್ರಿ, ಕಚ್ಚಿ, ಕಾಮೋರಿ
ರಾಜಸ್ಥಾನ	ಮಾರವಾರಿ
ಗುಜರಾತ್	ಸುರತಿ ಮಹಸಾನ
ಮಹಾರಾಷ್ಟ್ರ	ಗಂಜಾಮಿ, ಮಲಬಾರಿ, ಡೆಕ್ಕನಿ
ಆಂಧ್ರಪ್ರದೇಶ	ಕಂಚಿ, ಉಸ್ಮನಾಬಾದಿ
ಕರ್ನಾಟಕ	ಡೆಕ್ಕನಿ, ಬಿದರಿ,ಮಲಬಾರಿ ಉಸ್ಮನಬಾದಿ
ಕೇರಳ	ತಲಚರಿ

ಕರ್ನಾಟಕದಲ್ಲಿರುವ ಆಡಿನ ತಳಿಗಳು ಮಧ್ಯಮ ದರ್ಜೆಯದಾಗಿವೆ. ಅವುಗಳ ಸಂಗೋಪನೆ ಕಾರ್ಯ ಯಾವುದೇ ನಿರ್ದಿಷ್ಟ ಗುರಿಯಿಲ್ಲದೆ ನಡೆದಿರುವುದರಿಂದ ಬೆಳವಣಿಗೆ ಪ್ರಗತಿಯತ್ತ ಸಾಗಿರುವುದು ಕಾಣುವುದಿಲ್ಲ. ಇವು ಬೆರಕೆ ಜಾತಿಯ ಆಡುಗಳಾಗಿದ್ದು ಕಪ್ಪು, ಬಿಳಿ ಅಥವಾ ನಾನಾ ಬಣ್ಣಗಳಿಂದ ಕೂಡಿವೆ. ಗಾತ್ರದಲ್ಲಿ ಚಿಕ್ಕವಾಗಿದ್ದು ಹೆಚ್ಚು ಹಾಲು ಹಿಂಡುವುದಿಲ್ಲ. ಇವುಗಳ ಸುಧಾರಣೆಯ ಬಗ್ಗೆ ಅಲಕ್ಷ್ಯ ಮಾಡಿರುವುದರಿಂದ ಹೆಚ್ಚಿನ ಪ್ರಗತಿ ಕಂಡುಬಂದಿಲ್ಲ.

೩.೫ ಕರ್ನಾಟಕದ ಕುರಿಗಳು

ಭೌಗೋಳಿಕತೆ : ಕರ್ನಾಟಕ ೧,೯೧,೭೯೧ ಚ.ಕಿ.ಮೀ.ಗಳು ಭೂ ವಿಸ್ತಾರ್ಣವನ್ನು ಹೊಂದಿದ್ದು ಅದರಲ್ಲಿ ೩೬,೯೯೧ ಚ.ಕಿ.ಮೀ. ಅರಣ್ಯ ಪ್ರದೇಶವಿದೆ. ೨೦೦೧ರ ಜನಗಣತಿಯ ಪ್ರಕಾರ ರಾಜ್ಯದ ಜನಸಂಖ್ಯೆಯು ೫.೨೭ ಕೋಟಿಗಳಿದ್ದು ಶೇ. ೬೬ ರಷ್ಟು ಗ್ರಾಮೀಣ ಮತ್ತು ಶೇ. ೩೪ ರಷ್ಟು ನಗರವಾಸಿಗಳನ್ನು ಹೊಂದಿದೆ. ಪ್ರತಿ ಚ.ಕಿ.ಮೀಟರ್‌ಗೆ ೨೭೫ ಜನಸಾಂದ್ರತೆ ಪ್ರಮಾಣವನ್ನು ಹೊಂದಿದೆ.

ಕರ್ನಾಟಕದ ಪ್ರಮುಖ ಜಿಲ್ಲೆಗಳಲ್ಲಿ ಬಳ್ಳಾರಿ ಜಿಲ್ಲೆ ಒಂದು. ರಾಜ್ಯದ ನಕ್ಷೆಯ ಪ್ರಕಾರ ಈ ಜಿಲ್ಲೆಯು ಪೂರ್ವ ಭಾಗದ ಮಧ್ಯದಲ್ಲಿ ದಕ್ಷಿಣೋತ್ತರವಾಗಿ ಹಬ್ಬಿದೆ. ಜಿಲ್ಲೆಯ ಪಶ್ಚಿಮಕ್ಕೆ ಹಾವೇರಿ, ಉತ್ತರಕ್ಕೆ ರಾಯಚೂರು, ದಕ್ಷಿಣಕ್ಕೆ ಚಿತ್ರದುರ್ಗ, ಪೂರ್ವಕ್ಕೆ ಆಂಧ್ರಪ್ರದೇಶವಿದೆ. ಪೂರ್ವ-ಪಶ್ಚಿಮ ಭಾಗವು ೧೬೧.೮ ಕಿ.ಮೀ. ಉದ್ದ. ಉತ್ತರ-ದಕ್ಷಿಣ ೮೩.೭೮ ಕಿ.ಮೀ. ಅಗಲವಾಗಿದೆ. ಪೂರ್ವ ರೇಖಾಂಶ ೭೫°-೮೫° ಮತ್ತು ಉತ್ತರ ರೇಖಾಂಶ ೧೪°-೩೦° ನಡುವೆ ಇದೆ (ಕರ್ನಾಟಕ ಗೆಜಿಟಿಯರ್). ಜಿಲ್ಲೆಯ ಒಟ್ಟು ವಿಸ್ತೀರ್ಣ ೮೪೫೦ ಚ.ಕಿ.ಮೀ. ೨೦೦೧ರ ಜನಗಣತಿಯ ಪ್ರಕಾರ ಒಟ್ಟು ಜನಸಂಖ್ಯೆ ೨೦.೨೭ ಲಕ್ಷಗಳು ಅದರಲ್ಲಿ ೧೦.೩೦ ಲಕ್ಷ ಪುರುಷರು ಹಾಗೂ ೯.೯೭ ಲಕ್ಷ ಮಹಿಳೆಯರಿದ್ದಾರೆ. ಲಿಂಗಾನುಪಾತ ೯೬೯. ಸಾಕ್ಷರತೆ ಪ್ರಮಾಣ ಶೇ. ೫೭.೪ ರಷ್ಟು ಜನಸಾಂದ್ರತೆ ೨೪೦ ಇರುವುದು ತಿಳಿದುಬಂದಿದೆ.

ಈ ಜಿಲ್ಲೆಗೆ ತುಂಗಭದ್ರ ನದಿ ವರವಾಗಿ ಪರಿಣಮಿಸಿದೆ. ಹಗರಿ ಅಥವಾ ವೇದಾವತಿ ನದಿ ಮತ್ತು ಚಿಕ್ಕಹಗರಿಗಳು ತುಂಗಭದ್ರ ನದಿಯ ಉಪನದಿಗಳಾಗಿವೆ. ಪಶ್ಚಿಮ ಮತ್ತು ಉತ್ತರ ದಂಡೆಗೆ ಗಡಿರೇಖೆಯಾಗಿ ಈ ನದಿಯು ಹರಿಯುತ್ತದೆ. ಇದು ಹರಪನಹಳ್ಳಿ (ದಾವಣಗೇರಿ ಜಿಲ್ಲೆ) ಕಡಲೆ ಗ್ರಾಮದಿಂದ ಪ್ರವೇಶಿಸಿ, ಹರಪನಳ್ಳಿ, ಹಡಗಲಿ, ಹೊಸಪೇಟೆ ಮತ್ತು ಸಿರುಗುಪ್ಪ ತಾಲೂಕುಗಳ ಉತ್ತರದ ಎಲ್ಲೆಯಾಗಿ ೩೨೨ ಕಿ.ಮೀ. ದೂರ ಹರಿಯುತ್ತದೆ. ಮಲ್ಲಾಪುರ ಎಂಬ ಊರಲ್ಲಿ ತುಂಗಭದ್ರ ಅಣೆಕಟ್ಟು ನಿರ್ಮಿತವಾಗಿದೆ. ಹಗರಿ ಹೊಳೆಯು ತುಂಗಭದ್ರ ನದಿಯ ಉಪನದಿಯಾಗಿದೆ. ಚಿಕ್ಕಮಗಳೂರು ಜಿಲ್ಲೆ ಮುಳ್ಳಯ್ಯನ ಗಿರಿಯಲ್ಲಿ ಹುಟ್ಟಿ ನಂತರ ಚಿತ್ರದುರ್ಗ ಜಿಲ್ಲೆ ಮತ್ತು ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ, ಕೂಡ್ಲಿಗಿ, ಹಡಗಲಿ, ತಾಲೂಕುಗಳಲ್ಲಿ ಹರಿದು ತುಂಗಭದ್ರ ನದಿಯನ್ನು

ಕೂಡುತ್ತದೆ. ಚಿನ್ನಹಗರಿಯು ಕೂಡ್ಲಿಗಿ ತಾಲೂಕಿನಿಂದ ಹರಿದು ಹಗರಿ ಸೇರುತ್ತದೆ. ಇದಲ್ಲದೆ ಸಣ್ಣಪುಟ್ಟ ತೊರೆಗಳಿಂದ ನೀರಾವರಿಗೆ ತುಂಬಾ ಉಪಯುಕ್ತವಾಗಿದೆ. ಇಲ್ಲಿರುವ ತೊರೆಗಳಲ್ಲಿ ಹಗ್ಗನೂರು ತಂಬ್ರಹಳ್ಳಿ ಹೊಳೆ, ಹಂಪಸಾಗರ ಹೊಳೆ, ಚೆಲ್ಲಹುಣಿಸೆ ಹೊಳೆ, ಗೌರಿಪುರ ಹೊಳೆ, ನಾರಿಹಳ್ಳಗಳಿವೆ. ಇದರೊಂದಿಗೆ ೨೨ ದೊಡ್ಡ ಕೆರೆಗಳು, ೧೭೦ ಸಣ್ಣ ಕೆರೆಗಳು ಈ ಜಿಲ್ಲೆಯಲ್ಲಿವೆ.

ಪ್ರಸ್ತುತ ಜಿಲ್ಲೆಯಲ್ಲಿ ಉಷ್ಣತೆ ಅಧಿಕವಾಗಿದೆ. ಸೊಂಡೂರು ತಾಲೂಕಿನ ಅರಣ್ಯ ಪ್ರದೇಶಗಳನ್ನು ಬಿಟ್ಟರೆ ಉಳಿದಂತೆ ಹೆಚ್ಚು ಮಳೆ ಬೀಳುವ ಸಂಭವ ಕಡಿಮೆ. ಏಕೆಂದರೆ ಇಲ್ಲಿ ಮರಗಿಡಗಳು ತುಂಬಾ ವಿರಳವಾಗಿವೆ. ಈ ಜಿಲ್ಲೆಯಲ್ಲಿರುವ ಅರಣ್ಯ ಪ್ರದೇಶವು ೧೬೧೮.೨೫ ಕಿ.ಮೀ.ಗಳು. ಇಲ್ಲಿರುವ ಕುರುಚಲು ಕಾಡಿನಲ್ಲಿ ಎಲೆ ಉದುರವ ಮರಗಳು ಕಾಣುತ್ತವೆ. ಜಿಲ್ಲೆಯಲ್ಲಿ ವಾರ್ಷಿಕ ಸರಾಸರಿ ಮಳೆ ೫೧೮ ಮಿ.ಮೀ. ಆಗುತ್ತದೆ. ಕಳೆದ ೩೭ ವರ್ಷಗಳಿಂದಲೂ ಮಳೆ ಪ್ರಮಾಣವು ೪೦೦ ಮಿ.ಮೀ.ಗಳಿಂದ ೭೦೦ ಮಿ.ಮೀ.ಗಳಷ್ಟು ಆಗಿದೆ. ಆಗಾಗ ಬಂಗಾಳ ಕೊಲ್ಲಿಯಿಂದ ಬೀಸುವ ಚಂಡಮಾರುತದ ಪರಿಣಾಮದಿಂದ ಅದರಲ್ಲೂ ಅಕ್ಟೋಬರ್ ನವ್ಹೆಂಬರ್ ತಿಂಗಳಲ್ಲಿ ಅತಿಹೆಚ್ಚು ಬಿರುಸಾದ ಮಳೆಗಾಳಿ ಆಗುತ್ತದೆ.

ಬಳ್ಳಾರಿ ಜಿಲ್ಲೆಯು ಪ್ರಮುಖವಾಗಿ ವ್ಯವಸಾಯಕ್ಕೆ ಪ್ರಧಾನವಾಗಿದ್ದರೂ ಕಬ್ಬಿಣ ಮತ್ತು ಮ್ಯಾಂಗನೀಸ್ ಖನಿಜಗಳಿಂದ ಹಾಗೂ ಕೈಗಾರಿಕೆ ಬೆಳವಣಿಗೆಯಿಂದ ಹೆಸರುವಾಸಿಯಾಗಿದೆ. ಜಿಲ್ಲೆಯಲ್ಲಿ ಲೋಹ ಮತ್ತು ಲೋಹೇತರ ಖನಿಜಗಳು ಲಭ್ಯವಿದೆ. "ಇತ್ತೀಚೆಗೆ ನಡೆಸಿದ ಅಧ್ಯಯನಗಳ ಪ್ರಕಾರ ಜಿಲ್ಲೆಯ ಕಬ್ಬಿಣದ ಅದಿರಿನ ನಿಕ್ಷೇಪ ಪ್ರಮಾಣ ೧೮.೮೧ ದಶಲಕ್ಷ ಟನ್‌ಗಳೆಂದು ಅಂದಾಜಿಸಲಾಗಿದೆ. ೧೯೭೬ ರಿಂದ ೧೯೯೧ರವರೆಗಿನ ಅವಧಿಯಲ್ಲಿ ವಾರ್ಷಿಕ ಕಬ್ಬಿಣ ಅದಿರಿನ ಉತ್ಪತ್ತಿ ಸರಾಸರಿ ೨.೭೫ ರಿಂದ ೪.೫ ದಶಲಕ್ಷ ಟನ್ ಮತ್ತು ಮ್ಯಾಂಗನೀಸ್ ಖನಿಜ ೧೩ ರಿಂದ ೫೦ ಲಕ್ಷಟನ್ ಎಂದು ತಿಳಿದು ಬರುತ್ತದೆ" (ಶೇಷಾದ್ರಿ:೧೯೯೮:೧). ಇಲ್ಲಿಯ ಉತ್ಪಾದನೆಯಾದ ಕಬ್ಬಿಣ ಅದಿರು ಪ್ರಮಾಣದಲ್ಲಿ ಅರ್ಧಕ್ಕಿಂತ ಹೆಚ್ಚು ಭಾಗವು ವಿದೇಶಗಳಿಗೆ ರಫ್ತಾಗುತ್ತದೆ.

ಜಿಲ್ಲೆಯು ಕಪ್ಪು, ಕೆಂಪು, ಜೇಡು, ಕಲ್ಲುಮಿಶ್ರಿತ ಮಣ್ಣಿನಿಂದ ಕೂಡಿದೆ. ಇಲ್ಲಿ ನೀರಾವರಿ ಭೂಮಿಗಿಂತ ಮಳೆಯಾಧಾರಿತ ಭೂಮಿ ಹೆಚ್ಚಿನ ಸಂಖ್ಯೆಯಲ್ಲಿದೆ. ಮುಂಗಾರುನಲ್ಲಿ ಜೋಳ ಮತ್ತು ಭತ್ತ ಪ್ರಧಾನ ಬೆಳೆಗಳಾಗಿವೆ. ಜಿಲ್ಲೆಯಲ್ಲಿ ಭತ್ತ, ಜೋಳ, ನವಣೆ, ಸಜ್ಜೆ, ಹತ್ತಿ, ಶೇಂಗಾ, ಕಬ್ಬು, ಈರುಳ್ಳಿ, ತೋಗರಿ, ಹಲಸಂದಿ, ಉದ್ದು ಬೆಳೆಗಳನ್ನು ಬೆಳೆಯಲಾಗುತ್ತದೆ.

ವಾಯುಗುಣ : ಕರ್ನಾಟಕ ಉಷ್ಣವಲಯದಲ್ಲಿರುವ ರಾಜ್ಯ. ಸಾಮಾನ್ಯವಾಗಿ ಉಷ್ಣ ವಾಯುಗುಣವಿದೆ. ಮಾನ್ಸೂನ್ ಗಾಳಿಗಳು, ಭೂಮಿಯ ಮೇಲ್ಮೈ ಲಕ್ಷಣ, ಸಮುದ್ರದ ಸಾಮಿಪ್ಯ, ಸಮುದ್ರ ಮಟ್ಟದಿಂದ ಎತ್ತರ ಮುಂತಾದ ಅಂಶಗಳ ಪರಿಣಾಮವಾಗಿ ವಾಯುಗುಣವು ಸ್ಥಳದಿಂದ

ಸ್ಥಳಕ್ಕೆ, ಕಾಲದಿಂದ ಕಾಲಕ್ಕೆ ಭಿನ್ನವಾಗಿರುತ್ತದೆ. "ಕುರಿ ಸಂಗೋಪನೆ ಮತ್ತು ಅಲೆಮಾರಿ ಕುರುಬರ ಬದುಕು ವಾಯುಗುಣವನ್ನೇ ಅವಲಂಬಿಸಿದೆ. ಆ ಪ್ರದೇಶಗಳಲ್ಲಿ ಬೀಳುವ ಮಳೆ, ಬಿಸಿಲು, ಚಳಿ, ಗಾಳಿಗಳಿಂದ ಕುರಿ ಸಂಗೋಪನೆ ನಿರ್ಧಾರವಾಗುತ್ತದೆ. ಹೆಚ್ಚು ಮಳೆ ಬೀಳುವ ಹಾಗೂ ಶೀತ ವಾಯುಗುಣ ಹೊಂದಿರುವ ಅರಣ್ಯ ಪ್ರದೇಶ ಕುರಿ ಸಂಗೋಪನೆಗೆ ಯೋಗ್ಯವಲ್ಲ. ಒಣ ವಾತಾವರಣವಿರುವ ಹಾಗೂ ೫೪೫ ರಿಂದ ೭೦೦ ಮಿಲಿ ಮೀಟರ್ ಮಳೆ ಬೀಳುವ ಭೂ ಭಾಗಗಳು ಕುರಿ ಸಂಗೋಪನೆಗೆ ತುಂಬಾ ಉತ್ತಮವಾದದು" (ಎಂ.ಜಿ. ಗೋವಿಂದಯ್ಯ;ಜಗನ್ನಾಥ್:೨೦೦೫:೧). ಇದನ್ನು ಅರಿತಿರುವ ಅಲೆಮಾರಿ ಕುರುಬರು ವಾಯುಗುಣಕ್ಕೆ ಹೊಂದಿಕೊಂಡಂತೆ ಅಲೆದಾಡುತ್ತಾರೆ. ಕಡಿಮೆ ಮಳೆ ಬೀಳುವ ಹಾಗೂ ಒಣ ವಾತಾವರಣವಿರುವ ಭೂಪ್ರದೇಶಗಳಲ್ಲಿ ಅಲೆದಾಡಿ ಕುರಿ ಸಂಗೋಪನೆ ಮಾಡುತ್ತಾರೆ.

ಕರ್ನಾಟಕ ರಾಜ್ಯದ ಜಿಲ್ಲಾವಾರು ವಾಯುಗುಣ ಮತ್ತು ಮಳೆಯ ಪ್ರಮಾಣ ಅರಿಯುವ ಮೂಲಕ ಯಾವ ಜಿಲ್ಲೆಗಳು ಕುರಿ ಸಂಗೋಪನೆಗೆ ಯೋಗ್ಯ ಮತ್ತು ಯೋಗ್ಯವಲ್ಲವೆಂಬುದನ್ನು ತಿಳಿದುಕೊಳ್ಳಬಹುದು.

ಕೋಷ್ಟಕ ೩.೨ ಕರ್ನಾಟಕ ರಾಜ್ಯದ ಜಿಲ್ಲಾವಾರು ವಾಯುಗುಣ ಮತ್ತು ಮಳೆಯ ಪ್ರಮಾಣ

ಜಿಲ್ಲೆಗಳು	ವಾಯುಗುಣ	ವಾರ್ಷಿಕ ಮಳೆ
ಉಡುಪಿ	ಶುಷ್ಕ ಮತ್ತು ಅರ್ಧಹವೆ	೪,೧೧೯ ಮೀ.ಮಿ.
ದಕ್ಷಿಣ ಕನ್ನಡ	ಶುಷ್ಕ ಮತ್ತು ಅರ್ಧಹವೆ	೩೯೭೪ ಮೀ.ಮಿ.
ಕೊಡಗು	ಹೆಚ್ಚಾಗಿ ಶುಷ್ಕ ಮತ್ತು ಅರ್ಧಹವೆ	೨೭೧೮ ಮೀ.ಮಿ.
ಉತ್ತರ ಕನ್ನಡ	ಶುಷ್ಕ ಮತ್ತು ಅರ್ಧಹವೆ	೨೮೪೦ ಮೀ.ಮಿ.
ಚಿಕ್ಕಮಗಳೂರು	ಶುಷ್ಕಹವೆ	೧೯೨೮ ಮೀ.ಮಿ.
ಶಿವಮೊಗ್ಗ	ಶುಷ್ಕಹವೆ	೧೮೩೨ ಮೀ.ಮಿ.
ಹಾಸನ	ಹಿತಕರ	೧೦೩೯ ಮೀ.ಮಿ.
ಬೆಂಗಳೂರು (ನಗರ)	ಹಿತಕರ	೮೬೬ ಮೀ.ಮಿ.
ಬೀದರ	ಹಿತಕರ	೮೪೮ ಮೀ.ಮಿ.
ಬೆಂಗಳೂರು (ಗ್ರಾಮಂತರ)	ಹಿತಕರ	೮೧೬ ಮೀ.ಮಿ.
ಬೆಳಗಾವಿ	ತಂಪಾದ ಹವೆ	೮೦೯ ಮೀ.ಮಿ.
ಮೈಸೂರು	ಹೆಚ್ಚಾಗಿ ಶುಷ್ಕಹವೆ	೭೮೨ ಮೀ.ಮಿ.

ಗುಲಬರ್ಗಾ	ಒಣಹವೆ	೭೭೬ ಮೀ.ಮಿ.
ಚಾಮರಾಜನಗರ	ಹೆಚ್ಚಾಗಿ ಶುಷ್ಕಹವೆ	೭೫೧ ಮೀ.ಮಿ.
ಹಾವೇರಿ	ಹಿತಕರ ಹವೆ	೭೫೩ ಮೀ.ಮಿ.
ಕೋಲಾರ	ಶುಷ್ಕಹವೆ	೭೪೩ ಮೀ.ಮಿ.
ಧಾರವಾಡ	ಶುಷ್ಕಹವೆ	೭೧೭ ಮೀ.ಮಿ.
ಮಂಡ್ಯ	ಶುಷ್ಕಹವೆ	೭೧೦ ಮೀ.ಮಿ.
ತುಮಕೂರು	ಒಣ ಹಾಗೂ ಹಿತಕರ	೬೭೪ ಮೀ.ಮಿ.
ಬಳ್ಳಾರಿ	ಒಣಹವೆ	೬೩೪ ಮೀ.ಮಿ.
ದಾವಣಗೆರೆ	ಒಣ ಹಾಗು ಹಿತಕರ	೬೨೯ ಮೀ.ಮಿ.
ರಾಯಚೂರು	ಒಣ ಹಾಗು ಹಿತಕರ	೬೨೧ ಮೀ.ಮಿ.
ಗದಗ	ಹಿತಕರ ಹವೆ	೬೧೨ ಮೀ.ಮಿ.
ವಿಜಾಪುರ	ಉಷ್ಣಹವೆ	೫೮೯ ಮೀ.ಮಿ.
ಬಾಗಲಕೋಟೆ	ಉಷ್ಣಹವೆ	೫೬೧ ಮೀ.ಮಿ.
ಕೊಪ್ಪಳ	ಒಣಹವೆ	೫೬೯ ಮೀ.ಮಿ.
ಚಿತ್ರದುರ್ಗ	ಒಣ ಹಾಗು ಹಿತಕರ	೫೫೬ ಮೀ.ಮಿ.

ಆಧಾರ: ದಿಕ್ಸೂಚಿ ಪ್ರಕಾಶನ, ೨೦೦೬, ಸುವರ್ಣ ಕರ್ನಾಟಕ ದರ್ಶನ

ಕರ್ನಾಟಕದ ಉಡುಪಿ, ದಕ್ಷಿಣ ಕನ್ನಡ, ಕೊಡಗು, ಉತ್ತರ ಕನ್ನಡ, ಚಿಕ್ಕಮಗಳೂರು ಹಾಗೂ ಶಿವಮೊಗ್ಗ ಜಿಲ್ಲೆಗಳು ಕುರಿ ಸಾಕಣಿಕೆಗೆ ಅಷ್ಟೊಂದು ಯೋಗ್ಯವಲ್ಲ. ಕಾರಣ ಈ ಪ್ರದೇಶಗಳಲ್ಲಿ ಅತಿಹೆಚ್ಚು ಮಳೆ ಬೀಳುವುದರ ಜೊತೆಗೆ ಶುಷ್ಕ ಅಥವಾ ತಂಪಾದ ವಾತಾವರಣ ಇರುವುದು. ತುಮಕೂರು, ಬಳ್ಳಾರಿ, ದಾವಣಗೆರೆ, ರಾಯಚೂರು, ಗದಗ, ಬಿಜಾಪುರ, ಬಾಗಲಕೋಟೆ, ಕೊಪ್ಪಳ, ಚಿತ್ರದುರ್ಗ ಜಿಲ್ಲೆಗಳು ಕುರಿ ಸಾಕಣಿಕೆಗೆ ಯೋಗ್ಯವೆನಿಸಿವೆ. ಕಾರಣ ಮಳೆಯ ಪ್ರಮಾಣ ಕಡಿಮೆ ಇರುವುದರ ಜೊತೆಗೆ ಒಣ ವಾತಾವರಣವಿದೆ. ಇನ್ನು ಇತರೆ ಜಿಲ್ಲೆಗಳಲ್ಲಿ ಕುರಿ ಸಾಕಣಿಕೆಗೆ ಅನುಕೂಲವೆನ್ನುವುದಕ್ಕಿಂತ ಹೆಚ್ಚು ಸರಾಸರಿ ಮಳೆ ಇರುವುದು ಮೇಲಿನ ಪಟ್ಟಿಯಿಂದ ಗಮನಿಸಬಹುದು. ಇಂತಹ ಜಿಲ್ಲೆಗಳಲ್ಲಿ ಕುರಿ ಸಾಕಣೆ ಮಾಡುವವರು ಮಳೆಗಾಲದ ಅವಧಿಯಲ್ಲಿ ಗಟ್ಟಿ ಅಥವಾ ಗುಡ್ಡಗಾಡು ಪ್ರದೇಶಗಳಲ್ಲಿ ಅಲೆದಾಡಿ ಕುರಿ ಸಾಕಣಿಕೆ ಮಾಡುತ್ತಾರೆ. ಇಲ್ಲವಾದರೆ ಮಳೆ ಕಡಿಮೆ ಯಾಗುವ ಹಾಗೂ ಒಣ ವಾತಾವರಣವಿರುವ ಜಿಲ್ಲೆಗಳಿಗೆ ವಲಸೆ ಹೋಗಿ ಕುರಿಸಂಗೋಪನೆ

ಮಾಡುವುದನ್ನು ಕಾಣುತ್ತೇವೆ. ಒಟ್ಟಾರೆಯಾಗಿ ಕುರಿ ಸಂಗೋಪನೆಯು ಮಳೆ ಮತ್ತು ವಾತಾವರಣವನ್ನು ಅವಲಂಬಿಸಿರುತ್ತದೆ.

ಅಲೆಮಾರಿ ಕುರುಬರು ಬಳ್ಳಾರಿ, ರಾಯಚೂರು, ಕೊಪ್ಪಳ, ಗದಗ, ಹಾವೇರಿ, ಧಾರವಾಡ, ದಾವಣಗೆರೆ, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳ ಭೂ ಪ್ರದೇಶಗಳಲ್ಲಿ ಅಲೆದಾಡುತ್ತಾ ಕುರಿ ಸಂಗೋಪನೆ ಮಾಡುತ್ತಾರೆ. ಮಳೆಗಾಲದ ಅವಧಿಯಲ್ಲಿ ಕಡಿಮೆ ಮಳೆ ಬೀಳುವ ಹಾಗೂ ಗುಡ್ಡಗಾಡು ಪ್ರದೇಶಗಳಲ್ಲಿ ಕುರಿಸಂಗೋಪನೆ ಮಾಡಿದರೆ ಮಳೆಗಾಲದ ನಂತರ ಹೊಲ-ಗದ್ದೆಗಳಲ್ಲಿ ಅಲೆದಾಡಿ ಕುರಿಸಂಗೋಪಾನೆ ಮಾಡುತ್ತಾರೆ.

ಕೋಷ್ಟಕ ೩.೩ ಜಿಲ್ಲಾವಾರು ಕುರಿ-ಮೇಕೆಗಳ ಅಂಕಿ-ಸಂಖ್ಯೆ - ೨೦೦೩ (ಜಾನುವಾರು ಗಣತಿ)

ಕ್ರ. ಸಂ.	ಜಿಲ್ಲೆಗಳು	ಕುರಿ ತಳಿಗಳು				ಮೇಕೆತಳಿ
		ಮಿಶ್ರತಳಿ	ವಿದೇಶಿ ತಳಿ	ಸ್ಥಳೀಯ ತಳಿ	ಒಟ್ಟು	
೧	ಬೆಂಗಳೂರು (ಗ್ರಾಮಂತರ)	೪೪೪೫	೨೪೨	೬೮೨೦೩	೭೨೮೯೦	೩೧೪೪೯
೨	ಬೆಂಗಳೂರು (ನಗರ)	೩೯೩೧	೧೮೬	೨೬೯೧೫೬	೨೭೩೨೭೩	೧೬೯೭೧೨
೩	ಬೆಳಗಾವಿ	--	--	೯೧೦೬೩೬	೯೧೦೬೩೬	೫೧೮೯೧೩
೪	ಬಳ್ಳಾರಿ	೩೫೬	--	೩೯೫೦೨೯	೩೯೫೩೮೫	೨೨೧೮೨೭
೫	ಬೀದರ			೬೬೦೯೪	೬೬೦೯೪	೧೩೧೨೪೮
೬	ಬಿಜಾಪುರ			೨೭೫೪೬೬	೨೭೫೪೬೬	೩೨೨೭೯೧
೭	ಚಿಕ್ಕಮಗಳೂರು	೨೧	೧೮	೬೨೯೫೨	೬೨೯೯೧	೪೭೯೫೩
೮	ಚಿತ್ರದುರ್ಗ		೫೨೦	೭೧೩೫೮೧	೭೧೪೧೦೧	೨೨೧೩೫೪
೯	ದಕ್ಷಿಣ ಕನ್ನಡ	೩		೪೧೧	೪೧೪	೧೭೧೬೧
೧೦	ಧಾರವಾಡ	೨೨೯		೩೩೬೭೬	೩೩೯೦೫	೬೦೫೨೮
೧೧	ಗುಲಬರ್ಗಾ	೭೫೭		೪೫೮೧೯೪	೪೫೮೯೫೧	೫೬೩೦೩೮
೧೨	ಹಾಸನ	೭	೪	೧೫೪೯೬೦	೧೫೪೯೭೧	೧೦೦೩೨೫
೧೩	ಕೊಡಗು	೩		೪೧೩	೪೧೬	೪೪೭೨
೧೪	ಕೋಲಾರ	೭೭೪	೪೮೨	೬೧೧೬೬೯	೬೧೨೯೨೫	೧೮೩೮೮೮

೧೫	ಮಂಡ್ಯ	೩೮		೩೫೦೭೪೦	೩೫೦೭೭೮	೨೦೯೮೭೫
೧೬	ಮೈಸೂರು	೨೦೭	೧೬	೨೦೦೨೩೨	೨೦೦೪೫೫	೧೬೦೭೪೨
೧೭	ರಾಯಚೂರು			೩೮೧೪೩೮	೩೮೧೪೩೮	೨೭೬೦೯೩
೧೮	ಶಿವಮೊಗ್ಗ	೩೧		೧೪೦೮೨	೧೪೧೧೩	೬೦೦೦೪
೧೯	ತುಮಕೂರು	೯	೨೯	೮೮೪೬೪೩	೮೮೪೬೮೧	೩೨೨೩೦೨
೨೦	ಉತ್ತರ ಕನ್ನಡ	೧೪	೪	೧೭೪೭೮	೧೭೪೯೬	೧೩೫೭೯
೨೧	ಬಾಗಲಕೋಟೆ			೪೦೮೯೮೪	೪೦೮೯೮೪	೨೬೭೦೨೨
೨೨	ಚಾಮರಾಜನಗರ			೧೧೭೪೯೫	೧೧೭೪೯೫	೧೦೬೩೪೨
೨೩	ದಾವಣಗೆರೆ	೧೦೫	೧೫	೨೦೫೨೨೮	೨೦೫೩೪೮	೧೧೩೩೮೯
೨೪	ಗದಗ			೨೦೯೫೫೬	೨೦೯೫೫೬	೧೦೧೧೯೭
೨೫	ಹಾವೇರಿ	೯೯	೩	೧೯೮೭೭೧	೧೯೮೮೭೩	೧೨೮೮೪೧
೨೬	ಕೊಪ್ಪಳ	೨೦		೨೫೦೫೮೧	೨೫೦೬೦೧	೧೩೫೪೨೧
೨೭	ಉಡುಪಿ			೫	೫	೨೦೦೭
ರಾಜ್ಯದ ಒಟ್ಟು		೧೧೦೪೯	೧೫೧೯	೭೨೫೯೬೭೩	೭೨೭೨೨೪೧	೪೪೯೧೪೭೩

ಆಧಾರ: *Estimation Report - Department of Animal Husbandary and Veterinary services, Bangalore, 2006*

ಮೇಲಿನ ಅಂಕಿ-ಸಂಖ್ಯೆಗಳ ಪ್ರಕಾರ ೨೦೦೩ನೇ ಸಾಲಿನ ಜಾನುವಾರು ಗಣತಿಯ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ೭೨.೭೨ ಲಕ್ಷ ಕುರಿಗಳು ಮತ್ತು ೪೪.೯೧ ಲಕ್ಷ ಮೇಕೆಗಳಿವೆ. ಕರ್ನಾಟಕದಲ್ಲಿರುವ ೨೭ ಜಿಲ್ಲೆಗಳಲ್ಲಿ ೯.೦೧ ಲಕ್ಷ ಕುರಿಗಳನ್ನು ಹೊಂದಿರುವ ಬೆಳಗಾಂ ಜಿಲ್ಲೆ ಪ್ರಥಮ ಸ್ಥಾನದಲ್ಲಿದ್ದು, ತುಮಕೂರು ೮.೮೪ ಲಕ್ಷ, ಚಿತ್ರದುರ್ಗ ೭.೧೪ ಲಕ್ಷ ಮತ್ತು ಕೋಲಾರ ೬.೧೨ ಲಕ್ಷ ಸಂಖ್ಯೆ ಹೊಂದಿದ್ದು, ಕ್ರಮವಾಗಿ ನಂತರದ ಸ್ಥಾನಗಳನ್ನು ಪಡೆದಿವೆ.

ಕರ್ನಾಟಕದ ಕರಾವಳಿ (ಉಡುಪಿ) ಮತ್ತು ಮಲೆನಾಡು (ಕೊಡಗು) ಪ್ರದೇಶಗಳಲ್ಲಿ ಕುರಿಗಳ ಸಾಂದ್ರತೆ ಹಾಗೂ ಸಂಖ್ಯೆ ಅತ್ಯಂತ ವಿರಳವಾಗಿದೆ. ರಾಜ್ಯದಲ್ಲಿ ಒಟ್ಟು ೪೪.೯೧ ಲಕ್ಷ ಮೇಕೆಗಳಿದ್ದು ೫.೬೩ ಲಕ್ಷಗಳನ್ನು ಹೊಂದಿರುವ ಗುಲಬರ್ಗಾ ಮೊದಲ ಸ್ಥಾನದಲ್ಲಿದೆ. ಬೆಳಗಾವಿ ೫.೧೮ ಲಕ್ಷ, ಬಿಜಾಪುರ ೩.೨೨ ಲಕ್ಷ ಮತ್ತು ತುಮಕೂರು ೩.೨೨ ಲಕ್ಷ ಸಂಖ್ಯೆ ಹೊಂದಿದ್ದು ಕ್ರಮವಾಗಿ ನಂತರದ ಸ್ಥಾನಗಳನ್ನು ಪಡೆದಿವೆ. ಕರ್ನಾಟಕ ಕರಾವಳಿ (ಉಡುಪಿ) ಮತ್ತು ಮಲೆನಾಡು (ಕೊಡಗು)

ಕ್ರಮವಾಗಿ ೨೦೦೭ ಮತ್ತು ೪೪೭೨ ಸಂಖ್ಯೆಯನ್ನು ಹೊಂದಿದ್ದು, ಕುರಿಗಳ ಸಾಂದ್ರತೆ ಮತ್ತು ಸಂಖ್ಯೆ ವಿರಳವಾಗಿದೆ.

ಕೋಷ್ಟಕ ೩.೪ ಕರ್ನಾಟಕ ರಾಜ್ಯದ ಜಿಲ್ಲಾವಾರು ಕುರಿ-ಮೇಕೆಗಳ ಸಾಂದ್ರತೆ ೨೦೦೩

ಸಂ.	ಜಿಲ್ಲೆಗಳು	ಕುರಿಸಾಂದ್ರತೆ	ಮೇಕೆಸಾಂದ್ರತೆ	ಕುರಿ-ಮೇಕೆಗಳ ಒಟ್ಟುಸಾಂದ್ರತೆ
೧	ಬೆಂಗಳೂರು ಗ್ರಾಮಾಂತರ	೩೩.೫	೧೪.೫	೪೮
೨	ಬೆಂಗಳೂರು ನಗರ	೪೬.೬	೨೮.೯	೭೫.೫
೩	ಬೆಳಗಾವಿ	೬೭.೭	೩೮.೬	೧೦೬.೩
೪	ಬಳ್ಳಾರಿ	೪೮.೬	೨೭.೩	೭೫.೯
೫	ಬೀದರ	೧೨.೧	೨೪.೩	೩೬.೪
೬	ಬಿಜಾಪುರ	೨೬.೧	೩೦.೬	೫೬.೭
೭	ಚಿಕ್ಕಮಗಳೂರು	೮.೭	೦೬.೬	೧೫.೩
೮	ಚಿತ್ರದುರ್ಗ	೯೨.೬	೨೮.೭	೧೨೧.೩
೯	ದಕ್ಷಿಣ ಕನ್ನಡ	೦.೦೮	೦೩.೬	೦೩.೬೮
೧೦	ಧಾರವಾಡ	೭.೯	೧೪.೨	೨೨.೧
೧೧	ಗುಲಬರ್ಗಾ	೨೮.೫	೩೪.೯	೬೩.೪
೧೨	ಹಾಸನ	೨೩.೩	೧೫.೧	೩೮.೪
೧೩	ಕೊಡಗು	೦.೧	೧.೧	೧.೨
೧೪	ಕೋಲಾರ	೭೮.೬	೨೩.೬	೧೦೨.೨
೧೫	ಮಂಡ್ಯ	೭೦.೪	೪೨.೧	೧೧೨.೫
೧೬	ಮೈಸೂರು	೨೯.೬	೨೩.೮	೫೩.೪
೧೭	ರಾಯಚೂರು	೪೫.೬	೩೩.೧	೭೮.೭
೧೮	ಶಿವಮೊಗ್ಗ	೧.೬	೭.೧	೮.೭
೧೯	ತುಮಕೂರು	೮೩.೦	೩೦.೩	೧೧೩.೩
೨೦	ಉತ್ತರ ಕನ್ನಡ	೧.೭	೧.೩	೩೦.

೨೧	ಬಾಗಲಕೋಟೆ	೬೨.೦	೪೦.೫	೧೦೨.೫
೨೨	ಚಾಮರಾಜನಗರ	೨೦.೬	೧೮.೭	೩೯.೩
೨೩	ದಾವಣಗೆರೆ	೩೪.೩	೧೮.೯	೫೩.೩
೨೪	ಗದಗ	೪೪.೯	೨೧.೭	೬೬.೬
೨೫	ಹಾವೇರಿ	೪೦.೯	೨೬.೬	೬೭.೫
೨೬	ಕೊಪ್ಪಳ	೪೫.೩	೨೫.೯	೭೧.೨
೨೭	ಉಡುಪಿ	೦.೦೦೧೪	೦.೭	೦.೭೧
ಒಟ್ಟು ಕರ್ನಾಟಕ ರಾಜ್ಯ		**೩೮.೧**	**೨೩.೬**	**೬೧.೭**

* *ಕರ್ನಾಟಕ ರಾಜ್ಯದಲ್ಲಿ ಒಬ್ಬ ವ್ಯಕ್ತಿಗೆ ಸರಾಸರಿಯಾಗಿ ೦.೧೩ ಕುರಿ-ಮೇಕೆಗಳು ಬರುತ್ತವೆ.*

ಆಧಾರ: Estimation Report - Department of Animal Husbandary and Veterinary services, Bangalore, 2006

ಕೊಡಗು, ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು ಕ್ರಮವಾಗಿ ೧.೨, ೩.೦ ಮತ್ತು ೩.೬೮ ರಷ್ಟು ಕುರಿ-ಮೇಕೆ ಸಾಂದ್ರತೆಯನ್ನು ಹೊಂದಿದ್ದು ರಾಜ್ಯದಲ್ಲಿಯೆ ಕಡಿಮೆ ಸಾಂದ್ರತೆ ಹೊಂದಿದ ಜಿಲ್ಲೆಗಳಾಗಿವೆ ಎಂದು ಈ ಮೇಲಿನ ಪಟ್ಟಿಯಿಂದ ವ್ಯಕ್ತವಾಗುತ್ತದೆ. ಚಿತ್ರದುರ್ಗ, ತುಮಕೂರು, ಮಂಡ್ಯ ಮತ್ತು ಬೆಳಗಾಂ ಜಿಲ್ಲೆಗಳು ಕ್ರಮವಾಗಿ ೧೨೧.೩, ೧೧೩.೩, ೧೧೨.೫ ಮತ್ತು ೧೦೬ ರಷ್ಟು, ಕುರಿ-ಮೇಕೆಗಳ ಸಾಂದ್ರತೆಯನ್ನು ಹೊಂದಿ ರಾಜ್ಯದಲ್ಲಿ ಹೆಚ್ಚು ಸಾಂದ್ರತೆ ಹೊಂದಿದ ಜಿಲ್ಲೆಗಳಾಗಿವೆ. ರಾಜ್ಯದಲ್ಲಿಯ ಕುರಿ ಸಾಂದ್ರತೆಯು ೩೮.೧ರಷ್ಟಿದ್ದರೆ, ಮೇಕೆ ಸಾಂದ್ರತೆಯು ೨೩.೬ರಷ್ಟು ಇದೆ. ಒಟ್ಟಾರೆಯಾಗಿ ಕುರಿ ಮೇಕೆಗಳ ಸಾಂದ್ರತೆ ೬೧.೭ರಷ್ಟು ಇದ್ದು ರಾಜ್ಯದ ಜನಸಂಖ್ಯೆಗೆ ಲೆಕ್ಕಹಾಕಿದಾಗ ಸರಾಸರಿಯಾಗಿ ಒಬ್ಬ ವ್ಯಕ್ತಿಗೆ ೦.೧೩ರಷ್ಟು ಕುರಿ ಮೇಕೆಗಳು ಇವೆ.

೩.೫.೧. ಕುರಿ ತಳಿಗಳು

i) ಡೆಕ್ಕನಿ ತಳಿ (Deccani)

ಮೂಲ ಮತ್ತು ಹಂಚಿಕೆ: "ಈ ತಳಿಯನ್ನು ಹೆಚ್ಚಾಗಿ ದಕ್ಷಿಣ ಪ್ರಸ್ಥಭೂಮಿಯಲ್ಲಿ ಸಾಕಲ್ಪಡುವುದರಿಂದ 'ಡೆಕ್ಕನಿ' ಎಂದು ಹೆಸರಿಡಲಾಗಿದೆ" (ಪ್ರೊಫೈಲ್ 'ರೈತರ ಭಾಗ್ಯಕ್ಕೆ':ಕುರಿ-ಮೇಕೆ ಸಂಗೋಪನೆ:೨). ಈ ತಳಿಯನ್ನು ಬೆಳಗಾವಿ, ಬಿಜಾಪುರ, ಬಾಗಲಕೋಟೆ, ಧಾರವಾಡ, ಹಾವೇರಿ, ಗದಗ, ರಾಯಚೂರು, ಗುಲಬರ್ಗಾ ಮತ್ತು ಬೀದರ ಜಿಲ್ಲೆಯ ಕೆಲವು ಭಾಗಗಳಲ್ಲಿ ಹೆಚ್ಚಾಗಿ ಸಾಕಣೆ ಮಾಡಲಾಗುತ್ತದೆ.



ಲಕ್ಷಣಗಳು : ಈ ತಳಿಯು ಮಧ್ಯಮ ಗಾತ್ರದ ಕುರಿಯಾಗಿದ್ದು ಮೈಬಣ್ಣದಲ್ಲಿ ಬಹಳ ವೈವಿಧ್ಯತೆ ಕಂಡು ಬರುತ್ತದೆ. ಮೈಬಣ್ಣ ಕಪ್ಪು ಬಣ್ಣದ್ದು, ಅಲ್ಲಲ್ಲಿ ಬಿಳಿ ಮಚ್ಚೆಗಳಿಂದ ಮತ್ತು ಕಂದು ಬಣ್ಣಗಳಿಂದ ಕೂಡಿರುತ್ತದೆ. ತಲೆ, ಎದೆ, ಹೊಟ್ಟೆಯ ಮೇಲೆ ಮತ್ತು ಕಾಲುಗಳ ಮೇಲೆ ಉಣ್ಣೆ ಬೆಳೆದಿರುವುದಿಲ್ಲ. ಇವುಗಳ ಮೂಗು ನೀಟಾಗಿ ಮೇಲಕ್ಕೆ ಎದ್ದು ನಿಂತು, ತುದಿಯಲ್ಲಿ ಸ್ವಲ್ಪ ಬಾಗಿರುತ್ತದೆ. ಇದಕ್ಕೆ ರೋಮನ್ ಮೂಗು ಎಂದು ಕರೆಯುತ್ತಾರೆ. ಮುಖದ ಮೇಲೆ ಹೊಳಪಿನಿಂದ ಕೂಡಿದ ಕಪ್ಪು ಬಣ್ಣದ ಸಣ್ಣ ಸಣ್ಣ ಕೂದಲುಗಳು ಬೆಳೆದಿರುತ್ತವೆ. ಕಣ್ಣುಗಳು ಕಾಂತಿಯುಕ್ತವಾಗಿರುತ್ತವೆ. ಕಿವಿಗಳು ಸ್ವಲ್ಪ ಉದ್ದವಾಗಿದ್ದು ನೇತಾಡುತ್ತವೆ. ಟಗರುಗಳಿಗೆ ಕೊಂಬುಗಳಿದ್ದು, ಸುರುಳಿ-ಸುರುಳಿಯಾಗಿ ತಿರುಗಿಕೊಂಡು, ಹೊರಭಾಗಕ್ಕೆ ಸ್ವಲ್ಪ ಬಾಗಿಕೊಂಡಿರುತ್ತವೆ. ಕುರಿಗಳಿಗೆ ಕೊಂಬುಗಳಿರುವುದಿಲ್ಲ. ಕಾಲಿನ ಗೊರಚು ಕಪ್ಪಾಗಿರುತ್ತದೆ. ಕುತ್ತಿಗೆ ಗಿಡ್ಡಾಗಿದ್ದು ತಲೆಯು ಸ್ವಲ್ಪ ಮೇಲಕ್ಕೆ ಎದ್ದಿರುತ್ತದೆ.

ಉತ್ಪಾದನೆ : ಇದು ಉಣ್ಣೆ ಮತ್ತು ಮಾಂಸ ನೀಡುವ ದ್ವಿ-ಉಪಯೋಗಿ ತಳಿಯಾಗಿದ್ದು ಇದರ ಉಣ್ಣೆಯನ್ನು ವರ್ಷದಲ್ಲಿ ಎರಡು ಬಾರಿ ಅಂದರೆ ಮೇ ಮತ್ತು ನವ್ಹಂಬರ್ ತಿಂಗಳಲ್ಲಿ ಕತ್ತರಿಸಲಾಗುತ್ತದೆ. ವಾರ್ಷಿಕವಾಗಿ ೦.೫ ಕೆ.ಜಿ.ಯಿಂದ ೦.೭ ಕೆ.ಜಿ.ಯವರೆಗೆ ಉಣ್ಣೆಯನ್ನು ಪಡೆಯಲಾಗುತ್ತದೆ. ದಕ್ಷಿಣ ಭಾರತದ ಇತರೆ ಕುರಿಗಳಿಗೆ ಹೋಲಿಕೆ ಮಾಡಿದಾಗ ಈ ಕುರಿಗಳಿಂದಲೇ ಉತ್ತಮ ಉಣ್ಣೆ ದೊರೆಯುವುದು ತಿಳಿದು ಬರುತ್ತದೆ. ಇವುಗಳ ಉಣ್ಣೆಯಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಉತ್ತಮ ಮಟ್ಟದ ಹಾಸುಗಂಬಳಿ, ಮಫ್ಲರ್ ಹಾಗೂ ಟೋಪಿ ಮತ್ತು ಇತರೆ ಉಣ್ಣೆ ಉತ್ಪನ್ನಗಳನ್ನು ತಯಾರು ಮಾಡಲಾಗುತ್ತದೆ. ಇವು ತೂಕದಲ್ಲಿ ಕಡಿಮೆ ಇರುವುದರಿಂದ ಒಂದು ಕುರಿಯ ಮಾಂಸವು ೧೦ ರಿಂದ ೧೪ ಕೆ.ಜಿ. ಮಾತ್ರ ಇರುತ್ತದೆ. ಡ್ರೆಸ್ಡ್‌ಕ್ಯಾರಕಸ್ (ಚರ್ಮ ಸುಲಿದು ಉಳಿದ ಮಾಂಸ) ಶೇ. ೪೫ ರಷ್ಟು ಮಾಂಸವಿರುತ್ತದೆ. ವಯಸ್ಕ ಟಗರು ೩೦ ಕೆ.ಜಿ.ಯಿಂದ ೪೦ ಕೆ.ಜಿ.ಯವರೆಗೆ ತೂಕವಿದ್ದರೆ, ಹೆಣ್ಣು ಕುರಿಯು ಸುಮಾರು ೩೦ ಕೆ.ಜಿ. ತೂಗುತ್ತದೆ.

ಅಲೆಮಾರಿ ಕುರುಬರು 'ಡೆಕ್ಕನಿ' ತಳಿಯ ಕುರಿಗಳನ್ನು ಸಾಕುತ್ತಾರೆ. ಇವು ಒರಟಾಗಿರುವುದರ ಜೊತೆಗೆ ಶಾರೀರಕವಾಗಿ ಗಟ್ಟಿಯಾಗಿವೆ. ಎತ್ತರಪ್ರದೇಶ (ಬೆಟ್ಟ-ಗುಡ್ಡ) ಏರಿ ಮೇಯಲು ಅಥವಾ ಬಹಳ ದೂರ ಸಾಗಿ ಹುಲ್ಲುಗಾವಲು ಅಥವಾ ಅಡವಿಯಲ್ಲಿ ಮೇಯಲು ಆಯಾಸ ಪಡುವುದಿಲ್ಲ. ಬಿಸಿಲಿನ ತಾಪ ಹಾಗೂ ಚಳಿಯನ್ನು ಸಹಿಸಿಕೊಳ್ಳುವ ಸಾಮಾರ್ಥ್ಯವನ್ನು ಹೊಂದಿವೆ. ಇವು ಅವರ ಬದುಕಿಗೂ ವಾತಾವರಣಕ್ಕೂ ಹೊಂದಿಕೊಳ್ಳುವ ಕುರಿಗಳಾಗಿವೆ. ಧಾರವಾಡ, ಹಾವೇರಿ, ದಾವಣಗೆರೆ,



ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಅಲೆದಾಡುವ ಅಲೆಮಾರಿ ಕುರುಬರು ಈ ತಳಿಯ ಕುರಿಗಳನ್ನು ಸಾಕುತ್ತಾರೆ.

ii) ಬಳ್ಳಾರಿ ತಳಿ (Bellary)

ಮೂಲ ಮತ್ತು ಹಂಚಿಕೆ : ಈ ತಳಿಯ ಕುರಿಗಳು ಬಳ್ಳಾರಿ, ರಾಯಚೂರು, ಧಾರವಾಡ, ಕೊಪ್ಪಳ ಮತ್ತು ಚಿತ್ರದುರ್ಗ ಹಾಗೂ ಕರ್ನಾಟಕ ಗಡಿ ಭಾಗವಾದ ಆಂಧ್ರಪ್ರದೇಶದ ಕರ್ನೂಲು ಜಿಲ್ಲೆಯ ಕೆಲವು ಭಾಗಗಳಲ್ಲಿ ಯಥೇಚ್ಛವಾಗಿ ಕಂಡುಬರುತ್ತದೆ. ವಿಶೇಷವಾಗಿ ಈ ತಳಿಯನ್ನು ಬಳ್ಳಾರಿ ಜಿಲ್ಲೆಯಲ್ಲಿ ಹೆಚ್ಚಾಗಿ ಸಾಕುವುದರಿಂದ ಇದನ್ನು ಬಳ್ಳಾರಿ ತಳಿ ಎಂದು ಕರೆಯಲಾಗಿದೆ.

ಲಕ್ಷಣಗಳು : "ಈ ತಳಿಯು ಅನುವಂಶೀಯ ಗುಣ ವಿಶೇಷತೆಯಲ್ಲಿ ಹೆಚ್ಚಾಗಿ ಡೆಕ್ಕನಿ ತಳಿಯನ್ನು ಹೋಲುತ್ತದೆ. ಇದು ಡೆಕ್ಕನಿ ತಳಿಯ ಮತ್ತೊಂದು ಪ್ರಭೇದವೆಂದು ತಿಳಿಯಬಹುದು. ಬಹುತೇಕ ಕುರಿಗಳು ಕಪ್ಪು ಬಣ್ಣದ್ದಾಗಿದ್ದು ಮುಖ ಮತ್ತು ದೇಹ ಕಪ್ಪು ಬಣ್ಣದಿಂದ ಕೂಡಿರುತ್ತವೆ" (ಎಂ.ಜಿ. ಗೋವಿಂದಯ್ಯ;ಜಗನ್ನಾಥ್:೨೦೦೫:೧). ಕಾಲುಗಳು ಡೆಕ್ಕನಿ ಕುರಿಗಳಿಗಿಂತ ಉದ್ದವಾಗಿ ಎತ್ತರ ವಾಗಿರುತ್ತವೆ. ಕಣ್ಣುಗುಡ್ಡೆ ಉಬ್ಬಿಕೊಂಡು ಮುಂದಕ್ಕೆ ಚಾಚಿಕೊಂಡಿರುತ್ತದೆ. ಕಿವಿಗಳು ಉದ್ದವಾಗಿದ್ದು ಜೋಲು ಬಿದ್ದಿರುತ್ತವೆ. ಮುಖ ಮತ್ತು ಕಿವಿಗಳ ಮೇಲೆ ಸಣ್ಣದಾದ ಮಿಂಚಿನಿಂದ ಕೂಡಿದ ಕೂದಲುಗಳು ಬೆಳೆ ದಿರುತ್ತವೆ. "ಬಹಳಷ್ಟು ಟಗರುಗಳಿಗೆ ಕೊಂಬುಗಳಿದ್ದು ಸುರುಳಿಯಾಗಿ ಸುತ್ತಿಕೊಂಡಿದ್ದರೆ ಕೆಲವಕ್ಕೆ ಕೊಂಬುಗಳು ಇರುವುದಿಲ್ಲ" (ರಾಮರಾವ್ ಜ್ಯೋತಿ: ೧೯೯೩:೪೪). ದೇಹವು ಸಾಧರಣವಾಗಿ ಉದ್ದವಾಗಿದ್ದು ಬಾಲ ಗಿಡ್ಡದಾಗಿರುತ್ತದೆ. ಇವು ೧ ರಿಂದ ೧ ೧/೨ ವರ್ಷ ವಯಸ್ಸಿನ ಅವಧಿಯೊಳಗೆ ಮರಿ ಹಾಕುತ್ತವೆ. ಎರಡು ವರ್ಷಕ್ಕೆ ದೇಹದ ಬೆಳೆವಣಿಗೆ ಸಂಪೂರ್ಣವಾಗುತ್ತದೆ. ಇವು ತಮ್ಮ ಮೂಲ (ಸ್ವಂತ) ಸ್ಥಳಗಳಲ್ಲಿ ಮಾತ್ರ ಚೆನ್ನಾಗಿ ಬೆಳೆವಣಿಗೆ ಯಾಗುತ್ತವೆ. ಒಂದು ವೇಳೆ ಬಳ್ಳಾರಿ ಸುತ್ತಮುತ್ತಲಿನ ಜಿಲ್ಲೆಗಳನ್ನು ಬಿಟ್ಟು ಬೇರೆ ಸ್ಥಳಗಳಲ್ಲಿ ಸಂಗೋಪನೆ ಮಾಡಿದರೆ ಇವುಗಳ ಬೆಳವಣಿಗೆ ಅಷ್ಟು ಸಮಂಜಸವಾಗಿ ನಡೆದಿರುವುದು ಕಂಡುಬಂದಿಲ್ಲ.



ಉತ್ಪಾದನೆ : ಇದು ಕೂಡ ಉಣ್ಣೆ ಮತ್ತು ಮಾಂಸ ನೀಡುವ ದ್ವಿ-ಉಪಯೋಗಿ ತಳಿಯಾಗಿದೆ. "ಸಾಮಾನ್ಯವಾಗಿ ವರ್ಷಕ್ಕೆ ಎರಡು ಸಲದಂತೆ ಜೂನ್ ಮತ್ತು ಡಿಸೆಂಬರ್ ತಿಂಗಳುಗಳಲ್ಲಿ ಉಣ್ಣೆ ದೊರಕುತ್ತದೆ. ಜೂನ್ ತಿಂಗಳಲ್ಲಿ ಕತ್ತರಿಸುವ ಉಣ್ಣೆಯ ಪ್ರಮಾಣ ಹೆಚ್ಚು ಉದ್ದವಾಗಿರುತ್ತದೆ.

ಈ ಅವಧಿಯಲ್ಲಿ ಕುರಿಗಳಿಗೆ ರೋಗ-ರುಜಿನಗಳು ಕಡಿಮೆ ಇರುವುದರ ಜೊತೆಗೆ ಮೇವು ಹೆಚ್ಚು ದೊರೆಯುವುದರಿಂದ ಉಣ್ಣೆ ಹುಲುಸಾಗಿ ಬೆಳೆಯುತ್ತದೆ" (ಮಾಹಿತಿದಾರ: ಲಿಂಗಪ್ಪ ಸಾವಿರಕುರಿ). ಇವು ವಾರ್ಷಿಕವಾಗಿ ೦.೬ ಕೆ.ಜಿ.ಯಿಂದ ೦.೭ ಕೆ.ಜಿ.ಯವರೆಗೆ ಉಣ್ಣೆ ನೀಡುತ್ತವೆ. ಈ ತಳಿಯಿಂದ ಬರುವ ಉಣ್ಣೆಯು ಒರಟಾಗಿದ್ದು ಕಡಿಮೆ ದರ್ಜೆಯದಾಗಿದೆ. ಇಂತಹ ಉಣ್ಣೆಯಿಂದ ಒರಟು ಕಂಬಳಿಗಳನ್ನು ಮಾತ್ರ ಮಾಡಲು ಉಪಯೋಗಿಸಲಾಗುತ್ತದೆ. ವಯಸ್ಕ ಟಗರಿನ ತೂಕ ೩೫ ಕೆ.ಜಿ.ಯಿಂದ ೪೦ ಕೆ.ಜಿಯಷ್ಟಿದ್ದರೆ, ಕುರಿಯ ತೂಕ ೨೮ ರಿಂದ ೩೫ ಕೆ.ಜಿ.ಯವರೆಗೆ ಇರುತ್ತದೆ. ಚರ್ಮ ಸುಲಿದ ಮಾಂಸದ ತೂಕ (ಡೆಸ್ಟ್ ಕ್ಯಾರಕಸ್) ಶೇ. ೪೦ ರಿಂದ ೪೫ ರಷ್ಟು ಇರುತ್ತದೆ. ಮಾಂಸವು ಮಧ್ಯಮ ದರ್ಜೆಯದಾಗಿದ್ದು ತಿನ್ನಲು ಅಷ್ಟೇನು ರುಚಿಯಾಗಿರುವುದಿಲ್ಲ.

ತುಂಗಭದ್ರ ಅಣೆಕಟ್ಟೆಯ ನೀರಾವರಿ ಸೌಲಭ್ಯ ಪಡೆದ ಭೂಪ್ರದೇಶದಲ್ಲಿ ಅಲೆದಾಡುವ ಅಲೆಮಾರಿ ಕುರುಬರು ಈ ತಳಿಯನ್ನು ಸಾಕುತ್ತಾರೆ: ಕಾರಣ ಈ ತಳಿ ಬಳ್ಳಾರಿ ವಾತಾವರಣಕ್ಕೆ ಹೊಂದಿಕೊಂಡಿದೆ. ಇದರ ಕಾಲುಗಳು ಉದ್ದವಾಗಿದ್ದು ಮೈಲುಗಟ್ಟಲೆ ಆಯಾಸವಾಗದಂತೆ ಆಹಾರ ಕ್ಕೋಸ್ಕರ ಅಲೆದಾಡುತ್ತವೆ. ಹಾಗೆಯೇ ಸ್ವಲ್ಪ ಒರಟು ಸ್ವಭಾವದವಾಗಿರುವುದರಿಂದ ಬೆಟ್ಟಗುಡ್ಡ ಏರಿ ಆಹಾರ ಹುಡುಕಲು ಕಷ್ಟ ಪಡಲಾರವು. ಆದ್ದರಿಂದ ಈ ತಳಿಯನ್ನು ಸಾಕುತ್ತಾರೆ.

iii) ಹಾಸನ ತಳಿ (Hasan)

ಮೂಲಸ್ಥಳ ಮತ್ತು ಹಂಚಿಕೆ : ಈ ತಳಿಯ ಮೂಲಸ್ಥಳ ಹಾಸನ ಜಿಲ್ಲೆಯಾದ್ದರಿಂದ ಸದರಿ ಜಿಲ್ಲೆಯ ಹೆಸರಿನಿಂದ ಕರೆಯುಲಾಗುತ್ತದೆ. ಇವು ಹಾಸನ ಜಿಲ್ಲೆಯಾದ್ಯಂತ, ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕು, ಮಂಡ್ಯ ಹಾಗೂ ತುಮಕೂರು ಜಿಲ್ಲೆಯ ಗಡಿ ಪ್ರದೇಶಗಳಲ್ಲಿ ಕಂಡುಬರುತ್ತವೆ.



ಲಕ್ಷಣಗಳು : ಈ ತಳಿಯು ಮೈಕಟ್ಟು ಮತ್ತು ಆಕಾರದಲ್ಲಿ ಬಹುಮಟ್ಟಿಗೆ ಡೆಕ್ಕನಿ ಮತ್ತು ಬಳ್ಳಾರಿ ತಳಿಗಳನ್ನು ಹೊಲುತ್ತದೆ. ಆದರೆ ಮೈ-ಬಣ್ಣ ಮಾತ್ರ ಬನ್ನೂರು ತಳಿಯನ್ನು ಹೋಲುತ್ತದೆ. ಸಾಮಾನ್ಯವಾಗಿ ಈ ಕುರಿಗಳು ಬಿಳಿ ಮತ್ತು ಕಂದು ಮಿಶ್ರಿತ ಬಣ್ಣದ್ದಾಗಿವೆ. ಕೆಲವು ಕಪ್ಪು ಮಿಶ್ರಿತ ಬಿಳಿ ಕುರಿಗಳು ಸಹ ವಿರಳವಾಗಿ ಕಂಡುಬರುತ್ತವೆ. ಈ ತಳಿಗೆ ಜೋಲು ಕಿವಿ ಹಾಗೂ ರೋಮನ್ ಮೂಗಿದೆ. ಇದನ್ನು ಡೆಕ್ಕನಿ ಮತ್ತು ಬನ್ನೂರು ತಳಿಗಳಿಗೆ ಹೋಲಿಸಿದರೆ ಮಧ್ಯಮ ಗಾತ್ರದಾಗಿರುವುದು.

ಉತ್ಪಾದನೆ : ಇದು ಮಾಂಸದ ತಳಿಯಾಗಿದೆ. ವರ್ಷದಲ್ಲಿ ಎರಡು ಸಲ ಉಣ್ಣೆಯನ್ನು




ಕತ್ತರಿಸಲಾಗುತ್ತದೆ. ವಾರ್ಷಿಕ ಸರಾಸರಿಯಾಗಿ ೦.೬ ಕೆ.ಜಿ.ಯಿಂದ ೦.೭ ಕೆ.ಜಿ.ಯವರೆಗೆ ಉಣ್ಣೆ ದೊರೆಯುತ್ತದೆ. ಈ ತಳಿಯ ಉಣ್ಣೆಯು ತುಂಬಾ ಒರಟಾಗಿದ್ದು ಒರಟು ಕಂಬಳಿ ಮತ್ತು ಒರಟು ಉಣ್ಣೆ ಬಟ್ಟೆಗಳನ್ನು ತಯಾರಿಸಲು ಮಾತ್ರ ಉಪಯೋಗಿಸಲು ಸಾಧ್ಯ. ವಯಸ್ಕ ಟಗರು ೨೫-೩೫ ಕೆ.ಜಿ. ಮತ್ತು ಕುರಿ ೨೦-೨೬ ಕೆ.ಜಿ. ತೂಕವಿರುತ್ತದೆ. ಚರ್ಮ ಸುಲಿದು ಹೊಲಸು ತೆಗೆದ ಮೇಲೆ ಮಾಂಸದ ತೂಕ ಶೇ. ೪೦ರಷ್ಟು ಬರುತ್ತದೆ. ಈ ತಳಿಯ ಮರಿಗಳು ಶೀಘ್ರವಾಗಿ ಬೆಳೆಯುವುದರಿಂದ ಮರಿಗಳನ್ನು ಸಾಕಿ ಮಾಂಸಕ್ಕೆ ಮಾರಾಟ ಮಾಡುವುದು ಕೆಲವರಿಗೆ ಪ್ರಮುಖ ಉದ್ಯೋಗವಾಗಿದೆ. ಈ ತರಹದ ತಳಿಗಳನ್ನು ಸಾಕಲು ಅಲೆಮಾರಿ ಕುರುಬರು ಪ್ರಯತ್ನಿಸಿದ್ದಾರೆ. ಆದರೆ ಅವುಗಳ ದೈಹಿಕ ಅಭಿವೃದ್ಧಿ ಕುಂಠಿತವಾಗುವುದರ ಜೊತೆಗೆ ತಮ್ಮ ಕುರಿಗಳೊಂದಿಗೆ ಕೂಡಿಕೊಂಡು ಮೇಯದೆ ದೂರ ಉಳಿಯುವುದರಿಂದ ಇದರ ಸಾಕಣೆ ಮಾಡುವುದನ್ನು ಕೈ ಬಿಟ್ಟಿದ್ದಾರೆ.

iv) ಬನ್ನೂರು ತಳಿ (Bannuru)

ಮೂಲಸ್ಥಳ ಮತ್ತು ಹಂಚಿಕೆ : ಈ ತಳಿಯ ಮೂಲಸ್ಥಳ ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನ ಬನ್ನೂರು ಎಂಬ ಗ್ರಾಮ. ಈ ತಳಿಯನ್ನು 'ಬನ್ನೂರು' ಅಥವಾ 'ಬಂಡೂರು' ಕುರಿ ಎಂದು ಸಹ ಕರೆಯುಲಾಗುತ್ತದೆ. ಇವು ಮಂಡ್ಯ, ಮೈಸೂರು, ಚಾಮರಾಜನಗರ, ಕೋಲಾರ, ತುಮಕೂರು, ಬೆಂಗಳೂರು ಗ್ರಾಮಾಂತರ ಮತ್ತು ಬೆಂಗಳೂರು ನಗರ ಜಿಲ್ಲೆಯ ಕೆಲವು ಭಾಗಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ.



ಲಕ್ಷಣಗಳು : ಈ ತಳಿಯ ಕುರಿಗಳು ಮಾಸಲು ಬಿಳಿ ಬಣ್ಣದವು. ಆದರ ಮೈಬಣ್ಣ, ತಲೆ ಹಾಗೂ ಕತ್ತಿನ ಭಾಗ ಕಂದು ಬಣ್ಣವನ್ನು ಹೊಂದಿರುತ್ತದೆ. ವಿಶಾಲವಾದ ಎದೆಯಿಂದ ಕೂಡಿದ್ದು ಗಡುವಾದ ಕತ್ತನ್ನು ಹೊಂದಿರುತ್ತದೆ. ಕತ್ತಿನ ಕೆಳಗೆ ಕೊರಳಲ್ಲಿ ಕೂದಲಿನಿಂದ ಕೂಡಿದ ಮೊಲೆಗಳ ಆಕಾರದಲ್ಲಿ ಎರಡು ತುಂಡುಗಳು ನೇತಾಡುತ್ತಿರುತ್ತವೆ. ಇವಕ್ಕೆ ಟಸಲ್ಸ್ ಎಂದು ಕರೆಯುತ್ತಾರೆ. ಮೂಗು ಉಬ್ಬಿಕೊಂಡು ಎದ್ದು ಕಾಣುತ್ತಿದ್ದರೆ, ಕಿವಿಗಳು ಎಲೆಯಾಕಾರದಲ್ಲಿ ಜೋತಾಡುತ್ತಿರುತ್ತವೆ. ಬಾಲವು ತೆಳ್ಳಗೆ ಬಹಳ ಸಣ್ಣದಾಗಿರುತ್ತದೆ. ಇದು ಬಳ್ಳಾರಿ ಕುರಿಗಳಂತೆ ಎತ್ತರವಾಗಿ ಬೆಳೆಯುವುದಿಲ್ಲ. ಕಾಲುಗಳು ಗಿಡ್ಡಗೆ ಗಡುತರವಾಗಿರುತ್ತವೆ. ಹಾಗಾಗಿ ಇವು ಎತ್ತರಕ್ಕಿಂತಲೂ ಉದ್ದವಾಗಿ ಬೀಸಾಗಿರುತ್ತವೆ. ಇಂತಹ ಉತ್ತಮ ಆಕಾರದ ಕುರಿಗಳನ್ನು ಆರಿಸಿ, ಕುರಿ ಹಿಂಡನ್ನು ಬೆಳೆಸುವುದು ಈ ಪ್ರದೇಶದ ಕುರುಬರ ವೈಶಿಷ್ಟ್ಯವಾಗಿದೆ. ಬನ್ನೂರು ಜಾತಿಯ



ಕುರಿಗಳು ಇಂದಿಗೂ ತಮ್ಮದೇ ಆದ ವಿಶಿಷ್ಟ ಗುಣಗಳನ್ನು ಉಳಿಸಿಕೊಂಡು ಕಾಪಾಡಿಕೊಂಡು ಬಂದಿವೆ. ಈ ತಳಿಯ ಟಗರುಗಳಿಗೆ ಕೊಂಬಿರುವುದಿಲ್ಲ. ಒಂದು ವೇಳೆ ಟಗರಿಗೆ ಕೊಂಬಿದ್ದು ಸಣ್ಣ ಕಿವಿಗಳಿದ್ದಲ್ಲಿ ಆ ಟಗರು ಶುದ್ಧ ಬನ್ನೂರು ತಳಿಯ ಟಗರಲ್ಲವೆಂದು ಹೇಳಲಾಗುತ್ತದೆ.

ಉತ್ಪಾದನೆ : ಈ ತಳಿಯ ಕುರಿಗಳಿಂದ ಉತ್ತಮ ಮಟ್ಟದ ಉಣ್ಣೆ ದೊರೆಯುವುದಿಲ್ಲ. ಇವುಗಳ ಶರೀರದ ಮೇಲೆ ಆಡಿನ ಮೈಮೇಲೆ ಬೆಳೆಯುವಂತೆ ಕೂದಲು ಬೆಳೆಯುತ್ತವೆ. ಉಣ್ಣೆ ಕೆಳಮಟ್ಟದ್ದಾಗಿದ್ದು ಕಂಬಳಿ ತಯಾರಿಸಲು ಯೋಗ್ಯವಾಗಿರುವುದಿಲ್ಲ. ಆದರೂ ಸ್ಥಳೀಯವಾಗಿ ಕಂಬಳಿ ತಯಾರಿಸಲಾಗುತ್ತದೆ. ವಯಸ್ಕ ಹೆಣ್ಣು ಕುರಿ ೩೦-೩೫ ಕೆ.ಜಿ. ತೂಕವಿದ್ದರೆ, ಟಗರು ೪೫ ಕೆ.ಜಿ. ತೂಗುವುದುಂಟು. ಕೆಲವು ಟಗರುಗಳು ೬೦ ಕೆ.ಜಿ.ಯವರೆಗೆ ತೂಗಿದ ಉದಾಹರಣೆಗಳಿವೆ.

"ಬನ್ನೂರು ಜಾತಿಯ ಕುರಿಗಳು ಮಾಂಸಕ್ಕಾಗಿ ಪ್ರಸಿದ್ಧವಾದ ಕುರಿಗಳು. ಇಂಗ್ಲೆಂಡಿನಲ್ಲಿ "ಬ್ರಿಟೀಷ್ ಸೌತ್ ಡಾನ್" ಕುರಿಗಳು ಮಾಂಸಕ್ಕೆ ಪ್ರಸಿದ್ಧವಾಗಿರುವ ಹಾಗೆ ಬಂಡೂರು ತಳಿ ಕುರಿಗಳು ದಕ್ಷಿಣ ಭಾರತದಲ್ಲಿ ಮಾಂಸಕ್ಕಾಗಿ ಹೆಸರಾಗಿವೆ. ಇವನ್ನು "ಇಂಡಿಯಾನ್ ಸೌತ್ ಡಾನ್" ಕುರಿಗಳೆಂದು ಕರೆಯುವುದು ವಾಡಿಕೆಯಾಗಿದೆ" (ರಾಮರಾವ್ ಜ್ಯೋತಿ:೧೯೯೩:೪೬). ಈ ತಳಿಯ ಮಾಂಸವು ಎಳೆಗಳ ಮಧ್ಯೆ ಕೊಬ್ಬು ತುಂಬಿಕೊಂಡಿರುವುದರಿಂದ ಮಾಂಸವು ಮೃದುವಾಗಿದ್ದು ಹುಲುಸಾಗಿರುತ್ತದೆ. ಇದನ್ನು ಬೇಯಿಸಿದಾಗ ಒಂದು ರೀತಿಯ ಸುವಾಸನೆ ಮತ್ತು ರಸಭರಿತ ಉಂಟಾಗಿ ತಿನ್ನಲು ತುಂಬಾ ರುಚಿಯಾಗಿರುತ್ತದೆ. ಈ ವಿಷಯದಲ್ಲಿ ಈ ಕುರಿಯನ್ನು ಇತರ ತಳಿಯ ಕುರಿಗಳು ಸರಿಗಟ್ಟಲಾರವು. ಆಕಾರದಲ್ಲಿ ಇವು ಮೈ ತುಂಬಿಕೊಂಡಿದ್ದು ಕೊಬ್ಬು ಬೆಳೆದಿರುತ್ತದೆ. ಸಂತೆಯಲ್ಲಿ ಕೊಳ್ಳುವವರು ಸಾಮಾನ್ಯವಾಗಿ ಕುರಿಗಳ ಸೊಂಟದ ಭಾಗವನ್ನು, ತೊಡೆಗಳ ಹಾಗೂ ತೋಳುಗಳ ಭಾಗವನ್ನು ಒತ್ತಿನೋಡಿ ಇದರ ಮಾಂಸದ ಪ್ರಮಾಣವನ್ನು ತಿಳಿಯುತ್ತಾರೆ.

ಈ ತಳಿಯ ಕುರಿಗಳನ್ನು ಹಿಂಡು ಕಟ್ಟಿಕೊಂಡು ಮೇವು, ನೀರು ಹುಡುಕುತ್ತ ಮತ್ತು ಮೇಯಿಸುತ್ತ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಅಲೆದಾಡುತ್ತ ಹೋಗುವುದಿಲ್ಲ. ಇದ್ದ ಊರಿನಲ್ಲಿಯೇ, ತಮ್ಮ ಮನೆಗಳಲ್ಲಿ ಸಾಕಿ ಬೆಳೆಸುತ್ತಾರೆ. ಮೇವಿನ ಜೊತೆಗೆ ಕೈ ತಿಂಡಿಗಳಾದ ಕಾಳಿನ ಮಿಶ್ರಣ ಅಂದರೆ ಹುರುಳಿಯ ನುಚ್ಚು, ಜೋಳ, ಸಜ್ಜೆ, ರಾಗಿಯ ಒಡಕು, ಹಿಂಡಿ ಮತ್ತು ತೌಡು ಇತ್ಯಾದಿಗಳನ್ನು ಸೇರಿಸಿ ತಿನ್ನಿಸಲಾಗುತ್ತದೆ. ಗಂಡು ಮರಿಗಳಿಗೆ ಎಂಟು ವಾರದೊಳಗೆ ಕಸಿ ಮಾಡಲಾಗುತ್ತದೆ. ದೊಡ್ಡ ದಾಗುವವರೆಗೆ ೪ ರಿಂದ ೬ ತಿಂಗಳು ಕಾಲ ಕೈ ತಿಂಡಿಯನ್ನು ಕೊಟ್ಟು ಅವುಗಳಿಗೆ ಬೆಳೆಸುತ್ತಾರೆ. ಈ ಅವಧಿ ೧೪-೧೬ ಕೆ.ಜಿ. ತೂಕ ಪಡೆಯುತ್ತವೆ. ಹೆಣ್ಣು ಕುರಿಗಳು ಮೂರು ಮರಿಗಳನ್ನು (ಮೂರು ಸೂಲು ಈಯ್ದು) ಹಾಕಿದ ನಂತರ ಮಾಂಸಕ್ಕಾಗಿ ಮಾರಿ ಬಿಡುತ್ತಾರೆ. ಇತ್ತೀಚಿನ ದಿನಗಳಲ್ಲಿ ಈ ತಳಿಯ ಕುರಿಗಳನ್ನು ಭಾರತದ ಇತರ ಪ್ರಾಂತ್ಯಗಳಿಗೆ ಕೊಂಡೊಯ್ದು ಅಲ್ಲಿಯ ಸ್ಥಳೀಯ ಕುರಿಗಳೊಂದಿಗೆ

[illegible]

ಸಂಕರಣಗೊಳಿಸಿ ಮಿಶ್ರತಳಿಯನ್ನು ಅಭಿವೃದ್ಧಿಪಡಿಸಲಾಗಿದೆ. ಅವುಗಳಲ್ಲಿ ಬನ್ನೂರು ತಳಿಯ ಮಾಂಸದ ಗುಣವನ್ನು ಸೇರಿಸಲು ಪ್ರಯತ್ನಿಸಲಾಗಿದೆ.

v) ಕೆಂಗುರಿ ತಳಿ (Kenguri)

ಮೂಲಸ್ಥಳ ಮತ್ತು ವಿಂಗಡಣೆ : ಈ ತಳಿಯ ಬಣ್ಣ ಕೆಂಪು ಅಥವಾ ಮಾಸಲು ಕೆಂಪು. ಇದು ಹೊಂದಿರುವ ಬಣ್ಣದ ಆಧಾರದ ಮೇಲೆ 'ಕೆಂಗುರಿ' ಎಂದು ಕರೆಯಲಾಗುತ್ತದೆ. ಈ ತಳಿಯನ್ನು ಬಿಜಾಪುರ, ಗುಲಬರ್ಗಾ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ಹೆಚ್ಚಾಗಿ ಸಾಕಣೆ ಮಾಡಲಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಕೂಡ ಸಾಕುತ್ತಿರುವುದು ಕಂಡುಬರುತ್ತಿದೆ.

ಲಕ್ಷಣಗಳು : ಈ ಕುರಿಯ ಡೆಕ್ಕನಿ ಕುರಿಗಿಂತ ದೊಡ್ಡದಾಗಿರುತ್ತದೆ. ಬಾಲ ಚಿಕ್ಕದಾಗಿದ್ದು ಕುರಿ ತೆಳ್ಳಗೆ ಉದ್ದವಾಗಿರುತ್ತದೆ.

ಉತ್ಪಾದನೆ : ಈ ಕುರಿಯು ಉಣ್ಣೆಯನ್ನು ವರ್ಷಕ್ಕೆ ಎರಡು ಬಾರಿ ಕತ್ತರಿಸಲಾಗುತ್ತದೆ. ವಾರ್ಷಿಕ ಸರಾಸರಿಯೂ ೦.೬ ಕೆ.ಜಿ ಯಿಂದ ೦.೮ ಕೆ.ಜಿಯವರೆಗೆ ಉಣ್ಣೆಯನ್ನು ಪಡೆಯಲಾಗುತ್ತದೆ. ವಯಸ್ಕ ಟಗರು ೩೫-೪೫ ಕೆ.ಜಿ ತೂಗಿದರೆ ಕುರಿಯು ೩೦-೩೫ ಕೆ.ಜಿ ತೂಗುತ್ತದೆ. ಇತ್ತೀಚಿನ ದಿನಗಳಲ್ಲಿ ಈ ತಳಿಯು ಮಾಂಸಕ್ಕೆ ಹೆಸರು ಪಡೆದಿದೆ. ಈ ಕುರಿಗಳು 'ಡೆಕ್ಕನಿ' ಮತ್ತು ಬಳ್ಳಾರಿ ತಳಿಗಳಿಗಿಂತ ಹೆಚ್ಚಿನ ಬೆಲೆಗೆ ಮಾರಾಟವಾಗುತ್ತವೆ.

vi) ಯು.ಎ.ಎಸ್. ತಳಿ

ಮೂಲಸ್ಥಳ ಮತ್ತು ಹಂಚಿಕೆ : ೧೯೮೩ರಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಈ ತಳಿಯನ್ನು ತ್ರಿಜಾತಿ ಸಕರಣದಿಂದ ಅಭಿವೃದ್ಧಿಪಡಿಸಿದೆ. ಈ ತಳಿಯಲ್ಲಿ ಬನ್ನೂರು (ಶೇ. ೨೫) ಸೌತ್‌ಡಾನ್ ವಿದೇಶಿ ಕುರಿ ತಳಿ (ಶೇ. ೨೫) ಮತ್ತು ಡೆಕ್ಕನಿ (ಶೇ. ೫೦) ಅನುವಂಶಿಯ ಗುಣಗಳು ಅಡಕವಾಗಿವೆ. ಈ ತಳಿಯನ್ನು ಬೆಂಗಳೂರು ಸುತ್ತಮುತ್ತಲಿನ ಭಾಗದಲ್ಲಿ ಸಾಕಲಾಗುತ್ತದೆ.

ಲಕ್ಷಣಗಳು : ಇವು ಮಧ್ಯಮ ದೇಹಗಾತ್ರ ಮತ್ತು ಗಿಡ್ಡಕಾಲು ಹೊಂದಿವೆ. ಎದೆಯು ಉಬ್ಬಿ ಕೊಂಡು ಅಗಲವಾಗಿರುತ್ತದೆ. ಮೈಬಣ್ಣ ಮಾಸಲು ಬಿಳಿಬಣ್ಣದ್ದಾಗಿದೆ. ಈ ಕುರಿಗಳು ಶೀಘ್ರವಾಗಿ ಬೆಳೆಯುತ್ತವೆ. ಹುಲ್ಲುಗಾವಲುಗಳಲ್ಲಿ ಮೇಯ್ದರೆ ಆರು ತಿಂಗಳ ಅವಧಿಯಲ್ಲಿ ೧೬ ರಿಂದ ೨೦ ಕೆ.ಜಿ. ತೂಗುತ್ತವೆ.

ಉತ್ಪಾದನೆ : ವರ್ಷದಲ್ಲಿ ಎರಡು ಸಲ ಉಣ್ಣೆಯನ್ನು ಕತ್ತರಿಸಲಾಗುತ್ತದೆ. ವಾರ್ಷಿಕ ಸರಾಸರಿ ೦.೭ ರಿಂದ ೧.೦೦ ಕೆ.ಜಿ.ಯುವರೆಗೆ ಉಣ್ಣೆ ದೊರಕುತ್ತದೆ. ಉಣ್ಣೆಯ ಎಳೆ ಹೆಚ್ಚು ಉದ್ದವಾಗಿದ್ದು ಉಬ್ಬು-ತಗ್ಗುಗಳಿಂದ ಕೂಡಿರುತ್ತದೆ. ಈ ಉಣ್ಣೆಯು ಡೆಕ್ಕನಿ ತಳಿ ಉಣ್ಣೆಗಿಂತ ಉತ್ತಮವಾಗಿದ್ದು

ಒಳ್ಳೆಯ ಗುಣಮಟ್ಟದ ಉಡುಪು ತಯಾರಿಸಲು ಅನುಕೂಲವಾಗಿದೆ. ಪ್ರೌಢಾವಸ್ಥೆಯ ಟಗರು ೪೫ ರಿಂದ ೫೦ ಕೆ.ಜಿ. ತೂಕವಿದ್ದರೆ, ಕುರಿಯು ೪೦-೪೫ ಕೆ.ಜಿ. ತೂಗುತ್ತದೆ. ಇದರಿಂದ ಉತ್ತಮ ಮಟ್ಟದ ರುಚಿಯಾದ ಮಾಂಸ ಸಿಗುತ್ತದೆ. ಮಾಂಸದ ಇಳುವರಿ ಶೇ. ೪೫ ರಿಂದ ೪೮ ರಷ್ಟು ಬರುತ್ತದೆ. ೧೦-೧೫ ತಿಂಗಳ ಅವಧಿಯಲ್ಲಿ ಪ್ರಾಯಕ್ಕೆ ಬಂದು ೧೫ ರಿಂದ ೨೦ ತಿಂಗಳಲ್ಲಿ ಮೊದಲ ಬಾರಿ ಮರಿ ಹಾಕುತ್ತದೆ. ಎರಡು ವರ್ಷಗಳಲ್ಲಿ ಮೂರು ಬಾರಿ ಮರಿ ಪಡೆಯಬಹುದಾಗಿದೆ.

೩.೫.೨ ಸಂತಾನಾಭಿವೃದ್ಧಿ ಮತ್ತು ಸಂವರ್ಧನೆ

ಸಾಮಾನ್ಯವಾಗಿ ಕುರಿಗಳು ೯ ರಿಂದ ೧೩ ತಿಂಗಳ ಅವಧಿಯಲ್ಲಿ ಮೊದಲ ಬಾರಿಗೆ ಬೆದೆಗೆ ಬಂದು ಗರ್ಭ ಧರಿಸಿದರೆ, ಆಡು ೧೦ ರಿಂದ ೧೨ ತಿಂಗಳಲ್ಲಿ ಗರ್ಭ ಧರಿಸುತ್ತದೆ. ಟಗರು ಮರಿ ಮತ್ತು ವೋತ ಮರಿಗಳು ೧೨ ರಿಂದ ೧೫ ತಿಂಗಳ ಅವಧಿಯಲ್ಲಿ ಪ್ರಾಯಕ್ಕೆ ಬರುತ್ತವೆ. ಕುರಿ-ಮೇಕೆಗಳ ಸಂವರ್ಧನೆಗೆ ಅಲೆಮಾರಿ ಕುರುಬರು ತಮ್ಮ ಕುರಿ ಹಿಂಡಿನಲ್ಲಿ ೨೦-೩೦ ಕುರಿಗಳಿಗೆ ಒಂದು ಬೀಜದ ಟಗರು ಮತ್ತು ಮೇಕೆಗಳಿಗೆ ಬೀಜದ ವೋತು ಬಿಟ್ಟಿರುತ್ತಾರೆ. ಬೀಜದ ಟಗರು ಮತ್ತು ವೋತ ಸಾಕಣೆ ಮಾಡಿದ ಕುರಿಗಳಿಂದಲೇ ಜನಿಸಿರುತ್ತವೆ. ಕುರಿ-ಮೇಕೆಗಳ ಗರ್ಭಧಾರಣೆಯ ಅವಧಿ ಸುಮಾರು ೫ ತಿಂಗಳುಗಳಾಗಿವೆ. ಮರಿ ಹಾಕಿದ ನಂತರ ೨ ರಿಂದ ೩ ತಿಂಗಳ ಅವಧಿಯಲ್ಲಿ ಮತ್ತೆ ಬೆದೆಗೆ ಬರುತ್ತವೆ. "ಸಾಮಾನ್ಯವಾಗಿ ಕುರಿ-ಮೇಕೆಗಳು ಯುಗಾದಿ ಹಬ್ಬದ ಹಿಂದಿನ-ಮುಂದಿನ ದಿನಗಳಲ್ಲಿ ಅಂದರೆ ಮಾರ್ಚ್ ಅಥವಾ ಏಪ್ರಿಲ್ ತಿಂಗಳಲ್ಲಿ ಇಲ್ಲವೆ ನಾಗರ ಪಂಚಮಿ ಹಿಂದಿನ-ಮುಂದಿನ ಅಂದರೆ ಜುಲೈ-ಆಗಸ್ಟ್ ತಿಂಗಳಲ್ಲಿ ಬೆದೆಗೆ ಬರುತ್ತವೆ. ಯುಗಾದಿ ಹಬ್ಬದ ಸಮಯದಲ್ಲಿ ಗರ್ಭ ಧರಿಸಿದ ಕುರಿ-ಮೇಕೆಗಳು ಗಣೇಶ ಹಬ್ಬ ಎಡಬಲ ಅಂದರೆ ಅಗಸ್ಟ್ ಮತ್ತು ಸೆಪ್ಟೆಂಬರ್ ಅವಧಿಯಲ್ಲಿ ಮರಿ ಹಾಕುತ್ತವೆ. ನಾಗರಪಂಚಮಿ ಹಿಂದೆ-ಮುಂದಿನ ದಿನಗಳಲ್ಲಿ ಗರ್ಭ ಕಟ್ಟಿದ ಕುರಿಗಳು ಎಳ್ಳು ಅಮಾವಾಸ್ಯೆ (ಡಿಸೆಂಬರ್ - ಜನವರಿ) ಅಸುಪಾಸಿನಲ್ಲಿ ಮರಿಹಾಕುತ್ತವೆ" (ಮಾಹಿತಿದಾರ: ಹೂವಣ್ಣ:ನವಲಿ ಹಾಳ್). [ಈ ಅವಧಿಯಲ್ಲಿ ಮರಿ ಹಾಕಿದ ಕುರಿಗಳ ಹಾಲನ್ನು ಹಿಂಡಿ ಬಳಸದೆ ಮೀಸಲು ತೆಗೆದು ತುಪ್ಪ ಮತ್ತು ಹಾಲನ್ನು ಸ್ವಗ್ರಾಮಗಳಿಗೆ ತೆಗೆದುಕೊಂಡು ಹೋಗಿ ಅವರಾತ್ರಿ (ಹಿಸ್ಯಾಳೆ) ಅಮವಾಸ್ಯೆಯ ದಿನದಂದು ಸ್ವಗ್ರಾಮದಲ್ಲಿರುವ ಮನೆದೇವರಿಗೆ ನೈವೇದ್ಯ ಮಾಡುತ್ತಾರೆ]. ಸಾಮಾನ್ಯವಾಗಿ ಅಗಸ್ಟ್‌ನಿಂದ ಜನವರಿ ತಿಂಗಳವರೆಗೆ ಈಯುವುದೇ ಹೆಚ್ಚು. ಕುರಿ-ಮೇಕೆಗಳಿಂದ ವರ್ಷದಲ್ಲಿ ಎರಡು ಸಾರಿ ಮರಿ ಹಾಕುವುದನ್ನು ನಿರೀಕ್ಷಿಸಲಾಗದು. ಇದು ಅಲೆಮಾರಿ ಕುರುಬರ ಬದುಕುಗಳಿಗೆ ದೊರೆಯುವ ಮೇವು-ನೀರು ರೋಗ-ರುಜಿನ ಮತ್ತು ವಾತಾವರಣವನ್ನು ಅವಲಂಬಿಸಿರುತ್ತದೆ. ಎರಡು ವರ್ಷದೊಳಗೆ ಮೂರು ಸಲ ಮರಿ ಪಡೆಯಬಹುದು. ಕೆಲವೊಂದು ಕುರಿಗಳು ಒಂದೇ ಸಲ ೨-೩ ಮರಿಗಳನ್ನು ಈಯ್ಯುತ್ತವೆ. ಅಲೆಮಾರಿ ಕುರುಬರ ಅಭಿವೃದ್ಧಿ ದೃಷ್ಟಿಯಿಂದ ಉತ್ತಮ ಗುಣಮಟ್ಟದ ಹಾಗೂ ದೃಢಕಾಯದ ಮರಿಗಳನ್ನು ಪಡೆಯಬೇಕಾದರೆ ಸಂಕರಣ ಪದ್ಧತಿಯ ಅನುಸರಿಸುವುದು ಉತ್ತಮವಾಗಿದೆ.

ತಮ್ಮಲ್ಲಿರುವ ಹೆಣ್ಣು ಕುರಿಗಳಿಗೆ ಬೇರೆ ಹಿಂಡಿನಲ್ಲಿರುವ ಟಗರನ್ನು ಆಯ್ಕೆ ಮಾಡಿ ಸಂವರ್ಧನೆ ಮಾಡಿಸಬೇಕು. ಟಗರನ್ನು ಆಯ್ಕೆ ಮಾಡುವಾಗ ಅದು ಅನುವಂಶೀಯ ರೋಗ-ರುಜಿನಗಳಿಂದ ಮುಕ್ತ ವಾಗಿರಬೇಕು ಎಂದು ಎಚ್ಚರವಹಿಸುವುದು ಅಗತ್ಯವಾಗಿದೆ.

ಗರ್ಭ ನಿಂತ ಕುರಿಗಳ ಬಗ್ಗೆ ಬಳ್ಳಾರಿ ಜಿಲ್ಲೆಯ ಪಶುವೈದ್ಯ ಇಲಾಖೆಯ ಸಹಾಯಕ ನಿರ್ದೇಶಕ ರಾದ ಪ್ರಹ್ಲಾದ ಜೋಷಿಯವರು ಈ ಕೆಳಗಿನ ಸಲಹೆಯನ್ನು ನೀಡುತ್ತಾರೆ. "ಗರ್ಭ ನಿಂತ ಕುರಿಗಳನ್ನು ಮಿಕ್ಕ ಹಿಂಡಿನೊಂದಿಗೆ ಬೇರ್ಪಡಿಸಿ ಸಾಕಬೇಕು. ಬೀಜದ ಟಗರುಗಳನ್ನು ಗರ್ಭ ಕಟ್ಟಿದ ಕುರಿಯ ಹಿಂಡಿನೊಂದಿಗೆ ಬಿಡಬಾರದು ಮತ್ತು ಗರ್ಭದ ಕುರಿಗಳು ಈಯ್ಯಲು ಆರು ವಾರಗಳಿರುವಾಗಲೇ ಅವುಗಳಿಗೆ ಒಳ್ಳೆಯ ಹಸಿರು ಮೇವು ಇಲ್ಲವೆ ಹಸಿರೆಲೆಗಳನ್ನು ಸ್ಥೂಲ ಆಹಾರವಾಗಿ ತಿನ್ನುವಷ್ಟು ಕೊಡಬೇಕು". ಈ ವಿಷಯವನ್ನು ಅಲೆಮಾರಿ ಕುರುಬರಾದ ಸೌಂದಲಗ ಅಪ್ಪಣ ಮತ್ತು ನವಿಲಿಹಾಳ್ ಹೂವಣ್ಣ ಅವರ ಮುಂದೆ ಪ್ರಸ್ತಾಪಿಸಿದಾಗ ಅವರು ನನಗೆ "ನೋಡ್ರಿ ಸಾಹೆಬ್ರ ಎಲ್ಲಾ ಕುರಿಗಳನ್ನು ಗುಂಪಾಗಿ ಮೇಯಿಸಿಕೊಂಡು ಈ ಅಡವಿಯಲ್ಲಿ ನಾವು ಬದುಕುವುದೇ ಕಷ್ಟಕರವಾದಾಗ ಹಿಂಡನ್ನು ಭಾಗ ಮಾಡಿ ಮೇಯಿಸುವುದು ನಮ್ಮ ಕುರುಬರಿಂದ ಆಗದ ಕೆಲಸರ್ರಿ" ಎನ್ನುತ್ತಾರೆ. ಅಲೆಮಾರಿ ಕುರುಬರು ಯಾವಾಗಲೂ ಚಲನಶೀಲ ಬದುಕಿಗೆ ಹೆಸರಾದವರು. ಕುರಿಗಳಿಗೆ ಮೇವು, ನೀರು ದೊರೆಯುವ ಕಡೆ ತಮ್ಮ ಕುರಿ ಹಿಂಡನ್ನು ಹೊಡೆದುಕೊಂಡು ಹೋಗಬೇಕು. ಹೀಗಿದ್ದಾಗ ಭಾಗ ಮಾಡಿ ಮೇಯಿಸುವುದು ಮತ್ತು ಭಾಗ ಮಾಡಿ ಹೊಡೆದುಕೊಂಡು ಹೋಗುವುದು ಇವರಿಂದ ಆಗದ ಕೆಲಸವಾಗಿ ತೋರುತ್ತದೆ.

ಆಡುಗಳೂ ೧೦ ರಿಂದ ೧೨ ತಿಂಗಳು ವಯಸ್ಸಿನಲ್ಲಿ ಗರ್ಭ ಧರಿಸುತ್ತವೆ. ವೋತ ಮರಿ ಕೂಡಾ ೧೨ ರಿಂದ ೧೬ ತಿಂಗಳುಗಳಲ್ಲಿ ಪ್ರಾಯಕ್ಕೆ ಬರುತ್ತದೆ. ಸಾಮಾನ್ಯವಾಗಿ ಆಡುಗಳು ಕುರಿಗಳಂತೆ ಮಾರ್ಚ್, ಏಪ್ರಿಲ್ ಇಲ್ಲವೆ ಅಗಸ್ಟ್, ಸೆಪ್ಟೆಂಬರ್ ತಿಂಗಳಲ್ಲಿ ಬೆದೆಗೆ ಬಂದು ಸುಮಾರು ಐದು ತಿಂಗಳಲ್ಲಿ ಮರಿ ಹಾಕುತ್ತವೆ. ಮರಿ ಹಾಕಿದ ನಂತರ ಆಡುಗಳು ೨-೩ ತಿಂಗಳಲ್ಲಿ ಮತ್ತೆ ಬೆದೆಗೆ ಬರುತ್ತವೆ.

ಕುರಿ-ಮೇಕೆಗಳು ಬೆದೆಗೆ ಬಂದಿದ್ದನ್ನು ಗುರುತಿಸಬಹುದು. ಹಾಲು ಕೊಡುವ ಕುರಿ-ಮೇಕೆಗಳು ಬೆದೆಗೆ ಬಂದಾಗ ಅದು ನೀಡುವ ಹಾಲಿನ ಪ್ರಮಾಣ ಕಡಿಮೆಯಾಗುತ್ತದೆ. ಆಹಾರ ಸೇವನೆಯ ಪ್ರಮಾಣ ಕಡಿಮೆಯಾಗುತ್ತದೆ. ದಿನನಿತ್ಯದ ಇರುವಿಕೆಯಲ್ಲಿ ವ್ಯತ್ಯಾಸ, ಒದರುವಿಕೆ ಹಾಗೂ ಬಾಹ್ಯ ಜನನೇಂದ್ರೀಯ ಉಬ್ಬಿದ್ದು ಸ್ವಲ್ಪ ಕೆಂಪಗೆ ಕಾಣುತ್ತದೆ. ಅಲ್ಲದೆ ಬೇರೆ ಕುರಿ-ಮೇಕೆಗಳ ಮೇಲೆ ಹತ್ತುತ್ತದೆ. ಹಿಂಡಿನಲ್ಲಿ ಟಗರು ಮತ್ತು ವೋತ ಇದ್ದರೆ ಬೆದೆಗೆ ಬಂದ ಕುರಿ-ಆಡನ್ನು ಗುರುತಿಸುತ್ತವೆ. ಬೆದೆಗೆ ಬಂದ ಕುರಿ-ಮೇಕೆ ಗರ್ಭ ಧರಿಸದಿದ್ದಲ್ಲಿ ಮತ್ತೆ ೧೮ ರಿಂದ ೨೦ ದಿನಗಳಲ್ಲಿ ಪುನಃ ಬೆದೆಗೆ

ಬರುತ್ತವೆ. ಈ ಎಲ್ಲಾ ಅಂಶಗಳು ಬೆದೆಗೆ ಬಂದ ಕುರಿ-ಮೇಕೆಗಳಲ್ಲಿ ಕಂಡುಬರುತ್ತವೆ. ಬೆದೆಗೆ ಬಂದ ಕುರಿ-ಮೇಕೆಗಳನ್ನು ಗರ್ಭಧಾರಣ ಮಾಡಿಸಲು ಒಂದು ಸಾರಿ ಟಗರು-ಹೋತ ಬಿಟ್ಟರೆ ಸಾಕು. ಗರ್ಭ ಧರಿಸಿದ ಮೇಲೆ ಸರಾಸರಿ ಐದು ತಿಂಗಳಲ್ಲಿ ಮರಿ ಹಾಕುತ್ತವೆ.

ಹೆರಿಗೆ ಸಮಯದಲ್ಲಿ ವರ್ತನೆ ಮತ್ತು ಸೂಚನೆಗಳು

ಗರ್ಭ ಧರಿಸಿದ ಸುಮಾರು ಐದು ತಿಂಗಳಲ್ಲಿ (೧೪೫-೧೫೦ ದಿನಗಳು) ಕುರಿ ಮತ್ತು ಆಡು ಮರಿ ಹಾಕುತ್ತವೆ. "ಮರಿ ಹಾಕುವ ಪೂರ್ವದಲ್ಲಿ ಕುರಿ ಸಣ್ಣಗೆ ಧ್ವನಿ ಮಾಡಿದರೆ, ಮೇಕೆ ಸ್ವಲ್ಪ ಜೋರಾಗಿ ಒದರುವುದು ಮತ್ತು ಗಾಬರಿಯಾದಂತೆ ಇರುವುದು. ಮಲಗುವುದು, ಏಳುವುದು ಮಾಡುವವು. ಕೆಚ್ಚಲು ಬಿಗಿದಂತೆ ಕಾಣುವುದು. ಬಾಹ್ಯ ಜನನೇಂದ್ರಿಯದಿಂದ ಸ್ವಲ್ಪ ಹಳದಿ ಬಣ್ಣದ ಲೋಳೆ ಬರುವುದು"(ಮಾಹಿತಿದಾರ: ಮಂಜುನಾಥ ದುರ್ಗುಗಣ್ಣನವರ). ಆಗ ಮರಿ ಹೊರ ಹಾಕುವ (ಈಯ್ಯುವ) ಕ್ರಿಯೆ ನಡೆಯುತ್ತದೆ. ಇದೇ ಸಮಯದಲ್ಲಿ ಹಲವಾರು ಸಲ ಮಲಗಿ ಎದ್ದು ಪ್ರಸವ ವೇದನೆ ಮಾಡಿ ಮರಿಯನ್ನು ಹಾಕುತ್ತವೆ.

೩.೫.೩ ರೋಗಗಳು ಮತ್ತು ಚಿಕಿತ್ಸೆ

ರೋಗ ಪದದ ಕಲ್ಪನೆ ಮತ್ತು ಕಾರಣಗಳು : ರೋಗ ಎಂಬ ಪದದ ಅರ್ಥ ಪ್ರಾಣಿಗಳ ಆರೋಗ್ಯ ವಿರುದ್ಧದ ಕಾರ್ಯಚರಣೆ ಅಥವಾ ಪ್ರಾಣಿಯ ಶರೀರದಲ್ಲಿರುವ ಟಿಸ್ಸುಸ್(Tissues)ಗಳ ಅನಿಯಮಿತ ಕಾರ್ಯನಿರ್ವಹಣೆ ಎಂದು ವ್ಯಾಖ್ಯಾನಿಸಬಹುದು.

ಪ್ರಾಣಿಗಳಿಗೆ ಬಹಳಷ್ಟು ರೂಪಗಳಲ್ಲಿ ಮತ್ತು ವಿಧಾನಗಳಲ್ಲಿ ರೋಗಗಳು ಬರುತ್ತವೆ. ಎಲ್ಲಾ ರೋಗಗಳನ್ನು ಅನುವಂಶೀಯ ಮತ್ತು ಪಡೆದುಕೊಂಡ ರೋಗಗಳೆಂದು ವರ್ಗೀಕರಿಸಬಹುದು. ಅನುವಂಶೀಯದಿಂದ ಬರುವ ರೋಗಗಳ ಸಂಖ್ಯೆ ಕಡಮೆ ಇದ್ದು, ಮೆಂಡಲ್ ಅವರ ನಿಯಮದಂತೆ ತಂದೆ-ತಾಯಿಗಳಿಂದ ರಕ್ತಸಂಬಂಧದ ಮೂಲಕ ಬರುತ್ತವೆ. ಇಂತಹ ರೋಗಗಳನ್ನು ತಳಿಯ ಸಮಸ್ಯಾತ್ಮಕ ರೋಗಗಳೆಂದು ಪರಿಗಣಿಸಲಾಗಿದೆ. ಆದರೆ ಕುರಿಗಳಲ್ಲಿ ಕಾಣಿಸಿಕೊಳ್ಳುವ ಬಹಳಷ್ಟು ರೋಗಗಳು ಸಾಂಕ್ರಮಿಕ ರೋಗಗಳಾಗಿದ್ದು ಗಾಳಿ, ನೀರು, ಮೇವು, ಮಣ್ಣು, ಪ್ರಾಣಿ, ಪಕ್ಷಿ ಇತ್ಯಾದಿಗಳಿಂದ ಪಡೆದುಕೊಂಡ ರೋಗಗಳಾಗಿ ಇವು ದೇಹದ ಅಂತರಿಕ ಪರಿಸ್ಥಿತಿಯಿಂದ ಉಲ್ಬಣಿಸುವ ರೋಗಗಳಾಗಿವೆ. ಕುರಿಗಳಿಗೆ ತಗಲುವ ಸಾಂಕ್ರಮಿಕ ರೋಗಗಳಿಗೆ ಬ್ಯಾಕ್ಟರಿಯಾ, ವೈರಸ್, ಬುಸ್ಟ್, ಪ್ರೋಟೋಜೋವಾ (ಏಕಾಣು ಜೀವಿಗಳು), ಹುಳುಗಳು, ಕೀಟಗಳು ಮುಂತಾದವು ಕಾರಣವಾಗಿವೆ. ಇವುಗಳಿಂದ ಕಾಣಿಸಿ ಕೊಳ್ಳುವ ರೋಗಗಳನ್ನು ನಿಯಂತ್ರಿಸಲು ಮತ್ತು ಔಷಧೋಪಚಾರ ಮಾಡಲು ಅಲೆಮರಿ ಕುರುಬರು ಸೋತಿದ್ದಾರೆ. ಕುರಿ-ಮೇಕೆಗಳಲ್ಲಿ ಕಾಣಿಸಿಕೊಳ್ಳುವ ರೋಗಗಳನ್ನು ಈ ಕೆಳಗಿನಂತೆ ವಿಶ್ಲೇಷಿಸಲಾಗಿದೆ.

೧. ನರಡಿ ರೋಗ (ಆಂತ್ರಾಕ್ಸ್)

ಇದು ಸಾಂಕ್ರಮಿಕ ರೋಗವಾಗಿದ್ದು ಎಲ್ಲಾ ಪ್ರಾಣಿಗಳಲ್ಲಿ ಕಾಣಿಸಿಕೊಳ್ಳುತ್ತದೆ. 'ಬೈಸ್ಲಿಸ್ ಆಂತ್ರಾಸಿಸ್' ಎಂಬ ರೋಗಾಣುವಿನಿಂದ ಬರುತ್ತದೆ. ಈ ರೋಗವು ಮಳೆಗಾಲದ ಅವಧಿಯಲ್ಲಿ ಕುರಿ-ಮೇಕೆಗಳಲ್ಲಿ ತೀವ್ರ ಸ್ವರೂಪವಾಗಿ ಕಾಣಿಸಿಕೊಳ್ಳುತ್ತದೆ.

ಕಾರಣ ಮತ್ತು ಹರಡುವಿಕೆ: ಈ ರೋಗ ಹರಡಲು ವಾತಾವರಣಕ್ಕೆ ಸಂಬಂಧಿಸಿದ ಹಲವಾರು ಕಾರಣಗಳುಂಟು. ಅವುಗಳೆಂದರೆ ರೋಗಾಣುಗಳ ಸೋಂಕಿನಿಂದ ಕೂಡಿದ ಮಣ್ಣು ಹಾಗೂ ಹಲ್ಲಿನಿಂದ ಕಚ್ಚುವ ಮತ್ತು ರಕ್ತ ಹೀರುವ ಕೀಟಗಳು (ಹೇನು, ಉಣ್ಣೆ ಮತ್ತು ನೊಣ), ಸೋಂಕು ತಗುಲಿದ ಪ್ರಾಣಿ-ಪಕ್ಷಿಗಳಿಂದ, ನಿಂತ ನೀರು, ತುಂಬಿ ಹರಿಯುವ ಹೊಳೆ, ನಾಲೆಗಳ ಮುಖಾಂತರ ಬೇಗನೆ ಹರಡುವುದು.

ಲಕ್ಷಣಗಳು : ಕುರಿ-ಮೇಕೆಗಳು ನಿಂತಲ್ಲೇ ನಡುಗುವುದು, ಹಲ್ಲು ಕಡಿಯುವುದು, ಕಣ್ಣು ತಿರುಗಿಸುವುದು ಉಸಿರಾಟದ ಹೆಚ್ಚಳ, ಆಹಾರ ತಿನ್ನದಿರುವುದು, ಮೇಲುಕು ಹಾಕುವುದನ್ನು ನಿಲ್ಲಿಸುವುದು, ಚಟುವಟಿಕೆಯಿಂದರದೆ ಬಹಳ ನಿತ್ರಾಣದಿಂದ ಒಂದೇ ಕಡೆ ನಿಲ್ಲುವುದು ಅಥವಾ ಮಲಗಿರುವುದು. ಭೇದಿ ಅಥವಾ ರಕ್ತ ಭೇದಿಯಾಗುವುದು, ಬಾಯಿ, ಮೂಗು, ಗುದಾದ್ವಾರ ಹಾಗೂ ಯೋನಿಯ ಮೂಲಕ ನೊರೆಯುಕ್ತ ಹೆಪ್ಪುಗಟ್ಟಿದ ರಕ್ತಸ್ರಾವವಾಗುವುದು ಮತ್ತು ಸಾವು ಸಂಭವಿಸುವುದು.

ನಿವಾರಣೋಪಾಯಗಳು : ಮರಿಗಳು ಹೆಚ್ಚಿನ ಪ್ರಮಾಣದಲ್ಲಿ ಈ ರೋಗಕ್ಕೆ ತುತ್ತಾಗುತ್ತವೆ. ರೋಗಗ್ರಸ್ಥ ಕುರಿಗಳನ್ನು ಆರೋಗ್ಯವಂತ ಕುರಿಗಳಿಂದ ಬೇರ್ಪಡಿಸಬೇಕು. ಇದನ್ನು ನಿಯಂತ್ರಿಸಲು "ಆಂತ್ರಸಿಸ್ ಬೈಸಿಲ್ಲಸ್" ಜೈವಿಕ ಲಸಿಕೆಯನ್ನು ಬಾಲದ ಪದರದಲ್ಲಿ ಚುಚ್ಚಬೇಕು. ಈ ಲಸಿಕೆಯನ್ನು ರೋಗವಿಲ್ಲದ ಕಾಲದಲ್ಲಿ ಬಳಸಬಹುದು. ಇದನ್ನು ಬಳಸಿದರೆ ಮರಿಗಳಲ್ಲಿ ೧ ವರ್ಷ ಮತ್ತು ಕುರಿಗಳಲ್ಲಿ ೬ ತಿಂಗಳವರೆಗೆ ರೋಗ ನಿರೋಧಕ ಶಕ್ತಿ ಇರುತ್ತದೆ. ರಕ್ತ ಹೊರಬಂದು ಸತ್ತ ಕುರಿ-ಮೇಕೆಗಳನ್ನು ಬಿಸಾಡದೆ ಸುಡಬೇಕು ಅಥವಾ ಆಳವಾದ ತಗ್ಗಿನಲ್ಲಿ ಹೂಳಬೇಕು. ಈ ರೋಗವು ಇತ್ತೀಚಿನ ದಿನಗಳಲ್ಲಿ ಕುರಿ-ಮೇಕೆಗಳಲ್ಲಿ ಕಾಣಿಸಿಕೊಳ್ಳುತ್ತಿರುವುದರಿಂದ ಅಲೆಮಾರಿ ಕುರುಬರು ಯಾವುದೇ ಗಿಡಮೂಲಿಕೆಗಳ ಔಷಧ ಬಳಸುತ್ತಿಲ್ಲ, ಸರ್ಕಾರಿ ಔಷಧವನ್ನು ಮಾತ್ರ ಬಳಸುತ್ತಾರೆ.

೨. ಕರಳು ಬೇನೆ

ಈ ರೋಗವು ನಂಜಿನ ಕಾಯಿಲೆಯಾಗಿದ್ದು, ಕರುಳಿಗೆ ಸಂಬಂಧಿಸಿದ್ದಾಗಿದೆ. ಇದು 'ಕ್ಲಾಸ್ಟ್ರಿಡಿಯಂ ಪಿರಪಂಜಸ್- 'ಡಿ' ಜಾತಿಗೆ ಸೇರಿದ ರೋಗಾಣುವಿನಿಂದ ಬರುತ್ತಿದ್ದು, ಮಳೆಗಾಲದಲ್ಲಿ ಕಾಣಿಸಿ ಕೊಳ್ಳುತ್ತದೆ.

ಕಾರಣ ಮತ್ತು ಹರಡುವಿಕೆ : ಈ ರೋಗಾಣುಗಳು ಸಾಮಾನ್ಯವಾಗಿ ಕರುಳಿನಲ್ಲಿ ವಾಸಿಸುರುತ್ತವೆ.

ಕುರಿ-ಮೇಕೆಗಳು ಹೆಚ್ಚು ಹಸಿರು ಮೇವು ಅಥವಾ ಪಿಷ್ಟ ಪದಾರ್ಥಗಳನ್ನು ತಿಂದಾಗ ಹೊಟ್ಟೆ ಮತ್ತು ಕರುಳು ಕಟ್ಟಿಕೊಳ್ಳುತ್ತದೆ. ಇದರಿಂದ ಕರುಳಿನಲ್ಲಿರುವ ರೋಗಾಣುಗಳು ಹೆಚ್ಚು ವೃದ್ಧಿಯಾಗಿ, ರೋಗದ ನಂಜನ್ನು ಹೆಚ್ಚಿಸಿ ಸಾವನ್ನುಂಟು ಮಾಡುತ್ತವೆ ಅಥವಾ ಕುರಿಗಳು ಅವಶ್ಯಕತೆಗಿಂತ ಹೆಚ್ಚಾಗಿ ಹಸಿರು ಮೇವು ಮೇಯ್ದಾಗ ಕರುಳಿನಲ್ಲಿ ಸತ್ವಯುತ ಆಹಾರ ಅಧಿಕವಾಗಿ ವಿಷಾಣುಗಳು ಅತಿಯಾಗಿ ಬೆಳೆಯಲು ಕಾರಣವಾಗುತ್ತವೆ. ಈ ವಿಷಾಣುಗಳ ವಿಷದಿಂದ ಕುರಿಗಳು ಸಾಯುತ್ತವೆ. ಮರಿಗಳು ತಾಯಿಯ ಹಾಲು ಕುಡಿಯುವುದರ ಜೊತೆಗೆ ಹಸಿರು ಮೇವು ಹೆಚ್ಚಾಗಿ ಮೇಯುವುದು, ಇಬ್ಬನಿ ಬಿದ್ದಿರುವ ಪ್ರದೇಶಗಳಲ್ಲಿ ಮೇಯುವುದು, ಮೇವಿನಲ್ಲಿ ಬದಲಾವಣೆ ಇತ್ಯಾದಿ ಸಂದರ್ಭಗಳಲ್ಲಿ ರೋಗ ಹರಡುತ್ತದೆ.

ಲಕ್ಷಣಗಳು : ರೋಗವು ತೀವ್ರ ಸ್ವರೂಪದ್ದಾಗಿರುತ್ತದೆ. ಚೆನ್ನಾಗಿ ಮೇಯುತ್ತಿರುವ ಆರೋಗ್ಯವಂತ ಕುರಿಗಳು ಒಮ್ಮೆಲೆ ಸುತ್ತ ತಿರುಗಿ ಕೆಳಗೆ ಬಿದ್ದು ಸಾಯುತ್ತವೆ. ಸಾಯುವ ಮುಂಚೆ ಹಲ್ಲು ಕಡಿಯುವುದು, ತಲೆ ಒಂದೇ ಕಡೆ ತಿರುಗಿಸುವುದು ಹಾಗೂ ಒಮ್ಮೊಮ್ಮೆ ಭೇದಿ ಸಹ ಕಾಣಬಹುದಾಗಿದೆ.

ನಿವಾರಣೆ : "ಪ್ರತಿ ವರ್ಷ ಮಳೆಗಾಲಕ್ಕೆ ಮುಂಚೆ ಮೂರು ತಿಂಗಳು ಮೇಲ್ಪಟ್ಟ ಕುರಿಗಳಿಗೆ ಲಸಿಕೆ ಹಾಕಿಸಬೇಕು. ಮೊದಲನೆ ವರ್ಷದಲ್ಲಿ ಎರಡು ಬಾರಿ (ಹದಿನಾಲ್ಕು ದಿನಗಳ ಅಂತರದಲ್ಲಿ) ನಂತರ ವರ್ಷಕ್ಕೊಮ್ಮೆ ಹಾಕಿಸಬೇಕು. ಈ ರೋಗ ಕಂಡುಬಂದಾಗ ಕುರಿ ಮಂದೆಯನ್ನು ಒಣಹುಲ್ಲು ಇರುವ ಪ್ರದೇಶದ ಕಡೆ ಮೇಯಲು ಸಾಗಿಸಬೇಕು. ಪದೇ-ಪದೇ ಮೇವನ್ನು ಬದಲಾಯಿಸಬಾರದು ಹಾಗೂ ಹೆಚ್ಚು ಪೌಷ್ಠಿಕ ಮೇವು ತಿನ್ನಲು ಬಿಡಬಾರದು" (ಮಾಹಿತಿದಾರ: ಪ್ರಕಾಶ ಜೋಶಿ:ಬಳ್ಳಾರಿ).

೩. ಕಾಲು ಮತ್ತು ಬಾಯಿಬೇನೆ ರೋಗ (Foot and Mouth Disease)

ಈ ರೋಗವು ಮೆಲಕು ಹಾಕುವ ಪ್ರಾಣಿಗಳಲ್ಲಿ ಹರಡುವ ಸಾಂಕ್ರಮಿಕ ರೋಗವಾಗಿದೆ. ಅಲ್ಲದೆ ಗೊರಸು ಇರುವ ಎಲ್ಲಾ ಪ್ರಾಣಿಗಳಲ್ಲಿಯೂ ಈ ರೋಗವು ಕಂಡುಬರುತ್ತದೆ. ಕಾಲು-ಬಾಯಿ ರೋಗವು ಸಣ್ಣ ವಿಷಾಣುಗಳಿಂದ (Foot and Mouth Vires) ಬರುತ್ತದೆ. ಸಾಮಾನ್ಯವಾಗಿ ಇದು ಬೇಸಿಗೆಯಲ್ಲಿ ಕಾಣಬರುವ ರೋಗವಾಗಿದ್ದು, ಎಲ್ಲಾ ವಯಸ್ಸಿನ ಮತ್ತು ಎಲ್ಲಾ ಜಾತಿಯ ಕುರಿ-ಮೇಕೆಗಳಲ್ಲಿ ಕಂಡುಬರುತ್ತದೆ.

ಕಾರಣ ಮತ್ತು ಹರಡುವಿಕೆ : ಈ ರೋಗಾಣುಗಳು ಬಹಳ ದಿನಗಳ ಕಾಲ ವಾತಾವರಣದಲ್ಲಿ ಬದುಕಬಲ್ಲವು. ರೋಗಗ್ರಸ್ಥ ಕುರಿಗಳ ಸಂಪರ್ಕ, ಗಾಳಿಯ ಮೂಲಕ ರೋಗ ಕಲುಷಿತವಾದ ಕುರಿಗಳ ಜೊಲ್ಲು, ಮೂತ್ರ, ಮಲ, ಸಿಂಬಳ, ಹುಲ್ಲು ಇತ್ಯಾದಿಗಳಿಂದ ಹರಡುತ್ತದೆ.

ಲಕ್ಷಣಗಳು : ರೋಗಗ್ರಸ್ಥ ಕುರಿ-ಮೇಕೆಗಳಲ್ಲಿ ಜ್ವರ ಕಾಣಿಸಿಕೊಳ್ಳುವುದು, ಜೊಲ್ಲು ಸೋರುವಿಕೆ ಕಂಡುಬರುತ್ತದೆ, ಕಾಲಿನ ಗೊರಸುಗಳ ಮಧ್ಯ ದ್ರವ ತುಂಬಿದ ಗುಳ್ಳೆಗಳಿದ್ದು ನೋವಿನಿಂದ ಕುಂಟುವುದು,

ಬಾಯಿಯಲ್ಲಿ ಗುಳ್ಳೆಗಳು ಕಾಣಿಸಿಕೊಳ್ಳುತ್ತದೆ. ಪರಿಣಾಮವಾಗಿ ಕುರಿಗಳು ನಡೆಯಲಾಗದೆ, ಮೇವು ತಿನ್ನದೆ, ನಿಶ್ಯಕ್ತಿ ಹೊಂದಿ ಸಾಯುತ್ತವೆ.

ನಿವಾರಣೆ : ರೋಗಗ್ರಸ್ಥ ಕುರಿಗಳನ್ನು ಬೇರ್ಪಡಿಸಿ ಅವುಗಳಿಗೆ ಪಶುವೈದ್ಯರಿಂದ ಸೂಕ್ತ ಔಷಧೋಪಚಾರ ಮಾಡಿಸಬೇಕು. ದನ ಹಾಗೂ ಎಮ್ಮೆಗಳಲ್ಲಿ ಈ ರೋಗ ಕಂಡುಬಂದಾಗ ಕುರಿಮಂದೆಯನ್ನು ಅವುಗಳಿಂದ ದೂರವಿಡಬೇಕು. ಅಲೆಮಾರಿ ಕುರುಬರು ಬಾಯಿ ರೋಗವನ್ನು ನಿಯಂತ್ರಿಸಲು ಕೇರು ಬೀಜವನ್ನು ಜಜ್ಜಿ, ಬಾಳೆಹಣ್ಣಿನಲ್ಲಿ ಸೇರಿಸಿ ತಿನ್ನಿಸುತ್ತಾರೆ. ಕಾಲಿನಲ್ಲಿ ಆದ ಗಾಯ ನಿಯಂತ್ರಿಸಲು ನೀರಿನಿಂದ ತೊಳೆದು ಚೆಂಡುಹೂವು, ತುಳಸಿತಪ್ಪಲು ಹಾಗೂ ಬೆಳ್ಳೊಳ್ಳಿಯನ್ನು ಚೆನ್ನಾಗಿ ಜಜ್ಜಿ ಸ್ವಲ್ಪ ಸುಣ್ಣವನ್ನು ಸೇರಿಸಿ ಗಾಯದ ಭಾಗಕ್ಕೆ ಹಚ್ಚಲಾಗುತ್ತದೆ. ಈ ರೋಗವನ್ನು ತಡೆಗಟ್ಟಲು ವರ್ಷದಲ್ಲಿ ಎರಡು ಸಲ ಅಂದರೆ ಜನವರಿ ಮತ್ತು ಜುಲೈ ತಿಂಗಳಲ್ಲಿ ಚುಚ್ಚುಮದ್ದು ಹಾಕಿಸಬೇಕು.

೪. ಚಪ್ಪೆ ರೋಗ

ಈ ರೋಗವು ಮುಖ್ಯವಾಗಿ ಕುರಿಗಳಲ್ಲಿ ಮತ್ತು ದನಗಳಲ್ಲಿ ಕಂಡುಬರುತ್ತದೆ. ಚಪ್ಪೆರೋಗವು ಒಂದು ತೀವ್ರ ಸ್ವರೂಪದ ರೋಗವಾಗಿದ್ದು 'ಕ್ಲೋಸ್ಟ್ರೀಡಿಯಂ ಶೋವ್ವೆ' ಎಂಬ ರೋಗಾಣುವಿನಿಂದ ಬರುತ್ತದೆ.

ಕಾರಣ ಮತ್ತು ಹರಡುವಿಕೆ : ರೋಗಾಣುಗಳು ಸೋಂಕು ತಗುಲಿದ ಮಣ್ಣು ಅಥವಾ ಮೇವುನಿಂದ ಸಾಮಾನ್ಯವಾಗಿ ಹರಡುತ್ತದೆ. ಉಣ್ಣೆ ಕತ್ತರಿಸುವಾಗ ಆಗುವ ಗಾಯಗಳಿಂದ ಸೋಂಕು ರೋಗಾಣುಗಳು ಶರೀರವನ್ನು ಹೊಕ್ಕು ಚಪ್ಪೆ ಭಾಗದಲ್ಲಿ ಊತವನ್ನುಂಟು ಮಾಡುತ್ತವೆ.

ಲಕ್ಷಣಗಳು : ರೋಗಗ್ರಸ್ಥ ಕುರಿಗಳಲ್ಲಿ ಜ್ವರವಿದ್ದು ಕುಂಟುವಿಕೆ ಕಂಡುಬರುತ್ತದೆ. ಚಪ್ಪೆ ಹಿಂಭಾಗ, ಭುಜ ಹಾಗೂ ಕುತ್ತಿಗೆ ಭಾಗದಲ್ಲಿ ದಪ್ಪನಾದ ಊತ ಕಂಡುಬರುವುದು. ಈ ಊತಗಳನ್ನು ಕೈಯಿಂದ ಸವರಿದಾಗ ಅದರಲ್ಲಿ ಗಾಳಿ ತುಂಬಿರುವುದು ಕಂಡುಬರುತ್ತದೆ. ಈ ಊತವಾದ ಭಾಗವನ್ನು ಮೆದುವಾಗಿ ಅದುಮಿದರೆ 'ಮುರ್-ಮುರ್' ಎಂಬ ಶಬ್ದ ಬರುತ್ತದೆ. ಕುರಿಗಳು ನಿರುತ್ಸಾಹದಿಂದ ಮೇಯುವುದನ್ನು ಬಿಡುತ್ತವೆ.

ನಿವಾರಣೆ : ಚಪ್ಪೆ ರೋಗ ಲಸಿಕೆಯನ್ನು ಮುಂಗಾರು ಮಳೆ ಬೀಳುವ ಮುನ್ನವೇ ಕುತ್ತಿಗೆ ಇಲ್ಲವೆ ತೊಡೆಯ ಭಾಗಗಳಲ್ಲಿ ಹಾಕಿಸಬೇಕು.

೫. ಕುರಿ ಸಿಡುಬು (ಕುರಿ ಮೈಲಿ, ದೇವಿ, ಅಮ್ಮ)

ಈ ರೋಗವು ವೈರಾಣುವಿನಿಂದ ಹರಡುವ ಸಾಂಕ್ರಾಮಿಕ ರೋಗವಾಗಿದೆ. ವೈರಾಣವು ಗಾಳಿ, ಜೊಲ್ಲು, ಸಿಂಬಳ, ಚರ್ಮದ ಹೊಟ್ಟು ಹಾಗೂ ರೋಗಗ್ರಸ್ಥ ಕುರಿಗಳ ಸಂಪರ್ಕದ ವಸ್ತುಗಳು

ಹಾಗೂ ಜನರಿಂದ ಹರಡುತ್ತದೆ. ನೋವಿನಿಂದ ಕುಂಟುವುದು, ಬಾಯಿಯಲ್ಲಿ ಗುಳ್ಳೆಗಳು ಕಾಣಿಸಿಕೊಳ್ಳುತ್ತವೆ.

ಲಕ್ಷಣಗಳು : ರೋಗಗ್ರಸ್ಥ ಕುರಿಗಳಲ್ಲಿ ಜ್ವರ, ಕಣ್ಣಲ್ಲಿ ನೀರು ಸೋರುವುದು, ಮೂಗಿನಲ್ಲಿ ಸಿಂಬಳ ಹಾಗೂ ಬಾಯಿಯಲ್ಲಿ ಜೊಲ್ಲು-ಸೋರುವುದು ಕಂಡುಬರುತ್ತದೆ. ನಂತರ ಬಾಲದ ಬುಡ, ಕಣ್ಣಿನ ಸುತ್ತ, ಕೆಚ್ಚಲು, ತುಟಿಗಳ ಮೇಲೆ ಮತ್ತು ತೊಡೆಗಳ ಚರ್ಮದ ಮೇಲೆ ಬೊಕ್ಕೆಗಳು ಕಾಣಿಸಿಕೊಳ್ಳುತ್ತವೆ. ಈ ಬೊಕ್ಕೆಗಳು ನಂತರ ಹುಣ್ಣಾಗಿ ಮಾರ್ಪಾಡಾಗುತ್ತವೆ. ಕುರಿಮರಿಗಳಲ್ಲಿ ರೋಗ ಪ್ರಮಾಣ ಹೆಚ್ಚಾಗಿ ಕಂಡುಬರುವುದು. ರೋಗಗ್ರಸ್ಥ ಕುರಿ ಹಿಂಡಿನಲ್ಲಿ ಸುಮಾರು ಶೇ. ೫೦ ರಷ್ಟು ಕುರಿಗಳು ಸಾಯುತ್ತವೆ. ಗರ್ಭಧರಿಸಿದ ಕುರಿಗಳು ಕಂದು ಹಾಕಬಹುದು.

ನಿವಾರಣೆ : ರೋಗಗ್ರಸ್ಥ ಕುರಿಗಳನ್ನು ಕುರಿ ಹಿಂಡಿನಿಂದ ಬೇರ್ಪಡಿಸಬೇಕು. ತಕ್ಷಣ ಪಶುವೈದ್ಯರನ್ನು ಸಂಪರ್ಕಿಸಿ ಔಷಧೋಪಚಾರ ಮಾಡಿಸಬೇಕು. ರೋಗ ತಡೆಗಟ್ಟಲು ಕುರಿಗಳಿಗೆ ಬೇಸಿಗೆ ಕಾಲಕ್ಕೆ ಮುಂಚೆಯೇ ಕುರಿ ಸಿಡುಬು ಲಸಿಕೆ ಹಾಕಿಸಬೇಕು.

೬. ನೀಲಿನಾಲಿಗೆ ರೋಗ

ನಮ್ಮ ದೇಶದಲ್ಲಿ ಇತ್ತೀಚಿನ ವರ್ಷಗಳಲ್ಲಿ ಕಂಡು ಬಂದಿರುವ ನೀಲಿ ನಾಲಿಗೆ ರೋಗ ಹೊಸ ರೋಗವಾಗಿದೆ. ಕುರಿ-ಮೇಕೆ, ದನಗಳಲ್ಲಿ ಈ ರೋಗ ಬರುತ್ತದೆಯಾದರೂ ಕುರಿಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುವುದು ಸ್ವಾಭಾವಿಕ. ಇದು 'ಸಿಯೋ-ವೈರಸ್' ಎಂಬ ರೋಗಾಣುಗಳಿಂದ ಬರುತ್ತದೆ.

ಕಾರಣ ಮತ್ತು ಹರಡುವಿಕೆ : ಮಳೆಗಾಲದಲ್ಲಿ ಸೊಳ್ಳೆಗಳು ಸಂಖ್ಯೆ ಹೆಚ್ಚಾಗಿರುವುದು ಮತ್ತು ಅವುಗಳ ಕಡಿತದಿಂದ ಮನುಷ್ಯ ಹಾಗೂ ಪ್ರಾಣಿಗಳಿಗೆ ರೋಗ-ರುಜಿನಗಳು ಕಾಣಿಸಿಕೊಳ್ಳುವುದು ಎಲ್ಲರಿಗೂ ತಿಳಿದಿರುವ ಸಂಗತಿಯಾಗಿದೆ. ಹಾಗೆಯೇ 'ಕ್ಯೂಲಿಕಾಯ್ಡ್ಸ್' ಎಂಬ ಸೊಳ್ಳೆಗಳು ಕುರಿಗಳನ್ನು ಕಚ್ಚುವುದರಿಂದ ನೀಲಿನಾಲಿಗೆ ರೋಗ ಬರುತ್ತದೆ. ಕುರಿಗಳನ್ನು ಜೌಗು ಅಥವಾ ನೀರಿರುವ ಪ್ರದೇಶದ ಸುತ್ತಮುತ್ತ ಮೇಯಿಸುವಾಗ ಈ ಸೊಳ್ಳೆಗಳು ಕಚ್ಚುತ್ತವೆ. ಈ ರೋಗವು ಮಳೆಗಾಲ ಅಥವಾ ಮಳೆಗಾಲದ ನಂತರ ಕಂಡುಬರುತ್ತದೆ.

ಲಕ್ಷಣಗಳು : ಈ ರೋಗ ತಗುಲಿದ ಕುರಿಗಳು ಮೇಯುವುದಿಲ್ಲ. ಕುರಿಗಳಲ್ಲಿ ಜ್ವರವಿದ್ದು, ಕಿವಿ, ಮೂಗು, ಕಣ್ಣು, ರೆಪ್ಪೆ ಮತ್ತು ಗಂಟಲು ಭಾಗಗಳಲ್ಲಿ ಊತ ಕಾಣಿಸಿಕೊಳ್ಳುತ್ತದೆ. ಬಾಯಿ ಮತ್ತು ಮೂಗಿನ ಒಳಪದರು ಕೆಂಪಾಗುವುದು, ನೊರೆಯುಕ್ತ ಜೊಲ್ಲು ಸುರಿಯುವುದು, ತುಟಿ, ವಸಡು, ಮುಖ ಹಾಗೂ ಗದ್ದದ ಭಾಗ ಬಾತುಕೊಳ್ಳುವುದು ಕಂಡುಬರುತ್ತದೆ. ನಾಲಿಗೆಯು ನೀಲಿ ಬಣ್ಣದಂತೆ ಕಾಣುತ್ತದೆ. ಬಾಯಿಯಲ್ಲಿ ಹುಣ್ಣುಗಳಾಗಿ ನಾಲಿಗೆ ದಪ್ಪವಾಗುತ್ತದೆ. ಪರಿಣಾಮವಾಗಿ ಕುರಿಗಳು ಮೇವು ತಿನ್ನದೆ, ನಿಶ್ಯಕ್ತಿ ಹೊಂದಿ ಸಾವು ಉಂಟಾಗುತ್ತದೆ.

ನಿವಾರಣೆ : ಈ ರೋಗ ಕಂಡುಬಂದಾಗ ರೋಗಗ್ರಸ್ಥ ಕುರಿಗಳನ್ನು ಪ್ರತ್ಯೇಕಿಸಬೇಕು. ರೋಗ ನಿಯಂತ್ರಣಕ್ಕೆ ಕುರಿಗಳ ಆರೈಕೆ ತುಂಬಾ ಮುಖ್ಯವಾದುದು. ಆದುದರಿಂದ ರೋಗಗ್ರಸ್ಥ ಕುರಿಗಳಿಗೆ ಔಷಧೋಪಚಾರದ ಜೊತೆಗೆ ಅವುಗಳಿಗೆ ರಾಗಿ ಗಂಜಿ, ಜೋಳದ ಗಂಜಿ, ಮೆತ್ತನೆಯ ಹುಲ್ಲು ಹಾಗೂ ಸೊಪ್ಪನ್ನು ಕೊಡಬೇಕು.

"ಈ ರೋಗಕ್ಕೆ ಸೂಕ್ತ ಲಸಿಕೆ ನಮ್ಮ ದೇಶದಲ್ಲಿ ಇರುವುದಿಲ್ಲ. ಆದುದರಿಂದ ಮುಂಜಾಗ್ರತ ಕ್ರಮವಾಗಿ ಕುರಿಗಳನ್ನು 'ಕೂಲಿ-ಕಾಯ್ಡ್' ಸೊಳ್ಳೆಗಳಿಂದ ದೂರವಿಡುವುದು. ಮುಂಜಾನೆ ಮತ್ತು ಸಂಜೆ ವೇಳೆಯಲ್ಲಿ ನೀರು ನಿಲ್ಲುವ ತಗ್ಗು ಪ್ರದೇಶದಲ್ಲಿ ಕುರಿಗಳನ್ನು ತಬ್ಬುವುದಾಗಲಿ ಅಥವಾ ಮೇಯಿಸುವುದಾಗಲಿ ಮಾಡಬಾರದು. ಕುರಿ ತಬ್ಬಿದ ಸ್ಥಳದಲ್ಲಿ ಸಂಜೆ ಬೇವಿನ ಸೊಪ್ಪು ಮತ್ತು ಕಸಕಡ್ಡಿಗಳನ್ನು ಸುಟ್ಟು ಹೊಗೆಯಾಡಿಸಬೇಕು. ಮಳೆಗಾಲದಲ್ಲಿ ಮತ್ತು ಚಳಿಗಾದಲ್ಲಿ ಉಣ್ಣೆ ಕತ್ತರಿಸ ಬಾರದು. ದೇಹದ ಮೇಲೆ ಉಣ್ಣೆ ಇದ್ದಾಗ ಸೊಳ್ಳೆಗಳು ಸುಲಭವಾಗಿ ಕುರಿಗಳನ್ನು ಕಚ್ಚಲು ಆಗುವುದಿಲ್ಲ. ನೀಲಿ ನಾಲಗೆ ರೋಗ ಹರಡದಂತೆ ಸೊಳ್ಳೆ, ನೊಣ ಮುಂತಾದ ಕೀಟಗಳ ಹಾವಳಿಯಿಂದ ಕುರಿಗಳನ್ನು ರಕ್ಷಿಸಬೇಕು. ಇದಕ್ಕಾಗಿ ೮೦ ಮಿ.ಲೀಟರ್ ಸೀಮೆಎಣ್ಣೆ, ೧೦ ಗ್ರಾಂ ನುಸಿ ಗುಳಿಗೆ, ೫ ಮಿ.ಲೀಟರ್ ನೀಲಗಿರಿ ತೈಲ ಹಾಗೂ ೫ ಮಿ.ಲೀಟರ್ ಬೇವಿನ ಎಣ್ಣೆಯನ್ನು ಮಿಶ್ರಣ ಮಾಡಿ, ದ್ರಾವಣ ತಯಾರಿಸಿ ಕಣ್ಣನ್ನು ಹೊರತುಪಡಿಸಿ ಕುರಿಯ ದೇಹಕ್ಕೆ ಸಿಂಪಡಿಸಬೇಕು" (ಪ್ರೊಫೈಲ್ 'ರೈತರ ಭಾಗ್ಯಕ್ಕೆ':ಕುರಿ-ಮೇಕೆ ಸಂಗೋಪನೆ:೧೮). ಆದರೆ ಈ ದ್ರಾವಣವನ್ನು ಮೇವು ಮತ್ತು ನೀರಿಗೆ ಸಿಂಪಡಿಸದಂತೆ ಎಚ್ಚರ ವಹಿಸಬೇಕು. ಮೇಲಿನ ಈ ಎಲ್ಲ ನಿಯಂತ್ರಣ ಕ್ರಮಗಳಿಂದ ಕುರಿಗಳಲ್ಲಿ ನೀಲಿ ನಾಲಿಗೆ ರೋಗದ ಸೊಂಕು ತಾಕದಂತೆ ನಿಯಂತ್ರಿಸಬಹುದಾಗಿದೆ.

೭. ದೊಡ್ಡ ರೋಗ (ಹಿರೇಬೇನೆ)

"ರೋಗಗಳಲ್ಲೆಲ್ಲಾ ಹಿರಿಯಣ್ಣನಾದ ಈ ರೋಗವು ವೈರಾಣುಗಳಿಂದ ಹರಡುತ್ತದೆ. ಮನುಷ್ಯರಿಗೆ ತಗಲುವ ಪ್ಲೇಗಿಗೆ ಸಮನವಾದ ಈ ರೋಗ ಇತ್ತೀಚಿನ ದಿನಗಳಲ್ಲಿ ಮಹಾಮಾರಿಯಾಗಿ ಬೆಳೆದು ಲಕ್ಷಾಂತರ ಕುರಿಗಳನ್ನು ಬಲಿ ತೆಗೆದುಕೊಂಡಿದೆ. ಕೇವಲ ೧೦ ವರ್ಷಗಳ ಹಿಂದೆ ಭಾರತದ ಕುರಿ-ಮೇಕೆಗಳಲ್ಲಿ ಕಂಡುಬಂದ ಈ ರೋಗವು ವಿಶ್ವವನ್ನೇ ಹದ್ದುಬಸ್ತಿನಲ್ಲಿಟ್ಟುಕೊಂಡಿದೆ" (ಪತ್ರಿಕಾ ವರದಿ: ಪ್ರಜಾವಾಣಿ:ಫೆಬ್ರವರಿ ೮:೨೦೦೬:೪). ಇದು ಕುರಿ-ಮೇಕೆಗಳಿಗೆ ಹರಡುವ ಸಾಂಕ್ರಾಮಿಕ ರೋಗವಾಗಿದ್ದು, ಯಾವ ಕಾಲದಲ್ಲಿಯಾದರೂ ಬರಬಹುದು. ಇದನ್ನು 'ಕುರಿಗಳ ಪ್ಲೇಗ್' ಎಂದು ಕರೆಯುತ್ತಾರೆ. ಈ ರೋಗ 'ಮಿಕ್ಸೋ ವೈರಸ್' ಗುಂಪಿಗೆ ಸೇರಿದ 'ಆರ್. ಎನ್. ಎ.' ರೋಗಾಣುಗಳಿಂದ ಬರುತ್ತದೆ.

ಹರಡುವಿಕೆ : ಇದು ತೀವ್ರ ಸ್ವರೂಪದ ಸಾಂಕ್ರಾಮಿಕ ಅಂಟುರೋಗವಾಗಿದೆ. ರೋಗವಿರುವ

ಪ್ರಾಣಿಗಳ ಸಂಪರ್ಕ, ಸೋಂಕು ತಗುಲಿದ ಪ್ರಾಣಿಗಳ ಮಲ, ಮೂತ್ರ, ಜೊಲ್ಲು, ಸಿಂಬಳ, ನೀರು ಮತ್ತು ಮೇವು ಇತ್ಯಾದಿಗಳಿಂದ ಈ ರೋಗ ಹರಡುತ್ತದೆ.

ರೋಗ ಲಕ್ಷಣಗಳು : ರೋಗ ಕಾಣಿಸಿಕೊಂಡ ಕುರಿಗಳಲ್ಲಿ ಅತಿಯಾದ ಜ್ವರ ಕಾಣಿಸಿಕೊಳ್ಳುತ್ತದೆ. ಕಣ್ಣು ಕೆಂಪಾಗಿ ನೀರು ಸೋರುತ್ತದೆ. ನಂತರ ಗೀಜು (ಪಿಚ್ಚು) ಕಟ್ಟುವಿಕೆ ಕಂಡುಬರುತ್ತದೆ. ಬಾಯಿಯಲ್ಲಿ ಹುಣ್ಣಾಗಿ ನೊರೆಯುಕ್ತ ಜೊಲ್ಲು ಸೋರಿಸುತ್ತವೆ. ಕುರಿಗಳು ಮೇವನ್ನು ಬಿಟ್ಟು ನಿಶ್ಯಕ್ತಿಯಿಂದ ಮಂಕಾಗುತ್ತವೆ. ಮೊದಲು ಮಲಬದ್ಧತೆಯಿದ್ದು ಎರಡು-ಮೂರು ದಿನಗಳ ನಂತರ ದುರ್ಗಂಧವಾದ, ಕೊಳೆತ ನಾತವುಳ್ಳ ಬಹಳ ನೀರು-ನೀರಾದ ಬಿರುಸಿನ ಮಲವಿಸರ್ಜನೆ ಶುರುವಾಗುತ್ತದೆ. ನಂತರ ಜ್ವರದ ತಾಪಮಾನ ಸಹ ಕಡಿಮೆಯಾಗುವದಲ್ಲದೆ ಭೇದಿಯು ನಿಲ್ಲುತ್ತದೆ. ಅತಿಭೇದಿಯಿಂದಾಗಿ ದೇಹದ ನೀರಿನಾಂಶ ಕಡಿಮೆಯಾಗಿ ನಿತ್ರಾಣ, ಮೈ ಒಣಗುವುದು, ಹೊಟ್ಟೆನೋವು, ತ್ವರಿತ ಉಸಿರಾಟ ಮುಂತಾದವುಗಳಿಂದ ಶರೀರದ ಉಷ್ಣವು ಸಾಮಾನ್ಯ ಮಟ್ಟಕ್ಕಿಂತ ಕಡಿಮೆಯಾಗಿ ಕುರಿಗಳು ಸಾಯುತ್ತವೆ.

ನಿವಾರಣೆ : ದೊಡ್ಡ ರೋಗದಿಂದ ನರಳುವ ಕುರಿಗಳನ್ನು ಚಿಕಿತ್ಸೆಯಿಂದ ಗುಣಪಡಿಸಲು ತುಂಬಾ ಕಷ್ಟ. ರೋಗಗ್ರಸ್ಥ ಕುರಿಗಳು ಕಂಡುಬಂದಲ್ಲಿ ಅವನ್ನು ಪ್ರತ್ಯೇಕಿಸಬೇಕು. ಈ ರೋಗದ ಸುಳಿವು ಸಿಕ್ಕ ಕೂಡಲೇ ಪಶುವೈದ್ಯಾಧಿಕಾರಿಗಳಿಗೆ ತಿಳಿಸಬೇಕು. ಅವರ ಸಹಾಯದಿಂದ ದೊಡ್ಡ-ರೋಗ (ಪಿ.ಪಿ.ಆರ್.) ಲಸಿಕೆ ಹಾಕಿಸಬೇಕು. ಮುಂಜಾಗ್ರತೆ ಕ್ರಮವಾಗಿ ಸಾಮೂಹಿಕವಾಗಿ ಎಲ್ಲ ಕುರಿಗಳಿಗೆ ಲಸಿಕೆ ಹಾಕಿಸುವುದರಿಂದ ಈ ರೋಗವನ್ನು ತಡೆಗಟ್ಟಬಹುದು. ಈ ರೋಗ ತಗುಲಿದ ಸ್ಥಳಗಳಿಂದ ಹುಲ್ಲು ಅಥವಾ ಇತರೆ ಯಾವ ಪ್ರಾಣಿಗಳನ್ನು ತರುವುದಾಗಲಿ ಹಾಗೂ ಅಂತಹ ಸ್ಥಳಗಳಿಗೆ ಕುರಿ-ಮೇಕೆಗಳನ್ನು ಕೊಂಡೊಯ್ಯುವುದಾಗಲಿ ಮಾಡಬಾರದು.

೮. ಗಂಟಲು ಬೇನೆ (ಗಳಲೆ ರೋಗ)

ಭಾರತ ದೇಶದ ಶೇ. ೩೦ ರಷ್ಟು ಕುರಿ-ಮೇಕೆಗಳಲ್ಲಿ ಕಂಡುಬರುವ ಈ ರೋಗ 'ಪ್ಯಾಶ್ಚುರೆಲ್ಲಾ' ಎಂಬ ಬ್ಯಾಕ್ಟೀರೀಯದಿಂದ ಬರುತ್ತದೆ. ಇದಕ್ಕೆ ಸಾಗಣಿಕೆ ಜ್ವರ, ರಕ್ತನಂಜು ಹಾಗೂ ನ್ಯೂಮೋನಿಯಾ ಎಂದೂ ಕರೆಯಲಾಗುತ್ತದೆ.

ಹರಡುವಿಕೆ : ಈ ರೋಗವು ವಿಷಾಣುಗಳಿಂದ ಹರಡುವ ಒಂದು ಸಾಂಕ್ರಾಮಿಕ ರೋಗ. ಕಲಷಿತ ನೀರು, ಮೇವು, ರೋಗಗ್ರಸ್ಥ ಕುರಿಗಳ ಸಂಪರ್ಕದಿಂದ ಒಂದು ಕುರಿಯಿಂದ ಮತ್ತೊಂದು ಕುರಿಗೆ ಹರಡುತ್ತದೆ. ಅಲೆಮಾರಿ ಕುರುಬರು ಮಳೆಗಾಲದ ಆರಂಭದಲ್ಲಿ ಅಥವಾ ತಂಪುಗಾಲದಲ್ಲಿ ಕುರಿ ಹಿಂಡನ್ನು ಗುಡ್ಡಗಾಡು ಪ್ರದೇಶಕ್ಕೆ ಅಥವಾ ದೂರದ ಸ್ಥಳಗಳಿಗೆ ವಲಸೆ ಹೋಗುವುದರಿಂದ ಆರೋಗ್ಯವಂತ ಕುರಿಗಳು, ಗರ್ಭ ಧರಿಸಿದ ಕುರಿಗಳು ಮತ್ತು ಮರಿಗಳು ಸುಸ್ತಾಗುವುದುರ ಜೊತೆಗೆ ನಿತ್ರಾಣಗೊಳ್ಳುತ್ತವೆ. ಇದರ ಪರಿಣಾಮವಾಗಿ ಕುರಿಗಳ ರೋಗ ನಿರೋಧಕ ಶಕ್ತಿ ಕಡಿಮೆಯಾಗುತ್ತದೆ.

ಪ್ರಾಣಿಯ ಶ್ವಾಸಕೋಶದಲ್ಲಿ ವಾಸವಾಗಿರುವ ಈ ಬ್ಯಾಕ್ಟೀರಿಯಾಗಳು ರೋಗಾಣುಗಳಾಗಿ ಮಾರ್ಪಾಡಾಗಿ ಗಳಲೆ (ಗಂಟಲು) ರೋಗವನ್ನುಂಟಾಗುತ್ತದೆ.

ಲಕ್ಷಣಗಳು : ರೋಗಗ್ರಸ್ಥ ಕುರಿಗಳು ಮೇಯುವುದನ್ನು ಬಿಡುತ್ತವೆ. ಒಮ್ಮೊಮ್ಮೆ ಭೇದಿ ಅಥವಾ ರಕ್ತ ಮಿಶ್ರಿತ ಭೇದಿ ಕಾಣುತ್ತದೆ. ಕೆಮ್ಮು, ಸೀನು, ನೆಗಡಿ, ಸಿಂಬಳ ಬರುತ್ತದೆ. ಅತಿಯಾದ ಜ್ವರ ಇರುವುದಲ್ಲದೆ ಉಸಿರಾಟಕ್ಕೆ ತೊಂದರೆ ಹೆಚ್ಚಾಗುತ್ತದೆ. ಆಹಾರ ತಿನ್ನದೆ ೨-೩ ದಿನಗಳಲ್ಲಿ ಕುರಿಗಳು ಸಾವನ್ನಪ್ಪುತ್ತವೆ.

ನಿವಾರಣೆ : ಈ ರೋಗ ಕಂಡುಬಂದ ಕೂಡಲೇ ಪಶುವೈದ್ಯರನ್ನು ಸಂಪರ್ಕಿಸಿ ಸೂಕ್ತ ಔಷಧೋಪಚಾರದಿಂದ ರೋಗವನ್ನು ನಿಯಂತ್ರಿಸಬಹುದು. ಮುಂಜಾಗ್ರತೆಗಾಗಿ ಗಳಲೆ ರೋಗ ಲಸಿಕೆಯನ್ನು ಕುರಿಗಳಿಗೆ ಮಳೆಗಾಲದ ಪ್ರಾರಂಭ ಮತ್ತು ಚಳಿಗಾಲದ ಮಧ್ಯ ಭಾಗದಲ್ಲಿ ಹಾಕಿದರೆ ಕುರಿ ಹಿಂಡನ್ನು ರಕ್ಷಿಸಬಹುದು.

೯. ಕಂದು ಹಾಕುವ ರೋಗ (ಬ್ರುಸೆಲ್ಲೋಸಿಸ್)

ಈ ರೋಗವು ಕುರಿಗೆ 'ಬ್ರಸೆಲ್ಲಾ ಓವಿಸ್' ಎಂಬ ಬ್ಯಾಕ್ಟೀರೀಯದಿಂದ ಹಾಗೂ ಮೇಕೆಗೆ 'ಬ್ರುಸೆಲ್ಲಾ ಮೆಲಿಟೆನ್ಸಿಸ್' ಎಂಬ ಬ್ಯಾಕ್ಟೀರಿಯಾದಿಂದ ಬರುತ್ತದೆ.

ರೋಗ ಲಕ್ಷಣ : ಗರ್ಭಸ್ತ ಕುರಿ ಕಂದು ಹಾಕುತ್ತದೆ.

ನಿವಾರಣೆ : ಚಿಕಿತ್ಸೆ ಉಪಯೋಗಕಾರಿಯಾಗಿ ಕಂಡುಬಂದಿಲ್ಲ. ವರ್ಷಕ್ಕೊಮ್ಮೆ ಕುರಿಮಂದೆಯಲ್ಲಿರುವ ಎಲ್ಲಾ ಕುರಿಗಳಿಗೆ ರಕ್ತ-ತಪಾಸಣೆ ಮಾಡಿಸಬೇಕು. ರೋಗಗ್ರಸ್ತ ಕುರಿ ಕಂಡುಬಂದರೆ ಅದನ್ನು ವಧೆ ಮಾಡಬೇಕು.

೩.೫.೪ ಮುಂಜಾಗ್ರತ ಕ್ರಮಗಳು

➲ ವಲಸೆ ಹೊರಡುವ ಅಲೆಮಾರಿ ಕುರುಬರು ತಮ್ಮ 'ಕುರಿ ಪರಿವಾರ'ದ ಜೊತೆ ಆರೋಗ್ಯ ಲಸಿಕೆಗಳು, ಹೋಗುತ್ತಿರುವ ಸ್ಥಳದ ವಾತಾವರಣದ ಮಾಹಿತಿ, ರೋಗ ಪ್ರಸರಣತೆ, ಆ ಪ್ರದೇಶದ ರೋಗೋದ್ರೇಕಗಳ ಸೂಕ್ತ ಮಾಹಿತಿ ಹೊಂದಿರಬೇಕು.

➲ ಸಾಮಾನ್ಯವಾಗಿ ಅಲೆಮಾರಿ ಕುರುಬರು ವರ್ಷವಿಡಿ ಅಲೆದಾಡುವುದರಿಂದ ಚಳಿಗಾಲ ಮತ್ತು ಅಕ್ಟೋಬರ್‌ನಲ್ಲಿ ಕಾಣಿಸಿಕೊಳ್ಳುವ ಕಾಲುಬಾಯಿ ಜ್ವರ, ನೀಲಿನಾಲಿಗೆ ಮತ್ತು ಫೆಬ್ರವರಿಯಲ್ಲಿ ಕಾಣಿಸಿಕೊಳ್ಳುವ ಕುರಿ ಪ್ಲೇಗಿನ ಲಸಿಕೆ ಹಾಕಿಸಬೇಕು.

➲ ಕುರಿಮಂದೆಯಲ್ಲಿ ಇರುವ ಮರಿಗಳು ಮತ್ತು ಗರ್ಭದ ಕುರಿಗಳ ಬಗ್ಗೆ ಹೆಚ್ಚು ಗಮನ ನೀಡಬೇಕು.

- ಎಲ್ಲಾ ಕುರಿಗಳಿಗೂ ಪರೋಪಜೀವಿಗಳಾದ ಜಂತು, ಕಾಲರಾ, ದುಂಡು ಹುಳುಗಳ ಔಷಧಿಯನ್ನು ಕಾಲಾನುಕ್ರಮವಾಗಿ ನೀಡುತ್ತಿರಬೇಕು.
- ಕುರಿಗಳನ್ನು ತಬ್ಬುವ ಜಾಗವು ನೀರಿನ ಸೌಕರ್ಯ ಇರುವ ಕೆರೆ-ಕಟ್ಟೆಗಳ ಹತ್ತಿರ ಇರಬಾರದು. ಏಕೆಂದರೆ ಆ ಊರಿನ ರೋಗಗ್ರಸ್ತ ಪ್ರಾಣಿಗಳು ಅಲ್ಲೇ ನೀರು ಕುಡಿಯುವುದರಿಂದ ಮತ್ತು ರೈತರು ಸತ್ತ ಪ್ರಾಣಿಗಳನ್ನು ಕೆರೆಯ ಹತ್ತಿರವೆ ಬಿಸಾಡುವುದರಿಂದ ಗಳಲೆ, ಕುರಿಪ್ಲೇಗು, ಅಂತ್ರ್ಯಾಕ್ಸ್ ಬರುವ ಸಂಭವಗಳು ಹೆಚ್ಚು.
- ಕುರಿಮಂದೆ ಹಾದುಹೋಗುವ ಮತ್ತು ತಬ್ಬುವ ಊರಿನ ಹೊಲ-ಗದ್ದೆಗಳಲ್ಲಿ ಯಾವುದೇ ರೋಗ ಲಕ್ಷಣಗಳಿದ್ದರೆ, ಅವು ಕುರಿಗಳನ್ನೂ ಕಾಡುವ ಸಂಭವ ಹೆಚ್ಚಾಗಿದ್ದು, ಜಾಗೃತರಾಗಿರಬೇಕು.
- ಆಯಾ ಪ್ರದೇಶದ ವಿಷಯುಕ್ತ ಗಿಡಗಂಟೆಗಳ ಬಗ್ಗೆ ಮಾಹಿತಿ ಇರಬೇಕು.
- ಅಲೆಮಾರಿ ಕುರಿಗಾರರು ಕುರಿಮಂದೆಯನ್ನು ಊರಿನ ಇತರೆ ಪ್ರಾಣಿಗಳ ಜೊತೆ ಬೆರೆಸಬಾರದು.
- ಹೀಗೆ ಎಲ್ಲಾ ತರಹದ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡು ನಡೆದಾಡುವ ಹಣದ ಬ್ಯಾಂಕುಗಳಾದ ಕುರಿ-ಮೇಕೆಗಳನ್ನು ಆರೋಗ್ಯಕರವಾಗಿ ಬೆಳೆಸಿ ಆರ್ಥಿಕತೆಯನ್ನು ಹೆಚ್ಚು ಮಾಡಿಕೊಳ್ಳಬೇಕು.

ಆಧಾರ ಗ್ರಂಥಗಳು

೧. ಶೇಷಾದ್ರಿ ಬಿ., **ಬಳ್ಳಾರಿ ಜಿಲ್ಲೆಯಲ್ಲಿ ಕೈಗಾರೀಕರಣ ಮತ್ತು ಜನಾಂದೋಲನ**, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ನಂಜಣ್ಣನವರ ಎಸ್.ಎಸ್., ಮತ್ತು ಪಿ. ಮಲ್ಲಪ್ಪ., **ಭೂಗೋಳ ಸಂಗಾತಿ-೩**, ಪ್ರಕಾಶಕರು ಗಾಯತ್ರಿ ಎಂಟರ್‌ಪ್ರೈಸಸ್, ಮೈಸೂರು.

೩. ರಾಮ್‌ರಾವ್ ಜ್ಯೋತಿ., **ಆಡು ಮತ್ತು ಕುರಿಸಾಕಣೆ**, ಸಮಾಜ ಪುಸ್ತಕಾಲಯ, ಧಾರವಾಡ, ೧೯೮೯

೪. ಶಿವಾನಂದ ಗುಬ್ಬಣ್ಣನವರ., **ಕರ್ನಾಟಕದ ಕುರುಬರು**, ಅಕ್ಷಯ ಪ್ರಕಾಶನ, ಧಾರವಾಡ, ೧೯೯೩

೫. ಗೋವಿಂದಯ್ಯ ಎಂ.ಜಿ., ಡಾ. ಜಗನ್ನಾಥ್., **ಗ್ರಾಮೀಣ ಅಭಿವೃದ್ಧಿಯಲ್ಲಿ ಕುರಿಸಾಕಣೆ ಮಹತ್ವ**, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು, ೨೦೦೫

೬. ಪ್ರೊಫೈಲ್ "ರೈತರ ಭಾಗ್ಯಕ್ಕೆ" *ಕುರಿ ಮತ್ತು ಮೇಕೆ ಸಂಗೋಪನೆ*, ಪಶುಪಾಲನೆ ಮತ್ತು ಪಶುವೈದ್ಯಕೀಯ ಆಸ್ಪತ್ರೆ ಮತ್ತು ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ, ಬೆಂಗಳೂರು.

ಅಧ್ಯಾಯ ೪

ಅಲೆಮಾರಿ ಕುರುಬರ ಅಲೆಮಾರಿತನ

ಅಲೆಮಾರಿ ಕುರುಬರ ಅಲೆಮಾರಿತನ

೪.೧ ಮೂಲ ಮತ್ತು ಜನಸಂಖ್ಯೆ

ಅಲೆಮಾರಿ ಕುರುಬ ಸಮುದಾಯದ ಮೂಲವೆಂದರೆ ಮಾನವ ಸಮುದಾಯದ ಮೂಲವೆಂದೇ ಹೇಳಬೇಕಾಗುತ್ತದೆ. ಬೇಟೆಗಾರಿಕೆಯ ಮೂಲ ಸಮುದಾಯಗಳು ಕಾಲಾಂತರದಲ್ಲಿ ಪಶುಪಾಲನೆಗೆ ತೊಡಗಿಕೊಂಡು ಅಲ್ಲಿಂದ ಕೃಷಿ, ಕೈಗಾರಿಕೆ ಮತ್ತು ವಾಣಿಜ್ಯ ಕ್ಷೇತ್ರಗಳಿಗೆ ಪಸರಿಸಿವೆ. ಮಾನವ ವಿಕಸನದ ಮೊದಲ ಘಟ್ಟವಾದ ಬೇಟೆಗಾರಿಕೆಯಲ್ಲಿಯ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಸಾಕು ಪ್ರಾಣಿಗಳನ್ನು (ಕುರಿ-ಮೇಕೆ) ಸಲಹುತ್ತ ಹಲವರು ಪಶುಪಾಲಕರಾದರು. ಪಶುಪಾಲನೆಯಲ್ಲಿಯ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಅವರಲ್ಲಿಯೇ ಕೆಲವರು ಕೃಷಿಯತ್ತ ವಾಲಿದರು. ಹೀಗೆಯೇ ಕಾಲಾಂತರದಲ್ಲಿ ನಾನಾ ವೃತ್ತಿಯ ಮಜಲುಗಳು ಆರಂಭವಾದವು. ಅಂತೆಯೇ ಪಶುಪಾಲಕರಲ್ಲಿ ಕುರಿಗಳನ್ನು ಪೋಷಿಸಿಕೊಂಡು ಬಂದ ಕುರುಬರು ಕುರಿಗಳ ಆಹಾರಕ್ಕಾಗಿ ಅಲೆಯಲಾರಂಭಿಸಿದರು. ಹೀಗೆ ಅವರ ಮೂಲವು ಮಾನವ ಸಂಸ್ಕೃತಿಯ ಮೂಲದೊಂದಿಗೆ ಆರಂಭವಾಗುತ್ತದೆ. ಯಾವುದೇ ಒಂದು ಸಮುದಾಯದ ಮೂಲ ವೃತ್ತಿ, ಸಂಪ್ರದಾಯ, ಆಚರಣೆಗಳು ಸ್ಥಳೀಯ ಪರಿಸರ ಮತ್ತು ಜನ ಸಮುದಾಯಗಳ ಪ್ರಭಾವದಿಂದ ಬದಲಾವಣೆಯಾಗಬಹುದು. ಇಂತಹ ಸಂದರ್ಭದಲ್ಲಿ ಸಂಶೋಧಕರಿಗೆ ಸಮುದಾಯದ ಮೂಲವನ್ನು ಗುರುತಿಸುವುದು ಸಮಸ್ಯೆಯಾಗಬಹುದು. ಅಂತಹ ಪರಿಸ್ಥಿತಿಯಲ್ಲಿ ಆ ಸಮುದಾಯದ ಮೂಲಭಾಷೆ, ಕುಲ-ಬಳಿ(ಬೆಡಗು-ಗೋತ್ರ)ಗಳು, ಕುಲಚಿಹ್ನೆಗಳು, ಅಲೆಮಾರಿತನಕ್ಕೆ(ವಲಸೆಗೆ) ಕಾರಣ ಮುಂತಾದವುಗಳನ್ನು ಕೂಲಂಕುಶವಾಗಿ ಶೋಧಿಸಿದಾಗ ಆ ಸಮುದಾಯದ ಮೂಲವನ್ನು ಕಂಡುಕೊಳ್ಳಬಹುದು.

ಬಳ್ಳಾರಿ ಜಿಲ್ಲೆಯ ಭೂ ಪ್ರದೇಶದಲ್ಲಿ ಅಲೆದಾಡುತ್ತಿರುವ ಅಲೆಮಾರಿ ಕುರುಬರು ಕರ್ನಾಟಕ ರಾಜ್ಯದ ಬೆಳಗಾಂ ಜಿಲ್ಲೆಯ ವಿವಿಧ ಗ್ರಾಮಗಳಿಂದ ವಲಸೆ ಬಂದವರು. ಅವರಲ್ಲಿ ವಿಶೇಷವಾಗಿ

[illegible]

[illegible]

ಚಿಕ್ಕೋಡಿ ತಾಲೂಕಿನವರಾಗಿದ್ದಾರೆ. ಈ ಪ್ರದೇಶಕ್ಕೆ ವಲಸೆ ಬರುವ ಮೊದಲು ವರ್ಷದಲ್ಲಿ ನಾಲ್ಕು ಐದು ತಿಂಗಳು ಅರೆ ಅಲೆಮಾರಿಗಳಾಗಿ ಕುರಿ ಸಂಗೋಪನೆ ಮಾಡುತ್ತಿದ್ದರು. ಅರೆ ಅಲೆಮಾರಿಗಳಾಗಿದ್ದಾಗ ಮಳೆಗಾಲದ ಆರಂಭದ (ಕಾರಹುಣ್ಣಿಮೆ) ದಿನಗಳಲ್ಲಿ ಹಲವರು ಮಹಾರಾಷ್ಟ್ರದ ಸಾಂಗ್ಲಿ, ಕೊಲ್ಲಾಪುರ ಭೂಪ್ರದೇಶದ ಕಡೆ, ಇನ್ನೂ ಕೆಲವರು ಬಾಗಲಕೋಟೆ, ಬಿಜಾಪುರ ಮತ್ತು ಧಾರವಾಡ ಜಿಲ್ಲೆಯ ಭೂಪ್ರದೇಶದ ಕಡೆ ವಲಸೆ ಹೋಗಿ ಮಳೆಗಾಲದ (ದೀಪಾವಳಿ) ನಂತರ ಸ್ವಗ್ರಾಮಗಳಿಗೆ ಹಿಂತಿರುಗುತ್ತಿದ್ದರು. ಈ ಅವಧಿಯಲ್ಲಿ ವಲಸೆ ಹೋಗಲು ಕಾರಣ ಕುರಿಸಂಗೋಪನೆಗೆ ಯೋಗ್ಯ ಎನ್ನುವುದಕ್ಕಿಂತ (ಯೋಗ್ಯ ಮಳೆ- ೫೪೫ ರಿಂದ ೭೦೦ ಮಿ.ಮೀ. ಆದರೆ ಬೆಳಗಾಂ ಜಿಲ್ಲೆಯ ವಾರ್ಷಿಕ ಮಳೆ ೮೦೮ ಮಿ.ಮೀ. ೨೦೦೫-೦೬ನೇ ಸಾಲಿನಲ್ಲಿ ೧೩೬೬ ಮಿ.ಮೀ.) ಹೆಚ್ಚು ಮಳೆ ಬೀಳುವುದನ್ನು ಕಾಣುತ್ತೇವೆ. ಮಳೆಗಾಲದ ಅವಧಿಯಲ್ಲಿ ವಲಸೆ ಹೋಗಿ ಹಿಂದಿರುಗುತ್ತಿದ್ದ ಅವರು ನಂತರದ ದಿನಗಳಲ್ಲಿ ತಮ್ಮ ಗ್ರಾಮದ ಸುತ್ತಮುತ್ತಲಿನ ಭೂಪ್ರದೇಶದಲ್ಲಿ ಕುರಿ-ಮೇಕೆಗಳನ್ನು ಮೇಯಿಸುತ್ತಿದ್ದರು. ರಾತ್ರಿ ಸಮಯದಲ್ಲಿ ಊರ ಹೊರಗೆ ಬೇಲಿ ಹಾಕಿ ನಿರ್ಮಿಸಿಕೊಂಡ ಕುರಿಹಟ್ಟಿಗಳಲ್ಲಿ ಕುರಿಗಳನ್ನು ತಬ್ಬುತ್ತಿದ್ದರು. ಆ ದಿನಗಳಲ್ಲಿ ಊರಿನ ಜಮೀನ್ದಾರರು ತಮ್ಮ ಜಮೀನುಗಳಲ್ಲಿ ಕುರಿ ತಬ್ಬಿಸಲು ಅಪೇಕ್ಷಿಸಿದರೆ ರಾತ್ರಿ ವೇಳೆಯಲ್ಲಿ ಕುರಿಗಳನ್ನು ತಬ್ಬುತ್ತಿದ್ದರು. ಕುರಿ ತಬ್ಬಿದ್ದಕ್ಕಾಗಿ ಪ್ರತಿಫಲವಾಗಿ ಜಮೀನ್ದಾರರಿಂದ ಇಂತಿಷ್ಟು ಹಣ ಅಥವಾ ಆಹಾರ ಧಾನ್ಯಗಳನ್ನು ಪಡೆಯುತ್ತಿದ್ದರು. ಪ್ರಸ್ತುತ ದಿನಗಳಲ್ಲಿ ಬೆಳಗಾವಿ ಜಿಲ್ಲೆಯ ಬಹಳಷ್ಟು ಕುರುಬ ಕುಟುಂಬಗಳು ಅರೆ-ಅಲೆಮಾರಿಗಳಾಗಿ ಕುರಿ ಸಂಗೋಪನೆ ಮಾಡುತ್ತಿರುವುದು ಕ್ಷೇತ್ರಕಾರ್ಯದಿಂದ ತಿಳಿದುಬಂದಿದೆ.

ಮೊದಲು ಅರೆ-ಅಲೆಮಾರಿತನಕ್ಕೆ ಸೀಮಿತವಾಗಿದ್ದ ಇವರ ಬದುಕು ಕ್ರಿ.ಶ. ೧೯೬೦ರ ನಂತರದ ದಿನಗಳಲ್ಲಿ ಅಲೆಮಾರಿತನವಾಗಿ ಪರಿವರ್ತನೆಗೊಂಡಿತು. ವರ್ಷದಲ್ಲಿ ೪-೫ ತಿಂಗಳು ವಲಸೆ ಹೋಗಿ ಹಿಂದಿರುಗುತ್ತಿದ್ದ ಅವರ ಬದುಕು ವರ್ಷವಿಡೀ ಅಲೆಮಾರಿತನವಾಗಿ ಮಾರ್ಪಾಡಾಯಿತು. ಕ್ರಿ.ಶ. ೧೯೫೩ರಲ್ಲಿ ತುಂಗಭದ್ರ ಆಣೆಕಟ್ಟು ನಿರ್ಮಾಣ ಪೂರ್ಣಗೊಂಡಿತು. ಈ ಆಣೆಕಟ್ಟಿನಿಂದ ಕರ್ನಾಟಕದಲ್ಲಿ ಪ್ರಮುಖವಾಗಿ ಬಳ್ಳಾರಿ ಜಿಲ್ಲೆಯ ಹೊಸಪೇಟೆ, ಬಳ್ಳಾರಿ ಮತ್ತು ಸಿರುಗುಪ್ಪ ತಾಲುಕುಗಳು, ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕು ಮತ್ತು ಕಾರಟಗಿ ಪಟ್ಟಣದ ಸುತ್ತಮುತ್ತಲಿನ ಭೂಪ್ರದೇಶ. ರಾಯಚೂರು ಜಿಲ್ಲೆಯ ಸಿಂಧನೂರು, ಮಸ್ಕಿ, ಮಾನ್ವಿ ತಾಲೂಕುಗಳು ಹಾಗೂ ಆಂಧ್ರ ಪ್ರದೇಶದ ಕರ್ನೂಲು ಮತ್ತು ಅನಂತಪುರ ಜಿಲ್ಲೆಗಳು ನೀರಾವರಿ ಸೌಲಭ್ಯ ಪಡೆದವು. ಈ ಆಣೆಕಟ್ಟಿನಿಂದ ಕರ್ನಾಟಕದಲ್ಲಿ ೨೨೭ ಕಿ.ಮೀ. ಉದ್ದದ ಎಡದಂಡೆ ಕಾಲುವೆಯಿಂದ ಸುಮಾರು ೨,೪೫,೯೦೦ ಹೆಕ್ಟೇರು ಭೂಮಿ ಮತ್ತು ೨೫೧ ಕಿ.ಮೀ. ಉದ್ದದ ಬಲದಂಡೆ ಕಾಲುವೆಯಿಂದ ೩೭,೫೦೪ ಹೆಕ್ಟೇರು

ಭೂಮಿ ನೀರಾವರಿಗೆ ಒಳಪಟ್ಟಿದೆ. ೧೫ ಕಿ.ಮೀ ಉದ್ದದ ಎಡ ಮೇಲ್ದಂಡೆ ಕಾಲುವೆಯಿಂದ ೪೬೯ ಹೆಕ್ಟೇರು ಹಾಗೂ ೧೦೦ ಕಿ.ಮೀ ಉದ್ದದ ಬಲ ಮೇಲ್ದಂಡೆ ಕಾಲುವೆಯಿಂದ ೮೯೧೦ ಹೆಕ್ಟರು ಭೂಮಿ, ನೀರಾವರಿ ಸೌಲಭ್ಯ ಪಡೆದಿದೆ. ಈ ಭೂಮಿಗಳು ನೀರಾವರಿ ಸೌಲಭ್ಯ ಪಡೆದಿದ್ದರಿಂದ ರೈತರು ವರ್ಷದಲ್ಲಿ ಒಂದು ಅಥವಾ ಎರಡು ನೀರಾವರಿ ಬೆಳೆಗಳನ್ನು ಬೆಳೆಯಲು ಆರಂಭಿಸಿದರು. ಇದರ ಪರಿಣಾಮವಾಗಿ ಈ ಭೂಮಿಗಳಲ್ಲಿ ವರ್ಷಪೂರ್ತಿ ಹಸಿರು ಮೇವು ಮತ್ತು ನೀರು ದೊರೆಯು ವಂತಾಯಿತು. ಇದನ್ನರಿತ ಅಲೆಮಾರಿ ಕುರುಬರು ತಮ್ಮ ಜೀವನೋಪಾಯಕ್ಕಾಗಿ ಕುರಿ ಹಿಂಡುಗಳನ್ನು ಕಟ್ಟಿಕೊಂಡು ಕುಟುಂಬ ಸಮೇತ ಮೂಲಸ್ಥಳವನ್ನು ತೊರೆದು ಬಳ್ಳಾರಿ ಜಿಲ್ಲೆಯ ನೀರಾವರಿ ಭೂಪ್ರದೇಶ ಗಳ ಕಡೆ ವಲಸೆ ಬಂದರು. ಮಳೆಗಾಲದ ಅವಧಿಯಲ್ಲಿ ಗುಡ್ಡ, ಬಯಲು ಪ್ರದೇಶ ಮತ್ತು ಗಟ್ಟಿ ಪ್ರದೇಶಗಳಲ್ಲಿ ಅಲೆದಾಡಿ ಕುರಿ ಸಂಗೋಪನೆ ಮಾಡಿದರೆ ಮಳೆಗಾಲದ ನಂತರ ದಿನಗಳಲ್ಲಿ ನೀರಾವರಿ ಮತ್ತು ಬಯಲು ಪ್ರದೇಶಗಳಲ್ಲಿ ಅಲೆದಾಡುತ್ತಾ ಜೀವನ ಸಾಗಿಸುತ್ತಿದ್ದಾರೆ.

ಜನಸಂಖ್ಯೆ

ನೈಸರ್ಗಿಕ ಸಂಪನ್ಮೂಲಗಳ ಬಳಕೆಗೆ ಶ್ರಮ (ಜನಸಂಖ್ಯೆ) ಅತ್ಯಗತ್ಯ. ಶ್ರಮವು ದೈಹಿಕ ಅಥವಾ ಮಾನಸಿಕವಾಗಬಹುದು ಅಥವಾ ಎರಡೂ ಆಗಬಹುದು. ಅದು ಒಂದು ಉತ್ಪಾದನಾಂಗವಾಗಿ ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುವುದರಿಂದ ಮಾನವ ಸಂಪನ್ಮೂಲ ಎನಿಸಿಕೊಂಡಿದೆ. ಆಡಂಸ್ಮಿತ್ ತನ್ನ 'ರಾಷ್ಟ್ರಗಳ ಸಂಪತ್ತು' ಪುಸ್ತಕದಲ್ಲಿ "ಶ್ರಮವು ರಾಷ್ಟ್ರದ ಸಂಪತ್ತಿನ ನಿರ್ಧಾರಕ ಅಂಶ" (ಡಾ. ಸಿ.ಕೆ. ರೇಣುಕಾರ್ಯ:೨೦೦೬:೬೬) ಎಂದು ಹೇಳಿದ್ದಾರೆ. ಗಾಂಧೀಜಿಯವರು "ಜನರೇ ಒಂದು ದೇಶದ ನಿಜವಾದ ಆಸ್ತಿ ಅಥವಾ ಸಂಪತ್ತು; ಯಾವ ದೇಶ ಗರಿಷ್ಠ ಸಂಖ್ಯೆಯ ಸಂತೋಷಭರಿತ ಜನರನ್ನು ಸಲಹುತ್ತಿರುವುದೋ ಅದೇ ಸಂಪದ್ಭರಿತ ದೇಶ" (ಎಚ್ಚಾರ್ಕೆ:೨೦೦೩:೧೧೦) ಎಂದು ಹೇಳಿದ್ದಾರೆ. ಮನುಷ್ಯನಿಲ್ಲದಿದ್ದರೆ ಅಭಿವೃದ್ಧಿ ಸಾಧ್ಯವಿಲ್ಲ. ಇದೊಂದು ನಿರಂತರ ಪ್ರಕ್ರಿಯೆ. ಕುರಿ ಸಾಕಾಣಿಕೆಯು ಶ್ರಮಸಾಂದ್ರ ಕಸುಬಾಗಿದೆ. ಕಸುಬನ್ನು ಮುಂದುವರಿಸಿಕೊಂಡು ಹೋಗಲು ಅಧಿಕ ಸಂಖ್ಯೆಯ ಶ್ರಮಗಾರ ಅವಶ್ಯಕತೆ ಇದೆ. ಆದ್ದರಿಂದಲೇ ಅಲೆಮಾರಿ ಕುರುಬ ಕುಟುಂಬದ ಸ್ತ್ರೀ ಪುರುಷರೆಲ್ಲರು ಈ ವೃತ್ತಿಯಲ್ಲಿ ತೊಡಗಿಸಿಕೊಂಡಿರುವುದನ್ನು ಕಾಣುತ್ತೇವೆ.

ಪ್ರಸ್ತುತ ಅಧ್ಯಯನದ ಅವಧಿಯಲ್ಲಿ ಕುರಿಸಂಗೋಪನೆಗಾಗಿ ಬಳ್ಳಾರಿ ಜಿಲ್ಲೆಯ ಭೂಪ್ರದೇಶದಲ್ಲಿ ಅಲೆದಾಡುತ್ತಿರುವ ಅಲೆಮಾರಿ ಕುರುಬ ಕುಟುಂಬಗಳ ಜನಸಂಖ್ಯೆಯನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

ಕೋಷ್ಠಕ ೪.೧ ಅಲೆಮಾರಿ ಕುರುಬರ ಜನಸಂಖ್ಯೆ ಪ್ರಮಾಣ

ಕ್ರ. ಸಂ.	ತಾಲೂಕುಗಳು	ಕುಟುಂಬ	ಪುರುಷರು	ಸ್ತ್ರೀಯರು	ಒಟ್ಟು
೧	ಅಥಣಿ	೧	೪	೩	೭
೨	ಖಾನಾಪುರ	೧೧	೩೪	೨೯	೬೩
೩	ಗೋಕಾಕ್	೪	೧೧	೧೪	೨೫
೪	ಚಿಕ್ಕೋಡಿ	೩೦೭	೧೦೦೩	೯೦೨	೧೯೦೫
೫	ಬೈಲಹೊಂಗಲ	--	--	--	--
೬	ಬೆಳಗಾವಿ	೫೧	೧೨೭	೧೧೫	೨೪೨
೭	ರಾಮದುರ್ಗ	೨	೬	೫	೧೧
೮	ರಾಯಬಾಗ್	೫	೧೫	೧೬	೩೧
೯	ಸವದತ್ತಿ	೧	೨	೩	೫
೧೦	ಹುಕ್ಕೇರಿ	೪	೧೦	೧೧	೨೧
	ಒಟ್ಟು	೩೮೬	೧೨೧೨	೧೦೯೮	೨೩೧೦

ಮೇಲಿನ ಕೋಷ್ಠಕ ಮೂಲಕ ಬೆಳಗಾಂ ಜಿಲ್ಲೆಯ ವಿವಿಧ ತಾಲೂಕುಗಳಿಂದ ವಲಸೆ ಬಂದ ಅಲೆಮಾರಿ ಕುರುಬ ಕುಟುಂಬಗಳು ೩೮೬.. ಆ ಕುಟುಂಬಗಳ ಒಟ್ಟು ಜನಸಂಖ್ಯೆ ೨,೩೧೦ ಆಗಿದ್ದು, ಅದರಲ್ಲಿ ೧,೨೧೨ ಪುರುಷರು ಮತ್ತು ೧,೦೯೮ ಸ್ತ್ರೀಯರು ಇದ್ದಾರೆ. ಇವರ ಲೈಂಗಿಕಾನುಪಾತ ೯೦೫ ಇರುವುದು ಗೊತ್ತಾಗುತ್ತದೆ.

ವಿವಿಧ ತಾಲೂಕುಗಳಿಂದ ವಲಸೆ ಬಂದ ಅಲೆಮಾರಿ ಕುರುಬ ಕುಟುಂಬಗಳ ಜನಸಂಖ್ಯೆಯನ್ನು ತೌಲನಿಕವಾಗಿ ನೋಡಿದಾಗ ಚಿಕ್ಕೋಡಿ ತಾಲೂಕಿನಿಂದ ವಲಸೆ ಬಂದವರ ಸಂಖ್ಯೆ ಗಣನೀಯವಾಗಿದೆ. ಇವರ ಒಟ್ಟು ಜನಸಂಖ್ಯೆ ೧೯೦೫ (ಶೇ. ೮೨.೪೨ ರಷ್ಟು) ಅದರಲ್ಲಿ ಪುರುಷರು ೧೦೦೩ (ಶೇ. ೫೨.೬ ರಷ್ಟು) ಹಾಗೂ ಸ್ತ್ರೀಯರು ೯೦೨ (ಶೇ. ೪೭.೩೪ ರಷ್ಟು) ಇದ್ದು ಪ್ರಥಮ ಸ್ಥಾನದಲ್ಲಿದೆ. ಬೆಳಗಾಂ ತಾಲೂಕಿನ ಒಟ್ಟು ಜನಸಂಖ್ಯೆ ೨೪೨ (ಶೇ. ೧೦.೦೪). ಅದರಲ್ಲಿ ಪುರುಷರು ೧೨೭ (ಶೇ. ೫೨.೪೭) ಮತ್ತು ಸ್ತ್ರೀಯರು ೧೧೫ (ಶೇ. ೪೭.೫೨) ಜನರು ಇದ್ದು ದ್ವಿತೀಯ ಸ್ಥಾನದಲ್ಲಿದೆ. ಖಾನಪುರ ತಾಲೂಕಿನ ಒಟ್ಟು ಜನಸಂಖ್ಯೆ ೬೩ (ಶೇ. ೨.೭೨). ಅದರಲ್ಲಿ ಪುರುಷರು ೩೪ (ಶೇ. ೫೩.೯೬) ಮತ್ತು ಸ್ತ್ರೀಯರು ೨೯ (ಶೇ. ೪೬.೦೩). ಜನರು ಇದ್ದು ತೃತೀಯ ಸ್ಥಾನದಲ್ಲಿದೆ. ರಾಯಬಾಗ್ ತಾಲೂಕಿನ ಒಟ್ಟು ಜನಸಂಖ್ಯೆಯು ೩೧ (ಶೇ. ೧.೩೪). ಅದರಲ್ಲಿ ಪುರುಷರು ೧೫ (ಶೇ. ೪೮) ಸ್ತ್ರೀಯರು ೧೬ (ಶೇ. ೫೧.೬) ಜನರಿದ್ದು ನಂತರದ ಸ್ಥಾನವನ್ನು ಪಡೆದುಕೊಂಡಿದೆ.

ಇತರೆ ತಾಲೂಕುಗಳಾದ ಗೋಕಾಕ್, ಹುಕ್ಕೇರಿ, ರಾಮದುರ್ಗ, ಅಥಣಿ, ಮತ್ತು ಸವದತ್ತಿಗಳು ಕ್ರಮವಾಗಿ ಇಳಿಕೆಯ ಸ್ಥಾನದಲ್ಲಿ ಜನಸಂಖ್ಯೆಯನ್ನು ಹೊಂದಿವೆ. ಬೈಲಹೊಂಗಲ ತಾಲೂಕಿನಿಂದ ಪ್ರಸ್ತುತ ಅಧ್ಯಯನದ ಅವಧಿಯಲ್ಲಿ ಯಾರು ವಲಸೆ ಬಂದಿಲ್ಲದಿರುವುದನ್ನು ಕೋಷ್ಟಕದಲ್ಲಿ ಕಾಣಬಹುದಾಗಿದೆ.

೪.೨ ವಲಸೆಗೆ ಕಾರಣಗಳು

ಮಾನವ ತನ್ನ ಜೀವನೋಪಾಯಕ್ಕಾಗಿ ಕೈಗೊಂಡ ವೃತ್ತಿಯ ಆಧಾರದ ಮೇಲೆ ಆರ್ಥಿಕತೆಯನ್ನು ಕೃಷಿವಲಯ, ಕೈಗಾರಿಕಾವಲಯ ಮತ್ತು ಸೇವಾವಲಯಗಳೆಂದು ವಿಂಗಡಿಸಲಾಗಿದೆ. ಹೀಗೆ ವಿವಿಧ ವಲಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡ ಜನ ಸಮುದಾಯಗಳು ಒಂದು ಕಡೆ ನೆಲೆನಿಂತು ನಾಗರಿಕ ಸೌಲಭ್ಯಗಳನ್ನು ರೂಪಿಸಿಕೊಳ್ಳುತ್ತಲೆ ಮಾನವ ಜೀವನ ಮೈಪಡೆದುಕೊಂಡಿದೆ. ಮೂಲತಃ ಅಲೆಮಾರಿ ಗಳಾದ ಅಲೆಮಾರಿ ಕುರುಬರು ಕಾಲಾಂತರದಲ್ಲಿ ನೆಲೆನಿಂತರು. ಹಟ್ಟಿ ಅಥವಾ ಗ್ರಾಮಗಳಲ್ಲಿ ಮನೆಕಟ್ಟಿಕೊಂಡು ಕುರಿಗಳ ಸಂಗೋಪನೆಯೆ ಜೀವನ ವಿಧಾನವಾಯಿತು. ಅಲೆಮಾರಿ ಕುರುಬರು ವರ್ಷದ ಮಳೆಗಾಲದಲ್ಲಿ ನಾಲ್ಕೈದು ತಿಂಗಳು ಸ್ವಗ್ರಾಮ ಬಿಟ್ಟು ಕುಟುಂಬ ಸಮೇತ ಗುಡ್ಡಗಾಡು ಅಥವಾ ಗಟ್ಟಿಪ್ರದೇಶವಿರುವ ಕಡೆ ವಲಸೆ ಹೋಗಿ ಹಿಂದಿರುಗುತ್ತಿದ್ದರು. ವರ್ಷದ ನಾಲ್ಕೈದು ತಿಂಗಳು ಅರೆ-ಅಲೆಮಾರಿಯಾಗಿದ್ದ ಇವರ ಬದುಕು ಸ್ಥಿತ್ಯಂತರಗಳಿಗೊಳಗಾಗಿ ಅಲೆಮಾರಿತನವಾಗಿ ಮಾರ್ಪಟ್ಟಿತು. ಈ ರೀತಿ ಮಾರ್ಪಡಲು ಹಲವಾರು ಕಾರಣಗಳುಂಟು.

ಬೆಳಗಾವಿ ಜಿಲ್ಲೆ ವಿಶೇಷವಾಗಿ ಚಿಕ್ಕೋಡಿ ತಾಲೂಕಿನಲ್ಲಿ ಕುರಿಸಂಗೋಪನೆ ಮಾಡುವ ಕುಟುಂಬಗಳ ಸಂಖ್ಯೆ ಹೆಚ್ಚಾಗಿವೆ.

- ಬೆಳಗಾವಿ ಜಿಲ್ಲೆ ಅರೆಮಲೆನಾಡು ಭೂಪ್ರದೇಶವಾಗಿದೆ. ಮಳೆಗಾಲದಲ್ಲಿ ಅತಿ ಹೆಚ್ಚು ಅಂದರೆ ಕುರಿ ಸಂಗೋಪನೆಗೆ ಯೋಗ್ಯ ಎನ್ನುವುದಕ್ಕಿಂತ ಹೆಚ್ಚು (೨೦೦೫ರಲ್ಲಿ ೧೩೬೬ ಮೀ.ಮಿ. ಮಳೆ ಆಗುತ್ತದೆ) ಮಳೆ ಬೀಳುತ್ತದೆ. ಆ ಪ್ರದೇಶದಲ್ಲಿ ಮಳೆ ಬೀಳಲು ಪ್ರಾರಂಭಿಸಿದರೆ ವಾರ, ಹದಿನೈದು ಅಥವಾ ತಿಂಗಳು ಗಟ್ಟಲೆ ನಿರಂತರವಾಗಿ ಮಳೆ ಬೀಳುತ್ತಿರುತ್ತದೆ. ಇಂಥ ಸಂದರ್ಭದಲ್ಲಿ ಕುರಿಗಳನ್ನು ಮೇಯುಸುವುದು ಹಾಗೂ ಅವುಗಳ ಆರೈಕೆ ಮಾಡುವುದು ತುಂಬಾ ಕಷ್ಟವಾಗುತ್ತದೆ.

- ಬೆಳಗಾವಿ ಜಿಲ್ಲೆಯು ೩,೭೨,೪೯೨ ಹೆಕ್ಟೇರ್ ಭೂಪ್ರದೇಶ ನೀರಾವರಿ ಸೌಲಭ್ಯ ಹೊಂದಿದೆ. "ಆ ಪ್ರದೇಶದಲ್ಲಿ ನೀರಾವರಿ ಹಾಗೂ ಇತರೆ ಬೆಳೆಗಳನ್ನು ಬೆಳೆದರೂ ಕಬ್ಬು ಮತ್ತು ಹೊಗೆಸೊಪ್ಪನ್ನು ಹೆಚ್ಚಾಗಿ ಬೆಳೆಯಲಾಗುತ್ತದೆ. ಕಬ್ಬು ವಾರ್ಷಿಕ ಬೆಳೆಯಾದ ಕಾರಣ ವರ್ಷದಲ್ಲಿ ಕೆಲವೇ ದಿನಗಳು ಮಾತ್ರ ಕುರಿಗಳಿಗೆ ಮೇವು ದೊರೆಯುತ್ತದೆ. ಹೊಗೆಸೊಪ್ಪು ಬೆಳೆಯುವ ಹೊಲಗದ್ದೆಗಳಲ್ಲಿ ಹುಲ್ಲು ಅಥವಾ ಕಳೆ ಬೆಳೆಯುವುದಿಲ್ಲ. ಪರಿಣಾಮವಾಗಿ ಕುರಿ-ಮೇಕೆಗಳಿಗೆ ಮೇವಿನ ಕೊರತೆ ಉಂಟಾಗಿದೆ" (ಮಾಹಿತಿದಾರ: ಅಪ್ಪಣ್ಣ ಪೂಜಾರಿ:ಸೌಂದಲಗ).

◆ ಅಲೆಮಾರಿ ಕುರುಬರು ವಲಸೆ ಬಂದು ಅಲೆದಾಡುವ ಭೂಪ್ರದೇಶಗಳಲ್ಲಿ ಅಂದರೆ ಬಳ್ಳಾರಿ (೬೩೫ ಮಿ.ಮೀ.) ರಾಯಚೂರು (೬೩೧ ಮಿ.ಮೀ.) ಕೊಪ್ಪಳ (೫೭೨ ಮಿ.ಮೀ.) ದಾವಣಗೆರೆ (೬೪೯ ಮಿ.ಮೀ.) ಗದಗ (೬೧೨ ಮಿ.ಮೀ.) ಹಾವೇರಿ (೭೫೩ ಮಿ.ಮೀ.) ಧಾರವಾಡ (೭೭೨ ಮಿ.ಮೀ.) ಜಿಲ್ಲೆಗಳಲ್ಲಿ ಮಳೆಯ ಪ್ರಮಾಣ ಕಡಿಮೆ ಇದೆ" ಹವಾಮಾನ ಉಷ್ಣತೆಯಿಂದ ಕೂಡಿರುವುದರಿಂದ ಕುರಿ ಸಂಗೋಪನೆಗೆ ಯೋಗ್ಯವಾಗಿದೆ. ಈ ಪ್ರದೇಶಗಳಲ್ಲಿ ಹೆಚ್ಚಾಗಿ ವಾರ್ಷಿಕ ಬೆಳೆಗಳನ್ನು ಬೆಳೆಯದೆ ಅಲ್ಪಕಾಲಿಕ ಬೆಳೆಗಳನ್ನು ಬೆಳೆಯಲಾಗುತ್ತದೆ. ಈ ಬೆಳೆಗಳು ನಾಟಿ ಮಾಡಿದ ೩ ರಿಂದ ೬ ತಿಂಗಳೊಳಗೆ ಕಟಾವು ಆಗುತ್ತವೆ. ಇವು ಮುಂಗಾರು ಮತ್ತು ಹಿಂಗಾರು ಬೆಳೆಗಳಾದ್ದರಿಂದ ಕುರಿ-ಮೇಕೆ ಮೇಯಿಸಲು ವಿಶಾಲ ಭೂಪ್ರದೇಶ ದೊರೆಯುತ್ತದೆ. ಬಳ್ಳಾರಿ, ರಾಯಚೂರು, ಕೊಪ್ಪಳ, ದಾವಣಗೆರೆ, ಶಿವಮೊಗ್ಗ ಜಿಲ್ಲೆಗಳಲ್ಲಿ ತುಂಗಾಭದ್ರ ನದಿಯಿಂದ ನೀರಾವರಿ ಸೌಲಭ್ಯ ಪಡೆದ ಪರಿಣಾಮವಾಗಿ ಬೇಸಿಗೆ ಕಾಲದಲ್ಲೂ ಆ ಪ್ರದೇಶಗಳಲ್ಲಿ ಕುರಿ-ಮೇಕೆಗಳಿಗೆ ಸಾಕಷ್ಟು ಮೇವು-ನೀರು ದೊರೆಯುತ್ತದೆ.

೪.೩ ವಲಸೆ ಮಾರ್ಗ : ಪ್ರಸರಣ : ಗುರುತಿಸುವಿಕೆ

ವಲಸೆ ಮಾರ್ಗ : ಅಲೆಮಾರಿ ಕುರುಬರು ಬಳ್ಳಾರಿ ಜಿಲ್ಲೆಯ ಭೂಪ್ರದೇಶಕ್ಕೆ ವಲಸೆ ಬರಲು ಎರಡು ಮಾರ್ಗಗಳನ್ನು ಬಳಸಿಕೊಂಡಿದ್ದಾರೆ. ಕೆಲವರು ಗೋಕಾಕ್ ಮಾರ್ಗವಾಗಿ ಇನ್ನೂ ಕೆಲವರು ಬೆಳಗಾಂ ಮಾರ್ಗವಾಗಿ ವಲಸೆ ಬಂದಿರುವುದು ತಿಳಿದುಬಂದಿದೆ. ಎರಡು ಮಾರ್ಗಗಳ ಮೂಲಕ ವಲಸೆ ಬಂದಿರುವ ಇವರು ಮುಖ್ಯ ರಸ್ತೆಗಳ ಮೂಲಕ ಬಾರದೆ, ಕಲ್ಲು-ಮುಳ್ಳು, ತಗ್ಗು-ದಿಣ್ಣೆಗಳಿಂದ ಕೂಡಿದ ಕಾಲುದಾರಿ ಹಾಗೂ ಹೊಲ-ಗದ್ದೆಗಳನ್ನು ದಾರಿಯಾಗಿ ಬಳಸಿಕೊಂಡು ಬಂದವರಾಗಿದ್ದಾರೆಂಬುದು ಗೊತ್ತಾಗಿದೆ. ವಲಸೆಯ ಪ್ರದೇಶವನ್ನು ಒಂದು ಅಥವಾ ಎರಡು ದಿನಗಳಲ್ಲಿ ತಲುಪದೆ, ದಿನಾಲು ೧೫ ರಿಂದ ೨೦ ಕಿ.ಮೀ. ದಾರಿ ಸಾಗಿ, ಸಾಯಂಕಾಲವಾಗುತ್ತಿದ್ದಂತೆ ದಾರಿಯಲ್ಲಿ ಬರುವ ಗ್ರಾಮದ ಹತ್ತಿರ ಗುಡಾರವನ್ನು ಹೂಡಿ ಕುರಿತಬ್ಬುವುದು, ಮರುದಿನ ಬೆಳಿಗ್ಗೆ ೯ ಗಂಟೆಯ ನಂತರ ಕೌಟುಂಬಿಕ ಸಾಮಾನುಗಳನ್ನು ಕುದುರೆಯ ಮೇಲೆ ಹೇರಿಕೊಂಡು ಕುರಿಗಳನ್ನು ಮೇಯಿಸುತ್ತಾ ದಾರಿ ಸಾಗುವುದು ತಿಳಿದುಬಂದಿದೆ. ದಿನಾಲು ದಾರಿ ನಡೆದು ಕುರಿ-ಮೇಕೆಗಳು ದಣಿದಿದ್ದರೆ ಒಂದೆರಡು ದಿನ ಒಂದೇ ಸ್ಥಳದಲ್ಲಿ ಕುರಿ ತಬ್ಬುವುದು, ಕುರಿಗಳ ಚಟುವಟಿಕೆಯಿಂದ ಅವು ವರ್ತಿಸುವುದನ್ನು ಗಮನಿಸಿ ಮತ್ತೆ ವಲಸೆ ಮಾರ್ಗ ಹಿಡಿದು ಸಾಗುವುದು ಕ್ಷೇತ್ರಕಾರ್ಯದಿಂದ ತಿಳಿದುಬಂದಿದೆ. ಈ ಪ್ರಕ್ರಿಯೆ ವಲಸೆ ಹೋಗಲು ಬಯಸಿರುವ ಪ್ರದೇಶ ಮುಟ್ಟುವವರೆಗೆ ಸಾಗಿಬಂದಿದೆ.

ಬಳ್ಳಾರಿ ಜಿಲ್ಲೆಯ ಭೂಪ್ರದೇಶಕ್ಕೆ ವಲಸೆ ಬಂದಿರುವ ಅಲೆಮಾರಿ ಕುರುಬರು ಸಾಮಾನ್ಯವಾಗಿ ಈ ಮುಂದೆ ತಿಳಿಸಿರುವ ಎರಡು ಮಾರ್ಗಗಳನ್ನು ಬಳಸಿಕೊಂಡು ವಲಸೆ ಬಂದಿರುವುದು ಕ್ಷೇತ್ರಕಾರ್ಯದಿಂದ ತಿಳಿದುಬಂದಿದೆ.

ವಲಸೆ ಮಾರ್ಗ - ಒಂದು

ಚಿಕ್ಕೋಡಿ
↓
೧. ಸಂಕೇಶ್ವರ
↓
೨. ಹುಕ್ಕೇರಿ
↓
೩. ಗೋಕಾಕ್
↓
೪. ಜಮುನಾಲ್
↓
೫. ಯರಗಟ್ಟಿ
↓
೬. ಸವದತ್ತಿ
— ಬೆಳಗಾವಿ ಜಿಲ್ಲೆ
↓
ನವಲಗುಂದ — ಧಾರವಾಡ ಜಿಲ್ಲೆ
↓
ಅಣ್ಣಿಗೇರಿ
↓
ಗದಗ
↓
ಹರಳಾಪುರ
— ಗದಗ ಜಿಲ್ಲೆ
↓
ಹಲಗೇರಿ
↓
ಕೊಪ್ಪಳ
↓
ಗಂಗಾವತಿ
— ಕೊಪ್ಪಳ ಜಿಲ್ಲೆ
↓
ಕಂಪ್ಲಿ
↓
ಕಮಲಾಪುರ
— ಬಳ್ಳಾರಿ ಜಿಲ್ಲೆ
↓

ವಲಸೆ ಮಾರ್ಗ - ಎರಡು

ಚಿಕ್ಕೋಡಿ
↓
೧. ಸಂಕೇಶ್ವರ
↓
೨. ಹುಕ್ಕೇರಿ
↓
೩. ಸುತಕಟ್ಟಿ
↓
೪. ಬೆಳಗಾವಿ
↓
೫. ಬೈಲಹೊಂಗಲ
↓
೬. ದೊಡ್ಡವಾಡ
— ಬೆಳಗಾವಿ ಜಿಲ್ಲೆ
↓
೭. ಧಾರವಾಡ
↓
೮. ಹುಬ್ಬಳಿ
— ಧಾರವಾಡ ಜಿಲ್ಲೆ
↓
ಸವಣೂರು — ಹಾವೇರಿ ಜಿಲ್ಲೆ
↓
ಶಿರಹಟ್ಟಿ
↓
ಮುಂಡರಗಿ
— ಗದಗ ಜಿಲ್ಲೆ
↓
ಹೂವಿನ ಹಡಗಲಿ
↓
ಹೊಳಗುಂದಿ
↓
ಮೋರಗೇರಿ
↓
ಹಗರಿಬೊಮ್ಮನಹಳ್ಳಿ
↓
ಹೊಸಪೇಟೆ
— ಬಳ್ಳಾರಿ ಜಿಲ್ಲೆ
↓

ಈ ಸ್ಥಳಗಳಿಗೆ ತಲುಪಿದ ನಂತರ ಋತುಮಾನಕ್ಕನುಗುಣವಾಗಿ ಜಿಲ್ಲೆಯಾದ್ಯಂತ ಅಲೆದಾಡುತ್ತಿದ್ದಾರೆ. ವಲಸೆ ಬಂದ ಮಾರ್ಗಗಳನ್ನು ಮುಂದಿನ ನಕ್ಷೆಯಲ್ಲಿ ಕಾಣಬಹುದಾಗಿದೆ.



[illegible]

<u>ಭೂಪಟ ೧. ಅಲೆಮಾರಿ ಕುರುಬರ ವಲಸೆ ಮಾರ್ಗಗಳು</u>



<u>ವಲಸೆ ಸೂಚಿಗಳು</u>

♦ ವಲಸೆ ಮಾರ್ಗ ಒಂದು

⊠ ವಲಸೆ ಮಾರ್ಗ ಎರಡು

ಮಳೆಗಾಲದ ದಿನಗಳಲ್ಲಿ ಈ ಊರಿನ ಸುತ್ತಮುತ್ತಲಿನ ಗ್ರಾಮಗಳ ಗುಡ್ಡಗಾಡು ಪ್ರದೇಶಗಳಲ್ಲಿ ಕುರಿ ಸಂಗೋಪನೆ ಮಾಡಿ ನಂತರ ಹೊಲ-ಗದ್ದೆಗಳಲ್ಲಿ ಅಲೆದಾಡಿ ಕುರಿ ಸಂಗೋಪನೆ ನಡೆಸುತ್ತಾರೆ.

ಪ್ರಸರಣ : ಬಳ್ಳಾರಿ ಜಿಲ್ಲೆಯ ಭೂಪ್ರದೇಶಕ್ಕೆ ವಲಸೆ ಬಂದಿರುವ ಅಲೆಮಾರಿ ಕುರುಬರು ಹೊಸಪೇಟೆ, ಸಂಡೂರು, ಹೂವಿನ ಹಡಗಲಿ, ಬಳ್ಳಾರಿ ಮತ್ತು ಸಿರುಗುಪ್ಪ ತಾಲೂಕುಗಳಲ್ಲಿ ಹೆಚ್ಚಾಗಿ ಅಲೆದಾಡುತ್ತಾ ಕುರಿ ಸಂಗೋಪನೆ ಮಾಡುತ್ತಾರೆ. ಉಳಿದ ತಾಲೂಕುಗಳಾದ ಕೂಡ್ಲಿಗಿ ಮತ್ತು ಹಗರಿಬೊಮ್ಮನಹಳ್ಳಿಗಳ ಕಡೆಗೆ ವಲಸೆ ಹೋಗುವುದು ವಿರಳ. ಕಾರಣ ಈ ತಾಲೂಕುಗಳಲ್ಲಿ ಹೆಚ್ಚು ಕುಟುಂಬಗಳು ಕುರಿ ಸಂಗೋಪನೆಯಲ್ಲಿ ತೊಡಗಿವೆ. ಅಲ್ಲದೆ ಈ ಭಾಗವು ಹೆಚ್ಚು ಬಯಲು ಪ್ರದೇಶವಾಗಿರುವುದರಿಂದ ಕುರಿ-ಮೇಕೆಗಳಿಗೆ ಹಸಿರು ಮೇವು ಮತ್ತು ನೀರು ದೊರೆಯುವುದಿಲ್ಲ. ಜೊತೆಗೆ ಸ್ಥಳೀಯ ಕುರಿಗಾರರ ವಿರೋಧ ಇರುವುದು ತಿಳಿದುಬಂದಿದೆ. ಹಾಗಾಗಿ ಆ ಪ್ರದೇಶಗಳತ್ತ ವಲಸೆ ಹೋಗುವುದು ಹೆಚ್ಚಾಗಿ ಕಂಡುಬರುವುದಿಲ್ಲ.

ವಲಸೆ ಬಂದು ಅಲೆದಾಡುತ್ತಿರುವ ಅಲೆಮಾರಿ ಕುರುಬರು ನಿರ್ದಿಷ್ಟ ಗ್ರಾಮ ಅಥವಾ ಸ್ಥಳದಲ್ಲಿ ನೆಲೆಯೂರಿ ಕುರಿಗಳ ಸಂಗೋಪನೆ ಮಾಡುತ್ತಿಲ್ಲ. ತಮ್ಮ ಕುರಿಮೇಕೆಗಳಿಗೆ ಮೇವು-ನೀರು ಯಾವ ಪ್ರದೇಶಗಳಲ್ಲಿ ದೊರೆಯುತ್ತದೆಯೋ ಆ ಪ್ರದೇಶಗಳಲ್ಲಿ ಅಲೆದಾಡುತ್ತ ಕುರಿ ಸಂಗೋಪನೆ ಮಾಡುತ್ತಾರೆ. ಸಾಮಾನ್ಯವಾಗಿ ಮಳೆಗಾಲದಲ್ಲಿ ಗುಡ್ಡ ಹಾಗೂ ಗಟ್ಟಿ ಪ್ರದೇಶಗಳಲ್ಲಿ ಅಲೆದಾಡುತ್ತಾರೆ. ಮಳೆಗಾಲದ ನಂತರ ಅಂದರೆ ಚಳಿಗಾಲ ಮತ್ತು ಬೇಸಿಗೆ ಕಾಲಗಳಲ್ಲಿ ಮೇವು ನೀರು ದೊರೆಯುವ ಹೊಲಗದ್ದೆಗಳಲ್ಲಿ ಅಲೆದಾಡುತ್ತಾ ಕುರಿಸಂಗೋಪನೆ ಮಾಡಲಾಗುತ್ತದೆ. ಅಲೆಮಾರಿ ಕುರುಬರು ಅಲೆದಾಡುವ ಪ್ರದೇಶಗಳಿಗೆ ನೆಲೆಗಳು, ಅಥವಾ ಗ್ರಾಮಗಳೆಂದು ಕರೆಯುವುದರ ಬದಲು, ಅವರು ಅಲೆದಾಡುವ ಗ್ರಾಮಗಳ ಹೊಲಗದ್ದೆಗಳು ಹಾಗೂ ಗುಡ್ಡಗಾಡು ಪ್ರದೇಶವೆಂದು ಕರೆಯುವುದು ಸೂಕ್ತವೆನಿಸುತ್ತದೆ. ಅಲೆಮಾರಿ ಕುರುಬರು ಅಲೆದಾಡುತ್ತಿರುವ ಊರುಗಳ ಹೆಸರುಗಳನ್ನು ಋತುಮಾನಕ್ಕನುಗುಣವಾಗಿ ವಿಂಗಡಿಸಿ, ತಾಲೂಕುವಾರು ಪಟ್ಟಿ ಮಾಡಿ ಈ ಕೆಳಗಿನಂತೆ ಕೊಡಲಾಗಿದೆ.

ಮಳೆಗಾಲದ ಅವಧಿ (ಗುಡ್ಡಗಾಡು ಮತ್ತು ಗಟ್ಟಿಪ್ರದೇಶ)

ಹೊಸಪೇಟೆ ತಾಲೂಕು : ಕಮಲಾಪುರ, ಕಾರಿಗನೂರು, ವಡ್ಡರಹಳ್ಳಿ, ಪಾಪಿನಾಯಕನಹಳ್ಳಿ, ಬೈಲವದ್ದಿಗೇರಿ, ಧರ್ಮಸಾಗರ, ಗಾದಿಗನೂರು, ಸೀತಾರಾಮತಾಂಡ, ಚಿನ್ನಾಪುರ, ನೆಲ್ಲಾಪುರ, ಮೆಟ್ರಿ, ದೇವಲಾಪುರ, ಕಣಿವೆ ತಿಮ್ಮಲಾಪುರ, ನಾಗೇನಹಳ್ಳಿ, ಕಡ್ಡಿರಾಂಪುರ, ಬುಕ್ಕಸಾಗರ, ವೆಂಕಟಾಪುರ, ರಾಮಸಾಗರ, ಕಂಪ್ಲಿ, ಹಂಪಿ ಇತ್ಯಾದಿ.

ಸೊಂಡೂರು ತಾಲೂಕು : ಲಿಂಗದಹಳ್ಳಿ, ಉಬ್ಬಳಗಂಡಿ, ರಾಜಪುರ, ಬಸಾಪುರ, ವೆಂಕಟಗಿರಿ, ಕುರೆಕುಪ್ಪೆ, ತೋರಣಗಲ್ಲು, ಮಲ್ಲಾಪುರ, ಪೋತನಕಟ್ಟೆ, ಕಲ್ಲಹಳ್ಳಿ, ವಡ್ಡು, ತಾಳೂರು, ಮೆಟ್ರಿಕಿ, ಸೊಂಡೂರು (ಕುಮಾರಸ್ವಾಮಿ ಗುಡ್ಡ) ಇತ್ಯಾದಿ.

ಹೂವಿನ ಹಡಗಲಿ ತಾಲೂಕು : ಹಿರೇಹಡಗಲಿ, ವರ್ಲಹಳ್ಳಿ, ಬಸರಹಳ್ಳಿ, ಅಂಕಲಿ, ಸಾವನಳ್ಳಿ, ಹಿರೆಮಲ್ಲನಕೆರೆ, ಹೊಳಗುಂದಿ, ದಾಸರಹಳ್ಳಿ, ಬಾವಿಹಳ್ಳಿ.

ಬಳ್ಳಾರಿ ತಾಲೂಕು : ಕುಡುತಿನಿ, ವೇಣಿವೀರಾಪುರ, ಅಲ್ಲಿಪುರ ಇತ್ಯಾದಿ.

ಚಳಿಗಾಲ ಮತ್ತು ಬೇಸಿಗೆ ಕಾಲ (ಹೊಲ-ಗದ್ದೆಗಳಲ್ಲಿ)

ಹೊಸಪೇಟೆ ತಾಲ್ಲೂಕು : ರಾಮಸಾಗರ, ಚಿಕ್ಕಜಾಯಿಗನೂರು, ದೇವಸಮುದ್ರ, ಹಂಪದೇವನಹಳ್ಳಿ, ಸುಗ್ಗೇನಹಳ್ಳಿ, ದೇವಲಾಪುರ, ಮಾವಿನಹಳ್ಳಿ, ಹೊನ್ನಳ್ಳಿ, ಕಂಪ್ಲಿ, ಕೊಟ್ಟಾಲು, ಗೋನಾಳ, ಸಣಾಪುರ, ಇಟಗಿ, ಇತ್ಯಾದಿ.

ಸೊಂಡೂರು ತಾಲೂಕು : ಹಳೆದರೋಜಿ, ಹೊಸದರೋಜಿ, ಮಾಳಪುರ

ಹಡಗಲಿ ತಾಲೂಕು : ಕುರುವತ್ತಿ, ಮೈಲಾರ, ಹೊಳಲು, ಗುತ್ಲ, ಕತ್ತೆಬೆನ್ನೂರು, ಹಿರೇಬನ್ನಿಮಟ್ಟಿ, ಬ್ಯಾಲಹುಣಸಿ, ಮಾಗಳ, ಮಾಗಳ ಹೊಸಳ್ಳಿ, ದಾಸರಹಳ್ಳಿ ತಾಂಡ, ಮದಲಘಟ್ಟ.

ಬಳ್ಳಾರಿ ತಾಲೂಕು : ನೆಲ್ಲೂಡಿ, ಎಮ್ಮಿಗನೂರು, ಓರ್ವಾವಿ, ಗುತ್ತಿಗನೂರು, ಪಟ್ಟಣ ಸೆರಗು, ಕಲ್ಲಕಂಬ, ಸೋಮಲಾಪುರ, ಹೆಚ್.ವಿರಾಪುರ, ಮುಷ್ಠಗಟ್ಟೆ, ಗೆಣಿಕೆಹಾಳ್, ಕುರುಗೋಡು, ಬಾದನಹಟ್ಟಿ, ವದ್ದಹಟ್ಟಿ, ಸಿದ್ದಮ್ಮನಹಳ್ಳಿ, ಏಳುಬೆಂಚಿ, ಯರ‍್ರಂಗ್ಳಿ, ಕೊಳಗಲ್ಲು, ಸೋಮಸಮುದ್ರ, ಕೊಳೂರು, ದಮ್ಮೂರು, ಬೈಲೂರು, ಸಿಂದಿಗೇರಿ, ಶ್ರೀಧರಗಡ್ಡ, ಕೊರ್ಲಗುಂದಿ, ಚಾಗನೂರು, ಕಪ್ಪಗಲ್ಲು, ಮೋಕಾ, ಗುಡದೂರು, ವಣೇನೂರು, ಕರ್ಚೇಡು, ಬಸರಕೋಡು, ಸಿಂದವಾಳ, ಬೆಣಕಲ್, ಎರ‍್ರಗುಡಿ, ಜಾಲಿಹಾಳ್, ಎಂ.ಗೋನಾಳ, ಅಸುಂಡಿ, ರೂಪನಗುಡಿ, ಇತ್ಯಾದಿ.

ಸಿರುಗುಪ್ಪ ತಾಲೂಕು : ಮಣ್ಣೂರು, ಸೂಗುರು, ನಡವಿ, ಉಡೇಗೋಳ, ನಿಟ್ಟೂರು, ಹೆರಕಲ್ಲು, ಕೆಂಚನಗುಡ್ಡ, ದೇಶನೂರು, ಬಾಗೇವಾಡಿ, ಶ್ರೀಧರಗಡ್ಡೆ, ಚಿಕ್ಕಬಳ್ಳಾರಿ, ಹಚ್ಚೊಳ್ಳಿ, ನಾಗಲಾಪುರ, ಕುರುವಳ್ಳಿ, ಕರ್ಚಿಗನೂರು, ರಾರಾವಿ, ಅಗಸನೂರು, ನಾಡಂಗ, ಕೊತ್ತಲಚಿಂತ, ಬಂಡ್ರಾಳು, ಕೆ.ಸೂಗುರು, ಹಳೆಕೋಟೆ, ತೆಕ್ಕಲಕೋಟೆ, ಉಪ್ಪಾರ ಹೊಸಹಳ್ಳಿ, ಬಲಕುಂದಿ, ಕೆ.ಬೆಳಗಲ್ಲು, ಮೈಲಾಪುರ ಕ್ಯಾಂಪ್, ಬೂದುಗುಪ್ಪ, ಮಾಟಸೂಗುರು, ಕರೂರು, ದರೂರು, ಭೈರಾಪುರ, ಆಗಲೂರು, ಉತ್ತನೂರು, ಊಳೂರು, ತಾಳೂರು, ಕೊಂಚಿಗೇರಿ, ಸಿರಿಗೇರಿ, ಹಾವಿನಾಳ್, ಚನ್ನಪಟ್ಟಣ ಇತ್ಯಾದಿ.

ಗುರುತಿಸುವಿಕೆ : ಪರಂಪರಗತವಾಗಿ ಬಂದ ವೃತ್ತಿ ಮತ್ತು ಉಡುಪುಗಳಿಂದ ಕುರುಬರನ್ನು ಗುರುತಿಸಲಾಗುತ್ತದೆ. ಇವರು ಋತುಮಾನಕ್ಕನುಗುಣವಾಗಿ ಬೆಟ್ಟ-ಗುಡ್ಡ, ಹೊಲ-ಗದ್ದೆಗಳಲ್ಲಿ ೩-೪ ಕುಟುಂಬಗಳು ಒಟ್ಟಿಗೆ ಗುಡಾರ ಹೂಡಿ ಕುರಿಗಳ ಸಂಗೋಪನೆ ಮಾಡುತ್ತ ಜೀವನ ಸಾಗಿಸುತ್ತಿರುತ್ತಾರೆ. ಸ್ತ್ರೀ-ಪುರುಷರು ಶಾರೀರಕವಾಗಿ ಗಟ್ಟಿಮುಟ್ಟಾಗಿದ್ದು ಮರಾಠಿ ಮಿಶ್ರಿತ ಕನ್ನಡ ಭಾಷೆ ಅಥವಾ ಮರಾಠಿ ಭಾಷೆಯನ್ನು ಮಾತನಾಡುತ್ತಾರೆ.

ಪುರುಷರನ್ನು ತಲೆಗೆ ಸುತ್ತಿರುವ ಪೇಟಾ ಅಥವಾ ಗಾಂಧಿಟೋಪಿ, ಹೆಗಲ ಮೇಲಿರುವ ಕರಿಕಂಬಳಿ ಅಥವಾ ಶಾಲು, ನಡುವಿಗೆ ಮೇಲೆಳೆದು ಕಟ್ಟಿರುವ ಕಚ್ಚಿಪಂಚೆ, ಕಾಲಲ್ಲಿ ದಪ್ಪನೆಯ ದೇಶಿ ಮಾದರಿ ಮೆಟ್ಟು, (ಚಪ್ಪಲಿ) ಕಿವಿಯಲ್ಲಿ ಮುರುವು, ಕೊರಳಲ್ಲಿ ತಾಯ್ತ, ನಡುವಿನಲ್ಲಿ ಎಲೆ ಅಡಿಕೆ ಚೀಲ, ಮುಖದ ಮೇಲೆ ಕೊರೆ ಮೀಸೆ, ಹಣೆಯ ತುಂಬಾ ಹಚ್ಚಿರುವ ಭಂಡಾರ ಮೊದಲಾದ ಕುರುಹುಗಳಿಂದ ಗುರುತಿಸಲಾಗುವುದು. ಮಹಿಳೆಯನ್ನು ಕಚ್ಚೆ ಹಾಕಿದ ಇಳಕಲ್ ಸೀರೆ ಅಥವಾ ಪಟ್ಟೆಸೀರೆ, ಕಾಲು ಬೆರಳಿಗೆ ಕಾಲಪಿಲ್ಲೆ (ಉಂಗುರು), ಹಣೆಯ ಮೇಲೆ ದಪ್ಪನೆಯ ಕುಂಕುಮ, ಕಾಲಲ್ಲಿ ದೇಶೀ ಮಾದರಿ ದಪ್ಪನೆಯ ಚಪ್ಪಲಿ ಇತ್ಯಾದಿ ಅಂಶಗಳಿಂದ ಗುರುತಿಸಲಾಗುವುದು.

೪.೪ ಗುಡಾರ (ವಸತಿ)

ಸಂಚಾರಿ ಬದುಕಿಗೆ ಹೆಸರುವಾಸಿಯಾದ ಅಲೆಮಾರಿ ಕುರುಬರು ನಗರ, ಪಟ್ಟಣ, ಗ್ರಾಮಗಳಲ್ಲಿ ವಾಸಿಸದೆ ಗುಡ್ಡ-ಬೆಟ್ಟ, ಅಥವಾ ಹೊಲ-ಗದ್ದೆಗಳಲ್ಲಿ ತಮ್ಮ ಬದುಕುಗಳನ್ನು ರಕ್ಷಣೆ ಮಾಡುವುದೋಸ್ಕರ ಕುರಿಗಳ ಮಧ್ಯದಲ್ಲಿ ಗುಡಾರ ಹೂಡುವುದು ಕಂಡುಬರುತ್ತದೆ. ಚಳಿ, ಗಾಳಿ, ಮಳೆ ಬಿಸಿಲುಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಲು, ದಿನನಿತ್ಯದ ಆಹಾರ ಸಾಮಗ್ರಿಗಳನ್ನು ಜೋಪಾನವಾಗಿಟ್ಟುಕೊಳ್ಳಲು ೮ ಅಡಿ ಅಗಲದ ೧೨ ಅಡಿ ಉದ್ದದ ಗುಡಾರವೇ ಇವರಿಗೆ ವಸತಿಯಾಗಿದೆ. ಈ ಉದ್ದೇಶಕ್ಕೆ ತಾಡಪಾಲನ್ನು ಪ್ರತಿಯೊಂದಕ್ಕೆ ೧,೨೦೦ ರೂ.ಗಳಿಂದ ೧,೫೦೦ ರೂಪಾಯಿಗಳವರೆಗೆ ನೀಡಿ ಹುಬ್ಬಳ್ಳಿ ಅಥವಾ ದಾವಣಗೆರೆಯಲ್ಲಿ ಕೊಂಡು ತರಲಾಗುತ್ತದೆ. ತಾಡಪಾಲಿನ ಜೀವಿತಾವಧಿ ಬಳಕೆಯನ್ನು ಅವಲಂಬಿಸಿದ್ದು ಸಾಮಾನ್ಯವಾಗಿ ೪ ರಿಂದ ೬ ವರ್ಷಗಳು ಬಾಳಿಕೆ ಬರುತ್ತದೆ.

ನೈಸರ್ಗಿಕ ಬದಲಾವಣೆಗೆ ಅನುಗುಣವಾಗಿ ಗುಡಾರ ಹೂಡಲಾಗುತ್ತದೆ. ವಾರ್ಷಿಕ ಋತುಮಾನಗಳಿಗೆ ತಕ್ಕಂತೆ ಮಳೆ ಬರುವ ಮತ್ತು ಗಾಳಿ ಬೀಸುವ ದಿಕ್ಕಿಗೆ ವಿರುದ್ಧವಾಗಿ ಗುಡಾರ ಹೂಡುವುದು ಸಹಜ. ಮುಂಗಾರು ಮಳೆ ಆರಂಭದಿಂದ ಮುಕ್ತಾಯದವರೆಗೆ (ಜೂನ್ ನಿಂದ ಆಗಸ್ಟ್‌ವರೆಗೆ) ಪಶ್ಚಿಮ ದಿಕ್ಕಿನಿಂದ ಗಾಳಿಬಿಸುವುದು ಹಾಗೂ ಮಳೆ ಬರುವುದರಿಂದ ಪೂರ್ವ ದಿಕ್ಕಿಗೆ ಮುಖಮಾಡಿ ಗುಡಾರ ಹೂಡುವುದು ಕಾಣುತ್ತದೆ. ಹಿಂಗಾರು ಮಳೆ ಆರಂಭದಿಂದ ಚಳಿಗಾಲ ಮುಗಿಯುವವರೆಗೆ (ಸೆಪ್ಟಂಬರ್ ದಿಂದ ಜನವರಿ) ಪೂರ್ವ ದಿಕ್ಕಿನಿಂದ ಗಾಳಿ ಬಿಸುವುದು ಮತ್ತು ಮಳೆ ಬರುವುದರಿಂದ ಪಶ್ಚಿಮ ದಿಕ್ಕಿಗೆ ಮುಖಮಾಡಿ ಗುಡಾರವನ್ನು ಹೂಡುವುದನ್ನು ಕಾಣಬಹುದು. ಈ ರೀತಿಯಲ್ಲಿ ಗುಡಾರ ಹೂಡಲು ಕಾರಣಗಳನ್ನು ಹೀಗೆ ಗುರುತಿಸಬಹುದು. ಗಾಳಿ ಗುಡಾರದೊಳಗೆ ನುಗ್ಗಿ ಗುಡಾರ ಹಾರ ಬಾರದು, ಮಳೆ ನೀರು ಗುಡಾರದೊಳಗೆ ಸಿಡಿಯಬಾರದು, ಸಂಗ್ರಹಿಸಿಟ್ಟ ಆಹಾರದಾನ್ಯಗಳು ಕೆಡಬಾರದು, ಬಟ್ಟೆಗಳು ತೊಯ್ಯಬಾರದು, ತಾವು ಮತ್ತು ತಮ್ಮ ಮಕ್ಕಳು ಆಗ ತಾನೇ ಹುಟ್ಟಿದ ಕುರಿಮರಿಗಳು ಮಳೆಯಿಂದ ನೆನೆಯಬಾರದು ಮತ್ತು ಶೀತಗಾಳಿಯಿಂದ ತಮ್ಮನ್ನು ರಕ್ಷಿಸಿಕೊಳ್ಳುವುದು.

ಗುಡಾರದ ಹೊರಗಿನ ಹಿಂಭಾಗದಲ್ಲಿ ಪ್ಲಾಸ್ಟಿಕ್ ಕಾಗದ ಅಥವಾ ತಾಡುಪಾಲನ್ನು ಇಳಿಬಿಟ್ಟು ಗಾಳಿಗೆ ಹಾರದಂತೆ ಭದ್ರವಾಗಿ ಕಟ್ಟಲಾಗಿರುತ್ತದೆ. ಗುಡಾರದಲ್ಲಿ ಗಾಳಿ ನುಸುಳಬಾರದೆಂಬ ಉದ್ದೇಶದಿಂದ ಗುಡಾರದ ಒಳಗಿನ ಹಿಂಭಾಗದಲ್ಲಿ ಆಹಾರದಾನ್ಯ ಮತ್ತು ಇತರೆ ಸಾಮಾಗ್ರಿಗಳು ತುಂಬಿದ ಚೀಲಗಳನ್ನಿಡ ಲಾಗಿರುತ್ತದೆ. ಕುಟುಂಬದಲ್ಲಿ ಚಿಕ್ಕಮಕ್ಕಳಿದ್ದರೆ ಗುಡಾರದೊಳಗೆ ತೊಟ್ಟಿಲು ಕಟ್ಟಲಾಗುತ್ತದೆ. ಗುಡಾರದ ಮುಂಭಾಗದ ಹತ್ತಿರ ಅಥವಾ ಅಂಟಿಕೊಂಡಂತೆ ಎಡಭಾಗದಲ್ಲಿ ಆಹಾರ ಬೇಯಿಸಿಕೊಂಡು ತಿನ್ನಲು ಮೂರು ಕಲ್ಲುಗಳನ್ನಿಟ್ಟು ಒಲೆ ಹೂಡಲಾಗಿರುತ್ತದೆ. ಗುಡಾರದ ಬಲಭಾಗದ ಸ್ವಲ್ಪ ದೂರದಲ್ಲಿ ಮರಿಬಲೆ ಮತ್ತು ರಾತ್ರಿ ಸಮಯದಲ್ಲಿ ಕುದುರೆಗಳನ್ನು ಕಟ್ಟಿ ಹಾಕಲು ಗುಡಾರದ ಸಮೀಪ ಗೂಟಗಳನ್ನು ಬಡಿಯಲಾಗಿರುತ್ತದೆ.

ಬೇಸಿಗೆ ಕಾಲದಲ್ಲಿ ಸಂಕ್ರಾಂತಿಯ ಹಬ್ಬದಿಂದ ಕಾರಹುಣ್ಣಿಮೆಯವರೆಗೆ (ಜನವರಿ ೧೪ ರಿಂದ ಮೇ ತಿಂಗಳ ಕೊನೆಯವರೆಗೆ) ಗುಡಾರ ಹೂಡುವುದಿಲ್ಲ. ಈ ಅವಧಿಯಲ್ಲಿ ಬಿಸಿಲು ಅತಿ ಹೆಚ್ಚಾಗಿದ್ದು ಬಿಸಿಲಿಗೆ ತಾಡಪಾಲು ಬಾಳಿಕೆ ಬರುವುದಿಲ್ಲ. ಪ್ರತಿವರ್ಷ ತಾಡಪಾಲಿಗೆ ಬೆಲೆ ತೆತ್ತರೆ ಜೀವನ-ನಿರ್ವಹಣೆ ಕಷ್ಟದಾಯಕವಾಗುತ್ತದೆಂಬ ಉದ್ದೇಶದಿಂದ ಸುಮಾರು ೫ ತಿಂಗಳುಗಳ ಕಾಲ ಗಾಳಿ ಮತ್ತು ಬಿಸಿಲನ್ನು ಸಹಿಸಿಕೊಳ್ಳುತ್ತಾ ಹೊಲ-ಗದ್ದೆಗಳ ಬಯಲಿನಲ್ಲಿ ಕಾಲದೂಡುವುದು ಕಂಡುಬರುತ್ತದೆ. ಬೆಸಿಗೆಯ ೫ ತಿಂಗಳ ಕಾಲ ತಾಡಪಾಲನ್ನು ಬಳಸದೆ ಒಂದು ಚೀಲದಲ್ಲಿ ಕಟ್ಟಿ, ತಮಗೆ ಪರಿಚಯವಿರುವ ಗ್ರಾಮದ ಜಮೀನ್ದಾರರ ಮನೆಯಲ್ಲಿಟ್ಟು, ಮಳೆಗಾಲ ಆರಂಭವಾದಾಗ ತೆಗೆದುಕೊಂಡು ಬರಲಾಗುತ್ತದೆ. ಈ ಸಮಯದಲ್ಲಿ ಆಹಾರಧಾನ್ಯ ಹಾಗೂ ಇತರೆ ಸಾಮಾನುಗಳನ್ನು ಬಿಸಿಲು-ಗಾಳಿಯಿಂದ ರಕ್ಷಿಸಿಕೊಳ್ಳಲು ಚೀಲಗಳಲ್ಲಿ ತುಂಬಿ, ಚೀಲದ ಮೇಲೆ ಚೀಲಗಳನ್ನಿಟ್ಟು ನೆರಳಿಗಾಗಿ ಕಂಬಳಿಗಳನ್ನು ಹೊದಿಸಲಾಗುತ್ತದೆ. ಬಿಸಿಲಿನ ತಾಪ ತಡೆಯಲು ಮಕ್ಕಳಿಗೆ ಹಾಗೂ ಕುರಿಮರಿಗಳಿಗೊಂದರಂತೆ ನಾಲ್ಕು ಕಡೆ ಬಿದುರು ಕಟ್ಟಿಗೆ ಬಡಿದು ಅವುಗಳ ಮೇಲೆ ನೆರಳಿಗಾಗಿ ಕಂಬಳಿ ಇಳಿಬಿಡಲಾಗುತ್ತದೆ. ಒಂದರಲ್ಲಿ ಕುರಿಮರಿಗಳಿದ್ದರೆ ಮತ್ತೊಂದರಲ್ಲಿ ತಮ್ಮ ಮಕ್ಕಳು ಆಡುತ್ತವೆ. ಒಂದು ವೇಳೆ ತಾವು ಗುಡಾರ ಹೂಡಿದ ಹೊಲಗದ್ದೆಗಲ್ಲಿ ಮರಗಿಡಗಳಿದ್ದರೆ ಮಧ್ಯಾಹ್ನದ ಸಮಯದಲ್ಲಿ ಗಿಡದ ಕೆಳಗೆ ಕುರಿಮರಿ ಮತ್ತು ಮಕ್ಕಳನ್ನು ಆಡಲು ಬಿಡಲಾಗುತ್ತದೆ. ಕೆಲಸದ ಒತ್ತಡ ಕಡಿಮೆಯಿದ್ದರೆ ಮಹಿಳೆಯರು ಸ್ವಲ್ಪ ಹೊತ್ತು ವಿಶ್ರಾಂತಿ ಪಡೆದು ಕೊಳ್ಳುವುದು ಉಂಟು. ಈ ೫ ತಿಂಗಳುಗಳ ಕಾಲ ಹಗಲು-ರಾತ್ರಿ ಬಯಲಿನಲ್ಲಿಯೇ ಇಡೀ ಕುಟುಂಬ ಕಾಲದೂಡುತ್ತದೆ.

೪.೪.೧ ಗುಡಾರ ಬದಲಾಯಿಸುವ ವಿಧಾನ

ಇವರು ಯಾವುದೇ ಒಂದು ನಿರ್ದಿಷ್ಟ ಭೂ ಪ್ರದೇಶದಲ್ಲಿ ಗುಡಾರ ಹೂಡಿ ಜೀವನ ಸಾಗಿಸುವುದಿಲ್ಲ. ತಮ್ಮ ಬದುಕು(ಕುರಿ)ಗಳಿಗೆ ಮೇವು-ನೀರು ಹುಡುಕಿಕೊಂಡು ಒಂದು ಪ್ರದೇಶದಿಂದ

ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗುತ್ತ ತಾತ್ಕಾಲಿಕವಾಗಿ ಹೂಡಿದ ಗುಡಾರಗಳನ್ನು ಬದಲಾಯಿಸುವುದು ಕಾಣಬಹುದು. ತಮ್ಮ ಬದುಕು(ಕುರಿ)ಗಳಿಗೆ ಮೇವು-ನೀರು ದೊರೆಯುವವರೆಗೆ ಅಲ್ಲಿದ್ದು, ಮೇವು-ನೀರು ಖಾಲಿಯಾಗುತ್ತಿದ್ದಂತೆ ಮುಂದೆ ಯಾವ ಪ್ರದೇಶದಲ್ಲಿ ಮೇವು-ನೀರು ದೊರೆಯುತ್ತದೆಯೋ ಆ ಪ್ರದೇಶಕ್ಕೆ ಗುಡಾರವನ್ನು ವರ್ಗಾಯಿಸುವುದು ಸಾಮಾನ್ಯವಾಗಿದೆ. ಮಳೆಗಾಲದ ಅವಧಿಯಲ್ಲಿ ಗುಡ್ಡಗಾಡು ಪ್ರದೇಶದಲ್ಲಿ ಗುಡಾರ ಹೂಡಿ ಕುರಿ ಸಂಗೋಪನೆ ಮಾಡಿದರೆ, ಮಳೆಗಾಲದ ನಂತರ ಮತ್ತೆ ಹೊಲ-ಗದ್ದೆಗಳ ಕಡೆ ವಲಸೆ ಬಂದು ಮೇವು-ನೀರು ಸಿಗುವ ಹೊಲ-ಗದ್ದೆಗಳಲ್ಲಿ ಅಲೆದಾಡುತ್ತಾ ಕುರಿ ಸಂಗೋಪನೆ ಮಾಡಲಾಗುತ್ತದೆ.

ಗುಡಾರ ಬದಲಾಯಿಸುವಿಕೆಯು ಋತುಮಾನದಿಂದ ಋತುಮಾನಕ್ಕೆ ಭಿನ್ನವಾಗಿರುತ್ತದೆ. ಒಂದು ಋತುಮಾನದಿಂದ ಮತ್ತೊಂದು ಋತುಮಾನಕ್ಕೆ (ಬೇಸಿಗೆಯ ಕಾಲದಿಂದ ಮಳೆಗಾಲಕ್ಕೆ) ಬದಲಾಯಿಸುವಾಗ ಗುಡಾರ ಬದಲಾಯಿಸುವ ಭೂ-ಪ್ರದೇಶದ ಅಂತರ ದೂರವಾಗಿರುತ್ತದೆ. ಒಂದೇ ಋತುಮಾನದಲ್ಲಿ ಗುಡಾರ ಬದಲಾಯಿಸುವಾಗ, ಬದಲಾಯಿಸುವ ಗುಡಾರದ ಅಂತರ ಕಡಿಮೆ ಇರುತ್ತದೆ. ಋತುಮಾನದಿಂದ ಋತುಮಾನಕ್ಕೆ ಬದಲಾಯಿಸುವಾಗ ಒಂದು ತಾಲೂಕಿನ ಭೂಪ್ರದೇಶದಿಂದ ಪಕ್ಕದ ತಾಲೂಕಿನ ಅಥವಾ ಬೇರೊಂದು ಜಿಲ್ಲೆಯ ಅಥವಾ ಪಕ್ಕದ ರಾಜ್ಯದ ವ್ಯಾಪ್ತಿಗೊಳಪಟ್ಟ ಭೂಪ್ರದೇಶಕ್ಕೆ ವರ್ಗಾವಣೆಯಾಗುತ್ತಿರುತ್ತದೆ. ಈ ರೀತಿಯ ವರ್ಗಾವಣೆಯು ಮಳೆಗಾಲದಲ್ಲಿ ಗುಡ್ಡಗಾಡು ಪ್ರದೇಶಕ್ಕೆ ಮತ್ತು ಮಳೆಗಾಲದ ನಂತರ ನೀರಾವರಿ ಅಥವಾ ಬಯಲು ಪ್ರದೇಶದ ಕಡೆ ಗುಡಾರ ಬದಲಾಗುತ್ತಿರುತ್ತದೆ. ಗುಡ್ಡಗಾಡು ಪ್ರದೇಶದಿಂದ ನೀರಾವರಿ ಅಥವಾ ಬಯಲು ಪ್ರದೇಶದ ಕಡೆ ಬದಲಾಯಿಸುವಾಗ ಅಥವಾ ನೀರಾವರಿ ಪ್ರದೇಶದಿಂದ ಗುಡ್ಡಗಾಡು ಪ್ರದೇಶಕ್ಕೆ ಬದಲಾಯಿಸುವಾಗ ಒಂದೇ ದಿನದಲ್ಲಿ ಗುಡಾರ ವರ್ಗಾವಣೆ ಸಾಧ್ಯವಾಗುವುದಿಲ್ಲ. ಈ ಸಮಯದಲ್ಲಿ ಪ್ರತಿದಿನ ೨೦ ರಿಂದ ೨೫ ಕಿ.ಮೀ.ವರೆಗೆ ಕುದುರೆಗಳ ಮೇಲೆ ತಮ್ಮ ದಿನನಿತ್ಯ ಬಳಕೆಯ ಸಾಮಾನುಗಳನ್ನು ಹೇರಿಕೊಂಡು ದಾರಿ ಸಾಗಿ ಸಾಯಂಕಾಲವಾದ ಮೇಲೆ ತಾವು ಸಾಗುವ ಹಾದಿಯಲ್ಲಿರುವ ಗ್ರಾಮದ ಹತ್ತಿರ ರಾತ್ರಿ ಗುಡಾರ ಹೂಡುವುದನ್ನು ಕಾಣುತ್ತೇವೆ. ಮರುದಿನ ಆ ಸಾಮಾನುಗಳನ್ನು ಹೇರಿಕೊಂಡು ತಾವು ಯೋಜಿಸಿದ ದಾರಿ ಹಿಡಿದುಕೊಂಡು ಮುನ್ನಡೆಯಲಾಗುತ್ತದೆ. "ಒಂದು ವೇಳೆ ಕುರಿಗಳು ದಾರಿ ನಡೆದು ದಣಿದಿದ್ದರೆ, ತಾವು ರಾತ್ರಿ ಗುಡಾರ ಹೂಡಿದ ಗ್ರಾಮದ ಸುತ್ತಮುತ್ತಲೂ ಬಯಲು ಪ್ರದೇಶವಿದ್ದು, ಕುರಿಗಳಿಗೆ ಮೇವು-ನೀರು ದೊರೆಯುವಂತಿದ್ದು ಹಾಗೂ ಮಳೆಗಾಲವಾದರೆ ವಾತವರಣ ತಿಳಿಯಾಗಿದ್ದಲ್ಲಿ ಒಂದೆರೆಡು ದಿನ ಗುಡಾರ ಹೂಡಿದ ಸುತ್ತಮುತ್ತಲಿನ ಪ್ರದೇಶದಲ್ಲಿ ಕುರಿಗಳನ್ನು ಮೇಯಿಸಿಕೊಂಡು, ನಂತರ ಗುಡಾರ ಬದಲಾಯಿಸುತ್ತವೆ" (ಮಾಹಿತಿದಾರ: ಖಾನಪ್ಪ ಪೂಜಾರಿ: ಕಡಕಲಾಟ). ಈ ರೀತಿ ಗುಡಾರ ಬದಲಾಯಿಸುವಿಕೆಯು ತಾವು ಯೋಜಿಸಿದ ಪ್ರದೇಶ ಮುಟ್ಟುವವರೆಗೆ ನಡೆಯುವ ನಿರಂತರ ಪ್ರಕ್ರಿಯೆಯಾಗಿರುತ್ತದೆ.

ಒಂದೇ ಋತುಮಾನದಲ್ಲಿ ಗುಡಾರ ಬದಲಾಯಿಸುವಾಗ ದೂರದ ಸ್ಥಳಕ್ಕೆ ಬದಲಾಯಿಸದೆ ಒಂದು ಗ್ರಾಮದ ಹೊಲಗದ್ದೆಯಿಂದ ಪಕ್ಕದ ಅಥವಾ ಸಮೀಪದ ಗ್ರಾಮದ ಹೊಲಗದ್ದೆಗಳಿಗೆ ಅಥವಾ ಅದೇ ಗ್ರಾಮದ ಬೇರೊಂದು ಜಮೀನ್ದಾರನ ಹೊಲ-ಗದ್ದೆಗಳಿಗೆ ಬದಲಾಗುತ್ತಿರುತ್ತದೆ. ಈ ಅವಧಿಯಲ್ಲಿ ಬದಲಾಯಿಸುವ ಅಂತರ ಸಾಮಾನ್ಯವಾಗಿ ೧ ರಿಂದ ೧೫ ಕಿ.ಮೀ.ವರೆಗೆ ಇರುತ್ತದೆ.

ಸಂಘಜೀವಿಯಾದ ಮಾನವ ತನ್ನ ಕಷ್ಟ-ಸುಖಗಳನ್ನು ಸಮುದಾಯದಲ್ಲಿ ಹಂಚಿಕೊಂಡು ಬದುಕುವುದು ಸಹಜವಾಗಿದ್ದು, ಅಲೆಮಾರಿ ಕುರುಬನು ಇದರಿಂದ ಹೊರತಾಗಿಲ್ಲ. ಈ ಸಮುದಾಯದ ವ್ಯಕ್ತಿ ಒಬ್ಬಂಟಿಗನಾಗಿ ಅಥವಾ ಕುಟುಂಬದ ಕುರಿಮಂದೆ, ಕುದುರೆ, ನಾಯಿ ಮತ್ತು ತನ್ನ ಸಂಸಾರ ಕಟ್ಟಿಕೊಂಡು ಕುರಿಗಳಿಗೆ ಮೇವು-ನೀರು ಹುಡುಕಿಕೊಂಡು ಅಲೆಯುವುದಿಲ್ಲ. ಅಲೆಮಾರಿ ಕುರುಬರಲ್ಲೆ ತಮಗೆ ಅನುಕೂಲವಾದ ಸಮಾನ ಮನಸ್ಕ ಅಥವಾ ಸಮಾನ ವಯಸ್ಕರಾದ ೩-೪ ವಿಭಕ್ತ ಕುಟುಂಬಗಳು ಒಟ್ಟಾಗಿ ಕುರಿಗಳಿಗೆ ಮೇವಿರುವಲ್ಲಿ ಗುಡಾರ ಹೂಡುವುದು ಮತ್ತು ಮೇವು ಖಾಲಿಯಾದಂತೆಲ್ಲಾ ಗುಡಾರ ಬದಲಾಯಿಸುವುದನ್ನು ಕಾಣುತ್ತೇವೆ. ಅವಿಭಕ್ತ ಕುಟುಂಬ ಬೇರೆ ಕುಟುಂಬಗಳೊಂದಿಗೆ ಸೇರದೆ ಕುಟುಂಬದವರೆಲ್ಲ ಸ್ವತಂತ್ರವಾಗಿ ಒಂದು ಗುಂಪಾಗಿ ಅಲೆದಾಡುವುದು ಕಂಡುಬರುತ್ತದೆ. ಅವಿಭಕ್ತ ಕುಟುಂಬದ ಇಡೀ ಸದಸ್ಯರ ಸಂಖ್ಯೆ ಜಾಸ್ತಿ ಇದ್ದು, ಕುರಿಗಳ ಸಂಖ್ಯೆಯು ಹೆಚ್ಚಿರುತ್ತದೆ. ಆದ್ದರಿಂದ ಬೇರೆ ಕುಟುಂಬದವರನ್ನು ಕೂಡಿಸಿಕೊಳ್ಳುವ ಪ್ರಸಂಗವೇ ಬರುವುದಿಲ್ಲ. ತಮ್ಮ ಕುಟುಂಬದ ಜೊತೆಗೆ ಇನ್ನೊಂದು ಕುಟುಂಬವಿರಲಿ ಎಂಬ ದೃಷ್ಟಿಯಿಂದ ಕುರಿಗಳ ಸಂಖ್ಯೆ ಕಡಿಮೆಯಿರುವ ಕುಟುಂಬವನ್ನು ತಮ್ಮ ಜೊತೆಗಿಟ್ಟುಕೊಳ್ಳುವ ಸಂದರ್ಭಗಳೂ ಉಂಟು. ಉದಾಹರಣೆಗೆ ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲೂಕು ಸೌಂದಲ ಗ್ರಾಮದ ಅಪ್ಪಣ್ಣ ಖಾನಪ್ಪ ಪೂಜಾರಿ ಮತ್ತು ಈತನ ೫ ಜನ ಸಹೋದರರು ಅವಿಭಕ್ತ ಕುಟುಂಬದ ಸದಸ್ಯರು. ಕುರಿ ಸಂಗೋಪನೆಯ ಅವಧಿಯಲ್ಲಿ ಇವರಿಗೆ ಇನ್ನೊಂದು ಕುಟುಂಬದ ಜೊತೆ ಸೇರಿಸಕೊಳ್ಳುವ ಅನಿವಾರ್ಯತೆ ಉಂಟಾಗಿಲ್ಲ. ಈ ಕುಟುಂಬದ ಸದಸ್ಯರ ಸಂಖ್ಯೆ ಹೆಚ್ಚಾಗಿದ್ದು, ತಮ್ಮ ಕುರಿಗಳ ಜೊತೆಗೆ ಬೇರೆಯವರ ಕುರಿಗಳನ್ನು ಸರಿಪಾಲಿಗೆ ಕಾಯುತ್ತಾರೆ. ಸರಿಪಾಲು ಎಂದರೆ ಸಮಪಾಲು ಎಂದರ್ಥ. ಕುರಿಗಳ ಮಾಲಿಕನಿಗೆ ತನ್ನ ಕುರಿಗಳನ್ನು ತಾನೇ ಸಾಕಲು ಅಸಾಧ್ಯವಾದಾಗ ಅಲೆಮಾರಿ ಕುರುಬರಿಗೆ ಅಥವಾ ಇತರೆ ಕುರಿಗಾರರಿಗೆ ಸರಿಪಾಲಿಗೆ ನೀಡಲಾಗುತ್ತದೆ. ಸರಿಪಾಲಿಗೆ ನೀಡಿದ ಕುರಿಗಳು ಜನ್ಮ ನೀಡಿದ ಮರಿಗಳನ್ನು ಮಾಲಿಕ ಮತ್ತು ಅಲೆಮಾರಿ ಕುರುಬನು ವರ್ಷಕ್ಕೊಮ್ಮೆ ಸಮನಾಗಿ ಹಂಚಿಕೊಳ್ಳುವ ಏರ್ಪಾಟಿದೆ. ಬಂಡವಾಳದಾರರು ಲಾಭದ ದೃಷ್ಟಿಯನ್ನಿಟ್ಟುಕೊಂಡು ಕುರಿಗಳ ಮೇಲೆ ಬಂಡವಾಳ ಹೂಡಿ ಅಲೆಮಾರಿ ಕುರುಬರಿಗೆ ಕುರಿಸಾಕಣೆ ಮಾಡಲು ಕೊಡುತ್ತಾರೆ.

"ನಾವು ಪರಿಚಯವಿಲ್ಲದ ದೂರದ ಗ್ರಾಮಗಳ ಹೊಲಗದ್ದೆಗಳು ಅಥವಾ ಗುಡ್ಡಗಾಡು ಪ್ರದೇಶಕ್ಕೆ ವಲಸೆ ಹೋಗುವ ಪ್ರದೇಶಗಳಲ್ಲಿ ಕಳ್ಳರ ಕಾಟ, ಕಾಡುಪ್ರಾಣಿಗಳ ಹಾವಳಿ ಇದ್ದಾಗ ೩-೪ ಕುಟುಂಬಗಳು

ಸೇರಿ ಗುಂಪಾಗಿ ವಲಸೆ ಹೋಗದೆ ೮-೧೦ ಕುಟುಂಬಗಳು ಸೇರಿ ವಲಸೆ ಹೋಗುತ್ತೇವೆ. ಉದಾಹರಣೆ ಬಳ್ಳಾರಿ ಜಿಲ್ಲೆಯ ವ್ಯಾಪ್ತಿಯಲ್ಲಿ ಅಲೆಯುವವರು ಆಂಧ್ರಪ್ರದೇಶದ ಕರ್ನೂಲು ಜಿಲ್ಲೆಯ ಆದೋನಿ, ಆಲೂರು, ಮತ್ತು ಪತ್ತಿಕೊಂಡ ತಾಲೂಕುಗಳ ಬಯಲು ಪ್ರದೇಶದ ಕಡೆ ವಲಸೆ ಹೋಗುತ್ತೇವೆ. ಆ ಪ್ರದೇಶದಲ್ಲಿ ಜಾಲಿಗಿಡಗಳು ಹೆಚ್ಚಿವೆ ಹಾಗೂ ಜಾಲಿಕಾಯಿ ಕುರಿಗಳಿಗೆ ಇಷ್ಟ ಮತ್ತು ಆರೋಗ್ಯಕರ. ಅದ್ದರಿಂದ ಜಾಲಿಕಾಯಿ ಮೇಯಿಸಲು ಜನವರಿ-ಫೆಬ್ರವರಿ ತಿಂಗಳಿನಲ್ಲಿ ವಲಸೆ ಹೋಗುವೆವು. ಆ ಪ್ರದೇಶದಲ್ಲಿ ಸ್ಥಳೀಯ ಕಳ್ಳರ ಕಾಟ ಹೆಚ್ಚಿರುವುದರಿಂದ ೮-೧೦ ಕುಟುಂಬಗಳು ಸೇರಿಕೊಂಡು ವಲಸೆ ಹೋಗುತ್ತೇವೆ" (ಮಾಹಿತಿದಾರ: ಲಿಂಗಪ್ಪ ಸಾವಿರಕುರಿ:ನವಿಲಿಹಾಳ್). ಇದರಿಂದ ತಿಳಿದುಬರುವುದೇನೆಂದರೆ ಇಂದಿಗೂ ಕುರಿಗಳನ್ನು ಕಳ್ಳತನ ಮಾಡುವವರಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ.

೪.೪.೨ ಗುಡಾರ ಬದಲಾಯಿಸುವ ದಿನದ ಕಾರ್ಯಚಟುವಟಿಕೆಗಳು

ಅಲೆಮಾರಿ ಕುರುಬರು ಹೂಡಿದ ಗುಡಾರದ ಸುತ್ತಮುತ್ತ ಬದುಕು(ಕುರಿ)ಗಳಿಗೆ ಮೇವು ಮತ್ತು ನೀರು ದೊರೆಯುವವರೆಗೆ ಅಲ್ಲಿ ನಿಲ್ಲುವುದು ಕಾಣುತ್ತದೆ. ಗುಡಾರ ಹೂಡಿದ ಹೊಲ-ಗದ್ದೆಗಳಲ್ಲಿ ಬಿತ್ತನೆ ಅಥವಾ ನಾಟಿಯಾದ ತಕ್ಷಣ ಮೇವು-ನೀರು ದೊರೆಯುವ ಕಡೆ ಗುಡಾರ ಬದಲಾಯಿಸುವುದು ಅನಿವಾರ್ಯವಾಗಿರುತ್ತದೆ. ಗುಡಾರ ಬದಲಾಯಿಸುವ ಹಿಂದಿನ ದಿನ, ಗುಂಪಿನ ಕಾರಬಾರೆಯವರು (ಮುಖ್ಯಸ್ಥರು) ತಮ್ಮ ಬದುಕುಗಳಿಗೆ ಮೇವು-ನೀರು ದೊರೆಯುವ ಗ್ರಾಮದ ಹೊಲ-ಗದ್ದೆಗಳನ್ನು ನೋಡಿಕೊಂಡು ರಾತ್ರಿ ಕುರಿ ತಬ್ಬಲಿಕ್ಕೆ, ಆ ಗ್ರಾಮದ ಜಮೀನ್ದಾರರ ಬಗ್ಗೆ ಮಾಹಿತಿ ಸಂಗ್ರಹಿಸುತ್ತಾರೆ. ನಂತರ ಜಮೀನ್ದಾರನ ಮನೆಗೆ ಹೋಗಿ ನಾವು ಬೆಳಗಾಂ ಕುರುಬರು, ನಮ್ಮಲ್ಲಿ ಇಷ್ಟು ಕುರಿಗಳಿವೆ, ನಾಳೆಯಿಂದ ನಿಮ್ಮ ಜಮೀನಿನಲ್ಲಿ ಕುರಿ ತಬ್ಬುತ್ತೇವೆ ಗೌಡ್ರೇ, ಧಣಿ, ಸಾಹುಕಾರ, ರೆಡ್ಡಿ ಇತ್ಯಾದಿ ಗೌರವಾನ್ವಿತ ಪದಗಳನ್ನು ಸಂಬೋಧಿಸಿ ವಿನಮ್ರದಿಂದ ಕೇಳುತ್ತಾರೆ. ಭೂಮಾಲಿಕ ಒಪ್ಪಿಕೊಂಡರೆ ರಾತ್ರಿ ಕುರಿ ತಬ್ಬುವ ಭತ್ಯವನ್ನು ಅಲ್ಲೇ ಮಾತಾಡಬಹುದು. ಇಲ್ಲವಾದರೆ ಭೂಮಾಲಿಕ ಕುರಿಗಳ ಹಿಂಡನ್ನು ನೋಡಿದ ನಂತರ ಚೌಕಾಸಿಯ ಮೂಲಕ ನಿರ್ಧರಿಸಬಹುದು. ಒಂದು ವೇಳೆ ಆ ಭೂಮಾಲಿಕ ಕುರಿತಬ್ಬುವುದು ಬೇಡವೆಂದರೆ ಮತ್ತೊಬ್ಬ ಜಮೀನ್ದಾರನನ್ನು ಭೇಟಿ ಮಾಡಿ ಭತ್ಯ ನಿರ್ಧರಿಸಿಕೊಂಡು ಬರಲಾಗುತ್ತದೆ. ಅಲೆಮಾರಿ ಕುರುಬರಿಗೆ ಜಮೀನ್ದಾರ ನೀಡುವ ಭತ್ಯ ಪ್ರಮುಖವಲ್ಲ. ಅದರಿಂದ ಅವರ ಜೀವನ ನಡೆಯುವುದಿಲ್ಲ. ಆದರೆ ಅವರ ಬದುಕುಗಳಿಗೆ ಸಿಗುವ ಮೇವು-ನೀರು ಪ್ರಮುಖವಾಗಿರುತ್ತದೆ.

ಗುಡಾರ ಬದಲಾಯಿಸುವ ದಿನದಂದು, ಕುಟುಂಬದ ಎಲ್ಲಾ ಸದಸ್ಯರು ನಸುಕಿನಲ್ಲಿ ಎದ್ದು ದೈನಂದಿನ ಕಾರ್ಯದಲ್ಲಿ ಮಗ್ನರಾಗುತ್ತಾರೆ. ಮಹಿಳೆಯರು ಅಂದು ಸಾಮಾನ್ಯ ಅಡುಗೆ ಮಾಡಿ ಕುಟುಂಬದ ಸದಸ್ಯರಿಗೆ ಊಟಕ್ಕೆ ಬಡಿಸುತ್ತಾರೆ. ಪುರುಷರು, ಮಕ್ಕಳು, ಆಳುಮಕ್ಕಳಿದ್ದರೆ ಆಳುಮಕ್ಕಳು ಸೇರಿ ರಾತ್ರಿ ಗುಂಪಾಗಿ ಒಂದು ಕಡೆ ತಬ್ಬಿರುವ ಕುರಿಗಳ ಹಿಂಡನ್ನು ವಿಭಾಗಿಸಿಕೊಂಡು, ಮರಿಗಳಿಗೆ

ಹಾಲುಣಿಸಿ, ಊಟ ಮಾಡುತ್ತಾರೆ. ಪುರುಷರು ಊಟವಾದ ನಂತರ ಕುರಿ-ಮರಿಗಳನ್ನು ಬೇರ್ಪಡಿಸಿ ಗುಡಾರ ಬದಲಾಯಿಸುವ ಹಾದಿ ಹಿಡಿದುಕೊಂಡು ಕುರಿ ಮೇಯಿಸಲು ಹೋಗುತ್ತಾರೆ. ಕುರಿ ಮೇಯಿಸಲು ಹೊರಡುವುದಕ್ಕಿಂತ ಮೊದಲು ಅಥವಾ ಹಿಂದಿನ ದಿನದ ರಾತ್ರಿ, ಕುಟುಂಬದ ಮುಖ್ಯಸ್ಥರು ಕುರಿ ಮೇಯಿಸುವವರಿಗೆ ಮುಂದಿನ ಗ್ರಾಮದ ಹೆಸರು, ದಾರಿ, ಮತ್ತು ಕುರಿ ತಬ್ಬಿಸಿಕೊಳ್ಳುವ ಜಮೀನ್ದಾರನ ಹೆಸರು ಹಾಗೂ ಹೊಲಗದ್ದೆಗಳಿರುವ ಸ್ಥಳಗಳ ಬಗ್ಗೆ ಸ್ಪಷ್ಟ ಮಾಹಿತಿಯನ್ನು ನೀಡುತ್ತಾರೆ. ಆ ಮಾಹಿತಿಯ ಆಧಾರದ ಮೇಲೆ ಕುರಿಗಳನ್ನು ಮೇಯಿಸಿಕೊಳ್ಳುತ್ತಾ ಸೂರ್ಯಾಸ್ತವಾಗುವುದರೊಳಗಾಗಿ ಗುಡಾರ ಹೂಡುವ ಅಥವಾ ಕುರಿ ತಬ್ಬುವ ಹೊಲ-ಗದ್ದೆಗಳನ್ನು ಸೇರಿಕೊಳ್ಳುತ್ತಾರೆ. ಇವರು ವರ್ಷವೀಡಿ ಅಲೆದಾಡುವುದರಿಂದ ಅಲೆದಾಡುವ ಗ್ರಾಮಗಳ ಹೊಲ-ಗದ್ದೆಗಳು, ಗುಡ್ಡಗಾಡು ಪ್ರದೇಶ, ಅವುಗಳ ದಾರಿ, ಇತ್ಯಾದಿ ಪ್ರತಿವರ್ಷ ಪುನರಾವರ್ತನೆಯಾಗುತ್ತಿರುತ್ತವೆ. ಯಾವುದೇ ತೊಂದರೆಯಿಲ್ಲದೆ ಸಲೀಸಾಗಿ ಸಾಯಂಕಾಲದ ಹೊತ್ತಿಗೆ ಕುರಿ ಮೇಯಿಸುತ್ತಾ ಗುಡಾರದ ಹತ್ತಿರಕ್ಕೆ ಸಾಗುತ್ತಾರೆ. ಒಂದುವೇಳೆ ಹೊಸ ಅಥವಾ ಗೊತ್ತಿಲ್ಲದ ಪ್ರದೇಶದ ಕಡೆ ಗುಡಾರ ಬದಲಾಯಿಸುವುದಾದರೆ ಗ್ರಾಮ ಮತ್ತು ದಾರಿಯ ಬಗ್ಗೆ ಸ್ಪಷ್ಟ ಮಾಹಿತಿ ಸಂಗ್ರಹಿಸಿಕೊಂಡು ಜಾಗೃತರಾಗಿ ದಾರಿಯಲ್ಲಿ ಕಾಣುವ ಅಥವಾ ಎದುರಾಗುವ ಜನರಿಂದ ಗ್ರಾಮ ಮತ್ತು ದಾರಿ ಕೇಳುತ್ತಾ ಸಾಗುತ್ತಾರೆ.

ಗುಡಾರ ಬದಲಾಯಿಸುವ ಸ್ಥಳದ ಕಡೆಗೆ ಕುರಿ ಮೇಯಿಸಲು ಅಡವಿಗೆ ಹೋದನಂತರ ಮಹಿಳೆಯರು ಮತ್ತು ಕುಟುಂಬದ ಮುಖ್ಯಸ್ಥರು ಊಟ ಮಾಡುತ್ತಾರೆ. ಊಟವಾದ ನಂತರ ತಮ್ಮ ದಿನನಿತ್ಯದ ಬಳಕೆಯ ಸಾಮಾನುಗಳಾದ ಆಹಾರಧಾನ್ಯ, ಅಡುಗೆ ಪಾತ್ರೆಗಳು, ಬಟ್ಟೆ, ಕುರಿಬಲೆ, ಮರಿಬಲೆ, ತಾಡುಪಾಲು ಇತ್ಯಾದಿ ಸಾಮಾನುಗಳನ್ನು ಚೀಲಗಳಲ್ಲಿ ಕಟ್ಟಿ ಕುದುರೆ ಜಾಳಿಗೆಯಲ್ಲಿಡುವರು. ಸಣ್ಣಪುಟ್ಟ ಸಾಮಾನುಗಳಾದ ಹಾಲು, ಮೊಸರು, ಅಡಿಗೆ ಎಣ್ಣೆ, ದೇವರ ಭಾವಚಿತ್ರ ಇತ್ಯಾದಿಗಳನ್ನು ಬಿದಿರಿನ ಪುಟ್ಟಿಯಲ್ಲಿಡುವರು. ಗುಡಾರ ಬದಲಾಯಿಸುವ ಹಿಂದಿನ ದಿನದ ರಾತ್ರಿ ಕಟ್ಟಿ ಹಾಕಿದ ಕುದುರೆಗಳನ್ನು ಮೇಯಲು ಬಿಡುವುದಿಲ್ಲ. ಎಲ್ಲಾ ಸಾಮಾನುಗಳನ್ನು ಕಟ್ಟಿ ಜೋಡಿಸಿಟ್ಟುಕೊಂಡ ನಂತರ, ಕುದುರೆಗಳಿಗೆ ಗಂಟುಗಳಿಂದ ಕೂಡಿದ ಜಾಳಿಗೆಯಿಂದ ನೋವಾಗಬಾರದೆಂಬ ಉದ್ದೇಶದಿಂದ ಕುದುರೆಗಳ ಬೆನ್ನಿನ ಮೇಲೆ ದಪ್ಪನಾಗಿ ಕಂಬಳಿ ಹಾಸುತ್ತಾರೆ. ಕಂಬಳಿ ಹಾಸಿದ ನಂತರ ಸಮಾನ ತೂಕದ ಎರಡು ಜಾಳಿಗೆಗಳನ್ನು ಕಟ್ಟಿ ಕುದುರೆಯ ಎಡಭಾಗಕ್ಕೊಂದು ಮತ್ತು ಬಲಭಾಗಕ್ಕೊಂದು ಇಳಿಬಿಡುತ್ತಾರೆ. ಇಳಿಬಿಟ್ಟ ಎರಡು ಜಾಳಿಗೆಯ ತೂಕ ಸಮನಾಗಿರಬೇಕು. ತೂಕದಲ್ಲಿ ಒಂದು ಭಾರವಾದದ್ದು ಮತ್ತೊಂದು ಹಗುರವಾದ ಜಾಳಿಗೆ ಇಳಿಬಿಟ್ಟರೆ, ಕುದುರೆಗೆ ದಾರಿ ನಡೆಯಲು ಹಿಡಿತ ಸಿಗುವುದಿಲ್ಲ. ಜೊತೆಗೆ ಭಾರವಾದ ಕಡೆ ಜಾಳಿಗೆ ಇಳಿ ಬೀಳುತ್ತದೆ. ಕುದುರೆಗೆ ಜಾಳಿಗೆ ಹಾಕುವಾಗ ಎಚ್ಚರವಹಿಸಲಾಗುತ್ತದೆ. ಕುದುರೆಗಳ ಮೇಲೆ ಜಾಳಿಗೆಗಳನ್ನು ಹೇರಿದ ಮೇಲೆ ಬಲೆ ಮತ್ತು ಗುಡಾರ ಬಿಡಿಸುವ ಬಿದರಿನ ಕಟ್ಟಿಗೆಗಳನ್ನು ಕುದುರೆಯ ಮೇಲೆ ಅಡ್ಡಲಾಗಿ ಕಟ್ಟಲಾಗುವುದು. ನೀರು ತರಲು

ಬಳಸುವ ಅಲ್ಯೂಮಿನಿಯಂ ಪಾತ್ರೆ ಮತ್ತು ಕೊಡಪಾನಗಳನ್ನು ಜಾಳಿಗೆಗೆ ಕಟ್ಟಿ ಇಳಿ ಬಿಡಲಾಗುತ್ತದೆ. ಇಷ್ಟೆಲ್ಲಾ ಆದನಂತರ ಅಲೆಮಾರಿ ಕುರುಬರ ಮಕ್ಕಳು, ಕುರಿಮರಿ ಮತ್ತು ನಾಯಿಮರಿ ನಡೆಯಲಾರದಷ್ಟು ಚಿಕ್ಕವಾಗಿದ್ದರೆ ಬಟ್ಟೆಯಿಂದ ಜೋಳಿಗೆ ಮಾಡಿ ಅದನ್ನು ಕುದುರೆ ಜಾಳಿಗೆಗೆ ಕಟ್ಟಿ ಕುರಿಮರಿ ಹಾಕಿ ಇಳಿಬಿಡುವರು. ತಮ್ಮ ಮಗುವನ್ನು ಕುದುರೆಯ ಮೇಲೆ ಕೂಡಿಸಿ ಬೀಳದ ಹಾಗೆ ಹಗ್ಗ ಅಥವಾ ಬಟ್ಟೆಯಿಂದ ಗಟ್ಟಿಯಾಗಿ ಕಟ್ಟುತ್ತಾರೆ. ನಾಯಿಮರಿಯನ್ನು ಮಗುವಿನ ಪಕ್ಕದಲ್ಲಿ ಕೂಡಿಸುತ್ತಾರೆ. ಒಟ್ಟಾರೆಯಾಗಿ "ಇವರು ಕುರಿಮರಿ, ನಾಯಿಮರಿ ಮತ್ತು ತಮ್ಮ ಮರಿ ಎಂಬ ಭೇದಭಾವ ಮಾಡದೆ ಮೂರಕ್ಕೂ ಸಮಾನ ಪ್ರಾಮುಖ್ಯತೆ ನೀಡುತ್ತಾರೆ. ಈ ಮೂರು ಮರಿಗಳಿದ್ದಾಗ ಮಾತ್ರ ಜೀವನ ನಿರ್ವಹಣೆ ಸಾಧ್ಯ. ಕುರಿಮರಿ ಅಥವಾ ಕುರಿ ಮಾರಾಟದಿಂದ ದೈನಂದಿನ ವೆಚ್ಚಗಳನ್ನು ಭರಿಸಲು ಸಹಾಯಕವಾದರೆ, ನಾಯಿಮರಿಯು ಕುರಿ ಮತ್ತು ಕುರುಬನ ಅಂಗರಕ್ಷಕನಾಗಿ ಕಾರ್ಯನಿರ್ವಹಿಸುತ್ತದೆ. ಮರಿಗಳು ವಂಶಾಭಿವೃದ್ಧಿಗೆ, ದಿನನಿತ್ಯದ ಕೆಲಸಗಳಲ್ಲಿ ಭಾಗಿಯಾಗಲು ಮತ್ತು ಮುಪ್ಪಾದಾಗ ನೋಡಿಕೊಳ್ಳಲು ಸಹಾಯಕವಾಗುತ್ತದೆ. ಅಲೆಮಾರಿ ಕುರುಬನಿಗೆ ಮೂರು ಮರಿಗಳು ಅವಶ್ಯಕವಾದ್ದರಿಂದ ಸಮಾನ ಪ್ರಾಮುಖ್ಯತೆ ನೀಡಿ ಅವನ್ನು ಸಾಕಿ ಸಲುಹಿ ಪೋಷಿಸುತ್ತಾನೆ" (ಗೌಡರ್ ವೈ.ಎನ್:೨೦೦೫). ಈ ಸಂಗತಿಯನ್ನು ಪ್ರಸ್ತುತ ಅಧ್ಯಯನದ ಅವಧಿಯಲ್ಲಿ ಕಂಡುಕೊಂಡಿದ್ದೇನೆ.

ಅಲೆಮಾರಿ ಕುರುಬರು ಎಲ್ಲಾ ಸಾಮಾನುಗಳನ್ನು ಕುದುರೆಗಳ ಮೇಲೆ ಹೇರಿದ ನಂತರ ತಮ್ಮ ಕುಟುಂಬದಲ್ಲಿ ಕುದುರೆಯ ಮೇಲೆ ಕೂಡಲಾರದಷ್ಟು ಚಿಕ್ಕ ಮಗು ಇದ್ದರೆ ಮಗುವಿನ ತಾಯಿ ಬಟ್ಟೆಯಿಂದ ಜೋಳಿಗೆ ಮಾಡಿ ಅದರಲ್ಲಿ ಮಗುವನ್ನು ಹಾಕಿ ತನ್ನ ತಲೆಯ ಹಿಂಭಾಗಕ್ಕೆ ಜೋಳಿಗೆ ಇಳಿಬಿಟ್ಟುಕೊಳ್ಳುತ್ತಾಳೆ. ಮಹಿಳೆಯು ೨೦ ರಿಂದ ೨೫ ಕೆ.ಜಿ. ಭಾರವಿರುವ ಪುಟ್ಟಿಯನ್ನು ತಲೆಯ ಮೇಲೆ ಹೊತ್ತುಕೊಂಡು, ಎಡಗೈಯಲ್ಲಿ ಪುಟ್ಟಿ ಮತ್ತು ಬಲಗೈಯಲ್ಲಿ ಮುಂದಾಳತ್ವದ ಕುದುರೆಯ ಲಗಾಮು ಹಿಡಿದುಕೊಂಡು, ತಾನು ಸಾಗುತ್ತಿರುವ ದಾರಿಯನ್ನು ಕುದುರೆಗೆ ತೋರಿಸುತ್ತಾ ಮುನ್ನಡೆ ಯುವುದು ಕಾಣಬರುತ್ತದೆ. ಅವಳ ಹಿಂದೆ ಸಾಮಾನುಗಳನ್ನು ಹೊತ್ತ ಹಿಂಬಾಲಕ ಕುದುರೆಗಳು, ಪುಟ್ಟಿಗಳನ್ನು ಹೊತ್ತ ಗುಂಪಿನ ಇತರೆ ಕುಟುಂಬದ ಮಹಿಳೆಯರು ಅಥವಾ ಅವಿಭಕ್ತ ಕುಟುಂಬವಾಗಿದ್ದಲ್ಲಿ ಕುಟುಂಬದ ಮಹಿಳೆಯರು, ಸಾಕಿದ ನಾಯಿಗಳು ಹಿಂಬಾಲಿಸುತ್ತವೆ. ಕುಟುಂಬದ ಮುಖ್ಯಸ್ಥರು ಹೆಗಲ ಮೇಲೆ ಕರಿಯ ಕಂಬಳಿ ಅಥವಾ ಶಾಲು ಹಾಕಿಕೊಂಡು, ಕುರಿಕಾಯುವ ಕಟ್ಟಿಗೆ ಹೊತ್ತು, ಹಿಂದೆ ಮುಂದೆ ಎಲ್ಲವನ್ನು ವೀಕ್ಷಿಸುತ್ತಾ, ಮಹಿಳೆಯರಿಗೆ ಸಹಾಯಮಾಡುತ್ತಾ, ಕುದುರೆಗಳ ಹಿಂದೆ ಸಾಗುತ್ತಾರೆ.

ಗುಡಾರ ಬದಲಾಯಿಸುವ ದಿನದಂದು ಕುರಿಮರಿಗಳನ್ನು ಕುರಿಗಳ ಜೊತೆಯಲ್ಲಿ ಹೊಡೆದುಕೊಂಡು ಹೋಗುವುದಿಲ್ಲ. ಏಕೆಂದರೆ ಮರಿಗಳು ಚಿಕ್ಕವಾದ್ದರಿಂದ ಅಡವಿ ಸುತ್ತಿ ಕುರಿಗಳ ಹಿಂದೆ ತಿರುಗಿ ಬರುವಷ್ಟು ಶಕ್ತವಾಗಿರುವುದಿಲ್ಲ. ಮರಿಗಳು ತಾಯಿ ಜೊತೆಯಲ್ಲೆ ಇರುವುದರಿಂದ ಗುಡ್ಡ-ಬೆಟ್ಟಗಳಿದ್ದಲ್ಲಿ ತಾಯಿ ಮತ್ತು ಮರಿ ತಪ್ಪಿಸಿಕೊಳ್ಳಬಹುದು ಹಾಗೂ ಕುರಿಮರಿಯು ತಾಯಿ ಹಾಲನ್ನು ದಿನಪೂರ್ತಿ

ಕುಡಿಯುವುದರಿಂದ ತಾಯಿ ಚೆನ್ನಾಗಿ ಮೇಯುವುದಿಲ್ಲ ಎಂಬ ಕಾರಣಗಳಿಂದ ಮರಿಗಳನ್ನು ಕುರಿಗಳಿಂದ ಪ್ರತ್ಯೇಕಿಸಿ ಗುಡಾರ ಹೂಡುವ ಸ್ಥಳಕ್ಕೆ ಪ್ರತ್ಯೇಕವಾಗಿ ಹೊಡೆದುಕೊಂಡು ಹೋಗಲಾಗುತ್ತದೆ. ಕುರಿಗಳು ಅಡವಿಗೆ ಮೇಯಲು ಹೋದ ನಂತರ, ಬಿಡಾರ ಬದಲಾಯಿಸುವ ಗುಂಪಿನಲ್ಲಿರುವ ಎಲ್ಲ ಮರಿಗಳನ್ನು ಕೂಡಿಸಿ ಒಂದು ಪ್ರತ್ಯೇಕ ಗುಂಪು ಮಾಡಿಕೊಂಡು, ಮಹಿಳೆ ಮತ್ತು ಮಕ್ಕಳು ಹೊಡೆದುಕೊಂಡು ಹೋಗುವರು. ಪುರುಷರ ಸಂಖ್ಯೆ ಹೆಚ್ಚಿದ್ದರೆ, ಪುರುಷರು ಕುರಿತಬ್ಬಿದ ಸ್ಥಳವನ್ನು ಬೇಗ ಖಾಲಿ ಮಾಡಿ, ಮಧ್ಯ ಅಲ್ಲಲ್ಲಿ ಚಿಗುರು ಮೇವು ಅಥವಾ ಜಾಲಿ, ಜಂಬೆ, ಬೇವಿನ ಗಿಡದ ಸೊಪ್ಪುಗಳನ್ನು ಮೇಯಿಸಿಕೊಳ್ಳುತ್ತ ಗುಡಾರ ಹೂಡುವ ಸ್ಥಳವನ್ನು ಸಂಜೆಯಾಗುವುದರೊಳಗೆ ಸೇರಿಕೊಳ್ಳುತ್ತಾರೆ. ಕುರಿಮರಿಗಳನ್ನು ಮಹಿಳೆಯರು ಮತ್ತು ಮಕ್ಕಳು ಜೊತೆಯಾಗಿ ಬದಲಾಯಿಸುವುದೇ ಹೆಚ್ಚಾಗಿ ಕಂಡುಬರುತ್ತದೆ.

೪.೫. ಕುರಿಮಂದೆ ತಬ್ಬುವಿಕೆ

ಮೂರು-ನಾಲ್ಕು ಕುಟುಂಬಗಳು ಜೊತೆಯಾಗಿ, ಒಂದು ಗುಂಪು ಮಾಡಿಕೊಂಡು ಗುಡ್ಡಗಾಡು ಅಥವಾ ಜಮೀನ್ದಾರರ ಹೊಲಗದ್ದೆಗಳಲ್ಲಿ ಗುಡಾರ ಹೂಡುತ್ತವೆ. ಗುಡಾರ ಹೂಡಿದ ಪ್ರದೇಶದ ಸುತ್ತಮುತ್ತ ಹಗಲೆಲ್ಲಾ ಕುರಿ ಮೇಯಿಸಿ, ರಾತ್ರಿ ಗುಡಾರ ಹೂಡಿದ ಸ್ಥಳದಲ್ಲಿ ಕುರಿಮಂದೆ ತಬ್ಬಲಾಗುತ್ತದೆ. ತಬ್ಬಿದ ಕುರಿಗಳ ಸಂಖ್ಯೆ ಸುಮಾರು ೫೦೦ ರಿಂದ ೨೦೦೦ರವರೆಗೆ ಇರುತ್ತವೆ. ಸಾಮಾನ್ಯವಾಗಿ ೪ ರಿಂದ ೧೫ ದಿನಗಳೊಳಗಾಗಿ ತಬ್ಬುವ ಸ್ಥಳ ಬದಲಾವಣೆಯಾಗುತ್ತದೆ. ಕೆಲವೊಮ್ಮೆ ತಬ್ಬಿದ ಸ್ಥಳದಲ್ಲಿ ತೊಂದರೆಯಾದಾಗ ತಬ್ಬಿದ ಮರುದಿನ ಅಥವಾ ೨-೩ ದಿನಗಳಲ್ಲಿ ಬದಲಾಯಿಸಿದ ಉದಾಹರಣೆಗಳಿವೆ. ಹಾಗೆಯೇ ಒಂದೇ ಜಮೀನಿನಲ್ಲಿ ತಿಂಗಳುಗಟ್ಟಲೇ ತಬ್ಬಿದ ಉದಾಹರಣೆಗಳು ಈ ಅಧ್ಯಯನದ ದಿನಗಳಲ್ಲಿ ಕಂಡುಬಂದಿದೆ. ತಿಂಗಳುಗಟ್ಟಲೆ ಕುರಿತಬ್ಬುವಿಕೆಯು ಕಳ್ಳರ ಕಾಟವಾಗಲಿ, ಕಾಡುಪ್ರಾಣಿಗಳ ಹಾವಳಿಯಾಗಲಿ ಇಲ್ಲದೆ ಜಮೀನ್ದಾರನ ಭೂಮಿ ಬಹಳಷ್ಟು ಇದ್ದು, ಕುರಿ-ಮೇಕೆಗಳಿಗೆ ಸಾಕಷ್ಟು ಮೇವು ನೀರು ದೊರೆಯುವಿಕೆಯನ್ನು ಅವಲಂಬಿಸಿರುತ್ತದೆ. ಹಾಗೂ ಹೊಲ-ಗದ್ದೆಗಳಲ್ಲಿ ಮಾತ್ರ ತಿಂಗಳುಗಟ್ಟಲೇ ಕುರಿಮಂದೆ ತಬ್ಬಲಾಗುತ್ತದೆ. ಉದಾಹರಣೆಗೆ ಬಳ್ಳಾರಿ ಜಿಲ್ಲೆಯ ಶಿರುಗುಪ್ಪ ತಾಲೂಕಿನ ಮೈಲಾಪುರ ಕ್ಯಾಂಪಿನ ಗೋವರ್ಧನ ಜಮೀನಿನಲ್ಲಿ ಪ್ರತಿವರ್ಷ ಏಪ್ರೀಲ್-ಮೇ ತಿಂಗಳಲ್ಲಿ ತಿಂಗಳುಗಟ್ಟಲೇ ಅಲೆಮಾರಿ ಕುರುಬರು ಕುರಿಮಂದೆ ತಬ್ಬುವುದನ್ನು ಕಾಣಬಹುದು.

ಭೂಮಿಗೆ ಅಮೃತ ಸಂಜೀವಿನಿವೆನಿಸಿದ ಕುರಿಗಳ ಹಿಕ್ಕೆ ಮತ್ತು ಮೂತ್ರ ಪಡೆಯಲು ಜಮೀನ್ದಾರರು ತಮ್ಮ ಹೊಲಗದ್ದೆಗಳಲ್ಲಿ ಕುರಿಗಳನ್ನು ತಬ್ಬಿಸಿಕೊಳ್ಳುತ್ತಾರೆ. ಕುರಿಗಳನ್ನು ತಬ್ಬಿಸಿಕೊಳ್ಳುವುದರಿಂದ ಜಮೀನಿನ ಫಲವತ್ತತೆ ಹೆಚ್ಚುತ್ತದೆ, ಹಾಗೂ ಗಟ್ಟಿಕಾಳು ಬೆಳೆ ಹೆಚ್ಚು ಫಸಲು ಪಡೆಯಲು ಜಮೀನ್ದಾರನಿಗೆ ಸಾಧ್ಯವಾಗುತ್ತದೆ. "ಜಮೀನ್ದಾರನು ತನ್ನ ಹೊಲ-ಗದ್ದೆಗಳಲ್ಲಿ ಕುರಿಗಳನ್ನು ತಬ್ಬಿಸಿಕೊಂಡಿದ್ದಕ್ಕಾಗಿ ಪ್ರತಿಫಲವಾಗಿ ಭತ್ಯ ನೀಡುತ್ತಾನೆ. ಭತ್ಯ ನೀಡುವಿಕೆಯು ಕುರಿಗಳ ಸಂಖ್ಯೆಯನ್ನು ಅವಲಂಬಿಸುತ್ತದೆ.

ಇದನ್ನು ನಗದು ಹಣದ ರೂಪದಲ್ಲಿಯಾಗಲಿ ಅಥವಾ ಆಹಾರ ಧಾನ್ಯಗಳ ರೂಪದಲ್ಲಿಯಾಗಲಿ ಮತ್ತು ಇನ್ನೂ ಕೆಲವೊಮ್ಮೆ ನಗದು ಹಣ ಮತ್ತು ಆಹಾರಧಾನ್ಯಗಳೆರಡರ ರೂಪದಲ್ಲಿ ಪಡೆಯುತ್ತಾರೆ"(ಒಡೆಯರ ಡಿ. ಹೆಗ್ಗಡೆ:೧೫೧). ಜಮೀನಿನ ಮಾಲಿಕ ಜೋಳ ಹೆಚ್ಚು ಬೆಳೆದಿದ್ದರೆ ಹಾಗೆಯೇ ಜೋಳವನ್ನು ಸ್ವೀಕರಿಸಲು ಅಲೆಮಾರಿ ಕುರುಬರು ಒಪ್ಪಿದರೆ ದಿನಕ್ಕೆ ಇಂತಿಷ್ಟು ಸೇರು(ಕೆ.ಜಿ.) ಜೋಳವನ್ನು ಪಡೆಯುತ್ತಾರೆ. ಜೋಳದ ಸಂಗಟಿ ಮತ್ತು ರೊಟ್ಟಿಯನ್ನು ಇವರು ಹೆಚ್ಚಾಗಿ ಅನುಭೋಗಿಸುವುದರಿಂದ ಜೋಳ ಪಡೆಯಲು ಇಷ್ಟಪಡುತ್ತಾರೆ. ಇತ್ತೀಚಿನ ದಿನಗಳಲ್ಲಿ ಆಹಾರಧಾನ್ಯಗಳನ್ನು ಅಪರೂಪಕ್ಕೊಬ್ಬ ರೈತರು ಮಾತ್ರ ಕೊಡುತ್ತಿದ್ದು ಹೆಚ್ಚಾಗಿ ನಗದು ಹಣವನ್ನು ನೀಡಲಾಗುತ್ತದೆ. ಕುರಿ ತಬ್ಬುವಿಕೆಯು ಕುರಿ ತಬ್ಬಿದ ಜಮೀನಿನ ಸುತ್ತಮುತ್ತ ದೊರೆಯುವ ಮೇವು ನೀರನ್ನು ಅವಲಂಬಿಸಿರುತ್ತದೆ. ಕುರಿಗಳಿಗೆ ಮೇವು-ನೀರು ಚೆನ್ನಾಗಿ ದೊರೆಯುವಾಗ ರೈತ ಕಡಿಮೆ ಭತ್ಯ ಕೊಟ್ಟರೂ ಆ ಜಮೀನಿನಲ್ಲಿ ತಬ್ಬುವುದು ಕಂಡುಬರುತ್ತದೆ. ಅಲೆಮಾರಿ ಕುರುಬನಿಗೆ ಕುರಿಗಳಿಗೆ ದೊರೆಯುವ ಆಹಾರ ಪ್ರಮುಖವೇ ಹೊರತು ಅದರಿಂದ ದೊರೆಯುವ ಭತ್ಯವಲ್ಲ. ಇನ್ನೂ ಕೆಲವೊಂದು ಜಮೀನ್ದಾರರು ಕುರಿತಬ್ಬಿಸಿಕೊಂಡಿದ್ದಕ್ಕೆ ಯಾವುದೇ ಭತ್ಯ ನೀಡದೆ ಕಳುಹಿಸಿದ ಪ್ರಸಂಗಗಳೂ ಇವೆ.

ಮಳೆಗಾಲದಲ್ಲಿ ಗುಡ್ಡಗಾಡು ಪ್ರದೇಶದಲ್ಲಿ ಕುರಿ ತಬ್ಬಲಾಗುತ್ತದೆ. ಬೇಲಿಯಿಂದ ಅಥವಾ ಬಲೆಯಿಂದ ತೆರೆದ ಕುರಿಹಟ್ಟಿ ನಿರ್ಮಾಣ ಮಾಡಿಕೊಂಡು ರಾತ್ರಿ ಸಮಯದಲ್ಲಿ ಹಟ್ಟಿಯಲ್ಲಿ ಕುರಿ ತಬ್ಬುತ್ತಾರೆ. ಬೆಳಿಗ್ಗೆ ಕುರಿ ಮೇಯಲು ಹೋದನಂತರ ಬಲೆಯೊಳಗೆ ಅಥವಾ ಹಟ್ಟಿಯೊಳಗೆ ಕುರಿಗಳು ರಾತ್ರಿ ಹಾಕಿದ ಹಿಕ್ಕೆಗಳನ್ನು ಗುಡಿಸಿ ಒಂದು ಕಡೆ ರಾಶಿ ಹಾಕುತ್ತಾರೆ. ಗುಡಾರ ಬದಲಾಯಿಸುವಾಗ ಸಮೀಪವಿರುವ ಗ್ರಾಮದ ರೈತನಿಗೆ ಬಂಡಿ ಅಥವಾ ಟ್ರಾಕ್ಟರ್ ಲೆಕ್ಕದಲ್ಲಿ ಮಾರಾಟ ಮಾಡಿ ಮುಂದೆ ಕುರಿತಬ್ಬುವ ಸ್ಥಳಕ್ಕೆ ಗುಡಾರವನ್ನು ಬದಲಾಯಿಸಲಾಗುತ್ತದೆ.

ಶ್ಯಾವುಟ್ : ಅಲೆಮಾರಿ ಕುರುಬರು ತಮ್ಮ ಗುಡಾರವನ್ನು ಒಂದು ಹೊಲ-ಗದ್ದೆಯಿಂದ ಬೇರೊಂದು ಹೊಲ-ಗದ್ದೆಗಳಿಗೆ ಬದಲಾಯಿಸಿದಾಗ ಅನುಸರಿಸಿಕೊಂಡು ಬಂದಿರುವ ಪದ್ಧತಿ ಇದು. ಗುಡಾರವನ್ನು ಬದಲಾಯಿಸಿದಾಗ ಹಿಂದಿನ ಹೊಲ-ಗದ್ದೆಯಲ್ಲಿ ಯಾವ ದಿಕ್ಕಿಗೆ ಗುಡಾರ ಹೂಡಲಾಗಿರುತ್ತದೋ ಅದೇ ದಿಕ್ಕಿನಲ್ಲಿ ಗುಡಾರವನ್ನು ಹೂಡುವುದಕ್ಕೆ 'ಶ್ಯಾವುಟ್' ಎನ್ನಲಾಗುತ್ತದೆ. ಉದಾಹರಣೆಗೆ ಈ ಹಿಂದಿನ ಹೊಲ-ಗದ್ದೆಗಳಲ್ಲಿ ನಾಲ್ಕು ಕುಟುಂಬಗಳಿದ್ದು ದಿಕ್ಕಿಗೊಂದು ಕುಟುಂಬದಂತೆ ಆಗ್ನಿ, ವಾಯು, ನೈರುತ್ಯ, ಈಶಾನ್ಯ ದಿಕ್ಕುಗಳಲ್ಲಿ ಚತುರ್ಭುಜ ಆಕಾರದಲ್ಲಿ ಗುಡಾರ ಹೂಡಿದ್ದರೆ, ಮತ್ತೊಂದು ಹೊಲ-ಗದ್ದೆಗೆ ಗುಡಾರ ಬದಲಾಯಿಸಿದಾಗ ಈ ಹಿಂದೆ ಯಾವ ದಿಕ್ಕಿನಲ್ಲಿ ಗುಡಾರ ಹೂಡಲಾಗಿತ್ತೋ ಅದೇ ದಿಕ್ಕಿನಲ್ಲಿ ಹೂಡಲಾಗುತ್ತದೆ. ಅಂದರೆ, ಆಗ್ನಿ ದಿಕ್ಕಿಗೆ ಗುಡಾರ ಹೂಡಿದ ಕುಟುಂಬ ಆಗ್ನಿ ದಿಕ್ಕಿಗೆ, ವಾಯುದಿಕ್ಕಿಗೆ ಹೂಡಿದ ಕುಟುಂಬ ವಾಯುದಿಕ್ಕಿಗೆ, ನೈರುತ್ಯ ದಿಕ್ಕಿಗೆ

ಹೂಡಿದ ಕುಟುಂಬ ನೈರುತ್ಯ ದಿಕ್ಕಿಗೆ ಮತ್ತು ಈಶಾನ್ಯ ದಿಕ್ಕಿಗೆ ಹೂಡಿದ ಕುಟುಂಬ ಈಶಾನ್ಯ ದಿಕ್ಕಿಗೇ ಗುಡಾರವನ್ನು ಹೂಡಬೇಕು. ಈ ರೀತಿ ಗುಡಾರ ಹೂಡುವ ದಿಕ್ಕನ್ನು ಬದಲಾಯಿಸದೆ ಉಳಿಸಿಕೊಂಡು ಹೋಗುವ ಉದ್ದೇಶವೆಂದರೆ ಕುರಿಗಳು ಅಡವಿಯಿಂದ ಮೇವು ಮೇಯ್ದು ಗುಡಾರ ಹೂಡಿದ ಸ್ಥಳಕ್ಕೆ ಆಗಮಿಸುವಾಗ ಈ ಹಿಂದಿನ ಹೊಲಗದ್ದೆಯಲ್ಲಿ ಯಾವ ದಿಕ್ಕಿನಲ್ಲಿ ಗುಡಾರ ಹೂಡಲಾಗಿತ್ತೋ ಆ ದಿಕ್ಕಿನ ಕಡೆ ಬರುತ್ತವೆ. ಒಂದು ವೇಳೆ ಗುಡಾರದ ದಿಕ್ಕು ಬದಲಾಯಿಸಿ ಕುರಿಗಳನ್ನು ಬದಲಾಯಿಸಿದ ದಿಕ್ಕಿನ ಕಡೆ ಹೊಡೆದರೂ ಹೋಗುವುದಿಲ್ಲ. ಒಂದು ವೇಳೆ ಒತ್ತಾಯ ಪೂರ್ವಕವಾಗಿ ಬದಲಾಯಿಸಿದರೆ ಕುರಿಗಳು ಮೊದಲು ಗುಡಾರ ಹೂಡಿದ ದಿಕ್ಕಿಗೆ ಬಂದು ನಿಲುತ್ತವೆ. ದಿಕ್ಕು ಬದಲಾಯಿಸುವುದರಿಂದ ಒಂದು ಕುಟುಂಬದ ಕುರಿಗಳು ಮತ್ತೊಂದು ಕುಟುಂಬದ ಕುರಿಗಳೊಂದಿಗೆ ಬೆರೆತಾಗ ಮರಿಗಳಿಗೆ ಹಾಲುಣಿಸಲು, ಹಾಲು ಹಿಂಡಿಕೊಳ್ಳಲು, ಚುಚ್ಚುಮದ್ದು, ಔಷಧ ಹಾಕಲು ತೊಂದರೆಯಾಗುತ್ತದೆ. ಜೊತೆಗೆ ಅವುಗಳ ಮೇಲ್ವಿಚಾರಣೆ, ನಿಯಂತ್ರಣ ಕಷ್ಟವಾಗುತ್ತದೆ. ಒಂದು ವೇಳೆ ಆ ಗುಂಪಿನಲ್ಲಿರುವ ಯಾವುದಾದರೂ ಒಂದು ಕುಟುಂಬ ದಿಕ್ಕನ್ನು ಬದಲಾಯಿಸಿದರೆ ಅವನೊಂದಿಗೆ ಜಗಳ ಉಂಟಾಗುತ್ತದೆ ಮತ್ತು ಅವನನ್ನು ಗುಂಪಿನಿಂದ ಹೊರಗೆ ಹಾಕಲಾಗುತ್ತದೆ.

೪.೫.೧ ಬಲೆ ಬಡಿಯುವುದು

ಗುಡಾರ ಹೂಡಿದ ಸ್ಥಳದಿಂದ ಕುರಿಗಳು ಮತ್ತು ಮರಿಗಳು ದೂರ ಹೋಗದಂತೆ ತಡೆಯಲು ಬಲೆಯನ್ನು ಬಳಸುತ್ತಾರೆ. ಬಲೆಯಲ್ಲಿ ೨ ವಿಧಗಳಿವೆ. ಒಂದು 'ಮರಿಬಲೆ' ಮತ್ತೊಂದು 'ಕುರಿಬಲೆ'. ಹಗಲು ವೇಳೆಯಲ್ಲಿ ಮರಿಗಳಿಗೆ ಮರಿಬಲೆಯನ್ನು ರಾತ್ರಿ ಸಮಯದಲ್ಲಿ ಕುರಿಬಲೆಯನ್ನೂ ಬಡಿಯುತ್ತಾರೆ. ಕುರಿಬಲೆಯ ಕಂಡಿಗಳು ದೊಡ್ಡವಾಗಿದ್ದು, ಮರಿಬಲೆಯ ಕಂಡಿಗಳು ಚಿಕ್ಕವಾಗಿರುತ್ತವೆ. ಏಕೆಂದರೆ ಮರಿಗಳು ಕಂಡಿಯ ಮೂಲಕ ತಲೆಯನ್ನು ತೂರಿಸಿ ಹೊರಗೆ ಬಾರದಂತೆ ಚಿಕ್ಕ ಕಂಡಿಗಳನ್ನು ಬಿಟ್ಟು ಮರಿಬಲೆ ತಯಾರು ಮಾಡಲಾಗಿರುತ್ತದೆ. ಬಲೆಯನ್ನು ತಯಾರು ಮಾಡಲು ಹತ್ತಿ, ರೇಷ್ಮೆ ಅಥವಾ ನೈಲಾನ್ ನೂಲಿನ ಉಂಡೆಯನ್ನು ಕೆ.ಜಿ. ಲೆಕ್ಕದಲ್ಲಿ ತಂದು ತಾವೇ ಬಲೆಯನ್ನು ತಯಾರು ಮಾಡಿಕೊಳ್ಳುತ್ತಾರೆ. ಅಥವಾ ಗುಡಾರ ಹೂಡಿದ ಸ್ಥಳದ ಸಮೀಪ ಮೀನುಗಾರರಿದ್ದರೆ ನೂಲನ್ನು ಅವರಿಗೆ ಕೊಟ್ಟು ತಮಗೆ ಬೇಕಾದ ಆಕಾರದಲ್ಲಿ ಹಾಗೂ ಗಾತ್ರಕ್ಕನುಗುಣವಾಗಿ ಮಾಡಿಸಿಕೊಳ್ಳುತ್ತಾರೆ. ನೂಲನ್ನು ಬಲೆಯಾಗಿ ಪರಿವರ್ತನೆ ಮಾಡಿದ್ದಕ್ಕಾಗಿ ಮೀನುಗಾರರ ಶ್ರಮಕ್ಕೆ ಪ್ರತಿಫಲವಾಗಿ ಇಂತಿಷ್ಟು ಹಣವನ್ನು ನೀಡಲಾಗುತ್ತದೆ. ಬಾಳಿಕೆ ಮತ್ತು ಮಿತವ್ಯಯ ದೃಷ್ಟಿಯಿಂದ ಹತ್ತಿ ನೂಲನ್ನು ಬಳಸದೆ ರೇಷ್ಮೆ ಅಥವಾ ನೈಲಾನ್ ನೂಲನ್ನು ಬಳಸುವುದು ಕಂಡುಬರುತ್ತದೆ. ಹತ್ತಿ ನೂಲು, ರೇಷ್ಮೆ ನೂಲಿಗಿಂತ ಕಡಿಮೆ ಬೆಲೆಯಾದರೂ ರೇಷ್ಮೆ ನೂಲನ್ನೇ ಕೊಂಡುಕೊಳ್ಳಲಾಗುತ್ತದೆ. ಹತ್ತಿನೂಲು ಬಿಸಲಿಗೆ ಕಾದು, ಮಳೆಗೆ ತೊಯ್ದು ಬಾಳಿಕೆ ಬರುವುದಿಲ್ಲ. ಹತ್ತಿನೂಲಿನ ಜೀವಿತಾವಧಿ ಮತ್ತು ಬೆಲೆಯನ್ನು ಲೆಕ್ಕಹಾಕಿದಾಗ ರೇಷ್ಮೆ ನೂಲಿನ ಬಲೆ ಕಡಿಮೆ ಖರ್ಚಿನದಾಗಿದೆ ಎಂದು ರೇಷ್ಮೆನೂಲನ್ನೇ ಬಳಸಲಾಗುತ್ತದೆ. ಇತ್ತೀಚಿನ

ದಿನಗಳಲ್ಲಿ ನೈಲಾನ್‌ನಿಂದ ತಯಾರು ಮಾಡಿದ ಬಲೆಯನ್ನು ಕೆಲವೊಂದು ಅಲೆಮಾರಿ ಕುರುಬರು ಬಳಸುತ್ತಿದ್ದಾರೆ.

ರಾತ್ರಿ ಸಮಯದಲ್ಲಿ ಕುರಿ-ಮೇಕೆಗಳಿಗೆ ಬಲೆ ಬಡಿಯುವ ಉದ್ದೇಶವನ್ನು ಹೀಗೆ ಗುರುತಿಸಬಹುದು.

- ಗುಡಾರ ಹೂಡಿದ ಸುತ್ತಮುತ್ತಲಿನ ಹೊಲ-ಗದ್ದೆಗಳಲ್ಲಿ ಬೆಳೆದು ನಿಂತ ಫಸಲನ್ನು ಕುರಿ-ಮೇಕೆಗಳು ತಿನ್ನಲು ಹೋಗದಂತೆ ತಡೆಯುವುದು.
- ಕಾಡು ಪ್ರಾಣಿಗಳಿಂದ ಕುರಿಗಳನ್ನು ರಕ್ಷಿಸಿಕೊಳ್ಳುವುದು.
- ರಾತ್ರಿ ಸಮಯದಲ್ಲಿ ಸರದಿ ಕಾಯಲು ಸುಲಭವಾಗಿರುವುದು.
- ಗುಡ್ಡ-ಗಾಡು ಪ್ರದೇಶದಲ್ಲಿ ಕುರಿ ತಬ್ಬಿದಾಗ ಅವುಗಳ ಹಿಕ್ಕೆಯನ್ನು ಮಾರಾಟ ಮಾಡಲು ಅನುಕೂಲವಾಗಿರುವುದು.

ಕುರಿ ಬಲೆಯನ್ನು ಮಳೆ ಮತ್ತು ಚಳಿಗಾಲದಲ್ಲಿ ಮಾತ್ರ ಬಡಿದರೂ ಬೇಸಿಗೆ ಕಾಲದಲ್ಲಿ ಬಡಿಯುವುದಿಲ್ಲ. ಈ ಅವಧಿಯಲ್ಲಿ ಕುರಿಗಳನ್ನು ಗುಡ್ಡಗಾಡು ಮತ್ತು ಸುತ್ತಮುತ್ತ ಬೆಳೆ ಇರುವ ಹೊಲ-ಗದ್ದೆಗಳಲ್ಲಿ ತಬ್ಬಲಾಗುವುದು. ಇದರಿಂದ ಕುರಿಗಳನ್ನು ರಕ್ಷಿಸಿಕೊಳ್ಳಲು ಮತ್ತು ಬೆಳೆಗಳಿಗೆ ಹಾನಿಯಾಗದಂತೆ ನೋಡಿಕೊಳ್ಳಲು ಬಲೆ ಬಡಿಯಲಾಗುವುದು. ಬೇಸಿಗೆ ಕಾಲದಲ್ಲಿ ಹೊಲ-ಗದ್ದೆಗಳೆಲ್ಲ ಕಟಾವು ಆಗಿರುವುದರ ಜೊತೆಗೆ ವಿಶಾಲ ಬಯಲು ಪ್ರದೇಶದಲ್ಲಿ ಕುರಿ ತಬ್ಬುವುದರಿಂದ ಬಲೆ ಬಡಿಯುವ ಅನಿವಾರ್ಯತೆ ಉಂಟಾಗುವುದಿಲ್ಲ. ಒಂದು ವೇಳೆ ಕುರಿ ತಬ್ಬಿದ ಹೊಲ-ಗದ್ದೆಯ ಪಕ್ಕದಲ್ಲಿ ಬೆಳೆ ಇದ್ದಾಗ ಮಾತ್ರ ಬಲೆ ಬಡಿಯಲಾಗುತ್ತದೆ. ಆದರೆ ಮರಿ ಬಲೆಯನ್ನು ವರ್ಷವಿಡಿ ಹಗಲು ಸಮಯದಲ್ಲಿ ಬಡಿಯುವರು. ಕುರಿಗಳು ಅಡವಿಗೆ ಹೋಗಿ ಮೇವು ಮೇಯ್ದು ಗುಡಾರಕ್ಕೆ ಹಿಂದಿರುಗುವವರೆಗೂ ಬಲೆಯಲ್ಲಿ ಇರಬೇಕಾದ್ದರಿಂದ ವರ್ಷವಿಡೀ ಬಡಿಯಬೇಕಾಗುತ್ತದೆ.

ನೆಲೆನಿಂತ ಕುರಿಗಾರರು ರೇಷ್ಮೆ ಅಥವಾ ನೈಲಾನ್ ನೂಲಿನಿಂದ ತಯಾರು ಮಾಡಿದ ಬಲೆಯನ್ನು ಬಳಸದೆ ಕಬ್ಬಿಣದ ತಂತಿಯಿಂದ ಮಾಡಿದ ಕುರಿಬಲೆಯನ್ನು ಬಳಸುತ್ತಾರೆ. ದೀರ್ಘಾವಧಿ ಬಾಳಿಕೆ ಬರುತ್ತದೆ ಮತ್ತು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗಾಯಿಸುವ ಅನಿವಾರ್ಯತೆ ಇಲ್ಲದಿರುವುದರಿಂದ ಕಬ್ಬಿಣದ ಬಲೆಯನ್ನು ಬಳಸಲಾಗುತ್ತದೆ. ಆದರೆ ಅಲೆಮಾರಿ ಕುರುಬರು ಚಲನಶೀಲರಾಗಿರುವುದರಿಂದ ಗುಡಾರ ಬದಲಾಯಿಸಿದಂತೆಲ್ಲಾ ಕಬ್ಬಿಣದ ಬಲೆ ಹೊತ್ತೊಯ್ಯುವುದು ಕಷ್ಟಕರ ಕೆಲಸವಾದ್ದರಿಂದ ಹಗುರವಾದ ರೇಷ್ಮೆ ಅಥವಾ ನೈಲಾನ್ ಬಲೆಯನ್ನು ಬಳಸುವುದು ಕಂಡುಬರುತ್ತದೆ.

೪.೫.೨ ಸರದಿ ಕಾಯುವುದು

ಕಳ್ಳರು ಮತ್ತು ಕಾಡುಪ್ರಾಣಿಗಳಿಂದ ರಕ್ಷಿಸಿಕೊಳ್ಳಲು ನಕ್ಷತ್ರಗಳ ಚಲನೆ ವಲಸೆಯನ್ನು

ಆಧಾರವಾಗಿಟ್ಟುಕೊಂಡು ಎರಡು ಗಂಟೆಗೆ ಇಬ್ಬರು ಇಡೀ ರಾತ್ರಿ ಸರದಿಯ ಮೇಲೆ ಕುರಿಕಾಯಲಾಗುತ್ತದೆ. ಇದನ್ನು ಸರದಿ ಕಾಯುವುದು ಎನ್ನುವರು. ಅಲೆಮಾರಿ ಕುರುಬರು ಮರಾಠಿ ಪದ ಬಳಸಿ ಇದನ್ನು 'ಪಾರಿ' ಕಾಯುವುದು ಎನ್ನುತ್ತಾರೆ. ಕೆಲವೊಂದು ನಕ್ಷತ್ರಗಳು ಕಾಲಗಣನೆಗನುಗುಣವಾಗಿ ಕಾಣಿಸಿ ಕೊಳ್ಳುತ್ತವೆ. ಅವನ್ನು ತಮ್ಮದೇ ಆದ ಸಂಕೇತ ಅಥವಾ ಗುರುತುಗಳ ಮೂಲಕ ಗುರುತಿಸಿ, ಅವುಗಳ ಚಲನೆಯ ಆಧಾರದ ಮೇಲೆ ಸರದಿ ಕಾಯಲಾಗುತ್ತದೆ. ನಕ್ಷತ್ರಗಳ ಚಲನೆಯನ್ನು ಹೀಗೆ ಗುರುತಿಸ ಲಾಗುವುದು.

* **ಮೂರು ತೋಳ ಅಥವಾ ಕೂರಿಗೆ ತಾಳು:** ಮೂರು ನಕ್ಷತ್ರಗಳು ಸಮಾನ ಅಂತರದಲ್ಲಿರುತ್ತವೆ.
* **ಹಬ್ಬೆಮಂಚ:** ನಾಲ್ಕು ನಕ್ಷತ್ರಗಳು ಮಂಚದ ಕಾಲುಗಳು ಹಾಗೆ ಕಾಣಿಸಿಕೊಳ್ಳುತ್ತವೆ.
* **ಚೆನ್ನಮ್ಮ ಸೂಸುಗ ಅಥವಾ ಚೇಳು:** ಐದು ನಕ್ಷತ್ರಗಳಿದ್ದು ಮಂಗಳ ಕಾರ್ಯದಲ್ಲಿ ಸ್ತ್ರೀಯರು ತಲೆಯ ಮೇಲೆ ಹಾಕಿಕೊಳ್ಳುವ ಸೂಸಗ ಅಥವಾ ಚೇಳಿನಾಕಾರವಾಗಿರುತ್ತದೆ.
* **ಬೆಳ್ಳಿಚುಕ್ಕಿ:** ಇದು ಎಲ್ಲ ನಕ್ಷತ್ರಗಳಿಗಿಂತ ಪ್ರಕಾಶಮಾನವಾಗಿರುತ್ತದೆ.

ಮೇಲಿನ ಪ್ರತಿಯೊಂದು ಗುಂಪಿನ ನಕ್ಷತ್ರಗಳು ಮೂರು ತಿಂಗಳಿಗೆ ಒಂದರಂತೆ ಕಾಲ ನಡೆಸುತ್ತವೆಂಬುದು ಅಲೆಮಾರಿ ಕುರುಬರ ತಿಳುವಳಿಕೆಯಾಗಿದೆ.

ಕುರಿಗಳನ್ನು ರಕ್ಷಿಸಿಕೊಳ್ಳಲು ಮುನ್ಸೂಚನೆ

ಯಾವುದೇ ಪ್ರಾಣಿ-ಪಕ್ಷಿಗಳು ತಮಗೆ ಅಥವಾ ತಮ್ಮವರಿಗೆ ಅಪಾಯ ಬರುವುದನ್ನು ಗಾಳಿ ವಾಸನೆಯಿಂದ ತಮ್ಮ ವರ್ತನೆ ಅಥವಾ ಶಬ್ದದ ಮೂಲಕ ವ್ಯಕ್ತಪಡಿಸುತ್ತವೆ. ಅಲೆಮಾರಿ ಕುರುಬರು ಬದುಕುಗಳಿಗೆ ಎದುರಾಗುವ ಅಪತ್ತುಗಳನ್ನು ಈ ಕೆಳಗಿನಂತೆ ಮುನ್ಸೂಚನೆಗಳನ್ನು ಗ್ರಹಿಸುವುದು ಕಂಡುಬರುತ್ತದೆ.

೨ **ಕುರಿಗಳ ವರ್ತನೆ :** ಕುರಿಮಂದೆಗಳನ್ನು ಗುಡ್ಡ ಅಥವಾ ಹೊಲಗದ್ದೆಗಳ ಪ್ರದೇಶಗಳಲ್ಲಿ ತಬ್ಬುವುದು ಸಹಜ. ಇಂತಹ ಪ್ರದೇಶಗಳಲ್ಲಿ ತಬ್ಬಿದಾಗ ಚಿರತೆ, ತೋಳ, ನರಿ ಇತ್ಯಾದಿ ಕಾಡುಪ್ರಾಣಿಗಳು ಮುಗ್ಧ ಪ್ರಾಣಿಗಳಾದ ಕುರಿ-ಮೇಕೆಗಳನ್ನು ತಿನ್ನಲು ಬರುತ್ತವೆ. ಕಾಡು ಪ್ರಾಣಿಗಳು ಸುಮಾರು ೧ ಕಿ.ಮೀ. ದೂರದಲ್ಲಿರುವಾಗಲೆ ಗಾಳಿಯ ಮೂಲಕ ವಾಸನೆ ಹಿಡಿದು ಕುರಿಗಳು ಬೆದರಿ ಒಂದು ಕಡೆ ನಿಂತು ಕಾಡುಪ್ರಾಣಿ ಬರುವ ದಿಕ್ಕನ್ನು ವೀಕ್ಷಿಸುತ್ತಿರುತ್ತವೆ. ಕುರಿಗಳ ವರ್ತನೆಯಿಂದ ಎಚ್ಚೆತ್ತುಕೊಂಡು ಅಲೆಮಾರಿ ಕುರುಬರು ನಾಯಿಗಳನ್ನು ಸಮೀಪ ಕರೆದು ಕೋಲು ಮತ್ತು ಬ್ಯಾಟರಿಯನ್ನು ಹಿಡಿದುಕೊಂಡು ಕುರಿಗಳ ಸುತ್ತಲು ತಿರುಗುತ್ತಾರೆ.

೨ **ಟಿಪ್ಪಂಕಿ ಪಕ್ಷಿ :** ಕಾಡುಪ್ರಾಣಿಗಳು ಮತ್ತು ಕಳ್ಳರು, ಕುರಿತಬ್ಬಿದ ಕಡೆ ಬರುವ ಹಾದಿಯಲ್ಲಿ

ಈ ಪಕ್ಷಿ ಟ್ವೀ, ಟ್ವೀ, ಟ್ವೀ ಎಂದು ಕೂಗುತ್ತದೆ. ಈ ಕೂಗು ಅಶುಭ ಅಥವಾ ಅಪತ್ತೆಂದು ಭಾವಿಸುವ ಅಲೆಮಾರಿ ಕುರುಬರು ಇಡೀ ರಾತ್ರಿ ಎಚ್ಚರದಿಂದಿರುತ್ತಾರೆ. ಹಾಗೆಯೇ ಟಿವ್ಹಂಕಿ ಪಕ್ಷಿಯ ಜೊತೆ ಹಾಲಹಕ್ಕಿಯೂ ಕ್ಯಾರಬ್... ಕ್ಯಾರಬ್... ಕ್ಯಾರಬ್... ಎಂದು ಕೂಗಿದರೆ ಶುಭವೆಂದರಿತು ನಿರ್ಭಯವಾಗಿ ಮಲಗುತ್ತಾರೆ.

೨ ನಾಯಿ : ನಾಯಿ, ಕುರಿ ಮತ್ತು ಕುರುಬರ ಅಂಗರಕ್ಷಕ ಪ್ರಾಣಿಯಾಗಿದೆ. ಬಹಳ ನಿಯತ್ತಿನ ಪ್ರಾಣಿಯಾದ ಇದು ಕುರುಬನಿಗೆ ಮತ್ತು ಕುರಿಗಳಿಗೆ ಅಪತ್ತು ಬಾರದ ಹಾಗೆ ನೋಡಿಕೊಳ್ಳುತ್ತದೆ. ಇವರು ಮೂರ್ನಾಲ್ಕು ನಾಯಿಗಳನ್ನು ಸಾಕುತ್ತಾರೆ. ಒಂದೆರಡು ನಾಯಿಗಳು ಹಗಲು ಹೊತ್ತು ಕುರಿಕಾಯಲು ಅಡವಿಗೆ ಹೋಗುತ್ತವೆ. ಬೇರೆ ಪ್ರಾಣಿಗಳು ಮತ್ತು ಇತರೆ ಜನರು ಕುರಿಗಳ ಹತ್ತಿರ ಬಾರದೆ ಹಾಗೆ ನೋಡಿಕೊಳ್ಳುತ್ತವೆ. ಇನ್ನೂಳಿದ ಒಂದೆರಡು ನಾಯಿಗಳು ಹಗಲೀಡಿ ಗುಡಾರದ ಸುತ್ತಮುತ್ತ ಇದ್ದು ಅಪರಚಿತ ವ್ಯಕ್ತಿ, ಪ್ರಾಣಿ, ಪಕ್ಷಿಗಳು ಸುಳಿದಾಡದಂತೆ ನೋಡಿಕೊಳ್ಳುತ್ತವೆ. ರಾತ್ರಿ ಸಮಯದಲ್ಲಿ ಕಾಡುಪ್ರಾಣಿಗಳು ಕುರಿಗಳನ್ನು ತಿನ್ನಲು ಹಾಗೂ ಕುರಿಗಳನ್ನು ಹೊತ್ತೊಯ್ಯಲು ಕಳ್ಳರು ಬಾರದಂತೆ ಇಡೀ ರಾತ್ರಿ ಕುರಿಹಿಂಡಿನ ಸುತ್ತ ತಿರುಗುತ್ತವೆ. ಯಾವುದಾದರೂ ಕಾಡುಪ್ರಾಣಿ ಅಥವಾ ಮನುಷ್ಯ ಕುರಿ ಹಿಂಡಿನ ಸಮೀಪ ಬಂದರೆ ಬೊಗಳುವುದರ ಮೂಲಕ ನಿದ್ರಿಸುತ್ತಿದ್ದ ತನ್ನ ಯಜಮಾನ ನನ್ನು ಎಬ್ಬಿಸಿ ಕುರಿಗಳನ್ನು ರಕ್ಷಿಸಿಕೊಳ್ಳುತ್ತವೆ.

೪.೫.೩ ಕುರಿಗಳನ್ನು ಗುರುತಿಸುವಿಕೆ

ಸಾಮಾನ್ಯವಾಗಿ ಕುರಿ-ಮರಿಗಳನ್ನು ಅವುಗಳ ಮುಖ, ಎತ್ತರ, ಗಾತ್ರ, ಬಣ್ಣ, ಕಿವಿ, ಕಾಲು, ಬಾಲ, ಕೊಂಬು ಇತ್ಯಾದಿಗಳ ಆಧಾರದ ಮೇಲೆ ಗುರುತಿಸಲಾಗುತ್ತದೆ. ಕುರಿಸಾಕಣಿಕೆ ವೃತ್ತಿ ಇವರಿಗೆ ವಂಶಪರಂಪರೆಯಾಗಿ ಬಂದಿದ್ದು, ವೃತ್ತಿಯಲ್ಲಿ ನೈಪುಣ್ಯತೆಯನ್ನು ಪಡೆದಿದ್ದರಿಂದ ಸಾವಿರಾರು ಕುರಿಗಳಲ್ಲಿ ಇದೇ ನಮ್ಮ ಕುರಿ ಎಂದು ಗುರುತಿಸುವಷ್ಟು ಪರಿಪೂರ್ಣತೆ ಪಡೆದಿರುತ್ತಾರೆ. ಕುರಿಗಳನ್ನು ಗುರುತಿಸಲು ಪೂರ್ವಜರು ಕಲಿಸಿಕೊಟ್ಟ ವಿದ್ಯೆ ಅಥವಾ ಹಿಂದಿನಿಂದಲೂ ನಡೆದು ಬಂದ ಸಂಪ್ರದಾಯವೆ ಕುರಿ ಕುರಿತ ಸೂಚಿಯಾಗಿದೆ. ವೈದಿಕ ಸಂಪ್ರದಾಯದ ಪ್ರಕಾರ ಯುಗಾದಿ ಹೊಸವರ್ಷವಾಗಿದೆ. ಅಂದು ವಿವಿಧ ಕುಲ ವೃತ್ತಿಯಲ್ಲಿ ತೊಡಗಿದವರು ತಮ್ಮ ಸಲಕರಣೆಗಳನ್ನು ಶುಭ್ರಗೊಳಿಸಿ ಪೂಜೆ ಸಲ್ಲಿಸುತ್ತಾರೆ. ಹಾಗೆಯೇ ಅಲೆಮಾರಿ ಕುರುಬರು ಯುಗಾದಿಯ ಹಬ್ಬದಂದು ಶುಭ್ರಗೊಂಡು ಮುಂಜಾನೆಯೇ ತನ್ನ ಬದುಕುಗಳಿಗೆ ಪೂಜೆ ಸಲ್ಲಿಸುತ್ತಾರೆ. ಪೂಜೆ ಸಲ್ಲಿಸಿದ ನಂತರ, ಒಂದು ವರ್ಷದೊಳಗಿನ ಗಂಡು ಮರಿಗಳಿಗೆ ಬಾಲದ ತುದಿಯನ್ನು ಹೆಣ್ಣು ಮರಿಗಳಿಗೆ ಬಾಲದ ತುದಿ ಮತ್ತು ಕಿವಿಯ ಮೇಲಿನ ಚರ್ಮದ ಸ್ವಲ್ಪ ಭಾಗವನ್ನು ಕತ್ತರಿಸುವರು. ಈ ರೀತಿ ಕತ್ತರಿಸುವಾಗ ಅಥವಾ ಬರೆ ಹಾಕುವಾಗ ತಮ್ಮ ಹಿರಿಯರು ಹಾಕಿಕೊಟ್ಟ ಅಥವಾ ಮುಂದುವರಿಸಿಕೊಂಡು ಬಂದ ಗುರುತನ್ನೆ ಹಾಕುತ್ತಾರೆ.

ಇದಕ್ಕೆ 'ಲಾಕು' ಹಾಕುವುದು ಎಂದು ಕರೆಯುತ್ತಾರೆ. ಅಂತಹ ಲಾಕು ಅಥವಾ ಗುರುತುಗಳೆಂದರೆ ಬುಗಡೆ, ಸೀಳಗಿವಿ, ಅರೆಗಿವಿ, ಉಂಗುರು, ಮುಂಗವಿ, ಹಿಂಗಿವಿ ಇತ್ಯಾದಿ ರೀತಿಯ ಗುರುತುಗಳನ್ನು ಹಿಕ್ಕಳ ಅಥವಾ ಚಿಮುಟಿಗೆಯಿಂದ ಹಾಕುತ್ತಾರೆ. ಇನ್ನೂ ಕೆಲವರು ಕಬ್ಬಿಣ್ಣದ ಸಲಾಕೆಯನ್ನು ಬೆಂಕಿಯಲ್ಲಿ ಖಾಯಿಸಿ ಹಣೆ ಅಥವಾ ಬೆನ್ನಿನ ಮೇಲೆ ಕತ್ರಿಬರೆ [X], ಜೋಡುಬರೆ [||], ಒಂಟಿಬರೆ [|], ಅಡ್ಡಬರೆ [-] ಅಂದರೆ =, +, X, ||, #, |, T, V, L, ಇತ್ಯಾದಿ ಚಿಹ್ನೆಗಳನ್ನು ಹೊಂದಿರುವ ಗುರುತು ಅಥವಾ ಬರೆ ಹಾಕುತ್ತಾರೆ. ಈ ತರಹದ ಚಿಹ್ನೆಗಳ ಆಧಾರದ ಮೇಲೆ ತಮ್ಮ ಕುರಿಗಳನ್ನು ಗುರುತಿಸುತ್ತಾರೆ. ಗಂಡು ಮರಿಗಳಿಗೆ ಕಿವಿ, ಹಣೆ, ಅಥವಾ ಬೆನ್ನಿನ ಮೇಲೆ ಗುರುತು ಅಥವಾ ಬರೆ ಹಾಕುವುದಿಲ್ಲ. ಏಕೆಂದರೆ ೨-೩ ಬೀಜಕ್ಕೆ ಬಿಟ್ಟು ಉಳಿದೆಲ್ಲವೆನ್ನು ಮಾರಾಟ ಮಾಡುತ್ತಾರೆ. ಆದ್ದರಿಂದ ಬಹಳ ಕುಟುಂಬಗಳು ಗುಂಪಾಗಿ ಕುರಿ ತಬ್ಬಿದಾಗ ಸಾವಿರಾರು ಕುರಿಗಳಲ್ಲಿ ತಮ್ಮ ಕುರಿ ತಪ್ಪಿಸಿಕೊಂಡಾಗ, ಬೇಗನೆ ಗುರುತು ಹಚ್ಚಲು ಚಿಹ್ನೆ ಅಥವಾ ಲಾಕು ಸಹಾಯಕವಾಗುತ್ತದೆ. ಒಂದೇ ಗುರುತನ್ನು ಎರಡು ಅಥವಾ ಮೂರು ಕುಟುಂಬದವರು ಹಾಕಿದಾಗ ಹೇಗೆ ಗುರುತು ಹಿಡಿಯುತ್ತೀರಿ ಎಂದು ಪ್ರಶ್ನಿಸಿದಾಗ ನನ್ನ ಪ್ರಶ್ನೆಗೆ ಉತ್ತರಿಸುತ್ತಾ, "ಸಾಹೇಬ್ರ ಸಾಲಿ ಕಲಿತರೋಲ್ಲಾ ನೀವು ಒಂದೇ ರೀತಿಯ ಅಕ್ಷರ ಬರೆಯುತ್ತೀರಿ. ಸಾವಿರ ಪೇಪರ ತಂದು ನಿಮ್ಮ ಮುಂದಿಟ್ಟರೆ ಇದೇ ನನ್ನ ಪೇಪರ್, ಇದೇ ನನ್ನ ಬರವಣಿಗೆ ಎಂದು ಹೇಗೆ ನಿಮ್ಮದೇ ಎಂದು ಗುರುತು ಹಿಡಿಯುತ್ತೀರೋ ಹಾಗೆಯೇ ನಾವು ಎದ್ದರೂ, ಬಿದ್ದರೂ ಕುರಿಯಲ್ಲಿರುವುದರಿಂದ ನಮ್ಮ ಕುರಿಯನ್ನು ಗುರುತು ಹಿಡಿಯುವುದು ಕಷ್ಟ ವಾಗುವುದಿಲ್ಲ" ಎನ್ನುತ್ತಾರೆ (ಮಾಹಿತಿದಾರ: ಕಲ್ಲಪ್ಪ ಮುತ್ಯಪ್ಪ:ತೋರಪ್ಪಗೋಳ್:ಸುಟ್ಟಟ್ಟಿಗ್ರಾಮ). ಹೌದು ಈ ಮಾತು ಸತ್ಯವೆನಿಸುತ್ತದೆ. ಜೀವನವಿಡಿ ಕುರಿಸಂಗೋಪನೆಯಲ್ಲಿ ತೊಡಗಿರುವುದರಿಂದ ಸುಲಭವಾಗಿ ಗುರುತಿಸಬಹುದಾಗಿದೆ.

೪.೬ ಕುರಿ ಮೇಯಿಸುವ ವಿಧಾನ

ವಲಸೆ ಬಂದಿರುವ ಅಲೆಮಾರಿ ಕುರುಬರೆಲ್ಲರೂ ಒಂದೇ ಕಡೆ ಗುಡಾರಗಳನ್ನು ಹೂಡಿ ಕುರಿ ಮೇಯಿಸುವುದು ಕಾಣುವುದಿಲ್ಲ. ಸಾಮಾನ್ಯವಾಗಿ ಮೂರರಿಂದ ಎಂಟು ಕುಟುಂಬಗಳು ಸೇರಿ ಒಂದು ಪ್ರದೇಶ ಅಥವಾ ಹೊಲಗದ್ದೆಗಳಲ್ಲಿ ಗುಡಾರವನ್ನು ಹೂಡಲಾಗುತ್ತದೆ. ವಲಸೆ ಬಂದ ಬಹಳಷ್ಟು ಕುಟುಂಬಗಳು ಒಂದೇ ಕಡೆ ಗುಡಾರವನ್ನು ಹೂಡಿ ಕುರಿಮೇಯಿಸಲು ಆರಂಭಿಸಿದರೆ ಎಲ್ಲಾ ಕುರಿಗಳಿಗೆ ಮೇವು-ನೀರು ಸಿಗುವುದು ಕಷ್ಟವಾಗುತ್ತದೆ. ಆದ್ದರಿಂದ ೩-೪ ಕುಟುಂಬಗಳು ಜೊತೆಯಾಗಿ ಒಂದು ಗುಂಪು ಮಾಡಿಕೊಂಡು ಗುಡಾರವನ್ನು ಹೂಡುತ್ತಾರೆ. ಗುಡಾರ ಹೂಡಿದ ಎಲ್ಲಾ ಕುಟುಂಬಗಳು ಸಹ ಜೊತೆಯಾಗಿ ಕುರಿ ಮೇಯಿಸಲು ಹೋಗುವುದಿಲ್ಲ. ಅವರಲ್ಲಿಯೇ ಹಿಂಡುಗಳಾಗಿ ಭಾಗಮಾಡಿಕೊಂಡು ಮೇಯಿಸಲು ಹೋಗಲಾಗುತ್ತದೆ. ಉದಾಹರಣೆಗೆ ಒಂದು ಕುಟುಂಬದ ಕುರಿಗಳ ಸಂಖ್ಯೆ ೭೫ ಮತ್ತೊಂದು ಕುಟುಂಬದ ಕುರಿಗಳ ಸಂಖ್ಯೆ ೮೫ ಇದ್ದಾಗ ಒಟ್ಟು ಕುರಿಗಳ ಸಂಖ್ಯೆ ೧೬೦ ಆಗುತ್ತದೆ.

ಈ ಎರಡು ಕುಟುಂಬಗಳು ಜೊತೆಯಾಗಿ ಒಂದು ಹಿಂಡು ಮಾಡಿಕೊಂಡು ಮೇಯಿಸಲಾಗುತ್ತದೆ. ಹಾಗೆಯೆ ಇನ್ನೊಂದು ಕುಟುಂಬದ ಕುರಿಗಳ ಸಂಖ್ಯೆ ೩೫೦ ಇದ್ದಾಗ, ಅವುಗಳನ್ನು ೧೭೫ ರಂತೆ ೨ ಭಾಗ ಮಾಡಿಕೊಂಡು, ಎರಡು ಹಿಂಡುಗಳಾಗಿ ಮೇಯಿಸಲಾಗುವುದು. ಈ ರೀತಿ ಭಾಗಮಾಡಿಕೊಂಡು ಕುರಿಗಳನ್ನು ಮೇಯಿಸಲು ಹೋಗುವ ಉದ್ದೇಶವೇನು? ಎಂದು ಕೇಳಿದಾಗ ಅವರು ಕೊಟ್ಟ ಉತ್ತರ - "ಕುರಿಗಳ ಸಂಖ್ಯೆ ಹೆಚ್ಚಾಗಿದ್ದರೆ, ಹೊಲ-ಗದ್ದೆಗಳ ಬದುವಿನಲ್ಲಿ, ಕಿರಿದಾದ ನಾಲೆ ಅಥವಾ ದಾರಿಯಲ್ಲಿ ಮೇಯಿಸುವುದು ಕಷ್ಟವಾಗುತ್ತದೆ. ಮೇವು ದೊರೆಯದಿದ್ದಾಗ ಬೇವಿನ, ಜಾಲೆಯ ಅಥವಾ ಜಂಬೆ ಮರದ ಕೊಲ್ಲೆಗಳನ್ನು ಕಡಿದು ಸೊಪ್ಪನ್ನು ಮೇಯಿಸಬೇಕೆಂದಾಗ ಎಲ್ಲಾ ಕುರಿಗಳಿಗೆ ಮರದ ಸೊಪ್ಪು ಸಾಕಾಗುವುದಿಲ್ಲ. ಎಲ್ಲಾ ಕುರಿಗಳಿಗೆ ಹೊಟ್ಟೆ ತುಂಬುವಷ್ಟು ಮೇವು-ನೀರು ದೊರಕಿಸುವುದಾಗಲಿ ಮತ್ತು ಅವುಗಳ ಮೇಲ್ವಿಚಾರಣೆ, ನಿರ್ವಹಣೆ, ನಿಯಂತ್ರಣ ಕಷ್ಟವಾಗುತ್ತದೆ. ಆದ್ದರಿಂದಲೇ ೧೨೦ ರಿಂದ ೨೦೦ರೊಳಗೆ ಒಂದು ಹಿಂಡು ಮಾಡಿಕೊಂಡು ಬೆಳಗ್ಗೆಯಿಂದ ಸೂರ್ಯಾಸ್ತವಾಗುವ ವರೆಗೆ ಕುರಿಗಳಿಗೆ ಮೇವು ಮೇಯಿಸುತ್ತೇವೆ" (ಮಾಹಿತಿದಾರ: ಬೀರಪ್ಪ:ನಸಲಾಪುರ).

ಒಂದು ಕುರಿ ಹಿಂಡನ್ನು ಮೇಯಿಸಲು ಇಬ್ಬರು ಅಲೆಮಾರಿ ಕುರುಬರಿರುತ್ತಾರೆ. ಹೆಚ್ಚಾಗಿ ಒಂದು ಹಿಂಡಿಗೆ ಒಬ್ಬ ವಯಸ್ಕನಿದ್ದರೆ ಮತ್ತೊಬ್ಬ ಚಿಕ್ಕವನಿರುತ್ತಾನೆ. ಚಿಕ್ಕವನು ಕುರಿಗಳಿಗೆ ದಾರಿ, ಮೇವು ತೋರಿಸುತ್ತಾ ಮುನ್ನಡೆದರೆ, ವಯಸ್ಕನಾದವನು ಕುಂಟುವ, ವಯಸ್ಸಾದ, ಮರಿ ಹಾಕಿದ ಇತ್ಯಾದಿ ಕುರಿಗಳನ್ನು ಕುರಿ ಹಿಂಡಿನ ಜೊತೆಗೆ ಕಲಿಸುತ್ತಾ, ಯಾವ ಕುರಿಗಳು ಹಿಂದಿವೆ, ತಪ್ಪಿಸಿ ಕೊಂಡಿವೆ ಎಂದು ಎಲ್ಲವನ್ನು ಗಮನಿಸುತ್ತಾ ಕುರಿಗಳ ಹಿಂದೆ ಸಾಗುತ್ತಾನೆ. ಇವರ ಕುಟುಂಬಗಳಲ್ಲಿ ಯಾರಿಗಾದರೂ ಗಂಡು ಸಂತಾನವಿಲ್ಲದಿದ್ದಾಗ ಅಥವಾ ಗಂಡ ತೀರಿಕೊಂಡು ಮಕ್ಕಳು ಚಿಕ್ಕವರಿದ್ದಾಗ ಅಥವಾ ಮಕ್ಕಳು ಚಿಕ್ಕವಿದ್ದು ಪತಿಯು ಅನ್ಯಕಾರ್ಯ ನಿಮಿತ್ತ ದೂರದ ಊರಿಗೆ ಹೋಗಿದ್ದ ಪ್ರಸಂಗಗಳಲ್ಲಿ ದೈನಂದಿನ ಅಡಿಗೆಯನ್ನು ಮಕ್ಕಳಿಗೆ ಮಾಡಿಟ್ಟು ಕುರಿ ಮೇಯಿಸಲು ಕುಟುಂಬದ ಸ್ತ್ರೀಯರೇ ಅಡವಿಗೆ ಹೋಗುತ್ತಾರೆ.

ಕುರಿಗಳನ್ನು ಬೆಳಿಗ್ಗೆ ಸುಮಾರು ೮ ಗಂಟೆಗೆ ಕುರಿತಬ್ಬಿದ ಗುಡಾರದಿಂದ ಮೇಯಲು ಬಿಟ್ಟು ಸೂರ್ಯಾಸ್ತವಾದ ನಂತರವೇ ಮರಳಿ ಗುಡಾರದ ಸ್ಥಳಕ್ಕೆ ಹಿಂದಿರುಗಲಾಗುವುದು. ದಿನಕ್ಕೆ ಎರಡು ಬಾರಿ ಕುರಿಗಳಿಗೆ ನೀರು ಕುಡಿಸಲಾಗುತ್ತದೆ. ಬೆಳಿಗ್ಗೆ ಕುರಿ ಮೇಯಿಸಲು ಅಡವಿಗೆ ಹೋಗುವ ದಾರಿಯಲ್ಲಿ ನೀರು ದೊರೆಯುವಂತಿದ್ದರೆ ಆಗ, ಇಲ್ಲವಾದರೆ ಸ್ವಲ್ಪ ಸಮಯದವರೆಗೆ ಮೇಯಿಸಿ ೧೧ ಗಂಟೆ ಸುಮಾರಿಗೆ ನೀರು ಕುಡಿಸಲಾಗುತ್ತದೆ. ಸಾಯಂಕಾಲ ೪ ಗಂಟೆಯ ನಂತರ ಮತ್ತೊಮ್ಮೆ ನೀರು ಕುಡಿಸಲಾಗುವ ಕ್ರಮ ಕಾಣುತ್ತದೆ. ಆದರೆ ಮಳೆಗಾಲದಲ್ಲಿ ಅಥವಾ ಕಾಲುವೆ, ನದಿ, ಕೆರೆ ಅಕ್ಕಪಕ್ಕದಲ್ಲಿ ಕುರಿ ಮೇಯಿಸುವಾಗ ದಿನಕ್ಕೆರಡು ಬಾರಿ ನೀರು ಕುಡಿಸಬೇಕೆಂಬ ನಿರ್ಬಂಧವಿರುವುದಿಲ್ಲ. ಕುರಿಗಳು ನೀರಡಿಕೆಯಾದಾಗಲೆಲ್ಲ ನೀರು ಕುಡಿದು ಮೇವು ಮೇಯುತ್ತಿರುತ್ತವೆ. ಬೇಸಿಗೆ ಕಾಲದಲ್ಲಿ ಮಧ್ಯಾಹ್ನ ಬಹಳಷ್ಟು ಬಿಸಿಲು ಇರುವುದರಿಂದ ಕುರಿಗಳು ಮೇವು ಮೇಯದೆ ಬಿಸಿಲಿನ ತಾಪಕ್ಕೆ

ಆಯಾಸಪಡುತ್ತಾ ಗುಂಪಾಗಿ ಒಂದು ಕಡೆ ಮುಖ ನೆಲಕ್ಕಿಟ್ಟು ನಿಲ್ಲುತ್ತವೆ. ಮರಗಿಡಗಳಿದ್ದರೆ ನೆರಳಿಗೆ ಹೋಗಿ ನಿಲ್ಲುತ್ತವೆ. ಈ ಸಮಯದಲ್ಲಿ ಅರ್ಧಗಂಟೆ ಅಥವಾ ಒಂದು ಗಂಟೆ ಗಿಡಗಳ ನೆರಳಲ್ಲಿ ಕುರಿಗಳನ್ನು ತಬ್ಬಿ, ತಾವು ಗುಡಾರದಿಂದ ತಂದ ಬುತ್ತಿಯನ್ನು ಊಟ ಮಾಡುತ್ತಾರೆ. ಬಿಸಿಲಿನ ತಾಪ ಕಡಿಮೆಯಾದ ನಂತರ ಕುರಿಗಳನ್ನು ಮೇಯಲು ಹೊಡೆಯುವುದು ಕಂಡುಬರುತ್ತದೆ.

ಚೆನ್ನಾಗಿ ಮೇಯುವುದು : ಕುರಿಗಳು ದಿನವಿಡೀ ಮೇವು ಮೆಯುತ್ತವೆಯಾದರೂ ತಂಪು ಹೊತ್ತಿನ ಸಮಯದಲ್ಲಿ ಮೇಯ್ದಂತೆ ಬಿಸಿಲಿನ ಸಮಯದಲ್ಲಿ ಮೇಯುವುದಿಲ್ಲ. ಬೆಳಿಗೆ ೯ ರಿಂದ ೧೧ ಗಂಟೆವರೆಗೆ ಮತ್ತು ಸಂಜೆ ೪.೩೦ ರಿಂದ ೬.೩೦ರವರೆಗೆ ಚೆನ್ನಾಗಿ ಮೇಯುವುದು ಕಾಣುತ್ತದೆ. ವಿಶೇಷವಾಗಿ ಕುರಿಗಳು ಗುಡಾರದ ಕಡೆ ಬರುವಾಗ ಅಥವಾ ಸೂರ್ಯಾಸ್ತವಾದಂತೆಲ್ಲಾ ಮೇಯುವುದೇ ಹೆಚ್ಚು. ಈ ಸಮಯದಲ್ಲಿ ಎಷ್ಟೇ ಹೊಡೆದರೂ ಮುಂದಕ್ಕೆ ಹೆಜ್ಜೆ ಹಾಕದೆ ನಿಂತಲ್ಲೆ ನಿಂತು ಮೇಯುತ್ತವೆ. ಗುಡಾರದ ಕಡೆ ಒತ್ತಾಯಪೂರ್ವಕವಾಗಿ ಹೊಡೆದುಕೊಂಡು ಬರಬೇಕು. ಕಾರಣವೆಂದರೆ ತಂಪಾದ ವಾತವರಣ ಮತ್ತು ಮರುದಿನ ಮುಂಜಾನೆಯವರೆಗೆ ಮೇವು ಮೇಯಲು ಅವಕಾಶವಿರುವುದಿಲ್ಲ ಎಂಬುದಾಗಿದೆ. ಆದರೆ ಮರಿ ಕುರಿಗಳು ಸಾಯಂಕಾಲವಾದಂತೆಲ್ಲಾ ತಮ್ಮ ಮರಿಗಳನ್ನು ನೆನಸಿಕೊಂಡು, ನಿಂತು ಮೇಯದೆ ಗುಡಾರದ ಕಡೆ ಬರಲು ದಡಬಡಿಸುತ್ತಿರುತ್ತವೆ.

೪.೬.೧ ಕುರಿಗಳಿಗೆ ಬಳಸುವ ಭಾಷೆ

ಮೇವು ಮೇಯಿಸಲು ಅಡವಿಗೆ ಹೋದಾಗ ಹಾಗೂ ಕುರಿಮರಿ ಪೋಷಣೆ ಸಮಯದಲ್ಲಿ ಅಲೆಮಾರಿ ಕುರುಬರು ತಮ್ಮ ಬದುಕುಗಳ ಚಲನೆ-ವಲನೆಯನ್ನು ನಿಯಂತ್ರಿಸಲು, ನಿರ್ದೇಶಿಸಲು ಅಥವಾ ತಮ್ಮ ಕಡೆ ಒಲಿಸಿಕೊಳ್ಳಲು ತಮ್ಮದೇ ಆದ ಭಾಷೆಯನ್ನು ಬಳಸುತ್ತಾರೆ. ಆ ಭಾಷೆಯ ಮೂಲಕವೇ ಅವರ ಬದುಕುಗಳು ತಮ್ಮ ವರ್ತನೆಯನ್ನು ಬದಲಾಯಿಸಿಕೊಂಡು ಕುರಿಗಾಯಿಗೆ ಸ್ಪಂದಿಸುತ್ತವೆ. ಅಂತಹ ಭಾಷೆಯನ್ನು ಈ ಕೆಳಗಿನಂತೆ ಪಟ್ಟಿ ಮಾಡಲಾಗಿದೆ.

“ಕುರಿಗಳನ್ನು ನಿಲ್ಲುಸುವಿಕೆ	ಹ್ಯಾಹಾ ಪ್ಪಪ ಹ್ಯಾಹಾ ಪ್ಪಪ...
ಕುರಿಗಳನ್ನು ಮುಂದಕ್ಕೆ ಹೊಡೆಯುವುದು	ಸ್ಯೂ... ಸ್ಯೂ... ಸ್ಯೂ....
ಕುರಿಗಳನ್ನು ತಮ್ಮತ್ತ ಕರೆಯುವುದು	ಅಯ್... ಅಯ್.... ಅಯ್...
ಮರಿಗೆ ಹಾಲುಣಿಸಲು ಕುರಿಯನ್ನು ಕರೆಯುವುದು	ತ್ರ್ಪುಹಃ... ತ್ರ್ಪುಹಃ... ತ್ರ್ಪುಹಃ...
ಮರಿಗೆ ಹಾಲುಣಿಸುವ ಮೇಕೆಯನ್ನು ಕರೆಯುವುದು	ಚಯ್ಹಿ... ಚಯ್ಹಿ... ಚಯ್ಹಿ...
ಗುಂಪಾದ ಕುರಿಗಳನ್ನು ಅಗಲಿಸುವುದು	ಟರ್ರ‍ಃ... ಟರ್ರ‍ಃ.... ಟರ್ರ‍ಃ...
ಕುರಿಗಳನ್ನು ಹಿಂದಕ್ಕೆ ಅಥವಾ	ಅಯ್... ಆ್ಹ.. ಆ್ಹ...,

ಮುಂದಕ್ಕೆ ಕರೆಯುವುದು	ಅಯ್... ಆ್ಹ.. ಆ್ಹ..
ಕುರಿ ತಪ್ಪಿಸಿಕೊಂಡಾಗ ಅಥವಾ ಕಣ್ಣಿಗೆ ಕಾಣದೇ ಇದ್ದಾಗ	ಕುರ್ಹೋ, ಕುರ್ಹೋ, ಕುರ್ಹೋ...
ಕುದುರೆಗಳನ್ನು ಕರೆಯುವುದು	ಬ್ಹಾ... ಭ್ಹಾ... ಭ್ಹಾ...
ಕುದುರೆಗಳನ್ನು ಮುಂದಕ್ಕೆ ಹೊಡೆಯುವುದು	ಹಟ್.... ಹಟ್... ಹಟ್..."

(ಮಾಹಿತಿದಾರ: ವಾಸು ಪೂಜಾರಿ:ಕಡಕಲಾಟ)

೪.೭ ಆಹಾರ

ಭೂಮಿಯ ಮೇಲೆ ಜನಿಸಿದ ಪ್ರತಿಯೊಂದು ಜೀವರಾಶಿಗೂ ಬದುಕುವುದಕ್ಕೆ ಗಾಳಿ, ನೀರು ಮತ್ತು ಆಹಾರ ಮೂಲಾಧಾರವಾಗಿದೆ. ದೇಹದಲ್ಲಿ ನಡೆಯುವ ಜೈವಿಕ ರಾಸಾಯನಿಕ ಕ್ರಿಯೆಗಳಿಗೆ ದೇಹದ ಬೆಳವಣಿಗೆಗೆ ಉತ್ಪತ್ತಿಗೆ ಅಥವಾ ಪುನರ್ ಉತ್ಪತ್ತಿಗೆ ಇವು ಅತಿ ಮುಖ್ಯವಾಗಿವೆ. ಇವುಗಳಲ್ಲಿ ಯಾವುದಾದರೂ ಒಂದರ ಅಭಾವವಾದಲ್ಲಿ ಪ್ರಾಣಿ ಜೀವಂತವಾಗಿ ಉಳಿಯಲಾರದು. ಅಲೆಮಾರಿ ಕುರುಬರು ತಮ್ಮ ಬದುಕುಗಳಿಗೆ ಸರಿಯಾದ ಆಹಾರವನ್ನು ಸಾಕಷ್ಟು ಪ್ರಮಾಣದಲ್ಲಿ ಪೂರೈಸಬೇಕು. ಅವುಗಳ ಆಹಾರದ ಬಗ್ಗೆ ಹೆಚ್ಚು ಕಾಳಜಿ ವಹಿಸಬೇಕು. ಇಲ್ಲವಾದಲ್ಲಿ ಕುರಿ ಸಂಗೋಪನೆ ವೃತ್ತಿಯಲ್ಲಿ ಅಪಾರ ನಷ್ಟ ಮತ್ತು ತೊಂದರೆ ಅನುಭವಿಸಬೇಕಾಗುತ್ತದೆ. ಕುರಿ-ಆಡುಗಳಿಗೆ ಸರಿಯಾದ ಆಹಾರವನ್ನು ಸಾಕಷ್ಟು ಪ್ರಮಾಣದಲ್ಲಿ ಕೊಟ್ಟಲ್ಲಿ ಹೆಚ್ಚು ಹಾಲು ಕೊಡುವುದರ ಜೊತೆಗೆ ಮರಿಗಳ ಬೆಳವಣಿಗೆ ಸರಿಯಾಗಿ ಆಗುವುದು. ಅವು ಬೇಗನೆ ಬೆದೆಗೆ ಬಂದು ಆರೋಗ್ಯದಿಂದ ಉತ್ತಮ ಮರಿಗಳನ್ನೇ ನೀಡುವವು. ಆಗ ಅವರ ಆರ್ಥಿಕ ಸಂಪತ್ತು ಸುಧಾರಿಸುವುದಲ್ಲದೆ ಉತ್ತಮ ಜೀವನ ನಿರ್ಮಾಣ ವಾಗುವುದು.

೪.೭.೧ ಕುರಿ-ಮೇಕೆಗಳ ಆಹಾರ

ಅಲೆಮಾರಿ ಕುರುಬರ ಕುರಿಹಿಂಡುಗಳ ಬೆಳೆವಣಿಗೆ ನಿಸರ್ಗದಲ್ಲಿ ದೊರೆಯುವ ಮೇವು-ನೀರನ್ನೇ ಅವಲಂಬಿಸಿದೆ. ನಿಸರ್ಗದತ್ತವಾಗಿ ಕುರಿ-ಮೇಕೆಗಳಿಗೆ ರಸಭರಿತವಾದ ಹಸಿರು ಚಿಗುರುಹುಲ್ಲು, ತಪ್ಪಲು ಇತ್ಯಾದಿ ಸತ್ವಯುತವಾದ ಆಹಾರಬೇಕು. ಕುರಿಗಳು ಎಳೆಯ ಚಿಗುರು ಹುಲ್ಲನ್ನು ಬಹಳ ಪ್ರೀತಿಯಿಂದ ತಿನ್ನುತ್ತವೆ. "ಚಿಗುರು ಹುಲ್ಲಿನಲ್ಲಿ ಪೋಷಕಾಂಶ ಹೆಚ್ಚು ಇರುವುದು ಎಲ್ಲಾರಿಗೂ ತಿಳಿದ ವಿಷಯ. ಹಸಿರು ಹುಲ್ಲಿನಲ್ಲಿರುವಷ್ಟು 'ಎ' ಜೀವಸತ್ವ ಇನ್ನಾವ ಪದಾರ್ಥಗಳಲ್ಲಿಯೂ ಇಷ್ಟು ಸುಲಭವಾಗಿ ಸಿಗಲಾರದು. ಲವಣ ಮತ್ತು ಖನಿಜಾಂಶವುಳ್ಳ ಹಸಿರು ಮೇವು ಕುರಿ-ಮೇಕೆಗಳಿಗೆ ಅವಶ್ಯಕ. ಇಂತಹ

ಲವಣ ಮತ್ತು ಖನಿಜಾಂಶವುಳ್ಳ ಕವಲು ಹುಲ್ಲು ಕುರಿಗಳಿಗೆ ಉತ್ತಮ ಆಹಾರ. ಕುರಿಗಳು ಬೆಳಗಿನ ಮೂರು ಗಂಟೆಗಳ ಕಾಲ ಬಯಲಿನಲ್ಲಿ ಮೇಯುತ್ತಿರುವಾಗ, ಹೊಂಬಿಸಿಲಿನ ನೀಲಾತೀತ ರಶ್ಮಿಗಳು ಕುರಿಗಳ ಮೈಮೇಲೆ ಬೀಳುವುದರಿಂದ ಅವುಗಳಿಗೆ 'ಡಿ' ಜೀವಸತ್ವವು ಅಧಿಕ ಪ್ರಮಾಣದಲ್ಲಿ ಸಿಗುವುದರಿಂದ ಇದರ ಫಲವಾಗಿ ಕುರಿಗಳ ಬೆಳವಣಿಗೆ ಉತ್ತಮವಾಗುವುದು" (ರಾಮರಾವ್ ಜ್ಯೋತಿ: ೧೯೮೯:೪೮). ಕುರಿಗಳಿಗೆ ಇವು ನಿಸರ್ಗದಲ್ಲಿ ದೊರೆಯುತ್ತವೆ. ಇದನ್ನು ಅಲೆಮಾರಿ ಕುರುಬರು ಮಳೆಗಾಲದ ಅವಧಿಯಲ್ಲಿ ಗುಡ್ಡಗಾಡು ಪ್ರದೇಶದಲ್ಲಿ ಗುಡಾರ ಹೂಡಿದಾಗ ಕುರಿ-ಮೇಕೆಗಳಿಗೆ ಮೇಯಿಸಿದರೆ ಮಳೆಗಾಲದ ನಂತರ ಹೊಲಗದ್ದೆಗಳಲ್ಲಿರುವ ಭತ್ತ, ಕಬ್ಬು ಮತ್ತು ಜೋಳದ ಬೆಳೆಗಳನ್ನು ಕಟಾವು ಮಾಡಿದ ನಂತರ ಮೇಯಿಸುತ್ತಾರೆ.

ಕುರಿಗಳ ಉಣ್ಣೆಯು ಒಂದು ಜೀವನೋಪಯೋಗಿ ವಸ್ತುವಾಗಿದೆ. ಇದರ ಬೆಳವಣಿಗೆಗೆ ಸಸಾರಜನಕದ ಅಮೈನೋ ಆಮ್ಲಗಳು ಬಹಳ ಅವಶ್ಯಕವಿದೆ. ಇದು ಹಸಿರು ಹುಲ್ಲಿನಲ್ಲಿ ಸಿಗುವುದು. ಹಸಿರು ಹುಲ್ಲನ್ನು ಪೂರೈಸಿದಲ್ಲಿ ಕುರಿಗಳು ಉತ್ತಮ ಉಣ್ಣೆ ಉತ್ಪಾದಿಸುವವು. ಈ ಉದ್ಯೋಗವು ಲಾಭದಾಯಕವಾಗಬೇಕಾದರೆ ಅವುಗಳಿಗೆ ಮೇಯಲು ವರ್ಷವಿಡಿ ಹೊಟ್ಟೆ ತುಂಬುವಷ್ಟು ಹಸಿರು ಮೇವಿನ ಅವಶ್ಯಕತೆ ಇದೆ.

ಆಡುಗಳು ವಿವಿಧ ಬಗೆಯ ದ್ವಿದಳ ಧಾನ್ಯಗಳ ಮೇವು, ಗಿಡಗಂಟೆಗಳ ಎಲೆ, ಚಿಗುರು, ಮೇವು ಮತ್ತು ಜಾಲೆ, ಜಂಬೆ, ರಿಜ್ಜರ್ ಇತ್ಯಾದಿ ಗಿಡಗಳ ಕಾಯಿಗಳನ್ನು ತಿನ್ನಲು ಇಷ್ಟಪಡುತ್ತವೆ. ಅದು ಹುಲಸಾದ ಮೇವನ್ನು ತಿನ್ನುವುದಿಲ್ಲ. ಆಡು ನೆಲದ ಮೇಲೆ ಮೇಯದೆ ಸ್ವಲ್ಪ ಎತ್ತರದ ಎಲ್ಲಾ ತರಹದ ಗಿಡಗಂಟೆಗಳ ಎಲೆಗಳನ್ನು ತಿನ್ನುತ್ತದೆ. ಪಶುವೈದ್ಯರ ಪ್ರಕಾರ ಸಾಧಾರಣವಾಗಿ ಒಂದು ಆಡಿಗೆ ದಿನಂಪ್ರತಿ ೫ ಕೆ.ಜಿ. ಹುಲ್ಲು ಮೇವು ಮತ್ತು ೦.೨ ರಿಂದ ೦.೭ ಕೆ.ಜಿ.ವರೆಗೆ ದಾಣಿ ಮಿಶ್ರಣ ಕೂಡಬೇಕೆಂದು ಸಲಹೆ ನೀಡುತ್ತಾರೆ.

"ಒಂದು ಕುರಿಗೆ ದಿನಂಪ್ರತಿ ಸುಮಾರು ೪ ರಿಂದ ೬ ಕೆ.ಜಿ.ಯಷ್ಟು ಹಸಿರು ಮೇವಿನ ಅವಶ್ಯಕತೆ ಇರುತ್ತದೆ. ಸಂರಕ್ಷಣೆ ಮಾಡಿದ ಒಂದು ಎಕರೆ ಹುಲ್ಲುಗಾವಲಿನಲ್ಲಿ ೩-೫ ಕುರಿಗಳನ್ನು ಮೇಯಿಸ ಬಹುದು. ಆದರೆ ಹೆಚ್ಚು ಇಳುವರಿ ಕೊಡುವಂತಹ ಮೇವಿನ ಬೆಳೆಗಳನ್ನು ಬೆಳೆಯಿಸಿದಲ್ಲಿ ಅಥವಾ ಇಂತಹ ಮೇವನ್ನು ಕಟಾವು ಮಾಡಿ ಒಣಗಿಸಿ ಕೂಡಿಟ್ಟು, ಕುರಿಗಳಿಗೆ ಕೊಟ್ಟಿಗೆಯಲ್ಲಿ ಮೇಯಿಸುವಂತಹ ಕ್ರಮವನ್ನು ಅಳವಡಿಸಿಕೊಂಡಲ್ಲಿ ಒಂದು ಎಕರೆಯಲ್ಲಿ ಉತ್ಪಾದಿಸಿದ ಮೇವಿನಿಂದ ಸುಮಾರು ೨೦ ಕುರಿಗಳನ್ನು ಸಾಕಬಹುದು. ಕುರಿ-ಮೇಕೆಗಳನ್ನು ಬರೀ ಹುಲ್ಲುಗಾವಲಿನಲ್ಲಿ ಮೇಯಿಸಿ ಸಾಕುವುದು ನಮ್ಮಲ್ಲಿರುವ ಸಾಮಾನ್ಯ ಪದ್ಧತಿ. ಆದ್ದರಿಂದ ಮೇವಿನ ಇಳುವರಿ ಕಡಿಮೆಯಾಗುವ ಋತುಗಳಲ್ಲಿ

ಕುರಿಗಳ ಬೆಳವಣಿಗೆ ಕುಂಠಿತವಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಕುರಿಗಳನ್ನು ಮೇಯಿಸುವುದರ ಜೊತೆಗೆ ದೊಡ್ಡಿಯಲ್ಲಿ ಸಂಜೆಯ ನಂತರ, ವಿಶ್ರಾಂತಿ ಸಮಯದಲ್ಲಿ ತುಂಡು ಮಾಡಿದ ರಾಗಿ ಹುಲ್ಲು, ಇಬ್ಬನಿ ಜೋಳ ಅಥವಾ ಇತರೆ ಒಣ ಮೇವು ಕೊಡುವುದರಿಂದ ಕುರಿಗಳ ಬೆಳವಣಿಗೆಯನ್ನು ಹೆಚ್ಚಿಸಲು ಸಾಧ್ಯವಾಗುತ್ತದೆ. ಇಲ್ಲವೆಂದರೆ ತಿಂಡಿ ಮಿಶ್ರಣವನ್ನು ಆಹಾರ ಧಾನ್ಯಗಳಿಂದ ತಯಾರಿಸಿ ಕೊಳ್ಳಬಹುದು. ಈ ಧಾನ್ಯಗಳ ಜೊತೆಗೆ ಹತ್ತಿಕಾಳು, ಶೇಂಗಾಹಿಂಡಿ, ಎಳ್ಳುಹಿಂಡಿ, ಹುರುಳಿನುಚ್ಚು, ಕುಸುಬೆ ಮತ್ತು ಸೂರ್ಯಕಾಂತಿ ಹಿಂಡಿಗಳನ್ನು ಸಹ ಸೇರಿಸಬಹುದು. ಈ ರೀತಿ ಮಾಡುವುದರಿಂದ ಕುರಿ-ಮೇಕೆಗಳೆರಡು ಹೆಚ್ಚು ಹಾಲು ಕೊಡುವುದರ ಜೊತೆಗೆ ಮರಿಗಳು ಮತ್ತು ತಾಯಿಗಳು ದಷ್ಟಪುಷ್ಟವಾಗಿ ಬೆಳೆಯುತ್ತವೆ'' ಎಂದು ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಉಪ ನಿರ್ದೇಶಕರಾದ ಡಾ. ಜಗನ್ನಾಥ ಅವರು ಕ್ಷೇತ್ರಕಾರ್ಯದ ಸಂದರ್ಶನದಲ್ಲಿ ತಿಳಿಸುತ್ತಾರೆ.

ಕುರಿ-ಮೇಕೆಗಳಿಗೆ ವರ್ಷವಿಡೀ ಒಂದೇ ತರಹದ ಮೇವು ದೊರೆಯುವುದಿಲ್ಲ. ಋತುಮಾನಕ್ಕನು ಗುಣವಾಗಿ ಮತ್ತು ಪ್ರದೇಶಕ್ಕನುಗುಣವಾಗಿ ಭಿನ್ನವಾಗಿರುತ್ತದೆ. ಅಲೆಮಾರಿ ಕುರುಬರು ಋತುಮಾನಕ್ಕನು ಗುಣವಾಗಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಮೇವು ಅರಸಿಕೊಂಡು ವಲಸೆ ಹೋಗುತ್ತಾರೆ. ಕುರಿ-ಮೇಕೆಗಳು ಮೇಯುವ ಮೇವಿನ ಹೆಸರುಗಳನ್ನು ಋತುಮಾನಕ್ಕೆ ಅನುಗುಣವಾಗಿ ವಿಂಗಡಿಸಿ ಈ ಕೆಳಗಿನಂತೆ ಹೆಸರಿಸಲಾಗಿದೆ. ಕೆಲವು ಮೇವುಗಳು ಎಲ್ಲಾ ಕಾಲದಲ್ಲಿ ಎಲ್ಲಾ ಪ್ರದೇಶಗಳಲ್ಲಿ ದೊರೆಯುತ್ತ ವೆಂಬುದನ್ನು ಮರೆಯುವಂತಿಲ್ಲ.

ಮಳೆಗಾಲ : ಈ ಅವಧಿಯಲ್ಲಿ ದೊರೆಯುವ ಮೇವುಗಳೆಂದರೆ ಮುಂಗಾರುಚಿಗುರು, ಕರಿಕೆ, ಸಿಬಕಾನೇಹುಲ್ಲು, ಬಾದೆಹುಲ್ಲು ರವದೆಹುಲ್ಲು ಶ್ಯಾಡುಹುಲ್ಲು, ಕಲ್ಲುಂಚೆ, ಕಾರೆತಪ್ಪಲು, ಕವಳೆ ತಪ್ಪಲು, ಗೊರಬೆ ತಪ್ಪಲು, ಅಡವಿ ಚವಳಿತಪ್ಪಲು. ಇವುಗಳ ಜೊತೆಯಲ್ಲಿ ಆಡುಗಳಿಗೆ ಪ್ರಿಯವಾದ ಬಳ್ಳಿಗಳು ಗುಡ್ಡದಲ್ಲಿ ದೊರೆಯುತ್ತವೆ. ಅಂತವುಗಳೆಂದರೆ ಅಮೃತಬಳ್ಳಿ, ದಾಂಗಡಿಬಳ್ಳಿ, ಯಾರಿಬಳ್ಳಿ, ಕತ್ರಿಬಳ್ಳಿ, ಹಾಲಬಳ್ಳಿ ಇತ್ಯಾದಿ.

ಚಳಿಗಾಲ : ಈ ಅವಧಿಯಲ್ಲಿ ಹೊಲಗದ್ದೆಗಳಲ್ಲಿ ಬೆಳೆದ ಬೆಳೆಗಳನ್ನು ಕಟಾವು ಮಾಡುತ್ತಿರುತ್ತಾರೆ. ಕಟಾವು ಮಾಡಿದ ಹೊಲಗದ್ದೆಗಳಲ್ಲಿ ಕುರಿ-ಮೇಕೆಗಳನ್ನು ಮೇಯಲು ಬಿಡುತ್ತಾರೆ. ಈ ಸಮಯದಲ್ಲಿ ನೆಲ್ಲುತೆನೆ ಸೊಂಟಿಜಬ್ಬಲ, ಭತ್ತದಚಿಗುರು, ಹುಲ್ಲಿನ ಜೇಕು ಇತ್ಯಾದಿ ಗದ್ದೆಗಳಲ್ಲಿ ದೊರೆತರೆ ಅರೆ ನೀರಾವರಿ ಮತ್ತು ಬಯಲು ಭೂಮಿಯಲ್ಲಿ ಬೆಳೆಕಸ, ಗೋಳಿಪಲ್ಲೆ, ಗುಗ್ಗರ ಆಲುಬು, ಬಿದರ ಆಲುಬು, ಅಕ್ಕರಿಕೆ ತಪ್ಪಲು ಇತ್ಯಾದಿಗಳನ್ನು ತಿನ್ನುತ್ತವೆ.

ಬೇಸಿಗೆ ಕಾಲ : ಬಹಳಷ್ಟು ಹೊಲ-ಗದ್ದೆಗಳು ಕೊಯ್ಲಾಗಿರುತ್ತವೆ. ಈ ಸಮಯದಲ್ಲಿ ಸಿಗುವ

ಪ್ರಮುಖ ಮೇವುಗಳೆಂದರೆ ಜೋಳದ ಸೊಪ್ಪೆ, ಸೂರ್ಯಕಾಂತಿ ತೆನೆ ಮತ್ತು ಎಲೆ, ಹತ್ತಿಎಲೆ, ಮೆಣಸಿನಕಾಯಿ ಎಲೆ, ಕಡಲೆ ಹೊಟ್ಟು, ಕುಸುಬೆ ತೆನೆ, ಜಾಲೆಕಾಯಿ, ರಿಜ್ಜರಕಾಯಿ, ಜಂಬೆಕಾಯಿಗಳ ಜೊತೆಗೆ ಜಂಬೆ, ನುಗ್ಗೆ, ಸುಬಾಬುಲ್, ಅಗಸೆ, ಔಡ್ಲ ಇತ್ಯಾದಿ ತಪ್ಪಲುಗಳ ಮೇವುಗಳನ್ನು ತಿನ್ನುತ್ತವೆ. ಸುಬಾಬುಲ್ ಮೇವನ್ನು ಹೆಚ್ಚಾಗಿ ಕುರಿಗಳಿಗೆ ತಿನ್ನಿಸಿದರೆ ಉಣ್ಣೆಯು ಉದುರಿ ಹೋಗಿ ಕುರಿಗಳು ವಿಕಾರವಾಗಿ ಕಾಣುತ್ತವೆ. ಇದಕ್ಕೆ ಕಾರಣ 'ಮಿಮೊನಿನ್' ಎಂಬ ವಿಷಕಾರಕ ಅಂಶ ಸುಬಾಬುಲ್‌ನಲ್ಲಿರುವುದು. ಆದ್ದರಿಂದ ಕುರಿಗಳಿಗೆ ಇದನ್ನು ಹೆಚ್ಚಾಗಿ ಕೊಡಬಾರದು. ಹಾಗೆಯೇ ಜಾಲೆ ತಪ್ಪಲು ಮತ್ತು ಅದರ ಕಾಯಿಗಳು ಕುರಿ-ಮೇಕೆಗಳಿಗೆ ಬಹಳ ಒಳ್ಳೆಯ ಆಹಾರ. ಇದನ್ನು ಕುರಿ- ಮೇಕೆಗಳು ಎಷ್ಟು ತಿನ್ನುತ್ತವೆಯೋ ಅಷ್ಟೂ ಆರೋಗ್ಯವಾಗಿರುತ್ತವೆ.

ಕುರಿ ಮೇಯಿಸಲು ಹೋಗುವಾಗ ತೆಗೆದುಕೊಂಡು ಹೋಗುವ ಸಾಮಾನುಗಳು

ದೈನಂದಿನ ಕಾರ್ಯ ಚಟುವಟಿಕೆಗಳಲ್ಲಿ ತೊಡಗಲು ಹೊರಡುವಾಗ ಕೆಲವು ಸಾಮಾನುಗಳನ್ನು ತೆಗೆದುಕೊಂಡು ಹೋಗುವುದು ರೂಢಿ. ಹಾಗೆಯೇ ಅಲೆಮಾರಿ ಕುರುಬರು ಕುರಿಮೇಯಿಸಲು ಅಡವಿಗೆ ಹೊರಡುವಾಗ ಹಲವು ಸಾಮಾಗ್ರಿಗಳನ್ನು ತೆಗೆದುಕೊಂಡು ಹೋಗುವರು. ಅವುಗಳನ್ನು ಋತುಮಾನಕ್ಕನು ಗುಣವಾಗಿ ಬದಲಾಯಿಸಲಾಗುವುದು. ಮಳೆಗಾಲದಲ್ಲಿ ತಾನು ತೊಯ್ಯದಂತೆ ರಕ್ಷಿಸಿಕೊಳ್ಳಲು ಪ್ಲಾಸ್ಟಿಕ್ ಚೀಲ, ಹೆಗಲಮೇಲೆ ಕೋಲು, ಕೈಯಲ್ಲಿ ಕೊಡ್ಲೆ ಅಗತ್ಯವಾಗಿವೆ. ಚಳಿಗಾಲದಲ್ಲಿ ಕೊಡ್ಲೆ ಮತ್ತು ಕುರಿ ಪೆಕಟ್ಟಿಗೆ ಹಾಗೂ ಬೇಸಿಗೆ ಕಾಲದಲ್ಲಿ ಕೋಲನ್ನು ಮಾತ್ರ ತೆಗೆದುಕೊಂಡು ಹೋಗಲಾಗುತ್ತದೆ. ಆದರೆ ಹೊಟ್ಟೆಚೀಲ (ಬುತ್ತಿಯ ಚೀಲ) ಮಾತ್ರ ಇಡೀ ವರ್ಷ ಕುರಿಕಾಯುವವರಲ್ಲಿ ಇದ್ದೇ ಇರುತ್ತದೆ.

೪.೭.೨ ಮರಿಗಳ ಆಹಾರ ಮತ್ತು ಆರೈಕೆ

'ಮರಿಗಳ ಅಭಿವೃದ್ಧಿಯೇ ಅಲೆಮಾರಿ ಕುರುಬರ ಸಂವೃದ್ಧಿಯಾಗಿದೆ'. ಕುರಿಮರಿ, ತಾಯಿಯ ಗರ್ಭದಲ್ಲಿರುವಾಗಿನಿಂದ ಹಿಡಿದು ದೊಡ್ಡದಾಗಿ ಬೆಳೆದು, ಮಾರಾಟ ಮಾಡುವವರೆಗೆ ಅದನ್ನು ಜೋಪಾನ ಮಾಡುವುದೇ ಇವರ ಕಾಯಕವಾಗಿದೆ. ಕುರಿಗಳು ಒಂದು ಮರಿ ಹಾಕುವುದು ಸಾಮಾನ್ಯವಾದರೂ ಕೆಲವೊಮ್ಮೆ ಎರಡು ಇಲ್ಲವೆ ಮೂರು ಮರಿಗಳನ್ನು ಈಯುತ್ತವೆ. ಸೌಂದಲಗ ಅಪ್ಪಣ್ಣನವರ ಕುರಿ ಹಿಂಡಿನಲ್ಲಿ ಒಂದು ಕುರಿಯು ನಾಲ್ಕು ಮರಿಗಳಿಗೆ ಜನ್ಮ ನೀಡಿದ ಉದಾಹರಣೆಯಿದ್ದು ಎಲ್ಲಾ ಮರಿಗಳು ಆರೋಗ್ಯವಾಗಿದ್ದವು. ಮರಿಗಳು ಜನಿಸಿ ಎದ್ದು ನಿಂತ ತಕ್ಷಣ ತಾಯಿಯ ಮೊಲೆಯ ಗಿಣ್ಣದ ಹಾಲನ್ನು ಕುಡಿಸುತ್ತಾರೆ. ಮೊದಲು ೫ ದಿನಗಳವರೆಗೆ ತಾಯಿಯ ಹಾಲೇ ಶ್ರೇಷ್ಠ. ಗಿಣ್ಣದ ಹಾಲಿನಲ್ಲಿ ಸಸಾರಜನಕ ಮತ್ತು ಖನಿಜಾಂಶಗಳು ಹೆಚ್ಚಿನ ಪ್ರಮಾಣದಲ್ಲಿರುತ್ತವೆ. ಐದು ದಿನಗಳ

ನಂತರ ಹಾಲಿನಲ್ಲಿಯ ಸಸಾರಜನಕ ಮತ್ತು ಖನಿಜಾಂಶಗಳು ಕಡಿಮೆಯಾಗುತ್ತವೆ. ಗಿಣ್ಣದ ಹಾಲಿನಿಂದ ಮರಿಗಳ ಆರೋಗ್ಯ ಬೆಳವಣಿಗೆ ಸರಿಯಾಗಿ ಆಗುವುದಲ್ಲದೆ ಅವು ರೋಗ ನಿರೋಧಕ ಶಕ್ತಿಯನ್ನು ಪಡೆದುಕೊಳ್ಳುತ್ತವೆ. ಸಾಮಾನ್ಯವಾಗಿ ಕುರಿ-ಮೇಕೆಗಳು ಮರಿ ಹಾಕಿದ ಕೂಡಲೇ ಅದರ ವಾಸನೆಯಿಂದ ತನ್ನ ಮರಿಯನ್ನು ಗುರುತು ಹಿಡಿದು ತನ್ನಷ್ಟಕ್ಕೆ ತಾನು ಹಾಲುಣಿಸುತ್ತವೆ. "ಒಂದು ವೇಳೆ ಮರಿ ಹಾಕಿದ ಕುರಿಗೆ ಹಾಲು ಬೀಳದಿದ್ದರೆ ಅಥವಾ ಮರಿಯ ತಾಯಿ ಸತ್ತಿದ್ದರೆ ಹಾಲು ಹೆಚ್ಚಿರುವ ಕುರಿಯ ಹಾಲನ್ನು ಮರಿಯ ಮೈಮೇಲೆ ಚಿಮುಕಿಸಿ ಹಾಲು ಉಣಿಸಲು ಹಚ್ಚಿ ಸಾಕು ತಾಯಿಯಾಗಿ ಮಾರ್ಪಡಿಸುತ್ತಾರೆ" (ರಾಮರಾವ್ ಜ್ಯೋತಿ:೧೯೮೯:೫೦).

ಮರಿಗಳು ಮೇವು ಮೇಯ್ದು ಜೀವಿಸುವವರೆಗೆ ದಿನಕ್ಕೆರಡು ಬಾರಿಯಂತೆ ಅಂದರೆ ಮುಂಜಾನೆ ಕುರಿಗಳು ಮೇಯಲು ಅಡವಿಗೆ ಹೋಗುವ ಮುಂಚೆ ಮತ್ತು ಸಂಜೆ ಗುಡಾರಕ್ಕೆ ಬಂದ ನಂತರ ಹಾಲುಣಿಸುತ್ತಾರೆ. ಮರಿಗಳು ಜನಿಸಿದ ಒಂದು ತಿಂಗಳವರೆಗೆ ತಾಯಿಯ ಹಾಲನ್ನೇ ಕುಡಿದು ಜೀವಿಸುತ್ತವೆ. ತಿಂಗಳಾದ ನಂತರ ಚಿಗುರು ಮೇವು ತಿನ್ನಲು ಆರಂಭಿಸುತ್ತವೆ. ಅಲೆಮಾರಿ ಕುರುಬರು ಒಂದು ತಿಂಗಳು ಮೇಲ್ಪಟ್ಟ ಮರಿಗಳಿಗೆ ತಾಯಿಯ ಹಾಲಿನ ಜೊತೆಗೆ ಚಿಗುರು ಮೇವು ಕೊಡುತ್ತಾರೆ. ಉದಾಹರಣೆಗೆ ತಪ್ಪಲು ಮೇವುಗಳಾದ ಜಾಲಿ, ಬೇವಿನ, ಬನ್ನಿ, ಸುಬಾಬಲ ಗಿಡಗಳ ತಪ್ಪಲು, ಹುಲ್ಲು ಮೇವುಗಳಾದ ನರಿಬಾಲ, ಕರಿಮೂತಿ, ಸಿಬಕೇನಿ, ಕರಿಕೆ ಹುಲ್ಲು ಇತ್ಯಾದಿ ಆಲುಬುಗಳಾದ ಗುಗ್ಗರಿ, ಚಿಂಚಲಿ, ಬಿದರ, ಹಾಲುಂಡ, ಬೆಳೆಕಸ, ಗೋಳಿಪಲ್ಲೆ ಆಲುಬುಗಳು ಇತ್ಯಾದಿ.

ಇಂತಹ ಚಿಗುರು ಮೇವುಗಳನ್ನು ಅಲೆಮಾರಿ ಕುರುಬರು, ಬೆಳಗಿನ ಜಾವದಲ್ಲಿಯೇ ತಂದು ಕುರಿಗಳು ಅಡವಿಗೆ ಹೋದನಂತರ ಕೊಡುತ್ತಾರೆ. ಮರಿಗಳಿಗೆ ಯಾವ ಸೊಪ್ಪನ್ನು ಜಾಸ್ತಿ ತಿನ್ನಿಸುತ್ತಿರಿ ಮತ್ತು ಯಾವ ಸೊಪ್ಪಿನಿಂದ ಅನುಕೂಲವೆಂದು ಕ್ಷೇತ್ರಕಾರ್ಯದ ಸಂದರ್ಶನದಲ್ಲಿ ಸೌಂದಲಗದ ಮಂಜುನಾಥ ದುರುಗಣ್ಣನವರನ್ನು ಪ್ರಶ್ನಿಸಿಸಲಾಯಿತು. "ಅಣ್ಣಾವ್ರೆ ಕಾಲಕ್ಕನುಗುಣವಾಗಿ ಅಡವಿಯಲ್ಲಿ ದೊರೆಯುವ ಎಲ್ಲ ತಪ್ಪಲುಗಳನ್ನು ನಮ್ಮ ಮರಿಗಳಿಗೆ ತಿನ್ನಿಸುತ್ತೇವೆ. ಆದರೆ ಜಾಲೆ ತಪ್ಪಲು ಮತ್ತು ಹಾಲುಂಡ ಆಲುಬುರ್ರೀ ನಮ್ಮ ಮರಿಗಳಿಗೆ ಒಳ್ಳೇದ್ರಿ. ಜಾಲೆತಪ್ಪಲು ತಿಂದ್ರೆ ಕುರಿಗಾಗಲಿ, ಮರಿಗಾಗಲಿ ಯಾವ ರೋಗ-ರುಜಿನ ಬರದಿಲ್ಲರ್ರೀ. ಹಾಲುಂಡ ಆಲುಬು ಮರಿಗಳಿಗೆ ತಿನ್ನಿಸಿದರ್ರೆ ಜಲ್ದಿ ದುಂಡಾಗಿ ಜಾಸ್ತಿ ತೂಕ ಬರ್ತಾವ್ರೀ" (ಮಾಹಿತಿದಾರ: ಮಂಜುನಾಥ ದುರಗಣ್ಣನವರ) ಎಂದು ಹೇಳುತ್ತಾನೆ. ಜಾಲೆ ತಪ್ಪಲು ಮತ್ತು ಹಾಲುಂಡ ಆಲುಬು ಇಂದು ಸಾಕಷ್ಟು ಸಿಗುತ್ತವಾ ಎಂದು ಮತ್ತೊಂದು ಪ್ರಶ್ನೆ ಕೇಳಲಾಯಿತು. "ನಾವು ಹುಡುಗರಾಗಿದ್ದಾಗ ಹೆಚ್ಚಾಗಿ ಇವನ್ನು ತಂದು ತಿನ್ನುಸ್ತಾ ಇದ್ದೀವ್ರೀ. ಕುರಿಗಳಿಗೆ ಮರಿಗಳಿಗೆ ರೋಗ ಬರ್ತುದಿಲ್ಲರ್ರೀ. ಈವತ್ತು ಅಲ್ಲೊಂದು ಇಲ್ಲೊಂದು ಗಿಡಗಳು

ಇದ್ದಾವ್ರೀ. ಜಾಲೆ ತಪ್ಪಲು ಕಡಿಲಿಕ್ಕೆ ಹೋದ್ರೆ ಹೊಲದ ಮಾಲಿಕ ನಮ್ಮನ್ನೂ ಬಡಿದು ಮರಿಕೊಡ್ಲಿ ಕಸಿದುಕೊಂಡು ಹೊಗ್ತಾನ್ರೀ'' ಎಂದು ಹೇಳುತ್ತಾರೆ. ಈ ಮಾತುಗಳಲ್ಲಿ ಭವಿಷ್ಯ ಕುರಿತು ಆತಂಕ, ಭಯ ಮತ್ತು ನೋವು ಮಡುಗಟ್ಟಿರುವುದನ್ನು ಸೂಚಿಸುತ್ತದೆ. ಮರಿಗಳಿಗೆ ಎರಡು ತಿಂಗಳು ವಯಸ್ಸಾಗುತ್ತಿದ್ದಂತೆ ತಾಯಿಯ ಹಾಲು ಮರಿಗಳಿಗೆ ಸಾಲುವುದಿಲ್ಲ. ಇಂತಹ ಸಮಯದಲ್ಲಿ ಅಲೆಮಾರಿ ಕುರುಬರು ಎರಡು ತಿಂಗಳ ವಯಸ್ಸಿನ ಮರಿಗಳಿಂದ ಐದು ತಿಂಗಳ ವಯಸ್ಸಿನ ಮರಿಗಳಾಗುವವರೆಗೆ ತಾವು ಗುಡಾರ ಹೂಡಿದ ಸ್ಥಳದ ಸುತ್ತಮುತ್ತ ಬೆಳಿಗ್ಗೆ ಒಂದೆರಡು ಗಂಟೆ ಮೇಯಿಸಿ ಮಧ್ಯಾಹ್ನದ ಬಿಸಿಲಿನ ಸಮಯದಲ್ಲಿ ಗಿಡದ ನೆರಳಿಗೆ ತಬ್ಬಿ ಮತ್ತು ಸಾಯಂಕಾಲ ಒಂದೆರಡು ಗಂಟೆ ಚಿಗುರು ಹುಲ್ಲು, ಇಲ್ಲವೇ ಪೈರು ಕೊಯ್ದ ಹೊಲಗದ್ದೆಗಳಲ್ಲಿ ಮೇಯಿಸಿಕೊಂಡು ಬರುತ್ತಾರೆ. ಸಾಮಾನ್ಯವಾಗಿ ಈ ಕಾರ್ಯವನ್ನು ಕುಟುಂಬದ ಮಹಿಳೆ ಮತ್ತು ಮಕ್ಕಳು ನಿರ್ವಹಿಸುತ್ತಾರೆ.

ಸಕಲ ಜೀವರಾಶಿಗಳು ಬದುಕಲಿಕ್ಕೆ ಆಹಾರಕ್ಕಿಂತ ನೀರು ಮುಖ್ಯ. ಇದರಿಂದ ಅಲೆಮಾರಿ ಕುರುಬರ ಮರಿಗಳು ಹೊರತಾಗಿಲ್ಲ. ಸಾಮಾನ್ಯವಾಗಿ ಮರಿಗಳಿಗೆ ಒಂದು ಸಾರಿ ನೀರು ಕುಡಿಸಿದರೆ ಸಾಕು. ಬೇಸಿಗೆ ಕಾಲದಲ್ಲಿ ಬೆಳಿಗ್ಗೆ ಮತ್ತು ಸಾಯಂಕಾಲ ಕುಡಿಸಬೇಕಾಗುತ್ತದೆ. ಮರಿಗಳಿಗೆ ಒಂದೂವರೆ ತಿಂಗಳಿಂದ ನೀರು ಕುಡಿಯಲು ಕೊಡಲಾಗುತ್ತದೆ. ನೀರು ಕುಡಿಯದೆ ತಾಯಿಯ ಹಾಲನ್ನು ಎಷ್ಟು ದಿನ ಮರಿಗಳು ಕುಡಿಯುತ್ತವೆಯೋ ಅಷ್ಟು ಆರೋಗ್ಯವಾಗಿರುತ್ತವೆ ಮತ್ತು ದಷ್ಟ-ಪುಷ್ಟವಾಗಿರುತ್ತವೆ. ಮರಿಗಳಿಗೆ ನೀರು ಕುಡಿಸಲು ಆರಂಭಿಸಿದರೆ ದಿನಾಲು ಕುಡಿಸಬೇಕು. ಇದರ ಬದಲು ಒಂದು ದಿನ ನೀರು ಮತ್ತೊಂದು ದಿನ ಹಾಲು ಕುಡಿಸಿದರೆ ಮರಿಗಳ ಆರೋಗ್ಯದಲ್ಲಿ ಅಸಮಾನತೆಯುಂಟಾಗಿ ಕೆಮ್ಮು ಜೊತೆಗೆ ಕೈಕಾಲು ಸಣ್ಣವಾಗಿ ಹೊಟ್ಟೆ ಇಳೆ ಬೀಳುತ್ತದೆ. ತಮ್ಮ ಮರಿಗಳಿಗೆ ಹೀಗಾದರೆ ತಮಗೆ ನಷ್ಟವೆಂದರಿತುಕೊಂಡಿರುವ ಅಲೆಮಾರಿ ಕುರುಬರು ಹೆಚ್ಚು ಹಾಲು ನೀಡುವ ಕುರಿಯ ಮೊಲೆಗೆ ಕಡಿಮೆ ಹಾಲು ನೀಡುವ ಕುರಿಯ ಮರಿಯನ್ನು ಬಿಟ್ಟು ಹಾಲು ಕುಡಿಸುತ್ತಾರೆ. ಮರಿಗಳು ಮೇವು ತಿನ್ನಲು ಆರಂಭಿಸಿದ ನಂತರವೇ ನೀರು ಕುಡಿಯಲು ಕೊಡುವರು.

ಪಶು ವೈದ್ಯಾಧಿಕಾರಿಗಳ ಪ್ರಕಾರ ಮರಿಗಳು ಆರೋಗ್ಯಪೂರ್ಣವಾಗಿ ಬೆಳೆಯಬೇಕೆಂದರೆ ಅಲೆಮಾರಿ ಕುರುಬರು ಈ ಕೆಳಗಿನ ಅಂಶಗಳನ್ನು ಪಾಲಿಸಬೇಕು.

ಕೋಷ್ಟಕ ೪.೨ ಮರಿಗಳಿಗೆ ಹಾಲು, ದಾಣಿ ಮಿಶ್ರಣ ಮತ್ತು ಹುಲ್ಲು ಕೊಡುವ ಪ್ರಮಾಣ

ಮರಿಯ ವಯಸ್ಸು	ಪ್ರತಿ ದಿನದ ಆಹಾರದ ಪ್ರಮಾಣ (ಪ್ರತಿಯೊಂದು ಮರಿಗೆ)		
	ಹಾಲು ಮೀ.ಲಿ.	ದಾಣಿಮಿಶ್ರಣ (ಗ್ರಾಂ)	ಹಸಿರು ಹುಲ್ಲು (ಗ್ರಾಂ)
ಜನಿಸಿದ ೫ ದಿನದವರೆಗೆ	ಗಿಣ್ಣದ ಹಾಲು	---	---
೫-೩೦ ದಿನದವರೆಗೆ	೩೦೦-೫೦೦	ಸಣ್ಣ ಪ್ರಮಾಣದಲ್ಲಿ	ಸಣ್ಣ ಪ್ರಮಾಣದಲ್ಲಿ
೩೦-೬೦ ದಿನದವರೆಗೆ	೪೦೦-೫೦೦	೫೦-೧೦೦ ಗ್ರಾಂ.	ಸಣ್ಣ ಪ್ರಮಾಣದಲ್ಲಿ
೬೦-೯೦ ದಿನದವರೆಗೆ	ಹಾಲುಣಿಸುವ ಪ್ರಮಾಣವನ್ನು ಕ್ರಮೇಣ ಕಡಿಮೆ ಮಾಡುತ್ತಾ ೩ ತಿಂಗಳ ಕೊನೆಗೆ ಪೂರ್ತಿ ನಿಲ್ಲಸಬೇಕು	೧೦೦-೧೫೦ ಗ್ರಾಂ.	೨೫೦ ಗ್ರಾಂ.
೯೦-೧೨೦ ದಿನದವರೆಗೆ	---	೨೦೦-೨೫೦	೨೫೦
೫-೬ ತಿಂಗಳು	---	೨೫೦-೩೦೦	೭೫೦

ಆಧಾರ: *'ರೈತರ ಭಾಗ್ಯಕ್ಕೆ' ಕುರಿ ಮತ್ತು ಮೇಕೆ ಸಂಗೋಪನೆ: ಪು.೧೭*

ಅಲೆಮಾರಿ ಕುರುಬರು ಮರಿಗಳ ಪಾಲನೆ ಮಾಡುವಾಗ ಮೇಲೆ ತಿಳಿಸಿದ ಪಟ್ಟಿಯಂತೆ ಹಾಲು, ದಾಣಿಮಿಶ್ರಣ ಮತ್ತು ಹಸಿರು ಮೇವುಗಳನ್ನು ಪಾಲಿಸಲು ಅಥವಾ ಅನುಸರಿಸಲು ಆಗುವುದಿಲ್ಲ. ಅಡವಿಯಲ್ಲಿ ಕುರಿಗಳೊಂದಿಗೆ ಅಲೆದಾಡುತ್ತಾ ಕುಟುಂಬ ನಿರ್ವಹಣೆಯೇ ಕಷ್ಟದ ಕೆಲಸವಾಗಿರುತ್ತದೆ. ಇಂತಹ ಕ್ಲಿಷ್ಟ ಪರಿಸ್ಥಿತಿಯಲ್ಲಿ ದಾಣಿಮಿಶ್ರಣಗಳನ್ನು ಗುಡಾರ ಬದಲಾಯಿಸಿದಂತೆಲ್ಲಾ ಹೊತ್ತುಕೊಂಡು ಹೋಗುವುದು, ಅದನ್ನು ಕಾಪಾಡುವುದು ಅಥವಾ ಹಣಕೊಟ್ಟು ತರುವುದು ಇವರಿಂದ ಸಾಧ್ಯವಾಗದ ಕಾರ್ಯ.

ಬೀಜದ ಟಗರಿನ ಆಯ್ಕೆ ಮತ್ತು ಆಹಾರ

ಕುರಿಗಳ ಅಭಿವೃದ್ಧಿಗೆ ಉತ್ತಮ ಟಗರು ಮತ್ತು ಸಾಕಷ್ಟು ಪೌಷ್ಟಿಕ ಆಹಾರ 'ಒಂದು ಹಕ್ಕಿಯ ಎರಡು ರೆಕ್ಕೆಗಳಿದ್ದಂತೆ' ಅಥವಾ ''ಒಳ್ಳೇಯ ಶುದ್ಧ ಜಾತಿಯ ಟಗರು ಅರ್ಧ ಕುರಿಹಿಂಡಿಗೆ ಸಮಾನ' ಎಂಬ ನಾಣ್ಣುಡಿಯಿದೆ. ಪೀಳಿಗೆಯ ಸುಧಾರಣೆಯು ಹಿಂಡಿನಲ್ಲಿರುವ ಟಗರುಗಳನ್ನೇ ಅವಲಂಬಿಸಿರುತ್ತದೆ. ಅಂತೆಯೇ ಟಗರು ಮತ್ತು ಪೋತ ಉತ್ತಮ ಶುದ್ಧ ಜಾತಿಯದಾಗಿರಬೇಕು.

ದೃಢಕಾಯವಾಗಿಯೂ ಆರೋಗ್ಯಯುತವಾಗಿಯೂ ಇರಬೇಕು. ಎಲ್ಲಾ ಅವಯವಗಳು, ಅಂಗಾಂಗಳು ಸರಿಯಾಗಿದ್ದು ನೋಡಲು ಆಕರ್ಷಕವಾಗಿಯೂ ಸುಂದರವಾಗಿಯೂ ಇರಬೇಕು''(ರಾಮರಾವ್ ಜ್ಯೋತಿ: ೧೯೮೯:೫೧). ೩೦ ರಿಂದ ೪೦ ಕುರಿಗಳಿಗೆ ಒಂದು ಟಗರು ಸಾಕಲಾಗುತ್ತದೆ. ಆದ್ದರಿಂದ ಅಲೆಮಾರಿ ಕುರುಬರು ತಮ್ಮ ಕುರಿಗಳ ಸಂಖ್ಯೆಗನುಗುಣವಾಗಿ ಬೀಜದ ಟಗರುಗಳನ್ನು ಬಿಡುತ್ತಾರೆ. ಇವು ಕುರಿ ಹಿಂಡಿನಲ್ಲಿಯೇ ಹುಟ್ಟಿರುತ್ತವೆ. ಇವನ್ನು ಆಯ್ಕೆ ಮಾಡುವಾಗ ಕುರಿ ತಳಿಯ ಕೆಲವು ಅಂಶಗಳನ್ನು ಗಣನೆಗೆ ತೆಗೆದುಕೊಳ್ಳುತ್ತಾರೆ. ಮೊದಲು ಸೂಲು (ಈಯ್ದ) ಕುರಿಯ ಮರಿಯನ್ನು ಆಯ್ಕೆ ಮಾಡುವುದಿಲ್ಲ. ಏಕೆಂದರೆ ಮೊದಲು ಸೂಲ ಈಯ್ದಾಗ ಕುರಿಯು ದೈಹಿಕವಾಗಿ ಸಂಪೂರ್ಣ ಅಭಿವೃದ್ಧಿಯಾಗಿರುವುದಿಲ್ಲ. ಆದ್ದರಿಂದ ಎರಡನೆಯ ಅಥವಾ ಮೂರನೆಯ ಸೂಲು ಈಯ್ದ ಕುರಿಯ ಮರಿಯನ್ನು ಆಯ್ಕೆ ಮಾಡುತ್ತಾರೆ. ಈ ರೀತಿ ಮರಿಯನ್ನು ಆಯ್ಕೆ ಮಾಡಿಕೊಳ್ಳುವಾಗ ತಾಯಿಯ ದೈಹಿಕ ಲಕ್ಷಣಗಳು, ಹಾಲಿನ ಪ್ರಮಾಣ, ಮರಿಗಳನ್ನು ಜೋಪಾನ ಮಾಡುವ ರೀತಿ, ಕುರಿಯ ಆರೋಗ್ಯ ಇತ್ಯಾದಿ ಅಂಶಗಳು ಗಣನೆಗೆ ಬರುತ್ತವೆ. ಮರಿಯ ಲಕ್ಷಣ, ನಿಲುವು, ಕೊಂಬು, ಉಣ್ಣೆ ಇತ್ಯಾದಿ ಅಂಶಗಳನ್ನು ಸಹ ಗಮನಿಸಿ ಆ ಮರಿಯನ್ನು ಮಾರಾಟ ಮಾಡದೆ ಬೀಜದ ಟಗರಾಗಿ ಹಿಂಡಿನಲ್ಲಿಟ್ಟು ಕೊಳ್ಳುತ್ತಾರೆ.

ಇತ್ತೀಚಿನ ದಿನಗಳಲ್ಲಿ ಕೆಂಪು ಟಗರುಗಳನ್ನು ಕೊಂಡು ಸಾಕಲಾಗುತ್ತಿದೆ. ಅವು ತಮ್ಮ ಕರೆಕುರಿಗಳಿಗಿಂತ ನಿಲುವು ಇದ್ದು ಮಾರುಕಟ್ಟೆಯಲ್ಲಿ ಹೆಚ್ಚಿನ ಬೆಲೆಗೆ ಮಾರಾಟವಾಗುತ್ತಿವೆ. ಕರ್ನಾಟಕದಲ್ಲಿ ಡೆಕ್ಕನಿ ಮತ್ತು ಬಳ್ಳಾರಿ ತಳಿಗಳನ್ನು ಮೇಲ್ಮಟಕ್ಕೇರಿಸಲು 'ರ್‍ಯಾಂಬೋಲೆಟ್' ವಿದೇಶಿ ತಳಿಯೊಂದಿಗೆ ಮಿಶ್ರತಳಿ ಸಂಕರಣ ಕಾರ್ಯ ಕೈಗೊಳ್ಳಲಾಗುತ್ತಿದೆ. ಸ್ಥಳೀಯ ತಳಿಯ ಕುರಿಗಳನ್ನು ವಿದೇಶಿ ತಳಿಯ ಟಗರುಗಳೊಂದಿಗೆ ಮಿಶ್ರತಳಿ ಸಂಕರಣಗೊಳಿಸುವುದರಿಂದ ಸಂತತಿಯ ಉಣ್ಣೆ ಮತ್ತು ಮಾಂಸದ ಉತ್ಪಾನೆಯಲ್ಲಿ ಗಣನೀಯ ಹೆಚ್ಚಳವನ್ನು ಕಾಣಬಹುದು. ಬನ್ನೂರು ತಳಿಯ ಕುರಿ ವಿಶ್ವವಿಖ್ಯಾತ ಉತ್ತಮ ಮಾಂಸ ತಳಿಯಾಗಿರುವುದರಿಂದ ಈ ತಳಿಯನ್ನು ಮಿಶ್ರ ತಳಿ ಮಾಡುವುದನ್ನು ನಿಷೇಧಿಸಲಾಗಿದೆ.

ಕುರಿಗಳ ಹಾಗೆ ಟಗರು ಅಡವಿಯಲ್ಲಿ ಸಿಗುವ ಎಲ್ಲ ಹುಲ್ಲು, ಸೊಪ್ಪು ಮತ್ತು ಕಾಯಿಗಳನ್ನು ತಿನ್ನುತ್ತವೆ. ಇದರ ಜೊತೆಗೆ ಸಜ್ಜೆ, ಜೋಳ, ಗೋಧಿ, ಉರುಳು, ನುಚ್ಚುಗಳನ್ನು ಅಥವಾ ಹತ್ತಿಕಾಳು, ಶೇಂಗಾಹಿಂಡಿ, ಸೂರ್ಯಕಾಂತಿ ಹಿಂಡಿಗಳಲ್ಲಿ ಯಾವುದಾದರೊಂದನ್ನು ಬೀಜದ ಟಗರುಗಳಿಗೆ ನೀಡಲಾಗುತ್ತದೆ. ಇದನ್ನು ಕುರಿಗಳು ಅಡವಿಯಿಂದ ಬಿಡಾರಕ್ಕೆ ಬಂದ ನಂತರ ಸಂಜೆಯಾಗಲಿ ಅಥವಾ ಮುಂಜಾನೆ ಮೇಯಲು ಅಡವಿಗೆ ಹೋಗುವ ಮುಂಚೆಯಾಗಲಿ ನೀಡುತ್ತಾರೆ. ಕೆಲವರು ಸಂಜೆ ಮತ್ತು ಮುಂಜಾನೆ ಎರಡು ಬಾರಿ ಹೆಚ್ಚುವರಿ ಆಹಾರವಾಗಿ ನೀಡುವರು. ಪಶುವೈದ್ಯರ ಪ್ರಕಾರ ಬೀಜದ ಟಗರಿಗೆ ಅಡವಿಯಲ್ಲಿ ಹುಲ್ಲು, ಸೊಪ್ಪಿನ ಜೊತೆಗೆ ಒಂದು ದಿವಸಕ್ಕೆ ಒಂದು ಕೆ.ಜಿ. ಮತ್ತು ಬೇಸಿಗೆಯ ಕಾಲದಲ್ಲಿ ಒಂದೂವರೆ ಕೆ.ಜಿ.ಯಷ್ಟು ಪೌಷ್ಠಿಕ ಕಾಳಿನ ಮಿಶ್ರಣ ಆಹಾರವನ್ನು ಕೊಟ್ಟು

ಆರೈಕೆ ಮಾಡಬೇಕು. ಕಾಳಿನ ಮಿಶ್ರಣದಲ್ಲಿ ದ್ವಿದಳ ಧಾನ್ಯದ ನುಚ್ಚು ಅಥವಾ ಹಿಂಡಿ ಮಿಶ್ರಣವನ್ನು ಕೊಡಬೇಕೆಂದು ಸಲಹೆ ಮಾಡುತ್ತಾರೆ.

೪.೮ ಪ್ರಸೂತಿ ಕಾರ್ಯವಿಧಾನ

ಪ್ರತಿಯೊಂದು ಪ್ರಾಣಿಯು ತನ್ನಷ್ಟಕ್ಕೆ ತಾನೇ ಮರಿಹಾಕುವುದು ಸಹಜ ಕ್ರಿಯೆಯಾಗಿದೆ. ಕೆಲವೊಮ್ಮೆ ಮರಿಹಾಕುವಾಗ ತಾಯಿ ಸಂಕಷ್ಟಕ್ಕೊಳಗಾಗಿ ತಾಯಿ ಮತ್ತು ಮರಿ ಸಾವನ್ನಪ್ಪಬಹುದು. ಇಂತಹ ಸಂಕಷ್ಟವನ್ನು ತಪ್ಪಿಸಲು ಅಲೆಮಾರಿ ಕುರುಬರು ಪರಂಪರಾಗತವಾಗಿ ಪೂರ್ವಜರಿಂದ ಕಲಿತುಕೊಂಡು ಬಂದ ವಿದ್ಯೆಯ ಮೂಲಕ ಕುರಿ-ಮೇಕೆಗಳಿಗೆ ಪ್ರಸೂತಿ ಮಾಡಿಸುತ್ತಾರೆ.

"ಹೆರಿಗೆ ಸಮೀಪಿಸಿದಂತೆ ಕುರಿ ನಡಿಗೆಯು ಮಂದವಾಗುತ್ತದೆ. ಬಾಲವನ್ನು ವಿಚಿತ್ರ ರೀತಿಯಲ್ಲಿ ಅಲ್ಲಾಡಿಸುತ್ತ ಮರಿ ಹಾಕುವ ಸಮಯದಲ್ಲಿ ಹಿಂಡಿನಿಂದ ಬೇರೆಯಾಗಿ ಬಿಡುತ್ತದೆ. ಮುಂಗಾಲಿನಿಂದ ನೆಲ ಕೆರೆಯುತ್ತಾ ಮಲಗುವುದು, ಏಳುವುದು, ಹೊರಳಾಡುವುದು, ಒದರುವುದು, ನಾಲ್ಕು ಕಾಲುಗಳನ್ನು ಸೆಟೆದು ನಿಲ್ಲುವುದು ಮಾಡುತ್ತದೆ"(ಶಿವಾನಂದ ಗುಬ್ಬಣ್ಣವರ:೮೩).

ಕುರಿಯ ಯೋನಿಯಲ್ಲಿ ಮಡಿ ಹೊರಸೂಸುವುದು ಕುರಿ ತನ್ನ ಮರಿಗೆ ಜನನ ನೀಡುವುದರ ಮುನ್ಸೂಚನೆಯಾಗಿದೆ. ಮಡಿ ಒಡೆದ ತಕ್ಷಣ ಕುರಿ ಹೆರಿಗೆಯಾಗುವುದು ತಡವಾದಲ್ಲಿ ಕುರಿಯನ್ನು ಮಲಗಿಸಿ ಎರಡು ಕೈಯಿಂದ ಕುರಿಯ ಹೊಟ್ಟೆಯನ್ನು ಸಾವಕಾಶವಾಗಿ ಒತ್ತಲಾಗುತ್ತದೆ. ಈ ಪ್ರಕ್ರಿಯೆ ಮರಿಯ ತಲೆ ಯೋನಿಯಿಂದ ಹೊರಗಡೆ ಬರುವವರೆಗೆ ಮಾಡಿ ನಂತರ ಕೈಯನ್ನು ಒಳಹಾಕಿ ಮರಿಯನ್ನು ಹೊರಗೆಳೆಯಲಾಗುತ್ತದೆ. ಮರಿ ಗರ್ಭದಿಂದ ಹೊರಬಂದ ತಕ್ಷಣ ಅದರ ಮೂತಿ, ಮೈಯನ್ನೆಲ್ಲಾ ಒರಸಿ, ಕಾಲಿನ ಗೊರಚುಗಳನ್ನು ಚಿವುಟಿ, ತಾಯಿಯ ಮುಂದೆ ಇಡಲಾಗುತ್ತದೆ. ಕೆಲವೊಂದು ಕುರಿಗಳ ಹೆರಿಗೆ ಮಾಡಿಸುವಾಗ ಕುರಿಯನ್ನು ಮಲಗಿಸಿ ಎರಡು ಕೈಗಳಿಂದ ಹೊಟ್ಟೆಯನ್ನು ಎಷ್ಟೇ ಒತ್ತಿದರೂ ಮರಿಯ ತಲೆ ಹೊರಗೆ ಬರುವುದಿಲ್ಲ. ಆಗ ಮರಿ ಅಡ್ಡಬಿದ್ದಿರಬಹುದೆಂದು ಭಾವಿಸಿ ತನ್ನ ಎರಡು ಕೈಗಳನ್ನು ಯೋನಿಯೊಳಗೆ ತೂರಿಸಿ, ಗರ್ಭದಲ್ಲಿ ಅಡ್ಡ ಬಿದ್ದಿರುವ ಮರಿಯನ್ನು ಸರಿಯಾದ ಕ್ರಮದಲ್ಲಿ ಜೋಡಿಸಿಕೊಂಡು ಮರಿಯನ್ನು ಹೊರತೆಗೆಯಲಾಗುತ್ತದೆ. ಇನ್ನೂ ಕೆಲವೊಮ್ಮೆ ಎಷ್ಟೇ ಪ್ರಯತ್ನಪಟ್ಟರೂ ಮರಿ ಹೊರಬರದಿದ್ದಾಗ ದುಸ್ಸಾಹಸಕ್ಕೆ ಕೈಹಾಕಿ, ಅಂದರೆ ಬ್ಲೇಡಿನಿಂದ ಅಥವಾ ಕುರಿಮುಳ್ಳು ತೆಗೆಯುವ ಚಾಕುವಿನಿಂದ ಕುರಿಯ ಹೊಟ್ಟೆಯಲ್ಲಿಯೇ ಮರಿಯನ್ನು ಕೊಯ್ದು ತುಂಡು ತುಂಡು ಮಾಡಿ ಹೊರತೆಗೆಯಲಾಗುತ್ತದೆ. ಒಂದು ವೇಳೆ ಈ ರೀತಿ ಮಾಡದಿದ್ದಾಗ ಕುರಿ ಮತ್ತು ಮರಿ ಎರಡನ್ನು ಕುರುಬನು ಕಳೆದುಕೊಳ್ಳುತ್ತಾನೆ. ಅದ್ದರಿಂದ ದೊಡ್ಡ ಕುರಿಯನ್ನು ಉಳಿಸಿಕೊಳ್ಳಲು ಈ ಕಾರ್ಯ ಮಾಡಬೇಕಾದ ಅನಿವಾರ್ಯತೆ ಉಂಟಾಗುತ್ತದೆ.

ಆರೋಗ್ಯಪೂರ್ಣ ಮರಿ, ತಾಯಿಯ ಗರ್ಭದಿಂದ ಹೊರಬಂದ ತಕ್ಷಣ ಬ್ಯಾ.... ಬ್ಯಾ....

ಬ್ಯಾ... ಎಂದು ಧ್ವನಿ ಮಾಡುತ್ತದೆ. ೧೫-೨೦ ನಿಮಿಷದೊಳಗೆ ಎದ್ದು ನಿಂತು ತಾಯಿಯ ಹಾಲು ಕುಡಿಯುತ್ತದೆ. ಹಾಗೆಯೇ ಒಂದು ಗಂಟೆಯೊಳಗೆ ತಾಯಿಯ ಜೊತೆ ತಿರುಗಾಡಲು ಆರಂಭಿಸುತ್ತದೆ. ಒಂದು ವೇಳೆ ಗರ್ಭದಿಂದ ಹೊರಬಂದ ಮರಿ ಧ್ವನಿ ಮಾಡದಿದ್ದಾಗ, ಮರಿಯು ತಾಯಿಯ ಗರ್ಭದಲ್ಲಿರುವಾಗ ಕೊಳೆ (ಲೊಳೆ) ಕುಡಿದಿರಬಹುದೆಂದು ಶಂಕಿಸಿ ಮರಿಯ ಹಿಂದಿನ ಎರಡು ಕಾಲುಗಳನ್ನು ಹಿಡಿದು ಮೇಲಕ್ಕೆತ್ತಿ ಬೀಸಲಾಗುತ್ತದೆ. ಕುಡಿದ ಕೊಳೆ ಹೊರಬಿದ್ದರೆ ಮರಿ ಬದುಕುತ್ತದೆ. ಇಲ್ಲವೆಂದರೆ ಮರಿಯ ಮೂಗಿನ ಮೂಲಕ ಗಾಳಿ ಊದುವುದು ಮಾಡಲಾಗುತ್ತದೆ. ಇಷ್ಟೆಲ್ಲಾ ಪ್ರಯತ್ನಪಟ್ಟರೂ ಜೀವ ಬರದಿದ್ದಾಗ ಮರಣ ಹೊಂದಿದೆ ಎಂದು ತಿಳಿಯಲಾಗುತ್ತದೆ.

ಪಂಗ್ಳೀಮರಿ (ಅಂಗವಿಕಲ ಮರಿ): ಪಂಗ್ಳಿ ಎಂಬುದು ಮರಾಠಿ ಪದ. ಈ ಮರಿ ತಾಯಿಯ ಗರ್ಭದಿಂದ ಜನಿಸುತ್ತಲೇ ಅಂಗವಿಕಲವಾಗಿರುತ್ತದೆ. "ಮುಂಗಾಲುಗಳು ಒಳಗೆ ತಿರುಗಿ ಐದು ಕಾಲುಗಳಿರುವುದು. ಸ್ವಶಕ್ತಿಯಿಂದ ಎದ್ದು ನಿಂತು ಹಾಲು ಕುಡಿಯಲು ಮತ್ತು ಮೇವು ತಿನ್ನಲಾರದಷ್ಟು ಅಶಕ್ತವಾಗಿರುತ್ತದೆ. ಇಂತಹ ಮರಿ ಹುಲ್ಲು ತಿಂದು ಜೀವಿಸುವಷ್ಟು ಶಕ್ತವಾಗುವವರೆಗೆ ಗುಡಾರದಲ್ಲಿ ಸಾಕಿ ನಂತರ ಊರಿಗೆ ಸಾಗಿಸಿ ಅಲ್ಲೇ ಸಾಕಲಾಗುತ್ತದೆ. ಈ ತರಹದ ಮರಿ ಜನಿಸುವುದು 'ಸುದೈವ', ಅಥವಾ 'ದೇವರ ಅನುಗ್ರಹ'. ಈ ದೈವದ ಮರಿಯನ್ನು ಯಾವ ಕಾರಣಕ್ಕೂ ಮಾರಾಟ ಮಾಡುವುದಾಗಲಿ ಅಥವಾ ಬಲಿಕೊಡುವುದಾಗಲಿ ಮಾಡುವುದಿಲ್ಲ. ಈ ಮರಿ ತೀರಿಕೊಂಡ ಮೇಲೆ ಬಿಸಾಕದೆ ಅಥವಾ ತಿನ್ನಲು ಯಾರಿಗೂ ಕೊಡದೆ ಮಣ್ಣಿನಲ್ಲಿ ಹೂಳಲಾಗುತ್ತದೆ. ಒಂದು ವೇಳೆ ಇಂತಹ ಮರಿಯನ್ನು ನೋಡಿಕೊಳ್ಳಲು ಸ್ವಗ್ರಾಮದಲ್ಲಿ ಯಾರು ಇಲ್ಲದಿದ್ದಾಗ ತಮಗಿಷ್ಟವೆನಿಸಿದ ಗುಡಿಯ ಮುಂದೆ ದೇವರ ಹೆಸರ್ಹೇಳಿ ಬಿಟ್ಟು ಬರುತ್ತೇವೆ" (ಮಾಹಿತಿದಾರ: ಲಿಂಗಪ್ಪ ಸಾವಿರಕುರಿ: ನವಿಲಿಹಾಳ್). ಇಂತಹ ಮರಿಗಳನ್ನು ಸಾಯುವವರೆಗೆ ರಕ್ಷಣೆ ಮಾಡುವುದು ಅವರ ಮಾನವಿಯ ಗುಣಗಳ ಪ್ರತೀಕವಾಗಿದೆ.

೪.೯ ಹಾಲುಹಿಂಡುವುದು : ಹುಡಿ ಆಗುವುದು : ನಸೆಬಟ್ಟೆ

i) ಹಾಲು ಹಿಂಡುವುದು : ಸರ್ವಶ್ರೇಷ್ಠ ಆಹಾರಗಳಲ್ಲೊಂದಾದ ಹಾಲು ಇವರಿಗೆ ನಿತ್ಯವು ದೊರೆಯುವ ಕಾಮಧೇನುವಾಗಿದೆ. ಕುರಿ ಮತ್ತು ಮೇಕೆಗಳು ನಿಸರ್ಗದಲ್ಲಿ ದೊರೆಯುವ ಎಲ್ಲಾ ಸಸ್ಯರಾಶಿಗಳನ್ನು ತಿಂದು ಜೀರ್ಣಿಸಿಕೊಂಡು ಅಮೃತವನ್ನೇ ನೀಡುತ್ತವೆ. ಇವುಗಳ ಹಾಲು ಹಿಂಡುವಾಗ ತುದಿಗಾಲಲ್ಲಿ ಕುಳಿತು ಎರಡು ಮೊಣಕಾಲಿನ ಮಧ್ಯದಲ್ಲಿ ಅಲ್ಯೂಮಿನಿಯಂ ತಂಬಿಗೆಯನ್ನಿಟ್ಟುಕೊಂಡು, ಎಡಗೈಯಲ್ಲಿ ಕುರಿಯ ಕೆಚ್ಚಲು ಬಿಗಿಯಾಗಿ ಹಿಡಿದುಕೊಂಡು ಬಲಗೈಯಿಂದ ಹಾಲು ಕರೆಯಲಾಗುತ್ತದೆ. "ಹಾಲು ಹಿಂಡುವಲ್ಲಿ ಎರಡು ವಿಧಾನಗಳಿವೆ. ಒಂದೇ ಬಾರಿ ಎರಡು ಮೊಲೆಗಳಿಂದ ಹಾಲು ಹಿಂಡುವುದು. ಬುರುಕಿ ಹಿಂಡುವ ಪದ್ಧತಿ. ಒಂದೆ ಮೊಲೆಯಿಂದ ಹಾಲು ಹಿಂಡುವುದು ಸಾದಾ ಪದ್ಧತಿ ಎಂದು ಕರೆಯುತ್ತಾರೆ"(ಮಾಹಿತಿದಾರ: ಮಂಜುನಾಥ ದುರುಗಣ್ಣನವರ್:ಸೌಂದಲಗ). ಮುಂಜಾನೆ ಕುರಿ

ಮೇವು ಮೇಯಲು ಅಡವಿಗೆ ಹೋಗುವ ಮುಂಚೆ ಮತ್ತು ಸಂಜೆ ಸೂರ್ಯಾಸ್ತವಾಗಿ ಕುರಿ ಗುಡಾರಕ್ಕೆ ಮರಳಿದ ನಂತರ ಸಾಮಾನ್ಯವಾಗಿ ದಿನಕ್ಕೆರಡು ಬಾರಿ ಹಾಲು ಹಿಂಡಲಾಗುತ್ತದೆ. ಕುರಿ ಮೇಯಿಸಲು ಹೋದವರು ಮಧ್ಯಾಹ್ನ ಒಂದೆರಡು ಕುರಿಗಳ ಹಾಲನ್ನು ಹಿಂಡಿಕೊಂಡು ಊಟ ಮಾಡುವುದು ಹಾಗೂ ಹೊಲ-ಗದ್ದೆಗಳಲ್ಲಿ ಮೇಯಿಸುವಾಗ ಯಾರಾದರೂ ಹಾಲು ಕೇಳಿದರೆ ಹಿಂಡಿ ಕೊಡುವುದುಂಟು.

ಗಿಣ್ಣದ ಹಾಲು : ಮರಿ ಹಾಕಿದ ಮೂರು ದಿನಗಳವರೆಗೆ ಕುರಿ-ಮೇಕೆಗಳು ಗಿಣ್ಣದ ಹಾಲನ್ನು ಹಿಂಡುತ್ತವೆ. ಸಾಮಾನ್ಯವಾಗಿ ಆ ಮೂರು ದಿನಗಳು ಹಾಲು ಹಿಂಡದೆ ಎಲ್ಲಾ ಹಾಲನ್ನು ಮರಿಗೆ ಕುಡಿಸುತ್ತಾರೆ. ಒಂದು ವೇಳೆ ಮರಿಗೆ ಹಾಲು ಹೆಚ್ಚಾದರೆ ಹಾಗೂ ಯಾರಾದರೂ ಗಿಣ್ಣ ತಿನ್ನಲು ಇಷ್ಟಪಟ್ಟರೆ ಮಾತ್ರ ಗಿಣ್ಣದ ಹಾಲು ಹಿಂಡಲಾಗುತ್ತದೆ.

ii) ಹುಡಿ ಆಗುವುದು (ಕೆಚ್ಚಲು ಗಟ್ಟಿಯಾಗುವುದು) : ಮರಿ ಹಾಕಿದ ನಂತರ ದಿನಕ್ಕೆರಡು ಬಾರಿ ಮರಿಗಳಿಗೆ ಹಾಲುಣಿಸುವುದು ಅಥವಾ ಹಾಲು ಹಿಂಡುವುದು ಅಗತ್ಯವಾಗಿದೆ. ಮೂರ್‍ನಾಲ್ಕು ದಿನಗಳು ಕಾಲ ಈ ಕ್ರಮ ನಿಂತು ಹೋದರೆ ಕುರಿಯ ಕೆಚ್ಚಲು ಗಟ್ಟಿಯಾಗಿ ಮೊಲೆಗಳ ಮೂಲಕ ಹಾಲುಬರುವುದು ನಿಂತು ಹೋಗುತ್ತದೆ. ಈ ರೀತಿಯಾದಾಗ ಮೊಲೆಯ ಹಾಲು ಎದೆಗೇರಿ ಕುರಿ ಪ್ರಾಣ ಕಳೆದುಕೊಳ್ಳಬಹುದು. ಅಥವಾ ಮುಂದಿನ ಮರಿ ಹಾಕುವವರೆಗೆ ಹಾಲುಕೊಡದಂತೆ ಆಗಬಹುದು.

ಅಲೆಮಾರಿ ಕುರುಬರು ನಾಟವೈದ್ಯ ಪದ್ಧತಿಯ ಮೂಲಕ ಹುಡಿಯಾಗಿದ್ದನ್ನು ಹೋಗಲಾಡಿಸಿ ಹಾಲು ಬರುವಂತೆ ಮಾಡಲು ಪ್ರಯತ್ನಿಸುತ್ತಾರೆ. ಕೆರುಕಾಯಿಯಲ್ಲಿರುವ ಎಣ್ಣೆಯನ್ನು ತೆಗೆದು ಕುರಿಯ ಮೊಲೆಗಳಿಗೆ ಮತ್ತು ಎದೆಗೆ ಹಚ್ಚಲಾಗುತ್ತದೆ. ಕುರಿಯ ಡುಬ್ಬದ ಮೇಲೆ ಮತ್ತು ಕೆಚ್ಚಲಿಗೆ ಚೆನ್ನಾಗಿ ತಣ್ಣೀರನ್ನು ತಟ್ಟಿ ಹಾಲು ಹಿಂಡಲಾಗುತ್ತದೆ. ಈ ರೀತಿ ಮಾಡುವುದರಿಂದ ಕುರಿಯ ಕೆಚ್ಚಲು ಮೃದುವಾಗಿ ಹಾಲು ಬರಲು ಶುರುವಾಗುತ್ತದೆ. ಕೆಚ್ಚಲು ಮೃದುವಾಗದೆ ಹಾಗೆಯೇ ಗಟ್ಟಿಯಾಗಿದ್ದರೆ ಹಾಲುಕೊಡದಂತಾಗುತ್ತದೆ. ಕೆಚ್ಚಲು ಗಟ್ಟಿಯಾಗುವ ಸಂದರ್ಭಗಳೆಂದರೆ ಕುಟುಂಬದ ಸದಸ್ಯರೆಲ್ಲರು ಶುಭ ಅಥವಾ ಅಶುಭ ಕಾರ್ಯಕ್ರಮಗಳಿಗಾಗಿ ಸ್ವಗ್ರಾಮಕ್ಕೆ ತೆರಳಿದಾಗ ಇತರೆ ಕುಟುಂಬದವರಿಗೆ ಅಥವಾ ಆಳುಮಕ್ಕಳಿಗೆ ತಮ್ಮ ಕುರಿಗಳ ಜವಾಬ್ದಾರಿಯನ್ನು ವಹಿಸಿಕೊಟ್ಟು ಹೋಗುತ್ತಾರೆ. ಮಳೆಗಾಲ ದಲ್ಲಿ ನಾಲ್ಕೈದು ದಿನಗಳು ಜಿನಿ-ಜಿನಿ ಮಳೆ ಅಂಟಿಕೊಂಡ ದಿನಗಳಲ್ಲಿ ಮರಿಹಾಕಿದ ಯಾವುದಾದರೂ ಕುರಿ-ಮೇಕೆಗಳ ಹಾಲುಣಿಸುವುದನ್ನು ಅಥವಾ ಹಾಲು ಹಿಂಡುವುದು ಮರೆತಾಗ ಹುಡಿ ಆಗುತ್ತದೆ.

iii) ನಸೆಬಟ್ಟೆ : ಮರಿಗಳು ತಾಯಿಯ ಹಾಲುಣಿಸಿಕೊಳ್ಳದಂತೆ ತಡೆಯಲು ಕುರಿ-ಮೇಕೆಗಳ ಮೊಲೆಗಳಿಗೆ ಸುತ್ತುವ ಬಟ್ಟೆ ಇದು. ಮರಿಗಳು ಜನಿಸಿದ ಮೂರು ತಿಂಗಳು ಬಳಿಕ ತಾಯಿಯ ಜೊತೆ ಅಡವಿಗೆ ಹೋಗಿ ಮೇವು ಮೇಯ್ದು ಜೀವಿಸುವಷ್ಟು ಶಕ್ತವಾಗುತ್ತವೆ. ಈ ರೀತಿ ಶಕ್ತವಾದ ಮೇಲೆ ಅವು ತಾಯಿಯ ಹಾಲು ಕುಡಿಯದಂತೆ ಮಧ್ಯಾಹ್ನದ ನಂತರ ಅಂದರೆ ಮೂರು-ನಾಲ್ಕು

ಗಂಟೆ ಅವಧಿಯಲ್ಲಿ ಕುರಿಯ ಹಸೆ ಹಿಕ್ಕೆಯಲ್ಲಿ ಬಟ್ಟೆಯನ್ನು ಒದ್ದೆಮಾಡಿ ಮೊಲೆಗಳಿಗೆ ಸುತ್ತುತ್ತಾರೆ. ಈ ರೀತಿ ಸುತ್ತುವುದರ ಹಿಂದೆ ಎರಡು ಉದ್ದೇಶಗಳಿವೆ. ಒಂದನೆಯದು ಕುಟುಂಬದವರು ಹಾಲುಣ್ಣಲು, ಚಹಾ ಕುಡಿಯಲು ಬಳಸುವುದು. ಎರಡನೆಯದಾಗಿ, ಕೆಲವು ಕುರಿ-ಮೇಕೆಗಳು ಒಂದೇ ಸಾರಿ ಎರಡು ಮೂರು ಮರಿಗಳನ್ನು ಈಯುತ್ತವೆ. ತಾಯಿಯ ಹಾಲು ಮರಿಗಳಿಗೆ ಸಾಲುವುದಿಲ್ಲ. ಹಾಲು ಸಾಲದ ಅಂತಹ ಚಿಕ್ಕ ಮರಿಗಳಿಗೆ ನಸೆಬಟ್ಟೆ ಸುತ್ತಿದ ಕುರಿಯ ಹಾಲನ್ನು ಕುಡಿಸುತ್ತಾರೆ. ಇದರಿಂದ ಕುರಿಗಳು ಆರೋಗ್ಯವಾಗಿರುವುದರ ಜೊತೆಗೆ ಚಿಕ್ಕ ಮರಿಗಳು ಸದೃಢವಾಗಿ ಬೆಳೆಯುತ್ತವೆ. ಒಂದು ವೇಳೆ ಕುರಿಗಳಲ್ಲಿ ಯಥೇಚ್ಛವಾಗಿ ಹಾಲು ದೊರೆಯುವಂತಿದ್ದರೆ ನಸೆಬಟ್ಟೆ ಸುತ್ತುವ ಅವಶ್ಯಕತೆ ಬರುವುದಿಲ್ಲ.

೪.೧೦ ಮುಖ್ಯಸ್ಥನ ಮತ್ತು ಮಹಿಳೆಯರ ದೈನಂದಿನ ಕಾರ್ಯಚಟುವಟಿಕೆಗಳು

ಮುಖ್ಯಸ್ಥನ ಕಾರ್ಯ : ಕುಟುಂಬದ ಮುಖ್ಯಸ್ಥನು ಕುಟುಂಬದ ನಿರ್ದೇಶಕ, ನಿಯಂತ್ರಕ ಹಾಗೂ ಮೇಲ್ವಿಚಾರಕನಾಗಿ ಕಾರ್ಯನಿರ್ವಹಿಸುತ್ತಾನೆ. ಕೌಟುಂಬಿಕ ಮತ್ತು ಇತರೆ ಪ್ರಮುಖ ವಿಚಾರಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳುವಾಗ ಕುಟುಂಬದ ಸದಸ್ಯರೊಂದಿಗೆ ಚರ್ಚಿಸಿ ಅಂತಿಮ ನಿರ್ಧಾರಕ್ಕೆ ಬರುವನು. ಮುಖ್ಯಸ್ಥನು ಬೆಳಗಿನ ಜಾವವೇ ಎದ್ದು ಕುಟುಂಬದ ಸದಸ್ಯರು ಹಾಗೂ ಆಳುಮಕ್ಕಳು ಹೇಗೆ ಕಾರ್ಯ ನಿರ್ವಹಿಸುತ್ತಾರೆಂಬುದನ್ನು ಗಮನಿಸುತ್ತಾನೆ. ಹಾಗೆಯೇ ಕುರಿ ಹಿಂಡಿನ ಸುತ್ತ ತಿರುಗು ವುದರ ಮೂಲಕ ಯಾವುದಾದರೂ ಕುರಿ ಅಥವಾ ಮರಿ ಆರೋಗ್ಯ ಚೆನ್ನಾಗಿಲ್ಲದಿದ್ದರೆ ಅವುಗಳಿಗೆ ನೀಡುವ ಗಿಡಮೂಲಿಕೆ ಅಥವಾ ಆಧುನಿಕ ಔಷಧಗಳ ಬಗ್ಗೆ ಸಲಹೆ ನೀಡುತ್ತಾನೆ. ಒಂದು ವೇಳೆ ಕುರಿಗಳ ಸಂಖ್ಯೆ ಕಡಿಮೆ ಇದ್ದಾಗ ಕುರಿಕಾಯುವವ ಮತ್ತು ಕುಟುಂಬದ ಮುಖ್ಯಸ್ಥ ಅವನೇ ಆಗಿರುತ್ತಾನೆ. ಕುರಿ ಸಂಗೋಪನೆಯ ಎಲ್ಲಾ ಕಾರ್ಯಚಟುವಟಿಕೆಗಳನ್ನು ಅವನೇ ನಿರ್ವಹಿಸಬೇಕಾಗುತ್ತದೆ.

ಸೂರ್ಯೋದಯವಾದ ನಂತರ ಕಟುಕರು ಅಥವಾ ಜಮೀನಿನ ಮಾಲಿಕರು ಗುಡಾರದ ಸ್ಥಳಕ್ಕೆ ಆಗಮಿಸುವುದು ಸಾಮಾನ್ಯ. ಆಗ ಅವರಿಗೆ ಕಂಬಳಿ ಹಾಸಿ ಅವರನ್ನು ಕೂಡಿಸಿ 'ಜರ್‍ರ ಚಹ ಕಾಯಿಸಿ' ಎಂದು ತಮ್ಮ ಮಹಿಳೆಯರಿಗೆ ಆದೇಶಿಸುವನು. ಅವರು ಬಂದ ಸಮಚಾರ ವಿಚಾರಿಸುವನು. ಒಂದು ವೇಳೆ ಮಾರಾಟ ಮಾಡುವ ಕುರಿ-ಮರಿಗಳಿದ್ದರೆ ಕಟುಕನಿಗೆ ತೋರಿಸಿ ಬೆಲೆ ವಿಷಯ ಮಾತನಾಡುವನು. ಕುರಿಗಳು ಮೇವು ಮೇಯಲು ಯಾವ ದಿಕ್ಕಿಗೆ ಹೋಗಬೇಕು ಮತ್ತು ಯಾವ ದಿಕ್ಕಿನಲ್ಲಿ ಮೇವು ಚೆನ್ನಾಗಿ ದೊರೆಯುತ್ತದೆ ಎಂಬುದರ ಬಗ್ಗೆ ಕುರಿ ಮೇಯಿಸಲು ಹೋಗುವವರಿಗೆ ಮಾಹಿತಿ ನೀಡಿ ಊಟ ಮಾಡುತ್ತಾನೆ. ಊಟವಾದ ನಂತರ ತಾವು ಕುರಿ ತಬ್ಬಿದ ಜಮೀನಿನ ಮಾಲಿಕರ ಮನೆಗೆ ಹೋಗಿ ಭತ್ಯ ಕೇಳಿಕೊಂಡು ಬರುವುದು, ಹಿಟ್ಟು ಮತ್ತು ಸಂತೆಯ ಸಾಮಾನು ಖಾಲಿಯಾಗಿದ್ದರೆ ಗಿರಣಿಗೆ ಹಾಕಿಸಿಕೊಂಡು ಸಂತೆ ಮಾಡಿಕೊಂಡು ಬರುವುದು, ಕುರಿ ಮರಿಗಳಿಗೆ ಆರೋಗ್ಯ ಚೆನ್ನಾಗಿಲ್ಲ ದಿದ್ದರೆ ಔಷಧ ತೆಗೆದುಕೊಂಡು ಬರುವುದು ಇತ್ಯಾದಿ ಕಾರ್ಯಗಳನ್ನು ಸಂಜೆಯೊಳಗೆ ಮುಗಿಸುತ್ತಾನೆ.

ಕುರಿಗಳು ಅಡವಿಯಿಂದ ಗುಡಾರದ ಸ್ಥಳಕ್ಕೆ ಬಂದ ನಂತರ ಮರಿಗಳಿಗೆ ಹಾಲುಣಿಸಲು ಕುಟುಂಬದ ಸದಸ್ಯರಿಗೆ ಹೇಳಿ ತಾನು ಅದರಲ್ಲಿ ಭಾಗಿಯಾಗುತ್ತಾನೆ. ನಂತರ ಊಟ ಮಾಡಿ, ಕಳ್ಳರು ಮತ್ತು ಕಾಡು ಪ್ರಾಣಿಗಳಿಂದ ತಮ್ಮ ಕುರಿಗಳನ್ನು ರಕ್ಷಿಸಿಕೊಳ್ಳಲು ಇಡೀ ರಾತ್ರಿ ಎಚ್ಚರದಿಂದ ಇರುತ್ತಾನೆ.

ಮಹಿಳೆಯ ಕಾರ್ಯ : ನಗರ ಪಟ್ಟಣಗಳಲ್ಲಿ ವಾಸಿಸುವ ಮಹಿಳೆಯರಿಗೂ ಅಡವಿಯಲ್ಲಿ ವಾಸಿಸುವ ಅಲೆಮಾರಿ ಕುರುಬರ ಮಹಿಳೆಯರಿಗೂ ಬಹಳಷ್ಟ ವ್ಯತ್ಯಾಸವನ್ನು ಕಾಣುತ್ತೇವೆ. ಈ ಮಹಿಳೆಯರ ಕೌಟುಂಬಿಕ ಕೆಲಸಗಳು ನಸುಕಿನಲ್ಲಿಯೇ ಆರಂಭವಾಗಿ ರಾತ್ರಿ ಎಲ್ಲರು ಮಲಗಿದ ನಂತರವೆ ಮುಗಿಯುತ್ತವೆ. ಅವಳ ದಿನನಿತ್ಯದ ಕಾಯಕಗಳನ್ನು ಮೂರು ಹಂತಗಳಲ್ಲಿ ವಿಶ್ಲೇಷಿಸಬಹುದು.

ಮೊದಲನೆಯ ಹಂತದಲ್ಲಿ ಮಹಿಳೆಯರು ನಸುಕಿನಲ್ಲಿಯೇ ಎದ್ದು ಒಲೆಯ ಬೂದಿಯನ್ನು ಎತ್ತಿ ನೀರು ಕಾಯಿಸಿಕೊಂಡು ಸ್ನಾನ ಮಾಡುತ್ತಾರೆ. ಹಣೆಗೆ ಭಂಡಾರ ಮತ್ತು ಕುಂಕುಮ ಹಚ್ಚಿಕೊಂಡ ನಂತರವೇ ಆ ದಿನದ ಕೆಲಸ ಕಾರ್ಯಗಳನ್ನು ಆರಂಭಿಸುತ್ತಾರೆ. ಮೊದಲು ಗುಡಾರದಲ್ಲಿರುವವರಿಗೆಲ್ಲಾ ಚಹ ಕಾಯಿಸಿಕೊಡುವುದು, ನಂತರ ಆ ದಿನದ ಮುಂಜಾನೆ ಮತ್ತು ಮಧ್ಯಾಹ್ನಕ್ಕೆ ಬೇಕಾಗುವಷ್ಟು ಅಡಿಗೆ ಮಾಡುವುದು. ಕುರಿಕಾಯಲು ಹೋಗುವವರಿಗೆ ಮತ್ತು ನಾಯಿಗಳಿಗೆ ಊಟಕ್ಕೆ ಬಡಿಸುವುದು, ಜೊತೆಗೆ ಮಧ್ಯಾಹ್ನದ ಬುತ್ತಿಯನ್ನು ಕಟ್ಟಿ ಹೊಟ್ಟೆಚೀಲದಲ್ಲಿಡುವುದು (ಕುರಿ ಮೇಯಿಸಲು ಹೋಗುವಾಗ ತೆಗೆದುಕೊಂಡು ಹೋಗುವ ಬುತ್ತಿ ಮತ್ತು ಕುರಿ ಸಲಕರಣೆ ಚೀಲ) ಮಾಡುತ್ತಾರೆ. ಕುರಿಗಳು ಮೇವು ಮೇಯಲು ಅಡವಿಗೆ ಹೋದ ನಂತರ ಕುಟುಂಬದ ಮುಖ್ಯಸ್ಥನಿಗೆ ಊಟಕ್ಕೆ ನೀಡಿ ನಂತರ ತಾವು ಊಟ ಮಾಡುತ್ತಾರೆ. ಅಷ್ಟರೊಳಗೆ ಸಮಯ ಹೊಂದಾಣಿಕೆ ಮಾಡಿಕೊಂಡು ಮೊಸರನ್ನು ಕಡಿದು ಮಜ್ಜಿಗೆ ಮಾಡುತ್ತಾರೆ.

ಎರಡನೆಯ ಹಂತದಲ್ಲಿ ತಾನು ಊಟ ಮಾಡಿದ ನಂತರ ಬಲೆಯಲ್ಲಿರುವ ಮರಿಗಳಿಗೆ ನೀರು ಕುಡಿಸಿ ಮುಂಜಾನೆಯೇ ತಂದಿಟ್ಟ ಸೊಪ್ಪು ಅಥವಾ ಅಲಬನ್ನು ಮರಿಗಳಿಗೆ ನೀಡುತ್ತಾರೆ. ಗುಡಾರ ಹಾಕಿದ ಸ್ಥಳದಿಂದ ನೀರು ಬಹಳ ದೂರದಲ್ಲಿ ದೊರೆಯುವಂತಿದ್ದರೆ ಕುದುರೆಗಳನ್ನು ಹೊಡೆದುಕೊಂಡು ಹೋಗಿ ಅವುಗಳಿಗೆ ನೀರು ಕುಡಿಸಿ ಅವುಗಳ ಮೇಲೆಯೇ ತಾವು ಕುಡಿಯುವ ನೀರನ್ನು ಹೇರಿಕೊಂಡು ಬರುತ್ತಾರೆ. ತಮ್ಮ ತಲೆಯ ಮೇಲೊಂದು ಮತ್ತು ನಡುವಿನ ಮೇಲೊಂದು ನೀರಿನ ಕೊಡಗಳನ್ನಿಟ್ಟು ಕೊಂಡು ಬರುತ್ತಾರೆ. ಈ ದೃಶ್ಯವನ್ನು ನೋಡಿದಾಗ ಮಹಿಳೆಯರ ಶ್ರಮ ಮತ್ತು ಗಟ್ಟಿತನಕ್ಕೆ ಬೆಲೆಕಟ್ಟಲು ಸಾಧ್ಯವಿಲ್ಲ. ಇವರು ಬೇಸಿಗೆ ಕಾಲದಲ್ಲಿ ನೀರಿಗಾಗಿ ಬಹಳಷ್ಟು ತೊಂದರೆ ಅನುಭವಿಸುತ್ತಾರೆ.

ಗುಡಾರದ ಸಮೀಪ ನಾಲು, ಕುಣಿ, ಹಳ್ಳ ಇತ್ಯಾದಿಗಳಿದ್ದಾಗ ಕುದುರೆಗಳಿಗೆ ನೀರು ಕುಡಿಸುವ ಅವಶ್ಯಕತೆ ಬರುವುದಿಲ್ಲ. ಅಂತಹ ಸಮಯದಲ್ಲಿ ಕುದುರೆಗಳನ್ನು ಮೇಯಲು ಬಿಟ್ಟು, ಗುಡಾರ,

ಕುರಿಮರಿಗಳು, ಮಕ್ಕಳು, ಕುದುರೆಗಳ ಕಡೆ ಕಣ್ಣಾಡಿಸುತ್ತಾ, ಬಟ್ಟೆಯನ್ನು ಹಿಂಡಿಕೊಂಡು ತಲೆಯ ಮೇಲೆರೆಡು ತಪಾಲಿ ಮತ್ತು ಸೊಂಟದಲ್ಲಿ ಒಂದು ಕೊಡವನ್ನಿಟ್ಟುಕೊಂಡು ನೀರು ತರುತ್ತಾರೆ. ಅದರ ಹಿಂದಿನಿಂದ ಸಮಯ ಹೊಂದಾಣಿಕೆ ಮಾಡಿಕೊಂಡು ಅಡುಗೆ ಮಾಡಲು ಬೇಕಾಗುವ ಕಟ್ಟಿಗೆಯನ್ನು ಮುರಿದುಕೊಂಡು ಬರುತ್ತಾರೆ. ನಂತರ ಮಕ್ಕಳಿಗೆ ಉಟೋಪಚಾರ ಮಾಡಿಸುತ್ತ ಕಾಳುಕಾಡಿಗಳನ್ನು ಹಸನು ಮಾಡಿಕೊಳ್ಳುತ್ತಾರೆ. ಆ ಅವಧಿಯೊಳಗೆ ಸಂಬಂಧಿಕರು ಅಥವಾ ಪರಿಚಯಸ್ಥರು ಗುಡಾರಕ್ಕೆ ಬಂದರೆ ಕಂಬಳಿ ಹಾಸಿ ಕೂಡ್ರೀ 'ಪಾವಣರ್ರೀ', ಕೂಡ್ರಿ 'ಅಣ್ಣಾರ್ರೋ' ಎಂದು ಸಂಬೋಧಿಸಿ ಚಹ ಕಾಯಿಸಿ ಕೊಡುತ್ತಾರೆ. ಬಂದವರಲ್ಲಿ ಊಟ ಮಾಡುವವರಿದ್ದರೆ ಊಟಕ್ಕೆ ಬಡಿಸುತ್ತಾರೆ. ಸಾಯಂಕಾಲ ನಾಲ್ಕು ಗಂಟೆ ಸುಮಾರಿಗೆ ಬಲೆಯಲ್ಲಿರುವ ಮರಿಗಳನ್ನು ಮೇಯಲು ಬಿಟ್ಟು ಕುರಿ ಬರುವ ಸಮಯದಲ್ಲಿ ಕುರಿಮರಿ ಮತ್ತು ಕುದುರೆಗಳನ್ನು ಹೊಡೆದುಕೊಡು ಬರುತ್ತಾರೆ. ಅಷ್ಟು ಹೊತ್ತಿಗಾಗಲೇ ಕುರಿಗಳು ಬ್ಯಾ... ಬ್ಯಾ... ಎಂದು ಧ್ವನಿ ಮಾಡುತ್ತಾ ಗುಡಾರದ ಕಡೆಗೆ ಬರುತ್ತವೆ.

ಮೂರನೆಯ ಹಂತದಲ್ಲಿ ಕುರಿಗಳು ಗುಡಾರಕ್ಕೆ ಆಗಮಿಸಿದ ನಂತರ ಮರಿಗಳಿಗೆ ಹಾಲುಣಿಸಲು, ಹಾಲು ಹಿಂಡಲು ಪುರುಷರಿಗೆ ನೆರವಾಗುತ್ತಾರೆ. ದಣಿದು ಬಂದ ಕುರಿಗಾಯಿಗಳಿಗೆ ಚಹಾ ಕಾಯಿಸಿಕೊಟ್ಟು ಆ ರಾತ್ರಿಯ ಅಡುಗೆಯನ್ನು ತಯಾರಿಸುತ್ತಾರೆ. ನಂತರ ಎಲ್ಲಾರಿಗೂ ಊಟಕ್ಕೆ ನೀಡಿ ತಾವುಂಡು ಮಲಗುವರು.

ಕುಟುಂಬದ ಯಜಮಾನ ದೂರದ ಊರಿಗೆ ಹೋಗಿದ್ದಾಗ ಅಥವಾ ಗಂಡ ತೀರಿಕೊಂಡು ಮಕ್ಕಳು ಚಿಕ್ಕವರಿರುವ ಸಂದರ್ಭಗಳಲ್ಲಿ ಕುರಿ ಕಾಯುವುದರ ಜೊತೆಗೆ ಕುಟುಂಬದ ಒಳ ಮತ್ತು ಹೊರ ಜವಬ್ದಾರಿಯನ್ನು ನಿರ್ವಹಿಸುತ್ತಾರೆ. ಒಟ್ಟಾರೆಯಾಗಿ ಅಲೆಮಾರಿ ಕುರುಬರ ಮಹಿಳೆಯರಿಗೆ ವಿಶ್ರಾಂತಿ ಎಂಬುದು ಗೊತ್ತಿಲ್ಲ. ಆದರೂ ಇಷ್ಟೆಲ್ಲಾ ಕಾರ್ಯದೊತ್ತಡಗಳ ಮಧ್ಯೆಯೂ ಹಸನ್ಮುಖಿಯಾಗಿ ಗುಡಾರದ ಕಡೆ ಬರುವವರಿಗೆಲ್ಲಾ ಪ್ರೀತಿಯ ಅತಿಥ್ಯ ನೀಡುತ್ತಾರೆ.

ಆಧಾರ ಗ್ರಂಥಗಳು

೧. ರೇಣುಕಾರ್ಯ ಸಿ.ಕೆ., **ಅರ್ಥಶಾಸ್ತ್ರ**, ಪಿಯುಸಿ ದ್ವಿತೀಯ ವರ್ಷದ ಪಠ್ಯಪುಸ್ತಕ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

೨. ಎಚ್ಬಾರ್ಕೆ., **ಭಾರತದ ಆರ್ಥಿಕ ವ್ಯವಸ್ಥೆ**, ಸಪ್ನಬುಕ್‌ಹೌಸ್, ಬೆಂಗಳೂರು, ೨೦೦೩

೩. ರಾಮರಾವ್ ಜ್ಯೋತಿ., ***ಆಡು ಮತ್ತು ಕುರಿಸಾಕಣೆ***, ಸಮಾಜ ಪುಸ್ತಕಾಲಯ, ಧಾರವಾಡ, ೧೯೮೯

೪. ಒಡೆಯರ ಡಿ. ಹೆಗ್ಗಡೆ., ***ಹಾಲುಮತ ಕುರುಬ ಜನಾಂಗದ ಇತಿಹಾಸ***, ಅಖಿಲಾ ಪಬ್ಲಿಕೇಷನ್ಸ್, ಮೈಸೂರು, ೨೦೦೫

೫. ಶಿವಾನಂದ ಗುಬ್ಬಣ್ಣವರ., ***ಕರ್ನಾಟಕದ ಕುರುಬರು***, ಅಕ್ಷಯ ಪ್ರಕಾಶನ, ಧಾರವಾಡ, ೧೯೯೩

೬. ಗೌಡರ್ ವೈ.ಎನ್., ಭಾಷಣ: 'ಕುರಿಗಾರರ ಸಮಾವೇಶ', ಕುರುಗೋಡು, ಬಳ್ಳಾರಿ ಜಿಲ್ಲೆ, ದಿನಾಂಕ ೨೩.೭.೨೦೦೫

ಅಧ್ಯಾಯ ೫

ಅಲೆಮಾರಿ ಕುರುಬರ ಆರ್ಥಿಕ ಜೀವನ

ಅಲೆಮಾರಿ ಕುರುಬರ ಆರ್ಥಿಕ ಜೀವನ

ಮಾನವ ಆರಂಭದ ದಿನಗಳಲ್ಲಿ ಪ್ರಾಣಿ ಪಕ್ಷಿಗಳನ್ನು ಬೇಟೆಯಾಡಿ ಜೀವನ ಸಾಗಿಸುವುದರ ಜೊತೆಗೆ ಭೂಮಿಯಲ್ಲಿ ದೊರೆಯುವ ಗಡ್ಡೆ-ಗೆಣಸು, ಹಣ್ಣು-ಹಂಪಲುಗಳನ್ನು ತಿಂದು ಜೀವಿಸುತ್ತಿದ್ದ. ಅವನ ಬೌದ್ಧಿಕಮಟ್ಟ ಬೆಳೆದಂತೆಲ್ಲಾ ಬೇಟೆಯಾಡುವುದನ್ನು ಬಿಟ್ಟು ಸಾಧು ಹಾಗೂ ಸೌಮ್ಯ ಪ್ರಾಣಿಗಳನ್ನು ಪಳಗಿಸಿ, ಸಾಕಿ-ಸಲುಹಿ ಅವುಗಳಿಂದ ದೊರೆಯುವ ಉತ್ಪನ್ನಗಳಿಂದ ಜೀವಿಸತೊಡಗಿದ. ನಂತರ ಭೂಮಿಯ ಮಹತ್ವವನ್ನು ಅರಿತ ಮಾನವ, ಉಳುಮೆ ಮಾಡಿ ಆಹಾರ ಧಾನ್ಯಗಳನ್ನು ಬೆಳೆಯುವುದನ್ನು ಕಲಿತ. ಅವನ ಬೌದ್ಧಿಕಮಟ್ಟ ಮತ್ತಷ್ಟು ವಿಕಾಸವಾದಂತೆಲ್ಲಾ ಕೈಗಾರಿಕೆ ಮತ್ತು ಸೇವಾ ವಲಯಗಳಲ್ಲಿ ತನ್ನನ್ನು ತೊಡಗಿಸಿಕೊಂಡು ಮೂಲಭೂತ ಸೌಕರ್ಯಗಳಾದ ಸಾರಿಗೆ-ಸಂಪರ್ಕ, ಶಿಕ್ಷಣ, ಆರೋಗ್ಯ ಮತ್ತು ನೈರ್ಮಲ್ಯ, ವಸತಿ, ಕುಡಿಯುವ ನೀರು ಇತ್ಯಾದಿ ಸೌಲಭ್ಯಗಳನ್ನು ಪಡೆದು ನಾಗರಿಕನಾಗಿ ಜೀವನ ಸಾಗಿಸ ತೊಡಗಿದ್ದಾನೆ. ಆರಂಭದ ದಿನಗಳಿಂದ ಆಧುನಿಕವರೆಗಿನ ದಿನಗಳನ್ನು ಆಧಾರವಾಗಿಟ್ಟುಕೊಂಡು ಮಾನವನ ಜೀವನ ಸಾಗಿಬಂದಿರುವ ಕ್ರಮವನ್ನು ಕೃಷಿ (ಪ್ರಾಥಮಿಕ) ವಲಯ, ಕೈಗಾರಿಕಾ (ದ್ವಿತೀಯ) ವಲಯ ಮತ್ತು ಸೇವಾ (ತೃತೀಯ) ವಲಯಗಳಾಗಿ ವಿಂಗಡಿಸಲಾಗುವುದು. ಈ ಮೂರು ವಲಯಗಳನ್ನು ಗಣನೆಗೆ ತೆಗೆದುಕೊಂಡಾಗ ಯಾವ ರಾಷ್ಟ್ರಗಳು ಕೈಗಾರಿಕೆ ಮತ್ತು ಸೇವಾ ವಲಯದಲ್ಲಿ ಹೆಚ್ಚು ತೊಡಗಿಸಿಕೊಂಡಿವಿಯೋ ಆ ರಾಷ್ಟ್ರಗಳ ರಾಷ್ಟ್ರೀಯ ಉತ್ಪನ್ನ ಮತ್ತು ನೈಜ ತಲಾ ಆದಾಯ ಅಧಿಕವಿದ್ದು ಮುಂದುವರೆದ ಆರ್ಥಿಕತೆ ಎನಿಸಿಕೊಂಡಿವೆ. ಬಹಳಷ್ಟು ಜನರು ಪ್ರಾಥಮಿಕ ವಲಯವಾದ ಕೃಷಿ ಹಾಗೂ ಪಸುಪಾಲನಾ ಚಟುವಟಿಕೆಗಳಲ್ಲಿ ನಿರತರಾಗಿದ್ದರೆ. ಆ ದೇಶದ ರಾಷ್ಟ್ರೀಯ ವರಮಾನ ಮತ್ತು ನೈಜ ತಲಾ ವರಮಾನ ಕಡಿಮೆ ಇದ್ದು ಹಿಂದುಳಿದ ಆರ್ಥಿಕತೆಗಳೆನಿಸಿಕೊಂಡಿವೆ. "೨೦೦೧ರ ಅಂಕಿ-ಸಂಖ್ಯೆಗಳ ಪ್ರಕಾರ ಭಾರತದ ಆರ್ಥಿಕತೆಯ ವಿವಿಧ ವೃತ್ತಿಗಳಲ್ಲಿ ತೊಡಗಿಸಿಕೊಂಡವರ ಪ್ರಮಾಣವು ಪ್ರಾಥಮಿಕ ವಲಯದಲ್ಲಿ ಶೇ. ೬೩, ದ್ವಿತೀಯ ವಲಯದಲ್ಲಿ ಶೇ. ೧೪, ತೃತೀಯ ವಲಯದಲ್ಲಿ ಶೇ. ೨೩ರಷ್ಟು ಇದ್ದಾರೆ"

(ಎಚ್ಚಾರ್ಕೆ:೨೦೦೩:೨೫). ಈ ಹಿನ್ನೆಲೆಯಲ್ಲಿ ನೋಡಿದಾಗ ಭಾರತವು ಅನಭಿವೃದ್ಧಿ ಅಥವಾ ಹಿಂದುಳಿದ ಆರ್ಥಿಕತೆಯೆಂದು ತಿಳಿದುಬರುತ್ತದೆ.

ಪ್ರಾಥಮಿಕ ವಲಯವು ಭೂ ಸಾಗುವಳಿದಾರರು, ಕೃಷಿ-ಕಾರ್ಮಿಕರು, ಪಶುಸಂಗೋಪನೆ, ಅರಣ್ಯಗಾರಿಕೆ, ಮೀನುಗಾರಿಕೆ, ಬೇಟೆಗಾರಿಕೆ ಇತ್ಯಾದಿ ವೃತ್ತಿಗಳಲ್ಲಿ ನಿರತರಾದ ಜನರನ್ನು ಒಳಗೊಂಡಿದೆ. ಸ್ವಾತಂತ್ರ್ಯ ನಂತರದ ದಿನಗಳಲ್ಲಿ ಈ ವಲಯದಲ್ಲಿ ತೊಡಗಿಸಿಕೊಂಡವರ ಶೇಕಡವಾರು ಪ್ರಮಾಣ ಇಳಿಮುಖವಾಗುತ್ತಿದೆ. ಅದನ್ನು ಈ ಕೆಳಗಿನ ಕೋಷ್ಟಕದಿಂದ ಗಮನಿಸಿಬಹುದು.

ಕೋಷ್ಟಕ ೫.೧ ಕೃಷಿವಲಯದಲ್ಲಿಯ ವೃತ್ತಿಗನುಸಾರ ಶೇಕಡವಾರು ಹಂಚಿಕೆ

ವರ್ಷಗಳು	೧೯೫೧	೧೯೬೧	೧೯೭೧	೧೯೮೧	೧೯೯೧	೨೦೦೧
ಕೃಷಿವಲಯ [೧ + ೨ + ೩]	೭೨.೧	೭೧.೮	೭೨.೧	೬೮.೮	೬೬.೮	೬೩
೧. ಭೂ ಸಾಗುವಳಿದಾರರು	೫೦.೦	೫೨.೮	೪೩.೪	೪೧.೬	೩೮.೪	--
೨. ಕೃಷಿಕಾರ್ಮಿಕರು	೧೯.೭	೧೬.೭	೨೬.೩	೨೪.೯	೨೬.೫	--
೩. ಪಶುಪಾಲನೆ, ಅರಣ್ಯಗಾರಿಕೆ, ಮೀನುಗಾರಿಕೆ, ಬೇಟೆಗಾರಿಕೆ, ತೋಟಗಾರಿಕೆ ಇತ್ಯಾದಿ	೨.೪	೨.೩	೨.೪	೨.೩	೧.೯	--

(Ruddar-Dutt & KPM Sundharam:2001:78)

ಪಶುಪಾಲನೆ, ಅರಣ್ಯಗಾರಿಕೆ ಮೀನುಗಾರಿಕೆ ಇತ್ಯಾದಿ ಆರ್ಥಿಕ ಚಟುವಟಿಕೆಯಲ್ಲಿ ತೊಡಗಿಸಿಕೊಂಡ ಅಥವಾ ಅವಲಂಬಿಸಿದ ಜನರ ಪ್ರಮಾಣವು ೧೯೫೧ರಲ್ಲಿ ಶೇ. ೨.೪ ರಷ್ಟಿದ್ದರೆ, ೨೦೦೧ರ ವೇಳೆಗೆ ಶೇ. ೧.೭ಕ್ಕೆ ಇಳಿದಿದೆ ಎಂದು ಮೇಲಿನ ಕೋಷ್ಟಕದಿಂದ ತಿಳಿದುಬರುತ್ತದೆ. ಈ ವೃತ್ತಿಗಳಲ್ಲಿ ತೊಡಗಿಸಿಕೊಂಡ ಜನರು ಹೆಚ್ಚಾಗಿ ಅಲೆಮಾರಿ ಹಾಗೂ ಅರೆ-ಅಲೆಮಾರಿ ಸಮುದಾಯಗಳಿದ್ದು ಅನಾದಿಕಾಲದಿಂದಲೂ ಜೀವನಾಧಾರ ಉದ್ಯೋಗವನ್ನಾಗಿ ಮುಂದುವರಿಸಿಕೊಂಡು ಬಂದಿದ್ದಾರೆ. ಇವುಗಳಲ್ಲಿ ಪಶುಪಾಲನೆಯೂ ವಿಶೇಷವಾಗಿ ಕುರಿ ಸಂಗೋಪನೆಯು ಪ್ರಮುಖ ಉದ್ಯೋಗವಾಗಿದೆ. ಕಾಡು ಪ್ರಾಣಿಗಳನ್ನು ಪಳಗಿಸಿದ ಇತಿಹಾಸದಲ್ಲಿ ಕುರಿ ಮೊದಲ ಪ್ರಾಣಿಯಾಗಿದೆ. ಈ ಪ್ರಾಣಿಯನ್ನು ಅನಾದಿಕಾಲದಿಂದ ಸಾಕಿ-ಸಲುಹಿ ಅದರ ವಂಶಾವಳಿಯನ್ನು ಅಭಿವೃದ್ಧಿಪಡಿಸಿ ತಾನು ಬದುಕುವುದರ ಜೊತೆಗೆ ಅದರ ಉಪ-ಉತ್ಪನ್ನಗಳಾದ ಉಣ್ಣೆ, ಚರ್ಮ ಮತ್ತು ಮಾಂಸಗಳಿಂದ ಇತರರು ಬದುಕಲು ನೆರವಾಗಿದ್ದಾರೆ. ಕುರಿಗಳ ಸಂಗೋಪನೆ ಮಾಡುತ್ತಾ ಹಣದ ಅವಶ್ಯಕತೆ ಇದ್ದಾಗ ಮಾರಾಟ ಮಾಡಿ ತನ್ನ ಕೌಟುಂಬಿಕ ಖರ್ಚು-ವೆಚ್ಚಗಳನ್ನು ನಿರ್ವಹಿಸುವುದನ್ನು ಕಾಣುತ್ತೇವೆ.

ಕೋಷ್ಟಕ ೫.೨. ಕಸುಬುಗಳ ಹಂಚಿಕೆ

ಕಸುಬುಗಳು	ತಾಲೂಕುಗಳು																				ಒಟ್ಟು
	ಅಥಣಿ		ಖಾನಾಪುರ		ಗೋಕಾಕ್		ಚಿಕ್ಕೋಡಿ		ಬೈಲಹೊಂಗಲ		ಬೆಳಗಾವಿ		ರಾಮದುರ್ಗ		ರಾಯಬಾಗ್		ಸವದತ್ತಿ		ಹುಕ್ಕೇರಿ		
	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	
ಕುರಿಗಾರಿಕೆ	೨	೨	೧೬	೧೫	೭	೭	೫೪೯	೪೮೯	-	-	೪೫	೪೩	೩	೨	೭	೮	೨	೨	೬	೭	೧೨೧೨
ಕೃಷಿ	-	-	೨	೨	-	-	೨೬	೨೩	-	-	೩	೩	-	-	೧	೧	-	-	-	-	೬೧
ಕೃಷಿಕೂಲಿ	-	-	-	-	-	-	೧೨	೧೫	-	-	೨೦	೧೧	-	-	-	-	-	-	-	-	೫೭
ಸಣ್ಣ ವ್ಯಾಪಾರ	-	-	-	-	-	-	೪	೧	-	-	-	-	-	-	-	-	-	-	-	-	೦೫
ಸರ್ಕಾರಿ	-	-	-	-	-	-	೩	೧	-	-	೪	೨	-	-	-	-	-	-	-	-	೧೦
ಇತರೆ	-	-	-	-	-	-	೩	-	-	-	೧	೧	-	-	-	-	-	-	-	-	೦೫
ಒಟ್ಟು	೨	೨	೧೮	೧೭	೭	೭	೫೯೭	೫೨೯	-	-	೭೩	೬೦	೩	೨	೮	೯	೨	೨	೬	೭	೧೩೫೦

ಬಳ್ಳಾರಿ ಜಿಲ್ಲೆಯ ಭೂಪ್ರದೇಶದಲ್ಲಿ ಅಲೆದಾಡುತ್ತಿರುವ ಅಲಮಾರಿ ಕುರುಬ ಕುಟುಂಬಗಳ ಸದಸ್ಯರು ವಿವಿಧ ಕಸುಬುಗಳಲ್ಲಿ ತೊಡಗಿಸಿಕೊಂಡಿದ್ದನ್ನು ಕೋಷ್ಟಕ ೫.೨ ರಲ್ಲಿ ತಿಳಿಸಲಾಗಿದೆ. ಕ್ಷೇತ್ರ ಕಾರ್ಯದ ಅಂಕಿ-ಅಂಶಗಳ ಪ್ರಕಾರ ಮೂಲ ವೃತ್ತಿಯಾದ ಕುರಿಸಂಗೋಪನೆಯಲ್ಲಿ ಬಹುತೇಕ ಜನರು ಅಂದರೆ ಶೇ. ೮೯.೭೭ರಷ್ಟು ತೊಡಗಿಸಿಕೊಂಡಿದ್ದಾರೆ. ಇನ್ನುಳಿದವರು ಶೇ. ೪.೫೧ ಕೃಷಿ, ಶೇ. ೪.೨೨ರಷ್ಟು ಕೃಷಿ ಕೂಲಿಯಲ್ಲಿ, ಶೇ. ೦.೩೭ ಸಣ್ಣವ್ಯಾಪಾರದಲ್ಲಿ ಹಾಗೂ ಶೇ. ೦.೭೪ರಷ್ಟು ಸರ್ಕಾರಿ ನೌಕರ ಹಾಗೂ ಶೇ. ೦.೩೭ರಷ್ಟು ಇತರೆ ಉದ್ಯೋಗಗಳಲ್ಲಿ ಕಾರ್ಯಪ್ರವೃತ್ತರಾಗಿರುವುದು ಕೋಷ್ಟಕ ೫.೨ ರಲ್ಲಿ ಕಂಡುಬರುತ್ತದೆ. ಒಟ್ಟಾರೆಯಾಗಿ ಇದರಿಂದ ಕುರಿಸಂಗೋಪನೆಯೇ ಇವರ ಮೂಲ ಉದ್ಯೋಗವಾಗಿರುವುದು ಹಾಗೂ ಜೀವನೋಪಾಯ ಮಾರ್ಗವಾಗಿದೆ ಎಂದು ತಿಳಿದು ಬರುತ್ತದೆ.

ಪಶುಸಂಪತ್ತು : ಅಲೆಮಾರಿ ಕುರುಬರ ಆರ್ಥಿಕತೆ ಅವರು ಹೊಂದಿರುವ ಕುರಿ-ಮೇಕೆಗಳ ಮೇಲೆ ಅವಲಂಬಿತವಾಗಿರುತ್ತದೆ. ಇವರು ಸಾಮಾನ್ಯವಾಗಿ ಕನಿಷ್ಠ ೨೫-೩೦ ರಿಂದ ಗರಿಷ್ಠ ೧೦೦೦ ಕುರಿಗಳನ್ನು ಹೊಂದಿರುತ್ತಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಸಾವಿರ ಕುರಿಗಳಿರುವ ಕುಟುಂಬಗಳ ಸಂಖ್ಯೆ ತೀರಾ ವಿರಳವಾಗಿದೆ. ಕುರಿಗಳಿಗೆ ಮೇವು-ನೀರಿನ ಕೊರತೆ, ರೋಗ-ರುಜಿನಗಳು ಹೆಚ್ಚಳ ವಾಗಿರುವುದು, ಶ್ರಮಿಕರ (ಆಳು ಮಕ್ಕಳ) ಸಮಸ್ಯೆ ಇತ್ಯಾದಿ ಅಂಶಗಳಿಂದ ಸಾವಿರ ಕುರಿಗಳನ್ನು ಸಾಕಣೆ ಮಾಡಲು ಯಾರು ಬಯಸುತ್ತಿಲ್ಲ.

ಕೋಷ್ಟಕ ೫.೩ ಅಲೆಮಾರಿ ಕುರುಬರ ಪಶುಸಂಪತ್ತು

ಕ್ರ.ಸಂ.	ತಾಲ್ಲೂಕುಗಳು	ಪಶುಸಂಪತ್ತು				
		ಕುರಿ	ಮೇಕೆ	ಕುದುರೆ	ದನಗಳು	ಒಟ್ಟು
೧	ಅಥಣಿ	೬೫	೦೮	೦೨	--	೭೫
೨	ಖಾನಾಪುರ	೧೮೦೩	೧೮೭	೪೫	--	೨೦೩೫
೩	ಗೋಕಾಕ್	೫೨೮	೮೨	೨೦	--	೬೩೦
೪	ಚಿಕ್ಕೋಡಿ	೫೧೭೮೧	೬೩೦೫	೧೩೩೯	೧೦	೫೯೪೩೫
೫	ಬೈಲಹೊಂಗಲ	--	--	--	--	--
೬	ಬೆಳಗಾವಿ	೩೩೪೪	೪೫	೧೦೨	--	೩೪೯೧
೭	ರಾಮದುರ್ಗ	೩೫೩	೩೧	೦೮	--	೩೯೨
೮	ರಾಯಬಾಗ್	೭೮೦	೯೩	೧೯	--	೮೯೨
೯	ಸವದತ್ತಿ	೧೮೫	೨೦	೦೫	--	೨೧೦
೧೦	ಹುಕ್ಕೇರಿ	೫೭೩	೭೧	೨೨	--	೬೬೬
ಒಟ್ಟು		೫೯೪೧೨	೬೮೪೨	೧೫೫೨	೧೦	೬೭೮೧೬

ಪ್ರಸ್ತುತವಾಗಿ ತಮ್ಮ ಕುಟುಂಬದ ನಿರ್ವಹಣೆಗೆ ಎಷ್ಟು ಕುರಿಗಳ ಅವಶ್ಯಕತೆ ಇದೆಯೋ ಅಷ್ಟನ್ನು ಮಾತ್ರ ಸಾಕಣೆ ಮಾಡುತ್ತಾರೆ. ಹಾಗೆಯೇ ಗುಡಾರ ಬದಲಾಯಿಸಿದಂತೆಲ್ಲ ಕೌಟುಂಬಿಕ ಸಾಮಾನುಗಳನ್ನು ಹೊತ್ತೊಯ್ಯಲು ಕುದುರೆಗಳನ್ನು ಸಾಕುತ್ತಾರೆ. ಇದು ಕುಟುಂಬದ ಗಾತ್ರವನ್ನು ಅವಲಂಬಿಸಿರುತ್ತದೆ. ಸಾಮಾನ್ಯವಾಗಿ ೨-೩ ರಿಂದ ೧೦-೧೫ ರವರೆಗೆ ಕುದುರೆಗಳನ್ನು ಸಾಕುವುದನ್ನು ಕಾಣುತ್ತೇವೆ.

ಕ್ಷೇತ್ರಕಾರ್ಯದಲ್ಲಿ ದೊರೆತ ಮಾಹಿತಿಯನ್ನು ಅನುಸರಿಸಿ ಕೋಷ್ಟಕ ೫.೩ನ್ನು ಸಿದ್ಧಪಡಿಸಲಾಗಿದೆ. ಅಲೆಮಾರಿ ಕುರುಬರು ಹೊಂದಿರುವ ಒಟ್ಟು ಪಶುಸಂಪತ್ತು ೬೭,೮೧೬ ಅದರಲ್ಲಿ ಕುರಿಗಳು ೫೯,೪೧೨ (ಶೇ. ೮೭.೬೦) ಮೇಕೆಗಳು ೬,೮೪೨ (ಶೇ. ೧೦.೦೮) ಕುದುರೆಗಳು ೧೫೫೨ (ಶೇ. ೨.೨೮) ಹಾಗೂ ದನಗಳು ೧೦ (ಶೇ. ೦.೦೧) ಇವೆ. ಪಶುಸಂಪತ್ತನ್ನು ತಾಲೂಕುವಾರು ಗಣನೆಗೆ ತೆಗೆದುಕೊಂಡಾಗ ಚಿಕ್ಕೋಡಿ ತಾಲ್ಲೂಕು ಪ್ರಥಮ ಸ್ಥಾನದಲ್ಲಿದೆ. ಉಳಿದ ತಾಲೂಕುಗಳು ನಂತರದ ಸ್ಥಾನಗಳಲ್ಲಿವೆ. ಚಿಕ್ಕೋಡಿ ೫೯,೪೩೫ (ಶೇ. ೮೭.೬೪) ಬೆಳಗಾಂ ೩,೪೯೧ (ಶೇ. ೫.೪) ಖಾನಾಪುರ ೨,೦೩೫ (ಶೇ. ೩.೦) ರಾಯಬಾಗ್ ೮೯೨ (ಶೇ. ೧.೩೧) ಹುಕ್ಕೇರಿ ೬೬೬ (ಶೇ. ೦.೯೮) ಗೋಕಾಕ್ ೬೩೦ (ಶೇ. ೦.೯೨) ರಾಮದುರ್ಗ ೩೯೨ (ಶೇ. ೦.೫೭) ಹೀಗೆ ಇತರೆ ತಾಲೂಕುಗಳು ಪಶುಸಂಪತ್ತನ್ನು ಹೊಂದಿವೆ. ಇದರಿಂದ ಚಿಕ್ಕೋಡಿ ತಾಲೂಕಿನವರು ಹೆಚ್ಚು ಪಶುಸಂಪತ್ತನ್ನು ಕುರಿ ಸಂಗೋಪನೆಯಲ್ಲಿ ತೊಡಗಿಸಿಕೊಂಡು ಅಲೆಮಾರಿಗಳಾಗಿ ವಲಸೆ ಬಂದಿರುವುದು ಕಂಡುಬರುತ್ತದೆ.

೫.೧ ಆದಾಯದ ಮೂಲಗಳು

ಮಾನವನ ಅಮಿತ ಬಯಕೆಗಳನ್ನು ಜೀವನಾವಶ್ಯಕ, ಹಿತದಾಯಕ ಮತ್ತು ಐಷಾರಾಮಿ ಬಯಕೆಗಳೆಂದು ವಿಂಗಡಿಸಲಾಗಿದೆ. ಎಲ್ಲಾ ಬಯಕೆಗಳನ್ನು ತೃಪ್ತಿಪಡಿಸುವ ಸಾಧಾನ-ಸಂಪನ್ಮೂಲಗಳು ಮಾತ್ರ ಕೊರತೆಯಲ್ಲಿವೆ. ಅಲೆಮಾರಿ ಕುರುಬರು ತಮ್ಮ ಜೀವನಾವಶ್ಯಕ ಬಯಕೆಗಳನ್ನು ತೃಪ್ತಿ ಪಡಿಸಲು ಕುರಿ-ಮೇಕೆಗಳನ್ನೇ ಅವಲಂಬಿಸಿದ್ದಾರೆ. ಆಹಾರ, ಬಟ್ಟೆ, ವಸತಿ (ಗುಡಾರ) ಪಡೆಯಲು ಮತ್ತು ಕುರಿಗಳ ಔಷಧ, ಹಬ್ಬ-ಹರಿದಿನಗಳು, ಜಾತ್ರೆ, ಮದುವೆ ಇತ್ಯಾದಿಗಳಿಗಾಗಿ ಖರ್ಚು ಮಾಡುವ ಹಣವನ್ನು ಕುರಿ-ಮೇಕೆ, ಹಾಗೂ ಮರಿಗಳ ಮಾರಾಟದಿಂದಲೆ ಈಡೇರಿಸಿಕೊಳ್ಳಬೇಕಿದೆ. ಕುರಿ-ಮೇಕೆಗಳಿಂದ ಬರುವ ಆದಾಯದ ಪ್ರಮಾಣವು ಸ್ಥಿರವಾಗಿರದೆ ಹಲವಾರು ಅಂಶಗಳಿಂದ ನಿರ್ಧಾರ ವಾಗುತ್ತದೆ. ಅಂತಹ ಅಂಶಗಳೆಂದರೆ ಕುರಿಗಳಿಗೆ ಬರುವ ರೋಗ-ರುಜಿನಗಳು, ಮೇವು-ನೀರು ದೊರೆಯುವಿಕೆ, ಕುರಿಗಳು ಮಾರುಕಟ್ಟೆ ಮೌಲ್ಯ ಹಾಗೂ ಉಣ್ಣೆಯ ಬೆಲೆ ಇತ್ಯಾದಿ. ಆರ್ಥಿಕತೆಯಲ್ಲಿ ಒಳ್ಳೆಯ ವಾತವರಣವಿದ್ದು ಕುರಿಗಳಿಗೆ ಬರುವ ರೋಗ-ರುಜಿನಗಳ ಸಂಖ್ಯೆ ಕಡಿಮೆ ಇದ್ದು ಸಾಕಷ್ಟು


ಮೇವು-ನೀರು ದೊರೆತಾಗ, ಅವರ ವಾರ್ಷಿಕ ಆದಾಯದ ಪ್ರಮಾಣ ಸುಧಾರಿಸುತ್ತದೆ. ಇದಕ್ಕೆ ವಿರುದ್ಧವಾದ ಪರಿಸ್ಥಿತಿ ನಿರ್ಮಾಣವಾದರೇ ಅಲೆಮಾರಿ ಕುರುಬರು ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಕೌಟುಂಬಿಕ ಖರ್ಚು-ವೆಚ್ಚಗಳನ್ನು ಸರಿದೂಗಿಸಲು ಸಾಲ ಮಾಡಿಕೊಂಡು ಕಷ್ಟದ ದಿನಗಳನ್ನು ಕಳೆಯಬೇಕಾಗುತ್ತದೆ. ಕುರಿ-ಮೇಕೆಗಳು ಜೀವನದ ಆಧಾರ ಸ್ತಂಭವಾಗಿದ್ದು, ಒಮ್ಮೊಮ್ಮೆ ರೋಗ-ರುಜಿನಗಳಿಂದ ಅಲೆಮಾರಿ ಕುರುಬನ ಕುರಿ ಹಿಂಡು ಇಡಿಯಾಗಿ ಬಲಿಯಾಗುತ್ತದೆ. ಅಂತಹ ಸ್ಥಿತಿಯಲ್ಲಿ ಅವನ ಬದುಕು ದುಸ್ತರವಾಗುತ್ತದೆ. ಅವನ ಮಾಸಿಕ ಅಥವಾ ವಾರ್ಷಿಕ ಆದಾಯದ ಪ್ರಮಾಣವು ಸ್ಥಿರವಾಗಿರದೆ ಜೀವನದ ಖರ್ಚು-ವೆಚ್ಚಗಳು ಮಾತ್ರ ದಿನದಿಂದ ದಿನಕ್ಕೆ ಏರಿಕೆಯಾಗುತ್ತ ಹೋಗುವುದನ್ನು ಗಮನಿಸಬಹುದು. ಒಟ್ಟಾರೆಯಾಗಿ ಅವನ ಕೌಟುಂಬಿಕ ಜೀವನ ನಿರ್ವಹಣೆಯು ಕುರಿಗಳ ಅಭಿವೃದ್ಧಿ ಅಥವಾ ಅನಭಿವೃದ್ಧಿಯಿಂದ ನಿರ್ಧರವಾಗುತ್ತದೆ.

೫.೧.೧ ಮರಿಗಳು ; ಕುರಿ - ಮೇಕೆಗಳ ಮಾರಾಟ

ಮಾರುಕಟ್ಟೆ ಎನ್ನುವುದು ಗ್ರಾಹಕರು ಹಾಗೂ ಮಾರಾಟಗಾರರು ಭೇಟಿಯಾಗುವ ಸ್ಥಳವಾಗಿದೆ. ಅಲೆಮಾರಿ ಕುರುಬರು ಸಾಮಾನ್ಯವಾಗಿ ತಮ್ಮ ಉತ್ಪನ್ನಗಳನ್ನು ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡದೇ ಮಧ್ಯಸ್ಥಗಾರರಿಗೆ ಅಂದರೆ ಕುರಿವ್ಯಾಪಾರಸ್ಥರಿಗೆ (ಕಟುಕರಿಗೆ) ಗುಡಾರ ಹೂಡಿದ ಸ್ಥಳದಲ್ಲೆ ಮಾರಾಟ ಮಾಡುವುದು ಕಂಡುಬರುತ್ತದೆ. ವ್ಯಾಪಾರಸ್ಥರು ಕುರಿ-ಮೇಕೆಗಳನ್ನು ಕೊಳ್ಳುವಾಗ ತೂಕ ಮಾಡದೆ ಅವುಗಳ ಗಾತ್ರ ಮತ್ತು ವಯಸ್ಸನ್ನು ಆಧಾರವಾಗಿಟ್ಟುಕೊಂಡು ಬೆಲೆ ನಿರ್ಧರಿಸುತ್ತಾರೆ. ಇದರಿಂದ ಮರಿಗಳಿಗೆ, ವಯಸ್ಕ ಕುರಿಗಳು ಮತ್ತು ವಯಸ್ಸಾದ ಕುರಿಗಳಿಗೆ ಭಿನ್ನವಾದ ಬೆಲೆಗಳು ನಿರ್ಧಾರವಾಗುತ್ತವೆ. ಆದರೆ ಅವುಗಳ ಮಾಂಸ ಮಾರಾಟದಲ್ಲಿ ಮಾತ್ರ ಒಂದೇ ಬೆಲೆ ನಿಗದಿಯಾಗುತ್ತಿರುವುದನ್ನು ಕಾಣಬಹುದಾಗಿದೆ. ಕುರಿಗಳನ್ನು ಮಾರಾಟ ಮಾಡುವ ಕುರಿಗಾರರು ಹಾಗೂ ಗ್ರಾಹಕರು ಕುರಿ ವ್ಯಾಪಾರಸ್ಥರಿಂದ ಶೋಷಣೆಗೆ ಒಳಗಾಗುವುದು ದೈನಂದಿನ ದಿನಗಳಲ್ಲಿ ಕಂಡು ಬರುತ್ತದೆ.

ಕುರಿ-ಮೇಕೆಗಳು ವಿವಿಧ ಹಂತಗಳಲ್ಲಿ ಮಾರಾಟವಾಗಿ ಗ್ರಾಹಕರಿಗೆ ಮಾಂಸ ಸಿಗುವ ವ್ಯವಸ್ಥೆಯಾಗುತ್ತದೆ. ಮಾರಾಟದ ಮೊದಲನೆ ಹಂತ ಕುರಿಗಾರರು ಹಾಗೂ ಕೊನೆಯ ಹಂತ ಗ್ರಾಹಕರು ಆಗಿದ್ದಾರೆ. ಇವರಿಬ್ಬರ ನಡುವೆ ಕುರಿ-ಮೇಕೆಗಳ ಮಾರುಕಟ್ಟೆ ಯಾವ ರೀತಿಯ ಕಾರ್ಯ ನಿರ್ವಹಿಸುತ್ತದೆ ಎಂಬುದನ್ನು ಈ ಮುಂದಿನಂತೆ ಸಂಕ್ಷಿಪ್ತವಾಗಿ ತಿಳಿಯಬಹುದು.

ಮಾರಾಟದ ಹಂತಗಳು :-



ಆಧಾರ: Devendra and G.B. Mclercy., ***Goat and Sheep Production in The Tropics,*** *New Delhi, 1982, P.220*

ಕುರಿಗಾರರು ತಮ್ಮ ಉತ್ಪನ್ನಗಳಾದ ಕುರಿ-ಮೇಕೆಗಳನ್ನು ದಲ್ಲಾಳಿಗಳಿಗೆ ಮತ್ತು ಸ್ಥಳೀಯ ಮಾರುಕಟ್ಟೆಗೆ ಮಾರಾಟ ಮಾಡುತ್ತಾರೆ. ಈ ಹಂತದಿಂದ ಕುರಿ-ಮೇಕೆಗಳು ಮೂರು ಮಾರ್ಗಗಳ ಮೂಲಕ ವಿವಿಧ ವ್ಯಾಪಾರಸ್ಥರಿಗೆ ಮಾರಾಟವಾಗುತ್ತವೆ. ಬೃಹತ್ ಪ್ರಮಾಣದಲ್ಲಿ ಕೊಂಡುಕೊಳ್ಳುವ ಸಗಟು ವ್ಯಾಪಾರಸ್ಥರು, ಸೈನಿಕರಿಗೆ ಪೂರೈಕೆ ಮಾಡುವ ವ್ಯಾಪಾರಸ್ಥರು ಮತ್ತು ಕುರಿ-ಮೇಕೆಗಳನ್ನು ವಧೆ ಮಾಡಿ ಮಾಂಸ ಮಾರಾಟ ಮಾಡುವ ಕಸಾಯಿಖಾನೆಗಳು (Slaughter houses) ಹಾಗೂ ಪಟ್ಟಣ ಮತ್ತು ನಗರ ಮಾರುಕಟ್ಟೆ ಮಾಂಸ ವ್ಯಾಪಾರಿಗಳಿಗೆ ಮಾರಾಟವಾಗುತ್ತವೆ. ಈ ಹಂತದ ನಂತರ ಸಗಟು ವ್ಯಾಪಾರಸ್ಥರು ಮಾಂಸ ಸಂಸ್ಕರಣ ಮಾಡುವ ಉದ್ದಿಮೆಗಳಿಗೆ ಸಾಗಿಸುತ್ತಾರೆ. ಸಂಸ್ಕರಣೆಯಾದ ಮಾಂಸದ ಕೆಲವೊಂದು ಭಾಗ ವಿದೇಶಗಳಿಗೆ ರಫ್ತಾಗುತ್ತದೆ. ಇನ್ನುಳಿದ ಭಾಗ ದೇಶೀಯ ಗ್ರಾಹಕರಿಗೆ ಮಾರಾಟ ಮಾಡಲಾಗುತ್ತದೆ. ಸಗಟು ವ್ಯಾಫಾರಸ್ಥರು ಬೃಹತ್ ಕುರಿಮಾಂಸ ಮಾರುಕಟ್ಟೆಗಳಿಗೆ (Metropolis Market) ಮಾರಾಟ ಮಾಡಿ ಆ ಮೂಲಕವೂ ಗ್ರಾಹಕರ ಕೈ ಸೇರುತ್ತದೆ.

ಮಾನವ ಬದುಕುಳಿಯಲು ಆಹಾರ, ಗಾಳಿ, ನೀರು ಅತ್ಯವಶ್ಯಕ. ಆಹಾರದಲ್ಲಿ ಎರಡು ವಿಧಗಳಿದ್ದು ಒಂದು ಸಸ್ಯಹಾರ, ಇನ್ನೊಂದು ಮಾಂಸಹಾರ. ಮಾಂಸಹಾರಗಳಲ್ಲಿ ಕುರಿ-ಮೇಕೆಗಳ ಮಾಂಸವು ಉತ್ತಮವಾಗಿರುವುದರ ಜೊತೆಗೆ ಆರೋಗ್ಯಕರವಾಗಿದೆ. ದೇಶದಲ್ಲಿಯ ಬಹಳಷ್ಟು ಮಾಂಸಾಹಾರಿಗಳು ಕುರಿ-ಮೇಕೆಗಳ ಮಾಂಸವನ್ನೇ ಹೆಚ್ಚಾಗಿ ಸೇವಿಸುತ್ತಾರೆ. ಪರಿಣಾಮವಾಗಿ ಕುರಿ-ಮೇಕೆಗಳ ಮಾಂಸದ ಬೇಡಿಕೆ ದಿನದಿಂದ ದಿನಕ್ಕೆ ಏರಿಕೆಯಾಗುತ್ತಾ ಸಾಗಿದೆ. ಕರ್ನಾಟಕ ರಾಜ್ಯದಲ್ಲಿ ಕಸಾಯಿಖಾನೆ ಸೇರಿದ ಕುರಿಮೇಕೆಗಳ ಸಂಖ್ಯೆ ಹಾಗೂ ಮಾಂಸ ಉತ್ಪಾದನೆಯ ಪ್ರಮಾಣವನ್ನು ಈ ಮುಂದಿನಂತೆ ಕಾಣಬಹುದು.

ಕೋಷ್ಟಕ ೫.೪ ಕಸಾಯಿಖಾನೆ ಸೇರಿದ ಕುರಿ-ಮೇಕೆಗಳ ಸಂಖ್ಯೆ ಹಾಗೂ ಮಾಂಸದ ಉತ್ಪಾದನೆ ೨೦೦೫-೦೬

ಜಾನುವಾರುಗಳು	ಕಸಾಯಿಖಾನೆ ಸೇರಿದ ಕುರಿಗಳ ಸಂಖ್ಯೆ	ಮಾಂಸ ಉತ್ಪಾದನೆ	ಶೇಕಡವಾರು ಮಾಂಸದ ಪ್ರಮಾಣ	ಮಾಂಸದ ಮಾರುಕಟ್ಟೆ ಬೆಲೆ
ಕುರಿಗಳು	೨೦,೮೨,೭೩೧	೩೦೦೩೫	೫೯	೧೪೦
ಮೇಕೆಗಳು	೧೪,೫೬,೫೪೧	೨೦೫೫೪	೪೧	೧೪೦
ಒಟ್ಟು	೩೫,೩೯,೨೭೨	೫೦೫೮೯	೧೦೦	---

ಆಧಾರ: *Estimation Report - Department of Animal Husbandary and Veterinary services, Bangalore, 2006*

ಮೇಲಿನ ಕೋಷ್ಟಕ ೫.೪ ರಿಂದ ತಿಳಿದುಬರುವುದೇನೆಂದರೆ ೨೦೦೫-೦೬ ಸಾಲಿನಲ್ಲಿ ಕರ್ನಾಟಕ ರಾಜ್ಯದಲ್ಲಿ ಕಸಾಯಿಖಾನೆ ಸೇರಿದ ಕುರಿ-ಮೇಕೆಗಳ ಸಂಖ್ಯೆ ೩೫,೩೯,೨೭೨ ಇವುಗಳಿಂದ ೫೦,೫೮೯ ಟನ್ ಮಾಂಸ ಉತ್ಪಾದನೆಯಾಗಿ ಸರಾಸರಿ ಪ್ರತಿ ಕೆ.ಜಿ. ೧೪೦ ರೂ.ಗಳಂತೆ ಮಾರಾಟವಾಗಿದೆ. ಕುರಿ-ಮೇಕೆಗಳಿಂದಲೇ ವಾರ್ಷಿಕವಾಗಿ ೧೦೦೦ ಕೋಟಿ ವ್ಯವಹಾರ ನಡೆಯುತ್ತದೆಂದು ಅಂದಾಜಿಸಲಾಗಿದೆ.

i) ಮರಿಗಳ ಮಾರಾಟ

ಅಲೆಮಾರಿ ಕುರುಬರ ಆದಾಯದ ಪ್ರಮುಖ ಮೂಲವೆಂದರೆ ಮರಿಗಳ ಮಾರಾಟ. ಮಾರಾಟ ಮಾಡುವಾಗ ಜನಿಸಿದ ಎಲ್ಲಾ ಮರಿಗಳನ್ನು ಮಾರದೆ ಕೇವಲ ಗಂಡು ಮರಿಗಳನ್ನು ಮಾತ್ರ ಮಾರುತ್ತಾರೆ. ಇವುಗಳಲ್ಲಿಯೇ ಕೆಲವು ದೃಢಕಾಯವಾದ, ನಿಲುವಾದ, ಚಟುವಟಿಕೆಯಿಂದ ಕೂಡಿದ ಗಂಡು ಮರಿಗಳನ್ನು ಬೀಜದ ಮರಿಗಳನ್ನಾಗಿ ಆ ಕುರಿಹಿಂಡಿನಲ್ಲೆ ಉಳಿಸಿಕೊಳ್ಳುತ್ತಾರೆ. ಹೆಣ್ಣು ಮರಿಗಳನ್ನು ಸಾಮಾನ್ಯವಾಗಿ ಮಾರುವುದಿಲ್ಲ. ಸಂಗೋಪನೆಗೊಳಗಾಗಿ ಮುಂದೆ ದೊಡ್ಡವಾಗಿ ಬೆಳೆದು, ಮರಿಹಾಕಿ ಅಲೆಮಾರಿ ಕುರುಬನ ಜೀವನ ನಿರ್ವಹಣೆಗೆ ನೆರವಾಗುತ್ತವೆ. ಮರಿಗಳನ್ನು ಮಾರಾಟ ಮಾಡುವಾಗ ಒಂದೆರಡು ಮರಿಗಳನ್ನು ಮಾರದೆ ಒಂದು ಋತುವಿನಲ್ಲಿ ಜನಿಸಿದ ಮರಿಗಳನ್ನು ಗುಂಪಾಗಿ ಅಥವಾ ಹಿಂಡಾಗಿ ಮಾರುವುದು ಕಂಡುಬಂದಿದೆ.

ವರ್ಷದಲ್ಲಿ ಮೂರು ಸಾರಿ ಕುರಿಮರಿಗಳ ಮಾರಾಟ ಮಾಡುಲಾಗುತ್ತದೆ. ಅಂದರೆ ಆಗಸ್ಟ್-ಸೆಪ್ಟೆಂಬರ್ ತಿಂಗಳ (ಗಣೇಶನ ಹಬ್ಬದ) ಅವಧಿಯಲ್ಲಿ ಜನಿಸಿದ ಮರಿಗಳನ್ನು ಡಿಸೆಂಬರ್-ಜನವರಿ (ಎಳ್ಳು ಅಮಾವಸ್ಯೆ) ತಿಂಗಳಲ್ಲಿ ಮತ್ತು ಡಿಸೆಂಬರ್-ಜನವರಿ ತಿಂಗಳಲ್ಲಿ ಜನಿಸಿದ ಮರಿಗಳನ್ನು ಮಾರ್ಚ್-ಏಪ್ರಿಲ್ (ಯುಗಾದಿ) ತಿಂಗಳಲ್ಲಿ ಮಾರಾಟ ಮಾಡಲಾಗುತ್ತದೆ. ಬೇರೆ ಅವಧಿಯಲ್ಲಿ ಈಯ್ದು ಕುರಿಗಳ ಮರಿಗಳನ್ನು ಅಕ್ಷತದಗಿ ಅಮಾವಸ್ಯೆಯ (ಏಪ್ರಿಲ್ ತಿಂಗಳು)

ಸಮಯದಲ್ಲಿ ಸಾಮಾನ್ಯವಾಗಿ ಮೂರು ತಿಂಗಳ ಮರಿಗಳು ಸಾವಿರದಿಂದ, ಹನ್ನೆರಡುನೂರು (1000-1200) ರೂ.ಗಳಿಗೆ ಮಾರಾಟವಾಗುತ್ತವೆ.

ii) ಕುರಿ-ಮೇಕೆಗಳ ಮಾರಾಟ

ವಯಸ್ಸಾದ ಕುರಿಗಳ ಮಾರಾಟ ಇವರ ಎರಡನೆಯ ಆದಾಯದ ಮೂಲವಾಗಿದೆ. ಇದನ್ನು ಅಲೆಮಾರಿ ಕುರುಬರು ಹಳೆಕುರಿ ಮಾರಾಟ ಎನ್ನುವರು. ಸಾಮಾನ್ಯವಾಗಿ ಕುರಿಯ ಜೀವಿತಾವಧಿ ೧೦ ರಿಂದ ೧೨ ವರ್ಷಗಳಾಗಿವೆ. ಈ ಅವಧಿಯವರೆಗೆ ಕುರಿಗಳನ್ನು ಉಳಿಸಿಕೊಳ್ಳುವುದಿಲ್ಲ. ಸಾಮಾನ್ಯವಾಗಿ ೭-೮ ವರ್ಷಗಳಲ್ಲಿ ಮಾರಾಟ ಮಾಡಲಾಗುತ್ತದೆ. ನಂತರದ ದಿನಗಳಲ್ಲಿ ಅವುಗಳ ಉತ್ಪಾದಕತೆ ಕಡಿಮೆಯಾಗುತ್ತದೆ. ವಯಸ್ಸಾದ ಕುರಿಗಳ ಮಾರಾಟದಲ್ಲಿ ಹಲ್ಲುಗಳು ಗಣನೆಗೆ ಒಳಗಾಗುತ್ತದೆ. "The heath of a sheep has considerable influence on the growth, strength and wearability of teeth. If well maintained, a sheep will not lose all of its teeth until the age of ten years. The sheep from blocks kept under hard conditions of life may lose teeth when they are 7 to 8 years old"(Benergee G.C.:1981:26). ಮುಂದಿನ ಹಲ್ಲುಗಳು ಅಥವಾ ಬಾಚಿಹಲ್ಲುಗಳು ಕಳಚಲು ಆರಂಭವಾದಾಗ ಅವುಗಳಿಗೆ ವಯಸ್ಸಾಯಿತೆಂದು ಅರಿತು ಮಾರಾಟ ಮಾಡಲಾಗುತ್ತದೆ. ಇವನ್ನು ೮೦೦ ರಿಂದ ೧೧೦೦ ರೂ.ಗಳವರೆಗೆ ಕಾರಹುಣ್ಣಿಮೆಯ ಅವಧಿಯಲ್ಲಿ (ಜೂನ್ ತಿಂಗಳು) ಮಾರಾಟ ಮಾಡುವರು. ಜನವರಿಯಿಂದ ಮೇ ತಿಂಗಳವರೆಗೆ ಸಾಕಷ್ಟು ಮೇವು ದೊರೆತು ಕುರಿ ದುಂಡಾಗಿರುವುದರಿಂದ ಈ ಅವಧಿಯಲ್ಲಿ ಮಾರಾಟ ಮಾಡ ಲಾಗುತ್ತದೆ. ಕಾರಹುಣ್ಣಿಮೆಯ ನಂತರ ಮಳೆಗಾಲ ಆರಂಭವಾಗುವುದರಿಂದ ವಯಸ್ಸಾದ ಕುರಿ-ಮೇಕೆಗಳು ಬೆಟ್ಟ-ಗುಡ್ಡಗಳನ್ನು ಏರಲು, ಮಳೆ ಹಾಗೂ ಶೀತ ಗಾಳಿಯನ್ನು ಸಹಿಸಿಕೊಳ್ಳಲು ಆಗುವುದಿಲ್ಲ. ಆದ್ದರಿಂದ ಜೂನ್ ತಿಂಗಳಲ್ಲಿ ವಯಸ್ಸಾದ ಎಲ್ಲಾ ಕುರಿಗಳನ್ನು ಗುಂಪಾಗಿ ಮಾರಾಟ ಮಾಡುವುದು ಕಾಣುತ್ತದೆ.

ಕುದುರೆ : ಅಲೆಮಾರಿ ಕುರುಬನು ತನ್ನ ಕೌಟುಂಬಿಕ ಸಾಮಾನುಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೊತ್ತೊಯ್ಯಲು ಸಾಕಿದ್ದಾನೆಯೆ ವಿನಹಃ ಆದಾಯದ ದೃಷ್ಟಿಯಿಂದಲ್ಲ. ಸಾಮಾನ್ಯವಾಗಿ ಪ್ರತಿ ಕುಟುಂಬಕ್ಕೆ ೨-೧೫ರ ವರೆಗೆ ಕುದುರೆಗಳಿರುತ್ತವೆ. ಇವುಗಳ ಪ್ರಮಾಣವು ಕುಟುಂಬದ ಜನಸಂಖ್ಯೆಯನ್ನವಲಂಬಿಸಿರುತ್ತದೆ. ಕುದುರೆಗಳ ಸಂಖ್ಯೆ ಹೆಚ್ಚಿದ್ದಾಗ ಅಥವಾ ಕುದುರೆಯ ಸುಳಿ ಸುಮಾರು ಇದ್ದಾಗ, ಹಾಗೂ ಕುದುರೆಗಳಿಗೆ ವಯಸ್ಸಾದಾಗ ಮಾರಾಟ ಮಾಡುವುದು ಸಾಮಾನ್ಯ ಅಂಶವಾಗಿದೆ. ಇವರಿದ್ದಲ್ಲಿಗೆ ರಾಜಸ್ಥಾನದವರು ಬಂದು ಕುದುರೆಗಳನ್ನು ಕೊಂಡು ಹೋಗುತ್ತಾರೆ. ಕುದುರೆಗಳಿಗೆ ಸುಳಿ ಸುಮಾರಿದ್ದರೆ ಅಥವಾ ವಯಸ್ಸಾಗಿದ್ದರೆ. ೧೫೦೦ ರಿಂದ ೨೦೦೦ ರೂ.ಗಳಿಗೆ

ಮಾರಾಟವಾಗುತ್ತವೆ. ಕುದುರೆಯು ನಿಲುವಾಗಿದ್ದು, ಚಟುವಟಿಕೆಯಿಂದ ಕೂಡಿ ಒಳ್ಳೆಯ ಬಣ್ಣದ್ದಾಗಿದ್ದರೆ ೩೦೦೦ ದಿಂದ ೪೦೦೦ ರೂ.ಗಳವರೆಗೆ ಮಾರಾಟವಾಗುತ್ತದೆ.

೫.೧.೨ ಕುರಿ ತಬ್ಬುವಿಕೆ (ಗೊಬ್ಬರ) ಭತ್ಯ

ಕುರಿ ಸಂಗೋಪನೆಗಾಗಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗುವುದು ಇವರ ಕಾರ್ಯವಾಗಿದೆ. ವಲಸೆ ಹೋದ ಪ್ರದೇಶದ ರೈತರ ಹೊಲಗದ್ದೆಗಳಲ್ಲಿ ರಾತ್ರಿಯ ಸಮಯದಲ್ಲಿ ಕುರಿಗಳನ್ನು ತಬ್ಬಲಾಗುತ್ತದೆ. ಕುರಿ ತಬ್ಬಿದ್ದಕ್ಕೆ ಪ್ರತಿಫಲವಾಗಿ ಇಂತಿಷ್ಟು ಹಣವನ್ನಾಗಲಿ ಅಥವಾ ದವಸಧಾನ್ಯಗಳನ್ನಾಗಲಿ ಪಡೆಯಲಾಗುತ್ತದೆ. ಇದಕ್ಕೆ 'ಭತ್ಯೆ' ಎನ್ನುವರು. ಇತ್ತೀಚಿನ ದಿನಗಳಲ್ಲಿ ಜಮೀನಿನ ರೈತರು ಹಣವನ್ನೇ ನೀಡುತ್ತಾರೆ. ಕುರಿ ತಬ್ಬಿದ್ದಕ್ಕಾಗಿ ಪಡೆಯುವ ಪ್ರತಿಫಲ ಕುರಿಗಳ ಸಂಖ್ಯೆ ಮತ್ತು ಕಾಲವನ್ನು ಅವಲಂಬಿಸಿರುತ್ತದೆ. ಉದಾಹರಣೆಗೆ ಕುರಿಗಳ ಸಂಖ್ಯೆ ೫೦೦ ಇದ್ದು ಮುಂಗಾರು ಮಳೆ ಬೇಗ ಬಂದಿದ್ದರೆ ೨೦೦ ರಿಂದ ೨೫೦ ರೂ.ಗಳವರೆಗೆ, ಬೇಸಿಗೆ ಕಾಲದಲ್ಲಿ ೧೫೦ ರಿಂದ ೨೦೦ ರೂ.ಗಳವರೆಗೆ, ಹಾಗೂ ಬರಗಾಲವಿದ್ದರೆ ೫೦ ರಿಂದ ೧೦೦ ರೂ.ಗಳವರೆಗೆ ಭತ್ಯ ನೀಡಲಾಗುತ್ತದೆ. ಕೆಲವೊಂದು ರೈತರು ದೌರ್ಜನ್ಯ ಮಾಡಿ ಕುರಿ ತಬ್ಬಿದ್ದಕ್ಕೆ ಹಣವನ್ನು ನೀಡದಿರುವ ಪ್ರಸಂಗಗಳುಂಟು. ಮಳೆಗಾಲದಲ್ಲಿ ಕುರಿಗಳು ಗುಡ್ಡಗಾಡು ಪ್ರದೇಶದಲ್ಲಿರುತ್ತವೆ. ಈ ಅವಧಿಯಲ್ಲಿ ಕುರಿಗಳ ಹಿಕ್ಕೆಯನ್ನು ಒಂದು ಕಡೆ ರಾಶಿ ಹಾಕಿ ಗುಡಾರ ಬದಲಾಯಿಸುವಾಗ ಸಮೀಪದ ರೈತರಿಗೆ ಗುತ್ತಿಗೆ ಲೆಕ್ಕದಲ್ಲಿ ಮಾರಾಟ ಮಾಡಲಾಗುವುದು. ಇದರ ಬೆಲೆ ನಿಖರವಾಗಿ ಹೇಳಲು ಬರುವುದಿಲ್ಲ. ಕಾರಣ ಆ ಸ್ಥಳದಲ್ಲಿ ಕುರಿ ತಬ್ಬಿದ ದಿನಗಳ ಮೇಲೆ ಅವಲಂಬಿತವಾಗಿರುತ್ತದೆ. ಕುರಿ ತಬ್ಬುವಿಕೆಯು ರೈತರು ಕೊಡುವ ಭತ್ಯವನ್ನು ಅವಲಂಬಿಸಿರದೆ ಕುರಿಗಳಿಗೆ ಮೇವು-ನೀರು ಚೆನ್ನಾಗಿ ದೊರೆತು ಒಳ್ಳೆಯ ವಾತವರಣವನ್ನು ಅವಲಂಬಿಸಿರುತ್ತದೆ. ಈ ರೀತಿ ಬರುವ ಆದಾಯವು ಕುಟುಂಬದ ದಿನನಿತ್ಯದ ಖರ್ಚು-ವೆಚ್ಚಗಳನ್ನು ನಿರ್ವಹಿಸಲು ಬಳಕೆಯಾಗುತ್ತದೆಯಾದರೂ ಇದರಿಂದಲೇ ಕೌಟುಂಬಿಕ ಜೀವನ ನಡೆಯಲು ಸಾಧ್ಯವಿಲ್ಲ.

ಗೊಬ್ಬರದ ಮಹತ್ವ : ಭಾರತ ಕೃಷಿ ಪ್ರಧಾನ ರಾಷ್ಟ್ರವಾಗಿದೆ. ಬಹಳಷ್ಟು ಜನರು (ಶೇ. ೬೩ರಷ್ಟು) ಕೃಷಿಯನ್ನೇ ಮೂಲ ವೃತ್ತಿಯನ್ನಾಗಿಸಿಕೊಂಡು ಹಳ್ಳಿಗಳಲ್ಲೇ ವಾಸಿಸುತ್ತಿದ್ದಾರೆ. ಮಹತ್ಮಾ ಗಾಂಧೀಜಿಯವರು "ಹಳ್ಳಿಗಳ ಉದ್ದಾರದಿಂದಲೇ ದೇಶದ ಉದ್ಧಾರ" ಎಂದು ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ನಮ್ಮ ದೇಶದ ಭವಿಷ್ಯ ಬಹುತೇಕ ಕೃಷಿಕರ ಬದುಕನ್ನೇ ಅವಲಂಬಿಸಿರುವುದು ಕಂಡುಬರುತ್ತದೆ. ನಮ್ಮ ಪೂರ್ವಜರು ಅನುಸರಿಸುತ್ತಿದ್ದ ಸಾಂಪ್ರದಾಯಿಕ ಕೃಷಿ ಪದ್ಧತಿ ಬಿಟ್ಟು, ಆಧುನಿಕ ಕೃಷಿ ಪದ್ಧತಿಯತ್ತ ಮುನ್ನುಗ್ಗುತ್ತಿದ್ದೇವೆ. ಆಧುನಿಕ ಕೃಷಿ ಪದ್ಧತಿಯಿಂದ ಹೆಚ್ಚಿನ ಇಳುವರಿ ಪಡೆಯುವ ದಿಶೆಯಲ್ಲಿ ಕೃಷಿಕರು ಹೆಚ್ಚಿನ ಪ್ರಮಾಣದಲ್ಲಿ ರಾಸಾಯನಿಕ ಗೊಬ್ಬರ ಹಾಗೂ ಕ್ರಿಮಿನಾಶಕಗಳನ್ನು ಬಳಕೆ ಮಾಡುತ್ತಿದ್ದಾರೆ. ಇವುಗಳ ಬಳಕೆಯಿಂದ ಕೃಷಿ ಭೂಮಿ ಕಲ್ಮಶಗೊಂಡು

ವಿಷ-ಮಿಶ್ರಿತವಾಗಿ ಭೂ-ಫಲವತ್ತತೆಯು ನಿಷ್ಕ್ರಿಯವಾಗಿದೆ. ಇನ್ನೊಂದೆಡೆ ನಾವು ಸೇವಿಸುವ ಪ್ರತಿಯೊಂದು ಆಹಾರದಲ್ಲಿ ವಿಷಯುಕ್ತ ರಾಸಾಯನಿಕಗಳಿವೆ. "ಪರಿಣಾಮವಾಗಿ ನಾವು ಬಳಸುವ ಆಹಾರ ಧಾನ್ಯಗಳು ವಿಷಮಿಶ್ರಿತವಾಗಿವೆ. ಮಾನವನ ರಕ್ತದಲ್ಲಿ, ತಾಯಿಯ ಎದೆಹಾಲಿನಲ್ಲಿ ಜಾನುವಾರುಗಳ ಹಾಲಿನಲ್ಲಿ, ತಾಯಿಯ ಗರ್ಭದಲ್ಲಿ ಬೆಳೆಯುವ ಭ್ರೂಣದಲ್ಲಿಯೂ ಸಹ ಕೃಷಿ ಭೂಮಿಯಲ್ಲಿ ಉಪಯೋಗಿಸುವ ವಿಷಯುಕ್ತ ರಾಸಾಯನಿಕಗಳ ಬಗ್ಗೆ ತಜ್ಞರು ವರದಿ ಮಾಡಿದ್ದಾರೆ" (ಬಸವರಾಜಪ್ಪ ಎಸ್.:೨೦೦೧:೪೨). ಮನುಕುಲದ ರೋಗಗಳನ್ನು ಕಡಿಮೆ ಮಾಡಲು ಸಾವಯವ ಕೃಷಿ ಮೂಲಕ ಅಂದರೆ ಕುರಿ-ಮೇಕೆಗಳ ಹಿಕ್ಕೆ (ಸಗಣಿ) ಮತ್ತು ಮೂತ್ರ ಬಳಕೆಯನ್ನು ಹೆಚ್ಚಿಸಬೇಕು. ಇದರಿಂದ ಭೂ-ಫಲವತ್ತತೆಯ ನಾಶವನ್ನು ತಡೆಯಬಹುದು. ಪರಿಣಮಾವಾಗಿ ಆರೋಗ್ಯಯುಕ್ತ ದವಸಧಾನ್ಯಗಳ ಉತ್ಪನ್ನ, ರಾಸಾಯನಿಕ ಮುಕ್ತ ಕೃಷಿ ಭೂಮಿಯ ನಿರ್ವಹಣೆ ಸಾಧ್ಯವಾಗುತ್ತದೆ.

ಕುರಿ-ಮೇಕೆಗಳ ಹಿಕ್ಕೆ ಮತ್ತು ಮೂತ್ರವು ಕೃಷಿ ಉತ್ಪಾದನೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಇದರ ಮಹತ್ವ ಅರಿತ ರೈತರು ತಪ್ಪದೇ ತಮ್ಮ ಜಮೀನಿನಲ್ಲಿ ಕುರಿ ತಬ್ಬಿಸುತ್ತಾರೆ. ಕುರಿ-ಮೇಕೆಗಳು ಹಿಕ್ಕೆ ಹಾಗೂ ದನಗಳ ಸಗಣಿಯ ಮಹತ್ವವನ್ನು ಹೋಲಿಕೆ ಮಾಡಿ ನೋಡಿದಾಗ ಕುರಿ-ಮೇಕೆ ಹಿಕ್ಕೆಗಳಲ್ಲಿ ಹೆಚ್ಚಿನ ಪ್ರಮಾಣದ ನೈಟ್ರೋಜನ್ ಮತ್ತು ಪಾಸ್ಪರಸ್ ಆ್ಯಸಿಡ್ ಇರುವುದು ದೃಢಪಟ್ಟಿದೆ. ಮೂತ್ರದಲ್ಲಿ ನೈಟ್ರೋಜನ್ ಮತ್ತು ಪೋಟೋಸಿಯಂ ಶ್ರೀಮಂತವಾಗಿವೆ. ಇಂತಹ ಗುಣಗಳನ್ನು ಪಡೆಯಲು ರೈತನು ಹೊಲ-ಗದ್ದೆಗಳಲ್ಲಿ ಕುರಿಗಳನ್ನು ತಬ್ಬಿಸುತ್ತಾನೆ. ಆಧುನಿಕ ಕೃಷಿ ಬೇಸಾಯ ಪದ್ಧತಿಯಲ್ಲಿ ಬಹಳಷ್ಟು ರೈತರು ತಮ್ಮ ಜಮೀನಿಗೆ ನೈಟ್ರೊಜನ್, ಪಾಸ್ಪರಸ್ ಮತ್ತು ಪೋಟ್ಯಾಸಿಯಂ (ಎನ್.ಪಿ.ಕೆ.) ಪಡೆಯಲು ರಾಸಾಯನಿಕ ಗೊಬ್ಬರ ಉತ್ಪನ್ನ ಮಾಡುವ ಕಾರ್ಖಾನೆ ಗಳಿಗೆ ಮತ್ತು ಅವುಗಳನ್ನು ಮಾರಾಟ ಮಾಡುವ ಸಗಟು ಮತ್ತು ಚಿಲ್ಲರೆ ವ್ಯಾಪಾರಸ್ಥರಿಗೆ ಬಹಳಷ್ಟು ಹಣ ಸುರಿಯುತ್ತಾರೆ. ಒಂದು ವೇಳೆ ಮಳೆ ಕೈಕೊಟ್ಟಾಗ ಅಥವಾ ಹವಾಮಾನದಲ್ಲಿ ಏರುಪೇರಾದಾಗ ಬೆಳೆ ಬರದೆ ರೈತನು ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತಾನೆ. ಕೆಲವೊಂದು ರೈತರು ಆರ್ಥಿಕ ಸಂಕಷ್ಟದಿಂದ ಹೊರಬರದೆ ಆತ್ಮಹತ್ಯೆಗೆ ಶರಣು ಹೋಗಿರುವ ಎಷ್ಟೋ ಉದಾಹರಣೆಗಳಿವೆ. ರೈತರ ಆತ್ಮಹತ್ಯೆ ಗಳನ್ನು ತಡೆಯಲು ಸರ್ಕಾರ ಕೆಲವೊಂದು ವಿಶೇಷ ಯೋಜನೆಗಳನ್ನು ಹಾಕಿಕೊಂಡರೂ ಫಲ ನೀಡುತ್ತಿಲ್ಲ. ಕಾರಣ ರೈತರು ಉಳಿಮೆ ಮಾಡುವ ಭೂಮಿಯ ಫಲವತ್ತತೆ ನಿಷ್ಕ್ರಿಯವಾಗಿದೆ. ತನ್ನಷ್ಟಕ್ಕೆ ತಾನೇ ಏನು ಬೆಳೆಯುತ್ತಿಲ್ಲ. ಅದಕ್ಕೆ ರಾಸಾಯನಿಕ ಗೊಬ್ಬರ ಮತ್ತು ಕ್ರಿಮಿನಾಶಕಗಳನ್ನು ಮೇಲು ಗೊಬ್ಬರವಾಗಿ ಕೊಟ್ಟಾಗ ಮಾತ್ರ ಬೆಳೆಯನ್ನು ಬೆಳೆಯಲು ಸಾಧ್ಯವಾಗುತ್ತದೆ. ಉದಾಹರಣೆ ಕರ್ನಾಟಕ ಸರ್ಕಾರವು ೨೦೦೬-೦೭ನೇ ಸಾಲಿನಲ್ಲಿ ಸಹಕಾರಿ ಪತ್ತಿನ ಕೃಷಿ ಬ್ಯಾಂಕುಗಳಿಂದ ೨೫,೦೦೦ ರೂ.ಗಳವರೆಗೆ ಸಾಲ ತೆಗೆದುಕೊಂಡ ರೈತರ ಸಾಲ ಮನ್ನಾ ಮಾಡಿದೆ. ಈ ತರಹದ ಸಾಲ ಮನ್ನಾವು ಒಂದು ವರ್ಷದವರೆಗೆ ರೈತರ ಆತ್ಮಹತ್ಯೆ ತಡೆಯಬಹುದು. ಮುಂದಿನ ವರ್ಷ ರೈತ ತನ್ನ

[illegible]

ಜಮೀನಿನಲ್ಲಿ ಬೆಳೆ ಬೆಳೆಯಬೇಕಾದರೆ ಆಧುನಿಕ ಮಿಶ್ರತಳಿಯ ಬೀಜ ಮತ್ತು ರಸಗೊಬ್ಬರಗಳ ಮೊರೆ ಹೊಗಲೇಬೇಕಾಗುತ್ತದೆ. ಆ ವರ್ಷವು ಕೂಡ ಬೆಳೆ ಕೈಕೊಟ್ಟರೆ ಅಥವಾ ಕೃಷಿ ಉತ್ಪನ್ನಗಳ ಬೆಲೆ ಕಡಿಮೆಯಾದರೆ ರೈತರ ಆತ್ಮಹತ್ಯೆಗಳನ್ನು ತಡೆಯಲು ಸಾಧ್ಯವಾಗುವುದಿಲ್ಲ. ಈ ತರಹದ ಆತ್ಮಹತ್ಯೆಗಳು ಪ್ರತಿವರ್ಷ ಮುಂದುವರಿಯುತ್ತ ಹೋಗುತ್ತವೆ. ಆದ್ದರಿಂದ ರೈತರು ಮತ್ತು ಸರ್ಕಾರಗಳು ಕೃಷಿ ಭೂಮಿಗೆ ಕುರಿ ಹಿಕ್ಕೆ ಮತ್ತು ಮೂತ್ರದ ಮಹತ್ವವನ್ನು ಅರಿತು ಕುರಿ-ಸಂಗೋಪನೆ ಅಭಿವೃದ್ಧಿಗೆ ಸಹಕಾರಿಯಾಗುವಂತೆ ನೀತಿ-ನಿಯಮಗಳನ್ನು ರೂಪಿಸಬೇಕಾಗಿರುವುದು ಜರೂರಾಗಿದೆ. ಕುರಿಗಳ ಹಿಕ್ಕೆ ಮತ್ತು ಮೂತ್ರವನ್ನು ಉಪಯೋಗಿಸದ ಅಥವಾ ಕುರಿ ತಬ್ಬಿದ ಜಮೀನಿನಲ್ಲಿ ಒಳ್ಳೆಯ ಬೆಳೆ ಬರುವುದರ ಜೊತೆಗೆ ಜಮೀನ್ದಾರನಿಗೆ ಹೆಚ್ಚಿನ ಲಾಭವನ್ನು ತಂದು ಕೊಡುತ್ತದೆ. ಇದರಿಂದ ರೈತರ ಆತ್ಮಹತ್ಯೆಯನ್ನು ತಡೆಯಲು ಹಾಗೂ ಅವರ ಆರ್ಥಿಕ ಸ್ಥಿತಿ ಸುಧಾರಿಸಲು ಸಾಧ್ಯವಾಗುತ್ತದೆ.

ಕುರಿ ತಬ್ಬಿಸುವಿಕೆ ಮತ್ತು ದನ-ಕರುಗಳ ಸಗಣಿ (ಕೊಟ್ಟಿಗೆ ಗೊಬ್ಬರ) ಹೋಲಿಕೆ ಮಾಡಿದಾಗ ರೈತನಿಗೆ ಕೆಳಗಿನಂತೆ ಹಲವಾರು ಪ್ರಯೋಜನಗಳುಂಟಾಗಿರುವುದು ಕಂಡುಬಂದಿದೆ.

೧. ಕುರಿ-ಮೇಕೆಗಳ ಹಿಕ್ಕೆ ಮತ್ತು ಮೂತ್ರ ಹೆಚ್ಚಿನ ಗುಣಮಟ್ಟದ ಪೌಷ್ಟಿಕಾಂಶಗಳನ್ನು ಹೊಂದಿದೆ.

೨. ಕೊಟ್ಟಿಗೆ ಗೊಬ್ಬರ ಸಾಗಿಸಲು ಎತ್ತು-ಬಂಡಿ ಅಥವಾ ಟ್ರಾಕ್ಟರ್‌ಗಳು ಹಾಗೂ ಶ್ರಮಿಕರ ಅವಶ್ಯಕತೆ ಇದೆ.

೩. ಕೊಟ್ಟಿಗೆ ಗೊಬ್ಬರವನ್ನು ಸಾಗಿಸಿದ ನಂತರ ಜಮೀನಿನಲ್ಲಿ ಚೆಲ್ಲಬೇಕು. ಆದರೆ ಕುರಿ ತಬ್ಬಿಸುವಿಕೆಯಿಂದ ಇದರ ಅವಶ್ಯಕತೆ ಬರುವುದಿಲ್ಲ.

೪. ಕುರಿ-ಮೇಕೆಗಳ ಹಿಕ್ಕೆ ಮತ್ತು ಮೂತ್ರದಲ್ಲಿರುವ ಲವಣಾಂಶಗಳನ್ನು ಜಮೀನಿಗೆ ನೇರವಾಗಿ ಒದಗಿಸಬಹುದು.

೫. ರೈತರು ತಮ್ಮ ಜಮೀನಿಗೆ ಪೌಷ್ಟಿಕಾಂಶವುಳ್ಳ ಗೊಬ್ಬರವನ್ನು ನೇರವಾಗಿ ಕೊಡುವುದರ ಜೊತೆಗೆ ಕೃಷಿ ಕಾರ್ಮಿಕರ ಮೇಲೆ ಖರ್ಚು ಮಾಡುವ ಹಣವನ್ನು ಉಳಿತಾಯ ಮಾಡಬಹುದು.

೫.೧.೩ ಭೂ-ಒಡೆತನ

ಕೃಷಿ ಮತ್ತು ಪಶುಪಾಲನೆ ಮಾನವನ ಆರ್ಥಿಕ ಚಟುವಟಿಕೆಗಳಲ್ಲಿ ಬಹುಮುಖ್ಯವಾದ ಮತ್ತು ಅತ್ಯಂತ ಪುರಾತನವಾದ ಕಸುಬುಗಳಾಗಿವೆ. ಇವು ಜಗತ್ತಿನ ಬಹುಜನರ ಜೀವನೋಪಾಯದ ಮಾರ್ಗಗಳಾಗಿವೆ. ಕೃಷಿಯು ಒಂದು ರೀತಿಯಲ್ಲಿ ಪಶುಪಾಲನೆ ಮತ್ತು ಮಾನವ ನಡುವಿನ ಹೊಂದಾಣಿಕೆಯ

ಕಸುಬಾಗಿದೆ. ಭಾರತ ಕೃಷಿ ಪ್ರಧಾನ ದೇಶವಾಗಿದ್ದು ಬಹುಜನರು ಕೃಷಿ ಮತ್ತು ಪಶುಪಾಲನೆಯನ್ನೇ ಅವಲಂಬಿಸಿದ್ದಾರೆ. ಇವೆರಡೂ ರಾಷ್ಟ್ರೀಯ ಆದಾಯಕ್ಕೆ ಶೇಕಡ ೨೮ ರಷ್ಟು ಕೊಡುಗೆ ನೀಡುತ್ತಿವೆ. ದೇಶದ ಒಳಿತು-ಕೆಡಕು ಕೃಷಿಯನ್ನೇ ಅವಲಂಬಿಸಿದೆ.

ಭಾರತದ ಕೃಷಿ ಉತ್ಪಾದಕತೆ ಕಡಿಮೆ ಇದ್ದು, ಬಹಳಷ್ಟು ಜನರು ಸಣ್ಣ ಹಿಡುವಳಿದಾರರು ಮತ್ತು ಭೂರಹಿತ ಕೃಷಿಕಾರ್ಮಿಕರಾಗಿದ್ದಾರೆ. ಅಲೆಮಾರಿ ಕುರುಬರು ಕೃಷಿ ಭೂಮಿಯನ್ನು ಹೊಂದುವುದರಲ್ಲಿ ಅತ್ಯಂತ ಹಿಂದುಳಿದಿದ್ದಾರೆ. ಅವರು ಸಂಪೂರ್ಣವಾಗಿ ಕುರಿಗಳನ್ನೇ ಅವಲಂಬಿಸಿದ್ದು, ಕುಟುಂಬ ನಿರ್ವಹಣೆಗಾಗಿ ಭೂಮಿಯಿಂದ ಪಡೆಯುವ ಕೊಡುಗೆ ಶೂನ್ಯವೆಂದರೂ ಅತಿಶಯೋಕ್ತಿಯಾಗಲಾರದು. ಇವರಲ್ಲಿ ಜಾಮೀನು ಇರುವವರು ತುಂಬಾ ಕಡಿಮೆ, ಇದ್ದರೂ ಸಹ ಸಣ್ಣ ಪ್ರಮಾಣದ ಹಿಡುವಳಿದಾರರಾಗಿದ್ದಾರೆ. ಈ ಹಿಡುವಳಿಗಳು ದಿಣ್ಣೆಯೋ, ಜೌಗು ಪ್ರದೇಶವೋ ಅಥವಾ ಕೃಷಿಗೆ ಯೋಗ್ಯವಲ್ಲದ ಬಂಜರು ಭೂಮಿಗಳಾಗಿರುತ್ತವೆ. ಕುರಿಗಳು ಮೇವು ಮೇಯಲು ರಾತ್ರಿ ಕುರಿಗಳನ್ನು ತಬ್ಬಲು ಇಂತಹ ಭೂಮಿಯನ್ನು ಹೊಂದಲು ಅನುಕೂಲವೆನಿಸಿರಬೇಕು. ಆ ಪ್ರದೇಶದಲ್ಲಿ ತಮ್ಮ ಕುಟುಂಬದ ಗಾತ್ರ ಹೆಚ್ಚಾದಂತೆಲ್ಲಾ ಮತ್ತು ಕೃಷಿ ಸಾಗುವಳಿ ಭೂಮಿ ವಿಸ್ತರಣೆಯಾದಂತೆಲ್ಲ, ಕುರಿ ಮೇಯಿಸುವ ಹುಲ್ಲುಗಾವಲಿನ ಕೊರತೆ ಪರಿಣಾಮವಾಗಿ ತಮ್ಮ ಕುಟುಂಬಗಳನ್ನು ಕಟ್ಟಿಕೊಂಡು ಕುರಿಗಳ ಜೊತೆಗೆ ವಲಸೆ ಬಂದಿರಬಹುದು. ತಾವು ಹೊಂದಿರುವ ಭೂಮಿ ಸಾಗುವಳಿಗೆ ಯೋಗ್ಯವಿದ್ದು, ಅದು ಎಕರೆಗಳ ಲೆಕ್ಕದಲ್ಲಿದ್ದರೆ ಅಂತಹ ಭೂಮಿಯನ್ನು ಸಾಗುವಳಿ ಮಾಡಲು ಕೊಟ್ಟಿರುವುದು ಕಂಡುಬರುತ್ತದೆ. ಸಾಗುವಳಿಯು ಎಕರೆಗೆ ಇಂತಿಷ್ಟು ಹಣ ಅಥವಾ ಧಾನ್ಯಗಳ ರೂಪದಲ್ಲಿರುತ್ತದೆ. ಇದನ್ನು ಹಬ್ಬ-ಹರಿದಿನ, ಮದುವೆ, ಜಾತ್ರೆ ಇತ್ಯಾದಿ ಪ್ರಸಂಗಗಳಲ್ಲಿ ಸ್ವಗ್ರಾಮಕ್ಕೆ ತೆರಳಿದಾಗ ಪಡೆದುಕೊಳ್ಳುತ್ತಾರೆ. ಒಂದು ವೇಳೆ ಇವರು ಹೊಂದಿರುವ ಭೂ-ಹಿಡುವಳಿಗಳು ಸಾಗುವಳಿಗೆ ಅಯೋಗ್ಯವಾಗಿದ್ದರೆ, ಅಂತವನ್ನು ಬೀಳು ಬಿಟ್ಟಿರುತ್ತಾರೆ. ಭೂ-ಉಳುಮೆ ವಿಚಾರವಾಗಿ ಅಲೆಮಾರಿ ಕುರುಬರಾದ ಚಿಕ್ಕೋಡಿ ತಾಲೂಕಿನ ನವಲಿಹಾಳ್ ಗ್ರಾಮದ ಸಾವಿರಕುರಿ ಲಿಂಗಪ್ಪನವರನ್ನು ಪ್ರಶ್ನಿಸಲಾಯಿತು. ಅವರು ಕೊಟ್ಟ ಉತ್ತರ : ನಮಗೆ ಕುರಿ ಕಾಯುವ ಕೆಲಸ ಬಿಟ್ಟು ಬೇರ್ಯಾವ ಕೆಲಸ ಅಥವಾ ಉದ್ಯೋಗ ಬರುವುದಿಲ್ಲ. ಭೂ ಉಳಿಮೆ ಕೆಲಸಗಳಾದ ರಂಟೆ, ಕುಂಟೆ, ಬಿತ್ತನೆ, ಕೊಯ್ಲು ಇತ್ಯಾದಿ ಕೆಲಸಗಳ ಬಗ್ಗೆ ಗೊತ್ತಿಲ್ಲ. ನಾವು ದಿನದ ೨೪ ಗಂಟೆಗಳ ಕಾಲ ಕುರಿ ಸಂಗೋಪನೆಯಲ್ಲಿಯೇ ತೊಡಗಿರುತ್ತೇವೆ. ಬೇರೆ ಉದ್ಯೋಗಗಳ ಕಡೆ ಲಕ್ಷ್ಯವಹಿಸಲು ಸಾಧ್ಯವಾಗುತ್ತಿಲ್ಲ.

ಕಾರ್ಯಕ್ಷೇತ್ರದ ಸಮೀಕ್ಷೆ ಸಂದರ್ಭದಲ್ಲಿ ಮಾಡಿದ ೩೮೬ ಕುಟುಂಬಗಳು ಹೊಂದಿರುವ ಒಟ್ಟು ಭೂಮಿಯ ಪ್ರಮಾಣ ೨೮೭ ಎಕರೆಗಳು ಆಗಿವೆ. (ಪ್ರಬಂಧದ ಕೊನೆಗೆ ಅಂಕಿ-ಅಂಶಗಳ ಪಟ್ಟಿ ನೀಡಲಾಗಿದೆ.) ಸರಾಸರಿಯಾಗಿ ಪ್ರತಿಯೊಂದು ಕುಟುಂಬವು ೧ ಎಕರೆಗಿಂತ ಕಡಿಮೆ ಅಂದರೆ ೦.೭೪ ಎಕರೆಯಷ್ಟು ಹೊಂದಿದೆ. ಇದು ರಾಜ್ಯದಲ್ಲಿಯ ೧.೭೪ ಹೆಕ್ಟರ್ ಸರಾಸರಿ ಹಿಡುವಳಿ ಗಾತ್ರಕ್ಕಿಂತ ಕಡಿಮೆ ಇರುವುದು ಗಮನೀಯ ಅಂಶವಾಗಿದೆ (೨೦೦೦-೦೧).

ಕೋಷ್ಟಕ ೫.೫ ಭೂ ಹಿಡುವಳಿಯ ಪ್ರಮಾಣ

ಕ್ರ.ಸಂ.	ಹಿಡುವಳಿದಾರರು (ಹೆಕ್ಟೇರ್‌ಗಳಲ್ಲಿ)	ಕುಟುಂಬಗಳ ಸಂಖ್ಯೆ	ಶೇಕಡವಾರು ಪ್ರಮಾಣ
೧	ಭೂರಹಿತರು	೧೮೪	೪೭.೬೬
೨	ಅತಿಸಣ್ಣ ಹಿಡುವಳಿದಾರರು (೧ ಹೆಕ್ಟೇರ್‌ಗಿಂತ ಕಡಿಮೆ)	೧೮೩	೪೭.೪೦
೩	ಸಣ್ಣ ಹಿಡುವಳಿದಾರರು (೧ ರಿಂದ ೪ ಹೆಕ್ಟೇರ್)	೧೮	೪.೬೬
೪	ಅರೆಮಧ್ಯಮ ಹಿಡುವಳಿದಾರರು (೨ ರಿಂದ ೪ ಹೆಕ್ಟೇರ್)	೧	೦.೨೫
೫	ಮಧ್ಯಮ ಹಿಡುವಳಿದಾರರು (೪ ರಿಂದ ೧೦ ಹೆಕ್ಟೇರ್)	--	--
೬	ದೊಡ್ಡ ಹಿಡುವಳಿದಾರರು (೧೦ ಹೇಕ್ಟೇರ್‌ಗಿಂತ ಮೇಲ್ಪಟ್ಟು)	--	--

ಮೇಲಿನ ಕೋಷ್ಟಕ ೫.೫ ರಿಂದ ವ್ಯಕ್ತವಾಗುವ ಅಂಶವೆಂದರೆ ಇವರಲ್ಲಿ ಭೂರಹಿತ ಕುಟುಂಬಗಳ ಸಂಖ್ಯೆ ೧೮೪ ಇದ್ದು, ಅವರ ಶೇಕಡವಾರು ಪ್ರಮಾಣ ೪೭.೬೬ರಷ್ಟು ಇದೆ. ಅತಿಸಣ್ಣ ಹಿಡುವಳಿದಾರರು, ಸಣ್ಣ ಹಿಡುವಳಿದಾರರು, ಅರೆಮಧ್ಯಮ ಹಿಡುವಳಿದಾರರ ಪ್ರಮಾಣವು ಕ್ರಮವಾಗಿ ೧೮೩, ೧೮ ಮತ್ತು ೧ ಕುಟುಂಬಗಳು ಇದ್ದು ಅವುಗಳ ಶೇಕಡವಾರು ಪ್ರಮಾಣ ಕ್ರಮವಾಗಿ ೪೭.೪೦, ೪.೬೬ ಮತ್ತು ೦.೨೫ ರಷ್ಟಿದೆ. ಇವರಲ್ಲಿ ಮಧ್ಯಮ ಮತ್ತು ದೊಡ್ಡ ಹಿಡುವಳಿದಾರರು ಇಲ್ಲದೆ ಇರುವುದನ್ನು ಕಾಣಬಹುದಾಗಿದೆ.

೫.೧.೪ ಉಣ್ಣೆ

ಉಣ್ಣೆ ಕುರಿಯ ಉಪ-ಉತ್ಪನ್ನವಾಗಿದೆ. ಸಾಮಾನ್ಯವಾಗಿ ದೇಶದಲ್ಲಿರುವ ಕುರಿಗಳ ಉಣ್ಣೆಯನ್ನು ವರ್ಷದಲ್ಲಿ ೨ ಅಥವಾ ೩ ಸಾರಿ ಕತ್ತರಿಸಲಾಗುತ್ತದೆ. ಅಲೆಮಾರಿ ಕುರುಬರು ತಮ್ಮ ಜೀವನೋಪಾಯಕ್ಕಾಗಿ ಕುರಿಸಾಕಣೆ ಮಾಡಿರುವ ಬಳ್ಳಾರಿ ಮತ್ತು ಡೆಕ್ಕನಿ ತಳಿಯ ಕುರಿಗಳ ಉಣ್ಣೆಯನ್ನು ವರ್ಷಕ್ಕೆ ಎರಡೂ ಬಾರಿ ಕತ್ತರಿಸುತ್ತಾರೆ. ಕಾರಹುಣ್ಣಿಮೆ (ಮೇ-ಜೂನ್ ತಿಂಗಳು) ಸಮಯದಲ್ಲಿ ಒಮ್ಮೆ ಕತ್ತರಿಸಿದರೆ ದೀಪಾವಳಿಯ (ನವ್ಹೆಂಬರ್-ಡಿಸೆಂಬರ್) ನಂತರ ಮತ್ತೊಮ್ಮೆ ಕತ್ತರಿಸುತ್ತಾರೆ. ಇದರಲ್ಲಿ ಕಾರಹುಣ್ಣಿಮೆ

ಸಮಯದಲ್ಲಿ ಕತ್ತರಿಸುವ ಉಣ್ಣೆಯು ದೀಪಾವಳಿ ಸಮಯದಲ್ಲಿ ಕತ್ತರಿಸುವ ಉಣ್ಣೆಗಿಂತ ಉತ್ತಮವಾದದು ಮತ್ತು ತೂಕದಲ್ಲಿ ಸ್ವಲ್ಪ ಹೆಚ್ಚಾಗಿಯೂ ಇರುತ್ತದೆ. ದೀಪಾವಳಿಯಿಂದ ಕಾರಹುಣ್ಣಿಮೆಯವರಿಗೆ ಕುರಿಗಳಿಗೆ ಸಾಕಷ್ಟು ಮೇವು ದೊರೆಯುತ್ತದೆ. ಕೃಷಿ ಸುಗ್ಗಿ ಆಗ ತಾನೇ ಆರಂಭವಾಗಿ ಏಪ್ರಿಲ್ ತಿಂಗಳಲ್ಲಿ ಮುಕ್ತಾಯವಾಗುತ್ತವೆ. ಈ ಅವಧಿಯಲ್ಲಿ ಕುರಿಗಳಿಗೆ ಮೇಯಲು ಹತ್ತಿ ತೊಪ್ಪಲು, ಜೋಳದ ದಂಟು, ಸೂರ್ಯಕಾಂತಿ ತೆನೆ, ನೀರಾವರಿಯಲ್ಲಿ ದೊರೆಯುವ ಭತ್ತದ ತೆನೆ ಹಾಗೂ ಹಸಿರು ಮೇವು, ರಾಶಿ ಮಾಡಿದಾಗ ಸಿಡಿದ ಸಿಡಿಕಾಳುಗಳು, ಜಾಲಿಯ ಕಾಯಿ, ರಿಜ್ಜರಕಾಯಿ, ಜಂಬೆಕಾಯಿ, ಇತ್ಯಾದಿ ಸಿಗುವುದರಿಂದ ಸಹಜವಾಗಿ ಉಣ್ಣೆಯೂ ತೂಕವಿರುತ್ತದೆ, ಉತ್ತಮ ಗುಣಮಟ್ಟದ್ದಾಗಿರುತ್ತದೆ. ಉಣ್ಣೆಯನ್ನು ಎರಡು ವಿಧಾನಗಳಲ್ಲಿ ಕತ್ತರಿಸುವರು. ತೊಳೆದು ಕತ್ತರಿಸುವುದು ಮತ್ತು ತೊಳೆಯದೆ ಕತ್ತರಿಸುವುದು.

೧. **ತೊಳೆದು ಕತ್ತರಿಸುವ ವಿಧಾನ :** ಉಣ್ಣೆ ಕತ್ತರಿಸಲು ಮೂರ್‍ನಾಲ್ಕು ದಿನಗಳು ಇರುವಾಗಲೇ ಕುರಿಗಳನ್ನು ಹರಿಯುವ ಅಥವಾ ತಿಳಿ ನೀರಿನಲ್ಲಿ ತೊಳೆಯುವರು. ಇದರಿಂದ ಕುರಿಗಳ ಮೈಗೆ ಅಂಟಿದ ಕಸ-ಕಡ್ಡಿ, ಮುಳ್ಳು, ಕೊಳೆಯಲ್ಲ ಹೋಗಿ ಉಣ್ಣೆ ಸ್ವಚ್ಛವಾಗುತ್ತದೆ. ಈ ರೀತಿ ಮಾಡುವುದರಿಂದ ಸ್ವಲ್ಪ ಹೆಚ್ಚಿನ ಬೆಲೆ ಪಡೆಯಬಹುದು.

೨. **ತೊಳೆಯದೆ ಕತ್ತರಿಸುವ ವಿಧಾನ :** ಕುರಿಗಳನ್ನು ನೀರಿನಲ್ಲಿ ತೊಳೆಯದೆ ಉಣ್ಣೆ ಕತ್ತರಿಸುವುದು. ಕತ್ತರಿಸಿದ ನಂತರ ನೀರಿನಲ್ಲಿ ಹಾಕಿ, ತೊಳೆದು, ಸೋಸಿ, ಬಿಸಿಲಿಗೆ ಒಣಗಿಸಿ ನಂತರ ಮಾರಲಾಗುತ್ತದೆ. ಇದು ಶ್ರಮದಾಯಕವಾದ್ದರಿಂದ ಈ ಪದ್ಧತಿಯನ್ನು ಇವರು ಅನುಸರಿಸುವುದಿಲ್ಲ. ರಾಯಚೂರು ಜಿಲ್ಲೆಯ ನೆಲೆನಿಂತ ಮತ್ತು ಅರೆ ಅಲೆಮಾರಿ ಕುರಿಗಾರರು ಈ ಪದ್ಧತಿಯನ್ನು ಅನುಸರಿಸುವರು.

ಅಲೆಮಾರಿ ಕುರುಬರು ಕುರಿಗಳ ಉಣ್ಣೆಯನ್ನು ತಾವೇ ಕತ್ತರಿಸುತ್ತಾರೆ. ಇಲ್ಲವಾದರೆ ಚಳ್ಳಕೆರೆ ಕಡೆಯ ಕುರುಬರಿಗೆ ಉಣ್ಣೆಯನ್ನು ಕತ್ತರಿಸಲು ಕೊಡುತ್ತಾರೆ. ತಾವೇ ಕತ್ತರಿಸಿದರೆ ೫-೬ ಕುಟುಂಬದ ಹಿರಿಯ ಸದಸ್ಯರು ಸೇರಿಕೊಂಡು ದಿನ ಒಂದು ಕುಟುಂಬದ ಕುರಿ ಹಿಂಡಿನಂತೆ ಕತ್ತರಿಸುವರು. ಹೀಗೆ ಕತ್ತರಿಸಿದ ಉಣ್ಣೆಯನ್ನು ಉಣ್ಣೆ ವ್ಯಾಪಾರಿಗಳಿಗೆ ಮಾರಾಟ ಮಾಡಬಹುದು, ಇಲ್ಲವಾದರೆ ಚಳ್ಳಕೆರೆ ಅಥವಾ ರಾಣೆಬೆನ್ನೂರಿಗೆ ಸಾಗಣೆ ಮಾಡಿ ಮಾರಾಟ ಮಾಡುತ್ತಾರೆ. ಚಳ್ಳಕೆರೆ ಕಡೆಯ ಕುರುಬರು ಉಣ್ಣೆ ಕತ್ತರಿಸಿದರೆ ಕುರಿಗೆ ೨ ರೂಪಾಯಿಗಳನ್ನು ಕೊಡಬೇಕು. ೩ ಕುರಿಯ ಉಣ್ಣೆಯನ್ನು ಕೂಡಿಸಿದರೆ ೧ ಕೆ.ಜಿ. ಆಗುತ್ತದೆ. ೧ ಕೆ.ಜಿ. ಉಣ್ಣೆ ಮಾರಾಟ ಮಾಡಿದಾಗ ೬ ರಿಂದ ೮ ರೂಪಾಯಿಗಳು ದೊರೆಯುತ್ತದೆ. ಉಣ್ಣೆ ಕತ್ತರಿಸಿ ಮಾರಾಟ ಮಾಡಿದ ಹಣವು ಕೆಲವೊಮ್ಮೆ ಖರ್ಚಿಗೆ ಸಮವಾದರೆ ಇನ್ನೂ ಕೆಲವೊಮ್ಮೆ ೧ ಕೆ.ಜಿ. ಉಣ್ಣೆಗೆ ೧ ರಿಂದ ೨ ರೂ.ಗಳು ಆದಾಯ ದೊರೆಯುತ್ತದೆ. ಸಾಮಾನ್ಯವಾಗಿ ಬಹಳಷ್ಟು ಅಲೆಮಾರಿ ಕುರುಬರು ತಾವೇ ಉಣ್ಣೆ ಕತ್ತರಿಸಿ ಮಾರಾಟ ಮಾಡದೆ

ಕುರಿಗೆ ಒಂದು ರೂಪಾಯಿಯಂತೆ ಚಳ್ಳಕೆರೆ ಕುರುಬರಿಂದ ಪಡೆದು ಅವರಿಗೆ ಉಣ್ಣೆ ಕತ್ತರಿಸಿಕೊಳ್ಳಲು ಹೇಳುತ್ತಾರೆ. ವರ್ಷಕ್ಕೆ ಎರಡೂ ಸಾರಿ ಉಣ್ಣೆ ಕತ್ತರಿಸುವುದರಿಂದ ಅಲೆಮಾರಿ ಕುರುಬರಿಗೆ ವರ್ಷಕ್ಕೆ ೨ ರೂ.ವರೆಗೆ ಆದಾಯ ಬರುತ್ತದೆ. ಉಣ್ಣೆಯ ಒಟ್ಟು ಆದಾಯ ಅವನ ಕುರಿಗಳ ಸಂಖ್ಯೆಯಿಂದ ನಿರ್ಧಾರವಾಗುತ್ತದೆ. ಉಣ್ಣೆ ಕತ್ತರಿಸಿದ ನಂತರ ಮೈಗೆ ಕೊಬ್ಬರಿ ಎಣ್ಣೆ ಸವರುವರು. ಒಂದುವೇಳೆ ಚರ್ಮರೋಗ ಕಂಡುಬಂದಲ್ಲಿ ಅವುಗಳ ಮೈಗೆ ಬೇವಿನ ಎಣ್ಣೆ ಅಥವಾ ಹೊಂಗೆ ಎಣ್ಣೆಯನ್ನು ಹಚ್ಚುತ್ತಾರೆ.

ಕುರಿಗಳ ಉಣ್ಣೆಯನ್ನು ಯಂತ್ರದ ಸಹಾಯದಿಂದ ಕತ್ತರಿಸುವುದು ಒಳ್ಳೆಯದು. ಯಂತ್ರದಿಂದ ಕತ್ತರಿಸುವುದರಿಂದ ಒಂದೇ ಸಮನಾಗಿ ಬುಡಕ್ಕೆ ಕತ್ತರಿಸಬಹುದು ಮತ್ತು ಉದ್ದನೆಯ ಉಣ್ಣೆಯನ್ನು ಪಡೆಯಬಹುದು ಹಾಗೂ ದಿನವೊಂದಕ್ಕೆ ಹೆಚ್ಚು ಕುರಿಗಳ ಉಣ್ಣೆ ಕತ್ತರಿಸಲು ಸಾಧ್ಯವಾಗುತ್ತದೆ. ಆದರೆ ಇದು ಅಲೆಮಾರಿ ಕುರುಬರ ಕುರಿಗಳಿಗೆ ಆಗದ ಕೆಲಸ. ಕುರಿಗಳು ಅಡವಿ, ಬೆಟ್ಟ-ಗುಡ್ಡಗಳಲ್ಲಿರುವುದರಿಂದ ಯಂತ್ರಗಳನ್ನು ಅಲ್ಲಿಗೆ ತೆಗೆದುಕೊಂಡು ಹೋಗಿ ಕತ್ತರಿಸುವುದು ಕಷ್ಟದ ಕಾರ್ಯ. ಇವರು ಉಣ್ಣೆ ಕತ್ತರಿಸುವಾಗ ಶರೀರದ ಎಲ್ಲ ಭಾಗದ ಉಣ್ಣೆಯನ್ನು ಕೂಡಿಸಿ ಕತ್ತರಿಸುತ್ತಾರೆ. ಇವರು ಸಾಕುವ ಕುರಿಗಳಿಗೆ ಅಂದರೆ "ಡೆಕ್ಕನಿ ಜಾತಿಯ ಕುರಿಗಳಿಗೆ ತಲೆ, ಎದೆ, ಹೊಟ್ಟೆ ಮತ್ತು ಕುತ್ತಿಗೆಯ ಕೆಳಭಾಗದಲ್ಲಿ ಉಣ್ಣೆ ಬೆಳೆದಿರುವುದಿಲ್ಲ. ಈ ಭಾಗವು ಒರಟು ಕೂದಲುಗಳಿಂದ ಕೂಡಿರುತ್ತದೆ. "ಹಿಂಗಾಲಿನ ಚಪ್ಪೆ(ತೊಡೆ)ಯ ಮೇಲಿನ ಉಣ್ಣೆಯು ಅಷ್ಟು ಉತ್ತಮ ಗುಣಮಟ್ಟದ್ದಾಗಿರುವುದಿಲ್ಲ. ತೋಳಿನ ಮೇಲಿನ ಮತ್ತು ಬೆನ್ನಿನ ಮೇಲಿನ ಉಣ್ಣೆಯು ಮೃದುವಾಗಿ ಉತ್ತಮವಾಗಿರುತ್ತದೆ. ಕಾಲು ಮತ್ತು ಹೊಟ್ಟೆಯ ಮೇಲಿನ ಉಣ್ಣೆಯು ಒರಟಾಗಿರುತ್ತದೆ. ಶರೀರದ ಮೇಲಿರುವ ಉಣ್ಣೆ ಮತ್ತು ಕೂದಲುಗಳನ್ನು ಕೂಡಿಸಿ ಕತ್ತರಿಸುವುದರಿಂದ ಒಳ್ಳೆಯ ಬೆಲೆ ಪಡೆಯಲು ಆಗುವುದಿಲ್ಲ" (ರಾಮರಾವ್ ಜ್ಯೋತಿ:೧೯೮೯:೬೨). ಆದ್ದರಿಂದ ಉಣ್ಣೆ ಕತ್ತರಿಸುವಾಗ ಉಣ್ಣೆ ಮತ್ತು ಕೂದಲನ್ನು ಬೇರೆ ಬೇರೆಯಾಗಿ ಕತ್ತರಿಸಿದರೆ ಅನುಕೂಲವಾಗುತ್ತದೆ.

ಅಲೆಮಾರಿ ಕುರುಬರು ಸಾಕುವ ಬಳ್ಳಾರಿ ಮತ್ತು ಡೆಕ್ಕನಿ ತಳಿ ಕುರಿಗಳ ಉಣ್ಣೆಯನ್ನು ಕೂಡಿಸಿ 'ಡೆಕ್ಕನಿ ಉಣ್ಣೆ' ಎನ್ನುವರು. ಇದು ಒರಟಾಗಿದ್ದು ೨೦-೬೦ ಮಿ.ಮೀ. ಉದ್ದವಾಗಿರುತ್ತದೆ. ಈ ಉಣ್ಣೆಯು ಕಪ್ಪು, ಬಿಳಿ ಮತ್ತು ಕೆಂಪು ಮೊದಲಾದ ಬಣ್ಣಗಳಿಂದ ಕೂಡಿದ್ದು ಮಿಶ್ರ ಉಣ್ಣೆಯಾಗಿದೆ. ಸದ್ಯಕ್ಕೆ ಈ ಉಣ್ಣೆಯಿಂದ ಸಿಪಾಯಿಗಳಿಗೆ ಬೇಕಾಗುವ ಒರಟು ಹಾಸುಗಂಬಳಿ, ಕಂಬಳಿಗಳು, ಗೊಂಗಡಿಗಳು, ಟೆಲಿಫೋನ್ ಮ್ಯಾಟ್, ಚೇರ್‌ಮ್ಯಾಟ್ ಇತ್ಯಾದಿ ಒರಟು ಉಣ್ಣೆಯ ಉತ್ಪನ್ನಗಳನ್ನು ತಯಾರಿಸಲಾಗುವುದು.

ಕೋಷ್ಟಕ ೫.೬ ಉಣ್ಣೆ ಉತ್ಪಾದನೆ (ಕರ್ನಾಟಕ) ೧೯೯೬-೯೭ ರಿಂದ ೨೦೦೫-೦೬ ರವರೆಗೆ

ವರ್ಷಗಳು	ಪ್ರತಿ ಕುರಿಯ ಸರಾಸರಿ ಉಣ್ಣೆಯ ಇಳುವರಿ ಗ್ರಾಂ.ಗಳಲ್ಲಿ	ಉಣ್ಣೆಯ ಉತ್ಪಾದನೆ ಟನ್‌ಗಳಲ್ಲಿ	ಹಿಂದಿನ ವರ್ಷದ ಶೇಕಡವಾರು ಬದಲಾವಣೆ
೧೯೯೬-೯೭	೭೪೦	೪೨೨೯	--
೧೯೯೭-೯೮	೭೨೮	೪೬೯೧	೧೦.೯೨
೧೯೯೮-೯೯	೭೩೬	೫೨೦೫	೧೦.೯೬
೧೯೯೯-೨೦೦೦	೭೩೧	೫೪೪೧	೪.೫೩
೨೦೦೦-೦೧	೭೨೮	೫೭೦೩	೪.೮೧
೨೦೦೧-೦೨	೭೬೮	೫೭೫೭	೦.೯೫
೨೦೦೨-೦೩	೭೪೨	೫೪೬೯	- ೫.೦೦
೨೦೦೩-೦೪	೭೩೮	೫೩೫೫	- ೨.೦೮
೨೦೦೪-೦೫	೭೪೫	೫೪೮೪	೨.೪೧
೨೦೦೫-೦೬	೭೪೮	೫೫೮೫	೧.೮೪

ಆಧಾರ: *Estimation Report - Department of Animal Husbandary and Veterinary services, Bangalore, 2006*

ಮೇಲಿನ ಕೋಷ್ಟಕ ವಿವಿಧ ವರ್ಷಗಳಲ್ಲಿ ಪ್ರತಿ ಕುರಿಯ ವಾರ್ಷಿಕ ಉಣ್ಣೆಯ ಇಳುವರಿ ಪ್ರಮಾಣ, ಒಟ್ಟು ಉಣ್ಣೆಯ ಉತ್ಪಾದನೆ ಮತ್ತು ಉಣ್ಣೆಯ ಶೇಕಡವಾರು ಬದಲಾವಣೆಯನ್ನು ತೋರಿಸುತ್ತದೆ. ಉಣ್ಣೆಯ ಇಳುವರಿ ಮತ್ತು ಒಟ್ಟು ಉಣ್ಣೆ ಉತ್ಪಾದನೆಯ ಪ್ರಮಾಣ, ಎಲ್ಲ ವರ್ಷಗಳಲ್ಲಿ ಸ್ಥಿರವಾಗಿಲ್ಲ. ಉದಾಹರಣೆಗೆ ೨೦೦೧-೦೨ರಲ್ಲಿ ಪ್ರತಿ ಕುರಿಯ ಉಣ್ಣೆಯ ಇಳುವರಿ ೭೬೮ ಗ್ರಾಂಗಳಷ್ಟಿದ್ದು ಗರಿಷ್ಟವಾಗಿದೆ. ಅದೇ ವರ್ಷ ಉಣ್ಣೆ ಉತ್ಪಾದನೆ ೫೭೫೭ ಟನ್‌ಗಳಷ್ಟಿದ್ದು, ಇತರೆ ವರ್ಷಗಳಿಗೆ ಹೋಲಿಕೆ ಮಾಡಿದಾಗ ಗರಿಷ್ಟವಾಗಿದೆ. ನಂತರದ ವರ್ಷಗಳಲ್ಲಿ ಪ್ರತಿ ಕುರಿಯ ಉಣ್ಣೆ ಇಳುವರಿ ಮತ್ತು ಒಟ್ಟು ಉತ್ಪಾದನೆ ಕಡಿಮೆಯಾಗಿ ನಂತರ ಹೆಚ್ಚಾಗಿರುವುದನ್ನು ಕಾಣುತ್ತೇವೆ. ಈ ರೀತಿ ಹೆಚ್ಚು-ಕಡಿಮೆಯಾಗಲು ಮಳೆಯ ಪ್ರಮಾಣ, ವಾತವರಣ, ಕುರಿಗಳಿಗೆ ದೊರೆಯುವ ಮೇವು-ನೀರು ಮತ್ತು ರೋಗ-ರುಜಿನ ಇತ್ಯಾದಿ ಅಂಶಗಳು ಕಾರಣವಾಗಿವೆ.

ಚರ್ಮ : ಚರ್ಮ ಕುರಿ-ಮೇಕೆಗಳ ಉಪ ಉತ್ಪನ್ನವಾಗಿದ್ದು, ಇಂದು ದೇಶದಲ್ಲಿ ಬೃಹತ್

ಉದ್ಯಮವಾಗಿ ಬೆಳೆದಿರುವುದರ ಜೊತೆಗೆ ಲಕ್ಷಾಂತರ ಜನರಿಗೆ ಉದ್ಯೋಗ ನೀಡಿದೆ ಹಾಗೂ ವಿದೇಶಿ ವಿನಿಮಯ ಗಳಿಕೆಯಲ್ಲಿ ಇದರ ಪಾತ್ರ ಗಣನೀಯವಾಗಿದೆ. ಇದರಲ್ಲಿ ಅಲೆಮಾರಿ ಕುರುಬರ ಕೊಡುಗೆ ಅನನ್ಯವಾದದು. ಇವರು ತಮ್ಮ ಬದುಕುಗಳನ್ನು ಕಟುಕರಿಗೆ (ವ್ಯಾಪಾರಸ್ಥರಿಗೆ) ಮಾರುತ್ತಾರೆ. ಕುರಿ-ಮೇಕೆಗಳನ್ನು ಕೊಯ್ದು ಚರ್ಮ ಮತ್ತು ಮಾಂಸ ಭಾಗ ಮಾಡಿ ಮಾರಾಟ ಮಾಡುವುದಿಲ್ಲ. ದೇವರಿಗೆ ಬಲಿ, ಹಿರಿಯರ ಹಬ್ಬ ಇತ್ಯಾದಿ ಪ್ರಸಂಗಗಳಲ್ಲಿ ಕುರಿ-ಮರಿ ಬಲಿಕೊಟ್ಟಾಗ ಮಾತ್ರ ಚರ್ಮ ಮಾರುತ್ತಾರೆ. ಚಿಕ್ಕೋಡಿ ತಾಲೂಕು ನಿಪ್ಪಾಣಿಯ ಚರ್ಮ ವ್ಯಾಪಾರಿಗಳಾದ ಬೋಲಾಶೇಟ್‌ಕೇ ಮತ್ತು ದುಂಡಿಬಾ ಗೋಡಕೇ ಪ್ರಕಾರ "ಕುರಿ ಚರ್ಮ ೧೦೦ ರಿಂದ ೧೨೦ ರೂ.ಗಳವರೆಗೆ, ಮೇಕೆ ಚರ್ಮ ೧೨೦ ರಿಂದ ೧೪೦ ರೂ.ವರೆಗೆ ಬೆಲೆಕಟ್ಟಿ ಮಾಂಸ ವ್ಯಾಪಾರಿಗಳಿಂದ ಕೊಂಡುಕೊಳ್ಳುತ್ತೇವೆ. ಅವು ಕೆಡದ ಹಾಗೆ ಉಪ್ಪನ್ನು ಹಚ್ಚಿ ಚೆನ್ನೈ, ಮೀರಜ್, ಕಾನ್ಪುರ್, ಕಲ್ಕತ್ತಾ, ಬಾಂಬೆ, ಹೈದರಾಬಾದ್ ನಗರಗಳಲ್ಲಿರುವ ಬೃಹತ್ ಚರ್ಮ ಉದ್ಯಮಿಗಳಿಗೆ ಸಾಗಿಸಿ ಮಾರಾಟ ಮಾಡುತ್ತೇವೆ. ಆ ಉದ್ಯಮಗಳು ಚರ್ಮವನ್ನು ಹದಮಾಡಿ ವಿದೇಶಗಳಿಗೆ ರಫ್ತು ಮಾಡುತ್ತವೆ"(ಮಾಹಿತಿದಾರ: ಬೋಲಾ ಶೇಟ್ ಕೇ:ನಿಪ್ಪಾಣಿ). ಕುರಿ ಮೇಕೆಗಳ ಚರ್ಮದಿಂದ ಪರ್ಸ್, ಬೂಟು, ಬೆಲ್ಟ್, ಬ್ಯಾಗ್, ವಾಚ್‌ಬೆಲ್ಟ್, ಟೋಪಿ, ಬ್ರಿಫ್‌ಕೇಶ್ ಹೀಗೆ ಹಲವಾರು ರೀತಿಯ ನಿತ್ಯೋಪಯೋಗಿ ವಸ್ತುಗಳನ್ನು ತಯಾರು ಮಾಡಲಾಗುತ್ತದೆ. ಪ್ರತಿವರ್ಷ ಕರ್ನಾಟಕ ರಾಜ್ಯದಲ್ಲಿ ಹನ್ನೆರಡು ಕೋಟಿಗಳಿಗಿಂತ ಅಧಿಕ ವ್ಯವಹಾರ ಚರ್ಮದಿಂದಲೇ ನಡೆಯುತ್ತದೆ.

ಸಾಲದ ವ್ಯವಸ್ಥೆ : ಅಲೆಮಾರಿ ಕುರುಬರ ಆದಾಯ ಸ್ಥಿರವಾಗಿರುವುದಿಲ್ಲ. ಅವರ ಆದಾಯವು ಎರಡು ಅಂಶಗಳನ್ನು ಅವಲಂಬಿಸಿರುತ್ತದೆ. ಒಂದು ಕುರಿಗಳಿಗೆ ದೊರೆಯುವ ಮೇವು-ನೀರು. ಎರಡು ಕುರಿಗಳಿಗೆ ಕಾಡುವ ರೋಗ-ರುಜಿನಗಳು. ಇವರು ಅಲೆದಾಡುವ ಪ್ರದೇಶಗಳಲ್ಲಿ ಮಳೆ ಕಡಿಮೆಯಾಗಿ ಮೇವು-ನೀರಿನ ಸಮಸ್ಯೆಯದಾಗ ಕುರಿಗಳ ಸಂತಾನಾಭಿವೃದ್ಧಿ ಕುಂಠಿತಗೊಳ್ಳುತ್ತದೆ. ಇದರ ಪರಿಣಾಮ ಮರಿಗಳ ಸಂಖ್ಯೆ ಕಡಿಮೆಯಾಗಿ ಆ ವರ್ಷದ ಕೌಟುಂಬಿಕ ಆದಾಯ ಕ್ಷೀಣಿಸುತ್ತದೆ. ಕುರಿಗಳಿಗೆ ರೋಗ ರುಜಿನಗಳು ಕಾಣಿಸಿಕೊಂಡು ಬೇಗ ವಾಸಿಯಾದರೆ ಕೇವಲ ಔಷಧದ ಖರ್ಚು ಮಾತ್ರ ಬರುತ್ತದೆ. ಇದರ ಬದಲು ರೋಗಗಳಿಂದ ಕುರಿ ಮತ್ತು ಮರಿಗಳು ತೀರಿಕೊಂಡಾಗ ಅಲೆಮಾರಿ ಕುರುಬರು ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತಾರೆ. ಇಂತಹ ಸ್ಥಿತಿಯಲ್ಲಿ ತನ್ನ ಕೌಟುಂಬಿಕ ಖರ್ಚು-ವೆಚ್ಚಗಳನ್ನು ಸರಿದೂಗಿಸಲು ಸಾಲದ ಮೊರೆ ಹೋಗಬೇಕಾಗುತ್ತದೆ. ಇವರು ಬ್ಯಾಂಕಿನ ವ್ಯವಹಾರ ಅರಿಯದ ಮುಗ್ಧರು ಹಾಗೂ ನಿರಕ್ಷರಿಗಳು. ಇವರ ಆಸ್ತಿ ಚರಾಸ್ತಿ ಅಥವಾ ಜಂಗಮ ಆಸ್ತಿ ಕುರಿಗಳೇ ಆಗಿವೆ. ಈ ಆಸ್ತಿಯು ಯಾವಾಗಲೂ ಚಲನಶೀಲವಾಗಿರುತ್ತದೆ. ಕೆಲವೊಮ್ಮೆ ಈ ಆಸ್ತಿಯು ನೈಸರ್ಗಿಕ ಪ್ರಕೋಪಗಳಾದ ಸಿಡಿಲು, ಮಳೆ, ನೆರೆಹಾವಳಿ ಅಥವಾ ರೋಗಗಳಿಗೆ ಬಲಿಯಾಗುತ್ತವೆ. ಇಂತಹ ಆಸ್ತಿಯನ್ನು ಆಧಾರವಾಗಿಟ್ಟುಕೊಂಡು ಯಾವ ಬ್ಯಾಂಕ್ ತಾನೆ ಸಾಲ ಕೊಡಲು ಮುಂದೆ ಬರುತ್ತದೆ?

ಹಣದ ಅಡಚಣೆ ಉಂಟಾದಾಗ ಸಂಬಂಧಿಕರಲ್ಲಿ ಸ್ವಗ್ರಾಮದ ಜಮೀನ್ದಾರರಲ್ಲಿ ಶ್ರೀಮಂತ ಅಥವಾ ಕುರಿ ವ್ಯಾಪಾರ ಮಾಡುವ ಕಟುಕರಲ್ಲಿ ಸಾಲ ಪಡೆಯುತ್ತಾರೆ. ಸಂಬಂಧಿಕರಲ್ಲಿ ಮತ್ತು ಜಮೀನ್ದಾರರಲ್ಲಿ ಸಾಲ ಪಡೆದಾಗ ಸಾಲಕ್ಕೆ ಪ್ರತಿಫಲವಾಗಿ ಬಡ್ಡಿಯನ್ನು ಕೊಡಬೇಕಾಗುತ್ತದೆ. ಕಟುಕರು ಇವರ ವರ್ತನೆ ಗಮನಿಸಿ ಕುರಿಗಳ ಸಂಖ್ಯೆಯನ್ನು ನೋಡಿ ಸಾಲ ನೀಡಿವುದು ತಿಳಿದುಬಂದಿದೆ. ಬಳ್ಳಾರಿ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯಲ್ಲಿ ಅಲೆದಾಡುವ ಅಲೆಮಾರಿ ಕುರುಬರಿಗೆ ಸಿಂಧನೂರಿನ ಸಗಟು ಕುರಿ ವ್ಯಾಪಾರಸ್ತ ಖಾಜಾಸಾಬ್ ಹಣದ ವ್ಯವಸ್ಥೆ ಮಾಡುತ್ತಾನೆ. ಸಣ್ಣ-ಪುಟ್ಟ ವ್ಯಾಪಾರಸ್ತರು ಅಲ್ಪ-ಸ್ವಲ್ಪ ಸಾಲವನ್ನು ನೀಡುತ್ತಾರೆ. ಇವರು ಸಾಲ ನೀಡಿದ್ದಕ್ಕೆ ಪ್ರತಿಫಲವಾಗಿ ಬಡ್ಡಿಯನ್ನು ಸ್ವೀಕರಿಸುವುದಿಲ್ಲ. ಆದರೆ ಕುರಿ ಅಥವಾ ಮರಿ ಮಾರಾಟ ಮಾಡಿದಾಗ ಮಾರುಕಟ್ಟೆಯ ಮೌಲ್ಯಗಿಂತ ಸ್ವಲ್ಪ ಕಡಿಮೆ ಬೆಲೆಗೆ ತೆಗೆದುಕೊಳ್ಳುತ್ತಾರೆ. ಸಾಲ ಪಡೆದುಕೊಂಡವರು ಕುರಿ-ಮರಿಗಳನ್ನು ಮಾರಾಟ ಮಾಡುವಾಗ ಚೌಕಾಶಿ ಮಾಡುವುದಿಲ್ಲ. ಕಾರಣ ಸಾಲ ಪಡೆದುಕೊಂಡಿದ್ದೇವೆಂಬ ಅಳುಕು ಇರುತ್ತದೆ. ಸಾಮಾನ್ಯವಾಗಿ ಹಣದ ಅಡಚಣೆ ಉಂಟಾದಾಗ ಕುರಿ-ಮರಿಗಳನ್ನು ಮಾರಾಟ ಮಾಡಿ ಕೌಟುಂಬಿಕ ಜೀವನ ನಡೆಸುತ್ತಾರೆ.

೫.೨ ಖರ್ಚಿನ ಮೂಲಗಳು

ಭೂಮಿಯ ಮೇಲೆ ಜನಿಸಿದ ಮಾನವ ತನ್ನ ಜೀವನೋಪಾಯಕ್ಕಾಗಿ ಹಲವಾರು ವೃತ್ತಿಗಳಲ್ಲಿ ತೊಡಗಿಸಿಕೊಂಡಿದ್ದಾನೆ. ಪಶುಪಾಲನೆ, ಕೃಷಿ, ಕೈಗಾರಿಕೆ, ವ್ಯಾಪಾರ, ಬ್ಯಾಂಕು, ಸೇವೆ ಹೀಗೆ ವಿವಿಧ ವೃತ್ತಿಗಳಲ್ಲಿ ತೊಡಗಿರುವುದರಿಂದ ತನ್ನ ಸಾಮರ್ಥ್ಯಕ್ಕೆ ಅನುಗುಣವಾಗಿ ಆದಾಯವನ್ನು ಪಡೆಯುತ್ತಾನೆ. ಪಡೆದ ಆದಾಯದಿಂದ ದೈನಂದಿನ ಖರ್ಚು-ವೆಚ್ಚಗಳನ್ನು ಸರಿದೂಗಿಸುತ್ತಾನೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಅಲೆಮಾರಿ ಕುರುಬರು ತಮ್ಮ ಜೀವನೋಪಾಯಕ್ಕಾಗಿ ಕುರಿ-ಮೇಕೆಗಳನ್ನು ಸಾಕಿದ್ದಾರೆ. ಅವುಗಳಿಂದ ಬಂದ ಆದಾಯದಿಂದಲೇ ಕೌಟುಂಬಿಕ ಖರ್ಚು-ವೆಚ್ಚಗಳನ್ನು ನಿರ್ವಹಿಸಬೇಕು. ಕುಟುಂಬದ ಆಹಾರ, ಉಡುಗೆ-ತೊಡುಗೆ, ವಸತಿಗಾಗಿ ಬಳಸುವ ಗುಡಾರ, ಕುರಿಮರಿಗಳನ್ನು ನಿಯಂತ್ರಿಸಲು ಕುರಿ-ಮರಿ ಬಲೆ, ಕುರಿಗಳಿಗೆ ಬಂದೊದಗುವ ರೋಗಗಳನ್ನು ನಿಯಂತ್ರಿಸಲು ಔಷಧ ಮತ್ತು ಚಿಕಿತ್ಸೆ, ಆಳುಮಕ್ಕಳ ಸಂಬಳ ಹಾಗೂ ಇವೆಲ್ಲದರ ಜೊತೆಗೆ ಹಬ್ಬ-ಹರಿದಿನಗಳು, ಜಾತ್ರೆ, ಮದುವೆ ಮುಂತಾದ ಆಚರಣೆಗಳಿಗೆ ಮಾಡುವ ಖರ್ಚು-ವೆಚ್ಚಗಳು, ಇವುಗಳ ಆಚರಣೆ ಸಮಯದಲ್ಲಿ ತಮ್ಮ ಗ್ರಾಮಗಳಿಗೆ ಹೋಗಿ ಬರುವ ಸಾರಿಗೆ ವೆಚ್ಚ ಇತ್ಯಾದಿ, ಇವೆಲ್ಲವನ್ನು ಕುರಿಗಳಿಂದ ಬಂದ ಆದಾಯದಿಂದಲೇ ಸರಿದೂಗಿಸಬೇಕು.

೫.೨.೧ ಆಹಾರ ದಾನ್ಯಗಳು

ಅಲೆಮಾರಿ ಕುರುಬರು ಹೆಚ್ಚಾಗಿ ಸಸ್ಯ ಆಹಾರಗಳನ್ನು ಬಳಸುತ್ತಾರೆ. ಅಪರೂಪಕ್ಕೊಮ್ಮೆಯಂತೆ ಮಾಂಸ ಸೇವಿಸುತ್ತಾರೆ. ಇವರು ಹೆಚ್ಚಾಗಿ ಬಳಸುವ ಆಹಾರ ದಾನ್ಯಗಳೆಂದರೆ ಜೋಳ, ಅಕ್ಕಿ,

ಅಕ್ಕಿನುಚ್ಚು, ಕಡ್ಲೆಬೆಳೆ, ಹೆಸರು, ಬಟಾಣಿ, ತರಕಾರಿ ಹಾಗೂ ಬೆಲ್ಲ, ಸಕ್ಕರೆ, ಚಹಾಪುಡಿ, ಒಣಮೆಣಸಿನ ಕಾಯಿ ಇತ್ಯಾದಿಗಳ ಮೇಲೆ ಹೆಚ್ಚು ಖರ್ಚು ಮಾಡುತ್ತಾರೆ. ಇವರಲ್ಲಿ ಹೈನೋತ್ಪನ್ನಗಳು ಸಾಕಷ್ಟು ದೊರೆಯುವುದರಿಂದ ತರಕಾರಿ ಮತ್ತು ಎಣ್ಣೆಯ ಮೇಲೆ ಖರ್ಚು ಮಾಡುವ ಹಣ ಕಡಿಮೆ. ಆಹಾರ ಧಾನ್ಯಗಳ ಮೇಲೆ ಖರ್ಚು ಮಾಡುವ ಹಣದ ಪ್ರಮಾಣವು ಕುಟುಂಬದ ಗಾತ್ರ ಮತ್ತು ಬೆಲೆಗಳನ್ನು ಅವಲಂಬಿಸಿರುತ್ತದೆ. ಇವನ್ನು ಸಾಮಾನ್ಯವಾಗಿ ಕುರಿ ತಬ್ಬಿದ ಸ್ಥಳದ ಸಮೀಪ ಪ್ರತಿವಾರ ಜರುಗುವ ಸಂತೆಗಳಲ್ಲಿ ತರುತ್ತಾರೆ. ಉದಾಹರಣೆಗೆ ಬಳ್ಳಾರಿ ಜಿಲ್ಲೆಯ ಶಿರುಗುಪ್ಪದಲ್ಲಿ ಆದಿತ್ಯವಾರ, ಕಮಲಾಪುರ ದಲ್ಲಿ ಸೋಮವಾರ, ಬಳ್ಳಾರಿಯಲ್ಲಿ ಶುಕ್ರವಾರ, ಹೊಸಪೇಟೆಯಲ್ಲಿ ಅದಿತ್ಯವಾರ, ಕಂಪ್ಲಿಯಲ್ಲಿ ಮಂಗಳವಾರದಂದು ಸಂತೆಗಳು ಜರುಗುತ್ತವೆ. ಇಂತಹ ಸಂತೆಗಳಿಗೆ ಬಂದು ಆಹಾರ ಧಾನ್ಯಗಳನ್ನು ಕೊಂಡು ಹೋಗುತ್ತಾರೆ.

ವರ್ಷಕ್ಕೆ ಬೇಕಾಗುವಷ್ಟು ಆಹಾರ ಧಾನ್ಯಗಳನ್ನು ಸಂಗ್ರಹಿಸಿ ಸಂರಕ್ಷಿಸಲು ಗುಡಾರದಲ್ಲಿ ಸಾಧ್ಯವಿಲ್ಲದ್ದರಿಂದ ವಾರದಿಂದ ತಿಂಗಳಿಗಾಗುವಷ್ಟು ಖರೀದಿ ಮಾಡುತ್ತಾರೆ. ಅವು ಖಾಲಿಯಾಗುತ್ತಿದಂತೆ ಮತ್ತೆ ಸಂತೆಗೆ ಬಂದು ತೆಗೆದುಕೊಂಡು ಹೋಗುವರು. ಇವರು ಹೆಚ್ಚಾಗಿ ಜೋಳ ಬಳಸುವುದರಿಂದ ಅನುಕೂಲಸ್ಥರಾಗಿದ್ದವರು ಮತ್ತು ಕುಟುಂಬದ ಗಾತ್ರ ಹೆಚ್ಚಿರುವವರು ಒಂದು ವರ್ಷಕ್ಕೆ ಬೇಕಾಗುವಷ್ಟು ಜೋಳವನ್ನು ಸುಗ್ಗಿಯ ಕಾಲದಲ್ಲಿ ಖರೀದಿ ಮಾಡುತ್ತಾರೆ. ತಮಗೆ ಅನುಕೂಲವಾಗಿರುವ ಗ್ರಾಮಸ್ಥರ ಮನೆಯಲ್ಲಿ ಸಂಗ್ರಹಿಸುತ್ತಾರೆ. ಇದನ್ನು ತಿಂಗಳಿಗೆ ಅಥವಾ ಎರಡು ತಿಂಗಳಿಗೊಮ್ಮೆ ಗುಡಾರದಲ್ಲಿರುವ ಜೋಳ ಖಾಲಿಯಾದಂತೆಲ್ಲ ತೆಗೆದುಕೊಂಡು ಬರುತ್ತಾರೆ. ಸುಗ್ಗಿಯ ಕಾಲದಲ್ಲಿ ಆಹಾರಧಾನ್ಯಗಳ ಬೆಲೆಗಳು ಕಡಿಮೆ ಇರುತ್ತವೆ. ಇಂತಹ ಸಮಯದಲ್ಲಿ ಕೊಂಡರೆ ಸ್ವಲ್ಪ ಹಣ ಉಳಿತಾಯವಾಗುತ್ತದೆ. ಬಡವರಾದವರು ಪ್ರತಿವಾರ ಸಂತೆಯಲ್ಲಿ ಅಥವಾ ಕುರಿ ತಬ್ಬಿದ ಗ್ರಾಮದ ಅಂಗಡಿಗಳಲ್ಲಿ ಕೊಂಡು ಜೀವನ ಸಾಗಿಸುತ್ತಾರೆ.

೫.೨.೨ ಕಂಬಳಿ

ಅಲೆಮಾರಿ ಕುರುಬರು ಚಳಿ, ಗಾಳಿ, ಮಳೆ, ಬಿಸಿಲುಗಳಿಂದ ತಮ್ಮ ದೇಹಗಳನ್ನು ರಕ್ಷಿಸಿಕೊಳ್ಳಲು ಕಂಬಳಿಯನ್ನು ಬಿಟ್ಟು ಬೇರ್ಯಾವುದನ್ನು ಬಳಸುವುದಿಲ್ಲ. ಇದನ್ನು ಕೂಡಲು, ಹಾಸಲು, ಹೊದೆಯಲು ಬಳಸುತ್ತಾರೆ. ಕಂಬಳಿ ಉಷ್ಣ ಆವಾಹಕವಾದ್ದರಿಂದ ದೇಹದ ಉಷ್ಣತೆಯನ್ನು ಒಳಗೆ ಕಾಪಾಡುವುದಲ್ಲದೆ ಪರಿಸರದ ಶೈತ್ಯ ಒಳಗೆ ಬಾರದಂತೆಯು ತಡೆಯುತ್ತದೆ. ಚಳಿಗಾಲದಲ್ಲಿ ಬೆಚ್ಚನೆ ನೀಡಿ, ಮಳೆಗಾಲದಲ್ಲಿ ನೀರನ್ನು ಹಿಡಿದಿಟ್ಟುಕೊಳ್ಳದೆ ಇಳಿಬಿಟ್ಟು, ಬೇಸಿಗೆಯಲ್ಲಿ ತಂಪನ್ನು ನೀಡುತ್ತದೆ. ಇಷ್ಟೆಲ್ಲ ಅನುಕೂಲ ಗಳಿರುವುದರಿಂದಲೇ ಪ್ರತಿಯೊಂದಕ್ಕೂ ಕಂಬಳಿಯನ್ನು ಬಳಸುತ್ತಾರೆ.

ಇವರು ಉಪಯೋಗಿಸುವ ಕಂಬಳಿಗಳ ಬೆಲೆ ಕಡಿಮೆ ಇದ್ದು ಒರಟಾಗಿರುತ್ತವೆ. ಕಂಬಳಿಗಳನ್ನು

ಇವರು ಸಾಕುವ ಬಳ್ಳಾರಿ ಮತ್ತು ಡೆಕ್ಕನ್ ತಳಿಯ ಕುರಿಯ ಉಣ್ಣೆಗಳಿಂದಲೇ ಹೆಚ್ಚಾಗಿ ತಯಾರು ಮಾಡಲಾಗುತ್ತದೆ. ಇಂತಹವನ್ನು ಬಳಸಲು ಕಾರಣ ತಮ್ಮ ಬದುಕುಗಳ ಉಣ್ಣೆಯಿಂದ ತಯಾರು ಮಾಡಿದವು ಎಂಬ ಅಭಿಮಾನ ಒಂದಾದರೆ, ಇನ್ನೊಂದು ಕುಟುಂಬದ ಆರ್ಥಿಕ ಪರಿಸ್ಥಿತಿ ಕಾರಣವಾಗಿದೆ. ಅವರು ಸದಾ ಅಡವಿಯಲ್ಲೆ ಜೀವನ ಕಳೆಯುವುದರಿಂದ ಒರಟು ಕಂಬಳಿಗಳೇ ಬೇಕಾಗುತ್ತವೆ. ಕಲ್ಲು, ಮಣ್ಣು, ಕಟ್ಟಿಗೆಗಳ ಮೇಲೆ ಹಾಸಲು, ಬೇಸಿಗೆ ಕಾಲದಲ್ಲಿ ಕುರಿ ಮರಿಗಳಿಗೆ ನೆರಳೊದಗಿಸಲು, ಮುಂಜಾನೆ ಮರಿಗಳಿಗೆ ಚಿಗುರುಮೇವು ತರಲು, ಸಾಮಾನುಗಳನ್ನು ಕಟ್ಟಿ ಕುದುರೆಯ ಮೇಲೆ ಹೇರಿ ಸಾಗಿಸಲು, ಮಳೆಬಂದಾಗ ಹೊದೆಯಲು ಇತ್ಯಾದಿಗಳಿಗೆ ಕಂಬಳಿ ಬಳಕೆಯಾಗುತ್ತದೆ. ಇಂಥವುಗಳಿಗೆಲ್ಲ ಬಳಸುವುದರಿಂದ ಪ್ರತಿಯೊಬ್ಬರಿಗೆ ವರ್ಷಕ್ಕೆ ಸರಾಸರಿಯಾಗಿ ಒಂದು ಕಂಬಳಿ ಬೇಕಾಗುತ್ತದೆ. ಕಂಬಳಿಯ ಬೆಲೆಗಳು ಸಾಪೇಕ್ಷವಾಗಿ ಭಿನ್ನವಾಗಿದ್ದು ಗುಣಮಟ್ಟದ ಮೇಲೆ ನಿರ್ಧಾರವಾಗುತ್ತದೆ. ಸಾಮಾನ್ಯವಾಗಿ ೩೦೦ ರೂ.ಗಳಿಂದ ೧೨೦೦ ರೂ.ಗಳವರೆಗೆ ಮಾರಾಟವಾಗುತ್ತವೆ. ಇವುಗಳಲ್ಲಿಯೆ ಉತ್ತಮವಾದವು ಇನ್ನೂ ಹೆಚ್ಚಿನ ಬೆಲೆಗೆ ಮಾರಾಟವಾಗುವವು. ಅಲೆಮಾರಿ ಕುರುಬರು ಮಾತ್ರ ಕನಿಷ್ಟ ಬೆಲೆಯಿಂದ ೫೦೦ ರೂ.ಗಳವರೆಗೆ ಕಂಬಳಿಯನ್ನು ಕೊಂಡುಕೊಳ್ಳುತ್ತಾರೆ. ಕಂಬಳಿಗಳ ಬಳಕೆಯು ಕುಟುಂಬದ ಗಾತ್ರವನ್ನು ಅವಲಂಬಿಸಿದ್ದು ಇವುಗಳ ಮೇಲಿನ ವೆಚ್ಚವು ಕುರಿಗಳಿಂದ ಬಂದ ಆದಾಯದಿಂದಲೇ ನಿರ್ವಹಿಸಬೇಕು. ಇದನ್ನು ಸಿಂಧನೂರು, ಚಳ್ಳಕೆರೆ, ರಾಣಿಬೆನ್ನೂರು, ದಾವಣಗೆರೆ, ಹಾವೇರಿ, ಹುಬ್ಬಳ್ಳಿ, ನಿಪ್ಪಾಣಿ ಮುಂತಾದ ಪಟ್ಟಣಗಳಲ್ಲಿ ಕೊಂಡು ತರುತ್ತಾರೆ.

''ಕಂಬಳಿ ಜೀವಂತ ಪೀಠ. ಹುಲಿ, ಜಿಂಕೆ ಚರ್ಮಗಳ ಪೀಠ ಸತ್ತಪೀಠ. ಸತ್ಯಸಂಧ ಶಾಂತಿ ಪ್ರಾಣಿಯಾದ ಕುರಿಯು ಜೀವಂತ ಇರುವಾಗಲೇ ಅದರಿಂದ ಉಣ್ಣೆಯನ್ನು ಪಡೆದು ಕಂಬಳಿ ತಯಾರಿಸುವುದರಿಂದ ಇದು ಜೀವಂತ ಪೀಠವಾಗುವುದು. ಹಿಂಸಾ ಪ್ರಾಣಿಯಾದ ಹುಲಿಯ ಮರಣದ ನಂತರ ಅದರ ಚರ್ಮ ಸುಲಿಯುವುದರಿಂದ ಅದು ಸತ್ತ ಪೀಠವಾಗುವುದು. ಹಾಗಂತಲೇ ಕಂಬಳಿ ಪೀಠಕ್ಕೆ ಮಹತ್ವವಿರುವುದು''(ಮೈತ್ರಿ ಕೆ.ಎಂ.:೧೯೯೬:೯). ಕಂಬಳಿ ಯಾವಾಗಲೂ ಸಜೀವ. ಏಕೆಂದರೆ ಕುರಿಯು ಬದುಕಿರುವಾಗಲೇ ಅದರ ಉಣ್ಣೆ ತೆಗೆದು ಕಂಬಳಿ ತಯಾರು ಮಾಡಲಾಗುತ್ತದೆ. ಇದಕ್ಕಾಗಿಯೇ ಎಲ್ಲಾ ಶುಭ-ಮಂಗಳ ಕಾರ್ಯಗಳಿಗೆ ಬಳಸುತ್ತಾರೆ. ಇದಕ್ಕೆ ಮೈಲಿಗೆ ಇಲ್ಲ. ಆದ್ದರಿಂದಲೇ ದೈವದ ಮೇಲೆ ಅಪಾರ ನಂಬಿಕೆ ಇಟ್ಟಿರುವ ಇವರು ಪ್ರತಿಯೊಂದು ಶುಭಕಾರ್ಯ ಮಾಡುವಾಗ ಹಾಗೂ ಹಬ್ಬ, ಜಾತ್ರೆ, ಹುಣ್ಣಿಮೆ, ಅಮವಾಸ್ಯೆ, ಆದಿತ್ಯವಾರ ಇತ್ಯಾದಿ ದಿನಗಳಲ್ಲಿ ತಮ್ಮ ಮನೆದೇವರು ಹಾಗೂ ಆರಾಧ್ಯ ದೇವರುಗಳ ಪೂಜೆಗ್ಯೆಯುವಾಗ ಕಂಬಳಿಯ ಗದ್ದುಗೆಯನ್ನು ಹಾಕಿ ಪೂಜೆ ಸಲ್ಲಿಸುತ್ತಾರೆ. ಇವರು ಆರಾಧಿಸುವ ಎಲ್ಲಾ ದೇವರುಗಳ ಪೂಜೆಗೆ ಒಂದೇ ತರಹದ ಕಂಬಳಿ ಬಳಸುವುದಿಲ್ಲ. ಇಂತಹ ದೇವರಿಗೆ ಇಂತಹದೇ ಕಂಬಳಿಯಿಂದ ಪೂಜಿಸಬೇಕೆಂಬ ಪದ್ಧತಿ ಇವರಲ್ಲಿದೆ. ಇದು ಕಂಬಳಿಯ ಕೊನೆ(ಅಂಚಿನಲ್ಲಿ)ಯಲ್ಲಿರುವ ಬಿಳಿ ಉಣ್ಣೆಯ ಎಳೆ ಅಥವಾ ಪಟ್ಟಿಯಿಂದ ನಿರ್ಧಾರ

ವಾಗುತ್ತದೆ. ಅದನ್ನು ಅಲೆಮಾರಿ ಕುರುಬರು 'ಏಡು' (ಪಟ್ಟೆ) ಎಂದು ಕರೆಯುತ್ತಾರೆ. ಉದಾಹರಣೆಗೆ ಬೀರದೇವರು, ಮಾಳಿಂಗರಾಯ ದೇವರಿಗೆ ಎರಡೂವರೆ ಏಡು ಇರುವ ಕಂಬಳಿಯನ್ನು ಪೂಜೆಗೆ ಬಳಸಿದರೆ ಅಮೋಘಸಿದ್ಧ, ಕರಿಸಿದ್ಧನಿಗೆ ಮೂರು ಏಡಿನ ಕಂಬಳಿ ಮತ್ತು ರೇವಣ್ಣಸಿದ್ಧನಿಗೆ ಐದು ಏಡಿನ ಕಂಬಳಿ ಬಳಸಬೇಕೆಂಬ ಪದ್ಧತಿ ಇದೆ.

ಕಂಬಳಿ ತಯಾರಿಕೆಯ ವಿಧಾನ

- **ಉಣ್ಣೆ ಕತ್ತರಿಸುವುದು :** ಕಂಬಳಿ ತಯಾರಿಕೆಯ ಮೊದಲ ಹಂತ ಕುರಿಗಳ ಉಣ್ಣೆ ಕತ್ತರಿಸುವುದು. ಇದನ್ನು ಹಲವು ಕುರುಬ ಕುಟುಂಬಗಳು ವೃತ್ತಿಯನ್ನಾಗಿ ಮಾಡಿಕೊಂಡಿದ್ದಾರೆ. ಯಂತ್ರಗಳು ಬರುವ ಮುಂಚೆ ಉಣ್ಣೆ ಕತ್ತರಿಸುವುದಕ್ಕೆ ಸಂಪೂರ್ಣವಾಗಿ ಇವರನ್ನೇ ಅವಲಂಬಿಸಲಾಗುತ್ತಿತ್ತು. ಅಲೆಮಾರಿ ಕುರುಬರು ಇಂದಿಗೂ ಇವರನ್ನೇ ಹೆಚ್ಚಾಗಿ ಅವಲಂಬಿಸಿದ್ದಾರೆ, ಕೆಲವೊಮ್ಮೆ ತಾವೇ ಕತ್ತರಿಸುತ್ತಾರೆ.

- **ನೂಲುವುದು :** ಕಂಬಳಿ ನೇಯ್ಗೆಯಲ್ಲಿ ನೂಲುವುದು ಪ್ರಮುಖ ಕಾರ್ಯ. ನೂಲು ಯಾವ ಮಟ್ಟದಲ್ಲಿರುತ್ತದೆಯೋ ಕಂಬಳಿ ಆ ಮಟ್ಟದಲ್ಲಿರುತ್ತದೆ. ಇಲ್ಲಿ ಚರಕ ಪ್ರಮುಖ ಪಾತ್ರವಹಿಸುತ್ತದೆ. ಸಾಮಾನ್ಯವಾಗಿ ನೂಲುವ ಕೆಲಸವನ್ನು ಕಂಬಳಿ ತಯಾರಿಸುವ ಕುಟುಂಬದ ಸ್ತ್ರೀಯರು ನಿರ್ವಹಿಸುತ್ತಾರೆ. ಕೆಲವು ಸಂದರ್ಭಗಳಲ್ಲಿ ಕೂಲಿಕೊಟ್ಟು ನೂಲಿಸುವುದು ಉಂಟು. ಉದಾಹರಣೆ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ಮತ್ತು ಮೊಳಕಾಲ್ಮೂರು ತಾಲ್ಲೂಕಿನ ಕುರುಬ ಕುಟುಂಬಗಳು ಈ ವೃತ್ತಿಯಲ್ಲಿ ತೊಡಗಿರುವುದನ್ನು ಕಾಣಬಹುದಾಗಿದೆ. ಗ್ರಾಮದಲ್ಲಿರುವ ಅಲೆಮಾರಿ ಕುರುಬರ ಹಿರಿಯರು ಈ ಕಾರ್ಯವನ್ನು ಮಾಡುತ್ತಾರೆ. ನೂಲಿನಲ್ಲಿ ಅನೇಕ ವಿಧಗಳು ಉಂಟು. ೧. ಹುರಿಗಂಬಳಿ ನೂಲು ಅಥವಾ ಒರಟುಗಂಬಳಿ ನೂಲು ೨. ಉಜ್ಜುಗಂಬಳಿ ನೂಲು ೩. ಸಣ್ಣಗಂಬಳಿ ನೂಲು ಇತ್ಯಾದಿ. ಒಟ್ಟಿನಲ್ಲಿ ನೂಲಿನ ಗುಣಮಟ್ಟದಂತೆ ಕಂಬಳಿ ತಯಾರಾಗುತ್ತದೆ.

- **ಅಂಬಲಿ ತಯಾರಿಕೆ :** ಕಂಬಳಿ ತಯಾರಿಕೆಯಲ್ಲಿ ಅಂಬಲಿಯ ಪಾತ್ರ ಹಿರಿದಾದುದು. ಇದರ ತಯಾರಿಕೆಯೇ ಒಂದು ವಿಶಿಷ್ಟ ರೀತಿಯಾದದು. ಮೊದಲು ಒಳ್ಳೆಯ ಹುಣಸೇ ಬೀಜವನ್ನು ಹದವರಿತು ಹುರಿಯಬೇಕು. ನಂತರ ಅದರ ಮೇಲಿನ ಸಿಪ್ಪೆ ತೆಗೆದು ಬಿಳಿ ಪೊಪ್ಪುಗಳನ್ನು ಸುಮಾರು ಒಂದು ರಾತ್ರಿ ನೆನೆಹಾಕಿ, ಚೆನ್ನಾಗಿ ನೆನೆದ ಬೀಜವನ್ನು ಒರಳಿನಲ್ಲಿ ಅಥವಾ ರುಬ್ಬುವ ಗುಂಡಲ್ಲಿ ರುಬ್ಬಿ ನಂತರ ನೀರಿನಲ್ಲಿ ಚೆನ್ನಾಗಿ ಕುದಿಸಿದಾಗ ಮುದ್ದೆಯಂತಾಗುತ್ತದೆ. ಈ ಮುದ್ದೆಯನ್ನು ಮತ್ತೇ ನೀರಿನಲ್ಲಿ ಕಲಿಸಿದರೆ ಅದು ಅಂಟು-ಅಂಟಾದ ಗಂಜಿಯಂತೆ ಸರಿಯಾಗುತ್ತದೆ. ಇದನ್ನು ಹುಣಸೆ ಅಂಬಲಿ ಅಥವಾ ಗಂಜಿಸರಿ ಎಂದೆಲ್ಲಾ ಕರೆಯಲಾಗುತ್ತದೆ.

- **ಹಾಸು ಹೊಯ್ಯುವದು :** ಹಾಸು ಎಂದರೆ ಎಳೆಗಳು ಬಿಡಿ-ಬಿಡಿಯಾಗಿ ಒಂದರ ಪಕ್ಕದಲ್ಲೊಂದು

ಬರುವಂತೆ ಜೋಡಿಸುವ ಕ್ರೀಯೆ. ಹೀಗೆ ಹಾಸು ಹೊಯ್ದ ನೂಲನ್ನು ಒಂದು ಕ್ರಮದಲ್ಲಿ ಕಟ್ಟಿ ತಿಳಿಯಾದ ಹುಣಸೆ ಸರಿ(ಅಂಬಲಿ)ಯಲ್ಲಿ ಅದ್ದಿ ಬಿಸಿಲಿನಲ್ಲಿಟ್ಟುಕೊಂಡು ಕುಂಚಿಕೆ ಎಂಬ ಉಪಕರಣದ ಸಹಾಯದಿಂದ ನೂಲನ್ನು ನಯಗೊಳಿಸಲಾಗುತ್ತದೆ. ಆಗ ನೂಲಿನ ಎಳೆಗಳು ಒಂದಕ್ಕೊಂದು ಅಂಟದೆ ಬಿಡಿ ಬಿಡಿಯಾಗುತ್ತವೆ.

• **ಮಗ್ಗಕ್ಕೆ ಏರಿಸುವುದು :** ಹಾಸು ಹೊಯ್ದು ಬಿಸಲಿಗೆ ಒಣಗಿದ ನಂತರ ಅದನ್ನು ಮಗ್ಗಕ್ಕೆ ಏರಿಸುವುದು. ಹೋಳು ಎನ್ನುವ ಸಾಧನದಲ್ಲಿ ನೂಲನ್ನು ಜೋಡಿಸಿ ಮಗ್ಗದಲ್ಲಿಟ್ಟು ನೇಯಲಾಗುತ್ತದೆ. ಈ ಹೋಳುಗಳು ಒಂಬತ್ತು ಮೊಳ ಉದ್ದ ಮತ್ತು ಮೂರು ಮೊಳ ಅಗಲವಿರುತ್ತವೆ. ಹೀಗೆ ನೇಯ್ದು ಸಿದ್ಧವಾದ ಕಂಬಳಿಯ ಹೋಳುಗಳಿಗೆ ಮತ್ತೇ ಹುಣಸೆ ಸರಿ ಸವರಿ ಬಿಸಿಲಿನಲ್ಲಿ ನೇತು ಹಾಕಿ ಒಣಗಿಸಲಾಗುತ್ತದೆ. ಈ ರೀತಿ ಕ್ರಮಬದ್ಧವಾಗಿ ಒಣಗಿದ ನೇಯ್ದ ಕಂಬಳಿಯನ್ನು ಮಡಚಿ ಮಾರಾಟಕ್ಕೆ ಕಳಸಿಕೊಡಲಾಗುತ್ತದೆ.

ಕಂಬಳಿಯ ಪ್ರಕಾರಗಳು

ಕುರಿ ತಳಿಯಲ್ಲಿ ವ್ಯತ್ಯಾಸಗಳಿರುವುದರಿಂದ ಹಾಗೂ ಒಂದೇ ತಳಿ ಕುರಿಯ ಶರೀರದ ಎಲ್ಲಾ ಭಾಗಗಳಲ್ಲಿ ಒಂದೇ ರೀತಿಯ ಉಣ್ಣೆ ಇಲ್ಲದಿರುವುದರಿಂದ ಉಣ್ಣೆಯ ಗುಣಮಟ್ಟ ಹಾಗೂ ಮಾರುಕಟ್ಟೆಯಲ್ಲಿ ಬೇಡಿಕೆಗನುಗುಣವಾಗಿ ವಿವಿಧ ಪ್ರಕಾರದ ಕಂಬಳಿಗಳನ್ನು ತಯಾರು ಮಾಡಲಾಗುತ್ತದೆ. ಅಂಥ ವೆಂದರೆ, ೧. ಹುರಿಗಂಬಳಿ (ಒರಟು ಕಂಬಳಿ) ೨. ಉಜ್ಜುಗಂಬಳಿ ೩. ಸಣ್ಣಗಂಬಳಿ ಮತ್ತು ಶಾಲು ೪. ಗದ್ದುಗೆದಾವಳಿ ೫. ಕರಿಯ ಕಂತೆ

➲ **ಹುರಿಗಂಬಳಿ :** ಈ ಕಂಬಳಿಯ ನೂಲು ಹುರಿಯ ಗಾತ್ರವಿರುವುದರಿಂದ ಇದನ್ನು ಹುರಿಗಂಬಳಿ ಎಂದು ಕರೆಯುತ್ತಾರೆ. ಇದನ್ನು ಸಾಮಾನ್ಯ ಬಳಕೆಗಾಗಿ ತಯಾರು ಮಾಡುವ ಒರಟುಗಂಬಳಿ. ಅಲೆಮಾರಿ ಕುರುಬರು ಸಾಕುವ ಬಳ್ಳಾರಿ ಮತ್ತು ಡೆಕ್ಕನಿ ತಳಿಯ ಕುರಿಗಳ ಉಣ್ಣೆಯಿಂದ ತಯಾರು ಮಾಡಲಾಗುತ್ತದೆ. ಈ ಕಂಬಳಿಯ ಅಗಲ ಮತ್ತು ಉದ್ದ ದೊಡ್ಡದಿದ್ದು ಒಂದೇ ಕಂಬಳಿಯ ಅರ್ಧವನ್ನು ಹಾಸಿ ಮತ್ತರ್ಧವನ್ನು ಹೊದೆಯುತ್ತಾರೆ. ಇದಕ್ಕೆ ಹೆಗ್ಗಂಬಳಿ, ಜೋಡುಗಂಬಳಿ ಎಂತಲೂ ಕರೆಯುತ್ತಾರೆ. ಇಂತಹ ಕಂಬಳಿಗಳನ್ನು ಅಲೆಮಾರಿ ಕುರುಬರು, ಹಳ್ಳಿಗಳಲ್ಲಿ ವಾಸಿಸುವ ರೈತರು, ಕಾಫಿ, ತೋಟಗಳಲ್ಲಿ ಕೆಲಸ ಮಾಡುವ ಕಾರ್ಮಿಕರು, ಸೈನಿಕರು ಇತ್ಯಾದಿ ಜನರು ಬಳಸುತ್ತಾರೆ.

➲ ಉಜ್ಜುಗಂಬಳಿ : ಈ ಕಂಬಳಿ ಮಾಡುವ ಕಲೆ ವಿಶೇಷವಾಗಿದ್ದು ಎಲ್ಲಾ ಕಸುಬುದಾರರಿಗೆ ಇದು ಬರುವುದಿಲ್ಲ. ಆ ಕೆಲಸದಲ್ಲಿ ನಿಪುಣರಾದ ಕೆಲವು ಜನ ಮಾತ್ರ ಇದನ್ನು ಮಾಡಬಲ್ಲರು. ಇದನ್ನು ಮಾಡಲು ಸಾಮಾನ್ಯವಾಗಿ ಕುರಿಯ ಉಣ್ಣೆ ಮೊದಲನೆಯ ಕತ್ತರಿಯದಾಗಿರಬೇಕು. ಕುರಿಯ ಕುತ್ತಿಗೆಯ ಭಾಗ ಮತ್ತು ಬೆನ್ನಿನ ಮೇಲಿನ ಉಣ್ಣೆ ಇದಕ್ಕೆ ಉತ್ತಮವಾದದು. ಇಲ್ಲಿ ನೂಲು

ತೆಗೆಯುವವರೆ ಮುಖ್ಯ. ಎಷ್ಟರ ಮಟ್ಟಿಗೆ ನೂಲು ಬರುತ್ತದೆಯೋ ಅಷ್ಟರಮಟ್ಟಿಗೆ ಕಂಬಳಿ ಉತ್ತಮವಾಗುತ್ತದೆ. ಈ ಕಂಬಳಿಯ ತಯಾರಿಕೆಯಲ್ಲಿ ನೇಯ್ಗೆ ಬಹಳ ಜಾಗುರಕತೆಯಿಂದ ಕೆಲಸ ಮಾಡಬೇಕಿದೆ. ನೇಯ್ದ ಹೋಳುಗಳು ಒಂಬತ್ತು ಮೊಳ ಉದ್ದ, ಎರಡೂವರೆ ಮೊಳ ಅಗಲವಿರುತ್ತವೆ. ಇಂತಹ ಎರಡು ಹೋಳುಗಳನ್ನು ಸೇರಿಸಿ ಉಣ್ಣೆಯ ದಾರದಿಂದ ಹೊಲೆಯುತ್ತಾರೆ. ಆಗ ಅದು ಒಂದು ಕಂಬಳಿಯಾಗುತ್ತದೆ. ಈ ೯ ಮೊಳ ಉದ್ದ, ೫ ಮೊಳ ಅಗಲದ ಕಂಬಳಿಯನ್ನು, ೬ ಮೊಳ ಉದ್ದ ೪ ಮೊಳ ಅಗಲಕ್ಕೆ ಇಳಿಸಲು ಉಜ್ಜುವ ಕಾರ್ಯ ಮಾಡುವುದರಿಂದ 'ಉಜ್ಜುಗಂಬಳಿ' ಎಂದು ಕರೆಯುತ್ತಾರೆ.

➲ **ಸಣ್ಣಗಂಬಳಿ ಮತ್ತು ಶಾಲು :** ಉತ್ತಮವಾದ ಉಣ್ಣೆಯಿಂದ ಸಣ್ಣದಾಗಿ ನೂಲು ತೆಗೆದು ಶಾಲು ಮತ್ತು ಸಣ್ಣಕಂಬಳಿ ತಯಾರಿಸುತ್ತಾರೆ. ಸಣ್ಣಕಂಬಳಿಯು ಸ್ವಲ್ಪ ಒರಟಾಗಿರುತ್ತದೆ. ಅಲೆಮಾರಿ ಕುರುಬರಲ್ಲಿ ಕೆಲವು ಹಿರಿಯ ಪುರುಷರ ಹೆಗಲ ಮೇಲೆ ಈ ಕಂಬಳಿ ಯಾವಾಗಲೂ ಇರುತ್ತದೆ. ಇದನ್ನು ತೊಳೆಗಂಬಳಿ ಎಂತಲೂ ಕರೆಯುತ್ತಾರೆ. ಏಕೆಂದರೆ ಕೊಳೆಯಾದಾಗಲೆಲ್ಲ ಇದನ್ನು ತೊಳೆದು ಶುಭ್ರಗೊಳಿಸಬಹುದು. ಇದನ್ನು ದಾವಣಗೆರೆ, ಚಿಕ್ಕನಾಯಕನಹಳ್ಳಿ, ಮೊಣಕಾಲ್ಮೂರು, ರಾಣಿಬೆನ್ನೂರುಗಳಲ್ಲಿ ವಿಶೇಷವಾಗಿ ತಯಾರಿಸುತ್ತಾರೆ.

ಶಾಲು ಹೊದೆಯುವ ವಸ್ತ್ರ. ಆಧುನಿಕ ಯಂತ್ರಗಳ ಯುಗದಲ್ಲಿ ಶಾಲು ಅತ್ಯಂತ ವ್ಯಾಪಕವಾದ ಜನಪ್ರಿಯತೆಯನ್ನು ಪಡೆದಿದೆ. ಶಾಲಿನ ತಯಾರಿಕೆ ಇಂದು ಬಹುಮಟ್ಟಿಗೆ ಯಂತ್ರಗಳಿಂದ ತಯಾರಾಗುತ್ತದೆ. ಕಾಶ್ಮೀರ ಇವುಗಳಿಗೆ ಪ್ರಸಿದ್ಧ ಸ್ಥಳವಾಗಿದೆ. ಅಲೆಮರಿ ಕುರಬರು ಇತ್ತೀಚಿನ ದಿನಗಳಲ್ಲಿ ಹೆಗಲ ಮೇಲೆ ಕಂಬಳಿಯ ಬದಲು ಶಾಲನ್ನು ಹೆಚ್ಚಾಗಿ ಹಾಕಿಕೊಳ್ಳುತ್ತಿದ್ದಾರೆ.

➲ **ಗದ್ದುಗೆ ಕಂಬಳಿ :** ಇದನ್ನು ಬಿಳಿಗಂಬಳಿ ಎಂದು ಸಹ ಕರೆಯುತ್ತಾರೆ. ಏಕೆಂದರೆ ಬಿಳಿ ಉಣ್ಣೆಯಿಂದ ನೂಲು ತೆಗೆದು ತಯಾರು ಮಾಡುತ್ತಾರೆ. ಗದ್ದುಗೆ ಎಂದರೆ ಕೂಡುವ ಸ್ಥಳ. ಧಾರ್ಮಿಕ ಗುರುಗಳು ಗದ್ದುಗೆಗೆ ಹಾಗೂ ಪವಿತ್ರ ಕಾರ್ಯಗಳಲ್ಲಿ ಉಪಯೋಗಿಸುವುದನ್ನು ಗದ್ದುಗೆ ಕಂಬಳಿ ಎನ್ನುವರು. ಈ ಕಂಬಳಿ ವಿಶೇಷವಾಗಿ ವೈದಿಕರ ಉಪಯೋಗಕ್ಕಾಗಿ ತಯಾರಾಗುತ್ತಿತ್ತು. ಇದನ್ನು ಶಾಲಿನಂತೆ ಹೊದೆಯಲು ಉಪಯೋಗಿಸುವುದುಂಟು.

➲ **ಕರಿಯ ಕಂತೆ :** ಅಲೆಮಾರಿ ಕುರುಬರ ಗುರು ರೇವಣಸಿದ್ದೇಶ್ವರ ತನ್ನ ಅವತಾರ ಕಾಲದಲ್ಲಿ ಕುರಿ ಕಾಯುತ್ತಿದ್ದನೆಂದು ಅದರಿಂದಲೇ ಅಲೆಮಾರಿ ಕುರುಬರಿಗೆ ಕುರಿಸಾಕಣೆಯ ಪರಂಪರೆ ಉಂಟಾಯಿತೆಂದು ನಂಬಿಕೆಯಿದೆ. ಕಂತೆ ಎಂದರೆ ಕೈಯಿಂದ ಹೆಣೆದು ನಿರ್ಮಿಸಿಕೊಂಡ ಒಂದು ಉಣ್ಣೆಯ ವಸ್ತ್ರವಾಗಿದ್ದು, ಪೂಜೆಯ ಸಮಯದಲ್ಲಿ ಒಡೆಯರು ತೊಡುವ ವಸ್ತ್ರ ಎಂದು ಅರ್ಥ. ಈ ಕರಿಯ ಕಂತೆಯು ಪ್ರಸ್ತಾಪ ಕುರುಬ ಜನಾಂಗದ ನಂಬಿಕೆ ಮತ್ತು ಸಂಪ್ರದಾಯಗಳನ್ನು ವಿವರಿಸುವ 'ತಗರ ಪವಾಡ' ಪ್ರಾಚೀನ ಗ್ರಂಥದಲ್ಲಿ ಬರುತ್ತದೆ.

ಇದು ಸಾಮಾನ್ಯವಾಗಿ ಕಂಬಳಿಗಳ ನೇಯ್ಗೆಯ ಪದ್ಧತಿಗಿಂತ ವಿಶಿಷ್ಟ ರೀತಿಯಲ್ಲಿದೆ. ಕರಿಯ ಕಂತೆ ತೊಡುವವರು ಗುರು ಪರಂಪರೆಯಲ್ಲಿ ಬಂದ ಒಡೆಯರ ಮನೆತನದವರು. ಮೊದಲು ಕಪ್ಪು ಟಗರು ಮರಿಗೆ ಮಠದ ಒಡೆಯರು (ಗುರುಗಳು) ಕರಿಯ ಕಂತೆ ಎಂದು ಗುರುತಿಸಿ ನಾಮಕರಣ ಮಾಡಿ ಅದರ ಮೇಲೆ ಬಿಲ್ವಪತ್ರೆ, ವಿಭೂತಿ, ತೀರ್ಥ ಹಾಕುತ್ತಾರೆ (ಶಿವಪೂಜೆಯ ಪವಿತ್ರ ವಸ್ತುಗಳು). ಆ ಮರಿ ದೊಡ್ಡದಾಗಿ ಬೆಳೆದು ಉತ್ಕೃಷ್ಟ ಉಣ್ಣೆಯಿಂದ ತುಂಬಿ ಬೆಳೆದಾಗ ಒಡೆಯರ ಪೈಕಿ ಒಬ್ಬರು ಮಡಿಯಿಂದ ಹೋಗಿ ಮೊದಲು ಉಣ್ಣೆಯನ್ನು ಕತ್ತರಿಸಿ ಸಂಗ್ರಹಿಸುತ್ತಾರೆ. ನಂತರ ನಾಲ್ಕೈದು ಜನ ಒಡೆಯರು ಸ್ನಾನ-ಮಡಿಗಳಿಂದ ಉಪವಾಸವಿದ್ದು, ಕತ್ತರಿಸಿದ ಉಣ್ಣೆಯನ್ನು ರೇವಣ್ಣಸಿದ್ದೇಶ್ವರ ಮಠದ ಗರ್ಭಗುಡಿಯಲ್ಲಿ ರೇವಣ್ಣಸಿದ್ದೇಶ್ವರ ಸಮ್ಮುಖದಲ್ಲಿ ಪೂಜಿಸುತ್ತಾರೆ. ನಂತರ ಆ ಉಣ್ಣೆಯನ್ನು ಕೈಯಿಂದಲೇ ಹಿಂಜಿ-ಹಿಂಜಿ ಕೈಯಿಂದಲೇ ದಾರ ತೆಗೆಯುತ್ತಾರೆ. ಸುಮಾರು ೯-೧೦ ಇಂಚು ಅಗಲವಿರುವ ವಸ್ತ್ರ ಸಿದ್ಧಗೊಳಿಸುತ್ತಾರೆ. ಈ ಕಂತೆ ನೋಡಲು ಕರಿನಾಗರ ಹಾವಿನ ಹೆಡೆಯಂತೆ ಕಾಣುತ್ತದೆ. ಇದನ್ನು ಸಿದ್ಧಪಡಿಸುವಾಗ ಈರಗಾರರು ನೆರವಾಗುತ್ತಾರೆ. ಅಲೆಮಾರಿ ಕುರುಬರು ಸಮುದಾಯದಲ್ಲಿ ಈರಗಾರ ಎಂಬ ಮನೆತನದ ಹೆಸರಿನವರಿರುವುದನ್ನು ಗಮನಿಸಬಹುದು. ಕಂತೆ ಸಿದ್ಧವಾದ ನಂತರ ಅದನ್ನು ರೇವಣ್ಣಸಿದ್ಧೇಶ್ವರನಿಗೆ ಉಡಿಸುವ ಪವಿತ್ರ ಸಮಾರಂಭ ಡೊಳ್ಳಿನ ವಾದ್ಯಗಳೊಂದಿಗೆ ವೈಭವಯುತವಾಗಿ ಜರಗುತ್ತದೆ. ಆ ದಿನದಂದು ಅಲೆಮಾರಿ ಕುರುಬರ ಗುರುಗಳಾದ ಒಡೆಯರು ಮಕ್ಕಳಿಗೆ ದೀಕ್ಷೆ ನೀಡುತ್ತಾರೆ.

೫.೨.೩ ಭಂಡಾರ

“ಭಂಡಾರ ಎಂದರೆ ‘ಸಂಪತ್ತು’. ಈ ಸಂಪತ್ತನ್ನು ಆರಾಧ್ಯ ದೈವಗಳ ಅರ್ಚನೆಯಲ್ಲಿ, ದೇವರುಗಳ ಭಾವಚಿತ್ರ ಅಥವಾ ಚಿಕ್ಕ ಮೂರ್ತಿಗಳ ಪೂಜೆ ಗೈಯುವಾಗ ಬಳಸುವ ಹಳದಿ ಬಣ್ಣದ ಪುಡಿ” (ಎಚ್.ಸಿ. ಹಿರೇಮಠ:೧೯೯೩:೩೮). ಈ ಪುಡಿಯಲ್ಲಿ ಔಷಧದ ಗುಣವಿದೆ. ಈ ಗುಣವಿರುವುದರಿಂದಲೇ ಅಲೆಮಾರಿ ಕುರುಬರು ಸಾಮಾನ್ಯವಾಗಿ ದಿನಂಪ್ರತಿ, ಕಡ್ಡಾಯವಾಗಿ ಹಬ್ಬ, ಜಾತ್ರೆ, ಹುಣ್ಣಿಮೆ, ಅಮವಾಸ್ಯೆ, ಆದಿತ್ಯವಾರಗಳೆಂದು ಸ್ನಾನ ಮಾಡಿ ದೇವರಿಗೆ ಪೂಜೆಗೈದು ಶ್ರದ್ಧೆಯಿಂದ ತಮ್ಮ ಹಣೆಗೆ ಹಚ್ಚಿಕೊಳ್ಳುವರು. ಅಲೆಮಾರಿ ಕುರುಬರು ಬಳಸುವ ಭಂಡಾರವನ್ನು ಎರಡು ದೃಷ್ಟಿಕೋನಗಳಲ್ಲಿ ಅರ್ಥೈಸಬಹುದು. ಒಂದನೆಯದು ಆರ್ಥಿಕ ದೃಷ್ಟಿಕೋನ, ಎರಡನೆಯದಾಗಿ ಧಾರ್ಮಿಕ ದೃಷ್ಟಿಕೋನ.

ಅ. ಆರ್ಥಿಕ ದೃಷ್ಟಿಕೋನ : ಈ ವಿಚಾರವಾಗಿ ನೋಡಿದಾಗ ಭಂಡಾರ ವೆಚ್ಚದ ಮೂಲವಾಗಿ ಪರಿಗಣಿತವಾಗುತ್ತದೆ. ಭಂಡಾರವಿಲ್ಲದೆ ಯಾವುದೇ ದೈವಿಕ ಕಾರ್ಯಚರಣೆಗಳನ್ನು ಕೈಗೊಳ್ಳಲಾರರು. ಇದರ ಬಳಕೆ ಕುಟುಂಬದ ಗಾತ್ರವನ್ನು ಅವಲಂಬಿಸಿರುತ್ತದೆ. ಸಾಮಾನ್ಯವಾಗಿ ಕುಟುಂಬ ಒಂದಕ್ಕೆ ಸರಾಸರಿಯಾಗಿ ೮ ರಿಂದ ೧೨ ಕೆ.ಜಿ.ಯವರೆಗೆ ಬಳಕೆಯಾಗುತ್ತದೆಂದು ತಿಳಿದು ಬಂದಿದೆ. ಇದರ

ಬೆಲೆಯು ಭಿನ್ನವಾಗಿದ್ದು ಗುಣಮಟ್ಟವನ್ನು ಅವಲಂಬಿಸಿರುತ್ತದೆ. ಸಾಮಾನ್ಯವಾಗಿ ಒಂದು ಕೆ.ಜಿ.ಗೆ ೨೫ ರಿಂದ ೪೦ ರೂ.ಗಳವರೆಗೆ ಬೆಲೆ ಕೊಟ್ಟು ಕೊಂಡುಕೊಳ್ಳುತ್ತಾರೆ. ಒಂದು ಕುಟುಂಬವು ಭಂಡಾರದ ಮೇಲೆ ವರ್ಷಕ್ಕೆ ಸುಮಾರು ೨೦೦ ರಿಂದ ೫೦೦ ರೂ.ವರೆಗೆ ವ್ಯಯ ಮಾಡುತ್ತದೆ. ತಮ್ಮ ದೈನಂದಿನ ಬದುಕಿನ ಸಮಸ್ಯೆಗಳು ಪರಿಹಾರವಾಗಲು, ಕುರಿಗಳಿಗೆ ಬರುವ ರೋಗ ರುಜಿನಗಳು ನಿಯಂತ್ರಣದಲ್ಲಿರಲು ಮತ್ತು ವಾಸಿಯಾಗಲು ಇತ್ಯಾದಿ ಉದ್ದೇಶ ಈಡೇರಿಕೆಗಾಗಿ ದೇವರಲ್ಲಿ ಭಂಡಾರ ಹರಕೆಯ ಮೂಲಕ ಮೊರೆ ಹೋಗುತ್ತಾರೆ. ಹರಕೆ ಈಡೇರಿದರೆ ಇಂತಿಷ್ಟು ಭಂಡಾರ ಹಾರಿಸುತ್ತೇವೆ (ಉಗ್ಗುತ್ತೇವೆ) ಎಂದು ಬೇಡಿಕೊಳ್ಳುತ್ತಾರೆ. ಇಂತಹ ಹರಕೆಗಳು ಸಾಮಾನ್ಯವಾಗಿ ೨೫ ರಿಂದ ೫೦ ಕೆ.ಜಿ. ವರೆಗೆ ಇರುತ್ತದೆ. ದೇವರ ಹಬ್ಬ ಅಥವಾ ಜಾತ್ರೆಗಳೆಂದು ಹರಕೆ ನೆರವೇರಿಸುತ್ತಾರೆ. ಇವುಗಳಿಗೆಲ್ಲ ತಗಲುವ ಖರ್ಚು-ವೆಚ್ಚಗಳನ್ನು ಕುರಿಗಳಿಂದ ಬಂದ ಆದಾಯದಿಂದಲೇ ನಿರ್ವಹಿಸುತ್ತಾರೆ.

ಬ. ದೈವಿಕ ದೃಷ್ಟಿಕೋನ : ಧಾರ್ಮಿಕ ದೃಷ್ಟಿಕೋನದ ಹಿನ್ನೆಲೆಯಲ್ಲಿ ಹಣ ಅಥವಾ ದುಡ್ಡು ಗಣನೆಗೆ ಬರುವುದಿಲ್ಲ. ಇಲ್ಲಿ ದೇವರ ಮೇಲಿಟ್ಟಿರುವ ನಂಬಿಕೆ ಹಾಗೂ ಭಕ್ತಿ ಪ್ರಮುಖವಾಗುತ್ತದೆ. ಇವರು ತಮ್ಮ ಆರಾಧ್ಯ ದೈವಗಳಾದ ಬೀರಪ್ಪ, ಮಾಳಿಂಗರಾಯ, ಅಮೋಘಸಿದ್ಧ, ಕರೆಸಿದ್ಧ, ಅರಣ್ಯಸಿದ್ಧ, ಮಾಯಮ್ಮ ಇತ್ಯಾದಿ ದೇವರುಗಳ ಪೂಜೆ, ಉತ್ಸವ, ಜಾತ್ರೆ ಸಂದರ್ಭಗಳಲ್ಲಿ ಭಂಡಾರವನ್ನು ದೇವರಿಗೆ ಹಚ್ಚುವುದು ಸಂಪ್ರದಾಯವಾಗಿದೆ. ದೇವರು ಪೂಜೆಯ ನಂತರ ಭಕ್ತರು ಭಂಡಾರವನ್ನು ಭಕ್ತಿಯಿಂದ ಹಣೆಗೆ ಹಚ್ಚಿಕೊಳ್ಳುವುದನ್ನು ಮರೆಯುವುದಿಲ್ಲ. ಜಾತ್ರೆಗಳ ಸಂದರ್ಭದಲ್ಲಿ ಭಂಡಾರದ್ದೇ ವೈಭವ. ಆ ಸಂದರ್ಭಗಳಲ್ಲಿ ಗುಡಿಯ ಆವರಣ, ಗೋಪುರ ಎಲ್ಲವು ಭಂಡಾರ ಲೇಪನದಿಂದ ಹಳದಿ ಬಣ್ಣದಿಂದಲೇ ಶೋಭಿಸುತ್ತವೆ. ಭಂಡಾರ ಅಲೆಮಾರಿ ಕುರುಬರಿಗೆ ಪವಿತ್ರ ವಸ್ತು. ಅವರು ತಮ್ಮ ಗುಡಾರದಲ್ಲಿರುವ ದೇವರುಗಳ ಭಾವಚಿತ್ರಗಳಿಗೆ ಭಂಡಾರವಿಟ್ಟು ತಾವು ಹಣೆಯ ತುಂಬಾ ಧರಿಸುತ್ತಾರೆ. ಪೂಜಾರಿಗಳು ಹೆಗಲಲ್ಲಿ ಭಂಡಾರ ಚೀಲ ಹಾಕಿಕೊಳ್ಳುವದು ಮತ್ತು ಅದರಲ್ಲಿ ಭಂಡಾರ ಇಟ್ಟುಕೊಳ್ಳುವುದು ಕಡ್ಡಾಯವಾದ ಸಂಪ್ರದಾಯ. ಭಕ್ತರು ಪೂಜಾರಿಗಳ ಕಾಲಿಗೆ ಬಿದ್ದು ನಮಸ್ಕಾರ ಮಾಡಿದಾಗ ಪ್ರತಿಯಾಗಿ ಪೂಜಾರಿಗಳು ಭಕ್ತರ ಹಣೆಗೆ ಭಂಡಾರ ಹಚ್ಚಿ ಹರಸುವುದನ್ನು ಅಲೆದಾಡುವ ಪ್ರದೇಶಗಳಲ್ಲಿ, ದೇವರ ಹಬ್ಬ, ಜಾತ್ರೆಗಳಲ್ಲಿ ಕಾಣುತ್ತೇವೆ. ಈ ಕಾರಣದಿಂದಲೇ ಭಂಡಾರ ಶಬ್ದದ ಮೂಲವಾದ ಸಂಪತ್ತು ಎಂಬ ಅರ್ಥದಲ್ಲಿ ಈ ವಸ್ತುವನ್ನು ಪರಿಗಣಿಸಲಾಗಿದೆ.

೫.೨.೪ ಕುರಿಗಳ ಔಷಧ

ಅಲೆಮಾರಿ ಕುರುಬನ ಖರ್ಚಿನ ಮೂಲಗಳಲ್ಲಿ ಪ್ರಮುಖವಾದದು, ಕುರಿಗಳ ಔಷಧ. ಕುರಿಗಳಿಗೆ ಬಂದೊದಗುವ ರೋಗರುಜಿನಗಳನ್ನು ನಿಯಂತ್ರಿಸಲು ವರ್ಷಪೂರ್ತಿ ಹಣ ಖರ್ಚು ಮಾಡುತ್ತಿರಬೇಕು.

ಅಲೆದಾಡುತ್ತಿರುವ ಪ್ರದೇಶದಲ್ಲಿ ಮೇವು, ನೀರು ಮತ್ತು ವಾತಾವರಣದಲ್ಲಿಯ ವ್ಯತ್ಯಾಸಗಳಿಂದ ವರ್ಷವೀಡಿ ಒಂದಲ್ಲ ಒಂದು ರೋಗ ಕುರಿಗಳಲ್ಲಿ ಕಾಣಿಸಿಕೊಳ್ಳುತ್ತವೆ. ರೋಗಗಳನ್ನು ನಿಯಂತ್ರಿಸಲು ಅಲೆಮಾರಿ ಕುರುಬರು ಎರಡು ರೀತಿಯಲ್ಲಿ ಕಾರ್ಯ ಪ್ರವೃತ್ತನಾಗುತ್ತಾರೆ. ಗಿಡಿಮೂಲಿಕೆಗಳ ಸಹಾಯದಿಂದ ದೇಶಿ ವೈದ್ಯಪದ್ಧತಿಯನ್ನು ಹಾಗೂ ಪಾಶ್ಚಾತ್ಯ ಔಷಧಗಳನ್ನು ಬಳಸುವುದರ ಮೂಲಕ ಆಧುನಿಕ ಪದ್ಧತಿಯನ್ನು ಅಳವಡಿಸಿಕೊಂಡಿದ್ದಾರೆ. ಗಿಡಮೂಲಿಕೆಗಳು, ತಾನು ಅಲೆದಾಡುವ ಪ್ರದೇಶದಲ್ಲಿ ದೊರೆಯುವುದರಿಂದ ಅವುಗಳಿಗೆ ಬೆಲೆಕೊಟ್ಟು ತರಬೇಕಾಗಿಲ್ಲ. ಅವು ನಿಸರ್ಗದ ಉಚಿತ ಕೊಡುಗೆ ಎನ್ನುಬಹುದು. ಆದರೆ ದೇಶದ ಜನಸಂಖ್ಯೆ ಬೆಳವಣಿಗೆಯು ಆಹಾರ ಸಮಸ್ಯೆಯನ್ನು ಸೃಷ್ಟಿಮಾಡಿ ಸಾಗುವಳಿ ಭೂಮಿಯನ್ನು ವಿಸ್ತರಿಸಿದರೆ, ಕೈಗಾರಿಕಿಕರಣವು ಕಾಡನ್ನು ನಾಶಗೊಳಿಸಿದ ಪರಿಣಾಮವಾಗಿ ಗಿಡಿಮೂಲಿಕೆಗಳು ದೊರೆಯದ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ ಅಲೆಮಾರಿ ಕುರುಬರು ಸಣ್ಣ-ಪುಟ್ಟ ರೋಗಗಳಿಗೆ ಮಾತ್ರ ಸ್ಥಳೀಯವಾಗಿ ದೊರೆಯುವ ಗಿಡಮೂಲಿಕೆಗಳನ್ನು ಬಳಸಿಕೊಂಡು ಚಿಕಿತ್ಸೆ ಮಾಡುತ್ತಾರೆ. ಆದರೆ ಋತುಮಾನಕ್ಕನುಗುಣವಾಗಿ ವರ್ಷವಿಡೀ ಕುರಿಗಳಿಗೆ ಹೆಮ್ಮಾರಿಯಾಗಿ ಹರಡುವ ದೊಡ್ಡ ರೋಗಗಳನ್ನು ನಿಯಂತ್ರಿಸಲು ಪಾಶ್ಚಾತ್ಯ ಔಷಧಗಳ ಮೊರೆ ಹೋಗಿದ್ದಾರೆ. ಮೈ-ಮರೆತರೆ ಕುರಿಯ ಹಿಂಡಿಗೆ ಹಿಂಡೆ ರೋಗಕ್ಕೆ ತುತ್ತಾಗುವುದರಿಂದ ಕುರಿಗಳ ಸಂಖ್ಯೆ ಕಡಿಮೆಯಾಗುತ್ತದೆ. ಇದರ ಪರಿಣಾಮವಾಗಿ ಅವನ ವಾರ್ಷಿಕ ಆದಾಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಆದ್ದರಿಂದ ಅಲೆಮಾರಿ ಕುರುಬನು ಕುರಿಗಳಲ್ಲಿ ರೋಗ ಕಾಣಿಸಿಕೊಂಡ ಕೂಡಲೆ ಔಷಧದ ಅಂಗಡಿಗಳಿಂದ ಔಷಧ ತಂದು ಚಿಕಿತ್ಸೆಯನ್ನು ಮಾಡುವನು. ಒಂದು ವೇಳೆ ಅವನಲ್ಲಿ ಹಣವಿಲ್ಲದಿದ್ದರೂ ಸಾಲ ಮಾಡಿ ಔಷಧವನ್ನು ತಂದು ಚಿಕಿತ್ಸೆ ಮಾಡುತ್ತಾರೆ.

ಗಿಡಮೂಲಿಕೆಗಳು : ಕುರಿಗಳಿಗೆ ಸಣ್ಣಪುಟ್ಟ ಗಾಯ, ನೋವು ಅಥವಾ ರೋಗಗಳು ಕಾಣಿಸಿಕೊಂಡಾಗ ಅವನ್ನು ವಾಸಿ ಮಾಡಲು ಹಿರಿಯರಿಂದ ಕಲಿತ ವಿದ್ಯೆ ನೆರವಿಗೆ ಬರುತ್ತದೆ. ಸ್ಥಳೀಯವಾಗಿ ದೊರೆಯುವ ಗಿಡಮೂಲಿಕೆಗಳು, ಸಾಂಬಾರ ಪದಾರ್ಥಗಳು ಹಾಗೂ ಕುರಿಗಳಿಂದ ಸಿಗುವ ಉತ್ಪನ್ನಗಳನ್ನು ಬಳಸಿಕೊಂಡು ಔಷಧ ತಯಾರು ಮಾಡುತ್ತಾರೆ.

ಎಕ್ಕೆಹಾಲು : ಕುರಿಯು ಶ್ವಾಸಕೋಶದ ತೊಂದರೆಯಿಂದ ಬಳಲುತ್ತಿದ್ದಾಗ, ಮೂಗಿನ ಮೂಲಕ ಉಸಿರಾಡದೆ ಬಾಯಿ ತೆರೆಯುತ್ತಿರುತ್ತದೆ. ಇದಕ್ಕೆ ಎಕ್ಕೆ ಗಿಡದ ಕೊನೆಯನ್ನು ಮುರಿದು ಕುರಿಯ ಮೂಗಿನಲ್ಲಿಡಲಾಗುತ್ತದೆ ಅಥವಾ ಆ ಗಿಡದ ಹಾಲನ್ನು ಮೂಗಿಗೆ ಬಿಡಲಾಗುತ್ತದೆ. ತಕ್ಷಣವೇ ಕುರಿಯು ಸೀನಲು ಆರಂಭಿಸುವುದರಿಂದ ಮೂಗಿನಲ್ಲಿರುವ ಸೊಸಲು (ಸಿಂಬಳ) ಹೊರಬೀಳುತ್ತದೆ. ಈ ರೀತಿಯಾಗಿ ೨-೩ ದಿನ ಮಾಡುವುದರಿಂದ ಕುರಿ ಚೆನ್ನಾಗಿ ಉಸಿರಾಡುತ್ತದೆ.

ಕೇರುಕಾಯಿ : ಮಳೆಗಾಲದಲ್ಲಿ ಕುರಿ-ಮೇಕೆಗಳು ಗುಡ್ಡಗಾಡು ಪ್ರದೇಶದಲ್ಲಿ ಅಲೆದಾಡುವುದರಿಂದ ಕಾಲಿನ ತಳಭಾಗದಲ್ಲಿ ಗಡ್ಡೆಯಾಗುತ್ತದೆ. ಇದರಿಂದ ನಡೆದಾಡಲು ತೊಂದರೆ ಪಡುತ್ತವೆ. ಇದನ್ನು

ನಿವಾರಿಸಲು ಕೇರು ಕಾಯಿಯನ್ನು ಚೆನ್ನಾಗಿ ಪುಡಿಮಾಡಿ ಅಡಿಗೆ ಎಣ್ಣೆಯಲ್ಲಿ ಕುದಿಸಿ ಗಡ್ಡೆಯ ಭಾಗಕ್ಕೆ ಹಚ್ಚಲಾಗುವುದು. ಹಾಗೆಯೇ ಕುರಿ-ಮೇಕೆಗಳು ಮುಳ್ಳು ತುಳಿದು ಕಾಲಿಗೆ ನೋವು ಆದಾಗ ಕೇರು ಬೀಜದಲ್ಲಿರುವ ಎಣ್ಣೆ ತೆಗೆದು ಆ ಎಣ್ಣೆಯನ್ನು ನೋವಾದ ಭಾಗಕ್ಕೆ ಹಚ್ಚಿ ಬೆಂಕಿಯ ಕೆಂಡದಿಂದ ಕಾವು ಕೊಡುವರು. ಈ ರೀತಿ ೨-೩ ದಿನ ಮಾಡಿದರೆ ಕಾಲುಗಡ್ಡೆಯ ಗಾಯ ಮತ್ತು ಮುಳ್ಳು ತುಳಿದ ನೋವು ಕಡಿಮೆಯಾಗುತ್ತದೆ. ಕುರಿಗೆ ಕೆಮ್ಮು ಆಗಿದ್ದರೆ ಕೇರು ಬೀಜವನ್ನು ಪುಡಿಮಾಡಿ ಅಡಿಗೆ ಎಣ್ಣೆಯಲ್ಲಿ ಕಾಯಿಸಿ ಕುಡಿಸುತ್ತಾರೆ. ಇದರಿಂದ ಕುರಿಯ ಕೆಮ್ಮು ಕಡಿಮೆಯಾಗುತ್ತದೆ.

ತುಂಬೆಸೊಪ್ಪು : ಕುರಿಗಳಿಗೆ ಮಳ್ಳುರೋಗ ಬಂದಾಗ ತುಂಬೆಸೊಪ್ಪು, ಮೆಣಸು ಮತ್ತು ಲವಂಗ ಮೂರನ್ನು ಮಿಶ್ರಮಾಡಿ ರಸ ಬರುವವರೆಗೆ ಚೆನ್ನಾಗಿ ಅರಿದು, ಬಂದ ರಸವನ್ನು ಕುರಿಯ ಮೂಗಿನಲ್ಲಿ ಹಿಂಡಲಾಗುವುದು. ಈ ತರಹ ಮೂರ್‍ನಾಲ್ಕು ದಿನ ಮಾಡಿದರೆ ಮಳ್ಳುರೋಗ ಕಡಿಮೆ ಯಾಗುತ್ತದೆ.

ಹಂದಿ ತಪ್ಪಲು : ಕುರಿಗೆ ಬಾಯಿ ಜ್ವರ ಅಥವಾ ಬಾಯಿಬೇನೆ ಬಂದಾಗ ಹಂದಿ ತೊಪ್ಪಲು ಮತ್ತು ಉಪ್ಪನ್ನು ಮಿಶ್ರಮಾಡಿ ಚೆನ್ನಾಗಿ ಜಜ್ಜಿ ಕುರಿಯ ಹೊಟ್ಟೆಗೆ ಕೊಡಬೇಕು. ಇದರಿಂದ ಬಾಯಿಜ್ವರ ಕಡಿಮೆಯಾಗುತ್ತದೆ. ಆದರೆ ಇಂದು ಈ ಬೇನೆ ನಿಯಂತ್ರಿಸಲು ಪಾಶ್ಚಾತ್ಯ ಔಷಧವನ್ನು ಬಳಸಲಾಗುತ್ತಿದೆ.

ಗಜಗ : ಜನಿಸಿದ ಮರಿ ಅತಿ ಹೆಚ್ಚು ಗಿಣ್ಣದ ಹಾಲು ಕುಡಿದರೆ ಹೊಟ್ಟೆಯಲ್ಲಿ ಗಂಟುಗಳಾಗುತ್ತವೆ. ಪರಿಣಾಮವಾಗಿ ಮರಿ ಹೆಚ್ಚು ಭೇದಿ ಮಾಡಲು ಶುರುಮಾಡುತ್ತದೆ. ಇದನ್ನು ಹೋಗಲಾಡಿಸಲು ಅಲೆಮಾರಿ ಕುರುಬರು ಗಜಗವನ್ನು ಕುಟ್ಟಿ ಚೆನ್ನಾಗಿ ಪುಡಿ ಮಾಡಿ ಮಜ್ಜಿಗೆಯಲ್ಲಿ ಬೆರೆಸಿ ಕುಡಿಸುತ್ತಾರೆ. ಈ ರೀತಿ ೨ ರಿಂದ ೩ ದಿನದವರೆಗೆ ಮಾಡಿದರೆ ಹೊಟ್ಟೆಯಲ್ಲಿರುವ ಗಂಟುಗಳು ಕರಗಿ ಭೇದಿ ಮಾಡುವುದು ನಿಲ್ಲುತ್ತದೆ.

ಹಿರೆಮದ್ದಿನ ಗಡ್ಡೆ : ಇದನ್ನು ಕುರಿಗಳು ಚೆನ್ನಾಗಿ ಮೇವು ಮೇಯಲು ಬಳಸುತ್ತಾರೆ. ಇದು ಭೂಮಿಯ ಒಳಗೆ ದೊರೆಯುತ್ತದೆ. ಈ ಗಡ್ಡೆಯನ್ನು ಕಿತ್ತುಕೊಂಡು ನೀರು ಬರುವವರೆಗೆ ಚೆನ್ನಾಗಿ ಜಜ್ಜಿ ಕುರಿಗಳಿಗೆ ಕುಡಿಸಬೇಕು. ಇದರಿಂದ ಕುರಿಗಳ ಆರೋಗ್ಯ ಚೆನ್ನಾಗಿರುವುದರ ಜೊತೆಗೆ ಹೆಚ್ಚು ಮೇವು ಮೇಯುತ್ತವೆ.

ಮಂಗನಬಳ್ಳಿ : ಕುರಿಗಳು ಬಡಕಲು ಆಗಿದ್ದು ಚೆನ್ನಾಗಿ ಮೇವು ಮೇಯದ ಸ್ಥಿತಿಯಲ್ಲಿದ್ದರೆ ಮಂಗನಬಳ್ಳಿ, ಅಲ್ಲಾ, ಮೆಣಸು, ಬೆಳ್ಳುಳ್ಳಿ, ನಿಂಬೆಹಣ್ಣು, ಕತಾಳಿ ಎಲೆ, ಎಲ್ಲವನ್ನು ಕುಟ್ಟಿ ನೀರುಮಾಡಿ ಮೂರು ದಿನ ಕೊಳೆ(ನೆನೆ)ಯಿಟ್ಟು, ಕುರಿಗಳಿಗೆ ಕುಡಿಸಬೇಕು. ಈ ರೀತಿ ಮಾಡುವುದರಿಂದ ಕುರಿಯ ಆರೋಗ್ಯ ಸುಧಾರಿಸುವುದಲ್ಲದೆ ಚೆನ್ನಾಗಿ ಮೇಯಲು ಆರಂಭಿಸಿ ದಷ್ಟ-ಪುಷ್ಟವಾಗುತ್ತದೆ.

ಕಕ್ಕೆ ತಪ್ಪಲು : ಕುರಿ ಹಾಗು ಮರಿಗಳಿಗೆ ಕೆಮ್ಮು ಬಂದಾಗ ಕಕ್ಕೆ ತಪ್ಪಲನ್ನು ಚೆನ್ನಾಗಿ ಜಜ್ಜಿ ನೀರಿನಲ್ಲಿ ಕಲಿಸಿ ಕುಡಿಸುವುದರಿಂದ ಕೆಮ್ಮು ಕಡಿಮೆಯಾಗುತ್ತದೆ.

ಕುರಿ ಉಣ್ಣೆಯ ಬೂದಿ : ಕುರಿಗಳಿಗೆ ಮೈಲಿ ರೋಗಬಂದಾಗ ಕಿವಿಯ ತುಂಬಾ ಗಾಯವಾಗುತ್ತದೆ. ಇದನ್ನು ಹೋಗಲಾಡಿಸಲು ಅಲೆಮಾರಿ ಕುರುಬರು ಹಳೆಯ ಕಂಬಳಿಯ ಉಣ್ಣೆ ಅಥವಾ ಕುರಿಯ ಉಣ್ಣೆಯನ್ನು ಕತ್ತರಿಸಿ ಬೆಂಕಿಯಲ್ಲಿ ಸುಟ್ಟು ಬೂದಿ ಮಾಡುವರು. ಬೂದಿ ಮತ್ತು ಬೆಳ್ಳುಳ್ಳಿಯನ್ನು ಮಿಶ್ರಣ ಮಾಡಿ ಜಜ್ಜಿ, ಕೊಬ್ಬರಿ ಎಣ್ಣೆಯಲ್ಲಿ ಬೆರೆಸಿ ಗಾಯವಾದ ಭಾಗಕ್ಕೆ ಹಚ್ಚುತ್ತಾರೆ. ಈ ರೀತಿ ಹಚ್ಚುವುದರಿಂದ ಗಾಯಕ್ಕೆ ನೊಣ ಕೂಡುವುದಿಲ್ಲ. ಜೊತೆಗೆ ಗಾಯ ವಾಸಿಯಾಗುತ್ತದೆ.

ಬರೆ ಹಾಕುವುದು : ಕುರಿಗಳಿಗೆ ರೋಗ ರುಜಿನಗಳು ಬಂದಾಗ ಒಂದು ಮೊಳ ಉದ್ದದ ಕಬ್ಬಿಣದ ಸಲಾಕೆಯಿಂದ ಅಥವಾ ಚಡಿಯನ್ನು ಬೆಂಕಿಯಲ್ಲಿ ಕಾಯಿಸಿ ಕುರಿಯ ಶರೀರದ ಮೇಲೆ ಬರೆ ಎಳೆಯುವರು. ಇದಕ್ಕೆ 'ಬರೆ ಹಾಕುವುದು' ಎನ್ನುವರು. ಬರೆಯನ್ನು ಮೂರು ಪ್ರಸಂಗಗಳಲ್ಲಿ ಹಾಕುವರು : ಕೆಮ್ಮು ಇದ್ದಾಗ, ಮಳ್ಳು ಬಂದಾಗ ಹಾಗೂ ಹಕ್ಕಿ ಹಾರಿದಾಗ.

- **ಕೆಮ್ಮು :** ಕಾದ ಕಬ್ಬಿಣದ ಸಲಾಕೆಯಿಂದ ಕುರಿಯ ಎದೆಗೆ ಮೂರು ಬರೆ ಹಾಕುತ್ತಾರೆ. ಪರಿಣಾಮವಾಗಿ ಮೂರು-ನಾಲ್ಕು ದಿನಗಳಲ್ಲಿ ಕೆಮ್ಮು ನಿಯಂತ್ರಣವಾಗುತ್ತದೆ.

- **ಮಳ್ಳು :** ಈ ರೋಗ ಬಂದಾಗ ಕುರಿ ತನ್ನಷ್ಟಕ್ಕೆ ತಾನು ಸುತ್ತು ತಿರುಗುತ್ತದೆ, ಬೀಳುತ್ತದೆ, ಮಂಕಾಗಿರುತ್ತದೆ ಹಾಗೂ ಹಲ್ಲು ಕಡಿಯುತ್ತದೆ. ಇದನ್ನು ಗಮನಿಸಿದ ಅಲೆಮಾರಿ ಕುರುಬರು ಕಾದ ಕಬ್ಬಿಣದ ಸಲಾಕೆಯಿಂದ ಹಣೆಯ ಮೇಲೆ ಹಾಗೂ ಎರಡು ಕಿವಿಯ ಸುತ್ತ ಬರೆ ಎಳೆಯುತ್ತಾರೆ. ಪರಿಣಾಮವಾಗಿ ಕುರಿಯ ಮಳ್ಳುತನ ಕಡಿಮೆಯಾಗುತ್ತದೆ.

- **ಹಕ್ಕಿ ಹಾರಿದಾಗ :** ಕರೆಗುಬ್ಬಿಯು ತನ್ನ ಮೊಟ್ಟೆಗಳ ಮೇಲೆ ಕುಳಿತು ನೇರವಾಗಿ ಕುರಿಯ ಬೆನ್ನಿನ ಮೇಲೆ ಕುಳಿತರೆ, ಕುರಿಯ ನಡುವು ಅಥವಾ ಬೆನ್ನು ಹೋಗಿ, ಆಯಾಸವಾಗಿ ಕಾಲು ಎಳೆಯುತ್ತಾ ನಡೆಯುತ್ತದೆ. ಇದನ್ನು ಸರಿಪಡಿಸಲು ಕಬ್ಬಿಣದ ಸಲಾಕೆಯನ್ನು ಕಾಯಿಸಿ ನಡುವಿನ ಮೇಲೆ ಎರಡು ಬರೆ ಎಳೆಯುತ್ತಾರೆ. ಬರೆ ಹಾಕಿದ ಒಂದು ವಾರದೊಳಗೆ ಕುರಿ ಚೆನ್ನಾಗಿ ತಿರುಗಾಡುತ್ತದೆ.

ಕಾಲು ಕಟ್ಟುವುದು : ಕುರಿಗಳು ಬೆಟ್ಟ-ಗುಡ್ಡ ಹತ್ತಿ ಇಳಿಯುವಾಗ, ಕಾಲುವೆ ದಾಟುವಾಗ ಅಥವಾ ಬೆಳೆದುನಿಂತ ಬೆಳೆಗಳನ್ನು ಮೇಯಲು ಹೊಲ-ಗದ್ದೆಗಳಿಗೆ ಹೋದಾಗ, ಕುರಿಗಾರ ಅಥವಾ ಭೂಮಾಲಿಕ ಕಲ್ಲು ಅಥವಾ ಕಟ್ಟಿಗೆ ಎಸೆಯುವರು ಇತ್ಯಾದಿ ಸಂದರ್ಭಗಳಲ್ಲಿ ಕಾಲು ಮುರಿಯುವುದು ಸಾಮಾನ್ಯವಾಗಿದೆ. ಮುರಿದ ಕಾಲು ಕಟ್ಟಿಕೊಳ್ಳುವಂತೆ ಮಾಡಲು ಅಲೆಮಾರಿ ಕುರುಬನು ಕುರಿಯ ಹಸೆಓಕ್ಕೆ ಮತ್ತು ಕುರಿಯ ಹಾಲನ್ನು ಮಿಶ್ರಣ ಮಾಡಿ, ಬೆಂಕಿಯ ಮೇಲಿಟ್ಟು ಚೆನ್ನಾಗಿ ಬಿಸಿ ಮಾಡುತ್ತಾನೆ. ಬಿಸಿ ಇರುವಾಗಲೆ ಬಟ್ಟೆಯನ್ನು ಅದರಲ್ಲಿ ಒದ್ದೆ ಮಾಡಿ, ಉಳಿದಿದ್ದನ್ನು ಕಾಲು

ಮುರಿದ ಭಾಗಕ್ಕೆ ಸವರುತ್ತಾನೆ. ನಂತರ ಕಾಲನ್ನು ಸರಿಯಾಗಿ ಜೋಡಿಸಿ ಹಸಿಜಾಲೆ ತೊಗಟೆ ಅಥವಾ ಬಿದಿರನ್ನು ಕಾಲಿಗಿಟ್ಟು ಒದ್ದೆಯಾಗಿರುವ ಬಟ್ಟೆಯಿಂದ ಸುತ್ತಿ ಕಟ್ಟುವರು. ಹೀಗೆ ಸುತ್ತಿದ್ದು ಬ್ಯಾಂಡೇಜ್ ತರಹ ಗಟ್ಟಿಯಾಗುವುದು. ಇದನ್ನು ಒಂದು ವಾರದ ನಂತರ ಮತ್ತೆ ಬಿಚ್ಚಿ ಕಟ್ಟುವರು. ಈ ರೀತಿಯಾಗಿ ವಾರಕ್ಕೊಮ್ಮೆಯಂತೆ ಎರಡು ಅಥವಾ ಮೂರು ಕಟ್ಟು ಕಟ್ಟುವುದರೊಳಗೆ ಮುರಿದ ಕಾಲು ಕಟ್ಟಿಕೊಳ್ಳುತ್ತದೆ.

ಕೊಂಬು ಮುರಿದಾಗ : ಮೇಕೆ, ವೋತ ಅಥವಾ ಟಗರಿನ ಕೊಂಬು ಮುರಿದಾಗ ಕಾಡುಕುಸುಬಿ ಗಿಡದ ತೊಗಟೆಯನ್ನು ಬೆಲ್ಲದಲ್ಲಿ ಚೆನ್ನಾಗಿ ಅರೆದು, ಕೊಂಬು ಕಳಚಿದ ಭಾಗದಲ್ಲಿ ಹಚ್ಚಿ ಬಟ್ಟೆಯನ್ನು ಕಟ್ಟುತ್ತಾರೆ. ಅದು ಅಂಟಿನಂತೆ ಹಿಡಿದಿರುತ್ತದೆ. ಜೊತೆಗೆ ಕ್ರಿಮಿಗಳೂ ಇದರಿಂದ ಸಾಯುತ್ತವೆ.

ಪಾಶ್ಚಾತ್ಯ ಔಷಧಗಳು : ಇವರು ವರ್ಷವಿಡೀ ವಿವಿಧ ಪ್ರದೇಶಗಳಲ್ಲಿ ಅಲೆದಾಡುತ್ತಿರುವುದರಿಂದ ಕುರಿಗಳಿಗೆ ಹಲವಾರು ರೋಗಗಳು ಕಾಣಿಸಿಕೊಳ್ಳುತ್ತವೆ. ಆ ರೋಗಗಳ ನಿಯಂತ್ರಣಕ್ಕೆ ಖರ್ಚು ಮಾಡುವ ಹಣದ ಪ್ರಮಾಣವನ್ನು ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ. ಕಾರಣವಿಷ್ಟೇ ಆ ವರ್ಷದಲ್ಲಿ ಕುರಿಗಳ ಸಂಗೋಪನೆಗೆ ಅನುಕೂಲಕರ ವಾತವರಣವಿದ್ದಾಗ ರೋಗಗಳ ಸಂಖ್ಯೆ ಕಡಿಮೆ ಇರುತ್ತವೆ. ಪರಿಣಾಮವಾಗಿ ಔಷಧದ ಮೇಲೆ ಖರ್ಚು ಮಾಡುವ ಹಣದ ಪ್ರಮಾಣ ಕಡಿಮೆಯಾಗುತ್ತದೆ. ಪ್ರತಿಯಾಗಿ ಅನಾನುಕೂಲಕರ ವಾತಾವರಣವಿದ್ದಾಗ ಅನಿವಾರ್ಯವಾಗಿ ಬಹಳಷ್ಟು ಹಣ ಖರ್ಚು ಮಾಡಬೇಕಾಗುತ್ತದೆ. ಆದ್ದರಿಂದ ಆ ವರ್ಷದ ಅವಧಿಯಲ್ಲಿ ಕುರಿಗಳಿಗೆ ಬರುವ ರೋಗಗಳಿಂದಲೇ ಔಷಧದ ಮೇಲೆ ಖರ್ಚು ಮಾಡುವ ಹಣದ ಪ್ರಮಾಣ ನಿರ್ಧಾರವಾಗುತ್ತದೆ. ಒಂದು ವರ್ಷದ ಅವಧಿಯಲ್ಲಿ ಕಾಣಿಸಿಕೊಳ್ಳುವ ಹಲವು ಪ್ರಮುಖ ರೋಗಗಳು ಮತ್ತು ಔಷಧಗಳನ್ನು ಕೆಳಗಿನಂತೆ ಸಂಕ್ಷೇಪಿಸಲಾಗಿದೆ.

ರೋಗ ಬಾರದಂತೆ ಮುಂಜಾಗ್ರತಾ ಕ್ರಮವಾಗಿ ವರ್ಷಕ್ಕೆ ಎರಡು ಸಾರಿ ಅಂದರೆ ಮೇ ಮತ್ತು ನವ್ಹೆಂಬರ್ ತಿಂಗಳಲ್ಲಿ (ಕಾರಹುಣ್ಣಿಮೆ, ದೀಪಾವಳಿ) ಈ.ಟಿ. ಲಸಿಕೆ, ಜೂನ್ ಮತ್ತು ಡಿಸೆಂಬರ್ ತಿಂಗಳಲ್ಲಿ ಕಾಲು ಬಾಯಿಜ್ವರದ ಲಸಿಕೆ, ಸೆಪ್ಟಂಬರ್ ಅಥವಾ ಅಕ್ಟೋಬರ್ ತಿಂಗಳಲ್ಲಿ ಬರುವ ನೀಲಿ ನಾಲಿಗೆ ಜ್ವರದ ಲಸಿಕೆ, ಜನವರಿ ತಿಂಗಳಲ್ಲಿ ಬರುವ ಸಿಡುಬು ರೋಗ ಲಸಿಕೆ. ಫೆಬ್ರವರಿಯಲ್ಲಿ ಜಂತು ಹುಳಗಳ ಲಸಿಕೆ. ಮಾರ್ಚ್ ತಿಂಗಳಲ್ಲಿ (ಅಥವಾ ವರ್ಷದ ಯಾವುದೇ ಅವಧಿಯಲ್ಲಿ) ಬರುವ ದೊಡ್ಡರೋಗಕ್ಕೆ ಪಿ.ಪಿ.ಆರ್. ಲಸಿಕೆ ನೀಡಲಾಗುವುದು. ಮೇ ತಿಂಗಳಲ್ಲಿ ಬರುವ ಗಳಲೆ ರೋಗಗಳ ಲಸಿಕೆ, ಮಳೆಗಾಲದಲ್ಲಿ ಬರುವ ನರಡಿ ರೋಗಕ್ಕೆ ಅಂತ್ರಾಕ್ಸ್ ಲಸಿಕೆ ಇತ್ಯಾದಿಗಳನ್ನು ಮುಂಜಾಗ್ರತ ಕ್ರಮವಾಗಿ ಹಾಕಬಹುದು ಅಥವಾ ರೋಗ ಕಾಣಿಸಿಕೊಂಡ ನಂತರ ಹಾಕಬಹುದು. ಇವರು ಮೇ ಮತ್ತು ನವ್ಹೆಂಬರ್ ತಿಂಗಳಲ್ಲಿ ಮಾತ್ರ ಈ.ಟಿ. ಲಸಿಕೆಯನ್ನು ಮರೆಯದೆ ಹಾಕುತ್ತಾರೆ.

ಆದರೆ ಉಳಿದ ಲಸಿಕೆ ಅಥವಾ ಔಷಧಗಳನ್ನು ಕುರಿಗಳಿಗೆ ರೋಗ ಕಾಣಿಸಿಕೊಂಡ ನಂತರ ಹಾಕುವುದನ್ನು ರೂಢಿಸಿಕೊಂಡಿದ್ದಾರೆ. ಏಕೆಂದರೆ ಕುರಿಗಳು ಆರೋಗ್ಯವಾಗಿವೆ. ಏತಕ್ಕಾಗಿ ಲಸಿಕೆ ಹಾಕಬೇಕು ಎನ್ನುವ ಮನೋಭಾವನೆಯು ಒಂದು ಕಡೆಯಾದರೆ, ಇನ್ನೊಂದು ಪ್ರಮುಖವಾಗಿ ಹಣಕಾಸಿನ ಅಡಚಣೆಯ ಪರಿಣಾಮವಾಗಿ ಲಸಿಕೆ ಹಾಕಿಸುವುದಿಲ್ಲ. ಆದರೆ ಈ ತರಹದ ಮನೋಭಾವನೆ ಅಥವಾ ಹಣಕಾಸಿನ ಅಡಚಣೆ ಮುಂದಿಟ್ಟುಕೊಂಡು ಲಸಿಕೆ ಹಾಕಿಸದಿದ್ದರೆ ಕುರಿಗಳಲ್ಲಿ ರೋಗಗಳು ಕಾಣಿಸಿಕೊಳ್ಳುವುದರ ಮೂಲಕ ತಮ್ಮ ಆರ್ಥಿಕ ಬದುಕಿನ ಮೇಲೆ ದುಷ್ಪರಿಣಾಮ ಬಿರುತ್ತದೆ.

೫.೨.೫ ಕುರಿ (ಆಳು)ಮಕ್ಕಳು

ಕುರಿ ಸಂಗೋಪನೆ ಶ್ರಮ ಆಧಾರಿತ ಉದ್ಯೋಗ. ಆ ಉದ್ಯೋಗ ನಿರ್ವಹಿಸಲು ಅಧಿಕ ಸಂಖ್ಯೆಯ ಶ್ರಮಿಕರು ಬೇಕಾಗುತ್ತಾರೆ. ಒಂದು ಹಿಂಡು ಕುರಿ ಸಂಗೋಪನೆ ಮಾಡಲು ಕನಿಷ್ಠ ನಾಲ್ಕು ಜನರು ಆ ವೃತ್ತಿಯಲ್ಲಿ ತೊಡಗಿಸಕೊಳ್ಳಬೇಕಾಗುತ್ತದೆ. ಅವರಲ್ಲಿ ಇಬ್ಬರು ಕುರಿಗಳಿಗೆ ಮೇವು ಮೇಯಿಸಲು ಅಡವಿಗೆ ಹೋದರೆ, ಒಬ್ಬ ಹೆಣ್ಣು ಮಗಳು ಅಡುಗೆ, ಮರಿಗಳ ಪೋಷಣೆ ಇತ್ಯಾದಿ ಕೆಲಸ ಕಾರ್ಯ ಮಾಡಬೇಕಾಗುತ್ತದೆ. ಮತ್ತೊಬ್ಬನು, ಕುಟುಂಬದ ಅವಶ್ಯಕತೆಗಳ ಪೂರೈಕೆ ಹಾಗೂ ಕುರಿಗಳ ಮೇಲುಸ್ತುವಾರಿಯನ್ನು ನೋಡಿಕೊಳ್ಳಬೇಕಾಗುತ್ತದೆ. ಹೀಗೆ ಶ್ರಮಿಕರ ಪ್ರಮಾಣವು ಕುರಿಗಳ ಸಂಖ್ಯೆ ಅಥವಾ ಹಿಂಡುಗಳ ಗಾತ್ರವನ್ನು ಅವಲಂಬಿಸಿರುತ್ತದೆ. ಇವರು ಮೂಲತಃ ಶ್ರಮ ಆಧಾರಿತ ಉದ್ಯೋಗದಲ್ಲಿ ತಮ್ಮ ಕುಟುಂಬಗಳನ್ನು ತೊಡಗಿಸಿಕೊಂಡು ಬಂದಿರುವ ಅಲೆಮಾರಿ ಕುರುಬರಾಗಿದ್ದು, ತಮ್ಮ ಕುರಿಗಳ ಸಂಖ್ಯೆ ಜಾಸ್ತಿ ಕುಟುಂಬದ ಯುವಕ ಪುರುಷರ ಸಂಖ್ಯೆ ಕಡಿಮೆ ಇದ್ದಾಗ, ಕುರಿ ಸಂಗೋಪನೆಗಾಗಿ ಹೊರಗಿನವರನ್ನು ಆಳುಮಕ್ಕಳನ್ನಾಗಿ ಇಟ್ಟುಕೊಳ್ಳುತ್ತಾರೆ. ಆಳುಮಕ್ಕಳನ್ನು ಕುರಿ ಸಂಗೋಪನೆಗೆ ಇಟ್ಟುಕೊಳ್ಳುವಾಗ ಯಾವುದೇ ನಿರ್ದಿಷ್ಟ ಕೋಮಿಗೆ ಸೀಮಿತಗೊಳಿಸದೇ ಎಲ್ಲ ಸಮುದಾಯದವರನ್ನು ಆಯ್ಕೆ ಮಾಡಿಕೊಂಡಿರುವುದನ್ನು ಕಾಣುತ್ತೇವೆ. ಸಾಮಾನ್ಯವಾಗಿ ಮುಂದುವರಿದ ಸಮುದಾಯದವರನ್ನು ಬಿಟ್ಟು ಇತರೆ ಎಲ್ಲಾ ಸಮುದಾಯವರು ಇರುತ್ತಾರೆ. ಅವರು ಆಳುಮಕ್ಕಳಿಗೂ ಮತ್ತು ತುಮ್ಮ ಕುಟುಂಬದ ಇತರ ಸದಸ್ಯರಿಗೂ ವ್ಯತ್ಯಾಸ ಕಾಣವುದಿಲ್ಲ. ಮನೆ ಮಕ್ಕಳಿಗೆ ಯಾವ ತರಹದ ಪ್ರಾಶಸ್ತ್ಯ ಇದೆಯೋ ಅದೇ ತರಹ ಆಳು ಮಕ್ಕಳಿಗೂ ನೀಡುತ್ತಾರೆ. ಊಟ, ಬಟ್ಟೆ, ವಸತಿ ಇತ್ಯಾದಿಗಳನ್ನು ಸಮನಾಗಿ ಅನುಭೋಗಿಸುತ್ತಾರೆ. ಮನೆಮಕ್ಕಳಿಗಿಂತ ಆಳುಮಕ್ಕಳನ್ನು ಹೆಚ್ಚು ಪ್ರೀತಿಯಿಂದ ಕಾಣುತ್ತಾರೆ. ಕಾರಣ ತಂದೆ ತಾಯಿಯರನ್ನು ಬಿಟ್ಟು ತಮ್ಮನ್ನೇ ನಂಬಿ ಬಹಳ ದೂರ ಬಂದಿದ್ದಾರೆಂಬ ದೃಷ್ಟಿಯಿಂದ ಹಾಗೂ ಅವರನ್ನು ಚೆನ್ನಾಗಿ ನೋಡಿಕೊಂಡರೆ ತಮ್ಮ ಕುರಿ-ಮರಿಗಳನ್ನು ಅವರು ಚೆನ್ನಾಗಿ ನೋಡಿಕೊಳ್ಳುತ್ತಾರೆಂಬ ನಂಬಿಕೆಯಿಂದ ಪ್ರೀತಿ-ವಾತ್ಸಲ್ಯದಿಂದ ಕಾಣುತ್ತಾರೆ.

ಆಳುಮಕ್ಕಳು ಸಾಮಾನ್ಯವಾಗಿ ೧೫ ವರ್ಷ ಮೇಲ್ಪಟ್ಟ ಯುವಕರಿಂದ ಹಿಡಿದು ಐವತ್ತು ವರ್ಷ ವಯಸ್ಸಿನ ವಯೋಮಾನದವರೆಗೆ ಇರುತ್ತಾರೆ. ಇವರ ವೇತನವು ವಯಸ್ಸು, ದಕ್ಷತೆ ಮತ್ತು ಅನುಭವ

ಆಧಾರದ ಮೇಲೆ ವರ್ಷಕ್ಕೆ ಇಂತಿಷ್ಟು ಎಂದು ನಿಗದಿಯಾಗುತ್ತದೆ. ಆಳುಮಕ್ಕಳಿಗೆ ವೇತನವನ್ನು ಎರಡು ವಿಧಾನಗಳಲ್ಲಿ ನೀಡುತ್ತಾರೆ. ಹಣದ ರೂಪದಲ್ಲಿ ಅಥವಾ ಮರಿಗಳ ಸಂಖ್ಯೆಯ ಪ್ರಮಾಣದಲ್ಲಿ. ಹಣದ ರೂಪದಲ್ಲಿ ನೀಡಿದಾಗ ಊಟ, ಬಟ್ಟೆ ಕೊಟ್ಟು ಒಬ್ಬರಿಗೆ ಕನಿಷ್ಟ ೬೦೦೦ ರೂ.ಗಳಿಂದ ೧೫೦೦೦ ರೂ.ಗಳವರೆಗೆ ಇರುತ್ತದೆ. ಮರಿಗಳ ರೂಪದಲ್ಲಿ ನೀಡಿದಾಗ ೬ ರಿಂದ ೧೨ ಕರಿಗೆ ಮರಿಗಳನ್ನು ನೀಡುತ್ತಾರೆ. 'ಕರಿಗೆಮರಿ' ಎಂದರೆ ಪ್ರೌಢವಸ್ಥೆಗೆ ಬಂದ ಕುರಿಮರಿ. ಹೀಗೆ ಮರಿಗಳ ರೂಪದಲ್ಲಿ ವೇತನ ಪಡೆದ ಆಳುಮಕ್ಕಳು ಐದಾರು ವರ್ಷ ಅವರ ಕುರಿಗಳಲ್ಲಿದ್ದುಕೊಂಡು ತಮ್ಮ ಕುರಿಗಳ ಸಂಖ್ಯೆ ಐವತ್ತು ದಾಟಿದ ನಂತರ ಹೊರಗೆ ಬಂದು ಸ್ವತಂತ್ರವಾಗಿ ಕುರಿಸಂಗೋಪನೆ ಮಾಡಿ ಬದುಕಲು ಆರಂಭಿಸುತ್ತಾರೆ. ಆಳುಮಗನಾಗಿ ದುಡಿಯುವವರೆಗೆ ತನ್ನ ಕುರಿಗಳ ಔಷಧದ ಖರ್ಚು ವೆಚ್ಚಗಳನ್ನು ಕುಟುಂಬದ ಯಜಮಾನನೇ ಭರಿಸುತ್ತಾರೆ. ಒಂದು ವೇಳೆ ಆಳು ಮಗನ ಕುರಿಗಳ ಸಂಖ್ಯೆ ಐವತ್ತು ದಾಟಿದ ನಂತರವೂ ಆಳುಮಗನಾಗಿ ದುಡಿಯಲು ಮುಂದುವರಿದರೆ ಔಷಧದ ಖರ್ಚು-ವೆಚ್ಚಗಳನ್ನು ಕುರಿಗಳ ಸಂಖ್ಯೆಯ ಆಧಾರದ ಮೇಲೆ ಭರಿಸಬೇಕಾಗುತ್ತದೆ. ಈ ರೀತಿಯಾಗಿ ಆಳುಮಕ್ಕಳಾಗಿ ದುಡಿದು ನಂತರ ಸ್ವತಂತ್ರವಾಗಿ ಕುರಿ ಸಂಗೋಪನೆ ಮಾಡುವ ಕುಟುಂಬಗಳನ್ನು ಕಾಣಬಹುದಾಗಿದೆ. ಒಟ್ಟಾರೆಯಾಗಿ ಅಲೆಮಾರಿ ಕುರುಬ ಕುಟುಂಬದ ಸದಸ್ಯರು ಹಾಗೂ ಆಳು ಮಕ್ಕಳು ಆತ್ಮೀಯ ಸಂಬಂಧ ಹೊಂದಿರುವುದನ್ನು ಕಾಣುತ್ತೇವೆ. ಆದರೆ ಇತ್ತೀಚಿನ ದಿನಗಳಲ್ಲಿ ಕುರಿಸಂಗೋಪನೆ ಮಾಡುವುದು ಕಷ್ಟದ ಕೆಲಸ ಎಂಬ ಭಾವನೆ ಅಲೆಮಾರಿ ಕುರುಬರಲ್ಲಿ ಮನೆ ಮಾಡಿದೆ. ಆಳುಮಕ್ಕಳನ್ನು ಹುಡುಕಿ ತರುವುದೇ ದೊಡ್ಡ ಸಾಹಸವಾಗಿದ್ದು, ಮುಂಗಡವಾಗಿ ಕೇಳಿದಷ್ಟು ಹಣ ನೀಡಿದರೂ ಕುರಿಕಾಯಲು ಬರದಿರುವುದು ಇದಕ್ಕೆ ಕಾರಣವಾಗಿದೆ.

೫.೨.೬ ಇತರೆ ಖರ್ಚುಗಳು

ಮೆಟ್ಟು (ಚಪ್ಪಲಿ) : ಅಲೆಮಾರಿ ಕುರುಬರು ಚಪ್ಪಲಿಗಳಿಗೆ ಮೆಟ್ಟು ಎಂದು ಕರೆಯುತ್ತಾರೆ. ಇವರು ಹಾಕಿಕೊಳ್ಳುವ ಮೆಟ್ಟುಗಳು ವಿಶೇಷವಾಗಿದ್ದು ಜನ ಸಾಮಾನ್ಯರು ಬಳಸುವುದಕ್ಕಿಂತ ಭಿನ್ನವಾಗಿವೆ. ಇವು ಸಂಪೂರ್ಣ ದೇಶೀಯ ಉತ್ಪಾದನಾ ವಿಧಾನದಿಂದ ಕೂಡಿದ್ದು ದನಗಳ ಚರ್ಮದಿಂದ ತಯಾರು ಮಾಡಲಾಗಿರುತ್ತದೆ. ಇವು ಬಹಳ ದಪ್ಪವಾಗಿರುವುದರ ಜೊತೆಗೆ ತೂಕವನ್ನು ಹೊಂದಿರುತ್ತವೆ. ಸಾಮಾನ್ಯರು ಹಾಕಿಕೊಂಡು ತಿರುಗುವುದು ಕಷ್ಟ. ಏಕೆಂದರೆ ಒಂದೊಂದು ಮೆಟ್ಟುಗಳ ತೂಕ ಅರ್ಧ ಕೆ.ಜಿ.ಯಿಂದ ಒಂದು ಕೆ.ಜಿ.ಯವರೆಗೆ ಭಾರವಾಗಿರುತ್ತವೆ. ಇವರು ಹೆಚ್ಚಾಗಿ ಕಲ್ಲು, ಮುಳ್ಳು, ಕೆಸರುಗಳಲ್ಲಿಯೆ ಅಲೆದಾಡುವುದರಿಂದ ಹಾಗೂ ಬಾಳಿಕೆಯ ದೃಷ್ಟಿಯಿಂದ ಇಂತಹ ಮೆಟ್ಟುಗಳೇ ಬೇಕಾಗುತ್ತವೆ. ಮೆಟ್ಟುಗಳ ಮೂಲಕ ಇವರನ್ನು ಅಲೆಮಾರಿ ಕುರುಬರೆಂದು ಸುಲಭವಾಗಿ ಗುರುತಿಸಬಹುದು. ಇವನ್ನು ತಮ್ಮ ಗ್ರಾಮಗಳಲ್ಲಿರುವ ಸಮಗಾರರಿಗೆ ಕಾಲಿನ ಅಳತೆ ನೀಡಿ ಮೆಟ್ಟು ಮಾಡಿಸಿಕೊಳ್ಳುತ್ತಾರೆ. ಇವುಗಳ ಬೆಲೆ ೨೫೦ ರಿಂದ ೩೫೦ ರೂ.ಗಳವರೆಗೆ ಇದ್ದು ಒಂದು ವರ್ಷ

ಬಾಳಿಕೆ ಬರುತ್ತವೆ. ಇವನ್ನೇ ತಮ್ಮ ಸ್ವಗ್ರಾಮಗಳ ಸಂತೆ ಅಥವಾ ನಿಪ್ಪಾಣಿ ಪಟ್ಟಣದಲ್ಲಿ ಕೊಂಡರೆ ೧೫೦ ರಿಂದ ೨೫೦ ರೂ.ಗಳಿಗೆ ಸಿಗುತ್ತವೆ. ಸಂತೆ ಅಥವಾ ಪಟ್ಟಣದಲ್ಲಿ ಮಾರುವ ಮೆಟ್ಟುಗಳು ಇವರಿಗೆ ಬಾಳಿಕೆ ಬರುವುದಿಲ್ಲವಾದ್ದರಿಂದ ಅಳತೆ ಕೊಟ್ಟು ಮಾಡಿಸುವುದೇ ಹೆಚ್ಚು.

ಅಡಿಕೆ ಚೀಲ : ಇವರು ಮರಾಠಿ ಭಾಷೆಯಲ್ಲಿ ಇದನ್ನು 'ಬಟಾವೇ' ಎಂದು ಕರೆದರೆ, ಕನ್ನಡದಲ್ಲಿ 'ಅಡಿಕೆ ಚೀಲ'ವೆಂದು ಕರೆಯುವರು. ಮದುವೆಯಾದ ಪ್ರತಿಯೊಬ್ಬ ಅಲೆಮಾರಿ ಕುರುಬರ ನಡುವಿನಲ್ಲಿ ಈ ಚೀಲ ಇರುತ್ತದೆ. ಈ ಚೀಲದಲ್ಲಿ ಎಲೆ, ಅಡಿಕೆ, ಸುಣ್ಣ, ಕಾಚ, ತಂಬಾಕು, ಯಾಲಕ್ಕಿ, ಲವಂಗಗಳನ್ನಿಟ್ಟುಕೊಂಡಿರುತ್ತಾರೆ. ಇವನ್ನು ನೀರು, ಚಹಾ, ಅಥವಾ ಊಟವಾದ ಮೇಲೆ ಹಾಕಿಕೊಳ್ಳುವುದು ಪುರುಷರಿಗೆ ರೂಢಿಯಾಗಿ ಬಿಟ್ಟಿದೆ. ಪ್ರತಿಯೊಬ್ಬ ವ್ಯಕ್ತಿ ದಿನಾಲು ೧೦ ರಿಂದ ೧೫ ರೂ.ಗಳವರೆಗೆ ಇವುಗಳ ಮೇಲೆ ಖರ್ಚುಮಾಡುತ್ತಾನೆ. ಇವರಲ್ಲಿ ಸ್ತ್ರೀಯರು ಎಲೆ, ಅಡಿಕೆ, ಹಾಕಿಕೊಳ್ಳುವವರು ತೀರಾ ಅಪರೂಪ. ಆದರೆ ಇಲ್ಲಿ ಗಮನಿಸುವ ಒಂದು ಪ್ರಮುಖ ಅಂಶವೆಂದರೆ ಸಾಮಾನ್ಯವಾಗಿ ಹೈದ್ರಾಬಾದ್ ಕರ್ನಾಟಕದ ಬಳ್ಳಾರಿ, ರಾಯಚೂರು ಜಿಲ್ಲೆಯ ಗ್ರಾಮೀಣ ಹೆಣ್ಣು ಮಕ್ಕಳಲ್ಲಿ ಎಲೆ ಅಡಿಕೆ ಚೀಲ ನಡುವಿನಲ್ಲಿರುವುದನ್ನು ಕಾಣುತ್ತೇವೆ.

ಹೊಟ್ಟೆಚೀಲ : ಕುರಿಗಳಿಗೆ ಮೇವು ಮೇಯಿಸಲು ಅಡವಿಗೆ ಹೋಗುವಾಗ ತೆಗೆದುಕೊಂಡು ಹೋಗುವ ಆಹಾರದ ಚೀಲವಿದು. ಇದರಲ್ಲಿ ಮಧ್ಯಾಹ್ನದ ಬುತ್ತಿ, ಡಬರಿ, ಕುರಿಮುಳ್ಳು ತೆಗೆಯುವ ಚಿಮುಟಿಗೆ, ನಸೆಬಟ್ಟೆ, ಕುರಿಗಳ ಔಷಧ, ಪ್ಲಾಸ್ಟಿಕ್ ಚೀಲ ಇತ್ಯಾದಿ ಸಾಮಾಗ್ರಿಗಳನ್ನು ಇಟ್ಟು ಕೊಂಡಿರುತ್ತಾರೆ. ಈ ಚೀಲದಲ್ಲಿ ಮಧ್ಯಾಹ್ನದ ಆಹಾರ ಇರುವುದರಿಂದಲೇ ಇದಕ್ಕೆ ಹೊಟ್ಟೆಚೀಲ, ಬುತ್ತಿಚೀಲ, ವಡೆಚೀಲ, ತೆರೆಬಟ್ಟೆಚೀಲ, ಬುತ್ತಿಚಿಕ್ಕ ಎಂದು ಸಹ ಕರೆಯುತ್ತಾರೆ. ಇದು ಹತ್ತಿ ನೂಲಿನದಾಗಿದ್ದು, ನರಗುಂದ, ನವಲಗುಂದಗಳಲ್ಲಿ ಕೊಂಡು ತರುತ್ತಾರೆ. ಅಲ್ಲಿ ಕುರಿಗಾರರಿಗೋಸ್ಕರ ಈ ಚೀಲವನ್ನು ತಯಾರು ಮಾಡುತ್ತಾರೆ. ಇದರ ಬೆಲೆ ೧೫೦ ರಿಂದ ೨೦೦ ರೂ.ಗಳಾಗಿದ್ದು ಮೂರರಿಂದ ನಾಲ್ಕುವರ್ಷಗಳವರೆಗೆ ಬಾಳಿಕೆ ಬರುತ್ತದೆ. ಪ್ರತಿಯೊಂದು ಕುರಿಹಿಂಡಿನವರ ಕಂಕುಳದಲ್ಲಿ ಈ ಚೀಲವನ್ನು ಕಾಣಬಹುದು. ಈ ಚೀಲ ವಿವಿಧ ಖಾನೆಗಳನ್ನು ಹೊಂದಿದ್ದು ಪ್ರತಿಯೊಂದು ಖಾನೆಯಲ್ಲಿ ಒಂದೊಂದು ವಸ್ತುಗಳನ್ನಿಟ್ಟುಕೊಳ್ಳಬಹುದು. ಈ ಚೀಲದ ವಿಶೇಷ ಲಕ್ಷಣವೆಂದರೆ ಕಳ್ಳರು ಹಣ ಕದಿಯಲಾರದ ಖಾನೆ ಇರುತ್ತದೆ. ಅದಕ್ಕೆ 'ಕಳ್ಳಖಾನೆ' ಎಂದು ಕರೆಯುತ್ತಾರೆ. ಅದರಲ್ಲಿ ಹಣವನ್ನು ಇಡುವುದು ಮತ್ತು ತೆಗೆಯುವುದು ಅದನ್ನು ಬಳಸುವನೊಬ್ಬನಿಗೆ ಮಾತ್ರ ಗೊತ್ತಿರುತ್ತದೆ. ಬೇರೆಯವರು ಹಣ ಕದಿಯಲು ಪ್ರಯತ್ನಪಟ್ಟರೂ ಹಣ ಸಿಗುವುದಿಲ್ಲ. ಸಾಮಾನ್ಯವಾಗಿ ಅಲೆಮಾರಿ ಕುರುಬರು ತಮ್ಮಲ್ಲಿರುವ ಅಲ್ಪಸ್ವಲ್ಪ ಹಣವನ್ನು ಹೊಟ್ಟೆಚೀಲದ ಕಳ್ಳ ಖಾನೆಯಲ್ಲಿಟ್ಟು ಕೊಂಡು ರಕ್ಷಿಸಿಕೊಳ್ಳುತ್ತಾರೆ.

ಕುರಿಬಲೆ ಮತ್ತು ಮರಿಬಲೆ : ರಾತ್ರಿ ಕುರಿಗಳನ್ನು ನಿಯಂತ್ರಿಸಲು, ಹಗಲು ಮರಿಗಳನ್ನು ಸಂರಕ್ಷಿಸಲು ಪ್ರಮುಖವಾಗಿ ಎರಡು ವಸ್ತುಗಳನ್ನು ಉಪಯೋಗಿಸುತ್ತಾರೆ. ಒಂದು ನೈಲಾನ್ ಅಥವಾ ರೇಷ್ಮೆಯ ದಾರದಿಂದ ತಯಾರಿಸಿದ ಬಲೆ ಮತ್ತೊಂದು ಬಿದರಿನ ಕಟ್ಟಿಗೆಗಳು. ಇವೆರಡನ್ನು ಅಲೆಮಾರಿ ಕುರುಬರು ಮಾರುಕಟ್ಟೆಯಲ್ಲಿ ಕೊಂಡು ತರಬೇಕು. ಬಲೆಯ ವಿಸ್ತಾರ ಮತ್ತು ಬಿದಿರು ಕಟ್ಟಿಗೆಗಳ ಸಂಖ್ಯೆ ಕುಟುಂಬದ ಕುರಿಗಳಿಗನುಗುಣವಾಗಿರುತ್ತದೆ. ಬಲೆಯನ್ನು ಕೈ-ಮಾರು ಅಳತೆಯ ಲೆಕ್ಕದಲ್ಲಿ ತರುತ್ತಾರೆ. ಉದಾಹರಣೆ ಒಂದು ಕುಟುಂಬದ ಕುರಿಗಳ ಸಂಖ್ಯೆ ೨೦೦ ಇದ್ದಾಗ ೪೦ ಮಾರು ಬಲೆ ಮತ್ತು ೧೪ ಬಿದಿರುಕಟ್ಟಿಗೆಗಳು ಬೇಕಾಗುತ್ತವೆ. ಪ್ರತಿಮಾರು ಬಲೆಯ ಬೆಲೆ ಮಾರುಕಟ್ಟೆಯಲ್ಲಿ ೨೫ ರಿಂದ ೩೦ ರೂ.ಗಳವರೆಗೆ ಹಾಗೂ ಪ್ರತಿ ಬಿದಿರಿಗೆ ೧೦ ರೂ. ಗಳಂತೆ ಕೊಟ್ಟು ತರುತ್ತಾರೆ. ಅಂದರೆ ಕುರಿ ಬಲೆಗೆ ೧೦೦೦ ದಿಂದ ೧೨೦೦ ರೂ.ವರೆಗೆ ಹಾಗೂ ಬಿದಿರಿಗೆ ೧೪೦ ರೂ.ಗಳಷ್ಟು ವೆಚ್ಚ ಮಾಡಬೇಕಾಗುತ್ತದೆ. ಇವರಲ್ಲಿಯೇ ಕೆಲವರು ರೇಷ್ಮೆದಾರದ ಉಂಡೆಯನ್ನು ಕೆ.ಜಿ. ಲೆಕ್ಕದಲ್ಲಿ ತಂದು ತಾವೇ ಕುರಿಬಲೆ ಮತ್ತು ಮರಿಬಲೆ ತಯಾರು ಮಾಡಿಕೊಳ್ಳುತ್ತಾರೆ.

ಕುದುರೆ ಜಾಳಿಗೆ : ಇದು ನೂಲಿನಿಂದ ಅಥವಾ ನೈಲಾನ್ ಹಗ್ಗದಿಂದ ತಯಾರು ಮಾಡಿದ ಚಿಕ್ಕದಾಕಾರದ (ಸಣ್ಣ ಕಿಂಡಿಗಳಿರುವ) ಚೀಲ. ಇದನ್ನು ತಯಾರು ಮಾಡಲು ೫೦ ರಿಂದ ೭೫ ರೂ.ಗಳವರೆಗೆ ಖರ್ಚು ಬರುತ್ತದೆ. ಇದಕ್ಕೆ ಬೇಕಾಗುವ ನೂಲನ್ನು ಮಾರುಕಟ್ಟೆಯಲ್ಲಿ ಕೊಂಡು ತಾವೇ ತಯಾರಿಸಿಕೊಳ್ಳಲಾಗುತ್ತದೆ. ಈ ಜಾಳಿಗೆ ಆಹಾರಧಾನ್ಯಗಳನ್ನು ಮತ್ತು ಇತರೆ ಜೀವನಾವಶ್ಯಕ ವಸ್ತುಗಳನ್ನು ಶೇಖರಿಸಲು ಹಾಗೂ ಸಾಗಿಸಲು ಇದನ್ನು ಬಳಸಲಾಗುತ್ತದೆ. ಆಹಾರಧಾನ್ಯನಗಳು ಮತ್ತು ಇತರೆ ಜೀವನಾವಶ್ಯಕ ವಸ್ತುಗಳನ್ನು ಜಾಳಿಗೆಯಲ್ಲಿಟ್ಟು ಕುದುರೆಯ ಬೆನ್ನಿನ ಮೇಲೆ ಎಡಭಾಗಕ್ಕೊಂದು ಮತ್ತು ಬಲಭಾಗಕ್ಕೊಂದು ಇಳಿಬಿಟ್ಟು ಗುಡಾರ ಬದಲಾಯಿಸುವ ಸ್ಥಳಕ್ಕೆ ವರ್ಗಾಯಿಸುತ್ತಾರೆ. ಗುಡ್ಡಗಾಡು ಪ್ರದೇಶದಲ್ಲಿ ಅಥವಾ ರಸ್ತೆ ಸಂಪರ್ಕವಿಲ್ಲದ ಹೊಲ ಗದ್ದೆಗಳಲ್ಲಿ ಗುಡಾರ ಹೂಡಿದಾಗ ಸಮೀಪದ ಗ್ರಾಮದ ಅಂಗಡಿಯಲ್ಲಿ ಅಥವಾ ಸಂತೆಯಲ್ಲಿ ದಿನ ನಿತ್ಯದ ಸಾಮಾನುಗಳನ್ನು ಜಾಳಿಗೆಯಲ್ಲಿಟ್ಟುಕೊಂಡು ಕುದುರೆಯ ಮೂಲಕ ಸಾಗಿಸಲಾಗುತ್ತದೆ.

ಜಲ್ಲೆಪುಟ್ಟಿ : ಇದನ್ನು ಹೆಣ್ಣು ಬಿದರಿನಿಂದ ತಯಾರಿಸಲ್ಪಟ್ಟಿದ್ದು ಎಲ್ಲಾ ಅಲೆಮಾರಿ ಕುರುಬ ಕುಟುಂಬದವರಲ್ಲಿ ಇರುವುದು ಕಂಡುಬರುತ್ತದೆ. ಜಲ್ಲೆಪುಟ್ಟಿಗಳು ವಲಸೆ ಬಂದ ಪ್ರದೇಶದಲ್ಲಿ ಸಿಗುವುದಿಲ್ಲವಾದ್ದರಿಂದ ತಮ್ಮ ಊರಿನ ಮೇದಾರ ಅಥವಾ ಕೊರಚರಿಗೆ ಹೇಳಿ ಮಾಡಿಸಿ ತೆಗೆದುಕೊಂಡು ಬರುತ್ತಾರೆ. ಒಂದಕ್ಕೆ ೧೫೦ ರಿಂದ ೨೫೦ ರೂಪಾಯಿ ಬೆಲೆ ಕೊಟ್ಟು ಕೊಂಡು ತರುತ್ತಾರೆ. ವಿಭಕ್ತ ಕುಟುಂಬದಲ್ಲಿ ಒಂದು ಇದ್ದರೆ ಅವಿಭಕ್ತ ಕುಟುಂಬಗಳಲ್ಲಿ ೨ ಅಥವಾ ೩ ಜಲ್ಲೆಪುಟ್ಟಿಗಳಿರುತ್ತವೆ.

ಈ ಜಲ್ಲೆಪುಟ್ಟಿಯು ವರ್ಷವಿಡಿ ಬಳಕೆಗೆ ಬರುತ್ತದೆ. ಗುಡಾರದಲ್ಲಿರುವಾಗ ಮತ್ತು ಗುಡಾರ ಬದಲಾಯಿಸುವಾಗ ಬಳಸುತ್ತಾರೆ. ಗುಡಾರದಲ್ಲಿರುವಾಗ ಸಣ್ಣ-ಪುಟ್ಟ ಸಾಮಾನುಗಳು ಬೇಗನೆ ಕೈಗೆ ಸಿಗಲಿ ಎಂಬ ಉದ್ದೇಶದಿಂದ ಬೆಂಕಿಪೊಟ್ಟಣ, ಇಳಿಗೆ, ದೇವರ ಭಾವಚಿತ್ರ, ಬೇಳೆಗುಂಡು, ಉಪ್ಪು, ಭಂಡಾರದ ಚೀಲ, ಸಾಂಬಾರ ಪದಾರ್ಥಗಳು, ಅನ್ನ, ರೊಟ್ಟಿ ಇತ್ಯಾದಿಗಳನ್ನು ಅದರಲ್ಲಿಟ್ಟು ಕೊಂಡಿರುತ್ತಾರೆ. ಪಂಚಾಮೃತಗಳಾದ ಹಾಲು, ಮೊಸರು, ಮಜ್ಜಿಗೆ, ಬೆಣ್ಣೆ, ತುಪ್ಪ ಹಾಗೂ ಅಡಿಗೆ ಎಣ್ಣೆ, ಕೊಬ್ಬರಿ ಎಣ್ಣೆ, ಇತರೆ ವಸ್ತುಗಳು ಉರುಳದಂತೆ ಜಲ್ಲೆಪುಟ್ಟಿಯಲ್ಲಿಟ್ಟುಕೊಂಡಿರುತ್ತಾರೆ. ಗುಡಾರ ಬದಲಾಯಿಸುವಾಗ ಈ ಮೇಲಿನ ಎಲ್ಲಾ ಸಾಮಾನುಗಳನ್ನು ಹೊತ್ತೊಯ್ಯಲು ಬಳಸಲಾಗುತ್ತದೆ. ಇದರಲ್ಲಿರುವ ಸಾಮಾನುಗಳು ೨೦ ರಿಂದ ೨೫ ಕೆ.ಜಿ. ಭಾರವಿದ್ದು, ಗುಡಾರ ಹೂಡಿದಾಗ ಗುಡಾರದ ಒಳಗಿನ ಹಿಂಭಾಗದಲ್ಲಿದ್ದರೆ, ಗುಡಾರ ಬದಲಾಯಿಸುವಾಗ ಮಹಿಳೆಯ ತಲೆಯ ಮೇಲಿರುತ್ತದೆ.

೫.೩ ಕಟುಕರು (ಕುರಿ ವ್ಯಾಪಾರಸ್ಥರು)

ಕಟುಕ ಎಂಬುದು ಸಮುದಾಯದ ಪದ. ಆ ಸಮುದಾಯದ ಮೂಲ ವೃತ್ತಿ ಕುರಿಗಾರರಿಂದ ಕುರಿಗಳನ್ನು ಕೊಳ್ಳುವುದು ಹಾಗೂ ಅದರ ಉಪ ಉತ್ಪನ್ನವಾದ ಮಾಂಸವನ್ನು ಗ್ರಾಹಕರಿಗೆ ಮಾರಾಟ ಮಾಡಿ ಜೀವನ ಸಾಗಿಸುವುದು. ಇತ್ತೀಚಿನ ದಿನಗಳಲ್ಲಿ ಇವರು ಹಲವಾರು ವೃತ್ತಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇವರ ಐತಿಹಾಸಿಕ ಹಿನ್ನೆಲೆ ಕುರಿತು ನವಿಲಿಹಾಳ್‌ದ ಸಾವಿರಕುರಿ ಲಿಂಗಪ್ಪ ಅವರು ಹೀಗೆ ಹೇಳುತ್ತಾರೆ. "ಬಸವಣ್ಣನವರ ಕಾಲದಲ್ಲಿ ಕಲ್ಯಾಣ ಪಟ್ಟಣದೊಳಗೆ ಶಾಂತಮುತ್ತಯ್ಯನವರು ಟಗರು ಪವಾಡ ಮೆರೆಸಿದರು. ಆ ಸಮಯದಲ್ಲಿ ಸತ್ತ ಟಗರು ಎದ್ದು ಓಡುತ್ತದೆ. ಟಗರು ಎದ್ದು ಓಡುವಾಗ ಟಗರಿನ ಕೊಂಬು ಹಿಡಿದವ ಟಗರುಜೋಗಿ ಆದ, ಕಾಲುಹಿಡಿದವ ಕಟುಕನಾದ" ಈ ಹೇಳಿಕೆಯಿಂದ ಕುರುಬ ಮತ್ತು ಕಟುಕನಿಗೆ ಮೊದಲಿನಿಂದಲೂ ಸಂಬಂಧವಿದೆ ಎಂಬುದು ಸ್ಪಷ್ಟವಾಗುತ್ತದೆ.

ಅಲೆಮಾರಿ ಕುರುಬರು ಮತ್ತು ಕಟುಕರಿಗೆ ಅವಿನಾಭಾವ ಸಂಬಂಧ ಇರುವುದು ಅವರು ಕೈಗೊಂಡ ವೃತ್ತಿಯಿಂದ ಗೊತ್ತಾಗುತ್ತದೆ. ಕುರಿಗಾರರು ತಮ್ಮ ಕುರಿಗಳನ್ನು ಕಟುಕರಿಗೆ ಮಾರಾಟ ಮಾಡಿ ಜೀವನ ಸಾಗಿಸಿದರೆ, ಕಟುಕರು ಕುರಿಗಾರರಿಂದ ಕುರಿಗಳನ್ನು ಕೊಂಡು ಗ್ರಾಹಕರಿಗೆ ಮಾಂಸ ಮಾರಾಟ ಮಾಡಿ ಜೀವನ ಸಾಗಿಸುತ್ತಾರೆ. ಒಂದು ಸಮುದಾಯವನ್ನು ಬಿಟ್ಟು ಮತ್ತೊಂದು ಸಮುದಾಯ ಮೂಲ ವೃತ್ತಿಯಲ್ಲಿ ಮುಂದುವರಿಯಲು ಸಾಧ್ಯವಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಅಲೆಮಾರಿ ಕುರುಬರು ಕಟುಕರನ್ನು ಮಕ್ಕಳ ಸಮಾನವಾಗಿ ಕಾಣುತ್ತಾರೆ. ಹಾಗೆಯೇ ಕಟುಕರು ಕುರಿಗಾರರನ್ನು 'ಕಾಕ' ಎಂದು ಸಂಭೋದಿಸುತ್ತಾರೆ. ನಿಯತ್ತಿರುವ ಕೆಲವು ಕಟುಕರು ಕುರಿಗಾರರ

ಕಾಲಿಗೆ ಬಿದ್ದು ನಮಸ್ಕಾರ ಮಾಡುತ್ತಾರೆ. ಕುರಿ ವ್ಯಾಪಾರವೇ ಕಟುಕರ ಮೂಲ ವೃತ್ತಿಯಾದ್ದರಿಂದ ಕುರಿ ತಬ್ಬಿದ ಸ್ಥಳದಲ್ಲಿ ಅಥವಾ ಕುರಿ ಮಾರುಕಟ್ಟೆಯಲ್ಲಿ ಕುರಿ-ಮರಿಗಳನ್ನು ಕೊಳ್ಳುತ್ತಾರೆ. ಮರಿ ಕೊಳ್ಳುವಾಗ ಮರಿ ನಡುವಿನ ಮೇಲೆ ಕೈಯಾಕಿ ಹಿಚುಕಿ ಅದರ ಪ್ರಮಾಣ (ಮೌಲ್ಯ) ತಿಳಿದು ಕೊಳ್ಳುತ್ತಾರೆ. ಕುರಿ ಕೊಳ್ಳುವಾಗ ಅದರ ಹಲ್ಲುಗಳನ್ನು ನೋಡಿ ಬೆಲೆ ನಿರ್ಧರಿಸುತ್ತಾರೆ. ಕಟುಕರು ಅಲೆಮಾರಿ ಕುರುಬರಿಂದ ೨೦ ಕುರಿಮರಿ ಕೊಂಡರೆ ಒಂದು ಹೆಚ್ಚು ಮರಿಯನ್ನು ಕಟುಕರಿಗೆ ಬಿಡಬೇಕು. ಅದಕ್ಕೆ 'ಅಂಬ್ಲಿಮರಿ' ಎನ್ನುವರು. ಹಾಗೆಯೇ ೪೦ ಕೊಂಡರೆ ಎರಡು, ೬೦ ಕೊಂಡರೆ ಮೂರು. ಹೀಗೆ ಕುರಿಮರಿಗಳ ಸಂಖ್ಯೆ ೨೦ರಂತೆ ಹೆಚ್ಚು ಕೊಂಡಂತೆಲ್ಲ ಒಂದು ಕುರಿಮರಿ ಹೆಚ್ಚಿಗೆ ಬಿಡುತ್ತಾ ಹೋಗಬೇಕು. ಈ ರೀತಿಯ ಪದ್ಧತಿಯ ಮೊದಲಿನಿಂದಲೂ ಕಟುಕ ಮತ್ತು ಕುರಿಗಾರರಲ್ಲಿ ನಡೆದುಕೊಂಡು ಬಂದಿದೆ.

೫.೪ ಶಿಕ್ಷಣ

ಶಿಕ್ಷಣ ಅಭಿವೃದ್ಧಿಯ ಮೂಲ ಮಂತ್ರ ಹಾಗೂ ಸಾಮಾಜಿಕ ಪರಿವರ್ತನೆಯ ಮೂಲ ಸಾಧನವಾಗಿದೆ. ಇದು "ಪ್ರಾಣಿ ರೂಪದಲ್ಲಿರುವ ಮಾನವನನ್ನು ಮಾನವತ್ವದಡೆಗೆ ಒಯ್ಯುವ ಸಾಧನ" (ಎಚ್ಚಾರ್ಕೆ:೨೦೦೩:೫೦೬). ಇದು ಸಾಮಾಜಿಕ ಚಲನೆಯ ವಾಹಕವಾಗಿದ್ದು, ಮೇಲ್ಮುಖ ಚಲನೆಗೆ ಅನುವು ಮಾಡಿಕೊಡುವುದರ ಜೊತೆಗೆ ವ್ಯಕ್ತಿಯ ಅಂತಸ್ತಿನ ನಿರ್ಧಾರಕ ಅಂಶವಾಗಿದೆ. ಶಿಕ್ಷಣವಿಲ್ಲದ ವ್ಯಕ್ತಿ ವೈಯಕ್ತಿಕವಾಗಿಯೇ ಆಗಲಿ ಸಾಮಾಜಿಕವಾಗಿಯೇ ಆಗಲಿ ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ. ಶಿಕ್ಷಣದ ಕೊರತೆಯು ವ್ಯಕ್ತಿ ಮತ್ತು ಸಮಾಜ ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಹಿಂದುಳಿಯಲು ಕಾರಣವಾಗುತ್ತದೆ. ಎಲ್ಲಕ್ಕಿಂತ ಮಿಗಿಲಾಗಿ ಸಮಾಜದ ಮುಖ್ಯವಾಹಿನಿಗೆ ಬರಬೇಕೆಂದರೆ ಶಿಕ್ಷಣ ಅತ್ಯಂತ ಆಗತ್ಯವಾಗಿದೆ.

ಶಿಕ್ಷಣವು ಆರ್ಥಿಕ ಅಭಿವೃದ್ಧಿಯಲ್ಲಿ ಅತ್ಯಂತ ಮಹತ್ವವನ್ನು ಹೊಂದಿದೆ. ಮಾನವ ಮನೋವೃತ್ತಿ, ಕೌಟುಂಬಿಕ ಗಾತ್ರ ಮತ್ತು ಸಂಪ್ರದಾಯಗಳ ಮೇಲೆ ಪರಿಣಾಮ ಬೀರಿ ಬದಲಾವಣೆ ತರುತ್ತದೆ. ಅನುಭೋಗದ ಆದ್ಯತೆ ಮತ್ತು ಸಮುದಾಯದ ಆಚರಣೆ, ಸಂಪ್ರದಾಯಗಳ ಮೇಲೆ ಮಾಡುವ ವೆಚ್ಚವನ್ನು ಕಡಿಮೆ ಮಾಡುವ ಮೂಲಕ ಬಂಡವಾಳ ನಿರ್ಮಾಣವನ್ನು ಹೆಚ್ಚಿಸುತ್ತದೆ. "ವ್ಯಕ್ತಿಗತ ದಕ್ಷತೆಯ ಕೊರತೆಯು ಆರ್ಥಿಕ ಬೆಳವಣಿಗೆಗೆ ಗಂಭೀರ ತೊಡಕಾಗಿದೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಜ್ಞಾನವು ಒಂದು ಪ್ರಮುಖ ಕೊರತೆಯ ಸಂಪನ್ಮೂಲವೆಂದು ಯೋಜನೆಗಳ ಅನುಭವದಿಂದ ತಿಳಿದು ಬರುತ್ತದೆ"(ದೊಡ್ಡನಗೌಡ ಪಾಟೀಲ:೨೦೦೩:೦೦).


ಕೋಷ್ಟಕ ೫.೭ ಅಲೆಮಾರಿ ಕುರುಬರ ಸಾಕ್ಷರತೆಯ ಪ್ರಮಾಣ

ಕ್ರ.ಸಂ.	ತಾಲೂಕುಗಳು	ಸಾಕ್ಷರ್ಹರು			ಸಾಕ್ಷರಸ್ಥರು			ಅನಕ್ಷರಸ್ಥರು		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಅಥಣಿ	೪	೩	೭	೧	-	೧	೩	೩	೬
೨	ಖಾನಾಪುರ	೩೨	೨೬	೫೮	೧೩	೩	೧೬	೧೯	೨೩	೪೨
೩	ಗೋಕಾಕ್	೯	೧೨	೨೧	೪	-	೪	೫	೧೨	೧೭
೪	ಚಿಕ್ಕೋಡಿ	೭೭೭	೭೮೨	೧೫೫೯	೨೭೭	೯೧	೩೬೮	೫೦೦	೬೯೧	೧೧೯೧
೫	ಬೈಲಹೊಂಗಲ	-	-	-	-	-	-	-	-	-
೬	ಬೆಳಗಾವಿ	೧೧೯	೧೦೦	೨೧೯	೫೦	೩೩	೮೩	೬೯	೬೭	೧೩೬
೭	ರಾಮದುರ್ಗ	೭	೪	೧೧	೩	-	೩	೪	೪	೮
೮	ರಾಯಬಾಗ್	೧೫	೧೪	೨೯	೫	-	೫	೧೦	೧೪	೨೪
೯	ಸವದತ್ತಿ	೨	೩	೫	೧	-	೧	೧	೩	೪
೧೦	ಹುಕ್ಕೇರಿ	೭	೯	೧೬	೧	-	೧	೬	೯	೧೫
	ಒಟ್ಟು	೯೭೨	೯೫೩	೧೯೨೫	೩೫೫	೧೨೭	೪೮೨	೬೧೭	೮೨೬	೧೪೪೩

ಕೋಷ್ಟಕ ೫.೭ನ್ನು ಗಮನಿದಾಗ ಬೆಳಗಾಂ ಜಿಲ್ಲೆಯ ೩೮೬ ಕುಟುಂಬಗಳ ಸಾಕ್ಷರರ್ಹರ ಜನಸಂಖ್ಯೆ ೧೯೨೫. ಅದರಲ್ಲಿ ಶೇ. ೫೦.೪೯ ರಷ್ಟು ಪುರುಷರು ಮತ್ತು ಶೇ. ೪೯.೫೦ರಷ್ಟು ಸ್ತ್ರೀಯರಿದ್ದಾರೆ. ಸಾಕ್ಷರರ್ಹರ ಸಂಖ್ಯೆಯನ್ನು ಸಾಕ್ಷರಸ್ತರ ಸಂಖ್ಯೆಗೆ ಹೋಲಿಸಿದಾಗ ಶೇ. ೨೫.೦೩ ರಷ್ಟು ಇದ್ದು, ಅದರಲ್ಲಿ ಶೇ. ೧೮.೪೪ ರಷ್ಟು ಪುರುಷರು ಮತ್ತು ೬.೫೯ ರಷ್ಟು ಸ್ತ್ರೀಯರು ಸಾಕ್ಷರತೆಯನ್ನು ಹೊಂದಿದ್ದಾರೆ. ಸಾಕ್ಷರರ್ಹರ ಜನಸಂಖ್ಯೆಯನ್ನು ಅನಕ್ಷರಸ್ಥರ ಸಂಖ್ಯೆಗೆ ಹೋಲಿಸಿದಾಗ ಅನಕ್ಷರಸ್ಥರು ಶೇ. ೭೪.೯೬ ಇದ್ದಾರೆ. ಅದರಲ್ಲಿ ಶೇ. ೩೨.೦೫ ಪುರುಷರು ಮತ್ತು ಶೇ. ೪೨.೯೦ರಷ್ಟು ಸ್ತ್ರೀಯರಿದ್ದಾರೆ. ದೇಶದ ಸ್ತ್ರೀ ಮತ್ತು ಪುರುಷರ ಸಾಕ್ಷರತೆಗೆ ಹೋಲಿಕೆ ಮಾಡಿದಾಗ ಅಲೆಮಾರಿ ಕುರುಬರ ಸಾಕ್ಷರತೆ ಕಡಿಮೆ ಇದೆಯೆಂದು ಇದರಿಂದ ವ್ಯಕ್ತವಾಗುತ್ತದೆ. ೨೦೦೧ರ ಜನಗಣತಿಯ ಪ್ರಕಾರ ದೇಶದ ಒಟ್ಟು ಸಾಕ್ಷರತೆಯ ಶೇ. ೬೫.೩೮ ಕರ್ನಾಟಕ ಶೇ. ೬೭.೦೪ ರಷ್ಟು ಇದೆ. ಅದರಲ್ಲಿ ಪುರುಷರು ಶೇ. ೭೫.೮೫ ಮತ್ತು ಸ್ತ್ರೀಯರು ೫೪.೧೬ ರಷ್ಟು ಇದೆ. ಆದರೆ ಅಲೆಮಾರಿ ಕುರುಬರ ಸಾಕ್ಷರತೆಯು ಶೇ. ೨೫.೦೩ರಷ್ಟು ಇದ್ದು ಅದರಲ್ಲಿ ಪುರುಷರು ಶೇ. ೧೮.೪೪ ಮತ್ತು ಸ್ತ್ರೀಯರು ಶೇ. ೬.೫೯ ರಷ್ಟು ಹೊಂದಿದ್ದಾರೆ.


ಪ್ರಸ್ತುತ ಕ್ಷೇತ್ರಕಾರ್ಯದ ಅಂಕಿ-ಅಂಶಗಳಿಂದ ತಾಲೂಕುವಾರು ಸಾಕ್ಷರಸ್ಥರು ಹಾಗೂ ಅನಕ್ಷರಸ್ಥರ ಸಂಖ್ಯೆಗಳನ್ನು ಗಮನಿಸಿದಾಗ ಚಿಕ್ಕೋಡಿ ತಾಲೂಕಿನ ಒಟ್ಟಾರೆ ಸಾಕ್ಷರತೆಯು ಶೇ. ೨೩.೬೦ರಷ್ಟಾಗಿದೆ. ಅದರಲ್ಲಿ ಪುರುಷರು ಶೇ. ೧೭.೭೬ ರಷ್ಟು ಮತ್ತು ಸ್ತ್ರೀಯರು ಶೇ. ೫.೮೩ ರಷ್ಟು ಹೊಂದಿದ್ದಾರೆ. ಹಾಗೆಯೇ ಅನಕ್ಷರಸ್ಥರು ಶೇ. ೭೬.೩೯ ರಷ್ಟಿದ್ದು, ಇದರಲ್ಲಿ ಪುರುಷರು ಶೇ. ೩೨.೦೭ ಹಾಗೂ ಶೇ. ೪೪.೩೨ ಸ್ತ್ರೀಯರಿರುವುದು ಕಂಡುಬರುತ್ತದೆ. ಎರಡನೆಯದಾಗಿ ಬೆಳಗಾವಿ ತಾಲೂಕಿನ ಒಟ್ಟಾರೆ ಸಾಕ್ಷರತೆಯು ಶೇ. ೩೭.೮೯ರಷ್ಟು ಹೊಂದಿದ್ದು, ಪುರುಷರು ಶೇ. ೨೨.೮೩ ಮತ್ತು ಸ್ತ್ರೀಯರು ಶೇ. ೧೫.೦೬ ರಷ್ಟಿರುವುದು ಕಂಡುಬಂದರೆ, ಅನಕ್ಷರಸ್ಥರು ಶೇ. ೬೨.೧೦ ರಷ್ಟು ಹೊಂದಿದೆ. ಇದರಲ್ಲಿ ಪುರುಷರು ಶೇ. ೩೧.೫೦ ಮತ್ತು ಶೇ. ೩೦.೫೯ ರಷ್ಟು ಸ್ತ್ರೀಯರು ಹೊಂದಿರುವರು. ಮೂರನೆಯದಾಗಿ ಖಾನಾಪುರ ತಾಲೂಕಿನ ಸಾಕ್ಷರತೆ ಶೇ. ೨೭.೫೮ ರಷ್ಟು ಹೊಂದಿದೆ. ಇದರಲ್ಲಿ ಪುರುಷರು ಶೇ. ೨೨.೪೧ ಮತ್ತು ಶೇ. ೫.೧೭ ರಷ್ಟು ಸ್ತ್ರೀಯರು ಕಂಡುಬಂದರೆ, ಅನಕ್ಷರಸ್ಥರ ಪ್ರಮಾಣವು ಶೇ. ೭೨.೪೧ ರಷ್ಟಾಗಿದ್ದು, ಪುರುಷರು ಶೇ. ೩೨.೭೫ ಮತ್ತು ಶೇ. ೩೯.೬೫ ರಷ್ಟು ಸ್ತ್ರೀಯರನ್ನು ಕಾಣಬಹುದು. (ವೃತ್ತಚಿತ್ರ: ೫.೧ ಮತ್ತು ೫.೨ ಗಮನಿಸಿ) ಹೀಗೆ ಉಳಿದ ತಾಲೂಕುವಾರುಗಳಲ್ಲಿ ಸಾಕ್ಷರತೆ ಹಾಗೂ ಅನಕ್ಷರತೆಯ ಪ್ರಮಾಣದಲ್ಲಿ ಅನಕ್ಷರತೆಯು ಹೆಚ್ಚಿರುವುದನ್ನು ಗಮನಿಸಬಹುದು.

ವೃತ್ತಚಿತ್ರ: ೫.೧



ಸಾಕ್ಷರತೆಯ ಶೇಕಡವಾರು ಪ್ರಮಾಣ

ವೃತ್ತಚಿತ್ರ: ೫.೨



ಅನಕ್ಷರತೆಯ ಶೇಕಡವಾರು ಪ್ರಮಾಣ


 

ಕೋಷ್ಟಕ ೫.೮ ಅಲೆಮಾರಿ ಕುರುಬರ ತಾಲೂಕುವಾರು, ಶೈಕ್ಷಣಿಕ ಮಟ್ಟ

	ಶೈಕ್ಷಣಿಕ ಮಟ್ಟ														
	ಪ್ರಾಥಮಿಕ			ಮಾಧ್ಯಮಿಕ			ಪ್ರೌಢಶಾಲೆ			ಪದವಿಪೂರ್ವ			ಪದವಿಯೇತರ		
ತಾಲೂಕು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಅಥಣಿ	೧	--	೧	--	--	--	--	--	--	--	--	--	--	--	--
ಖಾನಾಪುರ	೧೨	೧	೧೩	--	೧	೧	೧	೧	೨	--	--	--	--	--	--
ಗೋಕಾಕ್	೪	--	೪	--	--	--	--	--	--	--	--	--	--	--	--
ಚಿಕ್ಕೋಡಿ	೧೮೯	೫೪	೨೪೩	೩೪	೨೦	೫೪	೩೩	೭	೪೦	೧೬	೫	೨೧	೫	--	೫
ಬೆಳಗಾವಿ	೧೦	೧೩	೨೩	೧೫	೧೧	೨೬	೧೯	೯	೨೮	೬	--	೬	--	--	--
ರಾಮದುರ್ಗ	೩	--	೩	--	--	--	--	--	--	--	--	--	--	--	--
ರಾಯಬಾಗ್	೪	--	೪	೧	--	೧	--	--	--	--	--	--	--	--	--
ಸವದತ್ತಿ	--	೧	೧	--	--	--	--	--	--	--	--	--	--	--	--
ಹುಕ್ಕೇರಿ	೧	--	೧	--	--	--	--	--	--	--	--	--	--	--	--
ಒಟ್ಟು	೨೨೪	೬೯	೨೯೩	೫೦	೩೨	೮೨	೫೩	೧೭	೭೦	೨೨	೫	೨೭	೫	--	೫

ಅಲೆಮಾರಿ ಕುರುಬ ಸಮುದಾಯದ ಶಿಕ್ಷಣ ಪ್ರಮಾಣ ಪ್ರಾಥಮಿಕ ಹಂತದಲ್ಲಿ ಶೇ. ೬೧ ರಷ್ಟು, ಮಾಧ್ಯಮಿಕ ಹಂತದಲ್ಲಿ ಶೇ. ೧೭ ರಷ್ಟು, ಪೌಢಶಿಕ್ಷಣವು ಶೇ. ೧೫ ರಷ್ಟು ಪದವಿ ಪೂರ್ವ ಶಿಕ್ಷಣ ಶೇ. ೬ ರಷ್ಟು ಪದವಿಯೇತರ ಶೇ. ೧ ರಷ್ಟು ಹೊಂದಿದ್ದಾರೆ. ಅಲೆಮಾರಿ ಕುರುಬರು ಪ್ರಾಥಮಿಕ ಹಂತದ ಶಿಕ್ಷಣದಲ್ಲಿ ಉತ್ತಮವಾಗಿದ್ದರೂ ಲಿಂಗಪ್ರಮಣವನ್ನು ಗಮನಿಸಿದಾಗ ಪುರುಷರು ಶೇ. ೭೬.೪೫, ಸ್ತ್ರೀಯರು ಶೇ. ೨೩.೫೪ ರಷ್ಟಿರುವುದು ಕಂಡುಬರುತ್ತದೆ.

ಅಲೆಮಾರಿ ಕುರುಬರ ಒಟ್ಟಾರೆ ಶೇಕಡವಾರು ಶೈಕ್ಷಣಿಕ ಹಂತಗಳು



ಆಧುನಿಕ ಅಥವಾ ಔಪಚಾರಿಕ ಶಿಕ್ಷಣ ಜಾರಿಗೆ ಬಂದ ಮೇಲೆ ರಾಜ್ಯದ ಬೇರೆ ಬೇರೆ ಸಮುದಾಯಗಳು ಅವರವರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳಿಗೆ ತಕ್ಕಂತೆ ಶಿಕ್ಷಣವನ್ನು ಪಡೆದು ವಿದ್ಯಾವಂತರಾಗತೊಡಗಿದರು. ಆದರೆ ಅಲೆಮಾರಿ ಕುರುಬ ಸಮುದಾಯದವರಿಗೆ ಔಪಚಾರಿಕ ಶಿಕ್ಷಣದ ಅವಕಾಶವೇ ಸಿಗಲಿಲ್ಲ. ಅತಿ ಹಿಂದುಳಿದಿರುವಿಕೆ ಮತ್ತು ತಮ್ಮ ಜೀವನೋಪಾಯಕ್ಕಾಗಿ

ಕುಟುಂಬವನ್ನು ಕಟ್ಟಿಕೊಂಡು ಕುರಿಗಳ ಜೊತೆ ಬೆಟ್ಟ-ಗುಡ್ಡ, ಹೊಲ-ಗದ್ದೆ ಮುಂತಾದ ಸ್ಥಗಳಲ್ಲಿ ವರ್ಷವೀಡಿ ಅಲೆದಾಡುತ್ತಿರುತ್ತಾರೆ. ಇದು ಅವರ ಮಕ್ಕಳನ್ನು ಶಾಲೆಗೆ ಕಳುಹಿಸಲು ಅಡ್ಡಿ ಉಂಟು ಮಾಡಿದೆ. ಈ ಸಮುದಾಯದ ಬಹುತೇಕ ತಂದೆ-ತಾಯಿಗಳು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವುದಿಲ್ಲ. ಚಿಕ್ಕವರಿದ್ದಾಗ ಮರಿಗಳ ಸಂಗೋಪನೆ, ಹತ್ತು-ಹನ್ನೆರಡು ವರ್ಷಗಳಾದ ನಂತರ ಕುರಿಕಾಯಲು ಕಳುಹಿಸುತ್ತಾರೆ. ಕುರಿಸಂಗೋಪನೆ ಶ್ರಮಸಾಂದ್ರ ಉದ್ಯೋಗವಾದ್ದರಿಂದ ಕುಟುಂಬದ ಎಲ್ಲ ವಯಸ್ಸಿನ ಸದಸ್ಯರು ಆ ಉದ್ಯೋಗದಲ್ಲಿ ತೊಡಗಿಸಿಕೊಳ್ಳುವುದು ಅಗತ್ಯವಿದೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಹಲವಾರು ಅಲೆಮಾರಿ ಕುರುಬ ಕುಟುಂಬ ಮುಖ್ಯಸ್ಥರಿಗೆ ನಿಮ್ಮ ಮಕ್ಕಳನ್ನು ಏಕೆ ಶಾಲೆಗೆ ಕಳುಹಿಸುವುದಿಲ್ಲ ಎಂದು ಪ್ರಶ್ನಿಸಲಾಯಿತು. ಆಗ ದೊರೆತ ಉತ್ತರಗಳು ವಿಭಿನ್ನವಾಗಿವೆ.

- "ಶಾಲೆಗೆ ಹೋಗಿ ಯಾರು ಉದ್ಧಾರ ಆಗಿದ್ದಾರೆ?" ನಮ್ಮಪ್ಪ ಓದಿಲ್ಲ, ನಮ್ಮ ತಾತ ಓದಿಲ್ಲ. ಅವರೆಲ್ಲಾ ಜೀವನ ಮಾಡಲಿಲ್ಲರ್ರೀ? (*ವಕ್ತೃ: ದೇವರಸಿ ಖಾನಪ್ಪ, ನಾಯಿಂಗಲಾಜ್*)
- "ಶಾಲೆಗೆ ಕಳುಹಿಸಿದ್ರೇ, ಈ ಬದುಕು ಯಾರೂ ಮಾಡುತಾರ್ರೀ?" ಸಾಹೆಬ್ರೇ (*ವಕ್ತೃ: ಮಂಜುನಾಥ ದುರುಗಣ್ಣನವರ, ಸೌಂದಲಗ*)
- "ನೀವೇನು ಕರೇ ಹೇಳ್ತಿರ್ರೀ, ಈ ಬದುಕುಗಳನ್ನು ಯಾರು ನೋಡಿಕೊಳ್ಳಬೇಕು?". ನೀವೇ ಹೇಳ್ರಿ? (*ವಕ್ತೃ: ಖಾನಪ್ಪ ಪೂಜಾರಿ, ಕಡಕಲಾಟ*)
- "ನೀವು ಹೇಳ್ದಿಂಗೆ ಮಾಡುತ್ತೀವ್ರಿ, ಸಾಲಿ ಕಲಿತ ಮೇಲೆ ಕೆಲಸ ಸಿಗದಿದ್ರೇ? ಸಾಲಿ ಕಲತರ್ರೋ ಮುಂದೆ ಈ ಬದುಕು ಮಾಡತಾರ್ರೀ?" ಎಂಬುದಾಗಿ ತನ್ನ ಪಕ್ಕದಲ್ಲಿಯೆ ನಿಂತಿದ್ದ ಪಿ.ಯು.ಸಿ. ಓದಿದ ತನ್ನ ಮಗನ ಕಡೆಗೆ ಕೈ ತೋರಿಸಿ ಹೇಳುತ್ತಾರೆ. (*ವಕ್ತೃ: ಲಿಂಗಪ್ಪ ಸಾವಿರಕುರಿ, ನವಲಿಹಾಳ್*)

ಇವರನ್ನು ಶಿಕ್ಷಿತರನ್ನಾಗಿಸಿದ ಮೇಲೆ ಮರಳಿ ನಿಮ್ಮ ಜೀವನ ಪದ್ಧತಿಗೆ ಸಾಗಿ ಎನ್ನುವುದು ಅಥವಾ ಅವರು ಸಾಗುವುದು ಸಾಧ್ಯವಾದಿತೆ? ಇಲ್ಲೂ ದಿಕ್ಕು ಕಾಣದೇ ತಮ್ಮ ಕುಲಪದ್ಧತಿಗೆ ಮರಳಲು ಸಾಧ್ಯವಾಗದ ತ್ರಿಶಂಕು ಸ್ಥಿತಿ ನಿರ್ಮಾಣವಾದರೆ ಹೇಗೆ? ನಿಜವಾಗಿಯು ಶಿಕ್ಷಣ ಅವರಿಗೊಂದು ಬದುಕನ್ನು ನೀಡಬೇಕು. ಇಲ್ಲದಿದ್ದರೆ ಶಿಕ್ಷಣ ಅವರ ಬದುಕಿನಲ್ಲಿ ತ್ರಿಶಂಕು ಸ್ಥಿತಿ ನಿರ್ಮಾಣ ಮಾಡುವುದರಲ್ಲಿ ಸಂದೇಹವಿಲ್ಲ.

ಅಡವಿಯಲ್ಲಿ ಬಿಡಾರ ಹೂಡಿಕೊಂಡು ಜೀವಿಸುವ ಮಕ್ಕಳಿಗೆ ಎಂತಹ ಶಿಕ್ಷಣ ನೀಡಬೇಕು ಎಂಬುದನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಯೋಚಿಸಬೇಕು. ಇತ್ತೀಚಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ೧೪ ವರ್ಷದವರೆಗಿನ ಮಕ್ಕಳಿಗೆ 'ಉಚಿತ' ಮತ್ತು 'ಕಡ್ಡಾಯ ಶಿಕ್ಷಣ' ಘೋಷಣೆಗಳು ಅಲೆಮಾರಿ ಕುರುಬರ ಮಕ್ಕಳ ವ್ಯಾಪ್ತಿಯವರೆಗೆ ಸಾಗಿದರೆ ಅದಕ್ಕೊಂದು ಅರ್ಥ ಸಿಕ್ಕಂತಾಗುತ್ತದೆ.

ಮಹಿಳೆಯರ ಶಿಕ್ಷಣ : ಮಹಿಳೆಯರು ಶಿಕ್ಷಣದಿಂದ ವಂಚಿತರಾಗಿರುವುದರ ಜೊತೆಗೆ ನಿರ್ಲಕ್ಷಿತ ವಾಗಿದ್ದಾಳೆ ಎಂದರೆ ತಪ್ಪಾಗಲಾರದು. ಇದಕ್ಕೆ ಕಾರಣ ಅವರ ಬದುಕಿನ ವಿಧಾನ ಒಂದಾದರೆ ಮತ್ತೊಂದು ಬಹಳಷ್ಟು ಮಹಿಳೆಯರಿಗೆ ಋತುಮತಿಯಾಗುವ ಮೊದಲೇ ಮದುವೆ ಮಾಡುವುದು. ಇಂದು ದೇಶದಾದ್ಯಂತ "ಮಹಿಳಾ ಸಶಕ್ತಿಕರಣ" (Women Empowerment) ಪ್ರಕ್ರಿಯೆ ನಡೆಯುತ್ತಿದೆ. ೨೦೦೧ನೇ ವರ್ಷವನ್ನು "ಮಹಿಳಾ ಸಬಲಿಕರಣ ವರ್ಷ"ವೆಂದು ಕೇಂದ್ರ ಸರ್ಕಾರ ಘೋಷಣೆ ಮಾಡಿದೆ. ಮಹಿಳೆಯರ ಆರ್ಥಿಕ ಸಾಮಾಜಿಕ ರಾಜಕೀಯ ಅಭ್ಯುದಯದ ಕಾರ್ಯಗಳನ್ನು ಅನುಷ್ಠಾನಕ್ಕೆ ತರಲಾಗುತ್ತಿದೆ. ಇನ್ನೊಂದೆಡೆ ಮಹಿಳೆಯರ ಆರ್ಥಿಕ, ಸಾಮಾಜಿಕ ಸ್ವಾವಲಂಬನೆಗೆ ಸ್ವಸಹಾಯ ಗುಂಪುಗಳ ರಚನೆ ಸಂಘಟನೆಯಾಗುತ್ತಿವೆ. ನಗರ ಪ್ರದೇಶದಲ್ಲಿ ಮಹಿಳಾ ಚಳವಳಿಗಳು ಚುರುಕಾಗುತ್ತಿವೆ. ವಿಶ್ವವಿದ್ಯಾಲಯಗಳಲ್ಲಿ ಮಹಿಳಾ ಅಧ್ಯಯನ ಕೇಂದ್ರಗಳನ್ನು ತೆರೆಯಲಾಗುತ್ತಿದೆ. ಇಷ್ಟಾದರೂ ಅಲೆಮಾರಿ ಕುರುಬರ ಮಹಿಳೆಯರು ಶಿಕ್ಷಣದ ಬಾಗಿಲು ತಟ್ಟಲು ಸಾಧ್ಯವಾಗುತ್ತಿಲ್ಲ.

೫.೫ ರಾಜಕೀಯ

ಭಾರತ ಪ್ರಜಾಪ್ರಭುತ್ವ ರಾಷ್ಟ್ರವಾಗಿದ್ದು, ಪ್ರಜೆಗಳದೆ ಪರಮಾಧಿಕಾರ ಎನ್ನುವ ಅಂಶವು ಅತ್ಯಂತ ಮಹತ್ವದ ಪಾತ್ರವಹಿಸುತ್ತದೆ. ಪ್ರಜೆಗಳ ಮತ ಪಡೆಯಲು ರಾಜಕೀಯ ಪಕ್ಷಗಳು ಚುನಾವಣೆ ಸಮಯದಲ್ಲಿ ಜನಪರ ಘೋಷಣೆಗಳ ಮೂಲಕ ಬಹುಮತ ಪಡೆದು ಅಧಿಕಾರದ ಚುಕ್ಕಾಣಿಯನ್ನು ಹಿಡಿಯುತ್ತವೆ. ಮತದಾನದ ಮೂಲಕ ಅಧಿಕಾರ ನೀಡುವ ಅಥವಾ ಹಿಂತೆಗೆದುಕೊಳ್ಳುವ ರಾಜಕೀಯ ಕೀಲಿಕೈ ಪ್ರಜೆಗಳಲ್ಲಿದೆ. ಆದರೆ ವಿಷಾದದ ಸಂಗತಿ ಎಂದರೆ ಭಾರತದಲ್ಲಿರುವ ಬಹಳಷ್ಟು ಪ್ರಜೆಗಳಿಗೆ ಮತದಾನದ ಮಹತ್ವ ಗೊತ್ತಿಲ್ಲದಿರುವುದು. ಅದರಲ್ಲೂ ವಿಶೇಷವಾಗಿ ಅಲೆಮಾರಿ ಸಮುದಾಯಗಳಲ್ಲಿ ಬಹಳಷ್ಟು ಜನರು ನಿರಕ್ಷರಿಗಳು ಹಾಗೂ ಬಡವರು. ಚುನಾವಣೆ ದಿನದಂದು ಮತ ಚಲಾಯಿಸದೆ ತಮ್ಮ ನಿತ್ಯ ಬದುಕಿನ ಜೀವನೋಪಾಯದ ಕೆಲಸ ಕಾರ್ಯಗಳಲ್ಲಿ ಮಗ್ನರಾಗಿರುತ್ತಾರೆ. ನಿರಕ್ಷರಿ ಗಳಾದ್ದರಿಂದ ಯಾವ ಅಭ್ಯರ್ಥಿಯನ್ನು ಆಯ್ಕೆ ಮಾಡಬೇಕು ಮತ್ತು ಯಾವ ಪಕ್ಷವನ್ನು ಅಧಿಕಾರಕ್ಕೆ ತಂದರೆ ತಮಗೆ ಅನುಕೂಲ ಎಂಬುದನ್ನು ಅರ್ಥೈಸಿಕೊಳ್ಳಲು ದೇಶದ ರಾಜಕೀಯ ವ್ಯವಸ್ಥೆ ಕುರಿತು ಅರಿಯುವ ಅವಕಾಶ ಇನ್ನೂ ಇವರಿಗೆ ಒದಗಿ ಬಂದಿಲ್ಲ.

ಅಲೆಮಾರಿ ಕುರುಬರು ನಿರಕ್ಷರಿಗಳು, ಹಿಂದುಳಿದವರು ಹಾಗೂ ಅಲೆಮಾರಿಗಳು. ತಮಗೆ ಯಾವ ಹಕ್ಕುಗಳಿವೆ? ಮತದಾನ ಎಂದರೇನು? ಓಟಿನ ಮಹತ್ವ? ಇತ್ಯಾದಿ ಅಂಶಗಳನ್ನು ತಿಳಿಯದವರು. ಇವರು ಸ್ವಗ್ರಾಮ ಬಿಟ್ಟು ಅಲೆಮಾರಿಗಳಾಗಿ ವಲಸೆ ಬಂದಿರುವವರು. ಕೆಲವರಿಗೆ ಓಟಿನ ಕಾರ್ಡ್ ಅಥವಾ ಮತದಾರರ ಪಟ್ಟಿಯಲ್ಲಿ ಹೆಸರಿದ್ದರೂ ಮತದಾನ ಮಾಡಲು ಸಾಧ್ಯವಾಗುತ್ತಿಲ್ಲ. ಸ್ವಗ್ರಾಮ ಬಿಟ್ಟು, ಸುಮಾರು ೪೦೦ ರಿಂದ ೫೦೦ ಕಿ.ಮೀ. ದೂರ ಸಾಗಿ ವಲಸೆ ಬಂದಿರುವುದು ಹಾಗೂ

ಅಡವಿಯಲ್ಲಿಯೇ ಗುಡಾರ ಹೂಡಿ ಸಂಚರಿಸುವಂಥ ಕ್ಲಿಷ್ಟ ಪರಿಸ್ಥಿತಿ ಇರುವುದರಿಂದ ಮತದಾನ ಮಾಡಲು ಸಾಧ್ಯವಾಗುತ್ತಿಲ್ಲ. ರಾಜಕೀಯ ಇವರ ಮತ ಪಡೆಯಲು ಪ್ರಯತ್ನಿಸುತ್ತಿಲ್ಲ. ಪಕ್ಷಗಳು ಅವರ ಸಮಸ್ಯೆಗಳನ್ನು ಕುರಿತು ಅಸೆಂಬ್ಲಿ ಹಾಗೂ ಪಾರ್ಲಿಮೆಂಟ್‌ನಲ್ಲಿ ಇವರ ಪರವಾಗಿ ಪ್ರಶ್ನೆಗಳನ್ನು ಕೇಳಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವವರ್‍ಯಾರು? ಇವರ ಸಮಸ್ಯೆಗಳು ಕುರಿತು ರಾಜಕೀಯ ನಾಯಕರು, ಮಂತ್ರಿಗಳು ಹಾಗೂ ಅಧಿಕಾರಿಗಳು ಕೇವಲ ಅನುಕಂಪ ತೋರುತ್ತಾರೆಯೇ ವಿನಹಃ ಸಮಸ್ಯೆಗಳಿಗೆ ಪರಿಹಾರ ನೀಡುವ ಪ್ರಯತ್ನ ಮಾಡುತ್ತಿಲ್ಲ ಎಂಬುದು ವಿಷಾದದ ಸಂಗತಿಯಾಗಿದೆ.

ಆಧಾರ ಗ್ರಂಥಗಳು

೧. ಎಚ್ಚಾರ್ಕೆ., **ಭಾರತದ ಆರ್ಥಿಕ ಅಭಿವೃದ್ಧಿ**, ಸಪ್ನಬುಕ್‌ಹೌಸ್, ಬೆಂಗಳೂರು, ೨೦೦೩

೨. ಬಸವರಾಜಪ್ಪ ಎಸ್., **ಜೈವಿಕ ಗೊಬ್ಬರಗಳು**, ಪ್ರಸಾರಾಂಗ, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ, ೨೦೦೧

೩. ರಾಮರಾವ್ ಜ್ಯೋತಿ., **ಆಡು ಮತ್ತು ಕುರಿ ಸಾಕಣೆ**, ಸಮಾಜ ಪುಸ್ತಕಾಲಯ, ಧಾರವಾಡ, ೧೯೮೪

೪. ಮೈತ್ರಿ ಕೆ.ಎಂ., (ಸಂ) ಶ್ರೀರಾಮ ಇಟ್ಟಣನವರ, **ಹಾಲಕೆನೆ**, ಶ್ರೀ ಕಾಳಿದಾಸ ಶಿಕ್ಷಣ ಸಂಸ್ಥೆ, ವಿಜಾಪುರ, ೧೯೯೬

೫. ಹಿರೇಮಠ ಎಚ್.ಸಿ., **ಹಬ್ಬ ಮತ್ತು ಜಾತ್ರೆಗಳು**, ಸಮತಾ ಪ್ರಕಾಶನ, ಹೊಸಪೇಟೆ, ೧೯೯೩

೬. ದೊಡ್ಡನಗೌಡ ಪಾಟೀಲ., *ಭೌತಿಕ ಮೂಲಭೂತ ಸೌಕರ್ಯಗಳ ಅಬಿವೃದ್ಧಿಯಲ್ಲಿ ಪ್ರಾದೇಶಿಕ ಅಸಮಾನತೆ (ಹೈದ್ರಬಾದ್ ಕರ್ನಾಟಕ ಅನುಲಕ್ಷಿಸಿ) : ಒಂದು ಅಧ್ಯಯನ*, ಅಪ್ರಕಟಿತ ಮಹಾಪ್ರಬಂಧ, ಹಂಪಿ ವಿಶ್ವವಿದ್ಯಾಲಯ, ವಿದ್ಯಾರಣ್ಯ, ೨೦೦೨

೭. Benergee G.C., Hand Book of Animal Husbandary, Indian Council of Agricultural Research, New Delhi, 1981

ಅಧ್ಯಾಯ ೬

ಅಲೆಮಾರಿ ಕುರುಬರ ಆರ್ಥಿಕ ಜೀವನ

ಅಲೆಮಾರಿ ಕುರುಬರ ಸಾಮಾಜಿಕ ಜೀವನ

ಮಾನವ ಸಮಾಜ ಜೀವಿ. ಸಮಾಜವಿಲ್ಲದೆ ಒಬ್ಬಂಟಿಗನಾಗಿ ಬದುಕಲು ಇಷ್ಟಪಡುವುದಿಲ್ಲ. ತನ್ನ ಬಯಕೆಗಳನ್ನು ಈಡೇರಿಸಿಕೊಳ್ಳಲು ಸಮಾಜದ ಚೌಕಟ್ಟಿನಲ್ಲಿಯೇ ಕಾರ್ಯೋನ್ಮುಕನಾಗಿರುವುದನ್ನು ಕಾಣುತ್ತೇವೆ. ಮಾನವನು ಇತರೆ ಪ್ರಾಣಿಗಳಿಗಿಂತ ಭಿನ್ನವಾಗಿದ್ದು ಯೋಚಿಸುವ, ತಿಳಿದುಕೊಳ್ಳುವ, ತಿಳುವಳಿಕೆ ಹೇಳುವ, ಮಾತನಾಡುವ ಮತ್ತು ಭಾವನೆಗಳನ್ನು ವ್ಯಕ್ತಪಡಿಸುವ ಗುಣಗಳನ್ನು ಹೊಂದಿದ್ದಾನೆ. ಅಲ್ಲದೆ ಅನೇಕ ಸಂದರ್ಭಗಳಲ್ಲಿ ಸಂತೋಷ ಮತ್ತು ದುಃಖ ಪಡುವ ಶಕ್ತಿಗಳನ್ನು ರೂಢಿಸಿಕೊಂಡಿದ್ದಾನೆ. ಆದ್ದರಿಂದ ಮಾನವ ಯಾವಗಲೂ ಸಮುದಾಯಿಕವಾಗಿ ಅಥವಾ ಸಾಂಘಿಕವಾಗಿ ಸಮಾಜದಲ್ಲಿಯೇ ಜೀವಿಸುತ್ತಾನೆ.

"'ಸಮಾಜ' ಎಂಬ ಪದವು ಸೊಸೈಟಿ (Society) ಎಂಬ ಇಂಗ್ಲೀಷ್ ಪದದ ಅನುವಾದ ವಾಗಿದೆ. 'ಸೊಸೈಟಿ' ಎಂಬ ಪದವು 'ಸೋಷಿಯಸ್'(Socious) ಎಂಬ ಲ್ಯಾಟಿನ್ ಭಾಷೆಯ ಪದದಿಂದ ಆವಿರ್ಭವಿಸಿದೆ. 'ಸೋಶಿಯಸ್' ಎಂದರೆ ಒಡನಾಡಿತನ (Companionship) ಅಥವಾ ಗೆಳೆತನ (Friendship). ಒಡನಾಡಿಗಳಿಂದ ಕೂಡಿರುವುದೇ ಸಮಾಜ" (ಮನೋಹರ ಕುಮಾರ ಸಿ.ಬಿ: ೨೦೦೪:೩೫೧).

'ವ್ಯಕ್ತಿ' ಮತ್ತು 'ಸಮಾಜ'ಗಳ ನಡುವಿನ ಒಡನಾಟದ ಬದುಕು ಸಮಾಜದಲ್ಲಿ ಬಹಳ ಮುಖ್ಯ ಪಾತ್ರವನ್ನು ವಹಿಸುತ್ತದೆ. ಈ ಸಾಮಾಜಿಕ ವ್ಯವಸ್ಥೆಯು ವ್ಯಕ್ತಿ ವ್ಯಕ್ತಿಗಳ ನಡುವೆ ಸಾಮಾಜಿಕ ಕ್ರಿಯೆ ಅಂತರ್‌ಕ್ರಿಯೇಗಳ ಕ್ರಮಗಳಿಂದ ಸಮಾಜವು ರಚನೆಯಾಗಿರುತ್ತದೆ. ಹೀಗಾಗಿ ಮಾನವನು ತನ್ನದೇ ಆದಂತಹ ಸಾಮುದಾಯಿಕ ಭಾವನೆಗಳಿಗೆ ಸ್ಪಂದಿಸುವ ಜನಸಮೂಹಗಳ ಚೌಕಟ್ಟಿನಲ್ಲಿ ಸುಖ ಸಂತೋಷದಿಂದ ಜೀವನ ಮಾಡಲು 'ಸಾಮಾಜಿಕ' ವ್ಯವಸ್ಥೆಯನ್ನು ರಚನೆ ಮಾಡಿಕೊಂಡಿದ್ದಾನೆ.

[illegible]

[illegible]

[illegible]

[illegible]

ಅಂತೆಯೇ ಸಾಮಾಜಿಕ ರಚನೆ ಮತ್ತು ಅಂತರ್‌ಕ್ರಿಯೆಗಳನ್ನು ಕುರಿತು ಪ್ರಖ್ಯಾತ ಸಮಾಜಶಾಸ್ತ್ರ ವಿದ್ವಾಂಸರಾದ ಗಿಡ್ಡಿಂಗ್ಸ್ ಅವರು "ಜೊತೆಗೂಡಿ ಇರಬಹುದಾದ ವ್ಯಕ್ತಿಗಳನ್ನು ಒಟ್ಟುಗೂಡಿಸಿ ಆದ ಒಂದು ಒಕ್ಕೂಟ, ಸಂಘಟನೆ ಹಾಗೂ ಔಪಚಾರಿಕ ಭಾಂದವ್ಯಗಳ ಒಟ್ಟು ಮೊತ್ತವೇ ಸಮಾಜವಾಗಿದೆ" ಎಂದಿದ್ದಾರೆ. ಅಲ್ಲದೆ ಜಾನ್. ಎಫ್. ಕ್ರೋಬರ್‌ರವರು "ಇತರ ಮಾನವ ಘಟಕಗಳಿಂದ ಹೆಚ್ಚು ಕಡಿಮೆ ಬಿನ್ನವೆಂದು ಪರಿಗಣಿಸಬಹುದಾದ ಸಂಘಟಿತರಾಗುವಷ್ಟು ದೀರ್ಘ ಅವಧಿ ಜೊತೆಗೂಡಿ ವಾಸಿಸಿರುವ ಜನ ಸಮೂಹವನ್ನು ಸಮಾಜ ಎನ್ನುತ್ತೇವೆ" (ಪ್ರೊ. ರಾಮಚಂದ್ರ ಜೋಷಿ:೨೦೦೪:೩೮) ಎಂದಿದ್ದಾರೆ. ಈ ವಿದ್ವಾಂಸರ ಅಭಿಪ್ರಾಯವು ಸಾಮಾಜಿಕ ರಚನೆ, ಸ್ವರೂಪ, ಸಾಮಾಜಿಕ ಅಂತರ್‌ಕ್ರಿಯೆಗಳ ಬಗ್ಗೆ ಸಾಕಷ್ಟು ಮಾಹಿತಿ ನೀಡುತ್ತವೆ. ಸಮಾಜವು ವಿಶ್ವವ್ಯಾಪಿ ಯಾದದ್ದು, ಅದಕ್ಕೆ ನಿಖರವಾದ ಮೇರೆಗಳಿಲ್ಲ ಎಲ್ಲಿ ಜೀವವಿದೆಯೋ, ಎಲ್ಲಿ ಪರಸ್ಪರ ತಿಳುವಳಿಕೆ ಯಿದೆಯೋ ಅಲ್ಲಿ ಸಮಾಜವಿರುತ್ತದೆ. ಜಡ ವಸ್ತುಗಳಿಗೆ ಮಾತ್ರ ಸಮಾಜವಿರುವುದಿಲ್ಲ.

ಅಲೆಮಾರಿ ಕುರುಬ ಸಮುದಾಯವು ಕೂಡಾ ತಮ್ಮದೆಯಾದಂತಹ ಸಾಮಾಜಿಕ ರಚನೆ ಹೊಂದಿದ್ದು ಸಾಮಾಜಿಕ ಜೀವನ ಸಾಗಿಸುತ್ತಿದ್ದಾರೆ. ಇವರು ಅಲೆಮಾರಿ ಜೀವನ ನಡೆಸುವುದರೊಂದಿಗೆ ತಮ್ಮ ಸಂಸ್ಕೃತಿ, ಆಚಾರ-ವಿಚಾರಗಳು, ನಡೆ-ನುಡಿಗಳು, ನೈತಿಕ-ನಿಯಮಗಳು, ಸಂಪ್ರದಾಯಗಳು ಯಾವಾಗಲು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಅಲೆದಾಡುತ್ತಿರುತ್ತವೆ.

೬.೧ ಕುಟುಂಬ ಮತ್ತು ಬಂಧುತ್ವ ಸಂಘಟನೆ

ಭಾರತದಾದ್ಯಂತ ಬುಡಕಟ್ಟುಗಳು ಸಾಮಾನ್ಯವಾಗಿ ಪಿತೃಪ್ರಧಾನ ಕುಟುಂಬಗಳನ್ನು ಹೊಂದಿವೆ. "ದಕ್ಷಿಣ ಭಾರತದ ಕೆಲವು ಬುಡಕಟ್ಟುಗಳನ್ನು ಹೊರತುಪಡಿಸಿ ಮತ್ತು ಕೇರಳದ ನಾಯರ್‌ಗಳನ್ನು ಬಿಟ್ಟರೆ ಎಲ್ಲಾ ಕಡೆಗಳಲ್ಲಿ ಪಿತೃಪ್ರಧಾನ, ಪಿತೃವಂಶೀಯ ಮತ್ತು ಪಿತೃಸ್ಥಾನೀಯ ಕುಟುಂಬಗಳನ್ನು ಕಾಣಬಹುದಾಗಿದೆ"(ಗುರುಲಿಂಗಯ್ಯ ಎಂ:೨೦೦೫:೨೪). ದಕ್ಷಿಣ ಭಾರತದವರಾದ ಅಲೆಮಾರಿ ಕುರುಬರು ಪಿತೃಪ್ರಧಾನ ಕುಟುಂಬ ವ್ಯವಸ್ಥೆಯನ್ನು ಪಾಲಿಸಿಕೊಂಡು ಬಂದಿದ್ದಾರೆ. ಇವರಲ್ಲಿ ಬಂಧುತ್ವ ಮತ್ತು ಆಸ್ತಿಯ ಹಂಚಿಕೆ ಪುರುಷರ ಮೂಲಕ ಆಗುವುದು. ಪುರುಷ ಕುಟುಂಬದ ಯಜಮಾನನಾಗಿರುತ್ತಾನೆ. ಕುಟುಂಬದ ಆಗುಹೋಗುಗಳಿಗೆ ಇವನೇ ಜವಾಬ್ದಾರನಾಗಿರುತ್ತಾನೆ. ಮಹಿಳೆಗೆ ಸಂಪೂರ್ಣ ಸ್ವಾತಂತ್ರ್ಯವಿರುವುದಿಲ್ಲ. ವಾಸ್ತವಿಕವಾಗಿ ಬುಡಕಟ್ಟು ಜನರಾದ ಅಲೆಮಾರಿ ಕುರುಬ ಸಮುದಾಯದಲ್ಲಿ ಮಹಿಳೆಗೆ ಹೆಚ್ಚಿನ ಗೌರವವಿದೆ. ಪುರುಷನು ಗುಡಾರ(ಮನೆಯ)ದ ಯಾಜಮಾನನಾದರೂ, ಗುಡಾರದ ಒಳಜವಾಬ್ದಾರಿಯನ್ನು ಮಹಿಳೆಯರೇ ಹೊಂದಿರುತ್ತಾರೆ.

ಅಲೆಮಾರಿ ಕುರುಬರಲ್ಲಿ ಅವಿಭಕ್ತ ಕುಟುಂಬಗಳೇ ಹೆಚ್ಚಾಗಿ ಇರುವುದನ್ನು ಕಾಣುತ್ತೇವೆ. ಕುರಿ ಸಂಗೋಪನೆ ಮಾಡಲು ಹೆಚ್ಚಿನ ಸಂಖ್ಯೆಯಲ್ಲಿ ಜನರ ಅವಶ್ಯಕತೆ ಇರುವುದರಿಂದ ಅವಿಭಕ್ತ

ಕುಟುಂಬ ಪದ್ಧತಿ ಇಂದಿಗೂ ಉಳಿದುಕೊಂಡಿದೆ. ಇವರಿಗೆ ಸಂಬಂಧಗಳಲ್ಲಿ ನಂಬಿಕೆ ಮತ್ತು ಭಾವನಾತ್ಮಕ ಗೌರವವಿರುವುದರಿಂದ ಇವರು ಒಟ್ಟಿಗೆ ಬದುಕಲು ಇಷ್ಟಪಡುತ್ತಾರೆ. ಗುಡಾರಗಳನ್ನು ಜನಸಂಖ್ಯೆಗನುಗುಣವಾಗಿ ನಿರ್ಮಿಸಿಕೊಂಡರೂ ಊಟೋಪಚಾರಗಳು, ಸಾಂಸ್ಕೃತಿಕ ಆಚರಣೆಗಳು, ಹಬ್ಬ ಹರಿದಿನಗಳನ್ನು ರಕ್ತ ಸಂಬಂಧಿಗಳೆಲ್ಲರು ಕೂಡಿ ಆಚರಿಸುತ್ತಾರೆ. ಆಸ್ತಿ ಮತ್ತು ಕುರಿ ಸಂಪತ್ತನ್ನು ಒಟ್ಟಾಗಿ ಹೊಂದಿರುತ್ತಾರೆ. ಇವರಲ್ಲಿ ಹಿರಿಯ ಯಜಮಾನ ಮನೆಯ ಕಾರ್ಯವೈಖರಿಗಳನ್ನು ನಿರ್ವಹಿಸುತ್ತಾನೆ. ಆತನೇ ಮನೆಯ ಮುಖ್ಯಸ್ಥನಾಗಿದ್ದು ಮನೆಯ ಉಳಿದ ಸದಸ್ಯರು ಇವನನ್ನು ಅನುಸರಿಸಬೇಕು. ಯಾವುದೇ ತೀರ್ಮಾನ ತೆಗೆದುಕೊಳ್ಳುವಾಗ ಮುಖ್ಯಸ್ಥನ ನಿರ್ಣಯವೇ ಅಂತಿಮವಾಗಿರುತ್ತದೆ. ಅಲೆಮಾರಿ ಕುರುಬ ಸಮುದಾಯಗಳಲ್ಲಿ ವಿಭಕ್ತ ಕುಟುಂಬಗಳು ಇಲ್ಲವೆಂದಲ್ಲ. ಇತ್ತೀಚಿನ ದಿನಗಳಲ್ಲಿ ಆಧುನೀಕರಣ ಪ್ರಭಾವದಿಂದ ವಿಭಕ್ತ ಕುಟುಂಬಗಳು ಅಲ್ಲಲ್ಲಿ ಕಂಡು ಬರುತ್ತವೆ. ಇಂತಹ ಕುಟುಂಬಗಳಲ್ಲಿ ಗಂಡ-ಹೆಂಡತಿ ಮತ್ತು ಮದುವೆಯಾಗದ ಮಕ್ಕಳಿದ್ದು, ಒಂದೇ ಪೀಳಿಗೆಗೆ ಸೇರಿದವರಾಗಿರುತ್ತಾರೆ.

ಬಂಧುತ್ವ ಸಂಘಟನೆ : ಅಲೆಮಾರಿ ಕುರುಬ ಸಮುದಾಯದ ವಿವಾಹಿತ ಮಹಿಳೆ ಗಂಡನ ಮನೆಯಲ್ಲಿರುವುದು ಹಾಗೂ ಪುರುಷ ಅವಲಂಬಿತ ರೂಢಿಗಳನ್ನೊಳಗೊಂಡ ಪಿತೃಪ್ರಧಾನ ಸಮುದಾಯವಾಗಿರುವುದನ್ನು ನಾವು ಈಗಾಗಲೇ ತಿಳಿದುಕೊಂಡಿದ್ದೇವೆ. ಅವರು "ತಮ್ಮ ಬಂಧು-ಬಳಗದವರನ್ನು ದಾಯಾದಿಗಳು ಹಾಗೂ ನೆಂಟರು ಎಂದು ಎರಡು ವಿಧವಾಗಿ ವರ್ಗೀಕರಿಸುತ್ತಾರೆ. ಪಿತಾರ್ಜಿತ ಆಸ್ತಿಯಲ್ಲಿ ಪಾಲು ಪಡೆಯುವ ಎಲ್ಲಾ ಪುರುಷರನ್ನು ದಾಯಾದಿಗಳೆಂದು ಅಥವಾ ಅಣ್ಣ-ತಮ್ಮಂದಿರೆಂದು, ಇತರರನ್ನು ಬೀಗರೆಂದು ಕರೆಯಲಾಗುತ್ತದೆ. ಕುಲ ಹಾಗೂ ವಂಶದವರೆಲ್ಲಾ ದಾಯಾದಿಗಳಾದರೆ, ಮದುವೆ ಮುಖಾಂತರ ಸಂಬಂಧ ಬೆಳೆಸಿದವರು ನೆಂಟರೆನಿಸಿಕೊಳ್ಳುತ್ತಾರೆ. ದಾಯಾದಿಗಳು ಸ್ವಗ್ರಾಮಗಳಲ್ಲಿ ಒಂದೇ ವಠಾರಗಳಲ್ಲಿ ವಾಸಿಸುತ್ತಾರೆ. ಮನೆ, ಜಮೀನು ಹಂಚಿಕೊಳ್ಳುವುದಲ್ಲದೆ ಹಬ್ಬ-ಹರಿದಿನ, ಮದುವೆ, ಮರಣ ಮುಂತಾದವುಗಳಲ್ಲಿ ಸಾಮೂಹಿಕವಾಗಿ ಪಾಲ್ಗೊಳ್ಳುತ್ತಾರೆ. ಹಾಗೆಯೇ ಅವರು ನೆರೆಹೊರೆಯವರಾಗಿ ವಾಸಿಸುತ್ತಿರುವುದರಿಂದ ಆಪತ್ತು ಅಥವಾ ತೊಂದರೆಗಳು ಬಂದಾಗ ಬಂಧು- ಬಳಗದವರು ನೆರವಿಗೆ ಬರುತ್ತಾರೆ"(ಗುರುಲಿಂಗಯ್ಯ ಎಂ:೨೦೦೫:೨೫).

ಧರ್ಮಾಚರಣೆಯ ವಿಷಯವಾಗಿ ಹೇಳುವುದಾದರೆ ದಾಯಾದಿಗಳು ಒಂದೇ ಕುಲ ಹಾಗೂ ವಂಶಕ್ಕೆ ಸೇರಿರುವುದರಿಂದ ದೇವರುಗಳನ್ನು ಹಾಗೂ ಜಾತ್ರೆ ಹಬ್ಬಗಳನ್ನು ಒಟ್ಟಿಗೆ ಸೇರಿ ಆಚರಿಸುತ್ತಾರೆ. ಜಾತ್ರೆ, ಹಬ್ಬ ಮತ್ತು ಮದುವೆಗಳಲ್ಲಿ ಇವರ ಬಂಧುತ್ವದ ಸಂಬಂಧ ಮಹತ್ವದ ಪಾತ್ರವಹಿಸುತ್ತದೆ. ಅಂದರೆ ಒಂದು ಊರಿನಲ್ಲಿ ಒಂದು ವಂಶ ಅಥವಾ ಕುಲಕ್ಕೆ ಸಂಬಂಧಿಸಿದ ವ್ಯಕ್ತಿಗಳಿದ್ದರೆ ಇನ್ನೊಂದು ಊರು ಅಥವಾ ಪ್ರದೇಶದಲ್ಲಿ ಅದೇ ಕುಲ ಅಥವಾ ವಂಶಕ್ಕೆ ಸೇರಿದ ವ್ಯಕ್ತಿಗಳಿರುತ್ತಾರೆ. ಮದುವೆ ಸಂದರ್ಭದಲ್ಲಿ ಇಂತಹ ವ್ಯಕ್ತಿಗಳು ಒಂದೆಡೆ ಸೇರಿದರೆ ಅವರು

ಬೇರೆ ಊರು ಅಥವಾ ಬೇರೆ ಪ್ರದೇಶದವರಾದರೂ ಕುಲ ಸಂಬಂಧಿ ದೃಷ್ಟಿಯಲ್ಲಿ ಆತ್ಮೀಯರಾಗಿ ಮಾತನಾಡುತ್ತಾರೆ. ಕೆಲವೊಮ್ಮೆ ಒಂದೇ ಬಳಿಯ ಜನರು ಇನ್ನೊಂದು ಬಳಿಯ ಜನರನ್ನು ವಿನೋದ (ತಮಾಷೆ) ಮಾಡುವುದು, ಛೇಡಿಸುವುದು, ತಮಾಷೆಗಾಗಿ ಪೀಡಿಸುವುದು, ನಮ್ಮ ಕುಲ ಉತ್ತಮ ವಾದದು, ನಿಮ್ಮ ಕುಲ ಕೆಟ್ಟದ್ದು ಎಂದು ವಿನೋದ ಮಾಡುತ್ತಾರೆ. ಉದಾಹರಣೆಗೆ ಅಲೆಮಾರಿ ಕುರುಬ ಸಮುದಾಯದ ಕರಗಾರ ಬಳಿಯವರು ಅಥವಾ ಕುಲದವರು ಅದೇ ಸಮುದಾಯದ ಇನ್ನೊಂದು ಬಳಿಯನ್ನು ಅಂದರೆ ಕೌಲಪುರೆ ಬಳಿಯವರನ್ನು ತಮಾಷೆ ಮಾಡುವುದನ್ನು ಕಾಣುತ್ತೇವೆ. ತಮ್ಮ ಕುಲವೇ ಶ್ರೇಷ್ಠ ನಿಮ್ಮ ಕುಲವೇ ಕಡಿಮೆ ಮಟ್ಟದ್ದು ಎಂದು ಛೇಡಿಸುತ್ತಾರೆ.

ಎಲ್ಲ ಮತಧರ್ಮಗಳಲ್ಲಿ ಸೋದರ ಸಂಬಂಧಗಳಿರುವಂತೆ ಅಲೆಮಾರಿ ಕುರುಬರರಲ್ಲಿಯೂ ತಂದೆ-ತಾಯಿ, ಅಕ್ಕ-ಅಣ್ಣ, ತಮ್ಮ-ತಂಗಿ, ಅಳಿಯ-ಮಾವ, ಅತ್ತೆ-ಸೊಸೆ, ಮಗ-ಮಗಳು, ಮೊಮ್ಮಗ-ಮೊಮ್ಮಗಳು, ಅಜ್ಜ-ಅಜ್ಜಿ ಮುಂತಾದ ಬಂಧುತ್ವ ಪದಗಳು ಬಳಕೆಯಲ್ಲಿವೆ.

೬.೨ ಕುಲ-ಬಳಿ ಅಥವಾ ಬೆಡಗುಗಳು

ಕುಲ ಅಥವಾ ಬಳಿ ಎಂಬುದು ವಂಶಾನುಕ್ರಮ ಬಂಧುಗಳ, ಸಂಬಂಧಗಳ ಆಧಾರದ ಮೇಲೆ ರಚಿತವಾಗಿರುತ್ತದೆ. ಸಮುದಾಯದ ಸದಸ್ಯರೆಲ್ಲರು ಪೂರ್ವಜರ ವಂಶಾವಳಿಯ ಜೊತೆಗೆ ಸಂಬಂಧವಿದೆ ಎಂದು ನಂಬುತ್ತಾರೆ. ಇಲ್ಲಿ ಕುಲವನ್ನು ಪ್ರಾಣಿ, ಪಕ್ಷಿ, ಮರ, ಬಳ್ಳಿ ಕೆಲವೊಂದು ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಸಂದರ್ಭಕ್ಕೆ ತಕ್ಕಂತೆ ರಚಿಸಿಕೊಂಡಿರುತ್ತಾರೆ. ಸಾಮಾನ್ಯವಾಗಿ ಕುಲ, ಬಳಿ ಅಥವಾ ಬೆಡಗು "ಒಬ್ಬ ನಿರ್ದಿಷ್ಟ ಪೂರ್ವಜರಿಂದ ಉದ್ಭವಿಸಿದ ಸಂಬಂಧಿಕರ ಒಂದು ಸಮೂಹವಾಗಿದೆ". ವಂಶಾವಳಿಯನ್ನು ಮೂಲ ದಂಪತಿಗಳಿಂದ ಗುರುತಿಸಲಾಗುವುದು. ಒಮ್ಮೊಮ್ಮೆ ಕುಟುಂಬ ದೊಡ್ಡದಾಗಿ ಬೇರೆ ಬೇರೆಯಾದರೂ ತಮ್ಮ ಪೂರ್ವಜರೊಬ್ಬರಿಂದ ಸೃಷ್ಟಿಯಾಗಿದ್ದೇವೆಂಬ ನಂಬಿಕೆ ಬುಡಕಟ್ಟು ಸಮುದಾಯಗಳಲ್ಲಿರುವುದನ್ನು ಕಾಣುತ್ತೇವೆ. ಅಂತೆಯೇ ಅಲೆಮಾರಿ ಕುರುಬ ಸಮುದಾಯವು ಈ ನಂಬಿಕೆಯಿಂದ ಹೊರತಾಗಿಲ್ಲ.

ಪ್ರಾಚೀನ ಕಾಲದಲ್ಲಿ ಅಲೆಮಾರಿ ಕುರುಬರು ತಮ್ಮ ಕುರಿಗಳ ಸಾಕಣೆ ಮತ್ತು ರಕ್ಷಣೆಗಾಗಿ ಮೇವು-ನೀರು ಇರುವ ಪ್ರದೇಶಗಳನ್ನು ಗುರುತಿಸಿ ಹಟ್ಟಿಗಳನ್ನು ಕಟ್ಟಿಕೊಂಡು ಗುಂಪಾಗಿ ಅಲೆದಾಡು ತ್ತಿದ್ದರು. ಬೆಟ್ಟ-ಗುಡ್ಡದಲ್ಲಿ ಬೀಡುಬಿಟ್ಟು ವಾಸಿಸುತ್ತಿದ್ದರು. ಗುಂಪಿನಿಂದ ಪ್ರತ್ಯೇಕತೆ ಉಂಟಾದಾಗ ತಮ್ಮದೇ ಆದಂತಹ ಪ್ರಾಣಿ, ಪಕ್ಷಿ, ಗಿಡ ಅಥವಾ ಬಳ್ಳಿಗಳನ್ನು ಸಂಕೇತವಾಗಿ ಇಟ್ಟುಕೊಂಡಿರು ತ್ತಿದ್ದರು. ಇವೇ ಪ್ರಾಚೀನ ಕಾಲದ ಅಲೆಮಾರಿ ಕುರುಬರ ಗುಂಪಿನ ಹೆಸರುಗಳು. ಕಾಲಾಂತರದಲ್ಲಿ ಇವೇ ಬೆಡಗುಗಳಾಗಿ ರೂಪಾಂತರಗೊಂಡವು. ಈ ಹಿನ್ನೆಲೆಯಲ್ಲಿ ಕರುಳು-ಬಳ್ಳಿಯವರೆಲ್ಲ ಒಂದೇ ಬೆಡಗಿನವರಾದರು. ಇವರು ತಮ್ಮ ಎಲ್ಲಾ ಬೆಡಗುಗಳ ನೆನಪಿಗಾಗಿ ಪ್ರತಿಯೊಂದು ಬೆಡಗುಗಳ

ಆಧಾರದ ಮೇಲೆ ಅವರವರ ಮನೆತನದ ಹೆಸರನ್ನು ಅಡ್ಡ ಹೆಸರುಗಳಿಂದ ಕರೆಯುತ್ತಾರೆ. ತಮ್ಮ ಹೆಸರು ಅಥವಾ ವಿಳಾಸ ಹೇಳುವಾಗ ಹೆಸರಿನ ಕೊನೆಯಲ್ಲಿ ಅವರ ಕುಲ ಅಥವಾ ಬೆಡಗನ್ನು ಸೇರಿಸಿ ಹೇಳುವುದು ವಾಡಿಕೆ. ಇದರಿಂದ ಆ ವ್ಯಕ್ತಿ ಯಾವ ಕುಲ ಅಥವಾ ಬೆಡಗಿಗೆ ಸೇರಿದವನೆಂಬುದು ಸುಲಭವಾಗಿ ತಿಳಿಯಲು ಸಾಧ್ಯವಾಗುತ್ತದೆ. ಉದಾಹರಣೆಗೆ ಭೀರಪ್ಪ ಬಾಳು ಭಾನಸೆ, ಸುಭಾಷ್ ಸಿದ್ಧಪ್ಪ ಡೋಣೆ, ಅಪ್ಪಣ್ಣ ಸಿದ್ದಪ್ಪ ಬನ್ನೇ, ಲಿಂಗಪ್ಪ ಸತ್ಯಪ್ಪ ಕೌಲಪುರೆ ಇತ್ಯಾದಿ ಹೆಸರುಗಳು ವ್ಯಕ್ತಿಗಳ ಮನೆತನ ಮತ್ತು ಬೆಡಗುಗಳನ್ನು ಸೂಚಿಸುತ್ತವೆ. ಈ ಬೆಡಗುಗಳು ರಕ್ತ ಸಂಬಂಧದ ಬೇರೆ ಬೇರೆ ಗುಂಪುಗಳನ್ನು ನಿರ್ದೇಶಿಸುತ್ತವೆ. ಅಲೆಮಾರಿ ಕುರುಬರು ನೆಂಟಸ್ಥಿಕೆ ಬೆಳಸುವ ಸಂದರ್ಭದಲ್ಲಿ ಬೆಡಗುಗಳಿಗೆ ಹೆಚ್ಚಿನ ಮಹತ್ವ ನೀಡುತ್ತಾರೆ. ಒಂದೇ ಬೆಡಗಿಗೆ ಸೇರಿದವರು ಅಥವಾ ಒಳಬಾಂಧವ್ಯವಗಳು, ಸೋದರ ಸಂಬಂಧ, ಬೇರೆ ಬೆಡಗಿನವರು ಅಥವಾ ಹೊರ ಬಾಂದವ್ಯಗಳು, ನೆಂಟರ ಸಂಬಂಧ ಎಂಬ ಕಾರಣಕ್ಕಾಗಿ ಒಳಬಾಂಧವ್ಯದಲ್ಲಿ ವಿವಾಹ ನಿಷೇಧವಿದ್ದು ಹೊರ ಬಾಂದವ್ಯದಲ್ಲಿ ವಿವಾಹ ನಡೆಸುತ್ತಾ ಬಂದಿರುವುದನ್ನು ನಾವು ಕಾಣುತ್ತೇವೆ. ಅಂದರೆ ನೆಂಟಸ್ಥಿಕೆ ಮಾಡುವಾಗ ಬೇರೆ ಬೆಡಗಿನವರನ್ನು ಗುರುತಿಸಿ ಹೆಣ್ಣು ಕೊಡುವ ಮತ್ತು ತರುವುದನ್ನು ನೋಡುತ್ತೇವೆ. ಉದಾಹರಣೆ ಗವಡೆ + ಗವಡೆ, ಕರಗಾರ + ಕರಗಾರ, ಕೌಲಪುರೆ + ಕೌಲಪುರೆ ಇಂಥವು ಸಮ ಬೆಡಗುಗಳಾಗಿದ್ದು ಇವುಗಳ ನಡುವೆ ವಿವಾಹ ನಿಷಿದ್ಧವಾಗಿದೆ. ಆದರೆ ಗವಡೆ + ಕರಗಾರ, ಕೌಲಪುರೆ + ಗವಡೆ, ಕರಗಾರ + ಕೌಲಪುರೆ ಈ ರೀತಿಯ ಬೆಸ ಬೆಡಗುಗಳಲ್ಲಿ ವೈವಾಹಿಕ ಸಂಬಂಧ ಬೆಳಸಲು ಅರ್ಹವಾಗುತ್ತವೆ. ಇದರ ಸ್ಪಷ್ಟನೆಗಾಗಿ ಕ್ಷೇತ್ರಕಾರ್ಯದಿಂದ ಕಂಡುಕೊಂಡ ಬೆಡಗುಗಳನ್ನು ಇಲ್ಲಿ ಕೊಡಲಾಗಿದೆ.

೧. ಕರಗಾರ
೨. ಬನ್ನೇ
೩. ಹೊನ್ನೆಬನ್ನೇ
೪. ಗವಡೆ
೫. ಮುತ್ತುಮಾಣಿಕ್ಯ
೬. ಗೌಡ್ಲರು
೭. ಡೊಂಗರೆ
೮. ರಾಣೆಗೆ
೯. ಪಡುವಾಳಿಕರ
೧೦. ರಾಣೆ
೧೧. ಕೌಲಾಪುರೆ
೧೨. ಲಾಂಡೆ
೧೩. ಕೋಳಕರ್
೧೪. ಬೋರಾಟವಾಳ್
೧೫. ಹೊನ್ನೆಶಿಂಗಾಡಿ
೧೬. ಶಿಂಗಡೆ
೧೭. ಬೋರಗೊಂಡೆ
೧೮. ಬನ್ನೇಗೋಳ್
೧೯. ನರಾಟೆ
೨೦. ಕವಳೆ
೨೧. ಅನುಷೆ
೨೨. ಗೋಸಂಡೆ
೨೩. ಲಟ್ಟೆ
೨೪. ಸೆಂಡಿಗೆ
೨೫. ಮುರಡೆ
೨೬. ಯಮಗಾರ್
೨೭. ಚೊಪಡೆ
೨೮. ಕೋಡೆ
೨೯. ಗವಂಡೆ
೩೦. ಝುಂಡೆ

೩೧. ಹಡಕರ್	೩೨. ಲಿಂಗಗೋಳ್	೩೩. ಚೆಂಡ್ಕೆ
೩೪. ಮುತ್ತಿನವರು	೩೫. ಡೋಣೆ	೩೬. ಪಡುವಾಳಿ
೩೭. ವಾಸ್ಕರ್	೩೮. ಕಿಲಾರೆ	೩೯. ಕಾಗನೇಕರ್
೪೦. ಕೊರಲ್ಲೆರ್	೪೧. ಗೋಸರವಾಡೇ	೪೨. ಹೊಗಡೆ
೪೩. ಕೊಳಸೆ	೪೪. ದಿವಟೆ	೪೫. ಅವಾಡಿಖಾನ್

ಅಲೆಮಾರಿ ಕುರುಬರು ಬೆಡಗುಗಳಿಂದ ಸಂಘಟನೆಯುಳ್ಳವರಾಗಿದ್ದಾರೆ. ಮದುವೆಯಂತಹ ಮಂಗಳ ಕಾರ್ಯದಲ್ಲಿ ಮತ್ತು ಧಾರ್ಮಿಕ ಆಚರಣೆಯಲ್ಲಿ ಒಂದೇ ಬೆಡಗಿನವರು ಒಂದುಗೂಡಿ ಕೊಳ್ಳುತ್ತಾರೆ. ಒಂದು ಕಾಲಕ್ಕೆ ಬೆಡಗುಗಳು ವಾಸಿಸುವ ಹಟ್ಟಿಯ ನಾಮಗಳಾಗಿದ್ದವು. ಕಾಲಚಕ್ರದಲ್ಲಿ ಇಂದು ಮದುವೆಯಂತಹ ಶಿಷ್ಟಾಚಾರದಲ್ಲಿಯೂ, ಧಾರ್ಮಿಕ ಆಚರಣೆಯಲ್ಲಿ ಕುಲ-ಬೆಡಗುಗಳು ಪ್ರಮುಖ ಪಾತ್ರವಹಿಸುತ್ತಲಿವೆ. ಅಲೆಮಾರಿ ಕುರುಬರಲ್ಲಿ ಹಲವಾರು ಬೆಡಗು ಹಾಗೂ ಅನೇಕ ವಿಧದ ಒಳಬೇಧಗಳಿವೆ. ಇವುಗಳನ್ನು ರಹಸ್ಯವಾಗಿಯೇ ಹೇಳುವರು. ಆದರೆ ಅಲೆಮಾರಿ ಕುರುಬ ಸಮುದಾಯದವರೆಲ್ಲರು ತಮ್ಮ ಜಾತಿಯ ಹೆಸರು ಬೇರೆಯವರಿಗೆ ಹೇಳುವ ಸಂದರ್ಭದಲ್ಲಿ ಹಾಲುಮತದವರೆಂದು ಹೇಳುತ್ತಾರೆ.

೬.೩ ಆಹಾರ ಪದ್ಧತಿ

ಪ್ರಾಚೀನ ಕಾಲದಲ್ಲಿ ಅಲೆಮಾರಿ (ಬುಡಕಟ್ಟು) ಸಮುದಾಯಗಳಿಗೆ ಕಾಡಿನಲ್ಲಿ ದೊರೆಯುವ ಗಡ್ಡೆ-ಗೆಣಸು, ಹಣ್ಣು-ಹಂಪಲುಗಳು ಆಹಾರವಾಗಿದ್ದವು. ಕ್ರಮೇಣ ಬೌದ್ಧಿಕ ಬೆಳೆವಣಿಗೆಯಾದಂತೆಲ್ಲಾ ಭೂ ಸಾಗುವಳಿ ಮಾಡುವುದನ್ನು ಕಲಿತ ಮಾನವ ಆಹಾರ ಧಾನ್ಯಗಳನ್ನು ಬೆಳೆಯಲು ಆರಂಭಿಸಿದನು. ಈ ಆಹಾರ ಸೇವನೆಯು ಎಲ್ಲ ಪ್ರದೇಶದಲ್ಲಿ ಏಕ ಪ್ರಕಾರವಾಗಿರದೆ ಪ್ರದೇಶ ಮತ್ತು ವ್ಯಕ್ತಿಗಳಿಗನು ಗುಣವಾಗಿ ಭಿನ್ನವಾಗಿರುವುದನ್ನು ಕಾಣುತ್ತೇವೆ. ಒಂದೇ ಪ್ರದೇಶದ ಜನರಿಗೆ ಇಷ್ಟವೆನಿಸುವ ಆಹಾರ ಮತ್ತೊಂದು ಪ್ರದೇಶದ ಜನರಿಗೆ ಇಷ್ಟವಾಗದಿರಬಹುದು. ಹಾಗೆಯೇ ಮಾಂಸಹಾರಿಗಳಿಗೆ ಇಷ್ಟವಾಗುವ ಆಹಾರ, ಸಸ್ಯಹಾರಿಗಳಿಗೆ ಇಷ್ಟವೆನಿಸದಿರಬಹುದು. ಇವುಗಳಿಗೆಲ್ಲ ಅಲ್ಲಿನ ಪರಿಸರ ಮತ್ತು ಅಭ್ಯಾಸ ದಿಂದ ಉಂಟಾದ ಮನಸ್ಥಿತಿ ಕಾರಣವಾಗಿದೆ. ಅಲೆಮಾರಿ ಕುರುಬರು ಸಸ್ಯಹಾರಿಗಳು ಮತ್ತು ಮಾಂಸಹಾರಿಗಳು ಅವರು ಸೇವಿಸುವ ದೈನಂದಿನ ಆಹಾರವನ್ನು ಸಾಮಾನ್ಯ ಆಹಾರ ಮತ್ತು ವಿಶೇಷ ಆಹಾರಗಳೆಂದು ವಿಂಗಡಿಸಲಾಗುತ್ತದೆ.

ಇವರು ದಿನಕ್ಕೆರಡು ಸಲ ಚಹದ ಜೊತೆಗೆ ಮೂರು ಸಲ ಆಹಾರವನ್ನು ಸೇವಿಸುತ್ತಾರೆ. ಸಾಮಾನ್ಯ ದಿನಗಳಲ್ಲಿ ಜೋಳದ ರೊಟ್ಟಿ, ಸಂಗಟಿ (ಜೋಳದ ನುಚ್ಚು), ಅನ್ನ, ಬೇಳೆಸಾರು, ಹೆಸರುಕಾಳು ಸಾರು, ಅಲಸಂದಿ ಸಾರು, ಬಟಾಣಿ ಸಾರು, ಜುನುಕ (ಕಡ್ಲೆಬೆಳೆ ಅಥವಾ ಜೋಳದ

ಹಿಟ್ಟಿನ ಜೊತೆಗೆ ಈರುಳ್ಳಿ, ಕೊತಂಬರಿ, ಕರಿಬೇವು, ಎಣ್ಣೆ ಕಲಿಸಿ ಮಾಡಲಾಗುತ್ತದೆ) ಹಾಗೂ ರೊಟ್ಟಿಯ ಜೊತೆಯಲ್ಲಿ ತಿನ್ನಲು ಕಾಯಿಪಲ್ಲೆಗಳನ್ನು ಮಾಡುತ್ತಾರೆ. ತಮಗೆ ಬೇಕಾದ ಆಹಾರಧಾನ್ಯ ಮತ್ತು ತರಕಾರಿಗಳನ್ನು ತಾವು ಕುರಿ ತಬ್ಬಿದ ಸಮೀಪದ ಊರಿನಲ್ಲಿ ಅಥವಾ ವಾರಕ್ಕೊಮ್ಮೆ ನಡೆಯುವ ಸಂತೆಗಳಲ್ಲಿ ಕೊಂಡು ಬರುತ್ತಾರೆ. ಕುರಿ ಸಂಗೋಪನೆ ಚಟುವಟಿಕೆಗಳಲ್ಲಿ ತೊಡಗಿರುವುದರಿಂದ ಗಟ್ಟಿ ಆಹಾರಧಾನ್ಯಗಳಾದ ಜೋಳ ಮತ್ತು ಕಾಳುಗಳನ್ನು ಹೆಚ್ಚಾಗಿ ಉಪಯೋಗಿಸುತ್ತಾರೆ. ಶೇಂಗಾಜುನುಕ ಇವರಿಗೆ ಪ್ರಿಯವಾದ ರುಚಿಕರ ಆಹಾರವಾದರೆ, ಜೋಳದ ರೊಟ್ಟಿಯನ್ನು ಮೂರು ಒಪ್ಪತ್ತು ಸೇವಿಸಲೇಬೇಕಾದ ಆಹಾರವಾಗಿದೆ. ಅಲೆಮಾರಿ ಕುರುಬ ಮಹಿಳೆಯರು ರೊಟ್ಟಿ ಬಡಿಯುವುದು ದಿನನಿತ್ಯದ ಕಾಯಕವಾಗಿದೆ. ಈ ಆಹಾರಗಳ ಜೊತೆಯಲ್ಲಿ ಪಂಚಾಮೃತಗಳಾದ ಹಾಲು, ಮೊಸರು, ಮಜ್ಜಿಗೆ, ಬೆಣ್ಣೆ ಮತ್ತು ತುಪ್ಪಗಳನ್ನು ತಮ್ಮ ಬದುಕು(ಕುರಿ)ಗಳಿಂದಲೇ ಯಥೇಚ್ಛವಾಗಿ ದೊರೆಯುವುದರಿಂದ ಸೇವಿಸುತ್ತಾರೆ. ಇದರಿಂದ ಅಲೆಮಾರಿ ಕುರುಬ ಸ್ತ್ರೀ-ಪುರುಷರು ದೈಹಿಕವಾಗಿ ದಷ್ಟ-ಪುಷ್ಟರಾಗಿರುತ್ತಾರೆ. ಇವರು ಕುರಿ ಮೇಯಿಸಲು ಗುಡಾರದಿಂದ ಅಡವಿಗೆ ಹೋಗುವಾಗ ಮಧ್ಯಾಹ್ನದ ಆಹಾರವಾಗಿ ರೊಟ್ಟಿಯನ್ನು ಮಾತ್ರ ತೆಗೆದುಕೊಂಡು ಹೋಗುವುದು ಸಾಮಾನ್ಯವಾಗಿದೆ. ಕೆಲವೊಂದು ಅವಧಿಯಲ್ಲಿ ಕುರಿಗಳಲ್ಲಿ ಹಾಲು ಕಡಿಮೆ ಇದ್ದಾಗ ರೊಟ್ಟಿಯ ಜೊತೆಗೆ ಒಣಕಾರಪುಡಿ, ಗುರೆಳ್ಳಪುಡಿ ಅಥವಾ ಚಟ್ನಿ ಇವುಗಳಲ್ಲಿ ಯಾವುದಾದರೊಂದನ್ನು ತೆಗೆದುಕೊಂಡು ಹೋಗುತ್ತಾರೆ. ಇವರು ಅಡಿಗೆಗೆ ಹಸಿಮೆಣಸಿನಕಾಯಿ ಕಾರವನ್ನು ಹೆಚ್ಚಾಗಿ ಬಳಸುವುದಿಲ್ಲ. ಅದನ್ನು ಕುಟ್ಟಲು, ಪುಡಿಮಾಡಲು ಅಡವಿಯಲ್ಲಿ ಅಗಲವಾದ ಕಲ್ಲು, ಒಳ್ಳು ಅಡವಿಯಲ್ಲಿ ದೊರೆಯುವುದು ಕಷ್ಟ. ತಿಂಗಳು ಅಥವಾ ಎರಡು ತಿಂಗಳಿಗೆ ಆಗುವಷ್ಟು ಒಣಮೆಣಸಿನ ಕಾಯಿ ಕೊಂಡು ಜಿನ್ನಿ(ಖಾರ ಕುಟ್ಟುವ ಗಿರಣಿ)ಗೆ ಹಾಕಿಸಿಕೊಂಡು ಬರುತ್ತಾರೆ. ಇವರು ಖಾರದ ಅಡಿಗೆ ಮಾಡುವಾಗ ಒಣಕಾರದ ಪುಡಿಯನ್ನೇ ಹೆಚ್ಚಾಗಿ ಬಳಸುತ್ತಾರೆ.

ವಿಶೇಷ ಆಹಾರಗಳು : ವಿಶೇಷ ದಿನಗಳಾದ ಹಬ್ಬ, ಜಾತ್ರೆ, ಕರಿ, ಅಮವಾಸ್ಯೆ, ಹುಣ್ಣಿಮೆ, ಆದಿತ್ಯವಾರ ಇತ್ಯಾದಿ ದಿನಗಳಲ್ಲಿ ಸಿಹಿ ಅಡುಗೆಗಳನ್ನು ಮಾಡುವುದುಂಟು. ಅಂಥವೆಂದರೆ ಗೋಧಿ ಹುಗ್ಗಿ, ಶೇಂಗಾ ಹೋಳಿಗೆ, ಕಡ್ಲೆಬೆಳೆ ಹೋಳಿಗೆ, ರವಾ ಹುಗ್ಗಿ ಹಾಗೂ ಯಾರಾದರೂ ನೆಂಟರು ಬಂದರೆ ಪಕ್ಕದ ಗ್ರಾಮ ಅಥವಾ ಪಟ್ಟಣದಿಂದ ಕುರಿಯ ಮಾಂಸ ತಂದು ಮಾಡುತ್ತಾರೆ. ವಿಶೇಷ ಸಂದರ್ಭಗಳಾದ ಹಿರಿಯರ ಹಬ್ಬ, ಜಾತ್ರೆ, ಕರಿ, ದೇವರ ಬೇಡಿಕೆ, ಯುಗಾದಿ ಹಬ್ಬದ ದಿನದಂದು ಕುರಿ ಅಥವಾ ಮರಿಗಳನ್ನು ಬಲಿ ಕೊಟ್ಟು ಮಾಂಸ ಆಹಾರ ಸೇವಿಸುತ್ತಾರೆ. ಇವರು ಕುರಿ ಸಂಗೋಪನೆಯನ್ನೇ ತಮ್ಮ ಮೂಲ ಕಸುಬಾಗಿಸಿಕೊಂಡಿರುವುದರಿಂದ ಮಾಂಸ ಆಹಾರ ಸೇವಿಸುವುದು ಅಷ್ಟೊಂದು ಕಷ್ಟದಾಯಕವೆನಿಸದು. ಆದರೆ ಕುರಿಗಳೇ ತಮ್ಮ ಸಂಪತ್ತೆಂದು ಭಾವಿಸಿರುವ ಅಲೆಮಾರಿ ಕುರುಬರು ಅವುಗಳ ಅಭಿವೃದ್ಧಿಯಿಂದಲೇ ತಮ್ಮ ಕ್ಷೇಮಾಭಿವೃದ್ಧಿಯಾಗುತ್ತದೆಂಬುದನ್ನು ಅರಿತಿದ್ದಾರೆ.

ಅವನ್ನು ಸಾಕಿ-ಸಲುಹಿ, ಬೆಳೆಸಿ ದೊಡ್ಡವನ್ನಾಗಿ ಮಾಡಿ ಸ್ವತಃ ತಾವೇ ಕೊಯ್ದು ತಿನ್ನಲು ಅಲೆಮಾರಿ ಕುರುಬನು ಯಾವತ್ತೂ ಬಯಸುವುದಿಲ್ಲ. ''ಸತ್ತ ಕುರಿಯನ್ನು ಹೊತ್ತು ಮಾರು'' ಎಂಬ ಗಾದೆ ಕುರಿಗಳ ಬಗ್ಗೆ ಇವರಿಗಿರುವ ಕಳಕಳಿಯನ್ನು ತೋರ್ಪಡಿಸುತ್ತದೆ. ಕುರಿ-ಮೇಕೆ, ಮಾಂಸಗಳ ಜೊತೆಗೆ ಕುರಿ ಮೇಯಿಸುವಾಗ ಸಿಗುವ ಕೌಜುಗ, ಮೊಲ, ಕೋಳಿ ಹಾಗೂ ಮೀನು ಮಾಂಸಗಳನ್ನು ಸೇವಿಸುತ್ತಾರೆ. ಮಾಂಸ ಸೇವನೆ ಮಾಡುವ ದಿನಗಳಲ್ಲಿ ಮತ್ತು ಜಾತ್ರೆ, ಮದುವೆ, ಹಬ್ಬ ಇತ್ಯಾದಿ ಸಂದರ್ಭಗಳಲ್ಲಿ ಮದ್ಯಪಾನ ಮಾಡುವುದನ್ನು ಕೆಲವರು ರೂಢಿಸಿಕೊಂಡಿದ್ದಾರೆ. ಮಧ್ಯಪಾನ ಮಾಡಿದವರಿಂದ ದೈವಾಚರಣೆ ಮತ್ತು ಮದುವೆಗಳು ಸುಗಮವಾಗಿ ಜರುಗುವುದಿಲ್ಲ. ಇದನ್ನರಿತ ಅಲೆಮಾರಿ ಕುರುಬ ಮುಖಂಡರು ತಮ್ಮ ಗ್ರಾಮಗಳಲ್ಲಿ ನಡೆಯುವ ಜಾತ್ರೆ, ಮದುವೆ ಅಥವಾ ಸಮುದಾಯದ ದೈವಾಚರಣೆಯಲ್ಲಿ ಭಾಗವಹಿಸುವವರು ಮೂರು ದಿನಗಳವರೆಗೆ ಮಧ್ಯಪಾನ ಮಾಡುವಂತಿಲ್ಲವೆಂದು ನಿಷೇಧ ಹೇರುತ್ತಾರೆ. ಒಂದು ವೇಳೆ ಮದ್ಯಪಾನ ಮಾಡಿ ಗಲಾಟೆ ಮಾಡಿದರೆ ೫೦೦ ರೂ.ಗಳು ದಂಡ ತೆರಬೇಕಾಗುತ್ತದೆ. ದಂಡದ ರೂಪದಲ್ಲಿ ಬಂದ ಹಣವನ್ನು ಕುಲದೇವರ ಅಭಿವೃದ್ಧಿಗೆ ಬಳಕೆಯಾಗುವಂತೆ ನೋಡಿಕೊಳ್ಳುತ್ತಾರೆ.

ಬದಲಾದ ಪರಿಸ್ಥಿತಿ ಮತ್ತು ವಲಸೆ ಬಂದು ಅಲೆದಾಡುವ ಪ್ರದೇಶಗಳು ಇವರ ಆಹಾರ ಪದ್ಧತಿಯ ಮೇಲೆ ಅಷ್ಟೊಂದು ಪ್ರಭಾವ ಬೀರದಿರುವುದನ್ನು ಕಾಣುತ್ತೇವೆ. ತಮ್ಮ ಸ್ವಗ್ರಾಮಗಳಲ್ಲಿ ಸೇವಿಸುವ ಆಹಾರವನ್ನು ಅಲೆದಾಡುವ ಪ್ರದೇಶಗಳಲ್ಲಿ ಸೇವಿಸುತ್ತಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಅಕ್ಕಿಯ ಬಳಕೆಯನ್ನು ಕಾಣುತ್ತೇವೆ.

೬.೪ ಉಡುಗೆ-ತೊಡುಗೆಗಳು

"ಯಾವುದೇ ವ್ಯಕ್ತಿ ಧರಿಸುವ ಉಡುಪಾಗಲಿ, ತೊಡುವ ಆಭರಣವಾಗಲಿ ಅವರ ಸೌಂದರ್ಯ ಪ್ರಜ್ಞೆಯ ಅಭಿವ್ಯಕ್ತಿ ಎನಿಸುತ್ತದೆ" (ಅಂಬಳಿಕೆ ಹಿರಿಯಣ್ಣ:೧೯೯೩:೪೦). ಅಲೆಮಾರಿ ಕುರುಬರ ಸೌಂದರ್ಯ ಪ್ರಜ್ಞೆ ಅವರ ಉಡುಗೆ-ತೊಡುಗೆಗಳಲ್ಲಿ ವ್ಯಕ್ತವಾಗುವುದು. ಇವರು ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿ ಗುಂಪು ಗುಂಪಾಗಿ ಅಲೆದಾಡುತ್ತಿದ್ದರೂ ಅವರಲ್ಲಿ ಒಂದೇ ರೀತಿಯ ವೇಷಭೂಷಣ ಪದ್ಧತಿಗಳನ್ನು ಕಾಣಬಹುದಾಗಿದೆ. ಇವರ ಮೇಲೆ ಆಧುನೀಕರಣದ ಪ್ರಭಾವ ಬೀರಿದರೂ ವೇಷಭೂಷಣಗಳಲ್ಲಿ ಹೆಚ್ಚಿನ ಬದಲಾವಣೆ ಏನೂ ಕಂಡುಬರುವುದಿಲ್ಲ. ಪರಂಪರೆಯಿಂದ ಬಂದ ಉಡುಗೆ ತೊಡುಗೆಗಳೇ ಇವರಲ್ಲಿ ಇನ್ನು ಉಳಿದುಕೊಂಡು ಬಂದಿವೆ. ಬೇರೆ ಯಾವ ಜನರಲ್ಲೂ ಕಂಡು ಬಾರದ ವೇಷಭೂಷಣ ಕ್ರಮ ಇವರಲ್ಲಿರುವುದು ಗಮನಾರ್ಹ. ಹೀಗೆ ತಮ್ಮ ವೇಷಭೂಷಣಗಳಿಂದಲೇ ಇವರು ಇತರರಿಗಿಂತ ಪ್ರತ್ಯೇಕವಾಗಿ ಕಾಣಿಸಿಕೊಳ್ಳುತ್ತಾರೆ.

ಇವರು ತಮ್ಮ ಸಂಪ್ರದಾಯಿಕ ಕಸುಬಾದ ಕುರಿ ಸಂಗೋಪನೆಯಲ್ಲಿ ತೊಡಗಿರುವುದರಿಂದ

ಹಾಗೂ ಸದಾ ಅಡವಿಯಲ್ಲಿರುವುದರಿಂದ ಉಡುಗೆಗೆ ಹೆಚ್ಚು ಗಮನ ಕೊಡುವುದಿಲ್ಲ. ಮಳೆ, ಚಳಿ, ಗಾಳಿಯಿಂದ ರಕ್ಷಿಸಿಕೊಳ್ಳುವುದಕ್ಕಾಗಿ ಸ್ವಲ್ಪ ಒರಟು ಬಟ್ಟೆಯನ್ನೇ ಧರಿಸುತ್ತಾರೆ. ಇವರಲ್ಲಿ ಯುವಕರು ಧರಿಸುವ ಬಟ್ಟೆಯಲ್ಲಿ ಸ್ವಲ್ಪ ಬದಲಾವಣೆ ಕಂಡುಬಂದರೂ ಇವರೇ ಅಲೆಮಾರಿ ಕುರುಬರೆಂದು ಸುಲಭವಾಗಿ ಗುರುತಿಸಬಹುದು. ಮೊದಲು ಲಂಗೋಟಿ ಧರಿಸುತ್ತಿದ್ದ ಹಿರಿಯರು ಇಂದು ಧೋತರ ಧರಿಸುತ್ತಿದ್ದಾರೆ. ಕೊಳೆ ಕಾಣಬಾರದೆಂಬ ದೃಷ್ಟಿಯಿಂದ ಕೆಂಪು, ನೀಲಿ ಅಥವಾ ಖಾಕಿ ಬಣ್ಣದ ಮೈ ಅಂಗಿ ಧರಿಸುತ್ತಾರೆ. ಇದನ್ನು ಅಲೆಮಾರಿ ಕುರುಬರು ಮುಂಡಾ ಎಂದು ಕರೆಯುತ್ತಾರೆ. ಅದರ ಮೇಲೆ ನಿಲುವಂಗಿ, ತಲೆಗೆ ಪಟಗಾ(ಪೇಟಾ), ಹೆಗಲ ಮೇಲೆ ಕರಿಯ ಕಂಬಳಿ, ಕಾಲಲ್ಲಿ ಚರ್ಮದಿಂದ ತಯಾರು ಮಾಡಿದ ದಪ್ಪನೆಯ ಪಾದರಕ್ಷೆ ತೊಡುತ್ತಾರೆ. ಯುವಕ ಮತ್ತು ಮಧ್ಯ ವಯಸ್ಕ ಪುರುಷರು ತಲೆಗೆ ಪೇಟಾ ಬದಲು ಬಿಳಿಯ ಗಾಂಧಿ ಟೋಪಿ, ಕಂಬಳಿಯ ಬದಲು ಹೆಗಲ ಮೇಲೆ ಶಾಲು ಹಾಕುತ್ತಾರೆ ಹಾಗೂ ವಿವಾಹಿತ ಪುರುಷನ ನಡುವಿನಲ್ಲಿ ಎಲೆ ಅಡಿಕೆ ಚೀಲ ಇರುತ್ತದೆ. ತೀರಾ ಇತ್ತೀಚಿನ ದಿನಗಳಲ್ಲಿ ಕೆಲವು ಯುವಕರು ಲುಂಗಿ, ಬನೀನ, ಹೆಗಲ ಮೇಲೆ ಸದಾ ಟವಲು, ಕಾಲಲ್ಲಿ ತೆಳ್ಳನೆಯ ಚಪ್ಪಲಿಗಳನ್ನು ಧರಿಸುವುದು ಅಲ್ಲಲ್ಲಿ ಕಂಡುಬರುತ್ತದೆ. ಅಲೆಮಾರಿ ಕುರುಬರಲ್ಲಿ ಬಹಳಷ್ಟು ಜನರು ಮೀಸೆಯನ್ನು ಕತ್ತರಿಸಿಕೊಳ್ಳದಿರುವುದರಿಂದ ಅದು ಪೊದೆಯಂತೆ ಬಾಯಿಯನ್ನು ಆವರಿಸಿಕೊಂಡಿರುತ್ತದೆ. ಮೀಸೆಯನ್ನು ಕತ್ತರಿಸಿಕೊಂಡರೆ ಪುರುಷತ್ವಕ್ಕೆ ಸಂಚಕಾರ ಬರುತ್ತದೆಂದು ಅವರು ತಿಳಿದಿದ್ದಾರೆ.

ಅಲೆಮಾರಿ ಕುರುಬರ ಉಡುಗೆಗಳಲ್ಲಿ ಪುರುಷರಿಗಿಂತ ಸ್ತ್ರೀಯರ ಉಡುಗೆಗಳು ವಿಶೇಷವಾಗಿದ್ದು ಅವು ಪರಂಪರೆಯ ಪ್ರತೀಕವಾಗಿವೆ. ಅಂಚಿನಲ್ಲಿ ದಪ್ಪನಾದ ಪಟ್ಟಿ ಇರುವ ಹದಿನೆಂಟು ಮೊಳ ಉದ್ದದ ಸೀರೆಯನ್ನು ಕಚ್ಚೆ ಹಾಕಿ ಸೊಂಟಕ್ಕೆ ಸುತ್ತಿಕೊಳ್ಳುವುದು ಹಾಗೂ ಅಂಚಿನಲ್ಲಿ ಪಟ್ಟಿ ಇರುವ ಕುಪ್ಪಸ ಧರಿಸುವುದು ಈ ಮಹಿಳೆಯರ ಶೈಲಿಯಾಗಿದೆ. ದಿನವಿಡೀ ಸದಾ ಅಡವಿಯಲ್ಲಿ ಕುರಿ-ಮರಿಗಳ ಸಂಗೋಪನೆ, ಕಟ್ಟಿಗೆ ಮತ್ತು ನೀರು ತರುವುದು, ಆಹಾರ ಪದಾರ್ಥಗಳ ತಯಾರಿಕೆಯಲ್ಲಿ ತೊಡಗಿರುವುದರಿಂದ, ಈ ಕಾರ್ಯಗಳಲ್ಲಿ ತೊಡಗಿದಾಗ ಸೀರೆ ಅಡ್ಡಬರಬಾರದು, ಸೀರೆಗೆ ರಾಡಿ, ಮುಳ್ಳುಗಳು ಅಂಟಬಾರದು ಎಂಬ ಉದ್ದೇಶದಿಂದ ಕಚ್ಚೆ ಹಾಕುವುದು ಅಭ್ಯಾಸವಾಗಿದೆ ಎಂದು ಹೇಳುತ್ತಾರೆ. ಮಕ್ಕಳ ಉಡುಪುಗಳು ಸಾಮಾನ್ಯವಾಗಿದ್ದರೂ ಕೈಯಿಂದ ಹೆಣೆದ ಕುಂಚಿಕೆ, ಬೆಚ್ಚಗಿನ ಉಣ್ಣೆ ಅಂಗಿಗಳು, ಮಕ್ಕಳನ್ನು ವಾತಾವರಣದಿಂದ ರಕ್ಷಿಸುವ ಪ್ರಜ್ಞೆಯನ್ನು ಸೂಚಿಸುತ್ತವೆ.

ತೊಡುಗೆಗಳು : ಅಲೆಮಾರಿ ಕುರುಬ ಪುರುಷ ಮತ್ತು ಮಹಿಳೆಯರು ಆಭರಣ ಪ್ರಿಯರಾಗಿದ್ದು ಬೆಳ್ಳಿ ಮತ್ತು ಬಂಗಾರದಿಂದ ತಯಾರಿಸಿದ ವಸ್ತುಗಳನ್ನು ತೊಡುತ್ತಾರೆ. ಪುರುಷರು ಕಿವಿಗೆ ಬಂಗಾರದ ಕೆಳಮುರುವು ಮತ್ತು ಮೇಲ್ಮುರುವು, ಕೊರಳಲ್ಲಿ ತಾಯ್ತ, ನಡುವಿಗೆ ಉಡುದಾರ ಧರಿಸುವುದು ಸಾಮಾನ್ಯವಾಗಿದೆ. ಮಹಿಳೆಯರು ಕೆಳಗಿವಿಗೆ ಕ್ರಾಪು, ಉಜರೆ, ಕುಡಕೆ, ಹೂವುಗಳಾದರೆ ಮೇಲ್ಗಿವಿಗೆ

ಬುಗಡೆ ಧರಿಸುವರು. ಮೂಗಿಗೆ ಮೂಗುತಿ, ಕೊರಳಲ್ಲಿ ತಾಳಿ, ಬೋರಮಣಿ ಸರ, ಗುಂಡಿನ ಸರ, ಪುತ್ತಳಿಸರ, ಟಿಕ್ಕಿ, ಗಂಟನಾ, ನಕ್ಲೀಸ್ ಇತ್ಯಾದಿ ಬಂಗಾರದ ಆಭರಣಗಳನ್ನು ತೊಡುತ್ತಾರೆ. ಹಾಗೆಯೇ ಕಾಲಿಗೆ ಬೆಳ್ಳಿಯ ಕಾಲುಂಗುರ, ಮೇಲಪಿಲ್ಲೆ, ಸುರಳಿಮೇಲಗಳನ್ನು, ಎರಡು ಕೈಗಳ ತುಂಬಾ ಗಾಜಿನ ಹಸಿರು ಬಳೆಗಳನ್ನು, ಹಣೆಯ ಮೇಲೆ ದಪ್ಪನಾಗಿ ಎದ್ದುಕಾಣುವಂತೆ ವೃತ್ತಾಕಾರದಲ್ಲಿ ಕುಂಕುಮವನ್ನಿಟ್ಟು ಕೊಳ್ಳುತ್ತಾರೆ.

ಹಚ್ಚೆ : ಇವರಲ್ಲಿ ಸ್ತ್ರೀ-ಪುರುಷರು ಹಚ್ಚೆ ಹಾಕಿಸಿಕೊಳ್ಳುವುದು ಸಾಮಾನ್ಯ. ಹಚ್ಚೆಯನ್ನು ಎಡಗೈ ಅಥವಾ ಬಲಗೈಗೆ, ಇನ್ನೂ ಕೆಲವರು ಎರಡು ಕೈಗಳಿಗೆ, ಹಣೆ, ಕೆನ್ನೆ, ಗದ್ದದ ಮೇಲೆ ಹಾಕಿಸಿಕೊಳ್ಳುತ್ತಾರೆ. ಅಪ್ಪ, ಅಮ್ಮ ಅಥವಾ ಸೋದರಮಾವನ ಹೆಸರು, ಬಳ್ಳಿ, ಹಾವು, ದೇವರು, ಹೂ ಚಿತ್ರ ಮೊದಲಾದವನ್ನು ಹಚ್ಚೆ ಹಾಕಿಸಿಕೊಳ್ಳುತ್ತಾರೆ. ಈ ರೀತಿಯ ಚಿತ್ರಗಳ ಆಯ್ಕೆಯ ಉದ್ದೇಶ ಸೌಂದರ್ಯ ಮತ್ತು ಧಾರ್ಮಿಕತೆಯ ಸಮನ್ವಯವೆಂಬುದು ಸ್ಪಷ್ಟವಾಗುತ್ತದೆ. ಸ್ತ್ರೀಯರು ಹಚ್ಚೆ ಹಾಕಿಸಿಕೊಳ್ಳುವ ಸ್ಥಳದಲ್ಲಿ ಸೋದರಮಾವ ಇದ್ದರೆ ಹಚ್ಚೆಗೆ ತಗುಲಿದ ಹಣವನ್ನು ಅವನೇ ಕೊಡಬೇಕೆಂಬುವುದು ಇವರಲ್ಲಿರುವ ರೂಢಿ ಹಾಗೂ ಸಂಪ್ರದಾಯವಾಗಿದೆ.

ವಾಸ್ತವವಾಗಿ ಅಲೆಮಾರಿ ಕುರುಬರು ಕಠಿಣ ದುಡಿಮೆಗೆ ಒಗ್ಗಿಕೊಂಡ ಬಡಜನರು. ಇವರು ಉಡುಗೆ-ತೊಡುಗೆಗಳ ವಿಚಾರದಲ್ಲಿ ಧಾರ್ಮಿಕತೆಯ ಜೊತೆಗೆ ಸೌಂದರ್ಯ ಪ್ರಜ್ಞೆಯೂ ಕೆಲಸ ಮಾಡಿರುವುದನ್ನು ಅವರ ಉಡುಗೆ ತೊಡುಗೆಗಳ ವೈವಿಧ್ಯದಲ್ಲಿ ಕಾಣಬಹುದು. ಪುರುಷರು ಕಿವಿಗೆ ಮುರುವು, ಕೊರಳಲ್ಲಿ ತಾಯ್ತ ಮತ್ತು ನಡುವಿಗೆ ಉಡುದಾರ ಧರಿಸುವ ಸಂಗತಿಯು ಧಾರ್ಮಿಕ ಅನಿವಾರ್ಯತೆಯನ್ನು ಬಿಟ್ಟರೆ ಪುರುಷರಿಗೆ ಒಡವೆಗಳ ವಿಶೇಷ ಒಲವು ಇಲ್ಲದಿರುವುದನ್ನು ತೋರಿಸುತ್ತದೆ.

೬.೫ ಕುಲ (ಜಾತಿ) ಪಂಚಾಯ್ತಿ

ಅಲೆಮಾರಿ ಕುರುಬ ಸಮುದಾಯವು ತಮ್ಮದೆಯಾದಂತಹ ಕುಲಪಂಚಾಯ್ತಿ ವ್ಯವಸ್ಥೆಯನ್ನು ಹೊಂದಿರುವುದು ಕ್ಷೇತ್ರಕಾರ್ಯದಿಂದ ತಿಳಿದುಬಂದಿದೆ. ತಮ್ಮ ಸಮುದಾಯದಲ್ಲಿ ಸಂಭವಿಸುವ ಯಾವುದೇ ಜಗಳ, ಹಿಂಸೆ, ಅತ್ಯಚಾರ, ಭಿನ್ನಾಭಿಪ್ರಾಯ ಮೊದಲಾದವನ್ನು ಹೊರಬಿಡದೆ ತಮ್ಮೊಳಗೆ ಬಗೆಹರಿಸಿಕೊಳ್ಳಲು ಇಷ್ಟಪಡುತ್ತಾರೆ. ಇವರು ತಮ್ಮ ಸಮುದಾಯದೊಳಗೆ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಯ್ದುಕೊಳ್ಳಲು ಮತ್ತು ಮುಂದುವರಿಸಿಕೊಂಡು ಹೋಗಲು ಒಂದು ಕುಲಪಂಚಾಯ್ತಿ ವ್ಯವಸ್ಥೆ ಹೊಂದಿದ್ದಾರೆ. ಈ ವ್ಯವಸ್ಥೆಯನ್ನು ದೈವಪಂಚಾಯ್ತಿ ಅಥವಾ ಕುಲಪಂಚಾಯ್ತಿ ಎಂದು ಕರೆಯುತ್ತಾರೆ. ಕುಲ ಅಥವಾ ಜಾತಿ ಪಂಚಾಯ್ತಿಗಳ ಸದಸ್ಯರನ್ನು ಹಿರಿಯರು, ದೈವದವರು ಅಥವಾ ಪಂಚರು ಎಂದು ಕರೆಯುವುದು ರೂಢಿಯಲ್ಲಿದೆ. ಈ ಸಮುದಾಯದಲ್ಲಿ ಕುಲಪಂಚಾಯ್ತಿಯ

ಸದಸ್ಯರನ್ನು ಅನುಭವದ ಆಧಾರದ ಮೇಲೆ ಆಯ್ಕೆ ಮಾಡಲಾಗುತ್ತದೆ. ತಮ್ಮ ಸಮುದಾಯದ ಸಂಘಟನೆ ವಿಘಟನೆಯಾಗದಂತೆ ನೋಡಿಕೊಳ್ಳುವುದು, ತಮ್ಮಲ್ಲಿನ ಒಳ-ಜಗಳಗಳನ್ನು ತಾವೇ ಬಗೆಹರಿಸಿ ಕೊಳ್ಳುವುದು, ನಿರಪರಾಧಿಗೆ ಸರಿಯಾದ ನ್ಯಾಯ ಒದಗಿಸುವುದು. ಸಮಾಜದಲ್ಲಿನ ಒಳಿತು-ಕೆಡಕುಗಳನ್ನು ಪರಿಶೀಲಿಸಿ ಸಮಯೋಚಿತ ನಿರ್ಣಯ ಕೈಗೊಂಡು ಸಾಮಾಜಿಕ ನ್ಯಾಯವನ್ನು ಕಾಪಾಡಿಕೊಂಡು ಬರುವುದೇ ಈ ಕುಲಪಂಚಾಯ್ತಿಯ ಉದ್ದೇಶವಾಗಿದೆ. ಈ ಸಮುದಾಯದ ಸುಗಮ ಬೆಳವಣಿಗೆಯಲ್ಲಿ ಪಂಚಾಯ್ತಿ ಸದಸ್ಯರ ಪಾತ್ರವು ಬಹುಮುಖ್ಯವಾದದ್ದು. ಪಂಚಾಯಿತಿಯ ಯಾವ ನಿರ್ಣಯವನ್ನೂ ಉಲ್ಲಂಘಿಸುವಂತಿಲ್ಲ. ಸಮುದಾಯದ ನೀತಿ-ನಿಯಮಗಳನ್ನು ಕಟ್ಟಳೆಗಳನ್ನು ಉಲ್ಲಂಘನೆ ಮಾಡಿದ್ದೇ ಆದರೆ ಅಂತಹ ವ್ಯಕ್ತಿಗಳನ್ನು, ಕುಟುಂಬವನ್ನು ಕುಲದಿಂದ ಹೊರ ಹಾಕುವ (ಬಹಿಷ್ಕರಿಸುವ) ಸಂಪೂರ್ಣ ಹಕ್ಕು ಪಂಚಾಯ್ತಿಯ ಸದಸ್ಯರಿಗಿರುತ್ತದೆ. "ಇವರು ನ್ಯಾಯ, ಧರ್ಮ ಪಕ್ಷಪಾತಿಗಳೆಂಬ ನಂಬಿಕೆ ಸರ್ವತ್ರವಾಗಿದೆ. ಅನ್ನ ಹಳಸಿದರೂ ಕುರುಬರ ನ್ಯಾಯ ಮುಗಿಯುವುದಿಲ್ಲ ಎನ್ನುವ ಗಾದೆ ಒಂದೆಡೆಯಾದರೆ ಅವರು ವ್ಯಾಜ್ಯವೊಂದಕ್ಕೆ ಸಂಬಂಧಿಸಿದ ಎಲ್ಲಾ ವಿವಾದಗಳನ್ನು ಪರಿಶೀಲಿಸುವರು" (ಒಡೆಯರ ಡಿ.ಹೆಗ್ಗಡೆ: ೨೦೦೫:೧೩೪). ಸಮುದಾಯದಲ್ಲಿ ಇವರಿಗೆ ಮಹತ್ವದ ಸ್ಥಾನವಿದೆ. ಸತ್ಯದ ಮಾರ್ಗ ಇವರದ್ದಾಗಿರುವುದರಿಂದ ಪಂಚರಲ್ಲಿ ಪರಮಾತ್ಮನಿದ್ದಾನೆ ಎಂಬ ಭಾವನೆ ಇವರಲ್ಲಿದೆ.

ತಮ್ಮದೆಯಾದ ನೀತಿ ನಿಯಮಗಳ ಚೌಕಟ್ಟಿನೊಳಗೆ ತಮ್ಮ ರಹಸ್ಯವನ್ನು ಬಯಲು ಮಾಡದೆ ವಿವಾದಗಳನ್ನು ತಮ್ಮ ತಮ್ಮಲ್ಲೇ ಬಗೆಹರಿಸಿಕೊಳ್ಳಲು ಯತ್ನಿಸುತ್ತಾರೆ. ಎಲ್ಲಾ ಬಗೆಯ ವಿವಾದ ಗಳಿಗೂ (ಅಪರಾಧಗಳಿಗೂ) ಇವರು 'ದೈವದವರ' ಬಳಿ ನ್ಯಾಯ ಬಯಸುತ್ತಾರೆ ವಿನಹಃಹೊರಗಿನ ಕೋರ್ಟ್ ಕಛೇರಿಗಳಿಗೆ ಹೋಗುವುದಿಲ್ಲ. ನಾಗರಿಕತೆಯ ಸಂಪರ್ಕದಿಂದಾಗಿ ಕೆಲವೊಬ್ಬರು ಇತ್ತೀಚಿನ ವರ್ಷಗಳಲ್ಲಿ ನ್ಯಾಯ ದೊರಕಿಸಿಕೊಳ್ಳಲೆಂದು ತಮ್ಮ ಕುಲಪಂಚಾಯ್ತಿಯನ್ನು ಬಿಟ್ಟು ಕೋರ್ಟ್ ಕಛೇರಿಗಳಿಗೆ ಅಲೆದಾಡಿ ಹಣ ಮತ್ತು ದುಡಿಮೆಯ ಸಮಯವನ್ನು ಕಳೆದುಕೊಂಡು ಪಶ್ಚಾತ್ತಾಪ ಕ್ಕೊಳಗಾದವರು ಇದ್ದಾರೆ. ಅಲ್ಲದೆ ದೈವದವರ ಮತ್ತೊಂದು ಬಗೆಯ ಬಹಿಷ್ಕಾರಕ್ಕೆ ಗುರಿಯಾಗಿದ್ದಾರೆ. ಹೀಗಾಗಿ ಅಲೆಮಾರಿ ಕುರುಬರು ಎಂತಹ ಪ್ರಸಂಗದಲ್ಲೂ ಕುಲ ಪಂಚಾಯ್ತಿಯ ನೀತಿ-ನಿಯಮ ಹಾಗೂ ತೀರ್ಮಾನಗಳಿಗೆ ಬದ್ಧರಾಗಿ ಪರಸ್ಪರ ಮನೋಭಾವನೆ ಇಂದಿಗೂ ಉಳಿಸಿಕೊಂಡು ಬಂದಿರುವುದು ಕಂಡುಬರುತ್ತದೆ.

ವಿವಾದದ ಬಗೆಗಳು ಮತ್ತು ನ್ಯಾಯ ನಿರ್ಣಯ

ಅಲೆಮಾರಿ ಕುರುಬರ ವಿವಾದಗಳು ಮೂರು ರೀತಿಗಳಾಗಿದ್ದು ಅವನ್ನು ಎರಡು ಸ್ಥಳಗಳಲ್ಲಿ ಬಗೆಹರಿಸಿಕೊಳ್ಳುವುದನ್ನು ಕಾಣುತ್ತೇವೆ.

೧. **ವ್ಯವಹಾರಿಕ ಆಸ್ತಿಪಾಸ್ತಿ ವಿವಾದಗಳು :** ವೃತ್ತಿ ಸಂಪತ್ತಾದ ಕುರಿ-ಮೇಕೆ, ಅಲ್ಪಸ್ವಲ್ಪ ಇರುವ ಭೂಮಿ, ಮನೆ ಹಾಗೂ ಇನ್ನಿತರ ಆಸ್ತಿ-ಪಾಸ್ತಿಗಳನ್ನು ಅಣ್ಣ-ತಮ್ಮಂದಿರು ಅಥವಾ ಬಂಧು-ಬಳಗದವರಲ್ಲಿ ಹಂಚಿಕೊಳ್ಳುವಾಗ ಉದ್ಭವಿಸುವ ತಂಟೆ ತಕರಾರುಗಳು.

೨. **ದಂಡರೂಪದ ವಿವಾದಗಳು :** ಇವರಲ್ಲಿ ಕುರಿ-ಮೇಕೆಗಳನ್ನು ಕಳ್ಳತನದಿಂದ ಮಾರಾಟ ಮಾಡುವುದು, ಸುಲಿಗೆ, ಜಗಳ, ಹೊಡೆದಾಟ, ವ್ಯಭಿಚಾರ ಮುಂತಾದ ವಿವಾದಗಳು.

೩. **ಸಮುದಾಯದ ಅಂತರಿಕ ವಿವಾದಗಳು :** ದೈವದ ಗುಡಿ ನಿರ್ಮಾಣ, ಹಬ್ಬ-ಹರಿದಿನಗಳ ಆಚರಣೆ, ಜಾತ್ರೆ, ಉತ್ಸವ, ಪಟ್ಟಿ-ಪಾವತಿಗಳ ಸಂಗ್ರಹ ಇತ್ಯಾದಿ ಅಂಶಗಳಿಗೆ ಸಂಬಂಧಿಸಿದ ವಿವಾದಗಳು.

ಈ ಮೇಲಿನ ವಿವಾದಗಳಿಗೆ ಸಂಬಂಧಿಸಿದಂತೆ ನ್ಯಾಯಪಂಚಾಯ್ತಿ ಮಾಡಲು ಅಥವಾ ವಿವಾದ ಗಳನ್ನು ಬಗೆಹರಿಸಿಕೊಳ್ಳಲು ಆಧುನಿಕ ಕಾಲದಲ್ಲಿ ಅನೇಕ ವಿಧಿವಿಧಾನಗಳು ಬಂದಿದ್ದರೂ ಬುಡಕಟ್ಟು ಮಾದರಿಯ ಪಂಚರ ನ್ಯಾಯ ತೀರ್ಮಾನ ಅಲೆಮಾರಿ ಕುರುಬರಲ್ಲಿ ಇನ್ನೂ ಜೀವಂತವಾಗಿದೆ. ಈ ನ್ಯಾಯ ತೀರ್ಮಾನವನ್ನು ಎರಡು ಸ್ಥಳಗಳಲ್ಲಿ ಬಗೆಹರಿಸಿಕೊಳ್ಳುತ್ತಾರೆ. ಒಂದು ಅಲೆದಾಡುವ ಸ್ಥಳಗಳಲ್ಲಿ ಮತ್ತೊಂದು ಕುಲದೇವರ ಗುಡಿಗಳಲ್ಲಿ.

ಅ. ಅಲೆದಾಡುವ ಸ್ಥಳಗಳಲ್ಲಿ

ಕುರಿ ತಬ್ಬುವಿಕೆ ಮೊದಲಾದ ಸಣ್ಣಪುಟ್ಟ ವಿವಾದ ಹುಟ್ಟಿ ಎರಡು ಕುಟುಂಬಗಳ ನಡುವೆ ಜಗಳವಾಡಿರುವುದು, ಅಣ್ಣ-ತಮ್ಮಂದಿರು ವೈಮನಸ್ಸು ಮಾಡಿಕೊಂಡಿರುವುದು, ಗಂಡ-ಹೆಂಡತಿ ಜಗಳ ಮಾಡಿಕೊಂಡು ಹೆಂಡತಿ ತವರು ಮನೆಗೆ ಹೋಗಿರುವುದು ಮುಂತಾದ ವಿವಾದಗಳನ್ನು ತಾವು ಅಲೆದಾಡುವ ಸ್ಥಳಗಳಲ್ಲಿಯೆ ಬಗೆಹರಿಸಿಕೊಳ್ಳುತ್ತಾರೆ. ತಮ್ಮ ಸಮಸ್ಯೆಯನ್ನು ಸಮುದಾಯದ ಹಿರಿಯರ ಗಮನಕ್ಕೆ ತರುತ್ತಾರೆ. ಸಮುದಾಯದ ಹಿರಿಯರು ತಮಗೆ ಅನುಕೂಲವೆನಿಸಿದ ಗುಡಾರ ಹೂಡಿದ ಸ್ಥಳಕ್ಕೆ ವಾದಿ ಮತ್ತು ಪ್ರತಿವಾದಿ ಹಾಗೂ ಸಾಕ್ಷಿದಾರರನ್ನು ಬರ ಹೇಳುತ್ತಾರೆ. ಇಬ್ಬರ ವಾದವನ್ನು ಮತ್ತು ಸಾಕ್ಷಿದಾರರ ಮಾತನ್ನು ಅಲಿಸಿ ಇಬ್ಬರಿಗೂ ತಿಳಿಮಾತು ಹೇಳಿ ವಿವಾದವನ್ನು ಬಗೆಹರಿಸುತ್ತಾರೆ. ಒಂದು ವೇಳೆ ಈ ತಿಳಿಮಾತುಗಳನ್ನು ಒಪ್ಪಿ ನಡೆದುಕೊಳ್ಳದಿದ್ದರೆ ಮತ್ತೊಂದು ದಿನ ವಾದಿ-ಪ್ರತಿವಾದ ಹಾಗೂ ಸಾಕ್ಷಿದಾರರನ್ನು ಕರೆಯಿಸಿ ಹೆಗಲ ಮೇಲೆ ಕರೆಕಂಬಳಿ ಹಾಕಿ ಕೈಗೆ ಬೀರದೇವರ (ಕುಲದೇವರ) ಭಂಡಾರ ಕೊಟ್ಟು ಬೀರದೇವರ ಮೇಲೆ ಆಣೆ ಮಾಡಿಸಿ ತಮ್ಮ ವಾದವನ್ನು ಮಂಡಿಸಲು ಹೇಳುತ್ತಾರೆ. ಈ ವೇಳೆಯಲ್ಲಿ (ಇಂತಹ ಸ್ಥಿತಿಯಲ್ಲಿ) ವಾದಿ ಮತ್ತು ಪ್ರತಿವಾದಿ ಹಾಗೂ ಸಾಕ್ಷಿದಾರರು ಭಂಡಾರ ಮತ್ತು ಕಂಬಳಿಗೆ ಹೆದರಿ ಸತ್ಯವನ್ನೇ ನುಡಿಯುತ್ತಾರೆ. ಇದರ ಆಧಾರದ ಮೇಲೆ ಸಮುದಾಯದ ಹಿರಿಯರು ನ್ಯಾಯ ತೀರ್ಮಾನ ಮಾಡುತ್ತಾರೆ. ಒಂದು ವೇಳೆ ಅಲ್ಲಿಗೂ ಸುಳ್ಳು ನುಡಿದರೆ ಬೀರದೇವರು ನೋಡಿಕೊಳ್ಳುತ್ತಾನೆಂದು ಬಿಟ್ಟು ಬಿಡುತ್ತಾರೆ.

ಆ. ಕುಲದೇವರ ಗುಡಿಗಳಲ್ಲಿ

ಅಲೆಮಾರಿ ಕುರುಬರ ಕೆಲವು ವಿವಾದಗಳು ಕಠಿಣ ಸ್ವರೂಪದ್ದಾಗಿರುತ್ತವೆ. ಅವನ್ನು ಕುಲದೇವರ ಗುಡಿಗಳಲ್ಲೆ ಬಗೆಹರಿಸಿ ಕೊಳ್ಳುತ್ತಾರೆ. ಉದಾಹರಣೆಗೆ ಕುರಿಗಳನ್ನು ಕಳ್ಳತನ ಮಾಡಿ ಮಾರಾಟ ಮಾಡಿರುವುದು, ದೈವಾಚರಣೆ, ಜಾತ್ರೆ-ಉತ್ಸವಗಳು, ಅತ್ಯಾಚಾರ, ಹಬ್ಬ-ಹರಿದಿನಗಳು, ಕುಲದೇವರ ಆಸ್ತಿ ಮತ್ತು ಪೂಜೆ ಇತ್ಯಾದಿ ಅಂಶಗಳಿಗೆ ಸಂಬಂಧಿಸಿರುತ್ತವೆ. ಇಂಥವನ್ನು ದೇವರ ಗುಡಿಯಲ್ಲಿ ಬಗೆಹರಿಸಿಕೊಳ್ಳುತ್ತಾರೆ. ಬೀರದೇವರ ಗುಡಿಯೊಳಗೆ ಎಲ್ಲರಿಗೂ ಪ್ರವೇಶವಿರುತ್ತದೆ. ಅಲ್ಲಿ ನಡೆಯುವ ಚರ್ಚೆಯಲ್ಲಿ ಸಮುದಾಯದ ಸಮಸ್ತರು ಭಾಗವಹಿಸಬಹುದು. ನ್ಯಾಯ ನಿರ್ಣಯ ನೀಡುವ ಪಂಚರು ಸಮುದಾಯದ ಹಿರಿಯರಾಗಿದ್ದು ಅನುಭವಸ್ಥರಾಗಿರುತ್ತಾರೆ ಹಾಗೂ ಇವರು ಸಮುದಾಯದ ಭಾಗವೇ ಆಗಿರುವುದರಿಂದ ಸಮುದಾಯದಲ್ಲಿನ ತಂಟೆ-ತಕರಾರುಗಳನ್ನು ಹಾಗೂ ವಾದಿ-ಪ್ರತಿವಾದಿಯ ಚಲನ-ವಲನಗಳನ್ನು ಅತ್ಯಂತ ಸೂಕ್ಷ್ಮವಾಗಿ ಆಲಿಸುವಷ್ಟು ಜ್ಞಾನಿಗಳಾಗಿರುತ್ತಾರೆ. ಗುಡಿಯೊಳಗೆ ಕುಳಿತ ಪಂಚರು ವಾದಿ-ಪ್ರತಿವಾದಿಗಳಿಗೆ ನ್ಯಾಯಲಯಗಳಲ್ಲಿ ಭಗವದ್ಗೀತೆಯ ಮೇಲೆ ಕಕ್ಷಿದಾರರು ಸುಳ್ಳು ಹೇಳುವುದಿಲ್ಲ ಎಂದು ಪ್ರಮಾಣೀಕರಿಸಿದಂತೆ, ಗುಡಿಯೊಳಗೆ ಕುಳಿತು ಸಮುದಾಯದ ಪಂಚರು ವಾದಿ-ಪ್ರತಿವಾದಿಗಳಿಗೆ ಹಣೆಗೆ ಭಂಡಾರ ಹಚ್ಚಿ, ಹೆಗಲ ಮೇಲೆ ಕಂಬಳಿ ಹಾಕಿ, ಬೀರದೇವರ ಸಾಕ್ಷಿಯಾಗಿ ಸುಳ್ಳು ಹೇಳುವುದಿಲ್ಲವೆಂದು ಪ್ರಮಾಣ ಮಾಡಿಸಿ, ತಮಗಾದ ಅನ್ಯಾಯವನ್ನು ವಿಶ್ಲೇಷಿಸಲು ಅನುವು ಮಾಡಿಕೊಡುವರು. ಇಂತಹ ಸ್ಥಳದಲ್ಲಿ ತಾವು ಸುಳ್ಳು ಹೇಳಬಾರದು, ಹೇಳಿದರೆ ದೇವರು ತಮಗೆ ತೊಂದರೆ ಕೊಡುತ್ತಾನೆ ಎಂಬ ಭಯವು ಇಂದಿಗೂ ರೂಢಿಯಲ್ಲಿರುವುದರಿಂದ ಸತ್ಯವನ್ನೇ ಹೇಳುತ್ತಾರೆ. ಪಂಚರು ವಾದಿ-ಪ್ರತಿವಾದಿಯ ವಾದವನ್ನು ಅತ್ಯಂತ ಸೂಕ್ಷ್ಮವಾಗಿ ಆಲಿಸಿ, ಸರಿ-ತಪ್ಪುಗಳನ್ನು ಸರಿಯಾದ ಸಾಕ್ಷ್ಯಾಧಾರಗಳೊಂದಿಗೆ ಪರೀಶಿಲಿಸಿ ನ್ಯಾಯ ತೀರ್ಮಾನ ಮಾಡುತ್ತಾರೆ. ಒಮ್ಮೆ ದೈವದವರಿಂದ ತೀರ್ಪು ಹೊರಬಿದ್ದ ಮೇಲೆ ಪ್ರಶ್ನಿಸುವಂತಿಲ್ಲ ಹಾಗೂ ಯಾವುದೇ ಕಾರಣಕ್ಕೂ ಉಲ್ಲಂಘಿಸುವಂತಿಲ್ಲ.

ಇ. ಶಿಕ್ಷೆ ಅಥವಾ ದಂಡ

ಅಲೆಮಾರಿ ಕುರುಬರಲ್ಲಿ ಅಪರಾಧಿಗಳಿಗೆ ಸಮುದಾಯದ ಒಳಾಡಳಿತ ವ್ಯವಸ್ಥೆಯನುಸಾರ ನಾನಾ ಬಗೆಯ ದಂಡ ಹಾಗೂ ಶಿಕ್ಷಾ ಪದ್ಧತಿಗಳಿವೆ. ದಂಡ ಮತ್ತು ಶಿಕ್ಷೆಗಳಿಂದಾಗಿ ಸಮುದಾಯದಲ್ಲಿನ ದುಷ್ಟ ಹಾಗೂ ದುರ್ನಡತೆಯ ವ್ಯಕ್ತಿಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಸಾಧ್ಯವಾಗುತ್ತದೆ. ಇವರಲ್ಲಿ ರೂಢಿಯಲ್ಲಿರುವ ಬಹುಕಠಿಣ ಶಿಕ್ಷೆ ಎಂದರೆ ಬಹಿಷ್ಕಾರ. ಸಮುದಾಯದ ಕಟ್ಟಳೆಗಳನ್ನು ಮೀರಿ ನಡೆದವರನ್ನು ಕುಲದಿಂದ ಹೊರಹಾಕಲಾಗುವುದು. ಹೀಗೆ ಬಹಿಷ್ಕೃತರಾದವರು ಮದುವೆ, ಮುಂಜಿ, ಹಬ್ಬ-ಹರಿದಿನಗಳಲ್ಲಿ ಪಾಲ್ಗೊಳ್ಳುವಂತಿಲ್ಲ. ಅಷ್ಟೇ ಅಲ್ಲದೆ ಸಮುದಾಯದಿಂದ ಹೊರಗುಳಿದು ಎಲ್ಲರ ಪ್ರೀತಿ, ವಿಶ್ವಾಸಗಳನ್ನು ಕಳೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಸಮುದಾಯ

ದಲ್ಲಿನ ಪ್ರತಿಯೊಬ್ಬರು ನ್ಯಾಯಕ್ಕೆ ತಲೆಬಾಗಿ ನಡೆದುಕೊಳ್ಳುತ್ತಾರೆ. ಇವರಲ್ಲಿ ವಿವಿಧ ಅಪರಾಧಗಳಿಗೆ ಬೇರೆ ಬೇರೆ ಶಿಕ್ಷೆಗಳನ್ನು ವಿಧಿಸುವುದು ರೂಢಿಯಲ್ಲಿದೆ. ಅಪರಾಧಗಳು ಮತ್ತು ಅವುಗಳಿಗೆ ಸಂಬಂಧಿಸಿದಂತೆ ವಿಧಿಸುವ ಶಿಕ್ಷೆಗಳು ಕೆಳಗಿನಂತಿವೆ.

- ಸಮುದಾಯದ ವ್ಯಕ್ತಿ ತನ್ನ ಸಮುದಾಯದ ಬೇರೊಬ್ಬರ ಕುರಿಗಳನ್ನು ಕಳ್ಳತನ ಮಾಡಿ ಮಾರಾಟ ಮಾಡಿದ್ದರೆ ೧:೪ ಪ್ರಮಾಣದಲ್ಲಿ ಕುರಿಗಳನ್ನು ಹಿಂದಿರುಗಿಸಬೇಕು.
- ಅಲೆಮಾರಿ ಕುರುಬ ಸಮುದಾಯದ ಹೆಣ್ಣುಮಗಳು ಅನ್ಯ ಸಮುದಾಯದವರನ್ನು ಕೂಡಿದರೆ ಆಕೆಯನ್ನು ಸಮುದಾಯದಿಂದ ಹೊರಹಾಕುವರು.
- ತಮ್ಮ ಸಮುದಾಯದಲ್ಲಿನ ಅವಿವಾಹಿತ ಯುವಕ-ಯುವತಿ ಪ್ರೀತಿ ಮಾಡಿ, ಓಡಿ ಹೋಗಿ ಮದುವೆ ಮಾಡಿಕೊಂಡು ಪುನಃ ಸಮುದಾಯಕ್ಕೆ ಬಂದಾಗ ಅವರನ್ನು ಪಂಚಾಯ್ತಿಗೆ ಸೇರಿಸಿ ಕುಲ ಸಂಪ್ರದಾಯನುಸಾರ ಮತ್ತೊಮ್ಮೆ ಮದುವೆ ಮಾಡಿಸಲಾಗುತ್ತದೆ.
- ವಿವಾಹಿತ ಮಹಿಳೆ ತನ್ನ ಗಂಡನನ್ನು ಬಿಟ್ಟು ಬೇರೆ ಜಾತಿಯ ವ್ಯಕ್ತಿಯೊಂದಿಗೆ ಅನೈತಿಕ ಸಂಬಂಧವಿಟ್ಟುಕೊಂಡಿದ್ದರೆ ಅವಳನ್ನು ಶಾಶ್ವತವಾಗಿ ಕುಲದಿಂದ ಬಹಿಷ್ಕರಿಸಲಾಗುತ್ತದೆ.
- ಸಮುದಾಯದಲ್ಲಿನ ಸ್ತ್ರೀ ಅಥವಾ ಪುರುಷ ಅನಾದಿಕಾಲದಿಂದ ಬಂದ ಸಂಪ್ರದಾಯಗಳು, ಮೌಲ್ಯಗಳು, ರೀತಿ-ರಿವಾಜುಗಳನ್ನು ಮುರಿಯುವಂತಹ ಕ್ರಿಯೆಗಳಲ್ಲಿ ತೊಡಗಿದಾಗ ಇಲ್ಲವೇ ಸಮುದಾಯದಲ್ಲಿನ ಇತರರಿಗೆ ಅಘಾತಕಾರಿಯಾಗುವಂತಹ ನೋವುಂಟು ಮಾಡಿದಾಗ ಕುಲ ಬಹಿಷ್ಕಾರ ಹಾಕಲಾಗುತ್ತದೆ.
- ಒಂದೇ ಬೆಡಗಿಗೆ ಸೇರಿದ ಗಂಡು-ಹೆಣ್ಣುಗಳು ಪರಸ್ಪರ ಒಪ್ಪಿಗೆಯಿಂದ ಮದುವೆಯಾಗ ಬಯಸಿದರೆ ಪ್ರಾಯಶ್ಚಿತ ವಿಧಿಗೆ ಗುರಿಯಾಗಬೇಕಾಗುತ್ತದೆ. ಸಮುದಾಯದ ಹಿರಿಯರೊಡನೆ ನದಿಗೆ ಹೋಗಿ ಸ್ನಾನಮಾಡಿ ಕುಲದೇವರ ಗುಡಿಗೆ ಬಂದು ಪೂಜೆ ಸಲ್ಲಿಸಬೇಕು.

ಅಲೆಮಾರಿ ಕುರುಬರ ಕುಲಪಂಚಾಯ್ತಿ ಬಹುಹಿಂದಿನ ಕಾಲದಿಂದಲೂ ತಮ್ಮ ಪೂರ್ವಿಕರು ಹಾಕಿಕೊಟ್ಟ ನಿಯಮ ಕಟ್ಟಳೆಗಳನ್ನು ಅನುಸರಿಸುತ್ತಾ ಅನೋನ್ಯವಾಗಿ ಬದುಕು ನಡೆಸುತ್ತಾ ಬಂದಿದೆ. ಸಾಕಷ್ಟು ವಿವೇಚನಶೀಲರಾದ ಇವರಲ್ಲಿ ಪ್ರಜಾತಂತ್ರ ಹಾಗೂ ಲೋಕಜ್ಞಾನ ಪರಂಪರಾಗತವಾಗಿ ಸಾಗಿ ಬಂದಿರುವುದು ಗಮನಾರ್ಹವಾಗಿದೆ. ಇಷ್ಟೇ ಅಲ್ಲದೆ ಇಡೀ ಸಮುದಾಯದ ಜೀವನವನ್ನು ನಿಯಂತ್ರಿಸುವ ಹಾಗೂ ಬೇರೆ ಸಮುದಾಯಗಳ ಪ್ರಭಾವ ಎಷ್ಟೇ ಆಗಿದ್ದರೂ ಹಳೆಯ ಬುಡಕಟ್ಟು ಕುಲಪಂಚಾಯ್ತಿ ಯಥಾಸ್ಥಿತಿಯಲ್ಲಿ ಮುಂದುವರಿಯುತ್ತಿರುವುದು, ಸಮುದಾಯದವರೆ ನ್ಯಾಯ ತೀರ್ಮಾನ ಮಾಡುವುದು ಇವರ ಅನನ್ಯತೆಯನ್ನು ಎತ್ತಿ ತೋರಿಸುತ್ತದೆ.

೬.೬ ಜೀವನಾವರ್ತನದ ಆಚರಣೆಗಳು

ಹುಟ್ಟಿನಿಂದ ಸಾವಿನವರೆಗೆ ಜೀವನದ ಮುಖ್ಯ ಘಟ್ಟಗಳಲ್ಲಿ ಅಲೆಮಾರಿ ಕುರುಬರು ಅನುಸರಿಸುವ ಪದ್ಧತಿ ಹಾಗೂ ಸಾಂಪ್ರದಾಯಗಳು ಇತರೆ ಕುರುಬ ಸಮುದಾಯಗಳಂತೆ ಹೊರ ನೋಟಕ್ಕೆ ಕಂಡರೂ ಒಳಹೊಕ್ಕು ನೋಡಿದಾಗ ಭಿನ್ನವಾಗಿರುವುದರ ಜೊತೆಗೆ ಕುತೂಹಲಕರವಾಗಿವೆ, ಅಧ್ಯಯನಕ್ಕೆ ಯೋಗ್ಯವಾಗಿವೆ. ಇವರು ತಮ್ಮ ಸ್ವಗ್ರಾಮ ಬಿಟ್ಟು ಬಹಳಷ್ಟು ದೂರ ಕುರಿಗಳ ಜೊತೆಗೆ ಕುಟುಂಬ ಸಮೇತ ವಲಸೆ ಬಂದರೂ ತಾವು ಅನುಸರಣೆ ಮಾಡುತ್ತಿರುವ ಜೀವನಾವರ್ತನ ಅಂದರೆ ಜನನದಿಂದ ಮರಣದವರೆಗೆ ಜರುಗುವ ಆಚರಣೆಗಳನ್ನು ಸಾಮಾನ್ಯವಾಗಿ ತಮ್ಮ ಸ್ವಗ್ರಾಮ ಗಳಲ್ಲಿ ಆಚರಿಸುತ್ತಾರೆ. ಆದರೆ ಕೆಲವೊಂದು ಶಾರೀರಿಕ ಪ್ರಕ್ರಿಯೆಗಳಾದ ಹೆರಿಗೆ, ಋತುಮತಿ, ಮರಣಗಳನ್ನು ಅಂದಾಜಿಸುವುದು ಅಸಾಧ್ಯ. ಇಂಥವು ತಾವು ಅಲೆದಾಡುವ ಪ್ರದೇಶಗಳಲ್ಲಿ ಕೆಲವೊಮ್ಮೆ ಜರುಗುತ್ತವೆ. ಉದಾಹರಣೆಗೆ ತಾವು ಅಲೆದಾಡುವ ಪ್ರದೇಶಗಳಲ್ಲಿ ಹೆರಿಗೆಯಾದರೆ ಗುಡಾರ ಹೂಡಿದ ಸಮೀಪದ ಊರಿನ ಜನರನ್ನು ಪರಿಚಯ ಮಾಡಿಕೊಂಡು ಒಂದೆರಡು ದಿನ ಆ ಗ್ರಾಮದಲ್ಲಿದ್ದು ನಂತರ ಸ್ವಗ್ರಾಮಕ್ಕೆ ಕರೆದುಕೊಂಡು ಹೋಗುವರು. ಒಂದು ವೇಳೆ ಚಿಕ್ಕ ಮಕ್ಕಳು ತೀರಿಕೊಂಡರೆ ಬಿಡಾರ ಹೂಡಿದ ಸ್ಥಳದಲ್ಲಿಯೇ ಹೂಳುತ್ತಾರೆ. ವಯಸ್ಸಿಗೆ ಬಂದ ಅಥವಾ ಮದುವೆಯಾಗಿದ್ದವರು ತೀರಿಕೊಂಡರೆ ಅದೆಷ್ಟೇ ಕಷ್ಟವಾದರೂ ಸ್ವಗ್ರಾಮಕ್ಕೆ ತೆಗೆದುಕೊಂಡು ಹೋಗಿ ಶವಸಂಸ್ಕಾರ (ಮಣ್ಣು) ಮಾಡುತ್ತಾರೆ.

ಜನನ

'ಜನನ' ಎಂಬುದು ಸ್ವಾಭಾವಿಕ, ಸಹಜ ಹಾಗೂ ಶಾರೀರಿಕ ಕ್ರಿಯೆಯಾಗಿದೆ. ಇದನ್ನು ಆಚರಿಸುವ ಪದ್ಧತಿಗಳು ಸಮುದಾಯಗಳಲ್ಲಿ ಭಿನ್ನವಾಗಿರುವುದನ್ನು ಕಾಣುತ್ತೇವೆ. ಅಲೆಮಾರಿ ಕುರುಬ ರಲ್ಲಿ ಮೊದಲನೆಯ ಮತ್ತು ಎರಡನೆಯ ಹೆರಿಗೆಯು ತವರು ಮನೆಯಲ್ಲಿಯಾಗಬೇಕೆಂಬುದು ಪದ್ಧತಿ ಯಾಗಿದೆ. ಆನಂತರದ ಹೆರಿಗೆಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ಎಲ್ಲಿಯಾದರೂ ಮಾಡಬಹುದು. ತವರು ಮನೆಯವರು ಗರ್ಭಿಣಿ ಸ್ತ್ರೀಯನ್ನು ಏಳು ತಿಂಗಳಲ್ಲಿ ಸೀಮಂತ ಮಾಡಿ ತವರು ಮನೆಗೆ ಕರೆದುಕೊಡು ಹೋಗುವರು. ಗರ್ಭಿಣಿ ಹೆರಿಗೆ ನೋವು ಕಾಣಿಸಿಕೊಂಡ ತಕ್ಷಣ ಸೂಲಗಿತ್ತಿಯನ್ನು ಕರೆತರುವರು. ಹೆರಿಗೆ ಬೇಗನೆ ಆಗದಿದ್ದರೆ ಅಥವಾ ಕಷ್ಟವಾದರೆ ಶ್ಯಾವಿಗೆ ಬಸಿದ ಬಿಸಿ ನೀರು ಅಥವಾ ಜೀರಿಗೆ ಪುಡಿ ಮಾಡಿ ನೀರು ಹಾಕಿ ಕಷಾಯ ಮಾಡಿ ಕುಡಿಯಲು ಕೊಡುತ್ತಾರೆ.

ಹೆರಿಗೆಯಾಗಿ ಐದು ದಿನಗಳವರೆಗೆ ಬಾಣಂತಿಗೆ ಸೂತಕ ದಿನ. ಅಲ್ಲಿಯವರೆಗೆ ಅವಳು ಯಾವ ಕೆಲಸ ಮಾಡುವಂತಿಲ್ಲ. ಐದನೇ ದಿನದಲ್ಲಿ ತಾಯಿಗೆ ಮತ್ತು ಮಗುವಿಗೆ ಸ್ನಾನ ಮಾಡಿಸಿ ಹತ್ತಿರದ ಕೆಲವು ರಕ್ತ ಸಂಬಂಧಿಕರಿಗೆ ಸಿಹಿ ಊಟ ನೀಡಲಾಗುವುದು. ಆ ದಿನವೇ ಸೂಲಗಿತ್ತಿಗೆ

ಹೊಸ ಸೀರೆ ತಂದು ಉಡಿಸುವುದು ವಾಡಿಕೆ. ಒಂದೂವರೆ ತಿಂಗಳು ಅಥವಾ ಮೂರು ತಿಂಗಳಲ್ಲಿ ಗಂಗಾಪೂಜೆಯನ್ನು ಮಾಡುತ್ತಾರೆ. ಇದು ಅವರವರ ಅನುಕೂಲಕ್ಕೆ ತಕ್ಕಂತೆ ಇರುತ್ತದೆ. ಕುರಿಗಳಲ್ಲಿರುವ ಗಂಡನಿಗೆ ಅಡಿಗೆ ಮಾಡಿಡಲು ಯಾರು ಇಲ್ಲದ ಸ್ಥಿತಿಯಲ್ಲಿದ್ದಾಗ ೯ ದಿನಗಳಲ್ಲೇ ಗಂಗಾಪೂಜೆ ಕಾರ್ಯಕ್ರಮ ಮಾಡಿ ಮುಗಿಸುತ್ತಾರೆ. ಸಾಮಾನ್ಯವಾಗಿ ಎರಡರ ನಂತರದ ಹೆರಿಗೆಗಳನ್ನು ೯ನೇ ದಿನದಲ್ಲಿ ಗಂಗಾಪೂಜೆ ಮಾಡಿಸುವುದು ವಾಡಿಕೆ. ಈ ಕಾರ್ಯಕ್ರಮವಾದ ನಂತರ ಬಾಣಂತಿ ಹೊರಗಡೆ ಹೋಗಲು, ತಿರುಗಾಡಲು, ಕುಟುಂಬದ ಕೆಲಸಗಳ ಸಂಪೂರ್ಣ ಜವಾಬ್ದಾರಿ ವಹಿಸಿಕೊಳ್ಳಲು ಅರ್ಹಳಾದಂತೆ ಎಂದು ಭಾವಿಸುತ್ತಾರೆ.

ನಾಮಕರಣ

ನಾಮಕರಣ ಆಚರಣೆ ಕಾರ್ಯವನ್ನು ಗಂಡು ಮಗುವಿಗೆ ೧೨ನೇ ದಿನದಲ್ಲಿ ಮತ್ತು ಹೆಣ್ಣು ಮಗುವಿಗೆ ೧೩ನೇ ದಿನದಲ್ಲಿ ಆಚರಿಸುತ್ತಾರೆ. ತೊಟ್ಟಿಲನ್ನು ಶೃಂಗರಿಸಿ ಬಾಣಂತಿಗೆ ಹಾಗೂ ಮಗುವಿಗೆ ನೀರು ಹಾಕಿ, ಬಾಣಂತಿ ಕೈಯಿಂದ ೫ ಧಾನ್ಯಗಳಿಗೆ ನೀರು ಚಿಮುಕಿಸಿ ಗುಗ್ಗರಿ ತಯಾರಿಸುತ್ತಾರೆ. ನಾಮಕರಣಕ್ಕೆ ಬಂದವರಿಗೆ ಗುಗ್ಗರಿಯನ್ನು ಕೊಡಲಾಗುವುದು. ನಾಮಕರಣವು ಮುಸ್ಸಂಜೆಯ ವೇಳೆಗೆ ಕಾರ್ಯಾರಂಭವಾಗುವುದರಿಂದ ಬಂಧುಗಳು ಮತ್ತು ಓಣಿಯ ನೆರೆ-ಹೊರೆಯವರು ಆ ವೇಳೆಗಾಗಲೇ ಬಂದು ಸೇರಿಕೊಳ್ಳುತ್ತಾರೆ. ಹೆಸರಿಡುವುದಕ್ಕಿಂತ ಮುಂಚೆ ಕರಿಯ ಕಂಬಳಿ ಹಾಸಿ ಗದ್ದುಗೆ ತಯಾರು ಮಾಡಿ ಗದ್ದುಗೆ ಪೂಜೆ ಮಾಡಲಾಗುತ್ತದೆ. ಪೂಜೆಯ ನಂತರ ಹೊಸ ಬಟ್ಟೆಗಳನ್ನು ತೊಟ್ಟ ತಾಯಿ ಮತ್ತು ಮಗುವನ್ನು ಗದ್ದುಗೆಯ ಮೇಲೆ ಕೂಡಿಸಿ ಕುಂಕುಮ ಮತ್ತು ಭಂಡಾರ ಹಚ್ಚಲಾಗುವುದು. ಇದಾದ ಮೇಲೆ ಮುತ್ತೈದೆಯರು ಮಗುವನ್ನು ತೊಟ್ಟಿಲಲ್ಲಿ ಹಾಕಿ ಸೋದರ ಮಾವನಿಗೆ ಹೆಸರಿಡಲು ಅನುವು ಮಾಡಿಕೊಡುವರು. ಹೆಸರಿಡುವಾಗ ಸೋದರಮಾವ ಮಗುವಿರುವ ತೊಟ್ಟಿಲ ಸುತ್ತ ಮೂರು ಸುತ್ತು ತಿರುಗಬೇಕು. ಆ ಮಗುವಿನ ಕಿವಿಯೊಳಗೆ ಜೋರಾಗಿ ಹೆಸರನ್ನು ಮೂರು ಸಲ ಕೂಗಬೇಕು. ಮೊದಲ ಸುತ್ತಿನಲ್ಲಿ ಮಗುವಿನ ಕಿವಿಯಲ್ಲಿ ಗಂಡು ಮಗುವಾಗಿದ್ದರೆ ಗಂಡು ದೇವರ ಹೆಸರು ಕೂಗಬೇಕು, ಹೆಣ್ಣಾಗಿದ್ದರೆ ಹೆಣ್ಣು ದೇವತೆಯ ಹೆಸರು ಕೂಗಬೇಕು. ಎರಡನೆಯ ಸುತ್ತಿನಲ್ಲಿ ತಮ್ಮ ಹಿರಿಯರ ಹೆಸರುಗಳನ್ನು ಮೂರು ಸಲ ಕೂಗಬೇಕು. ಕೊನೆಯ ಸುತ್ತಿನಲ್ಲಿ ಮಗುವಿನ ಕುಟುಂಬದವರು ನಿರ್ಧರಿಸಿದ ಹೆಸರನ್ನು ಮೂರು ಸಲ ಕೂಗಿದರೆ ಮಗುವಿನ ಹೆಸರಿಡುವ ಕಾರ್ಯ ಮುಗಿಯುತ್ತದೆ. ಸಾಮಾನ್ಯವಾಗಿ ಅಲೆಮಾರಿ ಕುರುಬರು ತಮ್ಮ ಮಗುವಿನ ಹೆಸರಿಡುವಾಗ ಮನೆದೇವರು ಅಥವಾ ಹಿರಿಯರ ಹೆಸರಿಡುವುದು ವಾಡಿಕೆಯಾಗಿದೆ. ನಿದರ್ಶನಕ್ಕೆ ಕೆಲವು ಹೆಸರುಗಳು ಈ ಕೆಳಗಿನಂತಿರುವುದನ್ನು ಗಮನಿಸಬಹುದು.

ದೇವರ ಹೆಸರು	ಮನುಷ್ಯರ ಹೆಸರು
ಬೀರದೇವರು	ಬೀರಪ್ಪ
ಲಕ್ಷ್ಮಿ	ಲಘುಮವ್ವ, ಲಘುಮಣ್ಣ
ಮಾಳಿಂಗರಾಯ	ಮಾಳಪ್ಪ, ಮಾಳವ್ವ
ಹಾಲಸಿದ್ಧ	ಹಾಲಪ್ಪ, ಹಾಲವ್ವ, ಸಿದ್ದಪ್ಪ
ಕರಿಸಿದ್ದ	ಸಿದ್ದಪ್ಪ, ಕರಿಯಪ್ಪ
ಮಾಯಮ್ಮ	ಮಾಯವ್ವ, ಮಾಯಕ್ಕ, ಮಾಯಪ್ಪ
ರೇವಣಸಿದ್ಧೇಶ್ವರ	ರೇವಣ್ಣ
ಅಮೋಘಸಿದ್ಧ	ಸಿದ್ದಪ್ಪ, ಅಮೋಘ ಇತ್ಯಾದಿ

ಈ ಮೇಲಿನ ಹೆಸರುಗಳು ದೇವರ ಹೆಸರುಗಳು ಹಾಗೂ ಹಿರಿಯರ ಹೆಸರುಗಳಾಗಿರುವುದರಿಂದ ಅವನ್ನು ತಮ್ಮ ವಂಶದ ಕುಡಿಗಳಿಗೆ ಮುಂದುವರಿಸುತ್ತಾ ಹೋಗುತ್ತಾರೆ. ಈ ರೀತಿ ಪ್ರಚಲಿತವಿರುವ ಅವರ ನಂಬಿಕೆ ಗಾಢವಾದದು. ತಮ್ಮ ಹೆತ್ತವರ ಹೆಸರನ್ನು ಸ್ಮರಿಸಿಕೊಳ್ಳುವುದಕ್ಕಾಗಿ ಹಿರಿಯರ ಹೆಸರನ್ನು ಕರೆಯುವುದು ವಾಡಿಕೆಯಾಗಿದೆ. ಸತ್ತ ಹಿರಿಯರು ಮಕ್ಕಳ ರೂಪದಲ್ಲಿ ಮರುಜನ್ಮ ತಾಳಿ ಅವತರಿಸುತ್ತಾರೆಂಬುದನ್ನು ಇವರು ನಂಬುತ್ತಾರೆ. ಆದರೆ ಇಂದು ಆಧುನಿಕತೆಯ ಪ್ರಭಾವದಿಂದ ಹೆಸರುಗಳು ಆಧುನಿಕರಣಗೊಂಡಿವೆ. ಉದಾಹರಣೆಗೆ ಮಂಜು, ಸಂತೋಷ, ಸಂಗೀತ, ರೇಖಾ ಇತ್ಯಾದಿ ಹೆಸರುಗಳನ್ನಿಟ್ಟು ಕರೆಯುತ್ತಾರೆ.

ಕಿವಿ ಚುಚ್ಚುವುದು : ಮಗು ಜನಿಸಿದ ಮೂರು ತಿಂಗಳಲ್ಲಿ ಒಳ್ಳೆಯ ವಾರ ನೋಡಿ ಅಂದರೆ ಆದಿತ್ಯವಾರ ಅಥವಾ ಮನೆದೇವರುಗಳ ದಿನದಂದು ಕಿವಿ ಚುಚ್ಚುವರು. ಕಿವಿ ಚುಚ್ಚಲು ಅಂದು ಅಕ್ಕಸಾಲಿಗನಿಗೆ ಮನೆಗೆ ಬರಹೇಳುವರು. ಅಕ್ಕಸಾಲಿಗನು ಮನೆಗೆ ಬಂದ ಮೇಲೆ ಮಗುವನ್ನು ಕಂಬಳಿಯ ಮೇಲೆ ಕೂಡಿಸಿ ಭಂಡಾರ ಹಚ್ಚುವರು. ಆತನು ತಾಮ್ರದ ಕಡ್ಡಿಯ ಸಹಾಯದಿಂದ ಕಿವಿ ಚುಚ್ಚುವುದು ಸಾಮಾನ್ಯ. ಇವರಲ್ಲಿ ಕೆಲವರು ತಮ್ಮ ಮಕ್ಕಳಿಗೆ ಕಿವಿಯ ಎರಡು ಭಾಗದಲ್ಲಿ ಅಂದರೆ ಕೆಳಗಿವಿ ಮತ್ತು ಮೇಲ್ಗಿವಿ ಭಾಗದಲ್ಲಿ ಕಿವಿ ಚುಚ್ಚುತ್ತಾರೆ. ಈಗ ಹೆಚ್ಚಾಗಿ ಕೆಳಗಿವಿಗೆ ಮಾತ್ರ ಚುಚ್ಚುವುದನ್ನು ಕಾಣುತ್ತೇವೆ. ಕೊಬ್ಬರಿ, ಗೋಧಿ, ಬೆಲ್ಲ, ಹಿಟ್ಟು, ಎಲೆ-ಅಡಿಕೆ ಹಾಗೂ ದಕ್ಷಿಣೆಯಾಗಿ ಹಣವನ್ನು ಕಾಣಿಕೆಯಾಗಿ ಅಕ್ಕಸಾಲಿಗನಿಗೆ ನೀಡುತ್ತಾರೆ.

ಜವಳ

ಜನಿಸಿದ ಮಗು ಗಂಡಾಗಲಿ ಅಥವಾ ಹೆಣ್ಣಾಗಲಿ ಜನಿಸಿದಾಗಿನಿಂದ ಕಾಯ್ದಿಟ್ಟ ಕೂದಲನ್ನು ತೆಗೆಯುವುದಕ್ಕೆ ಜವಳ ತೆಗೆಯುವುದು ಎನ್ನುವರು. ಈ ಕಾರ್ಯವನ್ನು ಅಲೆಮಾರಿ ಕುರುಬರು ಇ

ಅಥವಾ ೫ ವರ್ಷದಲ್ಲಿ ನೆರವೇರಿಸುವರು. ತಮ್ಮ ಮಗುವಿನ ಜವಳ ತೆಗೆಸುತ್ತೇವೆಂದು ದೇವರಿಗೆ ಹರಕೆ ಹೊತ್ತುಕೊಂಡಿದ್ದರೆ, ಅಂಥವರು ಶುಭದಿನ ನೋಡಿ ಹರಕೆ ಹೊತ್ತ ದೇವಸ್ಥಾನದಲ್ಲಿ ತೆಗೆಸುವರು, ಇಲ್ಲವಾದರೆ ಮನೆಯಲ್ಲಿಯೇ ತೆಗೆಸುವ ವ್ಯವಸ್ಥೆ ಮಾಡುವರು. ಕೂದಲು ತೆಗೆಯುವಾಗ ಮಗುವನ್ನು ಕರಿಯ ಕಂಬಳಿಯ ಮೇಲೆ ಕೂಡಿಸಿ ಹಣೆಗೆ ಭಂಡಾರ ಹಚ್ಚುವುದು ವಾಡಿಕೆಯಾಗಿದೆ. ಪೂಜೆಗಾಗಿ ದವಸಧಾನ್ಯ, ಎಲೆ-ಅಡಿಕೆ ಹಾಗೂ ೧೧.೦೦ ರೂ.ಗಳನ್ನು ದಕ್ಷಿಣೆಯಾಗಿಟ್ಟು ಪೂಜೆ ಮಾಡುವರು. ಮಗುವಿನ ತಲೆಗೂದಲನ್ನು ಪ್ರಥಮ ಬಾರಿಗೆ ತೆಗೆಯುವ ಸಂದರ್ಭವಾದ್ದರಿಂದ ಸೋದರಮಾವನು ವೀಳ್ಯೆದೆಲೆ ಹಿಡಿದು ನೆಪಮಾತ್ರಕ್ಕೆ ಮುಟ್ಟಿಸುವುದು ರೂಢಿ-ಸಂಪ್ರದಾಯವಾಗಿದೆ. ಪ್ರೀತಿಗಾಗಿ ಅವನಿಗೆ ಹೊಸಬಟ್ಟೆ ಉಡುಗೊರೆಯಾಗಿ ನೀಡುವರು. ಇದಾದ ನಂತರ ಅಥವಾ ಮುಂದೊಂದು ದಿನ ಕ್ಷೌರಿಕನು ಹುಟ್ಟು ಕೂದಲನ್ನು ತೆಗೆಯುವನು. ಪ್ರತಿಯಾಗಿ ಅಕ್ಕಿ, ಬೆಲ್ಲ, ಬೇಳೆ, ಕೊಬ್ಬರಿ ಮತ್ತು ಎಲೆ-ಅಡಿಕೆ ಹಾಗೂ ದಕ್ಷಿಣೆಯಾಗಿ ಹಣವನ್ನು ನೀಡುವ ಪದ್ಧತಿಯನ್ನು ಅನುಸರಿಸಿಕೊಂಡು ಬಂದಿದ್ದಾರೆ.

ಋತುಮತಿ

ಸೃಷ್ಟಿಯ ನಿಯಮದಂತೆ ವಯಸ್ಸಿಗೆ ಬಂದ ಹೆಣ್ಣು ಮೈನೆರೆಯುವುದು ಸಹಜ ಹಾಗೂ ಸ್ವಾಭಾವಿಕ ಪ್ರಕ್ರಿಯೆಯಾಗಿದೆ. ಪ್ರಕೃತಿಯ ಮಡಿಲಲ್ಲಿಯೇ ಹೆಣ್ಣು ಮಗಳೊಬ್ಬಳು ವಯಸ್ಸಿಗೆ ಬರುವುದನ್ನು ಅಲೆಮಾರಿ ಕುರುಬರು ಮೈನೆರೆದಳು ಎಂದು ಕರೆದರೆ ಇತರರು ದೊಡ್ಡವಳಾದಳು, ಋತುಮತಿಯಾದಳೆಂದು ಕರೆಯುತ್ತಾರೆ. ಋತುಮತಿಯಾದ ೧೦ ದಿನಗಳವರೆಗೆ ಮೈಲಿಗೆಯೆಂದು ಪರಿಗಣಿಸಿ ಅವಳಿಗೆ ಪ್ರತ್ಯೇಕ ವಾಸಕ್ಕೆ ವ್ಯವಸ್ಥೆ ಮಾಡುವರು. ಹುಡುಗಿಯ ಸೋದರತ್ತೆಯ ಕೈಯಿಂದ ನೀರು ಹಾಕಿಸುವರು. ಇವರ ಹೆಣ್ಣು ಮಗಳು ಬಿಡಾರ ಹೂಡಿದ ಅಡವಿಯಲ್ಲೇ ಹೆಚ್ಚಾಗಿ ಮೈನೆರೆಯುವದರಿಂದ ಹತ್ತು ದಿನಗಳವರೆಗೆ ಗುಡಾರ ಬದಲಾಯಿಸುವುದಿಲ್ಲ. ಹತ್ತನೆ ದಿವಸ ಸ್ನಾನ ಮಾಡಿಸಿ ಸೋದರತ್ತೆ ಅಥವಾ ಸೋದರ ಮಾವ ತಂದ ಹೊಸ ಹಸಿರು ಸೀರೆ, ಕುಪ್ಪಸ ತೋಡಿಸಿ ತಲೆಗೆ ಹೂ ಮುಡಿಸಿ ನೀರು ಹರಿಯುವ ಸ್ಥಳಕ್ಕೆ ಹೋಗಿ ಗಂಗಾ ಪೂಜೆ ಸಲ್ಲಿಸಿ ಗುಡಾರಕ್ಕೆ ಬರುತ್ತಾರೆ. ನಂತರ ಆ ಹೆಣ್ಣಿಗೆ ಉಡಿ ತುಂಬಿ ತಮ್ಮ ಕುಲದೇವರಿಗೆ ಪೂಜೆ ಸಲ್ಲಿಸುವರು.

ಇವರು ತಮ್ಮ ಹೆಣ್ಣು ಮಕ್ಕಳಿಗೆ ಮೈ-ನೆರೆಯುವ ಮುಂಚೆ ಮದುವೆ ಮಾಡುವುದು ವಾಡಿಕೆ. ಹೆಣ್ಣು ಮೈನೆರೆತ ವಿಷಯವನ್ನು ಬಂಧು ಬಳಗದವರಿಗೆ ಹಾಗೂ ಗಂಡನ ಕುಟುಂಬದವರಿಗೆ ತಿಳಿಸುವರು. ಈ ವಿಷಯವನ್ನು ಗಂಡನ ಕುಟುಂಬದವರಿಗೆ ತಿಳಿಸಲು ಬಂದ ಬೀಗನಿಗೆ ಹೊಸ ಬಟ್ಟೆಯನ್ನು ಉಡುಗೊರೆಯಾಗಿ ಕೊಡಬೇಕು. ಗಂಡನ ಮನೆಯವರು ಈ ಸುದ್ದಿ ತಿಳಿದ ತಕ್ಷಣ ಗುಡಾರದಲ್ಲಿರುವವರಿಗೆ ಸಕ್ಕರೆ ಹಂಚುವರು. ವಿಷಯವನ್ನು ಗಂಡನಿಗೆ ನೇರವಾಗಿ ಹೇಳದೆ ಭಂಡಾರ

ಹಚ್ಚುವುದರ ಮುಖಾಂತರ ಮನವರಿಕೆ ಮಾಡಿಕೊಡುವ ಪದ್ಧತಿ ರೂಢಿಯಲ್ಲಿದೆ. ಒಂದು ವೇಳೆ ಆ ಹೆಣ್ಣು ಸ್ವಗ್ರಾಮದಲ್ಲಿ ಮೈನೆರೆತರೆ ಮತ್ತು ಅವರು ಸ್ಥಿತಿವಂತರಾಗಿದ್ದರೆ ಗಂಡನ ಕಡೆಯವರು, ಸೋದರ ಮಾವನವರು, ಬಂಧು ಬಳಗದವರು, ತಂದ ಹೊಸ ಸೀರೆಗಳನ್ನು ಮುಸ್ಸಂಜೆಯ ಸಮಯದಲ್ಲಿ ೫ ಅಥವಾ ೯ ದಿನಗಳವರೆಗೆ ಉಡಿಸಿ ಆರತಿ ಮಾಡುವರು. ಇದಕ್ಕೆ 'ಹೊಸಗಿ' ಮಾಡುವುದು ಎನ್ನುವರು. ಮದುವೆಯ ನಂತರ ಮೈ ನೆರೆತರೆ ತಿಂಗಳೊಳಗೆ, ಮೂರು ತಿಂಗಳಲ್ಲಿ ಅಥವಾ ವರ್ಷದೊಳಗೆ ಸೋಬಾನ ನೆರವೇರಿಸುವರು. ಅಂದು ಮುತ್ತೈದೆಯರು ಕಂಬಳಿ ಹಾಸಿ ಗದ್ದುಗೆ ಹಾಕಿ ಹೊಸ ಬಟ್ಟೆ ತೊಟ್ಟ ದಂಪತಿಗಳನ್ನು ಕೂಡಿಸಿ ಆರತಿ ಬೆಳಗುತ್ತಾರೆ ಹಾಗೂ ಅದರೊಂದಿಗೆ ಸೋಬಾನ ಹಾಡುಗಳನ್ನು ಹಾಡುವ ಸಂಪ್ರದಾಯವಿರುವುದು.

ಮದುವೆ

ಎಲ್ಲಾ ಸಮುದಾಯಗಳಲ್ಲೂ ಮದುವೆ ಎಂಬ ಉದ್ದೇಶ ಒಂದೇ ಆಗಿದ್ದರೂ ಅದರ ಆಚರಣೆ ಮಾತ್ರ ಒಂದೇ ತೆರನಾಗಿಲ್ಲ. ಸಮುದಾಯ ನೆಲೆಗೊಂಡ ಪರಿಸರ, ಬದುಕಿನ ಸ್ಥಿತಿಗತಿ, ಸಾಮಾಜಿಕ ಮನೋಧರ್ಮ, ನಂಬಿಕೆ, ಪದ್ಧತಿ ಇತ್ಯಾದಿ ಅಂಶಗಳಿಗುಣವಾಗಿ ಆಚರಣೆಗಳು ಭಿನ್ನ ರೂಪ ತಾಳುತ್ತವೆ. ನಿರ್ದಿಷ್ಟ ಸಮುದಾಯವೊಂದರಲ್ಲಿ ಜರುಗುವ ಮದುವೆ ಆಚರಣೆಗಳು ಆ ಸಮುದಾಯದ ಸಂಸ್ಕೃತಿಯನ್ನು ತೋರಿಸಿಕೊಡುತ್ತವೆ. ಮದುವೆ ಆ ಸಮುದಾಯದ ಒಂದು ಸಾಂಸ್ಕೃತಿಕ ಕ್ರಿಯೆ ಯಾಗಿದೆ. ಇಲ್ಲಿ ಸಮುದಾಯದ ಬಹುಪಾಲು ಜನರು ಆ ಕ್ರಿಯೆಯಲ್ಲಿ ಭಾಗಿಯಾಗುವುದನ್ನು ಕಾಣಬಹುದು.

ಕಾಲಕ್ಕನುಗುಣವಾಗಿ ಹಲವು ಪ್ರಭಾವಗಳಿಗೆ ಒಳಗಾಗಿ ಸಂಸ್ಕೃತಿ ಬದಲಾದಂತೆ ಈ ಆಚರಣೆ ಯಲ್ಲಿ ಬದಲಾವಣೆಯಾಗುವುದು ಸಹಜ. "ಪ್ರಕೃತಿಗೆ ಸಾಮಿಪ್ಯವಾದ ಕುರಿ ಕಾಯುವುದನ್ನು ಪರಂಪರಾಗತವಾಗಿ ಜೀವನಾಧಾರ ಉದ್ಯೋಗವನ್ನಾಗಿ ಮುಂದುವರೆಸಿಕೊಂಡು ಬಂದಿರುವ ಕುರುಬರ ಮದುವೆ ಆಚರಣೆಗಳು ತೀರಾ ಸಂಪ್ರದಾಯಬದ್ಧವಾಗಿವೆ"(ಶಿವಾನಂದ ಗುಬ್ಬಣ್ಣನವರ:೧೯೯೩:೨೧). ಈಗಲೂ ಸಹ ಹಳೆಯ ಸಂಪ್ರದಾಯಗಳಾದ ಕುರಿಬಲಿ, ದೈವದ ಊಟ, ಪ್ರಪಂಚವನ್ನು ಕಂಡು ಅರಿಯದ ಕಂದಮ್ಮಗಳಿಗೆ ತಾಳಿಕಟ್ಟಿ ಸಂಸಾರದಲ್ಲಿ ತೇಲಿ ಬಿಡುವ ಆಚರಣೆ ಇನ್ನೂ ಜೀವಂತ ಸಾಕ್ಷಿಯಾಗಿವೆ.

ಮದುವೆ ಮನುಷ್ಯ ಜೀವನದ ಮಹತ್ವದ ಘಟ್ಟವಾಗಿದ್ದು, ಗಂಡು-ಹೆಣ್ಣುಗಳನ್ನು ಒಂದುಗೂಡಿಸುವ ಶಿಷ್ಟಾಚಾರಕ್ಕೆ ಹಿರಿಯರು ಮದುವೆಯೆಂದು ಕರೆದರು. ಅಲೆಮಾರಿ ಕುರುಬರಲ್ಲಿ ಪ್ರಮುಖವಾಗಿ ಎರಡು ಪಂಗಡಗಳಿವೆ. ಅವು ಒಂದು ಹತ್ತಿಕಂಕಣ ಮತ್ತೊಂದು ಉಣ್ಣೆ ಕಂಕಣ. ಇವೆರಡರ ನಡುವೆ ಹೆಣ್ಣು ಕೊಟ್ಟು, ತರುವ ಸಂಬಂಧ ನಿಷೇಧವಾಗಿದೆ. ಈ ಎರಡು ಪಂಗಡದವರು

ನೂರಾರು ವರ್ಷಗಳ ಹಿಂದೆ ಅಣ್ಣ-ತಮ್ಮಂದಿರಾಗಿದ್ದಾರೆಂಬ ಕಾರಣ ಮುಂದೆ ಮಾಡಿ ಪರಸ್ಪರ ವೈವಾಹಿಕ ಸಂಬಂಧಗಳನ್ನು ನಿಲ್ಲಿಸಿದ್ದಾರೆ. ಈ ಎರಡು ಪ್ರಧಾನ ಪಂಗಡಗಳಲ್ಲಿ ಹಲವಾರು ಬೆಡಗುಗಳಿದ್ದು ಒಂದೇ ಬೆಡಗಿನೊಳಗೆ ಮದುವೆಯಾಗುವುದಿಲ್ಲ, ಒಂದೇ ಬೆಡಗಿನವರು ಎಲ್ಲಿಂದ ಎಲ್ಲಿಗೆ ಹೋದರೂ ಅಣ್ಣ ತಮ್ಮಂದಿರಾಗುತ್ತಾರೆ ವಿನಹಃ ನೆಂಟರಾಗುವುದಿಲ್ಲ.

ಅಲೆಮಾರಿ ಕುರುಬರ ಮದುವೆ ಆಚರಣೆಗಳು ನಾಲ್ಕು ಹಂತಗಳಲ್ಲಿ ಘಟಿಸುತ್ತವೆ. ಅವನ್ನು, ಪ್ರಾಥಮಿಕ ಶಾಸ್ತ್ರಾಚರಣೆಗಳು, ಸಿದ್ಧಾತ ಆಚರಣೆಗಳು, ಪ್ರಧಾನ ಆಚರಣೆಗಳು ಮತ್ತು ಪೂರಕ ಶಾಸ್ತ್ರಾಚರಣೆಗಳೆಂದು ವಿಂಗಡಿಸಲಾಗುವುದು.

೧. ಪ್ರಾಥಮಿಕ ಶಾಸ್ತ್ರಾಚರಣೆಗಳು

ಅ. ಕುರಿ ಬೇಟೆ : ಅಲೆಮಾರಿ ಕುರುಬರು ತಮ್ಮ ಗಂಡು ಮಕ್ಕಳ ಮದುವೆ ಮಾಡುವಾಗ ಹೆಣ್ಣು ದೇವತೆಯಾದ ಸತ್ಯಬಾಯಿ ಹೆಸರಿನಲ್ಲಿ 'ಕುರಿ ಬ್ಯಾಟಿ' ಮಾಡುತ್ತಾರೆ. ಇದನ್ನು ೩ ತಿಂಗಳ ಮಗುವಿನಿಂದ ಹಿಡಿದು ಮದುವೆಯಾಗುವ ಇಪ್ಪತ್ತರಿಂದ ಇಪ್ಪತ್ತೈದು ವರ್ಷ ಯುವಕರವರೆಗೆ ಮಾಡುವುದು ರೂಢಿ. ಇದಾದ ಮೇಲೆ ಮದುವೆಯಾಗಲು ಅರ್ಹ, ನಂತರ ತಮಗೆ ಅನುಕೂಲ ವೆನಿಸಿದಾಗ ಮದುವೆ ಮಾಡಬಹುದು. ಖರ್ಚು ಕಡಿಮೆ ಮಾಡುವ ದೃಷ್ಟಿಯಿಂದ ಬಹುತೇಕರು ಸಾಮೂಹಿಕವಾಗಿ ಬ್ಯಾಟಿ ಮಾಡುತ್ತಾರೆ. ಸಾಮೂಹಿಕ ಬೇಟೆ ನಡೆಯುವಾಗಲೂ ನಿರ್ದಿಷ್ಟ ಬೆಡಗಿನ ಅಣ್ಣ-ತಮ್ಮಂದಿರು ಮಾತ್ರ ಗುಂಪಾಗಿ ಸೇರಿ ಆಚರಣೆ ಮಾಡುತ್ತಾರೆ. ಒಂದು ವೇಳೆ ಅವರು ಬಹಳ ದೂರವಿದ್ದರೂ ಆ ದೇವರ ಹೆಸರಿನಲ್ಲಿ ಕುರಿಬಲಿ ಕೊಟ್ಟು ಆ ದೇವತೆಗೆ ಪೂಜೆ ಮಾಡಿಕೊಂಡು ಬರಬೇಕು.

ದೇವತೆಯನ್ನು ಗುಡಿಯಿಂದ ಡೊಳ್ಳು ಸಮೇತ ಗಂಗೆ ಇರುವಲ್ಲಿಗೆ ಹೊರಡಿಸಿಕೊಂಡು ಹೋಗಿ ಗಂಗಾಸ್ನಾನವನ್ನು ಮಾಡಿಸುತ್ತಾರೆ. ಗಂಗಾಸ್ನಾನವಾದ ಮೇಲೆ ಅಲ್ಲಿಂದ ಡೊಳ್ಳು ಸಮೇತ ದೇವತೆಯನ್ನು ಗುಡಿಗೆ ತರುತ್ತಾರೆ. ದೇವತೆ ಗುಡಿಗೆ ಬಂದ ಮೇಲೆ ನಾಲ್ಕು ಹೊಸ ಮಣ್ಣಿನ ಬಿಂದಿಗೆಗಳಲ್ಲಿ ನೀರು ತಂದು ಚೌಕಾಕಾರದಲ್ಲಿಟ್ಟು ಅದಕ್ಕೆ ಸುತ್ತಲೂ ಐದು ಸುತ್ತು ಹತ್ತಿನೂಲು ಸುತ್ತುವರು. ಇದಕ್ಕೆ ಸುರಿಗೆ ಸುತ್ತುವುದು ಎನ್ನುವರು. ಮದುವೆಯಾಗುವ ಗಂಡಿಗೆ ಸ್ನಾನ ಮಾಡಿಸಿ ಹೊಸಬಟ್ಟೆ ತೊಡಿಸಿ ಸುರಿಗೆಯೊಳಗೆ ಕೂಡಿಸುವರು. ನಂತರ ಸುರಿಗೆಯಿಂದ ಏಳಿಸಿ ಅವರ ತಂದೆ ತಾಯಿಗಳನ್ನು ಮತ್ತು ಅವರನ್ನು ಒಂದೆಡೆ ಜೊತೆಯಾಗಿ ಕೂಡಿಸಿ ಬಂಧು-ಬಳಗದವರೆಲ್ಲಾ ಸೇರಿಕೊಂಡು ಅವರಿಗೆ ಭಂಡಾರ ಹಚ್ಚುತ್ತಾರೆ. ಆ ದಿನ ಮದುವೆಯಾಗುವ ಅಣ್ಣತಮ್ಮಂದಿರ ಮಕ್ಕಳೆಲ್ಲ ಒಂದೊಂದು ಬ್ಯಾಟಿಯನ್ನು ಮಾಡಲೇಬೇಕು. ಆ ಬ್ಯಾಟಿಯ ಜೊತೆಗೆ ಜೋಳದ ಸಂಗಟಿ, ಜೋಳದ ಅನ್ನ ಮಾಡಿ ಬಂದ ಬಂಧು-ಬಳಗದವರು ಹಾಗೂ ಊರಿನ ಜನರಿಗೆ ಊಟಕ್ಕೆ ನೀಡಬೇಕು. ಇತ್ತೀಚೆಗೆ ಜೋಳದ ಸಂಗಟಿ ಬದಲಾಗಿ ಅಕ್ಕಿಯ ಅನ್ನವನ್ನು ಮಾಡುತ್ತಿದ್ದಾರೆ.

"ನಮ್ಮಲ್ಲಿ ದೇವತೆಗೆ ಕುರಿಬ್ಯಾಟಿ ಮಾಡಿದ ಮೇಲೆ ಹುಡುಗ ಮದುವೆಯಾಗಲು ಅರ್ಹನಾದಂತೆ. ಇದಾದ ಮೇಲೆ ಮದುವೆ ಮುಗಿದ ಹಾಗೆ. ನಂತರ ಅವರು ವರ್ಷದೊಳಗೆ, ಮೂರು ವರ್ಷ ಅಥವಾ ಐದು ವರ್ಷದಲ್ಲಿ ಮದುವೆ ಮಾಡಿಕೊಳ್ಳಬಹುದು"(ಮಾಹಿತಿದಾರ: ಲಿಂಗಪ್ಪ ಸಾವಿರಕುರಿ, ನವಿಲಿಹಾಳ್). ಖರ್ಚು ಕಡಿಮೆ ಮಾಡುವ ಉದ್ದೇಶದಿಂದ ಮೂರು ವರ್ಷದ ಗಂಡು ಮಗವಿಗೂ ಈ ಕಾರ್ಯಕ್ರಮವನ್ನು ಇತರೆ ಗಂಡು ಮಕ್ಕಳ ಜೊತೆಗೆ ಕೂಡಿಸಿ ಮಾಡಿ ಮುಗಿಸುತ್ತಾರೆ ಇದಾದ ಮೇಲೆ ಅವರು ಮದುವೆಯನ್ನು ಬೆಳೆದು ದೊಡ್ಡವನಾದ ಮೇಲೆ ಮಾಡಿಕೊಳ್ಳಬಹುದು. ಆದರೆ ಹಿಂದೆ ಈ ಕಾರ್ಯ ಮಾಡಿದ ಮೂರು ವರ್ಷದ ಮಗುವಿಗೆ ಆ ವರ್ಷದಲ್ಲಿಯೇ ಮದುವೆ ಮಾಡಿಬಿಡುತ್ತಿದ್ದರಂತೆ. ಈಗಲೂ ಬಹಳಷ್ಟು ಕುಟುಂಬಗಳು ಬಾಲ್ಯವಿವಾಹವನ್ನು ಆಚರಿಸುತ್ತವೆ.

ಆ. ಸಂಗಾತಿಯ ಆಯ್ಕೆ : ಸಂಗಾತಿ ಆಯ್ಕೆಗೆ ಸಂಬಂಧಿಸಿದಂತೆ ಈ ಸಮುದಾಯದ ಯುವಕ ಯುವತಿಯರಿಗೆ ಸಂಪೂರ್ಣ ಸ್ವಾತಂತ್ರ್ಯವಿಲ್ಲ. ಸಂಗಾತಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ಕುಟುಂಬದ ಹಿರಿಯರು, ಸಂಬಂಧಿಕರು ಮತ್ತು ತಂದೆ-ತಾಯಿಗಳ ತೀರ್ಮಾನವೇ ಪ್ರಮುಖವಾಗಿರುತ್ತದೆ. ಪ್ರಸ್ತುತ ಅಧ್ಯಯನಕಾರನಿಗೆ ಕಂಡುಬಂದಿರುವಂತೆ ಸಂಗಾತಿಗಳ ಆಯ್ಕೆಯನ್ನು ಬಹುಪಾಲು ಹಿರಿಯರೆ ಮಾಡುತ್ತಾರೆ. ಹಿರಿಯರು ಒಪ್ಪಿದವರನ್ನು ಗಂಡು ಅಥವಾ ಹೆಣ್ಣು ಮದುವೆಯಾಗಬೇಕಾಗುತ್ತದೆ. ಕೆಲವು ಸಲ ಗಂಡಿನ ಬಗ್ಗೆ ಹೆಣ್ಣಿನ ಒಪ್ಪಿಗೆಯನ್ನು ಪಡೆದಿರುವುದಿಲ್ಲ. ಹೆಣ್ಣಿನ ಬಗ್ಗೆ ಗಂಡಿನ ಒಪ್ಪಿಗೆಯನ್ನು ಕೇಳುವುದಿಲ್ಲ. ಎಷ್ಟೋ ಸಂದರ್ಭಗಳಲ್ಲಿ ವಧು-ವರರು ಒಬ್ಬರಿಗೊಬ್ಬರು ಮುಖ ನೋಡುವುದು ಮದುವೆಯ ದಿನದಂದೇ ಆಗಿರುತ್ತದೆ. ಸಂಗಾತಿಗಳ ಆಯ್ಕೆಯ ವಿಷಯದಲ್ಲಿ ವಧು-ವರರಿಗೆ ಆಯ್ಕೆಗಳು ಕಡಿಮೆ ಇದ್ದು, ಸಮುದಾಯದ ಹಿರಿಯರದೇ ಮುಖ್ಯಪಾತ್ರವಿರುತ್ತದೆ. ಇವರು ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವಾಗ ಹೆಣ್ಣು ದೈಹಿಕವಾಗಿ ಗಟ್ಟಿ-ಮುಟ್ಟಾಗಿದ್ದು ಚಟುವಟಿಕೆಯಿಂದ ಕೆಲಸ-ಕಾರ್ಯಗಳನ್ನು ಮಾಡುವಂಥವಳನ್ನು ಆಯ್ಕೆ ಮಾಡುತ್ತಾರೆ. ಅಡವಿಯಲ್ಲಿ ಕುರಿ-ಮರಿ ಹಾಗೂ ಮಕ್ಕಳ ಪೋಷಣೆ ಜೊತೆಗೆ ಕುಟುಂಬದ ಕೆಲಸ ಕಾರ್ಯಗಳನ್ನು ನಿಭಾಯಿಸಿಕೊಂಡು ಹೋಗಬೇಕಾಗಿರುವುದರಿಂದ ಚಟುವಟಿಕೆಯಿಂದ ಕೂಡಿದ ಹೆಣ್ಣನ್ನೆ ಆಯ್ಕೆ ಮಾಡುವರು. ಕನ್ಯಾ ಆಯ್ಕೆ ಮಾಡುವಾಗ ಹುಡುಗಿಯ ಸೌಂದರ್ಯಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡದೆ, ಆ ಮನೆತನದ ಗೌರವ, ಹುಡುಗಿಯ ಲಕ್ಷಣಗಳು ಹಾಗೂ ತಮ್ಮ ಮನೆಗೆ ಹೊಂದಿಕೊಳ್ಳುವ ಅಂಶಗಳನ್ನು ಆಧಾರವಾಗಿಟ್ಟು ಕೊಳ್ಳಲಾಗುತ್ತದೆ.

ಇ. ಕನ್ಯೆ(ವಧು) ನೋಡುವುದು : ಇವರು ಸಾಮಾನ್ಯವಾಗಿ ಸಂಬಂಧವನ್ನು ಬಳಗದಲ್ಲೆ ಬೆಳೆಸುತ್ತಾರೆ. ಮಾವನ ಮಗಳು, ಅಕ್ಕನ ಮಗಳು, ತಂಗಿಯ ಮಗಳನ್ನು ಸೊಸೆಯಾಗಿ ಮಾಡಿಕೊಳ್ಳುತ್ತಾರೆ. "ಕನ್ಯೆ ತಮ್ಮ ಬಳಗದಲ್ಲೇ ಇರಲಿ ಅಥವಾ ಹೊರಗಿನವರೆ ಆಗಲಿ ಕನ್ಯೆಯನ್ನು

ತಂದುಕೊಳ್ಳಬೇಕೆಂದು ಇಚ್ಛಿಸಿದಾಗ ಬ್ರಾಹ್ಮಣ ಆಚಾರಿಗಳು ಅಥವಾ ಲಿಂಗಾಯಿತ ಜಂಗಮರ ಹತ್ತಿರ ಹೊತ್ತಿಗೆ ತೆಗೆಸಿ ಕೇಳುತ್ತಾರೆ. ಎಲ್ಲಾ ಒಳ್ಳೆಯದಾಗಿ ಕೂಡಿ ಬಂದರೆ ಶುಭ ದಿನವನ್ನು ನೋಡಿಕೊಂಡು ಕನ್ಯೆ ನೋಡಲಿಕ್ಕೆ ಹೋಗುತ್ತಾರೆ"(ಸಿದ್ಧರಾಮಯ್ಯ ಎಸ್.ಜಿ:೧೯೯೫:೧೫೬). ಕನ್ಯೆ ನೋಡಲಿಕ್ಕೆ ಹೊರಟಾಗ ಮೂರು ಜನ ಹೋಗುವಂತಿಲ್ಲ. ಮೂರಕ್ಕಿಂತ ಹೆಚ್ಚು ಜನರು ಹೋಗಬಹುದು. ಹೋಗುವ ಗುಂಪಿನಲ್ಲಿ ಮುತ್ತೈದೆ ಇರಲೇಬೇಕು. ವರನಾಗುವವ ಮದುವೆಯ ಪ್ರಾಯಕ್ಕೆ ಬಂದಿದ್ದರೆ ಅವನನ್ನು ಇತ್ತೀಚಿನ ದಿನಗಳಲ್ಲಿ ಕನ್ಯೆಯನ್ನು ನೋಡಲಿಕ್ಕೆ ಕರೆದುಕೊಂಡು ಹೋಗಿ ತೋರಿಸುತ್ತಾರೆ. ಇನ್ನೂ ಪ್ರಾಯಕ್ಕೆ ಬಂದಿರದಿದ್ದರೆ ಅವನಿಗೆ ತಿಳಿಯುವುದಿಲ್ಲವೆಂದು ಹಿರಿಯರೇ ನಿರ್ಧರಿಸುತ್ತಾರೆ.

ದಾರಿ ಶಕುನ : ಕನ್ಯೆ ನೋಡಲಿಕ್ಕೆ ಹೊರಟಾಗ ಹುಡುಗನ ಮನೆ ಬಿಟ್ಟು ಕನ್ಯೆಯ ಮನೆಯನ್ನು ಸೇರುವವರೆಗೆ ದಾರಿ ಶಕುನವನ್ನು ತುಂಬಾ ಎಚ್ಚರಿಕೆಯಿಂದ, ಜವಾಬ್ದಾರಿಯುತವಾಗಿ ಗಮನಿಸುತ್ತಾರೆ. ಆಗಲಿರುವ ಮದುವೆ ಸಂಬಂಧ ಗಟ್ಟಿಯಾಗುವುದರ ಜೊತೆಗೆ ಮುಂದೆ ಶುಭ ಅಥವಾ ಅಶುಭ ಎಂಬುದನ್ನು ತಿಳಿಯಬೇಕೆಂಬುದೇ ಅವರ ನಂಬಿಕೆಯಾಗಿದೆ. ದಾರಿಯುದ್ದಕ್ಕೂ ಶುಭ ಸೂಚನೆಗಳು ಕಂಡುಬಂದರೆ ಆ ಸಂಬಂಧದಿಂದ ಮುಂದೆ ಒಳ್ಳೆಯದಾಗುತ್ತದೆ. ಅಶುಭಗಳು ಕಂಡುಬಂದರೆ ಆ ಸಂಬಂಧ ಬೆಳೆಸುವುದು ಒಳ್ಳೆಯದಲ್ಲ. ಆ ಪ್ರಕಾರ ಹಾವು, ಬೆಕ್ಕು, ಬರಿಗೈಯ ಹಜಾಮ, ರಂಡೆಮುಂಡೆ, ಕಟ್ಟಿಗೆ ಹೊರೆ, ದಾರಿಗೆ ಅಡ್ಡ ಅಥವಾ ಎದುರು ಬಂದರೆ ಕೆಟ್ಟದ್ದು, ಕ್ಷೌರಿಕ ತನ್ನ ಸಾಮಾನುಗಳ ಸಮೇತ ಎದುರಿಗೆ ಬಂದರೆ, ಮುಂಗಲಿ ಕಂಡರೆ, ಬಸವೇರು, ಜಂಗಮರು ಎದುರು ಬಂದರೆ ಒಳ್ಳೆಯದು. 'ನರಿ ಕಂಡ್ಯೋ ಸಿರಿ ಕಂಡ್ಯೋ' ಎಂಬ ನಾಣ್ಣುಡಿಯಂತೆ ನರಿ ಕಂಡರಂತೂ ತುಂಬಾ ಒಳ್ಳೆಯದೆಂದು ಭಾವಿಸಲಾಗುತ್ತದೆ.

ದಾರಿ ನೋಡಿಕೊಂಡು ಕನ್ಯೆಯ ಮನೆಗೆ ಬಂದಾಗ ಕೆಲವು ಅಂಶಗಳನ್ನು ಗಮನಿಸುವುದುಂಟು. ಅವೆಂದರೆ ಕನ್ಯೆ ತಲೆ ಬಾಚಿಕೊಳ್ಳುತ್ತಿರಬಾರದು, ಬರಿಕೊಡವನ್ನಾಗಲಿ, ಬರಿಪುಟ್ಟಿಯನ್ನಾಗಲಿ ತೆಗೆದು ಕೊಂಡು ಎದುರಿಗೆ ಬರಬಾರದು. ಕಸ ಬಳಿಯುತ್ತಿದ್ದರೆ ತಂದುಕೊಂಡ ಮನೆ ಕಸ ಬಳಿದಂತಾಗುತ್ತದೆ. ಊಟ ಮಾಡುತ್ತಿದ್ದರೆ ರಾಕ್ಷಸಿ ಕುಲಕ್ಕೆ ಸೇರಿದ ಹೆಣ್ಣು ಎಂದು ಭಾವಿಸುತ್ತಾರೆ. ಕನ್ಯೆ ತುಂಬಿದ ಕೊಡ ತೆಗೆದುಕೊಂಡು ಎದುರಾದರೆ, ಪೂಜೆ ಮಾಡುತ್ತಿದ್ದರೆ, ಅಡುಗೆ ಮಾಡುತ್ತಿದ್ದರೆ, ಹಾಲು ಹಿಂಡುತ್ತಿದ್ದರೆ ತುಂಬಾ ಒಳ್ಳೆಯದೆಂದೂ ಅಂತಹ ಹೆಣ್ಣನ್ನು ತಂದುಕೊಳ್ಳುವುದರಿಂದ ಮನೆತನ ಅಭಿವೃದ್ಧಿಯಾಗುವುದೆಂದು ನಂಬಿಕೆ ಇದೆ.

ಈ. ಕನ್ಯೆಯ ಲಕ್ಷಣ ಪರೀಕ್ಷೆ : ದಾರಿ ಶಕುನಗಳು ಶುಭ ಕಂಡುಬಂದರೆ ನಂತರ ಗಮನಿಸುವ ಮುಂದಿನ ಅಂಶ ಕನ್ಯೆಯ ಅಂಗಲಕ್ಷಣಕ್ಕೆ ಸಂಬಂಧಿಸಿರುತ್ತದೆ. ಸುಳಿ ಶುದ್ಧ ಇದೆಯೊ ಇಲ್ಲವೋ

ಎಂಬುದನ್ನು ಪರೀಕ್ಷಿಸಿಯೆ ಕನ್ಯೆಯನ್ನು ಆಯ್ಕೆ ಮಾಡುತ್ತಾರೆ. ಕನ್ಯೆಗೆ ಎದುರು ಸುಳಿ ಇರಬಾರದು, ಎದುರು ಸುಳಿ ಇದ್ದರೆ ಕುಟುಂಬದ ಹಿರಿಯರಿಗೆ, ಗಂಡನಿಗೆ ಎದುರು ಮಾತಾನಾಡುತ್ತಾಳೆಂಬ ನಂಬಿಕೆ ಇದೆ. ಬೆರಳುಗಳು ಕಿರಿದಿರಬಾರದು, ಕಾಲು ದಪ್ಪವಾಗಿರಬಾರದು, ಮೊಣಕಾಲು ಬಡಿದಾಡ ಬಾರದು ಹಾಗೆಯೇ ಅಂಗೈ ನೋಡಿ ರೇಖೆ ಪರೀಕ್ಷಿಸಿ ಕನ್ಯೆಯನ್ನು ಮಾತನಾಡಿಸುತ್ತಾರೆ. "ಹೊಸ್ತಲಿ ದಾಟಿ ಬಾಮ್ಮ" ಎಂದು ಹೇಳುವ ಮೂಲಕ ಕಾಲು, ಬೆರಳು, ನಡಿಗೆಯನ್ನು ಪರೀಕ್ಷಿಸುತ್ತಾರೆ. ಈ ಎಲ್ಲಾ ಲಕ್ಷಣಗಳ ಪರೀಕ್ಷೆಯಲ್ಲಿ ಕನ್ಯೆ ಸರಿ ಹೊಂದಿ, ನೋಡಿದವರೆಲ್ಲರ ಮನಸ್ಸಿಗೆ ಸರಿಯೆನಿಸಿದರೆ ಆ ದಿನವೇ ಎಲೆ-ಅಡಿಕೆ, ಹಣ್ಣುಗಳಿಂದ ಉಡಿ ತುಂಬುತ್ತಾರೆ. ಇದು ಕನ್ಯೆಯನ್ನು ಒಪ್ಪಿರುವ ಸಂಕೇತ. ಇದಾದ ಮೇಲೆ ಚುರುಮುರಿ (ಮಂಡಕ್ಕಿ-ಕಾರ) ತಿಂದು ಚಹಾ ಕುಡಿದು ವರನ ಮನೆಯನ್ನು ನೋಡಲು ಕನ್ಯೆಯ ಕಡೆಯವರನ್ನು ಆಹ್ವಾನಿಸಿ ಹಿಂತಿರುಗುತ್ತಾರೆ. ಆದರೆ ಈ ಸಮಯದಲ್ಲಿ ಯಾವುದೇ ಕಾರಣಕ್ಕೂ ಕನ್ಯೆ ಮನೆಯಲ್ಲಿ ಊಟ ಮಾಡುವುದಿಲ್ಲ.

ಉ. ಹೆಣ್ಣಿನವರು ವರನ ಮನೆಗೆ ಬಂದಾಗ : ಗಂಡಿನ ಕಡೆಯವರಿಂದ ಆಹ್ವಾನವನ್ನು ಸ್ವೀಕರಿಸಿದ ನಂತರ ಒಂದು ಒಳ್ಳೆಯ ದಿನವನ್ನು ನೋಡಿಕೊಂಡು ಹೆಣ್ಣಿನ ಮನೆಯವರು ವರನ ಮನೆಗೆ ಬರುತ್ತಾರೆ. ಬರುವಾಗ ಗಂಡಿನ ಮನೆಯವರಂತೆ ಇವರೂ ಶಕುನಗಳನ್ನು ನಿರೀಕ್ಷಿಸುತ್ತಾರೆ. ಆದರೆ ಕನ್ಯೆಯ ಲಕ್ಷಣ ಪರೀಕ್ಷೆಗೆ ಈಡು ಮಾಡಿದಂತೆ ವರನನ್ನೂ ಪರೀಕ್ಷಿಸುವುದಿಲ್ಲ. ಗಂಡು ಮತ್ತು ಗಂಡಿನ ಮನೆತನ ಒಪ್ಪಿಗೆಯಾದರೆ ಮುಂದಿನ ಮಾತುಕತೆಯನ್ನಾಡುತ್ತಾರೆ. ಆ ಮಾತುಕತೆಗಳಲ್ಲಿ ವರನ ಕಡೆಯವರು ಕನ್ಯೆ ಹಾಗೂ ಕನ್ಯೆ ಮನೆಯವರಿಗೆ ಮದುವೆಯ ಸಮಯದಲ್ಲಿ ಕೊಡಬೇಕಾಗುವ ವಸ್ತು ವಿಶೇಷಗಳಿಗೆ ಸಂಬಂಧಿಸಿರುತ್ತದೆ. ಇವರು ಹಿಂದಿನ ಕಾಲದಲ್ಲಿ ಕನ್ಯೆಗೆ ನೂರರಿಂದ ಐದು ನೂರು ರೂಪಾಯಿಗಳವರೆಗೆ ತೆರವು ಕೊಟ್ಟು ಹೆಣ್ಣು ತರುವ ವಾಡಿಕೆ ಇತ್ತು. "ತೆರವಲ್ಲದ್ದು ಹೆಣ್ಣಲ್ಲ ಬೇಲಿ ಹಚ್ಚದ್ದು ಹೊಲವಲ್ಲ"(ಸಿದ್ಧರಾಮಯ್ಯ ಎಸ್.ಜಿ:೧೯೯೫:೧೫೮) ಎಂಬ ಮಾತಿನ ಜೀವಂತ ಅನುಷ್ಠಾನ ಇವರ ಸಂಪ್ರದಾಯದಲ್ಲಡಗಿದೆ. ಇಂದು ಇವರ ಮೇಲೆ ಆಧುನೀಕರಣದ ಪ್ರಭಾವ ಬೀರಿದೆ. ಹೆಣ್ಣಿಗೆ ತೆರವು ಕೊಡುವ ಪದ್ಧತಿ ಹೋಗಿದ್ದು, ಗಂಡಿಗೆ ವರೋಪಚಾರದ (ವರದಕ್ಷಿಣೆ) ರೂಪದಲ್ಲಿ ಅಥವಾ ಖುಷಿಯ ವಿಧದಲ್ಲಿ ತಮ್ಮ ಶಕ್ತ್ಯಾನುಸಾರ ಒಂದರಿಂದ ಐದು ತೊಲೆಯವರೆಗೆ ಬಂಗಾರ ಹಾಕುತ್ತಾರೆ.

ಗಂಡಿನವರು ಕನ್ಯೆಗೆ ಅವಶ್ಯಕವಾಗಿ ಕೊಡಲೇಬೇಕಾದ ಕೆಲವು ಆಭರಣಗಳೆಂದರೆ ಒಂದು ಬೆಳ್ಳಿಯ ಡಾಬು, ಬುಗಡೆ, ಬೆಂಡೋಲೆ, ಕಟ್ಬಾಣಿ, ಶಕ್ತಿ ಇದ್ದವರು ಇದ್ದಕ್ಕಿಂತ ಹೆಚ್ಚಿಗೆ ಹಾಕುವರು. ಇಷ್ಟಲ್ಲದೆ ೩೨ ಸೇರು ಜೋಳ, ೯ ಕುಬುಸ, ೫ ಸೀರೆಗಳನ್ನು ಕೊಡಲೇಬೇಕು. ಆ ಸೀರೆಗಳೆಂದರೆ ಲಗ್ನದ ಸೀರೆ, ಉಡಿ ತುಂಬುವ ಸೀರೆ, ವೀಳ್ಯೆ ಸೀರೆ, ತೊಡೆ ಮೇಲಿನ ಸೀರೆ, (ಕನ್ಯೆಯ ತಾಯಿ ಸೀರೆ) ಹಾಗೂ ಕನ್ಯೆಯ ಅಜ್ಜಿಯ ಸೀರೆ ಇವನ್ನು ಗಂಡಿನವರು ಕನ್ಯೆಯವರಿಗೆ ತಂದು ಕೊಡ

ಬೇಕಾಗಿರುವುದು ರೂಢಿಗತ ಸಂಪ್ರದಾಯವಾಗಿದೆ. ಇವೆಲ್ಲಾ ಮಾತುಕತೆ ಮುಗಿದ ಮೇಲೆ ಎಲ್ಲರು ಒಪ್ಪಿಕೊಂಡಂತೆ ಬಂಧುತ್ವ ಬೆಳೆಸುವುದು ಗ್ಯಾರಂಟಿಯಾದರೆ ನಂತರ ಸಿಹಿ ಊಟ ಮಾಡುತ್ತಾರೆ.

ಊ. ನಿಶ್ಚಿತಾರ್ಥ : ಇದನ್ನು ಅಲೆಮಾರಿ ಕುರುಬರು 'ಬಾಟಿಗೆ' ಎಂದು ಕರೆಯುತ್ತಾರೆ. ಮದುವೆ ಮಾಡಿಕೊಳ್ಳುವ ಹೆಣ್ಣನ್ನು ಖಚಿತಪಡಿಸಿ ಕೊಳ್ಳುವುದೆಂದರ್ಥ. ಈ ಸಂಪ್ರದಾಯವನ್ನು ಎಲೆ ಹಂಚುವುದು, ಹೆಣ್ಣು ಗಟ್ಟಿ ಮಾಡುವುದು, ಸಕ್ಕರೆ ಹಂಚುವುದು, ವೀಳ್ಯ ಜಂಬ್ರ ಇತ್ಯಾದಿ ಹೆಸರುಗಳಿಂದ ಕರೆಯುತ್ತಾರೆ. ಒಪ್ಪಿಗೆಯ ಸಿಹಿ ಊಟವನ್ನು ಉಂಡ ಕೆಲವು ದಿನಗಳ ನಂತರ ಗಂಡಿನ ಮನೆಯವರು ಒಂದು ಶುಭದಿನ ನೋಡಿ ಕನ್ಯೆಯ ಮನೆಗೆ ಹೋಗಿ 'ನಿಶ್ಚಿತಾರ್ಥ' ಮಾಡುತ್ತಾರೆ. ಕನ್ಯೆಯ ನಿಶ್ಚಿತಾರ್ಥಕ್ಕೆ ಗಂಡಿನ ಕಡೆಯವರು ಸಾಮಾನ್ಯವಾಗಿ ೫ ರಿಂದ ೨೧ ಜನರವರೆಗೆ ಹೋಗುತ್ತಾರೆ. ಆ ಮನೆಗೆ ಕಳ್ಳು-ಬಳಿಯವರನ್ನು ಆಹ್ವಾನಿಸಿ ಮನೆ ದೇವರ ಪೂಜಾರಿಗೆ ಭಂಡಾರದ ಚೀಲ ತರಲು ಹೇಳಿರುತ್ತಾರೆ. ಈ ಹಿಂದೆ ಮಾತಾಡಿದ್ದಂತೆ ಕೊಡಬೇಕಾದ ಬೆಳ್ಳಿ, ಬಂಗಾರದ ಆಭರಣಗಳನ್ನು ತಂದು ಕನ್ಯೆಗೆ ಕೊಡಬೇಕು. ಅವಳು ಆ ದಿನ ಆಭರಣಗಳನ್ನು ತೊಟ್ಟುಕೊಳ್ಳಬೇಕು. ಅವಳಿಗಾಗಿ ತಂದ ವೀಳ್ಯೆ ಸೀರೆಯನ್ನು ಉಡಿಸಬೇಕು. ಕನ್ಯೆಯನ್ನು ಅಲಂಕರಿಸಿದ ಮೇಲೆ ಕಂಬಳಿ ಮೇಲೆ ಗದ್ದುಗೆ ಹಾಕಿ ಕೂರಿಸುತ್ತಾರೆ. ಮುತ್ತೈದೆ ಹೆಣ್ಣು ಮಕ್ಕಳು ಶಾಶ್ವಿ(ಅಕ್ಕಿಕಾಳು) ಇಡುತ್ತಾರೆ. ಹಾಗೆಯೇ ಜನಪದ ಹಾಡು ಹಾಡುತ್ತ ಕೊಬ್ಬರಿ, ಕಲ್ಲುಸಕ್ಕರೆ, ಅಕ್ಕಿ, ಉತ್ತುತ್ತಿ, ಎಲೆ-ಅಡಕೆಗಳನ್ನು ಉಡಿ ತುಂಬಿ ಭಂಡಾರವನ್ನು ಹಚ್ಚುತ್ತಾರೆ. ಗಂಗಾಳದಲ್ಲಿ ತುಂಬಿಟ್ಟ ಅಡಕೆಯನ್ನು ಕನ್ಯೆಯು ಹಿಡಿ ತುಂಬಾ ಮೂರು ಸಾರಿ, ಎಲೆಯನ್ನು ಎರಡು ಸಾರಿ ತೆಗೆದುಕೊಂಡು ಉಡಿಯಲ್ಲಿಟ್ಟು ಕೊಳ್ಳುತ್ತಾಳೆ. ಆಗ ಮುತ್ತೈದೆಯರು ಅವಳ ಬಾಯಿಗೆ ಸಕ್ಕರೆ ಹಾಕುತ್ತಾರೆ.

ಇಷ್ಟೆಲ್ಲ ಆದ ಮೇಲೆ ಮನೆ ದೇವರ ಪೂಜಾರಿ ಐದು ಬೆಡಗಿನವರಿಗೆ ಎಲೆ ತೆಗೆದಿಡುತ್ತಾನೆ. ಇವರೆಲ್ಲ ಈ ಕಾರ್ಯಕ್ಕೆ ಬಂದಿರಲಿ ಅಥವಾ ಬಾರದಿರಲಿ ಅವರ ಪಾಲಿನ ಎಲೆಯನ್ನು ಅವರಿಗೆ ಮುಟ್ಟಿಸಬೇಕೆಂಬುದು ನಿಯಮ. "ಪೂಜಾರಿಯು ಎದ್ದು ನಿಂತು ಕನ್ಯೆಯ ಹಣೆಗೆ ಭಂಡಾರ ಹಚ್ಚಿ ಈ ಬೆಡಗಿನ (ಮನೆತನದ) ಹೆಣ್ಣು ಇಂತಹ ಬೆಡಗಿನ (ಮನೆತನದ) ಗಂಡಿಗೆ ಗಟ್ಟಿಯಾಯಿತೆಂದು ಜೋರಾಗಿ ಮೂರು ಸಾರಿ ಕೂಗುತ್ತಾನೆ. ನಂತರ ಅಲ್ಲಿ ಸೇರಿದ ಎಲ್ಲರಿಗೂ ವೀಳ್ಯೆ ಮತ್ತು ಸಕ್ಕರೆಯನ್ನು ಹಂಚುತ್ತಾರೆ. ಇಲ್ಲಿಗೆ ಈ ಕನ್ಯೆಗೆ ಈ ವರ ಎಂದು ಸಂಬಂಧ ನಿಶ್ಚಯವಾದಂತೆ. ಈ ನಿಶ್ಚಯ ಕಾರ್ಯವಾದ ಮೇಲೆ ಗಂಡಿನವರಾಗಲೀ ಹೆಣ್ಣಿನವರಾಗಲೀ ಈ ಸಂಬಂಧವನ್ನು ಮುರಿಯುವುದಕ್ಕೆ ಬರುವುದಿಲ್ಲ. ಈ ಕಾರ್ಯವಾದ ಮೇಲೆ ಮುಂದೆ ಎಂದಾದರೂ ಅನುಕೂಲ ವಾದಾಗ ಒಳ್ಳೆಯ ದಿನ ನೋಡಿ ಮದುವೆ ಮಾಡಿಕೊಳ್ಳಬಹುದು"(ಮಾಹಿತಿದಾರ: ಅಪ್ಪಣ ಪೂಜಾರಿ: ಸೌಂದಲಗ).

೨. ಸಿದ್ಧತಾ ಆಚರಣೆಗಳು

ಅ. ಲಕ್ಷ್ಮಿಯ ಪೂಜೆ

ಮದುವೆಗೆ ಮುಂಚೆ ಅಂದರೆ ೯ ಅಥವಾ ೧೧ ದಿನ ಮುಂಚಿತವಾಗಿ ವರನ ಮನೆಯಲ್ಲಿ ಲಕ್ಷ್ಮೀ ಪೂಜೆಯ ಆಚರಣೆ ನಡೆಯುತ್ತದೆ. ಆ ದಿನ ಮನೆಯಲ್ಲಿ ಎಲ್ಲರೂ ಸ್ನಾನ ಮಾಡಿ ಶುಭ್ರ ಬಟ್ಟೆ ಧರಿಸಬೇಕು. ತುಂಬಿದ ಬಿಂದಿಗೆಗೆ ಬಂಗಾರದ ಒಡವೆಗಳಿಂದ ಅಲಂಕರಿಸಿ ಅದರ ಮುಂದೆ ಲಕ್ಷ್ಮಿಸೀರೆ, ಫಲ ತಾಂಬೂಲ ಇಟ್ಟು ಪೂಜಿಸುತ್ತಾರೆ. ಈ ಲಕ್ಷ್ಮಿಸೀರೆ ಪೂರ್ಣ ಕೆಂಪು ಬಣ್ಣದಿಂದ ಕೂಡಿರಬೇಕು. ಬೇರೆ ಯಾವ ಬಣ್ಣದ ಎಳೆಯೂ ಕೂಡಿರಬಾರದು. ಹೀಗೆ ಪೂಜಿಸುವ ಬಿಂದಿಗೆಯೇ ಲಕ್ಷ್ಮಿ. ಮಾಡಿದ ಸಿಹಿ ಅಡುಗೆಯನ್ನು (ಹೋಳಿಗೆ) ಲಕ್ಷ್ಮಿಗೆ ಎಡೆ ಇಡುತ್ತಾರೆ. ಈ ಅಡುಗೆಯನ್ನು ಮಾಡುವವರು ವರನ ಗುಂಪಿನ ಬೆಡಗಿಗೆ ಸೇರಿದ ಮುತ್ತೈದೆಯವರೇ ಆಗಿರಬೇಕು. ಸ್ನಾನ ಮಾಡಿ ಅಡುಗೆಗೆ ತೊಡಗಬೇಕು. ಅಡುಗೆ ಮಾಡುವಾಗ ಅಡುಗೆಯ ವಾಸನೆ ಹೊರಗೆ ಹೋಗದೆ ಹಾಗೆ ಕಿಟಕಿ, ಬಾಗಿಲುಗಳನ್ನು ಮುಚ್ಚಿರಬೇಕು. ಪೂಜೆ ಮುಗಿದು ನೈವೇದ್ಯ ಆಗುವವರೆಗೂ ಮುಚ್ಚಿದ ಕಿಟಕಿ, ಬಾಗಿಲುಗಳನ್ನು ತೆರೆಯುವಂತಿಲ್ಲ. ಲಕ್ಷ್ಮಿ ಪೂಜೆಗೆ ಮಾಡಿದ ಅಡುಗೆಯನ್ನು ವರನ ಮನೆತನದ ಅಣ್ಣ-ತಮ್ಮಂದಿರು ಮಾತ್ರ ಊಟ ಮಾಡಬೇಕು. ಆ ದಿನ ಮಾಡಿದ ಅಡುಗೆ ಯಲ್ಲಿ ಒಂದು ಅಗುಳನ್ನು ಹೊರಗೆ ಒಯ್ಯುವಂತಿಲ್ಲ. ಎಲ್ಲಿಗೂ ತುಂಬಿ ಕಳಿಸುವಂತಿಲ್ಲ. ಅದನ್ನು ಮನೆಯಲ್ಲೇ ಊಟ ಮಾಡಬೇಕು. ಅಲ್ಲದೇ ಊಟ ಮಾಡಿದ ಗಂಗಾಳಗಳನ್ನು ಹೊರಕ್ಕೆ ಚೆಲ್ಲುವಂತಿಲ್ಲ. ಮನೆಯೊಳಗೆ ಒಂದು ಮೂಲೆಯಲ್ಲಿ ತಗ್ಗು ತೋಡಿ ಎಲ್ಲ ಮುಸುರೆ ನೀರನ್ನು ಅದರಲ್ಲಿ ಹಾಕಿ ಮುಚ್ಚುತ್ತಾರೆ. ಅಲ್ಲದೆ ಲಕ್ಷ್ಮಿ ಕಾರ್ಯದ ದಿನ ಮತ್ತು ಮರುದಿನ ಮನೆಯೊಳಗೆ ಗುಡಿಸಿದ ಕಸವನ್ನೂ ಹೊರಗೆ ಎಸೆಯುವುದಿಲ್ಲ. ಲಕ್ಷ್ಮಿ ಕಾರ್ಯದ ದಿವಸ ಯಾವ ಕಾರಣಕ್ಕೂ ಲಕ್ಷ್ಮಿಯನ್ನು ಹೊರಗೆ ಹೋಗಲು ಬಿಡಬಾರದು, ಬಿಟ್ಟರೆ ಇನ್ನು ಮುಂದೆ ಎಂದೂ ಲಕ್ಷ್ಮಿ ಮನೆ ತುಂಬುವುದಿಲ್ಲ ಎಂಬ ನಂಬಿಕೆಯಿದೆ. ಆದುದರಿಂದ ಈ ಆಚರಣೆಯನ್ನು ಕಟ್ಟುನಿಟ್ಟಾಗಿ ಆಚರಿಸಲಾಗುತ್ತದೆ.

ಆ. ಲಗ್ನಪತ್ರ

ಲಕ್ಷ್ಮೀ ಪೂಜೆಯ ಮರುದಿನ ಲಗ್ನಪತ್ರ ಬರೆಸುವ ಆಚರಣೆ ನಡೆಯುತ್ತದೆ. ಈ ಕಾರ್ಯಕ್ಕೆ ಬ್ರಾಹ್ಮಣ ಪುರೋಹಿತರನ್ನು ಕರೆಸುತ್ತಾರೆ. ಕುಲದ ಹಿರಿಯರು ಹಾಗೂ ಪೂಜಾರಿಗಳನ್ನು ಸೇರಿಸುತ್ತಾರೆ. ಪುರೋಹಿತರ ಕೈಯಿಂದ ೨ ಲಗ್ನಪತ್ರಿಕೆ (ಒಂದು ಕನ್ಯಾ ಮನೆಗೆ, ಇನ್ನೊಂದು ಗಂಡಿನ ಮನೆಗೆ) ಸಿದ್ಧಗೊಳಿಸುತ್ತಾರೆ. ಪುರೋಹಿತರು ಬರೆದಿದ್ದನ್ನು ಕುಳಿತ ಸಭೆ ಎದುರು ಓದಿ, ನಂತರ ಭಂಡಾರ ಹಚ್ಚಿ, ಪೂಜಿಸುತ್ತಾರೆ. ಗಂಡನ ಮನೆಯಲ್ಲಿ ಜರುಗುವ ಈ ಕಾರ್ಯಕ್ಕೆ ಕನ್ಯೆಯ ಕಡೆಯವರು ಬರಲೇಬೇಕೆಂಬ ನಿಯಮವಿಲ್ಲ. ಏಕೆಂದರೆ ಅವರ ಪ್ರಕಾರ ವೀಳ್ಯ ಜಂಬ್ರವೇ ನಿಜವಾದ ನಿಶ್ಚಯ ಕಾರ್ಯ.

ಇವರು ಕುರಿ ತಬ್ಬಿದ ಸುತ್ತಮುತ್ತಲಿನ ಗ್ರಾಮ, ಪಟ್ಟಣ ಅಥವಾ ನಗರಗಳಲ್ಲಿ ವಾರಕ್ಕೊಮ್ಮೆ ಸಂತೆ ಜರುಗುತ್ತವೆ. ಉದಾಹರಣೆಗೆ ಬಳ್ಳಾರಿ ಜಿಲ್ಲೆಯ ಶಿರಗುಪ್ಪದಲ್ಲಿ ಆದಿತ್ಯವಾರ, ಕಂಪ್ಲಿಯಲ್ಲಿ ಮಂಗಳವಾರ, ಬಳ್ಳಾರಿಯಲ್ಲಿ ಶುಕ್ರವಾರ, ರಾಯಚೂರು ಜಿಲ್ಲೆಯ ಸಿಂಧನೂರುನಲ್ಲಿ ಸೋಮವಾರ ದಂದು ನಡೆಯುತ್ತದೆ. ಒಂದು ವಾರದ ಅನುಭೋಗಕ್ಕೆ ಬೇಕಾಗುವಷ್ಟು ದೈನಂದಿನ ಬಳಕೆಯ ಸಾಮಾನುಗಳನ್ನು ಕೊಂಡುಕೊಳ್ಳಲು ಅಲೆಮಾರಿ ಕುರುಬರು ಸಂತೆಗೆ ಬರುತ್ತಿರುತ್ತಾರೆ. ಮದುವೆ ಮಾಡುವ ವಧು-ವರ ಕಡೆಯ ಸಂಬಂಧಿಕರು ಯಾವ ಪ್ರದೇಶದಲ್ಲಿ ಕುರಿಗಳನ್ನು ತಬ್ಬಿದ್ದಾರೆಂದು ಮೊದಲೇ ತಿಳಿದುಕೊಂಡು ಆ ಪ್ರದೇಶದ ಸಂತೆಗಳಿಗೆ ಹೋಗಿ ಲಗ್ನದ ಪತ್ರಗಳನ್ನು ನೀಡಿ ಮದುವೆಗೆ ಆಹ್ವಾನಿಸುತ್ತಾರೆ. ಒಂದು ವೇಳೆ ಬಂಧುಗಳು ಹತ್ತಿರದವರಾಗಿದ್ದರೆ ಅವರಿದ್ದಲ್ಲಿಗೆ ಹೋಗಿ ಲಗ್ನಪತ್ರ ಕೊಟ್ಟು ಮದುವೆಗೆ ಆಹ್ವಾನಿಸುವರು.

೨. ಜವಳಿ(ಬಟ್ಟೆ) ತೆಗೆಯುವುದು

ಇದನ್ನು ಅಲೆಮಾರಿ ಕುರುಬರು ಅರಿವೇ ತೆಗೆಯುವುದೆಂದು ಕರೆಯುತ್ತಾರೆ. ಮದುವೆ ದಿನವನ್ನು ಗೊತ್ತು ಮಾಡಿದ ಮೇಲೆ ಮದುವೆ ಅರಿವೆಕೊಳ್ಳಲು ತಮ್ಮ ಗ್ರಾಮದ ಸಮೀಪವಿರುವ ಪಟ್ಟಣಕ್ಕೆ ಹೋಗುವ ದಿನವನ್ನು ನಿಗದಿ ಮಾಡುತ್ತಾರೆ. ಬಹಳಷ್ಟು ಅಲೆಮಾರಿ ಕುರುಬರು ನಿಪ್ಪಾಣಿ ಸುತ್ತ ಮುತ್ತಲಿನ ಗ್ರಾಮದವರಾದ್ದರಿಂದ ನಿಪ್ಪಾಣಿಗೆ ಹೋಗುತ್ತಾರೆ. ಅರಿವೆಕೊಳ್ಳಲು ಗಂಡು-ಹೆಣ್ಣಿನ ಕಡೆಯ ಹಿರಿಯರು ಕೂಡಿಕೊಂಡು ಹೋಗುತ್ತಾರೆ. ವಧು-ವರರಿಗೆ ಮಾತ್ರವಲ್ಲದೆ ಅವರ ತಾಯಂದಿರಿಗೂ ಅರಿವೆ ತೆಗೆಯುವರು. ಅರಿವೆ ತೆಗೆಯುವ ಮುಂಚೆ ವರನ ಎಲೆ-ಅಡಿಕೆ ಚೀಲವನ್ನು ಮೊದಲು ತೆಗೆಯುತ್ತಾರೆ. ಈ ಚೀಲವು ಮದುವೆಯಾಗುವ ಮುಂಚೆ ವರನಲ್ಲಿರುವುದಿಲ್ಲ. ಮದುವೆಯ ನಂತರ ಪ್ರತಿಯೊಬ್ಬ ಅಲೆಮಾರಿ ಕುರುಬನ ನಡುವಿನಲ್ಲಿ ಇದನ್ನು ಕಾಣುತ್ತೇವೆ. ಈ ಚೀಲವನ್ನು ಹೆಣ್ಣಿನ ಕಡೆಯವರು ಗಂಡಿಗೆ ಕೊಡಿಸಬೇಕು. ಇದಾದ ನಂತರ ವಧು-ವರರಿಗೆ ಹಾಗೂ ಬಂಧು ಬಳಗಕ್ಕೆ ಅರಿವೆ ತೆಗೆಯುತ್ತಾರೆ. ಅರಿವೆಯ ಜೊತೆಗೆ ವಧುವಿಗೆ ಮತ್ತು ವರನಿಗೆ ಕೊಡಬೇಕಾದ ಆಭರಣಗಳನ್ನು ಮತ್ತು ಮೆಟ್ಟು (ದೇಶಿ ಚಪ್ಪಲಿ)ಗಳನ್ನು ಕೊಂಡುಕೊಳ್ಳುತ್ತಾರೆ. ಅರಿವೆ ಮತ್ತು ಒಡವೆಗಳನ್ನು ಖರೀದಿಸಿದ ಮೇಲೆ ಎರಡು ಕಡೆಯವರು ಕೆಲವು ಮದುವೆ ಸಾಮಾನುಗಳನ್ನು ಕೊಂಡುಕೊಂಡು ಇಂಥವರ ಮಗನು, ಇಂಥವರ ಮಗಳಿಗೆ ಅರಿವೆ ತೆಗೆದಿದ್ದಾನೆ ಎಂದು ಹೇಳುತ್ತಾ ಸಿಹಿಯನ್ನು ತಿಂದು ಎರಡು ಕಡೆಯವರು ಊರುಗಳಿಗೆ ತೆರಳುತ್ತಾರೆ.

೩. ಪ್ರಧಾನ ಆಚರಣೆಗಳು

ಅಲೆಮಾರಿ ಕುರುಬರು ಮದುವೆಯನ್ನು ಪ್ರಮುಖವಾಗಿ ಮೂರು ದಿನಗಳು ಆಚರಣೆ ಮಾಡುತ್ತಾರೆ. ಅವನ್ನು ೧. ಅರಿಶಿಣ ನೀರು (ದೇವರೂಟ) ಕಾರ್ಯಕ್ರಮ, ೨. ಅಕ್ಕಿಕಾಳು ಅಥವಾ ತಾಳಿ ದಿನದ ಕಾರ್ಯಕ್ರಮ ಹಾಗೂ ೩. ಮಸಿಯೂಟ ಕಾರ್ಯಕ್ರಮಗಳೆಂದು ವಿಂಗಡಿಸಲಾಗಿದೆ.

೧. ಅರಿಶಿಣ ನೀರು ಅಥವಾ ದೇವರೂಟ ಕಾರ್ಯಕ್ರಮ

ಅ. ಹಂದರ ಹಾಕುವುದು : ಮದುವೆ ಮನೆಯ ತಲಬಾಗಿಲು ಮುಂದೆ ಹಂದರ ಹಾಕುತ್ತಾರೆ. ಇದನ್ನು ಹಾಕಬೇಕಾದರೆ ನಾಲ್ಕು ದಿಕ್ಕಿಗೆ ನಾಲ್ಕು ಬಿದುರು ನೆಟ್ಟು ಅವುಗಳ ಮೇಲೆ ಲಂಬಕಾರದಲ್ಲಿ ಎರಡು ಬಿದುರುಗಳನ್ನು ಕಟ್ಟುತ್ತಾರೆ. ನಂತರ ನೆಟ್ಟ ಪ್ರತಿಯೊಂದು ಬಿದಿರಿಗೆ ತೆಂಗಿನಗರಿಯನ್ನು ಕಟ್ಟಿ ಅದರ ಮೇಲೆ ತೆಂಗಿನ ಗರಿ ಮತ್ತು ಕಣಗಿನ ತಪ್ಪಲು ಹಾಕುತ್ತಾರೆ. ಮಾವಿನ ಎಲೆಗಳಿಂದ ತೋರಣ ಕಟ್ಟುತ್ತಾರೆ. ವರನ ಕಡೆಯ ಗಂಡು ಮಕ್ಕಳೇ ಹಂದರ ಪೂಜೆ ಮಾಡಬೇಕು.

ಆ. ಶಾಶಿಕಟ್ಟೆ : ವರನ ಮನೆಯ ತಲಬಾಗಿಲು ಬಲಭಾಗದಲ್ಲಿ ಗೋಡೆಗೆ ಹೊಂದಿಕೊಂಡಂತೆ ಒಂದು ಅರ್ಧ ಅಡಿ ಎತ್ತರದ ಹಸಿ ಮಣ್ಣಿನ ಕಟ್ಟೆಯೊಂದನ್ನು ಕಟ್ಟುತ್ತಾರೆ. ಆ ಕಟ್ಟೆಗೆ ಹೊಂದಿಕೊಂಡ ಗೋಡೆಯ ಮೇಲೆ ದೇವರ ಚಿತ್ರ, ಒಂದು ಟಗರು, ಮತ್ತೊಂದು ಕುರಿ, ಅದರ ಕೆಳಗೆ ಬಾಸಿಂಗ ಮತ್ತು ಸೂಸಗ, ಅದರ ಕೆಳಗೆ ಕಳಸ ಹಿಡಿದ ಮುತ್ತೈದೆಯ ಚಿತ್ರಗಳನ್ನು ಬರೆಯುತ್ತಾರೆ. ಹೀಗೆ ಬರೆದ ಚಿತ್ರಗಳನ್ನು ಮತ್ತು ಆ ಕಟ್ಟೆಯನ್ನು ಪದ್ಧತಿ ಪ್ರಕಾರ ಪೂಜಿಸುತ್ತಾರೆ.

ಇ. ಹಾಲಗಂಬ ತರುವುದು : ವರನಿಗೆ ಬೀಗರಾಗುವ ಅತ್ತೆ-ಮಾವ ಒಂದೇ ಹೆಸರಿರುವ ದಂಪತಿಗಳಿಂದ ಈ ಕಾರ್ಯ ಮಾಡಿಸುತ್ತಾರೆ. ಉದಾಹರಣೆಗೆ ಮಾಳಪ್ಪ-ಮಾಳಮ್ಮ, ಲಗುಮಪ್ಪ-ಲಗುಮವ್ವ ಇಂತವರ ಹೆಸರು ಬಲಾತ್ಕಾರದಿಂದ ಕೇಳಿ ಅವರ ಕೈಯಿಂದ ಹಾಲಗಂಬ ತರುಸುತ್ತಾರೆ. ಹಾಲುಗಂಬ ತರಲು ವಾದ್ಯ ಸಮೇತವಾಗಿ ಹೋಗುವರು. ಬಲಾತ್ಕರದಿಂದ ಬಂದ ದಂಪತಿಗಳಲ್ಲಿ ಹೆಂಡತಿ ಕಳಸ ಹಿಡಿದು ಮುತ್ತೈದೆಯರೊಂದಿಗೆ ಮುಂದೆ ಸಾಗುತ್ತಿದ್ದರೆ ಅವಳ ಹಿಂದೆ ಪತಿರಾಯ ಕೈಯಲ್ಲಿ ಕುಡುಗೋಲು ಹಿಡಿದುಕೊಂಡು ಸಾಗುತ್ತಾನೆ. ಊರಿನ ಹತ್ತಿರವಿರುವ ಹತ್ತಿ ಗಿಡಕ್ಕೆ ಪೂಜೆ ಮಾಡಿ ಅದರಲ್ಲಿ ಒಂದು ಸಣ್ಣ ಕೊಂಬೆ ಕಡಿದುಕೊಂಡು ಮನೆಗೆ ಬರುವಾಗ ಬೀರದೇವರ ಗುಡಿ ಮುಂದೆ ಹಾದು ಬರಬೇಕು. ಹಸಿ ಮಣ್ಣಿನ ಗುಡ್ಡೆ ಮಾಡಿ ಅದರೊಳಗೆ ಹಾಲಗಂಬ ನೆಡುತ್ತಾರೆ. ಈ ಮಣ್ಣಿನ ಗುಡ್ಡೆಯ ಒಳಕ್ಕೆ ಜೋಳ, ಗೋಧಿ, ಸಜ್ಜೆ, ನೆಲಗಡಲೆ, ಹೆಸರು, ಅಲಸಂದಿ ಇತ್ಯಾದಿ ಐದು ಧಾನ್ಯಗಳನ್ನು ಹಾಕುತ್ತಾರೆ. ಇವರು ಫಲಕೊಡುವ ಹಾಲಗಂಬ ತಂದ ಉದ್ದೇಶ ಮುಂದೆ ವಧು-ವರರ ಜೀವನವು ಫಲವತ್ತತೆ ಹಾಗೂ ಸಮೃದ್ಧಿಯಿಂದ ಕೂಡಿರಲಿ ಎಂದು ಆಶಿಸುವ ಸಂಕೇತವಿರಬಹುದು. ಹಂದರ ಹಾಕಿದ ದಿನದಿಂದ ಇಳಿಸುವವರೆಗೆ ಸುಮಾರು ೫ ಅಥವಾ ೯ ದಿನಗಳವರೆಗೆ ರಾತ್ರಿ ವೇಳೆಯಲ್ಲಿ ಹಂದರದಲ್ಲಿ ದೀಪ ಇದ್ದು ದಿನಾಲು ಪೂಜೆ ಸಲ್ಲಿಸುತ್ತಾರೆ.

ಉ. ಎದುರುಗೊಳ್ಳುವುದು ಅಥವಾ ಬೇಟಿ ಮಾಡುವುದು : ಬೀಗರನ್ನು ಸ್ವಾಗತಿಸುವುದಕ್ಕೆ ಭೇಟಿ ಮಾಡುವುದೆನ್ನುವರು. ಸಾಯಂಕಾಲ ಹೆಣ್ಣಿನ ಕಡೆಯವರು ಊರ ಹೊರಗೆ ನಿಂತು ಬಂದಿದ್ದೇವೆಂದು ಸುದ್ದಿ ಮುಟ್ಟಿಸುವರು. ಗಂಡಿನ ಕಡೆಯವರು ವಾದ್ಯಗಳೊಂದಿಗೆ ಅವರನ್ನು ಭೇಟಿ

ಮಾಡಿ ಬೇಳೆ, ಬೆಲ್ಲ ಕೊಟ್ಟು ಬೀಗರಿಗೆ ಉಳಿದುಕೊಳ್ಳಲಿಕ್ಕೆ ಗುಡಿ ಅಥವಾ ಮನೆಯ ವ್ಯವಸ್ಥೆ ಮಾಡುವರು. ಈ ವ್ಯವಸ್ಥೆ ಮಾಡುವವನಿಗೆ 'ದೈವದವನು' ಎಂದು ಕರೆಯುವರು. ಇವನು ಬೀಗರಿಗೆ ಬೇಕಾಗಿರುವ ಅವಶ್ಯಕತೆಗಳನ್ನು ಪೂರೈಸಬೇಕು. ತಾಳಿ ಆದ ನಂತರ ಗಂಡಿನವರು ದೈವದವನಿಗೆ ಬಟ್ಟೆ ಮಾರ್ಯಾದೆ ಮಾಡುತ್ತಾರೆ.

ಊ. ಪಲ್ಲಕ್ಕಿ ತರುವುದು : ಬೀರದೇವರಿಗೆ ಪೂಜೆ ಸಲ್ಲಿಸಿ ದೇವರ ಗುಡಿಯಿಂದ ಪಲ್ಲಕ್ಕಿ ತರುವಾಗ ಡೊಳ್ಳು ಬಡಿಯುತ್ತಾ, ಭಂಡಾರ ಹಾರಿಸುತ್ತಾ, ಮದುವೆ ಮನೆಯ ಹಂದರಕ್ಕೆ ದೇವರ ಪಲ್ಲಕ್ಕಿ ತರಲಾಗುವುದು. ಪಲ್ಲಕ್ಕಿಯಲ್ಲಿ ಬೀರದೇವರ ಮೂರ್ತಿ, ಕರಿಕಂಬಳಿ ಹಾಲಗೈಯುವ ಕತ್ತಿ, ಭಂಡಾರ ಚೀಲ, ನಾಗಬೆತ್ತ, ಕುದುರೆಗಳು ಇರುತ್ತವೆ. ತಂದ ನಂತರ ಪೂಜಾರಿಯು ಪೂಜೆ ಮಾಡಿ ಭಂಡಾರ ಹಾರಿಸುತ್ತಾನೆ.

ಋ. ಐರಾಣಿ ತರುವುದು : ತಾಳಿ ಕಟ್ಟುವ ಮತ್ತು ಅರಿಶಿಣ ನೀರು ಹಾಕುವ ಸಮಯದಲ್ಲಿ ಉಪಯೋಗಿಸುವ ಮಣ್ಣಿನ ೫ ಬಿಂದಿಗೆ ಮತ್ತು ನಾಲ್ಕು ಮಗಿ ೨ ಪಡುಗಗಳನ್ನು ಈ ಮೊದಲೇ ಕುಂಬಾರನಿಗೆ ಹೇಳಿ ಮಾಡಿಸಿರುತ್ತಾರೆ. ಇದಕ್ಕೆ ಐರಾಣಿ ಎಂದು ಕರೆಯುತ್ತಾರೆ. ಆ ಐರಾಣಿಗಳನ್ನು ಕುಂಬಾರನು ತೆಗೆದುಕೊಂಡು ಬಂದು ದೇವಸ್ಥಾನದಲ್ಲಿಟ್ಟು ಕೊಂಡಿರುತ್ತಾನೆ. ಕಳಸ, ವಾದ್ಯ ಸಮೇತವಾಗಿ ದೇವಸ್ಥಾನಕ್ಕೆ ಹೋಗಿ ಆ ಐರಾಣಿಗಳನ್ನು ಪೂಜಿಸಿ ಕುಂಬಾರನಿಗೆ ಪದ್ಧತಿ ಪ್ರಕಾರ ಕೊಡಬೇಕಾದದ್ದನ್ನು ಕೊಟ್ಟು ಐರಾಣಿಗಳನ್ನು ತೆಗೆದುಕೊಂಡು ಬರುತ್ತಾರೆ.

ಎ. ಕಂಕಣ ಕಟ್ಟುವಿಕೆ : ಸಮುದಾಯದ ಪೂಜಾರಿಗಳು ವೀಳ್ಯೆದೆಲೆ ಅರಿಶಿಣ ಕೊಂಬು ಹತ್ತಿದಾರ ಉಪಯೋಗಿಸಿ ಕೈಗೆ ಕಟ್ಟುವ ಕಂಕಣಗಳನ್ನು ತಯಾರಿಸುತ್ತಾರೆ. ಇವುಗಳನ್ನು ಲಗ್ನ ಕಾರ್ಯದಲ್ಲಿ ನಿರತರಾಗುವ ಮುತ್ತೈದೆ ಸ್ತ್ರೀ-ಪುರುಷರ ಬಲಗೈಗಳಿಗೆ ಕಟ್ಟುತ್ತಾರೆ. ಈ ಕಂಕಣಗಳನ್ನು ಕಟ್ಟಿಸಿಕೊಂಡವರು ಲಗ್ನದ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವರು.

ಏ. ಅರಿಶಿಣ ನೀರು : ಈ ಕಾರ್ಯದ ವಿಶೇಷವೆಂದರೆ ಹಾಲಗಂಬ ತಂದ ಸೋದರಮಾವನ ಮನೆ ಮುಂದೆ ಅರಿಶಿಣ ನೀರು ಹಾಕಲಾಗುವುದು. ಮೇಳ ಮತ್ತು ಡೊಳ್ಳು ವಾದ್ಯದೊಂದಿಗೆ ಹಾಲುಗಂಬ ತಂದವರ ಮನೆಗೆ ನೀರು ತುಂಬಿದ ನಾಲ್ಕು ಮಣ್ಣಿನ ಮಗಿ ತೆಗೆದುಕೊಂಡು ಹೋಗುವರು. ಮನೆಯ ಮುಂದೆ ಚೌಕಕಾರದಲ್ಲಿ ನಾಲ್ಕು ಮಗಿಗಳನ್ನಿಟ್ಟು ಅವುಗಳ ಮೇಲೆ ಎಲೆ ಮತ್ತು ತೆಂಗಿನಕಾಯಿಗಳನ್ನಿಡುತ್ತಾರೆ. ಆ ಮಗಿಗಳಿಗೆ ಐದು ಸುತ್ತು ಹತ್ತಿದಾರ ಸುತ್ತುವರು. ನಂತರ ಅದರೊಳಗೆ ಎರಡು ಒನಕೆಗಳನ್ನಿಡುವರು. ಮುಂದಿನ ಒನಕೆಯ ಮೇಲೆ ಮದುಮಗ ಮತ್ತು ಮದುಮಗಳ ತಾಯಿಯನ್ನು ಹಿಂದಿನ ಒನಕೆಯ ಮೇಲೆ ಮದುಮಗ ಮತ್ತು ಮದುಮಗಳನ್ನು ಕೂಡಿಸಿ ಮೈ ಮತ್ತು ಮುಖಕ್ಕೆಲ್ಲಾ ಅರಿಶಿಣ ಹಚ್ಚಿ, ನೀರು ಹಾಕುವರು. ನಾಲ್ಕು ಜನರಿಗೂ

ಹೊಸ ಬಟ್ಟೆ ಕೊಟ್ಟು ದೇವರ ಜಗಲಿಗೆ ಕರೆದುಕೊಂಡು ಹೋಗಿ ಪೂಜೆ ಸಲ್ಲಿಸುವರು. ಈ ಕಾರ್ಯವು ರಾತ್ರಿ ಹತ್ತು ಅಥವಾ ಹನ್ನೊಂದು ಗಂಟೆ ಸುಮಾರಿಗೆ ಜರುಗುತ್ತದೆ. ರಾತ್ರಿಯ ಊಟವನ್ನು ಹಾಲಗಂಬ ತಂದ ಬೀಗರು(ಮಾವನರು) ಹಾಕಬೇಕು. ಈ ಊಟಕ್ಕೆ ಶ್ಯಾವಿಗೆ ಮಾಡಲೇ ಬೇಕು. ಅದಕ್ಕೆ ಶ್ಯಾವಿಗೆ ಊಟ ಎನ್ನುವರು. ಊಟವಾದ ನಂತರ ಮದುವೆಯ ಮನೆಗೆ ಬರುತ್ತಾರೆ.

೨. ಅಕ್ಕಿಕಾಳು ಅಥವಾ ತಾಳಿ ದಿನದ ಕಾರ್ಯ

ಅ. ಆಲ್ಗ್ಯಯುವದು : ಅಲೆಮಾರಿ ಕುರುಬರು 'ಆಲಗ' ಹಾಯುವುದಕ್ಕೆ ಆಲ್ಗ್ಯಯುವದು ಎನ್ನುತ್ತಾರೆ. ಈರಗಾರರೆನಿಸಿಕೊಂಡವರು ಮತ್ತು ಪೂಜಾರಿಗಳು ಆಲ್ಗ್ಯಯುತ್ತಾರೆ. ಇದು ವಂಶಪರಂಪರೆಯಾಗಿ ಬಂದಿರುವ ಕಾರ್ಯವಾಗಿದೆ. ಬೀರದೇವರ ಆರಾಧಕರಾದ ಇವರು ಬೀರದೇವರ ಪಲ್ಲಕ್ಕಿಗೆ ಪೂಜೆ ಮಾಡಿದ ನಂತರ ತಲವಾರ ಕತ್ತಿ ಹಿಡಿದು ನಾಲ್ಕು ದಿಕ್ಕಿಗೆ ನಮಸ್ಕಾರ ಮಾಡಿ ಜೋರಾಗಿ ಹೊಟ್ಟೆಗೆ ಹಾಗೂ ಬೆನ್ನಿಗೆ ಹೊಡೆದುಕೊಳ್ಳುತ್ತಾರೆ. ಆ ಸಮಯದಲ್ಲಿ ಪೂಜಾರಿಗಳು ಹೊಡೆದುಕೊಂಡ ದೇಹದ ಭಾಗಗಳಿಗೆ ಭಂಡಾರ ಹಾರಿಸುವರು. ಕೆಲವೊಂದು ಸಾರಿ ರಕ್ತವೂ ಬರುವುದು. ಆಲಗ ಹಾಯುವವರಿಗೆ ದೇವರು ಮೈಯ್ಯಾಗ ಬಂದು ಮದುವೆ ಮಾಡುವವರು ದೇವರ ಆಚರಣೆ ಮಾಡುವುದನ್ನು ಮರೆತಿದ್ದರೆ ಹಾಗೂ ಹಿಂದೆ ಅವರೇನಾದರೂ ತಪ್ಪು ಮಾಡಿದ್ದರೆ ಅದನ್ನು ಹೇಳಿಕೆ ಮೂಲಕ ನೆನಪಿಸಿಕೊಡುತ್ತಾನೆ. ಹೇಳಿಕೆಯನ್ನು ಅರ್ಥೈಸಿಕೊಂಡು ಪೂಜೆ ಮಾಡುವುದರ ಮೂಲಕ ತಪ್ಪುಗಳನ್ನು ತಿದ್ದಿಕೊಳ್ಳುತ್ತಾರೆ.

ಆ. ಬೇಟೆ ಕೊಯ್ಯುವುದು : ಬೀರದೇವರನ್ನು ಮನೆದೇವರನ್ನಾಗಿ ಹೊಂದಿದವರು ಆ ದಿನದ ದೈವದ ಊಟವಾಗಿ ಕುರಿಗಳನ್ನು ದೇವರಿಗೆ ಬಲಿಕೊಟ್ಟು ಮಾಂಸದ ಅಡಿಗೆಯನ್ನು ಊಟಕ್ಕೆ ಬಡಿಸುವರು. ಇತರೆ ದೇವರು ಮನೆ ದೇವರಾಗಿದ್ದರೆ ಸಿಹಿ ಅಡಿಗೆ ಮಾಡುತ್ತಾರೆ. ಆಲ್ಗೈದವರು ಕುರಿಗಳ ಕುತ್ತಿಗೆಗೆ ಭಂಡಾರ ಹಚ್ಚಿದ ಕೂಡಲೆ ಕಟುಕರು ಕೊಯ್ಯುವರು. ಬಲಿ ಕೊಡುವ ಕುರಿಗಳ ಸಂಖ್ಯೆಯು, ವಧು-ವರರ ಸಂಖ್ಯೆ ಮತ್ತು ಬಂಧುಬಳಗದವರನ್ನು ಅವಲಂಬಿಸಿರುತ್ತಾರೆ. ಸಾಮಾನ್ಯವಾಗಿ ೮ ರಿಂದ ೩೦ ಕುರಿಗಳವರೆಗೆ ಬಲಿ ಕೊಡುತ್ತಾರೆ. ಕೆಲವೊಮ್ಮೆ ೬೦ ಕುರಿಗಳವರೆಗೆ ಬಲಿಕೊಟ್ಟ ಉದಾಹರಣೆಗಳಿವೆ. ಅವರು ದೇವರ ಮೇಲೆ ಇಟ್ಟಿರುವ ಗಾಢವಾದ ನಂಬಿಕೆ, ಸಂಪ್ರದಾಯಗಳಿಗೂ ಅವರ ಆರ್ಥಿಕತೆಗೂ ಸಂಬಂಧ ಕಲ್ಪಿಸಿರುವುದನ್ನು ಸೂಕ್ಷ್ಮವಾಗಿ ಸೂಚಿಸುತ್ತದೆ.

ಇ. ಗುಗ್ಗಳ ಕಾರ್ಯ : ಬೀರದೇವರನ್ನು ಮನೆದೇವರನ್ನಾಗಿ ಮಾಡಿಕೊಂಡವರು ಗುಗ್ಗಳ ಆಚರಣೆ ಮಾಡುತ್ತಾರೆ. ಗುಗ್ಗಳದ ಮಡಿಕೆ(ಬಿಂದಿಗೆ)ಯೊಳಗೆ ಹತ್ತಿಕಾಳು ತುಂಬಿ ಅದರ ಮಧ್ಯದಲ್ಲಿ ಗಂಧದ ಕಟ್ಟಿಗೆಗಳನ್ನು ನೆಟ್ಟಿರುತ್ತಾರೆ. ಗಂಧದ ಕಟ್ಟಿಗೆಗೆ ಬೆಂಕಿ ಹಚ್ಚುವರು. ಅದು ದೀಪದ ಹಾಗೆ ಉರಿಯುತ್ತದೆ. ದೀಪ ನಂದದ ಹಾಗೆ ಮದುಮಗನ ತಲೆಯ ಮೇಲೆ ಹೊತ್ತುಕೊಂಡು

ವಾದ್ಯ ಸಮೇತ ಬೀರದೇವರ ಗುಡಿಗೆ ಬರುವರು. ದೀಪ ನಂದಿದರೆ ಅಶುಭವೆನ್ನುವ ನಂಬಿಕೆಯಿದೆ. ಗರ್ಭಗುಡಿಯ ಸುತ್ತ ಐದು ಸುತ್ತು ತಿರುಗಿ ದೇವರ ಮುಂದೆ ಗುಗ್ಗಳ ಇಳಿಸಿ, ಬೀರದೇವರಿಗೆ ಪೂಜೆ ಸಲ್ಲಿಸುವರು. ನಂತರ ಗುಗ್ಗಳದ ಬೆಂಕಿ ನಂದಿಸಲು ಹಾಲು ತುಪ್ಪ ಬಳಸಿ ಗುಗ್ಗಳಗಳನ್ನು ಅಲ್ಲಿಯೇ ಬಿಟ್ಟು ಬರುವರು. ಆ ಸ್ಥಳದಲ್ಲಿಯೇ ಮದುಮಗನ ತಲೆಗೆ ಬಿಳಿಯ ಟೋಪಿ ಮತ್ತು ಬಾಸಿಂಗ ಕಟ್ಟಲಾಗುತ್ತದೆ. ಆ ಸಮಯದಲ್ಲಿ ದೇವರಿಗೆ ನಮಸ್ಕಾರ ಮಾಡಿ ಮದುಮಕ್ಕಳು ಹಣೆಗೆ ದಪ್ಪವಾಗಿ ಭಂಡಾರ ಹಚ್ಚಿಕೊಳ್ಳುತ್ತಾರೆ.

ಈ. ಐನೀರು ತರೋದು : ಐದು ಜನ ಮುತ್ತೈದೆ ಸ್ತ್ರೀ-ಪುರುಷರು ತಲಾ ಒಂದರಂತೆ ಐದು ಮಣ್ಣಿನ ಹೊಸ ಬಿಂದಿಗೆಗಳನ್ನು ಹೊತ್ತು ಕೈಯಲ್ಲಿ ಒಂದೊಂದು ಮಗೆಯನ್ನು ಹಿಡಿದುಕೊಂಡು ವಾದ್ಯ ಸಮೇತರಾಗಿ ನೀರು ತರಲು ಹೋಗುತ್ತಾರೆ. ನೀರು ತರಲು ಹೋದವರಿಗೆ ಬಲಗೈಗೆ, ಬಿಂದಿಗಿಗೆ ಹಾಗೂ ಮಗಿಗಳಿಗೆ ಕಂಕಣ ಕಟ್ಟಿರುತ್ತಾರೆ. ಗಂಗೆ ಇರುವಲ್ಲಿಗೆ ಹೋಗಿ ಪೂಜೆ ಮಾಡಿ ನೀರು ತುಂಬಿಕೊಂಡು ಮನೆಗೆ ಬರುತ್ತಾರೆ.

ಉ. ಸುರಿಗೆ ಸುತ್ತುವುದು ಅಥವಾ ಸುರಿಗೆ ನೀರು : ಮದುಮಗನ ಮನೆಯ ಮುಂದೆ ನೀರು ತುಂಬಿ ತಂದ, ಬಿಂದಿಗೆಗಳನ್ನಿಟ್ಟು ಅವು ಉರುಳಿ ಬೀಳದ ಹಾಗೆ ಹಿಡಿದುಕೊಂಡು ಅಲ್ಲೆ ಕೂರುತ್ತಾರೆ. ನಂತರ ಆ ಐದು ಬಿಂದಿಗೆಗಳಿಗೆ ಹತ್ತಿ ನೂಲಿನ ದಾರದಿಂದ ಐದು ಸುತ್ತು ಸುತ್ತುತ್ತಾರೆ. ಇದಕ್ಕೆ 'ಸುರಿಗೆ ಸುತ್ತುವುದು' ಎಂದು ಕರೆಯುವರು. ಸುರಿಗೆಯ ಮಧ್ಯದಲ್ಲಿ ಎರಡು ಒನಕೆ ಹಾಕಿ ಮುಂದಿನ ಒನಕೆಯ ಮೇಲೆ ಮದುಮಗ ಮತ್ತು ಮದುಮಗಳು ಹಿಂದಿನ ಒನಕೆಯ ಮೇಲೆ ಅವರ ತಾಯಂದಿರನ್ನು ಕೂರಿಸಿ ನೀರು ಹಾಕುವರು. ಇದಕ್ಕೆ 'ಸುರಿಗೆ ನೀರು' ಎನ್ನುವರು. ನೀರು ಹಾಕಿದ ನಂತರ ಹೊಸ ಬಟ್ಟೆಯನ್ನುಟ್ಟು ಕುಲದೇವರ (ಬೀರದೇವರ) ಗುಡಿಗೆ ಹೋಗಿ ಬರುವರು. ಗುಡಿಯಿಂದ ಬರುವಾಗ ಹಿಮ್ಮುಖವಾಗಿ ಬರುತ್ತಾರೆ.

ಊ. ಬಾಸಿಂಗ ಕಟ್ಟುವುದು : ದೇವರ ಕೋಣೆಯಲ್ಲಿ ಜಗಲಿ ಮುಂದಾಗಲಿ ಅಥವಾ ದೇವರ ಗುಡಿಯಲ್ಲಾಗಲೀ ಕರಿಯ ಕಂಬಳಿ ಹಾಸಿ ಅದರ ಮೇಲೆ ಮದುಮಗನನ್ನು ಕೂರಿಸಿ ಪೂಜಾರಿಗಳು ಅಥವಾ ಕಂಕಣ ಕಟ್ಟಿಕೊಂಡಿರುವವರು. ಗಂಡಿನ ತಲೆಗೆ ರುಮಾಲು ಸುತ್ತಿ ಬಾಸಿಂಗ ಕಟ್ಟುತ್ತಾರೆ. ಹಾಗೆಯೇ ಮದುವಣಗಿತ್ತಿಯನ್ನು ಕೂರಿಸಿ ಅವಳ ತಲೆಗೆ ಸೂಸುಗ ಹಾಕಿ ಬಾಸಿಂಗ ಕಟ್ಟುತ್ತಾರೆ.

ಋ. ತಾಳಿ ಕಟ್ಟುವುದು : ತಾಳಿ ಕಟ್ಟುವ ಮುಹೂರ್ತ ಮೊದಲೇ ನಿಗದಿಯಾಗಿರುವುದರಿಂದ ಈ ಕಾರ್ಯಕ್ಕೆ ಪುರೋಹಿತರು ಬರುತ್ತಾರೆ. ಮನೆಯ ತಲೆಬಾಗಿಲಲ್ಲಿ ನೆಟ್ಟಿದ್ದ ಸಣ್ಣ ಹಂದರದ ಕೆಳಗೆ ಗಂಡನ್ನು ಪೂರ್ವಾಭಿಮುಖವಾಗಿ ಮತ್ತು ಹೆಣ್ಣನ್ನು ಪಶ್ಚಿಮಾಭಿಮುಖವಾಗಿ ನಿಲ್ಲಿಸಿ ಇಬ್ಬರ ಮಧ್ಯದಲ್ಲಿ ಬಿಳಿಯ ಪಂಚೆಯನ್ನು ಇಳಿಬಿಟ್ಟು ಅಡ್ಡ ಹಿಡಿದಿರುತ್ತಾರೆ. ತಾಳಿ ಕಟ್ಟುವ ಶಾಸ್ತ್ರ

ಚರಣೆಗಳು ಮುಗಿಯುವವರೆಗೆ ಒಬ್ಬರ ಮುಖ ಇನ್ನೊಬ್ಬರು ನೋಡಬಾರದೆಂಬ ಉದ್ದೇಶದಿಂದ ಹೀಗೆ ಮಾಡುತ್ತಾರೆ. ಬಾಸಿಂಗ ಕಟ್ಟುವ ಮೊದಲೇ ಮದುಮಗ ಮತ್ತು ಮದುವಣಗಿತ್ತಿ ತಲಾ ೫ ಕರಿಮಣಿ ಹಾಗೂ ಒಂದೊಂದು ಬಂಗಾರದ ಗುಂಡು ಪೋಣಿಸಿಟ್ಟಿರುತ್ತಾರೆ. ಇಷ್ಟಾದ ಮೇಲೆ ಪುರೋಹಿತರು ಸಂಸ್ಕೃತ ಶ್ಲೋಕ ಪಠಿಸಿ ನೆರೆದ ಸಮಸ್ತ ಜನರ ಹಸ್ತದಿಂದ ಮುಟ್ಟಿಸಿ ಗಂಡಿನ ಕೈಯಿಂದ ಹೆಣ್ಣಿನ ಕೊರಳಿಗೆ ತಾಳಿ ಕಟ್ಟಿಸುತ್ತಾರೆ. ತಾಳಿ ಕಟ್ಟುವಾಗ ಎಲ್ಲ ಸಮಸ್ತರೂ ಆರ್ಶೀವಾದ ರೂಪವಾಗಿ ಅಕ್ಕಿಕಾಳನ್ನು ಹಾಕುತ್ತಾರೆ. ತಾಳಿ ಕಟ್ಟಿದ ಕೂಡಲೇ ವಧುವಿನ ಸೀರೆಯ ಸೆರಗಿನ ತುದಿ ಮತ್ತು ವರನ ಧೋತರದ ತುದಿಗಳನ್ನು ಹಿಡಿದು ಗಂಟುಹಾಕುತ್ತಾರೆ. ಇದನ್ನು 'ಬ್ರಹ್ಮಗಂಟು' ಎನ್ನುವರು. ಇಡೀ ಜೀವಮಾನದಲ್ಲಿ ಈ ದಾಂಪತ್ಯ ಬಿಚ್ಚಬಾರದು ಎಂಬ ಸಂಕೇತ ಈ ಬ್ರಹ್ಮಗಂಟಿನದಾಗಿದೆ.

ಈ ಕಾರ್ಯವಾದ ಮೇಲೆ ನೆರೆದಿರುವ ಸ್ತ್ರೀ-ಪುರುಷರು ನವ ಜೋಡಿಗಳ ಹೆಸರು ಹೇಳಲು ಒತ್ತಾಯಿಸುವರು. ಆ ಸಮಯದಲ್ಲಿ ಗಂಡು ತನ್ನ ಹೆಂಡತಿಯ ಹೆಸರನ್ನು ಹಾಗೂ ಹೆಣ್ಣು ತನ್ನ ಗಂಡನ ಹೆಸರನ್ನು ಒಗಟಿನ ಮೂಲಕ ಹೇಳುತ್ತಾರೆ. ಕೊನೆಯ ಪದದಲ್ಲಿ ತಮ್ಮ ಹೆಸರನ್ನು ಸೇರಿಸಿ ಹೇಳುವುದು ವಾಡಿಕೆ. ಉದಾಹರಣೆಗೆ ಗಂಡು ಹೆಣ್ಣಿನ ಹೆಸರನ್ನು ಈ ರೀತಿಯಾಗಿ ಹೇಳುತ್ತಾನೆ.

"ಕರೆ ಕುದುರೆ ತಗೊಂಡು ಕರ‍್ಯಾಕೆ ಹೋದರೆ ನೆರತಿಲ್ಲ ಎಂದು ನ್ಯಾಯ ಮಾಡ್ತಾಳೆ
ಮಾಳಿ"- ಮಾಳಮ್ಮ.

"ಹಗ್ಗಲಿ ಬಡಿದರೆ ಮಗ್ಗಲದಾಗ ಬರುತಾಳೆ ಸೋನಿ"- ಸೊನಬಾಯಿ

"ಹಂಡೆವುದಾಗ ಕುಂತು ಉಂಡೆ ತಿಂತಾಳ ಬಾಗಿ" - ಬಾಗವ್ವ

ಹೆಣ್ಣು ಗಂಡಿನ ಹೆಸರೇಳುವಾಗ

"ಕಟುಕು ರೊಟ್ಟಿ-ಖಾರಪುಡಿ ತಿನ್ನಕೊಂಡು ಹೋಗಂದ್ರ
ಸೆಟಗೊಂಡು ಹೋಗ್ತಾನ ಅಪ್ಪಣ್ಣ" - ಅಪ್ಪಣ್ಣ

"ದೂರನಿಂತು ಕೇಳು ದೊರೆಪತಿ ಹೆಸರು,
ಸರಿದು ನಿಂತು ಕೇಳು ಸರಜೇರು ಹೆಸರು
ಹತ್ತು ಮಂದ್ಯಾಗ ಹೇಳ್ತೀನಿ ಲಿಂಗಣ್ಣನ ಹೆಸರು" - ಲಿಂಗಣ್ಣ

ಇಷ್ಟೆಲ್ಲ ಆದ ಮೇಲೆ ವಧುವರರನ್ನು ಮನೆಯೊಳಕ್ಕೆ ಕರೆದುಕೊಂಡು ಹೋಗುವರು. ಮನೆಯ ತಲಬಾಗಿಲಲ್ಲಿ ವರನ ಸಹೋದರಿಯು ಅಡ್ಡ ನಿಂತು ವಧುವರರ ಕಾಲು ತೊಳೆದು ಬೇಡಿ ನಿಲ್ಲುತ್ತಾಳೆ. ಇಲ್ಲಿ ವರನಿಗೂ ಮತ್ತು ವರನ ಸೋದರಿಗೂ ನಡೆಯುವ ಸಂಭಾಷಣೆ ಹೀಗಿದೆ.

ಜೋಪಾನ ಮಾಡು, ನೀನು ಜೋಪಾನ ಮಾಡು ಎನ್ನುವರು. ಹಾಗೆಯೇ ಹೆಣ್ಣು ನಾನು ಅಡಿಗೆ ಮಾಡಬೇಕು ಎತ್ತಿಕೊಂಡು ಸಮಧಾನ ಪಡಿಸು ಎನ್ನುವಳು, ಗಂಡು ನಾನು ಕುರ್ರ್ಯಾಕ ಹೋಗಬೇಕು ಎತ್ತಿಕೋ ಎಂದು ಗಂಡ-ಹೆಂಡತಿಯರ ನಡುವೆ ಮಾತಿನ ಸಂಭಾಷಣೆ ಮೂಲಕ ಗೊಂಬೆಯನ್ನು ಕೊಡುವುದು ಮತ್ತು ತೆಗೆದುಕೊಳ್ಳುವುದನ್ನು ಮಾಡುತ್ತಾರೆ.

ದೈವದ ಊಟ : ಈ ಊಟವನ್ನು ಒಂದೇ ಬೆಡಗಿಗೆ ಸೇರಿದವರು ಕೂಡಿ ಅಡಿಗೆ ಮಾಡಿಸಿ ಸಮಾಜಕ್ಕೆ ಊಟ ಹಾಕಿಸುತ್ತಾರೆ. ಬೀರದೇವರ ಭಕ್ತರಾದವರು ಈ ಊಟಕ್ಕೆ ಕುರಿ-ಮೇಕೆಗಳ ಮಾಂಸ ಹಾಗೂ ಅನ್ನ ಮಾಡಿ ಊಟಕ್ಕೆ ಬಡಿಸುವರು. ಮಾಳಿಂಗರಾಯ, ಅರಣ್ಯಸಿದ್ಧ ಇತ್ಯಾದಿ ದೇವರ ಭಕ್ತರು ಸಿಹಿ ಅಡಿಗೆ ಮಾಡುವರು. ಈ ಊಟಕ್ಕೆ ಬೇಕಾಗುವಷ್ಟು ಕಿರಾಣಿ ಸಾಮಾನುಗಳನ್ನು ದೈವದ ಮುಖಂಡರಿಗೆ ನೀಡುವರು. ದೈವದ ಮುಖಂಡರೆ ಅಡುಗೆ ಮಾಡಿ ಎಲ್ಲರಿಗೂ ಊಟಕ್ಕೆ ಬಡಿಸುವರು. ಇಲ್ಲಿ ಮದುವೆ ಮಾಡುವವರ ಮಾತು ಅಷ್ಟಕಷ್ಟೆ, ಪ್ರತಿಯೊಂದು ತೀರ್ಮಾನ ದೈವದ ಮುಖಂಡರದು. ಅವರು ಕೇಳಿದ ವಸ್ತುಗಳನ್ನು ಒದಗಿಸಬೇಕು. ಊಟ ಮಾಡುವಾಗ ಶ್ರೀಮಂತ-ಬಡವ ಎಂಬ ಭೇದ ಮಾಡದೇ ಎಲ್ಲರೂ ನೆಲದ ಮೇಲೆ ಸಾಲಾಗಿ ಕುಳಿತುಕೊಂಡು ಊಟ ಮಾಡಬೇಕು. ಒಂದು ವೇಳೆ ತಾರತಮ್ಯ ಮಾಡಿದ್ದೇ ಆದರೆ ದೈವದವರಲ್ಲಿ ಜಗಳಗಳಾಗವುದುಂಟು. ಒಟ್ಟಾರೆಯಾಗಿ ಈ ಊಟ ದೇವರ ಅಥವಾ ದೈವದ ಊಟವಾಗಿದ್ದರಿಂದ ಯಾರೂ ಭೇದ ಮಾಡಬಾರದೆಂಬುದೇ ಇವರ ನಂಬಿಕೆ ಹಾಗೂ ಪದ್ಧತಿಯಾಗಿದೆ.

೩. ಮಸಿ ಊಟ (ತಾಳಿಯ ಮಾರನೆಯ ದಿನ)

ಕರಿ ನೀರು ಊಟ : ಬೀರದೇವರ ಭಕ್ತರಾದವರು ದೈವದ ಊಟದ ದಿನದಂದು ಒಂದೆರಡು ಕುರಿಗಳ ತಲೆ ಮತ್ತು ತೊಡೆಗಳನ್ನು ತೆಗೆದಿಟ್ಟಿರುತ್ತಾರೆ. ಮರುದಿನ ಬೆಳಿಗ್ಗೆ ಅಕ್ಕಿ, ಎಣ್ಣೆ, ಕಾರ, ತಲೆ ಮತ್ತು ತೊಡೆಗಳನ್ನು ಹೆಣ್ಣಿನ ಕಡೆಯವರಿಗೆ ಕೊಡುವರು. ಬೀಗರು ತಾವು ಉಳಿದುಕೊಂಡ ಮನೆಯಲ್ಲಿ ಈ ಅಡಿಗೆಯನ್ನು ಮಾಡಿ ಗಂಡಿನವರನ್ನು ಕರೆದು ಊಟಮಾಡುತ್ತಾರೆ.

೪. ಅಳಿಯುನ ಕಾಲು ತೊಳೆಯುವುದು ಮತ್ತು ಧಾರೆ ಎರೆಯುವುದು

ಇದನ್ನು ಮದುವಣಗಿತ್ತಿಯ ಚಿಕ್ಕಪ್ಪ-ಚಿಕ್ಕಮ್ಮ ಅಥವಾ ದೊಡ್ಡಪ್ಪ-ದೊಡ್ಡಮ್ಮ ಮಾಡುವ ಕಾರ್ಯ. ಇವರು ಐದು ವಿಧದ ಅಡುಗೆಗೆ ಬಳಸುವ ಸಾಮಾನುಗಳನ್ನು (ಅಂಡೆವು, ತಂಬಿಗೆ, ಗಂಗಾಳ, ಎರಡು ಲೊಟ) ಹಾಗೂ ಕಂಚಿನ ಮೂರ್ತಿ(ಬಾಲಕೃಷ್ಣ)ಗಳನ್ನು ವಾದ್ಯದೊಂದಿಗೆ ಹೊತ್ತುಕೊಂಡು ಮದುಮಗನ ಮನೆಗೆ ಬರುತ್ತಾರೆ. ಬಂದವರು ತಾವು ತಂದ ಗಂಗಾಳದಲ್ಲಿ ಅಳಿಯನ ಕಾಲು ತೊಳೆಯುತ್ತಾರೆ. ಇದಕ್ಕೆ ಅಳಿಯನ ಕಾಲು ತೊಳೆಯುವಿಕೆ ಎಂದು ಕರೆಯುವರು. ಹಾಗೆಯೇ ತಮ್ಮ ಮಗಳನ್ನು ಗಂಡಿನ ಮನೆಗೆ ಒಪ್ಪಿಸುವುದನ್ನು ಧಾರೆ ಎರೆಯುವುದೆಂದು ಕರೆಯುತ್ತಾರೆ.

ಹೀಗೆ ತಂದ ಸಾಮಾನುಗಳ ಮೌಲ್ಯದಷ್ಟು ಧಾರೆ ಎರೆದವರಿಗೆ ಗಂಡಿನವರು ಬಟ್ಟೆಯನ್ನು ತರಬೇಕು. ಇಲ್ಲವಾದರೆ ಅಷ್ಟು ಮೌಲ್ಯದ ಅಡುಗೆ ಸಾಮಾನುಗಳನ್ನು ಪ್ರತಿಯಾಗಿ ಕೊಡಬೇಕು. ಇದಾದ ನಂತರ ಹೆಣ್ಣು ಮನೆಯವರು ವಿವಿಧ ಬಗೆಯ ಅಡುಗೆ ಪದಾರ್ಥಗಳನ್ನು ಹಾಗೂ ಅಡುಗೆ ಸಾಮಾನುಗಳನ್ನು ಗಂಡಿನ ಮನೆಗೆ ತಂದು ಒಪ್ಪಿಸುವ ಕಾರ್ಯಕ್ರಮವಿರುತ್ತದೆ.

ಆ. ಗಂಗೆಶಾಸ್ತ್ರ : ವಧು-ವರರು ಹಾಗೂ ಬಂಧುಗಳು ತಾಳಿಯ ಮರುದಿನ ವಧುವಿನ ಮನೆಗೆ ಹೋಗಿ ಅರಿಶಿಣದ ನೀರಿನ ದಿನವನ್ನು ಲೆಕ್ಕ ಮಾಡಿ ಐದನೇ ದಿನದಲ್ಲಿ ಗಂಗೆ ಪೂಜೆ ಮಾಡುವರು. ಈ ದಿನದಂದು ವಧು-ವರರು ತಲೆಯ ಮೇಲೆ ಮಣ್ಣಿನ ಬಿಂದಿಗೆ ಹೊತ್ತುಕೊಂಡು ಸುಮಂಗಲೆಯರು ಆರತಿ ಹಿಡಿದುಕೊಂಡು ಗಂಗೆಗೆ ಹೋಗಬೇಕು. ಗಂಗೆಗೆ ಹುಗ್ಗಿ, ಅನ್ನ ಅರ್ಪಿಸಿ ಪೂಜೆ ಮಾಡಬೇಕು. ನಂತರ ಬಿಂದಿಗೆಯಲ್ಲಿ ನೀರು ತುಂಬಿಕೊಂಡು ತಲೆಯ ಮೇಲೆ ಹೊತ್ತು ಮನೆಗೆ ಬಂದು ದೇವರ ಮುಂದೆ ಇಳಿಸುವರು. ಈ ಸಮಯದಲ್ಲಿ ವಧು-ವರರನ್ನು ಗಂಡನ ಹಾಗೂ ಹೆಂಡತಿಯ ಹೆಸರು ಹೇಳಲು ಒತ್ತಾಯಿಸುವುದು ಕಂಡುಬರುತ್ತದೆ.

ಇ. ಸೋಬಾನ (ಮೊದಲ ರಾತ್ರಿ) : ಗಂಗೆಶಾಸ್ತ್ರ ಆಚರಣೆ ಮಾಡಿದ ಹನ್ನೊಂದನೆ ದಿನ ಅಂದರೆ ಮದುವೆಯಾಗಿ ಹದಿನಾರನೆ ದಿನದಂದು ಹೊಸ ದಂಪತಿಗಳನ್ನು ಒಟ್ಟುಗೂಡಿಸುವುದು ಅಲೆಮಾರಿ ಕುರುಬರ ಸಂಪ್ರದಾಯ. ಮದುವೆಯಾದ ಹುಡುಗಿ ಋತುಮತಿಯಾಗಿದ್ದರೆ ಮದುವೆಯಾದ ಹೊಸದರಲ್ಲಿ ಕೆಲವು ದಿನಗಳು ತವರು ಮನೆಗೆ ಹೋಗಿ, ಸ್ವಲ್ಪ ಕಾಲ ಅಲ್ಲಿದ್ದು, ಅನಂತರ ಗಂಡನ ಮನೆಗೆ ಮರಳುತ್ತಾಳೆ. ತವರು ಮನೆಯಲ್ಲಿ ತಂಗಬೇಕಾದ ದಿನಗಳೆಷ್ಟು ಎಂಬುದನ್ನು ಎರಡು ಕಡೆಯ ಹಿರಿಯರು ನಿರ್ಧರಿಸುತ್ತಾರೆ. ಒಂದು ವೇಳೆ ಹುಡುಗಿ ಋತುಮತಿಯಾಗಿರದಿದ್ದರೆ ಒಂದು ವಾರದವರೆಗೆ ಮಾತ್ರ ಗಂಡನ ಮನೆಯಲ್ಲಿರಿಸಿಕೊಂಡು ತವರಿಗೆ ಕಳುಹಿಸಿಕೊಡುತ್ತಾರೆ. ಮತ್ತೆ ಅವಳನ್ನು ಗಂಡನ ಮನಗೆ ಕರೆ ತರುವುದು ಅವಳು ಪ್ರೌಢ ಸಂಸ್ಕಾರಕ್ಕೆ ಒಳಗಾದ ನಂತರವೇ. ಒಮ್ಮೊಮ್ಮೆ ಗಂಡನ ಮನೆಯಲ್ಲಿ ಕೆಲಸದ ಒತ್ತಡವಿದ್ದರೆ ಹುಡುಗಿ ಚಿಕ್ಕವಳಿದ್ದರೂ, ಗಂಡಿನ ಕಡೆಯವರು ಬಂದು ಕರೆದುಕೊಂಡು ಹೋಗುವ ಸಾಧ್ಯತೆ ಇರುತ್ತದೆ.

ಬಹುಪತ್ನಿತ್ವ : ಈ ಸಮುದಾಯದಲ್ಲಿ ಏಕಪತ್ನಿತ್ವ ಕುಟುಂಬಗಳೇ ಜಾಸ್ತಿ ಇವೆ. ಬಹುಪತ್ನಿತ್ವಕ್ಕೆ ಹೆಚ್ಚಿನ ಪ್ರಾಶಸ್ತ್ಯವಿರದಿದ್ದರೂ ಕೆಲವೊಂದು ಸಂದರ್ಭಗಳಲ್ಲಿ ಬಹುಪತ್ನಿತ್ವ ವಿವಾಹಕ್ಕೆ ಅವಕಾಶವಿದೆ. ಮದುವೆಯಾಗಿ ಬಹುದಿನಗಳವರೆಗೆ ಮಕ್ಕಳಾಗದಿದ್ದರೆ, ಹೆಂಡತಿ ಬಂಜೆ ಎಂದು ಕಂಡುಬಂದಲ್ಲಿ, ಅನಾರೋಗ್ಯದಿಂದ ಬಳಲುತ್ತಿದ್ದು ಸದಾ ರೋಗಿಯಾಗಿದ್ದರೆ, ಹೆಂಡತಿ ಗಂಡು ಮಕ್ಕಳಿಗೆ ಜನ್ಮ ನೀಡದಿರುವ ಇತ್ಯಾದಿ ಪ್ರಸಂಗಗಳಲ್ಲಿ ಮಕ್ಕಳನ್ನು ಪಡೆಯುವ ಸಲುವಾಗಿ ಬಹುಪತ್ನಿತ್ವ ಹೊಂದಲು ಇಷ್ಟ ಪಡುತ್ತಾರೆ. ವಂಶದ ಕುಡಿ ಬೆಳೆಯಬೇಕೆಂಬುದು ಒಂದಾದರೆ, ಮತ್ತೊಂದು ಕುರಿ

ಸಾಕಾಣಿಕೆಯಿಂದಲೇ ಜೀವನ ನಿರ್ವಹಣೆ ಮಾಡಬೇಕಾಗಿರುವುದರಿಂದ ಅವನ್ನು ಸಾಕಿ-ಸಲುವುದಕ್ಕಾಗಿ ಹಾಗೂ ಮುಪ್ಪಿನಲ್ಲಿ ತಮ್ಮನ್ನು ನೋಡಿಕೊಳ್ಳಲು ಗಂಡು ಸಂತಾನಬೇಕೆಂಬ ಉದ್ದೇಶದಿಂದ ಬಹುಪತ್ನಿತ್ವ ಹೊಂದುತ್ತಾರೆ.

ವಿಧವಾ ವಿವಾಹ

ಅಲೆಮಾರಿ ಕುರುಬರಲ್ಲಿ ಗಂಡ ಸತ್ತ ಮೇಲೆ ವಿಧವೆಯು ಮರುವಿವಾಹ ಮಾಡಿಕೊಳ್ಳಲು ಅವಕಾಶವಿದೆ. ಅದಕ್ಕೆ 'ಕೂಡಿಕೆ' ಅಥವಾ 'ಕೂಡಾವಳಿ' ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ಹೆಣ್ಣು ಚಿಕ್ಕ ವಯಸ್ಸಿನವಳಾಗಿದ್ದು ಅಥವಾ ಇನ್ನು ಮಕ್ಕಳು ಆಗದೆ ಇದ್ದ ಪ್ರಸಂಗಗಳಲ್ಲಿ 'ವಿಧವಾ ವಿವಾಹ' ಮಾಡಲಾಗುತ್ತದೆ. ವಿಧವೆಯನ್ನು ಮದುವೆ ಮಾಡಿಕೊಳ್ಳುವ ಗಂಡು ಈಗಾಗಲೇ ಮದುವೆಯಾಗಿರುತ್ತಾನೆ ಅಥವಾ ಹೆಂಡತಿ ತೀರಿಕೊಂಡಿರುತ್ತಾಳೆ. ಅಥವಾ ಹೆಂಡತಿಯನ್ನು ಬಿಟ್ಟಿರುತ್ತಾನೆ. ಇಂತಹ ಮದುವೆಗಳು ದೇವರ ಗುಡಿಗಳಲ್ಲಿ ಜರುಗುತ್ತವೆ. ಸಾಮಾನ್ಯವಾಗಿ ವಿವಾಹವಾಗುವ ಸ್ತ್ರೀ ಅತ್ತೆ-ಮಾವನ ಒಪ್ಪಿಗೆ ತೆಗೆದುಕೊಂಡೆ ವಿವಾಹ ಮಾಡುತ್ತಾರೆ. ಈ ತರಹದ ಮದುವೆಯಾದ ಗಂಡು-ಹೆಣ್ಣುಗಳು ಮಂಗಳ ಕಾರ್ಯಗಳಲ್ಲಿ ಭಾಗವಹಿಸುವಂತಿಲ್ಲ. ಹಾಗೆಯೇ ಇವರಿಗೆ ಹುಟ್ಟುವ ಮಕ್ಕಳು ಕಾಲಾಂತರದಲ್ಲಿ ಪುನಃ ಕೂಡಾವಳಿ ಕುಟುಂಬಗಳಿಂದಲೇ ತಮಗೆ ಸಂಗಾತಿಗಳನ್ನು ಹುಡುಕಿಕೊಳ್ಳುವುದು ಅನಿವಾರ್ಯವಾಗಿದೆ.

ಮರಣ (ಸಾವು)

ಮಾನವ ಜೀವನದಲ್ಲಿ ಕೊನೆಯದಾಗಿ ನಡೆಯುವ ಸಂಸ್ಕಾರವೇ ಮರಣ ಸಂಸ್ಕಾರ. ಮರಣಾ ನಂತರ ವ್ಯಕ್ತಿಗೆ ಸ್ವರ್ಗ ಪ್ರಾಪ್ತಿಯಾಗಲಿ ಎಂಬ ಸದುದ್ದೇಶದಿಂದ ಅವನ ಆಪ್ತರು ಯೋಗ್ಯ ರೀತಿ ಯಲ್ಲಿ ಅಂತ್ಯ ವಿಧಿ ಸಂಸ್ಕಾರಗಳನ್ನು ನಡೆಸುವುದು ವಾಡಿಕೆಯಾಗಿದೆ. ಸತ್ತ ವ್ಯಕ್ತಿ ತನ್ನ ಜೀವಿತದ ಅವಧಿಯಲ್ಲಿ ಗಳಿಸಿದ ಪಾಪ ಪುಣ್ಯಗಳ ಆಧಾರದ ಮೇಲೆ ಸ್ವರ್ಗವಾಸಿಯಾಗಿ ದೇವರಾಗುತ್ತಾನೆಂದು ಇಲ್ಲವೆ ನರಕದಲ್ಲಿ ಬಿದ್ದು ದೆವ್ವ ಪೀಡೆಯಾಗುತ್ತಾನೆಂದೂ ಅಲೆಮಾರಿ ಕುರುಬರು ನಂಬುತ್ತಾರೆ.

ಇವರಲ್ಲಿ ಸತ್ತವರನ್ನು ಹೂಳುವ ಹಾಗೂ ಸುಡುವ ಎರಡು ಪದ್ಧತಿಗಳಿವೆ. ಬಾಣಂತಿಯರನ್ನು ಪಿಳ್‌ಜುಟ್ಟು ಬಿಟ್ಟವರನ್ನು, ಕುಷ್ಠರೋಗ, ತೊನ್ನುರೋಗ ಇರುವವರನ್ನು ಸುಟ್ಟರೆ ಉಳಿದವರನ್ನು ಹೂಳುತ್ತಾರೆ. ಸತ್ತ ವಿಷಯವನ್ನು ಆಪ್ತರಿಗೆಲ್ಲಾ ತಿಳಿಸುವರು. ಅವರು ಬಂದೊಡನೆ ಸತ್ತ ವ್ಯಕ್ತಿ ಮದುವೆಯಾಗಿದ್ದಲ್ಲಿ ತೇರು ಕಟ್ಟಿ ನಾಲ್ಕು ಮಂದಿ ಹೊತ್ತುಕೊಂಡು ಹೋಗುತ್ತಾರೆ. ಮದುವೆಯಾಗದೆ ಸತ್ತವರನ್ನು ಚಟ್ಟದ ಮೇಲೆ ಅಂಗಾತ ಮಲಗಿಸಿ ಹೊತ್ತುಕೊಂಡು ಹೋಗುತ್ತಾರೆ. ಸತ್ತವ್ಯಕ್ತಿಯ ಮುಂದೆ ಹಿರಿಯ ಮಗ ಬಂದು ಕೈಯಲ್ಲಿ ಅನ್ನದ ಮಡಿಕೆ ಇನ್ನೊಂದು ಕೈಯಲ್ಲಿ ಬೆಂಕಿಯಿರುವ ಮಡಿಕೆಯನ್ನು ಹಿಡಿದು ಹೊರಡುತ್ತಾನೆ. ಸ್ಮಶಾನದಲ್ಲಿ ಹೆಣದ ಎಡದಿಂದ ಮೂರು ಸಾರಿ ಪ್ರದಕ್ಷಿಣೆ

ಹಾಕಿದ ಮೇಲೆ ನಾಲ್ಕು ದಿಕ್ಕಿಗೂ ಮಡಿಕೆಯಲ್ಲಿರುವ ಅನ್ನ ಎಸೆದು ಮೃತ ವ್ಯಕ್ತಿಯ ತಲೆಯ ಹತ್ತಿರ ಮಡಿಕೆ ಒಡೆಯುತ್ತಾರೆ. ಕುಳಿತ ಭಂಗಿಯಲ್ಲಿಯೇ ಶವವಿಟ್ಟು ಉತ್ತರಾಭಿಮುಖವಾಗಿ ಸಮಾಧಿಯ ಗೂಡಿನಲ್ಲಿ ಕೂಡಿಸುವರು. ಮದುವೆಯಾಗದಿದ್ದ ಹೆಣವನ್ನು ಸಮಾಧಿಯಲ್ಲಿರುವ ಉದ್ದ ಗೂಡಿನಲ್ಲಿ ದಕ್ಷಿಣಕ್ಕೆ ತಲೆ ಮಾಡಿ ಮಲಗಿಸುವರು. ನಂತರ ಮೃತನಿಗೆ ಸದ್ಗತಿ ಕೋರುವ ಮಂಗಳ ಹಾಡಿ ಮುಗಿಸುತ್ತಿದ್ದಂತೆಯೇ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದ ಬಂಧುಗಳು ಬಂದು ಐದು ಬೊಗಸೆ ಮಣ್ಣನ್ನು ಸಮಾಧಿಯಲ್ಲಿ ಹಾಕಿ ಋಣ ತೀರಿಸುವರು.

ಮೂರನೆ ದಿನದ ಕಾರ್ಯ : ಇದನ್ನು ಅಲೆಮಾರಿ ಕುರುಬರು ದಿನ ಹಾಕುವುದು ಎನ್ನುತಾರೆ. ಈ ಕಾರ್ಯವನ್ನು ತೀರಿಕೊಂಡ ಮೂರನೆಯ ದಿನದಂದು ಮಾಡುವರು. ಅಂದು ಬೇಟೆ ಕೊಯ್ದು ಮಾಂಸ ಅಡುಗೆ ಮಾಡಿಕೊಂಡು, ಸತ್ತ ವ್ಯಕ್ತಿ ಊಟ ಮಾಡುವ, ಕುಡಿಯುವ ಮತ್ತು ಸೇದುವ ಎಲ್ಲಾ ಆಹಾರ ಮತ್ತು ಪಾನೀಯಗಳನ್ನು ಎರಡು ಮರದಲ್ಲಿಟ್ಟುಕೊಂಡು ಸಮಾಧಿಯ ಸ್ಥಳಕ್ಕೆ ತೆಗೆದುಕೊಂಡು ಹೋಗುವರು. ಸತ್ತ ವ್ಯಕ್ತಿಯ ಸಮಾಧಿಗೆ ಎಡೆ ಸಲ್ಲಿಸಿ ಕಾಗೆಯನ್ನು ಕರೆಯುವ ಪದ್ಧತಿಯುಂಟು. ಕಾಗೆಯು ಎಡೆಯನ್ನು ಎಂಜಲು ಮಾಡುವವರೆಗೂ ಯಾರೂ ಊಟ ಮಾಡುವಂತಿಲ್ಲ. ಕಾಗೆ ಮುಟ್ಟಿದರೆ ಯಾವ ತೊಂದರೆಯೂ ಇಲ್ಲ ಎಂದು ತಿಳಿಯುತ್ತಾರೆ. ಎಡೆಯನ್ನು ಕಾಗೆ ಮುಟ್ಟದಿದ್ದರೆ ಇನ್ನೂ ಅನಿಷ್ಟ ಕಾದಿದೆ ಎಂದೇ ತಿಳಿಯುತ್ತಾರೆ. ಅಂದಿನ ಕಾರ್ಯಕ್ಕೆ ಬಂದ ಎಲ್ಲರಿಗೂ ಅನ್ನ ಮತ್ತು ಮಾಂಸದೂಟವನ್ನು ನೀಡಲಾಗುವುದು.

ದಿವಸ ಅಥವಾ ಒಂಬತ್ತನೇ ದಿನದ ಕಾರ್ಯ : ಈ ದಿನವು ಶಾಂತಿ ಸಂಸ್ಕಾರದ ಕಾರ್ಯವಾಗಿರುತ್ತದೆ. ಅಂದು ಮನೆಯನ್ನು ಶುಭ್ರಗೊಳಿಸಿ ತಾವು ಶುಭ್ರಗೊಂಡು ಪೂಜಾರಿ ಮಂತ್ರಿಸಿದ ನೀರನ್ನು ಮನೆ ತುಂಬಾ ಸಿಂಪಡಿಸುವ ಮೂಲಕ ಮೈಲಿಗೆಯನ್ನು ಕಳೆದುಕೊಳ್ಳುವರು. ಅಂದು ಋಣ ಕೊಟ್ಟ ವ್ಯಕ್ತಿಯ ತಲೆ ಬೋಳಿಸಿ ಹೊಸ ಬಟ್ಟೆಧರಿಸಿ ಎಡೆಗೆ ಮಾಡಿದ ಸಿಹಿ ಅಡುಗೆ(ಉಗ್ಗಿ ಅಥವಾ ಲಡ್ಡು)ಗಳನ್ನು ಅವನ ಹೆಗಲ ಮೇಲಿರಿಸಿಕೊಂಡು ಸಮಾಧಿಗೆ ಹೋಗುವರು. ಅಲ್ಲಿ ಪೂಜೆ ಮಾಡಿ ಮನೆಗೆ ಬಂದು, ಸತ್ತವರಿಗೆ ಬಟ್ಟೆ ಏರಿಸಿ ಪೂಜೆ ಮಾಡುವರು. ಪೂಜೆಗೆ ಬಂದ ಆಪ್ತರು ಋಣ ಕೊಟ್ಟವರ ಹೆಗಲ ಮೇಲೆ ಹೊಸ ಟವಾಲುಗಳನ್ನು ಹಾಕುವುದು ಸಂಪ್ರದಾಯ. ಆ ಕಾರ್ಯಕ್ಕೆ ಮಾಡಿದ ಸಿಹಿ ಅಡುಗೆ ಊಟಮಾಡಿ ಮರುದಿನ ಬೆಳಿಗ್ಗೆ ಊರುಗಳಿಗೆ ಹೋಗುವರು.

ಅಲೆಮಾರಿ ಕುರುಬರು ಮೃತನ ಪುಣ್ಯತಿಥಿಯನ್ನು ಆಚರಿಸದಿದ್ದರೂ ಯುಗಾದಿಯ ಪಾಡ್ಯದಂದು ಹಿರಿಯರ ಹಬ್ಬವೆಂದು ಆಚರಿಸುವರು. ಅಂದು ಮೃತನ ಸ್ಮರಣಾರ್ಥ ಕುರಿಮರಿ ಬಲಿಕೊಟ್ಟು ಹೊಸ ಬಟ್ಟೆಗಳನ್ನಿಟ್ಟು ನೈವೇದ್ಯದ ಮುಖಾಂತರ ಆಚರಣೆಯನ್ನು ಮುಕ್ತಾಯಗೊಳಿಸುವ ಪದ್ಧತಿ ಈಗಲೂ ನಡೆದುಕೊಂಡು ಬಂದಿದೆ.

೬.೭ ವಾರ್ಷಿಕ ಆಚರಣೆಗಳು

ವಾರ್ಷಿಕ ಆಚರಣೆಗಳು ಸಾಮಾನ್ಯವಾಗಿ ಹಬ್ಬಗಳಾಗಿರುತ್ತವೆ. ಇವು ಸಮುದಾಯದ ಬದುಕಿನಲ್ಲಿ, ಜನರ ಸುಖ ಸಾಧನೆಯಲ್ಲಿ, ಪರಲೋಕದ ಮುಕ್ತಿ ಪ್ರಾಪ್ತಿಗಳಲ್ಲಿ, ಹಬ್ಬಗಳು ಪ್ರಮುಖ ಪಾತ್ರವಹಿಸುತ್ತವೆ. ಈ ಹಬ್ಬಗಳು ಮಾನವ ಜೀವಜಗತ್ತು, ದೇವರುಗಳ ಸಂಬಂಧ, ಹುಟ್ಟು, ಸಾವು, ಸುಖ-ದುಃಖ ಇತ್ಯಾದಿ ಜೀವನ ಸಂಬಂಧಿ ವಿಚಾರಗಳ ಬಗೆಗೆ ಮಾನವನನ್ನು ಸಮರ್ಪಕ ರೀತಿಯಲ್ಲಿ ಯೋಚಿಸಿ ಮುನ್ನಡೆಸುವುದರ ಜೊತೆಗೆ ಸಂಕುಚಿತ ಭಾವನೆಗಳನ್ನು ದೂರಮಾಡುತ್ತವೆ. ಇವು ಮಾನವನನ್ನು ದಿನನಿತ್ಯದ ಲೌಕಿಕ ಜೀವನದಿಂದ ಪಾರಮಾರ್ಥಿಕ ಜೀವನದತ್ತ ಯೋಚಿಸಲು ಹಾಗೂ ಸಮುದಾಯಗಳ ಇತಿಹಾಸವನ್ನು ಕಟ್ಟಿಕೊಡುವಲ್ಲಿ ಪ್ರಮುಖ ಆಕರಗಳಾಗುತ್ತವೆ. ಸಾಮಾನ್ಯವಾಗಿ ಬಹುತೇಕ ಬುಡಕಟ್ಟು ಹಬ್ಬಗಳು ಫಲೋತ್ಪತ್ತಿ ಸಂಬಂಧಿಯಾಗಿದ್ದು, ಸೂರ್ಯ-ಚಂದ್ರರ ಚಲನೆಯನ್ನು ಅವಲಂಬಿಸಿವೆ. ಹಬ್ಬಗಳ ಆಚರಣೆಯು ಆಧ್ಯಾತ್ಮಕ, ಆರೋಗ್ಯ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಅಂಶಗಳನ್ನು ಒಳಗೊಂಡಿರುತ್ತವೆ. ಪ್ರಾರ್ಥನೆ ಮನಸ್ಸನ್ನು ಶುದ್ಧಿಗೊಳಿಸಿದರೆ, ವಿಶೇಷ ಆಹಾರ ಸೇವನೆ ದೇಹದ ಆರೋಗ್ಯವನ್ನು ಕಾಪಾಡುತ್ತದೆ. ಹಬ್ಬಗಳ ಆಚರಣೆಯಲ್ಲಿ ಬಂಧು-ಮಿತ್ರರು, ಸಮುದಾಯದವರು ಬೆರೆಯುವುದರಿಂದ ಸಾಮಾಜಿಕ ಸಾಮರಸ್ಯವನ್ನು ಕಾಪಾಡುವುದರ ಜೊತೆಗೆ ತಿಳುವಳಿಕೆಯನ್ನು ಹೆಚ್ಚಿಸುತ್ತವೆ.

ಅಲೆಮಾರಿ ಕುರುಬರು ಸಾಮಾನ್ಯವಾಗಿ ಪ್ರಮುಖವಾದ ಎಲ್ಲ ಹಿಂದು ಹಬ್ಬಗಳನ್ನು ಆಚರಿಸುತ್ತಾರೆ. ಇವರು ಆಚರಿಸುವ ಹಬ್ಬಗಳಿಗೆ ಅವುಗಳದೇ ಆದ ಹಿನ್ನೆಲೆ ಇದೆ. ಈ ಹಿನ್ನೆಲೆಯನ್ನು ಗ್ರಹಿಸಿದರೆ ಯುಗಾದಿ, ನಾಗರಪಂಚಮಿ, ಮಹಾನವಮಿ, ದೀಪಾವಳಿ, ಹಿಸ್ಯಾಳೆ, ಮಲಪುರಿ ಇತ್ಯಾದಿ ಹಬ್ಬಗಳ ಮೂಲಕ ಅಲೆಮಾರಿ ಕುರುಬರ ಧಾರ್ಮಿಕ ಜೀವನದ ತಳಹದಿಯನ್ನು ಅರಿತುಕೊಳ್ಳುವುದು ಸುಲಭವಾಗುತ್ತದೆ ಈ ದೃಷ್ಟಿಯಿಂದ ಇವರ ಹಬ್ಬಗಳು ಮಾನವನ ಬದುಕಿನಲ್ಲಿ ವೈಶಿಷ್ಟ್ಯತೆಯನ್ನು ಪಡೆದುಕೊಂಡಿದೆ.

i) ಯುಗಾದಿ

ಪ್ರತಿವರ್ಷ ಚೈತ್ರಮಾಸದ ಆರಂಭದ ಅಮವಾಸ್ಯೆಯ ಮರುದಿನದಂದು ಬರುವ ಯುಗಾದಿಯನ್ನು ಹೊಸವರ್ಷವೆಂದು ಕರೆಯುತ್ತಾರೆ. ಬಹುತೇಕವಾಗಿ ಹಿಂದೂಗಳೆಲ್ಲರೂ ಸಂತೋಷ, ಸಂಭ್ರಮದಿಂದ ಆಚರಿಸುವ ಹಬ್ಬ ಇದಾಗಿದೆ. ವರ್ಷಕ್ಕೊಮ್ಮೆ ಬರುವ ಈ ಹಬ್ಬ ಸುಖ-ದುಃಖ, ಸಿಹಿ-ಕಹಿ, ನೋವು-ನಲಿವುಗಳನ್ನು ಸಮನಾಗಿ ಕಾಣಬೇಕೆನ್ನುವ ದಿವ್ಯ ಸಂದೇಶವನ್ನು ಸಾರುತ್ತದೆ. ನಾಗರಿಕತೆ ಹಾಗೂ ಜಾಗತೀಕರಣದ ಬಿರುಗಾಳಿ ಗ್ರಾಮೀಣ ಪ್ರದೇಶವನ್ನು ಪ್ರವೇಶಿಸಿ ಜನ ಜೀವನದ ಮೇಲೆ ಪ್ರಭಾವ ಬೀರಿದ್ದರೂ ಅಲೆಮಾರಿ ಕುರುಬರು ತಾವು ಹೂಡಿದ ಗುಡಾರದಲ್ಲಿ ಮೊದಲಿ ನಿಂದಲೂ

ಆಚರಿಸಿಕೊಂಡು ಬಂದಿರುವ ಯುಗಾದಿ ಹಬ್ಬದಲ್ಲಿ ಯಾವುದೇ ಬದಲಾವಣೆ ಮಾಡಿರುವುದು ಕಂಡುಬರುತ್ತಿಲ್ಲ. ಈ ಹಬ್ಬವನ್ನು ಒಬ್ಬ ಭೂಮಾಲಿಕನ ಜಮೀನಿನಲ್ಲಿ ಕುರಿತಬ್ಬಿದ ಕುಟುಂಬಗಳು ಸಾಮೂಹಿಕವಾಗಿ ಆಚರಿಸುತ್ತಾರೆ. ಈ ಹಬ್ಬ ಬೇಸಿಗೆಕಾಲದಲ್ಲಿ ಬರುವುದರಿಂದ ಕುರಿಗಳನ್ನು ಹೊಲಗದ್ದೆಗಳಲ್ಲಿ ತಬ್ಬಿರುತ್ತಾರೆ. ಆ ಹಬ್ಬಕ್ಕೆ ಬೇಕಾಗುವ ಖರ್ಚು-ವೆಚ್ಚಗಳನ್ನು ಆ ಜಮೀನಿನ ಮಾಲೀಕನಿಂದ ಪಡೆದು, ಕುರಿ ತಬ್ಬಿದ್ದಕ್ಕೆ ಕೊಡುವ ಹಣದಲ್ಲಿ ಮುರಿದುಕೊಳ್ಳುವಂತೆ ಹೇಳುತ್ತಾರೆ. ಒಂದು ವೇಳೆ ಭೂಮಾಲೀಕ ಖುಷಿಗೆ ಕೊಡಿಸಿದರೆ ಸ್ವೀಕರಿಸುತ್ತಾರೆ.

ಅಲೆಮಾರಿ ಕುರುಬರ ಮಹಿಳೆಯರು ಈ ಹಬ್ಬ ಆಚರಣೆಯ ಸಿದ್ಧತೆಯನ್ನು ಅಮವಾಸ್ಯೆ ದಿನದ ರಾತ್ರಿಯಿಂದಲೇ ಆರಂಭಿಸುವರು. ಅಂದು ರಾತ್ರಿ ಸುಮಾರು ೧೨.೦೦ ಗಂಟೆಯ ನಂತರ ತಮ್ಮ ತಮ್ಮ ಗುಡಾರಗಳ ಮುಂದೆ ನೀರಿನಲ್ಲಿ ಕುರಿಹಿಕ್ಕೆಗಳಿಂದ ಕಲಿಸಿದ ನೀರನ್ನು ಹಾಕುವರು ಅಥವಾ ಸಾರಿಸುವರು. ಅಡುಗೆ ಪಾತ್ರೆಗಳನ್ನು ಸ್ವಚ್ಛಗೊಳಿಸಿಕೊಳ್ಳುವರು. ನಂತರ ಸ್ನಾನ ಮಾಡಿ, ಶುಭ್ರವಾದ ಬಟ್ಟೆ ಧರಿಸಿ ೪.೦೦ ಗಂಟೆ ಸುಮಾರಿಗೆ ಅಡುಗೆ ಮಾಡುವ ಗುಡಾರ ಸೇರುತ್ತಾರೆ. ಅಂದಿನ ಅಡುಗೆ ಹೋಳಿಗೆ, ಬದನೆಕಾಯಿ, ಅನ್ನ, ಸಾರು, ಸೆಂಡಿಗೆ ಇತ್ಯಾದಿಯಾಗಿರುತ್ತವೆ. ಇವನ್ನು ಹೆಚ್ಚು-ಕಮ್ಮಿ ಬೆಳಗಿನ ಜಾವದೊಳಗೆ ಮಾಡಿ ಮುಗಿಸುತ್ತಾರೆ.

ದಿನದ ವಿಶೇಷವೆಂದರೆ ಒಂದು ವರ್ಷದೊಳಗಿನ ಕುರಿ ಮೇಕೆ ಮರಿಗಳಿಗೆ ಲಾಕು(ಗುರುತು) ಹಾಕಲಾಗುತ್ತದೆ (ಈಗಾಗಲೇ ಕುರಿಗಳ ಗುರುತಿಸುವಿಕೆಯಲ್ಲಿ ವಿಶ್ಲೇಷಿಸಲಾಗಿದೆ). ಆದ್ದರಿಂದ ಪುರುಷರು ಬೇಗನೆ ಎದ್ದು ಮರಿಗಳಿಗೆ ಹಾಲುಣಿಸಿ, ಸ್ನಾನ ಮಾಡಿ, ಹೊಸ ಬಟ್ಟೆ ಧರಿಸಿ, ಲಾಕು ಹಾಕುವ ಕಾರ್ಯದಲ್ಲಿ ತೊಡಗುತ್ತಾರೆ. ಲಾಕು ವಂಶಪರಂಪರೆಯಾಗಿ ಮುಂದುವರಿಸಿಕೊಂಡು ಬಂದ ಗುರುತನ್ನೆ ಹಾಕುವರು. ಲಾಕು ಹಾಕುವ ಉದ್ದೇಶ ತಮ್ಮ ಕುರಿ-ಮೇಕೆಗಳನ್ನು ಎಲ್ಲಿದ್ದರೂ ಸುಲಭವಾಗಿ ಗುರುತಿಸಲು ಅನುಕೂಲವಾಗುವ ದೃಷ್ಟಿಯಿಂದ ಈ ಪದ್ಧತಿಯನ್ನು ಮುಂದುವರಿಸಿಕೊಂಡು ಬಂದಿದ್ದಾರೆ.

ಲಾಕು ಹಾಕುವಾಗ ಗಂಡು ಮರಿಗಳಿಗೆ ಬಾಲದ ತುದಿಯನ್ನು ಮಾತ್ರ ಕತ್ತರಿಸಿದರೆ ಹೆಣ್ಣು ಮರಿಗಳಿಗೆ ಬಾಲದ ತುದಿ ಹಾಗೂ ಕಿವಿ, ಹಣೆ ಅಥವಾ ಬೆನ್ನಿನ ಮೇಲೆ ತಮ್ಮ ಗುರುತು ಹಾಕುವ ಮೂಲಕ ಮೇಲಿನ ಚರ್ಮ ತೆಗೆಯುತ್ತಾರೆ. ಹೀಗೆ ಲಾಕು ಹಾಕಿದ ನಂತರ ಬಾಲದ ತುದಿ ಹಾಗೂ ಕಿವಿಯ ಚರ್ಮದ ತುಂಡುಗಳನ್ನು ವಿಭಾಗಿಸಿ ಎಣಿಸುವರು. ಇದರಿಂದ ಹೆಣ್ಣು ಮರಿಗಳು ಹಾಗೂ ಗಂಡು ಮರಿಗಳು ಎಷ್ಟಿವೆ ಎಂಬುದು ತಿಳಿಯುತ್ತದೆ. ಹೆಣ್ಣು ಮರಿಗಳು ಮುಂದಿನ ಅಭಿವೃದ್ಧಿಯನ್ನು ಸೂಚಿಸಿದರೆ, ಗಂಡು ಮರಿಗಳು ಕುಟುಂಬದ ವಾರ್ಷಿಕ ಖರ್ಚು-ವೆಚ್ಚಗಳನ್ನು ಹೇಗೆ ಸರಿದೂಗಿಸಬೇಕೆಂಬುದನ್ನು ಸ್ಪಷ್ಟಪಡಿಸುತ್ತವೆ. ಹಿಂದಿನ ವರ್ಷ ಎಷ್ಟು ಗಂಡು

ಮತ್ತು ಹೆಣ್ಣು ಮರಿಗಳಿದ್ದವು? ಈ ವರ್ಷ ಎಷ್ಟಿವೆ? ಎಂಬುದನ್ನು ಹೋಲಿಕೆ ಮಾಡಿ ನೋಡುತ್ತಾರೆ. ಇವರ ದೃಷ್ಟಿಯಲ್ಲಿ ಈ ಹಬ್ಬ ಹೀಗೆ ಸಮೃದ್ಧಿಯ ಸಂಕೇತವೆನಿಸುತ್ತದೆ. ಏಕೆಂದರೆ ಇಡೀ ವರ್ಷ (ಯುಗಾದಿಯಿಂದ ಯುಗಾದಿಯವರೆಗೆ) ತಮ್ಮ ಬದುಕುಗಳನ್ನು ಸಾಕಿ-ಸಲುಹಿ, ಸಂಗೋಪನೆ ಮಾಡಿ ದುಡಿಮೆಯ ಪ್ರತಿಫಲವಾಗಿ ಲೆಕ್ಕ ಹಾಕುವರು. ಮರಿಗಳ ಸಂಖ್ಯೆಯಲ್ಲಿ ಹೆಚ್ಚಳವಾದರೆ ಅಭಿವೃದ್ಧಿ ಎಂದು ತೀರ್ಮಾನಿಸುವರು, ಕಡಿಮೆಯಾದರೆ ಅನಭಿವೃದ್ಧಿ ಎಂದು ತಿಳಿದುಕೊಳ್ಳುವರು. ಅಭಿವೃದ್ಧಿ ಅಥವಾ ಅನಭಿವೃದ್ಧಿ ನಿರ್ಧಾರವಾಗುವುದು ಇವರ ಶ್ರಮದ ಜೊತೆಗೆ ತಾವು ಅಲೆದಾಡುವ ಪ್ರದೇಶದಲ್ಲಿ ಕುರಿ-ಮೇಕೆಗಳಿಗೆ ದೊರೆಯುವ ಮೇವು-ನೀರು ಹಾಗೂ ಅವುಗಳಿಗೆ ಬರುವ ರೋಗ-ರುಜಿನಗಳನ್ನು ಅವಲಂಬಿಸಿರುತ್ತದೆ.

ಮರಿಗಳ ಬಾಲದ ತುದಿ ಹಾಗೂ ಕಿವಿಯ ಚರ್ಮದ ತುಂಡುಗಳನ್ನು ಲೆಕ್ಕ ಹಾಕಿದ ನಂತರ ಅವುಗಳನ್ನು ಒಂದು ಕೈಚೀಲದೊಳಗೆ ಹಾಕಿ ಭಂಡಾರದಿಂದ ಕಲಿಸಿ ಮಿಶ್ರಮಾಡುತ್ತಾರೆ. ಹೀಗೆ ಮಾಡಿದ ನಂತರ ಕರಿಯ ಕಂಬಳಿ ಹಾಸಿ ಗದ್ದುಗೆ ತಯಾರು ಮಾಡುತ್ತಾರೆ. ಗದ್ದುಗೆ ಮೇಲೆ ಮನೆದೇವರು ಹಾಗೂ ಆರಾಧ್ಯದೇವರುಗಳ ಫೋಟು ಇಡುವರು. ಫೋಟೋ ಮುಂದೆ ಭಂಡಾರದ ಚೀಲ, ಲಾಕಿನ (ಚರ್ಮದ) ತುಂಡುಗಳು, ಕತ್ತರಿ ಇಡುವರು. ಅಂದು ಮಾಡಿದ ಸಿಹಿ ಅಡುಗೆ, ತುಪ್ಪ ಕರಿಕುರಿಯ ಹಸೆ ಹಾಲನ್ನು ನೈವೇದ್ಯ ಮಾಡಿ ಕಾಯಿ ಒಡೆಯುವುದರ ಮೂಲಕ ಪೂಜೆ ಮಾಡುವರು.

ಬಿಡಾರ ಹೂಡಿದ ಕುರಿಮಂದೆಯಲ್ಲಿ ಪೂಜೆ ಮಾಡಿದ ನಂತರ ಚೀಲದಲ್ಲಿರುವ ಬಾಲದ ತುದಿಗಳು, ಕಿವಿಯ ತುಂಡುಗಳು, ಭಂಡಾರ, ತುಪ್ಪ, ಹೋಳಿಗೆ, ಹಾಲು ತೆಗೆದುಕೊಂಡು ತಮಗೆ ಸಮೀಪವಿರುವ ನಾಗರ ಹುತ್ತಿಗೆ ಹೋಗಿ ನೈವೇದ್ಯ ಮಾಡಿ ಕಾಯಿ ಒಡೆಯುತ್ತಾರೆ. ನಂತರ ಲಾಕು ಹಾಕಿ ಕತ್ತರಿಸಿದ ಬಾಲದ ಹಾಗೂ ಕಿವಿಯ ಚರ್ಮದ ತುಂಡುಗಳನ್ನು ಹುತ್ತಿನೊಳಗೆ ಹಾಕುವರು. ಒಂದು ವೇಳೆ ಹುತ್ತು ಕುರಿಮಂದೆ ತಬ್ಬಿದ ಸ್ಥಳದ ಸಮೀಪವಿರದಿದ್ದರೆ, ಬನ್ನಿಗಿಡಕ್ಕೆ ಹೋಗಿ ಗಿಡದ ಪೂರ್ವ ದಿಕ್ಕಿಗೆ ಪೂಜೆ ಮಾಡಿ, ಗಿಡದ ಬುಡವನ್ನು ಅಗೆದು ಲಾಕು ಹಾಕಿದ ತುಂಡುಗಳನ್ನು ಅದರಲ್ಲಿ ಹಾಕಿ ಮಣ್ಣು ಮುಚ್ಚುವರು. ನಂತರ ಬಿಡಾರಕ್ಕೆ ಬಂದು ಊಟವನ್ನು ಮಾಡುವರು. ಈ ಮೇಲೆ ತಿಳಿಸಿದ ಎಲ್ಲಾ ಕಾರ್ಯಗಳನ್ನು ಮುಂಜಾನೆ ಹತ್ತು ಗಂಟೆಯೊಳಗೆ ಮುಗಿಸಿ ಕುರಿಮೇಯಿಸಲು ಅಡವಿಗೆ ಹೋಗುವರು.

ಹಿರಿಯರ ಹಬ್ಬ : ಯುಗಾದಿ ಹಬ್ಬದ ದಿನ ಮುಸ್ಸಂಜೆಯ ವೇಳೆಗೆ ಹಿರಿಯರ ಹಬ್ಬ ಆಚರಣೆ ಮಾಡುತ್ತಾರೆ. ಆ ದಿನದಂದು ಸಾಯಂಕಾಲ ಸುಮಾರಿಗೆ ಟಗರು ಮರಿಯನ್ನು ಕೊಯ್ದು, ಮಾಂಸದ ಅಡಿಗೆಯನ್ನು ಮಾಡುತ್ತಾರೆ. ತೀರಿಕೊಂಡ ಹಿರಿಯರು ಯಾವ ಬಟ್ಟೆಗಳನ್ನು

ಧರಿಸುತ್ತಿದ್ದರೋ ಅಂತಹ ಹೊಸ ಬಟ್ಟೆ ಅಂದರೆ ಸೀರೆ, ಕುಪ್ಪಸ, ಧೋತರ, ಟೋಪಿ, ಮುಂಡಾ, ಪಟಗಗಳನ್ನು ತರುವರು. ಕುರಿಗಳು ಗುಡಾರಕ್ಕೆ ಬಂದ ನಂತರ ಕಂಬಳಿ ಹಾಸಿ ಗದ್ದಿಗೆ ಹಾಕುವರು. ಅದರ ಮೇಲೆ ನೀರು ತುಂಬಿದ ತಂಬಿಗೆ, ತಂಬಿಗೆಯ ಮೇಲೆ ತೆಂಗಿನ ಕಾಯಿ ಇಡುವರು. ತಂದ ಹೊಸ ಬಟ್ಟೆಗಳನ್ನು ಕಂಬಳಿಯ ಮೇಲಿಟ್ಟು ಅವುಗಳಿಗೆ ಭಂಡಾರ, ಕುಂಕುಮ ಹಚ್ಚಿ ಪೂಜೆ ಮಾಡುವರು. ಹಿರಿಯರ ನೈವೇದ್ಯಕ್ಕೆ ಮಾಂಸ ಹಾಗೂ ಹೋಳಿಗೆ ಇಟ್ಟು ಕಾಯಿ ಹೊಡೆಯುವರು. ಸಿಹಿ ಮತ್ತು ಮಾಂಸ ಎರಡನ್ನು ನೈವೇದ್ಯಕ್ಕೆ ಏಕೆ ಇಡುತ್ತೀರೆಂದು ಪ್ರಶ್ನಿಸಿದಾಗ ಅವರು ಈ ರೀತಿಯ ಉತ್ತರ ನೀಡಿದರು. "ಮಾಂಸ ಅಜ್ಜಿಯ ನೈವೇದ್ಯಕ್ಕಾದರೆ ಹೋಳಿಗೆ ತಾತನ ನೈವೇದ್ಯಕ್ಕೆನ್ನುವರು. ಇದರ ಅರ್ಥ ಹೆಣ್ಣು(ಅಜ್ಜಿ) ರಾಕ್ಷಸಿ ಕುಲದವಳು, ಅವಳಿಗೆ ಕುರಿಮರಿ ಬಲಿ ಕೊಟ್ಟು ಮಾಂಸದ ಅಡುಗೆ ಮಾಡಿ ನೈವೇದ್ಯ ಮಾಡುತ್ತೇವೆ. ಗಂಡು(ತಾತ) ದೇವರ ಸಮಾನದವರು ಅವರಿಗೆ ಸಿಹಿ ಅಡುಗೆಯನ್ನು ಮಾಡಿ ನೈವೇದ್ಯ ಮಾಡುತ್ತೇವೆ" (ಮಾಹಿತಿದಾರ: ಬೀರಪ್ಪನ ನಸಲಾಪುರೆ:ನವಲಿಹಾಳ್). ನಂತರ ಕುರಿಮಂದೆಯಿಂದ ೯ ಕುರಿಗಳನ್ನು ಆರಿಸಿ ಅವುಗಳನ್ನು ಸ್ವಲ್ಪ ದೂರ ನಿಲ್ಲಿಸಿ ಅವುಗಳಿಗೆ ಪೂಜೆ ಮಾಡುವರು. ಕುರಿಗಳಿಗೆ ನೈವೇದ್ಯ ಮಾಡಿದ ನೀರನ್ನು ಚಿಮುಕಿಸುವರು. ಪೂಜೆಯಾದ ನಂತರ ನಿಲ್ಲಿಸಿದ ಕುರಿಗಳನ್ನು ಕಂಬಳಿಯಿಂದ ಬೆದರಿಸುವ ಮೂಲಕ ಓಡಿಸುವರು. ಇದನ್ನು 'ಕುರಿ ಕರಿ ಬಿಡುವುದು' ಎನ್ನುವರು. ಯಾವ ಕುರಿ ಮೊದಲು ಬಂದು ಸೇರುತ್ತದೆಯೋ ಆ ಬಣ್ಣದ ಹಾಗೂ ಆ ತಳಿಯ ಕುರಿಗಳು ಅಭಿವೃದ್ಧಿ ಹೊಂದುತ್ತವೆಂಬ ನಂಬಿಕೆ ಅಲೆಮಾರಿ ಕುರುಬರಲ್ಲಿ ಕಾಣುತ್ತೇವೆ.

ii) ನಾಗರ ಪಂಚಮಿ

ಈ ಹಬ್ಬದ ಸಮಯದಲ್ಲಿ ಮಳೆಗಾಲ ಜೋರಾಗಿರುವುದರಿಂದ ಅಲೆಮಾರಿ ಕುರುಬರು ಗುಡ್ಡಗಾಡು ಪ್ರದೇಶದಲ್ಲಿ ನಾಗರ ಪಂಚಮಿ ಆಚರಿಸುತ್ತಾರೆ. ಈ ಹಬ್ಬವನ್ನು ಒಂದು ಕಡೆ ಗುಡಾರ ಹೂಡಿದವರೆಲ್ಲಾ ಕೂಡಿ ಮಾಡದೆ, ಪ್ರತಿ ಕುಟುಂಬಗಳು ಪ್ರತ್ಯೇಕವಾಗಿ ಆಚರಿಸುತ್ತವೆ. ಅಂದು ನಾಗರ ಹುತ್ತಿನ ಮಣ್ಣನ್ನು ತೆಗೆದುಕೊಂಡು ಬಂದು ಎರಡು ನಾಗರ ಮೂರ್ತಿಗಳನ್ನು ಮಾಡಿ, ಹತ್ತಿಯಿಂದ ಅಂಗುಲ (ಸರ)ಮಾಡಿ, ಭಂಡಾರ-ಕುಂಕುಮ ಹಚ್ಚಿ ನಾಗಮೂರ್ತಿಗಳ ಕೊರಳಿಗೆ ಹಾಕುವರು. ಹೆಣ್ಣು ಮಕ್ಕಳು ಹತ್ತಿಯಿಂದ ಅಂಗುಲ ಮಾಡಿ ಕೊರಳಿಗೆ ಹಾಕಿಕೊಂಡರೆ, ಪುರುಷರು ಮುಂಗೈಗೆ ಕಟ್ಟಿಕೊಳ್ಳುವರು. ಆ ದಿನದ ದೇವರ ನೈವೇದ್ಯಕ್ಕೆ ಅಕ್ಕಿ-ಗೋಧಿ ಹಿಟ್ಟನ್ನು ಮಿಶ್ರಮಾಡಿ ಉಂಡೆ ತಯಾರಿಸುತ್ತಾರೆ. ದೇವರ ನೈವೇದ್ಯಕ್ಕೆ ಹಾಗೂ ತಮಗೆ ಊಟಕ್ಕೆಂದು ಗೋಧಿಯ ಹುಗ್ಗಿಯನ್ನು ಮಾಡುತ್ತಾರೆ. ಇವನ್ನು ದೇವರಿಗೆ ನೈವೇದ್ಯ ಮಾಡಿ ಊಟ ಮಾಡುವರು. ಮೂರನೆಯ ದಿನದಂದು ನಾಗಮೂರ್ತಿಗಳನ್ನು ಹುತ್ತಿನ ಸಮೀಪ ಅಥವಾ ಬನ್ನಿ ಮರದ ಕೆಳಗೆ ಇಟ್ಟು ಬರುವರು. ಪಂಚಮಿ ಹಬ್ಬವಾದ ನಂತರ ವಿವಿಧ ಆಹಾರ ಧಾನ್ಯಗಳಿಂದ ಉಂಡೆಗಳನ್ನು ಮಾಡಿಕೊಂಡು ಶ್ರಾವಣ ಮಾಸ ಮುಗಿಯುವವರೆಗೆ ತಿನ್ನುವರು.

ಶಿವನ ಸೋಮವಾರ : ಇವರು ಶ್ರಾವಣ ಮಾಸದ ಮೂರನೆ ಸೋಮವಾರವನ್ನು ಶಿವನ ವಾರವೆಂದು ಆಚರಿಸುತ್ತಾರೆ. ಈ ವಾರವನ್ನು ಹಲವಾರು ಕುಟುಂಬಗಳು ಮಾತ್ರ ಮಾಡುತ್ತವೆ. ಇದರಿಂದ ಅಲೆಮಾರಿ ಕುರುಬರು ಶೈವ ಮತಸ್ಥರೆಂಬುದು ತಿಳಿದುಬರುತ್ತದೆ. ಆ ದಿನದಂದು ಸ್ತ್ರೀಯರು ಹಾಗೂ ಕೆಲವೊಂದು ಪುರುಷರು ಒಂದ್ಹೊತ್ತಿನ ಉಪವಾಸ ಇದ್ದು ಭಕ್ತಿಯಿಂದ ಪೂಜೆಗೈಯುತ್ತಾರೆ. ಸ್ತ್ರೀಯರು ಬೆಳಿಗ್ಗೆಯೇ ಸ್ನಾನ ಮಾಡಿ ಶುಭ್ರವಾದ ಬಟ್ಟೆ ಧರಿಸಿ ದೇವರ ನೈವೇದ್ಯಕ್ಕೆ ಹಾಗೂ ಊಟಕ್ಕೆ ಹೋಳಿಗೆ ಮಾಡುತ್ತಾರೆ. ಈ ಆಚರಣೆಯ ವಿಶೇಷತೆ ಅಭಿವೃದ್ಧಿಯ ಸಂಕೇತವನ್ನು ಸೂಚಿಸುತ್ತದೆ. "ಹೋಳಿಗೆ ಮಾಡಲು ಹಾಕುವ ಬೇಳೆಯ ಪ್ರಮಾಣ ಪ್ರತಿವರ್ಷ ಹೆಚ್ಚು ಮಾಡುತ್ತಾ ಹೋಗಬೇಕು. ಹಿಂದಿನ ವರ್ಷ ಒಂದು ಸೇರು ಹಾಕಿದ್ದರೆ, ಈ ವರ್ಷ ಒಂದು ಕಾಲು ಸೇರು, ಮುಂದಿನ ವರ್ಷ ಒಂದೂವರೆ ಸೇರು. ಹಾಗೆಯೇ ಇನ್ನೂ ಮುಂದಿನ ವರ್ಷಗಳಲ್ಲಿ ಹೆಚ್ಚು ಮಾಡುತ್ತಾ ಹೋಗಬೇಕು. ಈ ರೀತಿ ಮಾಡುವ ಉದ್ದೇಶವೆಂದರೆ ಬೀರ ದೇವರು (ಶಿವ) ಪ್ರತಿವರ್ಷ ಕುರಿಗಳ ಸಂಖ್ಯೆ ಹಾಗೂ ಕುಟುಂಬದ ಜನಸಂಖ್ಯೆಯ ಪ್ರಮಾಣವನ್ನು ಬೇಳೆ ಹಾಕಿದ ಪ್ರಮಾಣದಲ್ಲಿ ಹೆಚ್ಚಿಸ ಬೇಕೆನ್ನುವುದು"(ಮಾಹಿತಿದಾರಳು: ಶಾರದಮ್ಮ ಲಿಂಗಪ್ಪ ಸಾವಿರಕುರಿ:ನವಲಿಹಾಳ್). ಸಂಜೆಯ ಹೊತ್ತಿಗೆ ಕುರಿಗಳು ಗುಡಾರಕ್ಕೆ ಬಂದ ನಂತರ ಕರಿಕಂಬಳಿ ಗದ್ದುಗೆ ಮಾಡಿ ಬೀರದೇವರ ಪೋಟೋ ಇಟ್ಟು ಫೋಟೋದ ಮುಂದೆ ಅನ್ನದ ರಾಶಿ ಹಾಕಿ, ಅದರ ಮೇಲೆ ಎಲ್ಲ ಹೋಳಿಗೆಗಳನ್ನಿಡುವರು. ಐದು ತರಹದ ಹಣ್ಣು, ಹೂವುಗಳು ಹಾಗೂ ಉಡಿ ಅಕ್ಕಿ, ಎಲೆ, ಅಡಿಕೆ, ಉತ್ತುತ್ತಿ, ಕೊಬ್ಬರಿಗಳನ್ನಿಡುವರು. ಹೋಳಿಗೆ ರಾಶಿ ಸುತ್ತ ಮೋಂಬತ್ತಿ ಹಾಗೂ ಊದಿನ ಕಡ್ಡಿ ಹಚ್ಚುವರು. ನಂತರ ದೇವರಿಗೆ ಕಾಯಿ ಒಡೆದು ಕುರಿಗಳಿಗೆ ನೈವೇದ್ಯ ತೋರಿಸಿ ಊಟ ಮಾಡುವರು.

iii) ಮಹಾನವಮಿ

ಇದು ಅಶ್ವೀಜ (ಅಕ್ಟೋಬರ್) ಮಾಸದಲ್ಲಿ ಬರುವ ಹಬ್ಬವಾಗಿದ್ದು ಹಿಂದೂಗಳ ವಿಶೇಷ ಹಬ್ಬವಾಗಿದೆ. ಈ ಸಮಯವು ಮಳೆಗಾಲವಾದ್ದರಿಂದ ಅಲೆಮಾರಿ ಕುರುಬರು ಗುಡ್ಡಗಳಲ್ಲಿ ಬಿಡಾರ ಹೂಡಿ ಗುಡ್ಡಗಾಡು ಪ್ರದೇಶದಲ್ಲಿ ಕುರಿಗಳನ್ನು ಮೇಯಿಸುತ್ತಿರುತ್ತಾರೆ. ಗುಡಾರ ಹೂಡಿದ ಸ್ಥಳಗಳಲ್ಲಿ ಹಾಗೂ ಸ್ವ-ಗ್ರಾಮಗಳಲ್ಲಿ ಒಂಬತ್ತು ದಿನಗಳವರೆಗೆ ಮನೆದೇವರ ಹೆಸರಿನ ಮೇಲೆ ದೀಪ ಹಚ್ಚುತ್ತಾರೆ. ನವರಾತ್ರಿ ಅಥವಾ ಮಹಾನವಮಿ ದಿನ ತಮ್ಮ ಕುಲಕಸುಬಿಗೆ ಬಳಸುವ ಸಲಕರಣೆಗಳಾದ ಕೋಲು, ಕೊಡಲೆ, ಜ್ಯೋತಿ, ಕತ್ತರಿ, ವಡೆಚೀಲ ಇತ್ಯಾದಿ ವಸ್ತುಗಳನ್ನು ತೊಳೆದು ಕರಿಯ ಕಂಬಳಿಯಿಂದ ಗದ್ದುಗೆ ಮಾಡಿ ಅದರ ಮೇಲೆ ಸಾಮಾನುಗಳನ್ನಿಡುವರು. ಹಬ್ಬದ ಪ್ರಯುಕ್ತ ಹೋಳಿಗೆ ಮಾಡುವರು. ಕುರಿಗಳು ಮೇವು ಮೆಯ್ದು ಅಡವಿಯಿಂದ ಸಾಯಂಕಾಲ ಗುಡಾರಕ್ಕೆ ಬಂದ ನಂತರ ವೃತ್ತಿ ಸಲಕರಣೆಗಳಿಗೆ ಭಂಡಾರ ಹಚ್ಚಿ, ದೀಪ ಬೆಳಗಿ, ಕಾಯಿಒಡೆದು, ಕರ್ಪೂರದಿಂದ ಮಂಗಳಾರತಿಯನ್ನು

ಬೆಳಗುವರು. ಸ್ವಗ್ರಾಮದಲ್ಲಿರುವ ಇವರ ಕುಟುಂಬದವರು ಎಲ್ಲಾ ದೇವರುಗಳಿಗೆ ಎಣ್ಣೆ ದೀಪ ಹಚ್ಚುತ್ತಾರೆ. ಪ್ರತಿಯೊಂದು ದೇವರಿಗೆ ಹೋಳಿಗೆ ನೈವೇದ್ಯ ತೋರಿಸಿ ಕಾಯಿ ಒಡೆಯುವ ಸಂಪ್ರದಾಯ ಇದೆ.

iv) ದೀಪಾವಳಿ

ದೀಪಾವಳಿ ಹಬ್ಬವು ಇವರ ಪಾಲಿಗೆ ಅಂಧಕಾರವನ್ನು ಹೊಗಲಾಡಿಸಿ ಬೆಳಕನ್ನು ತಂದು ಕೊಡುವ ಹಬ್ಬವಾಗಿದೆ. ಕುರಿಗಳನ್ನು ಲಕ್ಷ್ಮಿ ಎಂದು ಭಾವಿಸಿ ಕುರಿಗಳಿಗೆ ಪೂಜೆ ಸಲ್ಲಿಸುವ ಮೂಲಕ ಕುರಿಲಕ್ಷ್ಮಿ ಪೂಜೆಯನ್ನು ಆಚರಿಸುತ್ತಾರೆ. ನಾಗರ ಪಂಚಮಿಯಿಂದ ದೀಪಾವಳಿಯವರೆಗೆ ಗುಡ್ಡಗಾಡು ಪ್ರದೇಶದಲ್ಲಿದ್ದು, ಕುರಿಗಳಿಗೆ ಮೇವು-ನೀರು ಹುಡುಕಿಕೊಂಡು ಒಂದು ಪ್ರದೇಶದ ಗುಡ್ಡದಿಂದ ಮತ್ತೊಂದು ಪ್ರದೇಶದ ಗುಡ್ಡಕ್ಕೆ ವಲಸೆ ಹೋಗಿ ಅಲೆದಾಡುವುದನ್ನು ಕಾಣುತ್ತೇವೆ. ಈ ಅವಧಿ ಮಳೆಗಾಲವಾದ್ದರಿಂದ ಗಟ್ಟಿ ಹಾಗೂ ಗುಡ್ಡಗಾಡು ಪ್ರದೇಶಗಳಲ್ಲಿ ಅಲೆದಾಡಬೇಕು. ಹೊಲಗದ್ದೆಗಳಲ್ಲಿ ಬೆಳೆದ ಫಸಲನ್ನು ಕೊಯ್ಲು ಮಾಡುವುದರಿಂದ ಕುರಿಮಂದೆಯನ್ನು ಯಾವ ದಿಕ್ಕು ಅಥವಾ ಪ್ರದೇಶದ ಕಡೆ ಹೊಡೆದುಕೊಂಡು ವಲಸೆ ಹೋಗಬೇಕೆಂಬುದು ಈ ಹಬ್ಬದ ಆಚರಣೆಯಿಂದ ನಿರ್ಧಾರವಾಗುತ್ತದೆ. ಮೂರು ತಿಂಗಳು (ನಾಗರಪಂಚಮಿಯಿಂದ - ದೀಪಾವಳಿಯವರೆಗೆ) ಗುಡ್ಡಗಾಡು ಪ್ರದೇಶದಲ್ಲಿದ್ದು ಹೊರಗಿನ ಪ್ರಪಂಚವನ್ನೇ ನೋಡದ ಈ ಸಮುದಾಯ ತಮಗೆ ದೀಪಾವಳಿ ಹಬ್ಬ ಅಂಧಕಾರವನ್ನು ಹೋಗಲಾಡಿಸಿ ಬೆಳಕನ್ನು ತಂದು ಕೊಡುತ್ತದೆ ಎಂದು ನಂಬುತ್ತದೆ.

ಒಂದು ಕಡೆ ಗುಡಾರ ಹೂಡಿ ಕುರಿ ತಬ್ಬಿದ ಕುಟುಂಬಗಳೆಲ್ಲಾ ಸೇರಿಕೊಂಡು ಸಾಮೂಹಿಕವಾಗಿ ಈ ಹಬ್ಬವನ್ನು ಆಚರಿಸುತ್ತಾರೆ. ಹಬ್ಬದ ಸಲುವಾಗಿ ಹೆಣ್ಣು ಮಕ್ಕಳನ್ನು ಗಂಡನ ಮನೆಯಿಂದ ತವರು ಮನೆಗೆ ಅದರಲ್ಲೂ ಹೊಸದಾಗಿ ಮದುವೆಯಾದವರನ್ನು ಕಡ್ಡಾಯವಾಗಿ ಕರೆದುಕೊಂಡು ಬಂದು ಸೀರೆ ಉಡಿಸುತ್ತಾರೆ. ಸ್ಥಿತಿವಂತರಿದ್ದರೆ ಬಂಗಾರದ ಒಡವೆಗಳನ್ನು ತಂದು ಕೊಡುತ್ತಾರೆ. ಈ ಹಬ್ಬದ ಆಚರಣೆಯನ್ನು ಬೆಳಿಗ್ಗೆ ಕುರಿಗಳು ಅಡವಿಗೆ ಹೋಗುವುದರೊಳಗೆ ಮಾಡಬೇಕಾಗಿರುವು ದರಿಂದ ರಾತ್ರಿಯಿಂದಲೇ ಸಿದ್ಧತೆ ಶುರುವಾಗುತ್ತದೆ. ರಾತ್ರಿ ಹನ್ನೆರಡು ಗಂಟೆಯ ನಂತರದ ಸುಮಾರಿಗೆ ಸ್ತ್ರೀಯರು ತಮ್ಮ ಗುಡಾರದಲ್ಲಿಯ ಕಸಕಡ್ಡಿಯನ್ನು ತೆಗೆದು ಕುರಿ ಹಿಕ್ಕೆಯಿಂದ ಸಾರಿಸಿ, ಅಡುಗೆ ಪಾತ್ರೆಗಳನ್ನೆಲ್ಲಾ ತೊಳೆದಿಟ್ಟುಕೊಳ್ಳುವರು. ನಂತರ ನೀರು ಕಾಯಿಸಿಕೊಂಡು ಸ್ನಾನ ಮಾಡಿ ಶುಭ್ರವಾದ ಬಟ್ಟೆ ಧರಿಸಿ ಅಂದು ಹಬ್ಬದ ಅಡುಗೆ ಮಾಡುವ ಗುಡಾರಕ್ಕೆ ಬಂದು ಕೂಡುವರು. ಹಬ್ಬಕ್ಕೆ ಹೋಳಿಗೆ ಮಾಡುತ್ತಾರೆ. ಅದಕ್ಕೆ ತಗಲುವ ಖರ್ಚು ವೆಚ್ಚಗಳನ್ನು ಸಮನವಾಗಿ ಹಂಚಿಕೊಳ್ಳುತ್ತಾರೆ.

ಲಕ್ಷ್ಮೀಪೂಜೆ ಮಾಡುವ ಸ್ಥಳವು ಎಲ್ಲ ಗುಡಾರಗಳಿಗೆ ಹತ್ತಿರವಿರುವಂತೆ ಮಧ್ಯದ ಸ್ಥಳವನ್ನು

ಆಯ್ಕೆ ಮಾಡಿಕೊಳ್ಳುತ್ತಾರೆ. ಆ ಸ್ಥಳದಲ್ಲಿ ವೃತ್ತಾಕಾರದಲ್ಲಿ ಕುರಿ ಹಿಕ್ಕೆಯಿಂದ ಸಾರಿಸಿ ಶುಭ್ರಗೊಳಿಸುತ್ತಾರೆ. ಅದರ ಮೇಲೆ ಕುರಿ ಹಿಕ್ಕೆಯಿಂದ ೫ ಪಾಂಡವರ ಮೂರ್ತಿಗಳನ್ನು ಮಾಡಿ ಇಡುವರು. ಇವುಗಳ ಗಾತ್ರವು ಇಳಿಕೆಯ ಕ್ರಮದಲ್ಲಿರುತ್ತದೆ. ಕುರಿ ಹಿಕ್ಕೆಯಿಂದ ಸಾರಿಸಿ ಶುಭ್ರಗೊಳಿಸಿದ ಸ್ಥಳಕ್ಕೆ ಅಂಟಿಕೊಂಡಂತೆ ಕಬ್ಬಿನ ಅಥವಾ ಜೋಳದ ಹಸಿರು ದಂಟುಗಳನ್ನು ನಾಲ್ಕು ಕಡೆ ನೆಟ್ಟು ದೇವರ ಗುಡಿಯ ಗೋಪುರದ ಆಕಾರದಂತೆ ಮೇಲ್‌ತುದಿಯಲ್ಲಿಯ ಎಲ್ಲ ದಂಟುಗಳನ್ನು ಜೊಡಿಸಿ ಕಟ್ಟುವರು. ಹಾಗೆಯೇ ಮುಖದ್ವಾರದ ದಂಟುಗಳಿಗೆ ಎರಡು ಬಾಳೆದಿಂಡುಗಳನ್ನು ಕಟ್ಟುವರು. ಅದನ್ನು ಹೂವುಗಳಿಂದ ಶೃಂಗಾರಗೊಳಿಸುವರು. ಗುಡಿಯಾಕಾರದ ಕಬ್ಬಿನ ದಂಟಿನ ಮುಂದೆ ಕಂಬಳಿ ಹಾಸಿ, ಅಕ್ಕಿಯನ್ನು ಹಾಕಿ ಗದ್ದುಗೆ ತಯಾರು ಮಾಡುತ್ತಾರೆ. ಆ ಗದ್ದುಗೆಯು ಯಾವ ದಿಕ್ಕಿನಿಂದ ನೋಡಿದರೂ. ಶಿವನ ತ್ರಿಶೂಲಾಕಾರವಾಗಿ ಕಾಣಿಸುತ್ತದೆ. ಗದ್ದುಗೆಯ ಮೇಲೆ ಯಾವುದಾದರೊಂದು ಆರಾಧ್ಯದೇವರ (ಬೀರ, ಮಾಳಿಂಗರಾಯ) ಭಾವಚಿತ್ರವನ್ನು (ಫೋಟೋ) ಇಟ್ಟು ಅದಕ್ಕೆ ಬಂಗಾರದ ಬೋರಾಮಣಿ ಸರ ಹಾಕಲಾಗುತ್ತದೆ. ಆ ಗದ್ದುಗೆಯ ಪಕ್ಕದಲ್ಲಿ ಮತ್ತೊಂದು ಕಂಬಳಿ ಹಾಸಿ ಅದರ ಮೇಲೆ ನೀರು ತುಂಬಿದ ತಂಬಿಗೆ ಇಟ್ಟು, ತಂಬಿಗೆಯ ಮೇಲೆ ತೆಂಗಿನಕಾಯಿ ಇಟ್ಟು ಹೂವುಗಳಿಂದ ಶೃಂಗಾರಗೊಳಿಸುವರು. ಇದೇ ಲಕ್ಷ್ಮಿ. ತಂಬಿಗೆಯ ಅಕ್ಕಪಕ್ಕದಲ್ಲಿ ಅವರಲ್ಲಿರುವ ಎಲ್ಲ ದೇವರ ಫೋಟೋಗಳನ್ನಿಡುವರು. ನಂತರ ಎಲ್ಲಾ ದೇವರುಗಳಿಗೆ, ಪಾಂಡವರಿಗೆ, ತಂಬಿಗೆಗೆ ಭಂಡಾರ ಮತ್ತು ಕುಂಕುಮ ಹಚ್ಚುವರು.

ಕಂಬಳಿ ಗದ್ದುಗೆಯ ಮುಂದೆ ಸ್ವಲ್ಪ ದೂರದಲ್ಲಿ ಒಣಗಿದ ಕುರಿಯ ಹಿಕ್ಕೆಯಿಂದ ತಯಾರಿಸಿದ ಕುಳ್ಳನ್ನು ದಪ್ಪವಾಗಿ ಹಾಕಿ ಅದರ ಮೇಲೆ ಹಾಲಿನ ಮಗಿಯನ್ನು ಸಮಾನವಾಗಿಟ್ಟು ಕುಳ್ಳಿಗೆ ಬೆಂಕಿ ಹಚ್ಚುವರು. "ಮಗಿಯಲ್ಲಿರುವ ಹಾಲು ಯಾವ ಕಡೆ ಉಕ್ಕುತ್ತದೆಯೋ ಆ ದಿಕ್ಕಿನಲ್ಲಿ ಮಳೆ-ಬೆಳೆ ಚೆನ್ನಾಗಿರುವುದಲ್ಲದೆ, ಕುರಿಗಳಿಗೆ ಮೇವು-ನೀರು ದೊರೆಯುತ್ತದೆ. ಆದ್ದರಿಂದ ಕುರಿಗಳನ್ನು ಆ ದಿಕ್ಕಿನ ಕಡೆ ಹೊಡೆದುಕೊಂಡು ವಲಸೆ ಹೋದರೆ ನಮಗೆ ಹಾಗೂ ನಮ್ಮ ಬದುಕುಗಳಿಗೆ ಒಳ್ಳೆಯದಾಗುತ್ತದೆ"(ಮಾಹಿತಿದಾರ: ಹಾಲಪ್ಪ ಪೂಜಾರಿ:ಕಡಕಲಾಟ). ಕ್ಷೇತ್ರಕಾರ್ಯ ಸಂದರ್ಭದಲ್ಲಿ ಉತ್ತರ ದಿಕ್ಕಿನ ಕಡೆ ಹಾಲು ಉಕ್ಕಿತ್ತು. ಈ ಪ್ರಕಾರವೇ ಅಲೆಮಾರಿ ಕುರುಬರು ವಲಸೆ ಹೋಗುತ್ತಾರೆ.

ಆ ದಿನದಂದು ಸ್ತ್ರೀ ಪುರುಷರು ಹಾಗೂ ಮಕ್ಕಳು ಶುಭ್ರ ಅಥವಾ ಹೊಸ ಬಟ್ಟೆಗಳನ್ನು ಧರಿಸಿ ಹಣೆಗೆ ಭಂಡಾರವನ್ನು ಹಚ್ಚಿಕೊಳ್ಳುವರು. ಪೂಜೆ ಮಾಡಲು ಎಲ್ಲ ಸಿದ್ಧತೆಯಾದ ನಂತರ ಕುಟುಂಬಕ್ಕೊಂದರಂತೆ ಕುರಿ ಅಥವಾ ಟಗರನ್ನು ಹಿಡಿದುಕೊಂಡು ಬಂದು ಗುಡಿಯಾಕಾರದ ಕಬ್ಬಿನ ದಂಟನ್ನು ಅಕ್ಕಪಕ್ಕದಲ್ಲಿ ನಿಲ್ಲಿಸುವರು. ಕುರಿ ಮತ್ತು ಟಗರುಗಳಿಗೆ ಭಂಡಾರ ಹಚ್ಚಿ ಹೂವಿನ ಹಾರ ಹಾಕುವರು. ಅಂದು ದೇವರಿಗೆ ನೈವೇದ್ಯ ಮಾಡಿದ ಹೋಳಿಗೆ, ತುಪ್ಪ, ಹಾಲು, ಅನ್ನ, ಸೆಂಡಿಗೆ ಇತ್ಯಾದಿಗಳನ್ನು ಬಾಳೆಯ ಎಲೆ ಅಥವಾ ಪತ್ರಾಳಿ ಮೇಲಿಟ್ಟು, ಊದಿನಕಡ್ಡಿ ಹಚ್ಚಿ, ಕಾಯಿ

ಒಡೆಯುವರು. ನಂತರ ಹೂವಿನ ಮಾಲೆ ಹಾಕಿ ನಿಲ್ಲಿಸಿದ ಕುರಿ, ಟಗರುಗಳನ್ನು ಗುಡಿಯ ಸುತ್ತ ಐದು ಸುತ್ತ ತಿರುಗಿಸುವರು. ತಿರುಗಿಸುವಾಗ ಮರಾಠಿ ಭಾಷೆಯಲ್ಲಿ "ಅಡಿಪಿಡಿ ಜಾಂದೆ ಬಾಡ್ರ ಜಾ ಯವುಂಡೆ" ಎಂದು ಜೋರಾಗಿ ಕೂಗುವರು. ತಮ್ಮಲ್ಲಿರುವ ಎಲ್ಲಾ ಪೀಡೆಗಳು ನದಿ ಅಥವಾ ಹೊಳೆ ಆಚೆಕಡೆ ಹೋಗಲಿ ಎಂಬ ಅರ್ಥ ನೀಡುತ್ತದೆ. ಹೆಣ್ಣು ಮಕ್ಕಳು ಆರತಿ ಹಿಡಿದು ಕುರಿಗಳಿಗೆ ಬೆಳಗುತ್ತಾರೆ. ಹೀಗೆ ಬೆಳಗುವಾಗ ಲಕ್ಷ್ಮೀ (ಕುರಿ) ಪೀಡೆಗಳೆಲ್ಲ (ರೋಗ-ರುಜಿನಗಳೆಲ್ಲ) ಹೊಳೆ ಆಕಡೆ ಹೋಗಲಿ ಎಂದು ಸಂಬೋಧಿಸುತ್ತಾರೆ. ಇದಾದ ನಂತರ ದೇವರ ನೈವೇದ್ಯಕ್ಕಿಟ್ಟಿರುವ ಎಲ್ಲಾ ಎಡೆಯನ್ನು ಕಲಿಸಿ ಪ್ರತಿಯೊಂದು ಕುಟುಂಬದ ಕುರಿಗಳಲ್ಲಿ ಸರಗ ಚೆಲ್ಲುತ್ತಾರೆ. ಸರಗ ಚೆಲ್ಲುವವನ ಹಿಂದೆ ಇನ್ನೊಬ್ಬ ತಂಬಿಗೆಯಲ್ಲಿರುವ ನೀರು ಚಿಮುಕಿಸುತ್ತಾನೆ. ಕುರಿಗಳು ಸಂಖ್ಯೆ ಚೆರಗ ಚೆಲ್ಲಿದ ಹಾಗೆ ಮುಂದಿನ ವರ್ಷದೊಳಗೆ ಬೆಳೆಯಬೇಕು ಎಂಬ ನಂಬಿಕೆಯಿಂದ ಈ ರೀತಿಯಾಗಿ ಮಾಡುತ್ತಾರೆ.

ಇದಾದ ಮೇಲೆ ತವರು ಮನೆಗೆ ಬಂದ ಹೆಣ್ಣು ಮಕ್ಕಳು ಕುರಿಗಳಿಗೆ ಆರತಿ ಬೆಳಗಿ ತಮ್ಮ ತಂದೆಯ ಕುರಿಗಳ ಸಂಖ್ಯೆ ಸಮೃದ್ಧಿಯಾಗಿ ಬೆಳೆಯಲಿ ಎಂದು ಹಾರೈಸುವರು. ಹಾಗೆಯೇ ಅಪ್ಪ, ಅಣ್ಣ, ತಮ್ಮನಿಗೂ ಆರತಿ ಬೆಳಗಿ ಅವರಿಗೆ ಮತ್ತು ಅವರ ಕುಟುಂಬಕ್ಕೆ ಒಳ್ಳೆಯದಾಗಲೆಂದು ಹಾರೈಸುತ್ತಾರೆ. ಆರತಿ ಬೆಳಗಿದ್ದಕ್ಕೆ ಆರತಿಯ ತಟ್ಟೆಯಲ್ಲಿ ಖುಷಿಗಾಗಿ ೧೦, ೫೦, ೧೦೦ ರೂ.ಗಳವರೆಗೆ ನೀಡುವರು. ಇವೆಲ್ಲಾ ಕಾರ್ಯಗಳು ಮುಗಿದ ನಂತರ ಸಾಮೂಹಿಕವಾಗಿ ಕುಳಿತು ಕೊಂಡು ಊಟ ಮಾಡುವರು.

೬.೮ ವಿಶೇಷ ಆಚರಣೆಗಳು

ಪ್ರಕೃತಿಯ ಮಡಿಲಲ್ಲಿ ಬದುಕುವ ಅಲೆಮಾರಿ ಕುರುಬರು ಮೊದಲಿನಿಂದಲೂ ತಾವು ಅಲೆದಾಡುವ ಪ್ರದೇಶಗಳಲ್ಲಿ ಕಣ್ಣಿಗೆ ಕಾಣುವ ಮರ, ಬಳ್ಳಿ, ನೆಲ, ಜಲ, ಕಲ್ಲು, ಮಣ್ಣು ಇತ್ಯಾದಿ ವಸ್ತುಗಳಲ್ಲಿ ಒಂದಲ್ಲ ಒಂದು ಶಕ್ತಿ ಅಡಗಿದೆ ಎಂದು ನಂಬಿದ್ದಾರೆ. ತಮ್ಮ ಬದುಕುಗಳಿಗೆ ರೋಗ-ರುಜಿನ ಬಂದಾಗ, ತಮಗೆ ಕಷ್ಟಗಳು ಎದುರಾದಾಗ ತಮ್ಮ ಕಣ್ಣಿಗೆ ಕಾಣದ ನಿಗೂಢ ಶಕ್ತಿ ಅಥವಾ ದೈವದ ಮೊರೆ ಹೋಗುವುದು ಸಾಮಾನ್ಯವಾಗಿದೆ. ಇಂತಹ ಸಮಯದಲ್ಲಿ ಭಕ್ತಿಯ ಜೊತೆಗೆ ಭಯವು ದೇವರಲ್ಲಿ ನಂಬಿಕೆ ಬರುವಂತೆ ಮಾಡುತ್ತದೆ. ಈ ವಿಚಾರವಾಗಿ ಎಲ್ಲ ಸಮುದಾಯದವರು ಆಚರಣೆ ಮಾಡದಿರುವ ಕೆಲವು ವಿಶೇಷ ಆಚರಣೆಗಳಾದ ಹಿಸ್ಕಾಳೆ ಅಮವಾಸ್ಯೆ, ಮಲಪುರಿ ಹಬ್ಬ, ಕತ್ತೆಬಿಡುವುದು ಇತ್ಯಾದಿಗಳನ್ನು ವಿಶೇಷವಾಗಿ ಆಚರಣೆ ಮಾಡುತ್ತಾರೆ.

i) ಹಿಸ್ಕಾಳೆ ಅಮವಾಸ್ಯೆ

ಅಲೆಮಾರಿ ಕುರುಬರು ಹಬ್ಬ ಜಾತ್ರೆಗಳಲ್ಲಿ ಮಾತ್ರ ತಮ್ಮ ದೇವರುಗಳನ್ನು ನೆನೆದು ಪೂಜೆ

ಮಾಡದೆ ಅಮವಾಸ್ಯೆ, ಹುಣ್ಣಿಮೆ, ಭಾನುವಾರಗಳಂದು ಕೂಡ ಮಡಿಯಿಂದ ತಮ್ಮ ಮನೆದೇವರು ಹಾಗೂ ಆರಾಧ್ಯ ದೇವರುಗಳಿಗೆ ಪೂಜೆ ಸಲ್ಲಿಸುತ್ತಾರೆ. ಇಂತಹ ಪೂಜೆ, ಆಚರಣೆ ಅವರಾತ್ರಿ ಅಮವಾಸ್ಯೆ ಪ್ರಮುಖವಾಗಿದೆ. ಇದು ಜನವರಿ ತಿಂಗಳಲ್ಲಿ ಬರುತ್ತಿದ್ದು ಇದನ್ನು ಅಲೆಮಾರಿ ಕುರುಬರು 'ಹಿಸ್ಕಾಳೆ ಅಮವಾಸ್ಯೆ' ಎಂದು ಕರೆಯುತ್ತಾರೆ. ಈ ವೇಳೆಗಾಗಲಿ ಬಹಳಷ್ಟು ಕುರಿ ಮೇಕೆಗಳು ಈಯ್ದುರಿತ್ತವೆ. ಈಯ್ದ ಕುರಿ ಮೇಕೆಗಳ ಹಾಲು ತುಪ್ಪವನ್ನು ಮನೆದೇವರಿಗೆ ಹಾಗೂ ಆರಾಧ್ಯ ದೇವರಿಗೆ ನೈವೇದ್ಯ ಮಾಡಿ ದೀಪ ಹಚ್ಚುವ ಸಂಪ್ರದಾಯ ಪೂರ್ವಜರಿಂದ ನಡೆದುಕೊಂಡು ಬಂದ ಪದ್ಧತಿಯಾಗಿದೆ. ಇಂತಹ ಹಾಲನ್ನು ಬಳಸದೆ ದೇವರಿಗೆ ಅರ್ಪಿಸುವವರೆಗೆ ತೆಗೆದಿಡುವುದಕ್ಕೆ 'ಮೀಸಲು ಹಾಲು', 'ಮೀಸಲು ತುಪ್ಪ', 'ದೇವರ ಮೀಸಲು' ಎಂದು ಕರೆಯುತ್ತಾರೆ.

ಈ ಆಚರಣೆ ಕುರಿಗಾಯಿ ಹಾಗೂ ದನಗಾಯಿಗಳಲ್ಲಿ ಸಾಮ್ಯತೆ ಕಾಣುತ್ತೇವೆ. ದನಗಾಯಿಗಳು ಆಕಳು ಅಥವಾ ಎಮ್ಮೆ ಈಯ್ದಿಗ ಮೂರು ದಿನ ಅಥವಾ ಐದು ದಿನಗಳವರೆಗೆ ಕರುವಿಗೆ ಗಿಣ್ಣಹಾಲು ಕುಡಿಸಿ ಮಿಕ್ಕವನ್ನು ದೇವರಿಗೆ ಗಿಣ್ಣ ಮಾಡಿ ಅರ್ಪಿಸಿ ಉಳಿದಿದ್ದನ್ನು ತಾವು ಊಟ ಮಾಡುವರು. ಐದನೆ ದಿನದಿಂದ ಒಂಬತ್ತು ದಿನಗಳವರೆಗೆ ಹಾಲನ್ನು ಬಳಸದೆ ಹಾಗೆಯೇ ಕಾಯಿಸಿ ಹೆಪ್ಪಿಡುವುದಕ್ಕೆ 'ಮೀಸಲು' ಎನ್ನುವರು. ಹೆಪ್ಪಿಟ್ಟ ಹಾಲನ್ನು ಒಂಬತ್ತನೆಯ ದಿನದಂದು ಕಡೆಗೋಲಿ ನಿಂದ ಮೊಸರು ಕಡಿದು ಬೆಣ್ಣೆ ತೆಗೆಯುವರು. ಈ ಬೆಣ್ಣೆಯನ್ನು ಕಾಯಿಸಿ ತುಪ್ಪವನ್ನು ಬಳಸದೆ ದೇವರುಗಳಿಗೆ ದೀಪ ಹಚ್ಚುವರು. ಇದನ್ನು 'ಮೀಸಲು ತುಪ್ಪ' ಎನ್ನುವರು. ಹಾಗೆಯೇ ಅಲೆಮಾರಿ ಕುರುಬರು ಸಹ ಹಿಸ್ಕಾಳೆ ಅಮವಾಸ್ಯೆ ಐದು, ಏಳು, ಅಥವಾ ಒಂಬತ್ತು ದಿನಗಳಿರುವುದಕ್ಕಿಂತ ಮುಂಚಿತವಾಗಿ ದಿನಾಲು ಕುರಿ-ಮೇಕೆಗಳ ಹಾಲನ್ನು ಹಿಂಡಿ, ಆ ಹಾಲನ್ನು ಬಳಸದೆ, ಕಾಯಿಸಿ, ಹೆಪ್ಪು ಹಾಕಿ, ಮಜ್ಜಿಗೆ ಮಾಡಿ, ಬೆಣ್ಣೆ ತೆಗೆಯುವರು. ಈ ಬೆಣ್ಣೆಯನ್ನು ಬಳಸದೆ ತೆಗೆದಿಡುವರು. ನಾಳೆ ಅಮವಾಸ್ಯೆ ಎನ್ನುವಾಗ ಮೀಸಲಿಟ್ಟ ಬೆಣ್ಣೆಯನ್ನು ಕಾಯಿಸಿ ತುಪ್ಪ ಹಾಗೂ ಆ ದಿನದ ಹಾಲನ್ನು ತೆಗೆದುಕೊಂಡು ತಮ್ಮ ಸ್ವಗ್ರಾಮಗಳಲ್ಲಿರುವ ಮನೆದೇವರು ಹಾಗೂ ಆರಾಧ್ಯ ದೇವರುಗಳಿಗೆ ಹಾಲಿನ ನೈವೇದ್ಯ ಮಾಡಿ, ತುಪ್ಪದ ದೀಪ ಹಚ್ಚುತ್ತಾರೆ. ಬೀರದೇವರನ್ನು ಮನೆದೇವರಾಗಿ ಮಾಡಿಕೊಂಡ ಪ್ರತಿಯೊಂದು ಅಲೆಮಾರಿ ಕುರುಬ ಕುಟುಂಬಗಳು ಇದನ್ನು ಆಚರಿಸುತ್ತಾರೆ. ಮಾಳಿಂಗ ರಾಯನನ್ನು ಮನೆದೇವರು ಮಾಡಿಕೊಂಡವರು ಶಿವರಾತ್ರಿಯ ಅಮಾವಾಸ್ಯೆಯೆಂದು ಆಚರಿಸುವರು. ಈ ರೀತಿಯ ಆಚರಣೆಯಲ್ಲಿರುವ ವ್ಯತ್ಯಾಸಕ್ಕೆ ಕಾರಣ ಮಾಳಿಂಗರಾಯನು ಬೀರೇಶ್ವರನ ಶಿಷ್ಯನಾದ್ದರಿಂದ ಒಂದು ತಿಂಗಳು ತಡವಾಗಿ ಮಾಡಿರಬೇಕೆನಿಸುತ್ತದೆ.

ಕುಲದೇವರುಗಳಿಗೆ ಹಾಲಿನ ನೈವೇದ್ಯ ಮತ್ತು ತುಪ್ಪದ ದೀಪ ಹಚ್ಚಿದ ನಂತರ ಅಲೆಮಾರಿ ಕುರುಬರು ಕುರಿಗಳ ಹಾಲು, ಮೊಸರು, ತುಪ್ಪ ಉಣ್ಣಲು ಅರ್ಹರಾಗುತ್ತಾರೆ. ಅಲ್ಲಿಯವರೆಗೆ "ಈನ್ನು ಕುರಿಗಳ ಪಂಚಾಮೃತಗಳನ್ನು ಉಣ್ಣುವಂತಿಲ್ಲ. ಆದರೆ ಮೇಕೆಯ ಹಾಲು, ಮರಿ ಸತ್ತ

ಕುರಿಯ ಹಾಲು, ತೋಳ ಹೊಯ್ದ ಮರಿ ಕುರಿಯ ಹಾಲು ಉಣ್ಣಬಹುದು'' (ಮಾಹಿತಿದಾರ: ಖಾನಪ್ಪ ಪೂಜಾರಿ:ಕಡಕಲಾಟ).

ಹಿಸ್ಯಾಳೆ ಅಮವಾಸ್ಯೆ ದಿನದ ರಾತ್ರಿ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ಯಕ್ಸಂಬ ಗ್ರಾಮದಲ್ಲಿ ಬೀರದೇವರ ಜಾತ್ರೆ ಜರುಗುತ್ತದೆ. ಈ ಜಾತ್ರೆಗೆ ಬರುವವರು ತಮ್ಮ ಗ್ರಾಮಗಳಲ್ಲಿರುವ ಬೀರದೇವರಿಗೆ ಹಾಲಿನ ನೈವೇದ್ಯ ಮತ್ತು ತುಪ್ಪದ ದೀಪ ಹಚ್ಚಿದ ನಂತರ ಸಾಯಂಕಾಲದೊಳಗೆ ಯಕ್ಸಂಬ ಗ್ರಾಮಕ್ಕೆ ಬಂದು ಹಾಲಿನ ನೈವೇದ್ಯ ಹಾಗೂ ತುಪ್ಪದ ದೀಪ ಹಚ್ಚಬೇಕೆನ್ನುವುದು ಸಂಪ್ರದಾಯವಾಗಿದೆ. ರಾತ್ರಿ ಸುಮಾರು ೮ ಗಂಟೆಯ ನಂತರ ಬೀರದೇವರ ಪಲ್ಲಕ್ಕಿ, ಗುಡಿಯಿಂದ ಹೊರಬಂದು ಗುಡಿಯ ಸುತ್ತ ಐದು ಸುತ್ತು ತಿರುಗುವುದು. ಅಲೆಮಾರಿ ಕುರುಬರು ತಲೆಯ ಮೇಲೆ ಕರಿಯ ಕಂಬಳಿ ಗೊಪ್ಪೆ ಹಾಕಿಕೊಂಡು ತಾವು ಕುರಿ ತಬ್ಬಿದ ಸ್ಥಳದಿಂದ ತಂದ ಹಾಲು ಮತ್ತು ತುಪ್ಪದ ಬಿಂದಿಗೆಯನ್ನು ತಲೆಯ ಮೇಲೆ ಹೊತ್ತುಕೊಂಡು ದೇವರ ಪಲ್ಲಕ್ಕಿಯ ಹಿಂದೆ ಐದು ಸುತ್ತು ಪ್ರದಕ್ಷಿಣೆ ಹಾಕುವರು. ಬೀರದೇವರ ಪೂಜಾರಿಯು ಹಾಲು ತುಂಬಿದ ಬಿಂದಿಗೆಗಳಿಗೆ ಪೂಜೆ ಮಾಡಿದ ಮೇಲೆ ಹಾಲನ್ನು ದೊಡ್ಡದಾದ ಕೊಪ್ಪರಿಕೆಯಲ್ಲಿ ಹಾಕುವರು. ಅಂದು ಜಾತ್ರೆಗೆ ಬಂದ ಎಲ್ಲ ಭಕ್ತಾದಿಗಳಿಗೆಲ್ಲಾ ಗೋಧಿಯ ಹುಗ್ಗಿ, ಹಾಲು, ಮೊಸರು, ಅನ್ನ, ಸಾರು ಊಟಕ್ಕೆ ಹಾಕುವರು.

ಅಮಾವಾಸ್ಯೆಗಿಂತ ಮೊದಲು ಐದು ಅಥವಾ ಒಂಬತ್ತು ಊರುಗಳ ಬೀರದೇವರುಗಳಿಗೆ ಭಂಡಾರ ಕೊಟ್ಟಿರುತ್ತಾರೆ. ಭಂಡಾರ ಪಡೆದ ಊರುಗಳ ದೇವರ ಪಲ್ಲಕ್ಕಿಗಳು ಅಮಾವಾಸ್ಯೆಯ ದಿನ ರಾತ್ರಿಯ ವೇಳೆಗೆಲ್ಲಾ ಯಕ್ಸಂಬ ಗ್ರಾಮದಲ್ಲಿರುವ ನದಿಗೆ ಬಂದು ಸೇರುವವು. ಅಮಾವಾಸ್ಯೆಯ ದಿನ ರಾತ್ರಿಯೆಲ್ಲ ಡೊಳ್ಳು ಮತ್ತು ಪಾಲ್ಕೆಗಳಿಂದ ಹಾಡುಗಳ ಕುಣಿತವಿರುತ್ತದೆ. ಡೊಳ್ಳಿನ ಹಾಡುಗಳನ್ನು ಸಂದರ್ಭದ ದೃಷ್ಟಿಯಿಂದ ಎರಡು ರೀತಿಯಾಗಿ ಹಾಡುತ್ತಾರೆ. ಮೊದಲನೆಯದು ಊರಾಡುವ ಸಂದರ್ಭದಲ್ಲಿ ಹಾಡುವ ಹರಕೆ ಹಾಡು. ಇದು ಸಂಪ್ರದಾಯವಾಗಿ ಬೆಳೆದು ಬಂದಿದೆ. ಎರಡನೆಯದು ದಿಮ್ಮಿಟ್ಟು ಹಾಡುವ ಗೋಷ್ಠಿ ವಿಧಾನ. ಇದು ದೇವರ ಸೇವೆಗಾಗಿ ಬಂದಿದೆ. ಈ ಎರಡು ಸಂದರ್ಭಗಳಲ್ಲಿ ಪ್ರತಿಯೊಂದು ಹಾಡು "ಸ್ವಾಮಿ ನಮ್ಮಯ್ ದೇವರ್ ಬಂದಾವ್ ಬನ್ನಿರೇ" ಎಂಬ ಪಲ್ಲವಿಯಿಂದ ಪ್ರಾರಂಭವಾಗುತ್ತದೆ. ಅಂತಹ ಸಂದರ್ಭದ ಅರ್ಥಪೂರ್ಣತೆಗೆ ಹಾಡೊಂದನ್ನು ಗಮನಿಸಬಹುದು.

"ಸ್ವಾಮಿ ನಮ್ಮಯ್ ದೇವರ್ ಬಂದಾವ ಬನ್ನಿರೇ
ಗುರುವೇ ನಮ್ಮಯ್ ದೇವರು ಬಂದಾವ ಬನ್ನಿರೇ
ಬಾಂವುಳ್ಳ ಭಕ್ತನ ಮನೆಯಲ್ಲಿ ರಾಯಭಾರಿಯ ಮರವೇನ
ರಾಯಭಾರಿಯ ಮರಕಪ್ಪ ರಾಜದ್ಹಕ್ಕಿಗಳ ಕೂಡ್ಯಾವ

ಲೆಕ್ಕವಿಲ್ಲದ ಗಿಣಿ ಹಿಂಡ ಕೂಡಿ ಕಾಲ ಹಣ್ಣಾವ ಮೇದಾವ
ಹಾಲಹಣ್ಣಾವ ಮೇದಾವಲ್ಲೋ ಭಕ್ತಗ ಹರಕಿಯ ಕೊಟ್ಟಾವೊ
ಆಳಮಕ್ಕಳ ಉಂಡಮನಿಯಾಗ ಹಾಲ ಕಾವಲ್ಯಾಗಿ ಹರಿಯಲಿ
ಪೂಜೇರಿ ಉಂಡಮನಿಯೊಳಗೆ ತುಪ್ಪದ ಕಾವಲಿ ಹರಿಯಲಿ
ನನ್ನ ಗುರುವ್ವ ಉಂಡ ಮನಿಯಾಗ ಹೊನ್ನರಾಶಿಯಾ ಹೊಯ್ಯಲೊ
ಕರ್ರಿ ಕಂಬಳಿ ಧರಮಾರೋ ಭಕ್ತಗ್ಹರಕಿಯ ಕೊಟ್ಟಾರೊ''

(*ಪ್ರೊ. ಚನ್ನಪ್ಪ ಕಟ್ಟಿ: ೧೯೯೭: ೭೮; ೭೯*)

ಈ ಡೊಳ್ಳಿನ ಹಾಡು "ಭಂಡಾರ ಬಂದಾವ ನಿಂದರಾಕ್ ನಾವ್ ಬಾರದೊ'' ಎಂದು ಮುಕ್ತಾಯವಾಗುತ್ತದೆ. ಇಡೀ ರಾತ್ರಿಯೆಲ್ಲ ವೈವಿಧ್ಯ ಸ್ವರೂಪದ ಹಾಡುಗಳನ್ನು ಡೊಳ್ಳು ಬಡಿಯುತ್ತ ಕುಣಿಯುತ್ತ ಹಾಡುತ್ತಾರೆ. ಬೆಳಗಿನಜಾವ ನದಿಯಿಂದ ಬೀರದೇವರ ಪಲ್ಲಕ್ಕಿಯನ್ನು ಡೊಳ್ಳು ಬಡಿಯುತ್ತ ದೇವರ ಗುಡಿಗೆ ತರಲಾಗುವುದು. ಇದಾದ ನಂತರ ಮುಂಜಾನೆ ಒಂಬತ್ತು ಗಂಟೆ ಸುಮಾರಿಗೆ ಬೀರದೇವರ ತೇರು ಎಳೆಯುತ್ತಾರೆ. ಅಂದು ಮಾತ್ರ ದೇವರಿಗೆ ಹೂವು, ಹಣ್ಣು, ಭಂಡಾರ ಹೊಗೆಯದೆ ತಮ್ಮ ಭಕ್ತಿಗನುಸಾರ ತೆಂಗಿನಕಾಯಿಗಳನ್ನು ತೇರಿಗೆ ಹೊಡೆಯುವರು. ಈ ರೀತಿ ಭಕ್ತರು ದೇವರ ತೇರಿಗೆ ಹೊಡೆದ ತೆಂಗಿನಕಾಯಿಗಳನ್ನು 'ಯಕ್ಸಂಬ'ದಲ್ಲಿ ಭೀರದೇವರ ಪೂಜೆ ಮಾಡುವ ಪೂಜಾರಿ ಕುಟುಂಬಗಳು ಹಂಚಿಕೊಳ್ಳುವ ಸಂಪ್ರದಾಯ ಇಂದಿಗೂ ಮುಂದುವರೆದಿರುವುದನ್ನು ಕಾಣಬಹುದಾಗಿದೆ.

ii) ಮಲಪುರಿ ಹಬ್ಬ

ಪ್ರತಿವರ್ಷ ಶ್ರಾವಣ ಮಾಸದಲ್ಲಿ ಸೋಮವಾರ ಅಥವಾ ಶುಕ್ರವಾರ ದಿನಗಳಂದು ಗಂಗಾಪೂಜೆಯನ್ನು ಆಚರಿಸುತ್ತಾರೆ. ಇದನ್ನು 'ಮಲಪುರಿ ಹಬ್ಬ' ಎಂದು ಕರೆಯುತ್ತಾರೆ. ಇದು ನಿಸರ್ಗ ಮತ್ತು ಅಲೆಮಾರಿ ಕುರುಬರಿಗೆ ಇರುವ ಸಂಬಂಧವನ್ನು ವ್ಯಕ್ತಪಡಿಸುತ್ತದೆ. ಈ ಹಬ್ಬವನ್ನು ಆಚರಿಸುವ ಹಿನ್ನೆಲೆಯೆಂದರೆ "ಶ್ರಾವಣ ಮಾಸದಲ್ಲಿ ಅತಿಹೆಚ್ಚು ಮಳೆಯಾಗಿ ಬಹಳ ದಿನಗಳವರೆಗೆ ಮಲಪ್ರಭ ನದಿ ತುಂಬಿ ಎರಡು ದಡ ಸೇರಿ ಹರಿಯುತ್ತಿತ್ತಂತೆ. ಆ ಸಮಯದಲ್ಲಿ ಕುರಿಗಳಿಗೆ ಮೇವು ಹಾಗೂ ತಮಗೆ ಆಹಾರ ದೊರೆಯದೆ ಕ್ಲಿಷ್ಟ ಪರಿಸ್ಥಿತಿ ನಿರ್ಮಾಣವಾಯಿತಂತೆ. ಅಲೆಮಾರಿ ಕುರುಬರು ತಮ್ಮ ಬದುಕುಗಳನ್ನು ಹೊಡೆದುಕೊಂಡು ಗುಡ್ಡಗಾಡು ಪ್ರದೇಶಕ್ಕಾಗಲಿ ಅಥವಾ ಬಯಲು ಪ್ರದೇಶಕ್ಕಾಗಲಿ ವಲಸೆ ಹೋಗುವುದು ಸಾಧ್ಯವಿಲ್ಲದಾಯಿತಂತೆ. ಆಗ ಪ್ರಕೃತಿ ದೇವಿಯಾದ ಗಂಗಾದೇವಿಯನ್ನು ಪ್ರಾರ್ಥಿಸಿ ನಮಗೆ ದಾರಿ ತೋರಿಸಿ ನಿನಗೆ ಪ್ರತಿವರ್ಷ ಶ್ರಾವಣಮಾಸದಲ್ಲಿ ಪೂಜೆ ಸಲ್ಲಿಸುತ್ತೇವೆಂದು ಬೇಡಿಕೊಂಡರಂತೆ. ಅವರ ಬೇಡಿಕೆಗೆ ಮನ್ನಿಸಿದ ಗಂಗಾದೇವಿ ತಕ್ಷಣ ಹರಿಯುವ ನೀರು ಎರಡು ಭಾಗವಾಗಿ ನಿಂತು ಕುರಿಗಳು ಹೋಗಲಿಕ್ಕೆ ದಾರಿ ಮಾಡಿಕೊಟ್ಟಳಂತೆ. ಆದ್ದರಿಂದ

ಅಂದಿನಿಂದ ಇಂದಿನವರೆಗೆ ಮಲಪ್ರಭ ನದಿಯ ಹೆಸರಿನಲ್ಲಿ ಗಂಗಾದೇವಿಗೆ ಪೂಜೆ ಸಲ್ಲಿಸುವುದನ್ನು 'ಮಲಪ್ರಭ ಹಬ್ಬ' ಎನ್ನುವ ಬದಲಾಗಿ 'ಮಲಪುರಿ ಹಬ್ಬ'ವೆಂದು ಕರೆಯುತ್ತಾರೆ''(ಮಾಹಿತಿದಾರ: ಅಪ್ಪಣ್ಣ ಪೂಜಾರಿ:ಅಪ್ಪನಹಟ್ಟಿ). ಈ ಹಬ್ಬವನ್ನು ಅಲೆಮಾರಿ ಕುರುಬರು ತಪ್ಪದೆ ಆಚರಿಸುತ್ತಾರೆ.

ಶ್ರಾವಣ ಮಾಸ ಮಳೆಗಾಲವಾದ್ದರಿಂದ ಕುರಿ ಮಂದೆಗಳು ಗುಡ್ಡಗಾಡು ಪ್ರದೇಶದಲ್ಲಿರುತ್ತವೆ. ಈ ಹಬ್ಬವನ್ನು ಒಂದೇ ಕಡೆ ತಬ್ಬಿದ ಕುಟುಂಬಗಳು ಸೇರಿ ಸಾಮೂಹಿಕವಾಗಿ ಆಚರಣೆ ಮಾಡುತ್ತವೆ. ಆದ ಖರ್ಚು-ವೆಚ್ಚಗಳನ್ನು ಸಮನಾಗಿ ಹಂಚಿಕೊಳ್ಳುವರು. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಪಾಪಿನಾಯಕನಳ್ಳಿ ಮತ್ತು ಕಮಲಾಪುರ ಮಧ್ಯದಲ್ಲಿ ಬರುವ ಗುಡ್ಡದಲ್ಲಿ ಚಿಕ್ಕೋಡಿ ತಾಲೂಕು ಅಪ್ಪನಹಟ್ಟಿ ಅಣ್ಣಪ್ಪ ಗುಂಪಿನವರು ಈ ಹಬ್ಬದ ಆಚರಣೆಯನ್ನು ಮಾಡಿದರು. ಈ ಹಬ್ಬ ಆಚರಣೆಗೆ ಮಹಿಳೆಯರು ಉಪವಾಸ ಇರುವರು. ಕುರಿಮಂದೆಗಳು ಮೇವು ಮೇಯಲು ಅಡವಿಗೆ ಹೋದನಂತರ ತಲೆ ಸ್ನಾನ ಮಾಡಿ ಅನುಕೂಲವೆನಿಸಿದ ಗುಡಾರದ ಸ್ಥಳಕ್ಕೆ ಸೇರಿಕೊಳ್ಳುತ್ತಾರೆ. ಆ ದಿನದ ಗಂಗಾದೇವಿಯ ನೈವೇದ್ಯಕ್ಕೆ ಹಾಗೂ ತಮಗೂ ವಿಶೇಷ ಅಡುಗೆಯನ್ನಾಗಿ ಹೋಳಿಗೆ ಮಾಡುತ್ತಾರೆ. ಕುಟುಂಬಗಳ ಸಂಖ್ಯೆ ಹೆಚ್ಚು ಇರುವುದರಿಂದ ಮಾಡಿದ ಹೋಳಿಗೆಗಳನ್ನು ಕಟ್ಟಿಗೆ ಮತ್ತು ಕಂಬಳಿಗಳ ಸಹಾಯದಿಂದ ತಯಾರು ಮಾಡಿದ ಮಂಚದ ಮೇಲೆ ಹಾಕಿರುತ್ತಾರೆ. ಅದು ನೋಡುಗರಿಗೆ ವಿಶೇಷ ಹಾಗೂ ಹೊಸತನವಾಗಿ ಕಾಣಿಸುತ್ತದೆ. ಕುರಿ ಹಿಂಡುಗಳು ಸಾಯಂಕಾಲ ಗುಡಾರಕ್ಕೆ ಮರಳಿದ ನಂತರ ಪುರುಷರೆಲ್ಲರು ಸೇರಿ ಪರಡಗಿ (ಬಾಗೀನಾ) ತಯಾರು ಮಾಡುತ್ತಾರೆ. ಕೆಳಗಡೆ ಕರಿಯ ಕಂಬಳಿ ಹಾಸಿ ಅದರ ಮೇಲೆ ಗದ್ದುಗೆ ಚೌಕಕಾರದಲ್ಲಿ ಜೋಳದ ಅಥವಾ ಸಜ್ಜೆಯ ದಂಟುಗಳನ್ನಿಟ್ಟು ದಾರದಿಂದ ಕಟ್ಟುತ್ತಾರೆ. ಪರಡಗಿ ತಯಾರು ಮಾಡಿದ ನಂತರ ಅದಕ್ಕೆ ಭಂಡಾರ ಕುಂಕುಮ ಹಚ್ಚಿ ಹೋಳಿಗೆ ಇಟ್ಟು ಪೂಜೆ ಮಾಡುವರು.

ಗುಡಾರದಲ್ಲಿ ಪೂಜೆ ಮುಗಿದ ನಂತರ ಯಾರಾದರೊಬ್ಬರು ತಲೆಗೆ ಪೇಟಾ ಸುತ್ತಿಕೊಂಡು, ತಲೆಯ ಮೇಲೆ ಕರಿ ಕಂಬಳಿ ಹಾಕಿಕೊಳ್ಳುವರು. ನಂತರ ಪರಡಗಿಯನ್ನು ತಲೆಯ ಮೇಲೆ ಹೊತ್ತು ನದಿ, ಹಳ್ಳ, ಹಗರಿ, ಹೊಳೆ ಅಥವಾ ಕಾಲುವೆ ಇರುವ ಸ್ಥಳಕ್ಕೆ ಪುರುಷರೆಲ್ಲಾ ಹೋಗುವರು. ಹೊತ್ತು ತಂದ ಪರಡಗಿ ಹಾಗೂ ಉಣ್ಣಲು ತಂದ ಬುತ್ತಿಯನ್ನು ಕಾಲುವೆ ದಡದಲ್ಲಿ ಇಳಿಸುವರು. ಗಂಗಾದೇವಿಯ ಪೂಜೆಗೆಂದು ತಂದ ೫ ಬಾಳೆಹಣ್ಣು, ೫ ನಿಂಬೆಹಣ್ಣು, ೫ ಹಸಿರುಬಳೆ, ೫ ಉತ್ತುತ್ತಿ ಹಾಗೂ ಬೆಲ್ಲವನ್ನು ಪರಡಗಿಯ ಮೇಲಿಟ್ಟು ಭಂಡಾರ, ಕುಂಕುಮ ಹಚ್ಚುವರು. ನಂತರ ಪರಡಗಿ ಸುತ್ತ ಮೋಂಬತ್ತಿ ದೀಪಹಚ್ಚಿ, ಊದಿನಕಡ್ಡಿ ಬೆಳಗಿಸಿ, ಕಾಯಿ ಹೊಡೆಯುವರು. ಇದಾದ ಮೇಲೆ ೫ ಜನರು ಪರಡಗಿಯನ್ನು ಎತ್ತಿಕೊಂಡು ಹರಿಯುವ ನೀರಿಗೆ ಬಿಡುವರು. ಬಿಡುವಾಗ 'ಜೈ ಗಂಗಮ್ಮ', 'ಜೈ ಗಂಗಮ್ಮ' ಎಂದು ಜೋರಾಗಿ ಹೇಳುವರು. ಅಲೆಮಾರಿ ಕುರುಬರು ಗಂಗಾದೇವಿಗೆ ಅರ್ಪಿಸಿದ ಪರಡಗಿ ಮುಣಗದೆ ಹಾಗೂ ಮುಂಬತ್ತಿಯ ದೀಪಗಳು ನಂದದೆ ಬಹಳ

ದೂರದವರೆಗೆ ಹರಿದು ಹೋದರೆ ಆ ವರ್ಷ ತಮಗೆ ಮತ್ತು ತಮ್ಮ ಕುರಿಮಂದೆಗೆ ಯಾವ ರೋಗ-ರುಜಿನ ಬಾರದೆ ಸಮೃದ್ಧಿಯಾಗುತ್ತದೆ ಎಂಬ ನಂಬಿಕೆ ಇಂದಿಗೂ ಬಲವಾಗಿ ಬೇರೂರಿದೆ. ಒಂದು ವೇಳೆ ಪರಡಗಿ ಮುಣಗಿ ಮುಂಬತ್ತಿ ದೀಪಗಳು ನಂದಿದರೆ ಮುಂದಿನ ದಿನಗಳಲ್ಲಿ ಕೆಡಕು ಸಂಭವಿಸುತ್ತವೆಂದು ನಂಬುವರು. ಆ ವರ್ಷ ಅತಿವೃಷ್ಟಿ, ಅನಾವೃಷ್ಟಿ ಅಥವಾ ನೆರೆಹಾವಳಿಗಳು ಸಂಭವಿಸುವುದರ ಜೊತೆಗೆ ಕುರಿಗಳಿಗೆ ಹೆಚ್ಚು ರೋಗ-ರುಜಿನಗಳು ಬಂದು ಆರ್ಥಿಕ ನಷ್ಟ ಸಂಭವಿಸುತ್ತೇವೆಂಬ ನಂಬಿಕೆ ಇದೆ.

ಗಂಗಾದೇವಿಗೆ ಪರಡಗಿ ಅರ್ಪಿಸಿದ ನಂತರ ಗುಡಾರದಿಂದ ತಂದ ಹೋಳಿಗೆ ಬುತ್ತಿಯನ್ನು ಕಾಲುವೆ ದಂಡೆಯ ಮೇಲೆ ಕುಳಿತು ಊಟ ಮಾಡುತ್ತಾರೆ. ಒಂದುವೇಳೆ ಊಟ ಮಾಡಲಾಗಿಯೂ ಬುತ್ತಿ ಉಳಿದರೆ ಅದನ್ನು ಗುಡಾರದ ಸ್ಥಳಕ್ಕೆ ತರದೆ ಗಂಗಾದೇವಿಗೆ ಬಿಟ್ಟು ಬರುತ್ತಾರೆ. ಕಾರಣ ತಮಗೂ ಮತ್ತು ಕುರಿಗಳಿಗೂ ಬರುವ ರೋಗರುಜಿನಗಳನ್ನು ಗಂಗಾದೇವಿಗೆ ಅರ್ಪಿಸಿರುತ್ತಾರೆ. ಬುತ್ತಿಯನ್ನು ಹಿಂದಕ್ಕೆ ತಂದರೆ ಬುತ್ತಿಯ ಜೊತೆಗೆ ರೋಗಗಳು ಬಂದು, ಕುರಿಗಳನ್ನು ಕಾಡುತ್ತವೆಂಬ ಭಯವಿದೆ. ಗುಡಾರಕ್ಕೆ ಬಂದ ನಂತರ ಮಹಿಳೆಯರು ಊಟ ಮಾಡುತ್ತಾರೆ. ಈ ಆಚರಣೆಗಳೆಲ್ಲಾ ಕತ್ತಲಲ್ಲಿಯೇ ಅಂದರೆ ಸುಮಾರು ೭ ಗಂಟೆಯಿಂದ ೧೦ ಗಂಟೆಯವರೆಗೆ ಜರುಗುತ್ತವೆ.

iii) ಕತ್ತೆ ಬಿಡೋದು

ಭಾರತದ ಆರ್ಥಿಕತೆಯಲ್ಲಿ ವಿವಿಧ ಸಮುದಾಯಗಳು ತಮ್ಮ ಜೀವನೋಪಾಯಕ್ಕಾಗಿ ವಿವಿಧ ವೃತ್ತಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ವೃತ್ತಿಯನ್ನು ವಂಶಪರಂಪರೆಯಾಗಿ ಮುಂದುವರೆಸಿ ಕೊಂಡು ಬಂದ ಜನಸಮುದಾಯಗಳು ತಮ್ಮ ವೃತ್ತಿಯಲ್ಲಿ ನಿರೀಕ್ಷೆಗೆ ಮೀರಿ ಪ್ರತಿಫಲ ದೊರೆತಾಗ ಹರಕೆ ಅಥವಾ ಆಚರಣೆಗಳ ಮೂಲಕ ಆಪ್ತರೊಂದಿಗೆ ಹಾಗೂ ಬಂಧು ಬಳಗದವರೊಂದಿಗೆ ಸಂಭ್ರಮ ಸಂತೋಷವನ್ನು ಹಂಚಿಕೊಳ್ಳುತ್ತಾರೆ. ಹಾಗೆಯೆ ಅಲೆಮಾರಿ ಕುರುಬರು ತಮ್ಮ ಕುಲ ಕಸುಬಿನಲ್ಲಿ ಸಾಧನೆಗೈದಾಗ ಕುರಿಗಳಲ್ಲಿ ಕತ್ತೆ ಬಿಡುವ ಸಂಪ್ರದಾಯದ ಮೂಲಕ ಸಂಭ್ರಮಿಸುವರು. ಒಂದು ಕುಟುಂಬದ ಕುರಿಗಳ ಸಂಖ್ಯೆ ಒಂದು ಸಾವಿರ ದಾಟಿದ ನಂತರ ಈ ಆಚರಣೆ ಮಾಡುತ್ತಾರೆ. ಇದು ಅನಾದಿ ಕಾಲದಿಂದಲೂ ನಡೆದುಕೊಂಡು ಬಂದ ಸಂಪ್ರದಾಯವಾಗಿದೆ.

ಕುರಿಗಳ ಸಂಖ್ಯೆ ಒಂದು ಸಾವಿರ ದಾಟಿದ ನಂತರ ಆಪ್ತರೊಂದಿಗೆ ಹಾಗೂ ಬಂಧುಗಳೊಂದಿಗೆ ಚರ್ಚಿಸುವರು. ನಂತರ ಪುರೋಹಿತರಲ್ಲಿಗೆ ಹೋಗಿ ಶುಭದಿನ ಕೇಳಿ ಕತ್ತೆ ಬೀಡುವ ದಿನ ನಿಗದಿ ಮಾಡುತ್ತಾರೆ. ದಿನ ನಿಗದಿ ಮಾಡಿದ ಮೇಲೆ ಅಗಸರಲ್ಲಿಗೆ ಹೋಗಿ ಒಂದು ಅಥವಾ ಎರಡು ಸೂಲು ಮರಿ ಹಾಕಿದ ಹೆಣ್ಣು ಕತ್ತೆಯನ್ನು ಕೊಂಡು ಅವರಲ್ಲಿಯೇ ಬಿಟ್ಟು ಬರುತ್ತಾರೆ. ಆಚರಣೆಯು ಒಂದೆರಡು ದಿನ ಬಾಕಿ ಇರುವಂತೆ ಕುರಿಮಂದೆಯ ಸ್ಥಳಕ್ಕೆ ಕತ್ತೆಯನ್ನು ಹೊಡೆದುಕೊಂಡು ಬರುವರು.

[illegible]

[illegible]

[illegible]

ಆಚರಣೆಯ ದಿನದಂದು ಕತ್ತೆಗೆ ಬಟ್ಟೆಯನ್ನು ಉಡಿಸಲು ಅಥವಾ ಶೃಂಗಾರಗೊಳಿಸಲು ಬಣ್ಣ ಬಣ್ಣದ ಹೊಸ ಬಟ್ಟೆಯನ್ನು ತಂದು ಹೊಲಿಸುವರು. ಅಂದು ಕತ್ತೆಯನ್ನು ಮದುವಣಗಿತ್ತಿಯ ರೂಪದಲ್ಲಿ ಶೃಂಗಾರಗೊಳಿಸಲಾಗುವುದು.

ಕತ್ತೆ ಬೀಡುವ ವಿಚಾರವನ್ನು ಮನೆದೇವರ ಪೂಜಾರಿಗೆ, ಡೊಳ್ಳಿನವರಿಗೆ, ಆಪ್ತರಿಗೆ ಹಾಗೂ ಬಂಧುಬಳಗದವರಿಗೆ ತಿಳಿಸಿ ಆಹ್ವಾನಿಸುವರು. ಕುಟುಂಬದ ಸದಸ್ಯರೆಲ್ಲರಿಗೆ, ಅಳಿಯಂದಿರಿಗೆ, ಹೆಣ್ಣು ಮಕ್ಕಳಿಗೆ ಹಾಗೂ ಹತ್ತಿರದ ಸಂಬಂಧಿಗಳಿಗೆ ಬಟ್ಟೆ ತರುವರು. ಕೆಲವರು ಹೆಣ್ಣು ಮಕ್ಕಳಿಗೆ ಖುಷಿ ಗಾಗಿ ಬಂಗಾರದ ಒಡವೆಗಳನ್ನು ತಂದು ಹಾಕುತ್ತಾರೆ. ಒಟ್ಟಾರೆಯಾಗಿ ಈ ಆಚರಣೆಯು ಮದುವೆ ಯಂತೆಯೇ ಜರುಗುತ್ತದೆ.

ಈ ಸಂಭ್ರಮವು ಕುರಿಮಂದೆ ತಬ್ಬಿದ ಗುಡಾರದ ಸ್ಥಳದಲ್ಲಿ ಜರುಗುವುದು. ಆ ದಿನದ ಆಚರಣೆಯ ಸಿಹಿ ಊಟವಾಗಿ ಲಡ್ಡು ಮಾಡುತ್ತಾರೆ. ಆದ್ದರಿಂದ ಮುಂಜಾನೆಯಿಂದಲೇ ಸಿದ್ಧತೆಗಳು ಪ್ರಾರಂಭವಾಗುತ್ತವೆ. ಸಾಯಂಕಾಲದೊಳಗೆ ಬೀಗರು, ಬಂಧುಗಳು, ಆಪ್ತರು, ಪೂಜಾರಿ ಹಾಗೂ ಡೊಳ್ಳಿನವರು ಬಂದು ಸೇರುತ್ತಾರೆ. ಅಂದು ಮಾತ್ರ ಕುರಿಗಳು ಸಾಯಂಕಾಲದ ಹೊತ್ತಿಗೆ ಗುಡಾರಕ್ಕೆ ಆಗಮಿಸುತ್ತವೆ. ನಂತರ ಕತ್ತೆ ಬಿಡುವ ಕಾರ್ಯಕ್ರಮವು ಡೊಳ್ಳು ಬಡಿಯುವ ಮೂಲಕ ಆರಂಭವಾಗುತ್ತದೆ. ಆ ದಿನದ ಕೇಂದ್ರ ಬಿಂದು ಕತ್ತೆಯಾದ್ದರಿಂದ ಅದಕ್ಕೆ ಸ್ನಾನ ಮಾಡಿಸುವರು. ನಂತರ ಪೂಜಾರಿಯು ಕತ್ತೆಗೆ ಬಟ್ಟೆ ತೊಡಿಸಿ, ಭಂಡಾರ ಹಚ್ಚಿ, ಕುಲದೇವರು ಮತ್ತು ಮನೆದೇವರು ಹೆಸರು ಹೇಳಿ ಕತ್ತೆ ಬಿಟ್ಟ ಕುಟುಂಬದ ಕುರಿಗಳ ಸಂಖ್ಯೆ ಸಾವಿರದಿಂದ, ಐದು ಸಾವಿರವಾಗಲಿ; ಐದು ಸಾವಿರದಿಂದ ಹತ್ತು ಸಾವಿರವಾಗಲಿ ಎಂದು ಏರು ಧ್ವನಿಯಲ್ಲಿ ದೇವರನ್ನು ಪ್ರಾರ್ಥಿಸುವನು. ಈ ಸಮುದಾಯದಲ್ಲಿ ಐದು ಸಾವಿರ ಕುರಿಗಳಾದರೆ ಹಂದಿ ಬಿಡುವ ಸಂಪ್ರದಾಯವಿದೆ. ಆದರೆ ಕ್ಷೇತ್ರಕಾರ್ಯದ ಅವಧಿಯಲ್ಲಿ ಯಾರು ಹಂದಿ ಬಿಡುವ ಆಚರಣೆ ನಡೆಸಿದ್ದು ಕಂಡುಬರಲಿಲ್ಲ. ಬಿಟ್ಟ ಕತ್ತೆಯನ್ನು ವಾರ ಅಥವಾ ಹತ್ತು ದಿನಗಳವರೆಗೆ ಕಟ್ಟಿ ಹಾಕಿ ಗುಡಾರದ ಸಮೀಪ ಮೇಯಿಸುತ್ತಾರೆ. ನಂತರ ದಿನಗಳಲ್ಲಿ ಕುರಿಗಳ ಜೊತೆ ಮೇಯಲು ಹೊಡೆದುಕೊಂಡು ಹೋಗುವರು. ಕ್ಷೇತ್ರಕಾರ್ಯದ ಅವಧಿಯಲ್ಲಿ ಚಿಕ್ಕೋಡಿ ತಾಲೂಕಿನ ಅಪ್ಪನಹಟ್ಟಿ ಗ್ರಾಮದ ಸಾವಿರಕುರಿ ಅಣ್ಣಪ್ಪನವರ ಕುರಿಗಳಲ್ಲಿ ಕತ್ತೆ ಇದ್ದುದು ಕಂಡುಬಂದಿತು.

ಮನೆದೇವರು ಬೀರದೇವರಾಗಿದ್ದರೆ ಆಲಗ ಹಾಯುವ ಕಾರ್ಯಕ್ರಮವಿರುತ್ತದೆ. ಇಷ್ಟೆಲ್ಲ ಆದ ಮೇಲೆ ಬಂಧುಗಳಿಗೆ ಬಟ್ಟೆ ಬರೆಗಳನ್ನು ಕೊಟ್ಟು, ನಂತರ ಎಲ್ಲರನ್ನು ಸಾಲಾಗಿ ಕೂಡಿಸಿ ಊಟಕ್ಕೆ ಬಡಿಸುತ್ತಾರೆ. ಬಂದ ಪೂಜಾರಿಯನ್ನು ಬರಿಗೈಯಲ್ಲಿ ಕಳುಹಿಸಬಾರದೆಂಬ ಉದ್ದೇಶದಿಂದ ಅವನಿಗೊಂದು ಕುರಿಮರಿ ಕೊಟ್ಟು ಆಶೀರ್ವಾದ ಪಡೆದುಕೊಳ್ಳುತ್ತಾರೆ. ಒಟ್ಟಾರೆಯಾಗಿ ಅಲೆಮಾರಿ

ಕುರುಬರು ಮದುವೆಯ ರೀತಿಯಲ್ಲಿ ಈ ಆಚರಣೆಯನ್ನು ಮಾಡಿ ಸುಮಾರು ಒಂದರಿಂದ ಒಂದೂವರೆ ಲಕ್ಷದವರೆಗೆ ಹಣವನ್ನು ವ್ಯಯ ಮಾಡುತ್ತೇವೆಂದು ಅಪ್ಪನಟ್ಟಿ. ಅಪ್ಪಣ್ಣ ಹೇಳುತ್ತಾರೆ. ಈ ಸಂಪ್ರದಾಯದಿಂದ ಇವರ ಕೌಟುಂಬಿಕ ಆದಾಯದ ಮೇಲೆ ಎಷ್ಟರಮಟ್ಟಿಗೆ ಪರಿಣಾಮ ಬೀರುತ್ತ ದೆಂಬುದನ್ನು ಗ್ರಹಿಸಬಹುದಾಗಿದೆ.

ಕತ್ತೆ ಬಿಡುವ ವಿಚಾರವಾಗಿ ಅಲೆಮಾರಿ ಕುರುಬರ ಅಭಿಪ್ರಾಯಗಳು

- ಕುರಿಗಳ ಸಂಖ್ಯೆ ಒಂದು ಸಾವಿರ ದಾಟುವವರೆಗೆ ಬಿಡುವುದಿಲ್ಲ. ಆ ಸಂಖ್ಯೆಗಿಂತ ಕಡಿಮೆ ಇರುವಾಗಲೇ ವಯಸ್ಸಾದ, ರೋಗಗ್ರಸ್ಥ ಹಾಗೂ ಕೆಲವು ಗಟ್ಟಿಮುಟ್ಟಾದ ಕುರಿಗಳನ್ನು ಮಾರಾಟ ಮಾಡುತ್ತವೆಂದು ಸೌಂದಲಗ ಅಪ್ಪಣ್ಣನವರು ಹೇಳುತ್ತಾರೆ. “ಒಂದು ಸಾವಿರ ಕುರಿ ಆದ ನಂತರ ಕತ್ತೆ ಬಿಡಬೇಕು. ಕತ್ತೆ ಬಿಟ್ಟನಂತರ ಅದೃಷ್ಟ ಚೆನ್ನಾಗಿದ್ದರೆ ಮುಂದೆ ಒಳ್ಳೆಯ ದಾಗುತ್ತದೆ, ಇಲ್ಲವಾದರೆ ಕುರಿಗಳಿಗೆ ಮತ್ತು ನಮಗೆ ತೊಂದರೆಯಾಗುತ್ತದೆ. ಆದ್ದರಿಂದಲೇ ಕುರಿಗಳ ಸಂಖ್ಯೆ ೧೦೦೦ ದಾಟುವವರೆಗೆ ಬಿಡುವುದಿಲ್ಲವೆಂದು ಹೇಳುತ್ತಾರೆ” (ಮಾಹಿತಿದಾರ: ಅಪ್ಪಣ್ಣ ಪೂಜಾರಿ:ಸೌಂದಲಗ). ಈ ಹೇಳಿಕೆಯು ಅವರ ನಂಬಿಕೆ ಅಥವಾ ಕಲ್ಪನೆಯಿಂದ ಕೂಡಿದೆ. ಆದರೆ ಅವರ ನೈಜ ಬದುಕನ್ನು ಪ್ರಾಯೋಗಿಕವಾಗಿ ನೋಡಿದಾಗ ಹಗಲಿರುಳು ಕುರಿಗಳ ಜೊತೆಗೆ ಅಡವಿಯಲ್ಲೆ ಕಾಲ ಕಳೆಯಬೇಕು. ವಾರಕ್ಕೊಮ್ಮೆ ಅಥವಾ ವಾರಕ್ಕೆರಡು ಸಲ ಕುರಿ ತಬ್ಬುವ ಹೊಲ-ಗದ್ದೆಗಳನ್ನು ಬದಲಾಯಿಸಬೇಕು. ಮಳೆಗಾಲದಲ್ಲಿ ಅವುಗಳ ಸಂಗೋಪನೆ ಬಹಳ ಕಷ್ಟದಾಯಕವಾದುದಾಗಿದೆ. ಇದು ಶ್ರಮಸಾಂದ್ರ ಉದ್ಯೋಗವಾದ್ದರಿಂದ ಅಷ್ಟೊಂದು ಕುರಿಗಳನ್ನು ಸಾಕಿ ಸಲುಹಲು ಕುಟುಂಬದ ಸದಸ್ಯರನ್ನು ಹಾಗೂ ಆಳು ಮಕ್ಕಳನ್ನು ಸರಿದೂಗಿಸುವುದು, ರೋಗ ರುಜಿನಗಳು ಬಂದಾಗ ಔಷಧೋಪಚಾರ ಮಾಡುವುದು ಇತ್ಯಾದಿ ಸಮಸ್ಯೆಗಳಿರುವುದರಿಂದಲೇ ಕುರಿಗಳ ಸಂಖ್ಯೆಯನ್ನು ಸಾವಿರಕ್ಕೇರಿಸುವುದಿಲ್ಲ ಎಂದು ಕಾಣಿಸುತ್ತದೆ.
- ಬೆಳಗಾವಿ ಜಿಲ್ಲೆಯ ಅಲೆಮಾರಿ ಕುರುಬರ ಪ್ರಭಾವಿ ನಾಯಕರಾದ ಲಕ್ಷ್ಮಣರಾವ್ ಚಿಂಗಳೆ ಪ್ರಕಾರ “ಸುಂದರವಾದ ದೊಡ್ಡ ಕಟ್ಟಡ, ಕಾರ್ಖಾನೆ, ಮನೆ, ಅಂಗಡಿ ಇತ್ಯಾದಿಗಳಲ್ಲಿ ಬೆದರು ಗೊಂಬೆಯನ್ನು ಇಳಿಬಿಟ್ಟಿರುತ್ತಾರೆ. ಹಾಗೆಯೆ ಸುಂದರವಾದ ಸ್ತ್ರೀ-ಪುರುಷರು ಸಭೆ ಸಮಾರಂಭಗಳಲ್ಲಿ ಭಾಗವಹಿಸುವಾಗ ಮುಖದ ಯಾವುದಾದರೂ ಒಂದು ಭಾಗದಲ್ಲಿ ಕಪ್ಪು ಚುಕ್ಕೆಯನ್ನಿಟ್ಟಿರುತ್ತಾರೆ. ಈ ರೀತಿಯಾಗಿ ಗೊಂಬೆ ಇಳಿಬಿಡುವುದು, ಮುಖದ ಮೇಲೆ ಕಪ್ಪು ಚುಕ್ಕೆ ಇಡುವುದರ ಉದ್ದೇಶ ಜನರ ದೃಷ್ಟಿಯು ಗೊಂಬೆ ಅಥವಾ ಕಪ್ಪುಚುಕ್ಕೆಯ ಕಡೆಗೆ ಹರಿಯಲಿ. ಇಲ್ಲವಾದರೆ ಆಯುಷ್ಯ ಕಡಿಮೆಯಾಗುತ್ತದೆ ಅಥವಾ ತೊಂದರೆಯಾಗುತ್ತದೆಂಬ ಭಾವನೆ ಬಹಳಷ್ಟು ಜನರಲ್ಲಿದೆ. ಹಾಗೆಯೇ ಬಹಳಷ್ಟು ಕುರಿಗಳಲ್ಲಿ ಒಂದು ಕತ್ತೆ ಇದ್ದರೆ

ಅಥವಾ ಒಳ್ಳೆಯದರಲ್ಲಿ ಒಂದು ಕೆಟ್ಟದ್ದಿದ್ದರೆ (ಕತ್ತೆ) ಕುರಿಗಳನ್ನು ನೋಡುಗರ ದೃಷ್ಟಿ ಕತ್ತೆಯ ಕಡೆ ಹರಿಯುತ್ತದೆ. ಇದರಿಂದ ಕುರಿಗಳಿಗೆ ರೋಗ-ರುಜಿನಗಳು ಬಾರದೆ ಕಷ್ಟ-ನಷ್ಟ ವಾಗುವುದಿಲ್ಲ" ಎಂದು ಹೇಳುತ್ತಾರೆ.

- ಇನ್ನೂ ಕೆಲವರು ಕತ್ತೆ ಬಿಡೋದು ಮೊದಲಿನಿಂದಲೂ ನಡೆದು ಬಂದಿದ್ದು ಆ ಸಂಪ್ರದಾಯ ವನ್ನು ಯಾವ ಕಾರಣಕ್ಕೂ ಮುರಿಯುವುದಿಲ್ಲ. ಕುರಿಗಳ ಸಂಖ್ಯೆ ಹೆಚ್ಚಾಗುವುದು ಅಥವಾ ಕಡಿಮೆಯಾಗುವುದು ನಮ್ಮ ಕೈಯಲ್ಲಿ ಏನಿದೆ? ಎಲ್ಲ ಆ ಬೀರದೇವರದು ಎಂದು ಹೇಳುತ್ತಾರೆ.

ಈ ಮೇಲಿನ ಅಭಿಪ್ರಾಯಗಳು ಭಿನ್ನವಾಗಿವೆ. ಆದರೂ ಅಲೆಮಾರಿ ಕುರುಬರು ೧೦೦೦ ಕುರಿಗಳಾಗುವವರೆಗೆ ಅವುಗಳ ಸಂಖ್ಯೆಯನ್ನು ಇಂದಿನ ಕಾಲದಲ್ಲಿ ಹೆಚ್ಚಿಸುವುದೆಂದರೆ ಸಾಮಾನ್ಯ ಕೆಲಸವಲ್ಲ. ಏಕೆಂದರೆ ಕುರಿಗಳಿಗೆ ಬರುವ ರೋಗ ರುಜಿನಗಳು ಸಂಖ್ಯೆ ಹೆಚ್ಚಾಗಿವೆ.

೬.೯ ಆರಾಧ್ಯ ದೈವಗಳು

ಪ್ರತಿಯೊಂದು ಸಮುದಾಯದಲ್ಲಿ ತಮ್ಮದೇ ಆದ ರೂಢಿ, ಸಂಪ್ರದಾಯ, ಸಂಸ್ಕೃತಿ, ಆಚಾರ, ವಿಚಾರ, ವೇಷಭೂಷಣ, ಊರದೇವತೆ, ನಾಡದೇವತೆ, ಆರಾಧ್ಯದೇವರು, ಕುಲದೇವರುಗಳೆಂದು ಹಲವಾರು ರೀತಿಯಲ್ಲಿ ತಮ್ಮ ತಮ್ಮ ಸಂಪ್ರದಾಯಕ್ಕನುಗುಣವಾಗಿ ಹಬ್ಬ, ಪೂಜೆ, ಪುರಸ್ಕಾರ, ಸಂಭ್ರಮವನ್ನು ನಡೆಸಿಕೊಂಡು ಉಳಿಸಿಕೊಂಡು ಬಂದಿರುವುದನ್ನು ಕಾಣುತ್ತೇವೆ. ಅದೇ ರೀತಿಯಾಗಿ ಅಲೆಮಾರಿ ಕುರುಬರು ದೈವಾಚರಣೆ ಮತ್ತು ರೂಢಿ, ಸಂಪ್ರದಾಯ, ಪೂಜೆ, ಪುರಸ್ಕಾರಗಳನ್ನು ಮುಂದುವರಿಸಿಕೊಂಡಿರುವುದರಲ್ಲಿ ಭಿನ್ನವಾಗಿಲ್ಲ. ಪ್ರಸ್ತುತ ಅಧ್ಯಯನದಲ್ಲಿ ಅಲೆಮಾರಿ ಕುರುಬರು ಆಚರಿಸುವ ಎಲ್ಲಾ ದೇವರುಗಳ ಮತ್ತು ಅವುಗಳ ಆಚರಣೆಯ ರೀತಿ-ನೀತಿಗಳನ್ನು ಸಂಪೂರ್ಣವಾಗಿ ವಿಶ್ಲೇಷಿಸದೆ, ಕೆಲವು ಪ್ರಮುಖ ಆರಾಧ್ಯ ದೈವಗಳನ್ನು ಕುರಿತು ಸಂಕ್ಷಿಪ್ತವಾಗಿ ವಿಶ್ಲೇಷಿಸಲಾಗುವುದು. ಒಂದೊಂದು ಆರಾಧ್ಯ ದೈವಗಳಿಗೂ ಒಂದೊಂದು ಪುರಾಣವಿರುವುದರಿಂದ ಅವರ ಸಂಪೂರ್ಣ ಮಾಹಿತಿ ನನ್ನ ಅಧ್ಯಯನದ ಉದ್ದೇಶಕ್ಕೆ ಅನಾವಶ್ಯಕವೆನಿಸುತ್ತದೆ. ಅವರ ಆರಾಧ್ಯ ದೈವಗಳ ಆಚರಣೆಯಲ್ಲಿ ಆರ್ಥಿಕ ಅಂಶಗಳು ಒಳಗೊಂಡಿರುವುದರಿಂದ ಬೀರೇಶ್ವರ, ಮಾಳಿಂಗರಾಯ, ಚಿಂಚಲಿ ಮಾಯಮ್ಮ, ಕರಿಸಿದ್ಧ ಮತ್ತು ಅಮೋಘಸಿದ್ಧರವರನ್ನು ಕುರಿತು ಸಂಕ್ಷಿಪ್ತವಾಗಿ ಹೇಳಲಾಗಿದೆ.

i) ಬೀರೇಶ್ವರ

ಪ್ರತಿಯೊಂದು ಮತ ಧರ್ಮದವರು ತಮ್ಮದೇ ಆದ ದೇವರನ್ನು ಸೃಷ್ಟಿಸಿಕೊಂಡು ಕುಲ ದೇವರೆಂದು ಆರಾಧಿಸುತ್ತಾ ಬಂದ ಸಂಗತಿ ಪ್ರಾಚೀನವಾದದು. ಆ ದೇವರುಗಳು ಮಾನವರು ಸಾಧಿಸಲಾರದ್ದನ್ನು ಸಾಧಿಸಿ, ತೋರಿಸಿ ಪವಾಡ ಪುರುಷರಾಗಿ ಕೊನೆಗೆ ದೇವರಾಗಿ ಪೂಜಾರ್ಹ ರಾಗಿದ್ದಾರೆ.

ನಮ್ಮ ರಾಷ್ಟ್ರದಲ್ಲಿ ಮನೆದೇವರು, ಕುಲದೇವರು, ಗ್ರಾಮದೇವರು, ನಾಡದೇವರು ಎಂದು ಇತ್ಯಾದಿಯಾಗಿ ವರ್ಗೀಕರಿಸಿ ಅವರನ್ನು ಪೂಜಿಸುತ್ತಾ ಬಂದಿರುವುದನ್ನು ಕಾಣುತ್ತೇವೆ. ಈ ರೀತಿಯಾಗಿ ಪ್ರತಿಯೊಂದು ಗುಂಪು, ಜನಾಂಗಕ್ಕೂ ಒಬ್ಬೊಬ್ಬ ಆರಾಧ್ಯ ದೇವರಿರುವುದನ್ನು ನೋಡುತ್ತೇವೆ. ಆ ಸಮುದಾಯ ಅಥವಾ ಜನಾಂಗಕ್ಕೆ ದೇವರಾದವರು, ಅವರನ್ನು ರಕ್ಷಿಸಿ, ಕಾಪಾಡಿದ ಸಂಕೇತವಾಗಿ, ಮುಂದಿನ ಸಂತತಿ ಅವರ ಅದ್ಭುತ ಲೀಲೆಗಳನ್ನು ಕೊಂಡಾಡಿ, ಪುರಾಣ ವ್ಯಕ್ತಿಗಳನ್ನಾಗಿಸಿ, ಅವರಿಗೆ ಸಂಬಂಧಪಟ್ಟ ಪುರಾಣವನ್ನು ರಚಿಸಿಕೊಂಡು, ಅವರ ಮಹಿಮೆಯನ್ನು ಕೊಂಡಾಡಿಕೊಳ್ಳುತ್ತ, ತಮ್ಮ ಸಮುದಾಯದ ಮಹತ್ವವನ್ನು ಹೇಳಿಕೊಳ್ಳುತ್ತಾ ಬಂದಿರುವುದು ಸರ್ವೇಸಮಾನ್ಯವಾದ ಸಂಗತಿಯಾಗಿದೆ.

ಈ ನಿಟ್ಟಿನಲ್ಲಿ ಯೋಚಿಸುವುದಾದರೆ ಕರ್ನಾಟಕದ ಹಾಗೂ ನಾಡಿನ ಇತರ ಭಾಗದ ಕುರುಬರು ಅದರಲ್ಲೂ ವಿಶೇಷವಾಗಿ ಬೆಳಗಾಂ ಜಿಲ್ಲೆಯ ಅಲೆಮಾರಿ ಕುರುಬರ ಆರಾಧ್ಯ ದೇವರೆಂದರೆ ಬೀರದೇವರು. ಈ ದೇವರ ಗುಡಿ ಅಲೆಮಾರಿ ಕುರುಬ ಕುಟುಂಬಗಳ ಸಂಖ್ಯೆ ಹೆಚ್ಚಿರುವ ಬೆಳಗಾಂ ಜಿಲ್ಲೆಯ ಬಹಳಷ್ಟು ಗ್ರಾಮಗಳಲ್ಲಿ ಬೀರದೇವರ ದೇವಸ್ಥಾನಗಳಿರುವುದು ಸರ್ವೆಸಾಮಾನ್ಯ. ಈ ದೈವ ಅಲೆಮಾರಿ ಕುರುಬರ ಆರಾಧ್ಯ ಮತ್ತು ಗ್ರಾಮದೇವರೆಂದು ಪರಿಗಣಿಸಲ್ಪಟ್ಟಿದೆ. ಕೆಲವು ಗ್ರಾಮಗಳಲ್ಲಿ ಊರ ಒಳಗೆ ಮತ್ತು ಊರ ಹೊರಗೆ ಎರಡು ದೇವಾಲಯಗಳಿರುವುದು ಕಂಡು ಬರುತ್ತದೆ. ಉದಾಹರಣೆಗೆ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ 'ಸೌಂದಲಗ' ಹಾಗೂ 'ಯಕ್ಸಂಬ' ಗ್ರಾಮಗಳು ಈ ದೇವರು ಆ ಸಮುದಾಯದ ಮೇಲೆ ಅತಿಯಾದ ಪ್ರಭಾವ ಬೀರಿರುವುದು ಅವನ ಜೀವನ ಚರಿತ್ರೆ ಹಾಗೂ ಡೊಳ್ಳಿನ ಹಾಡುಗಳಿಂದ ದೊರೆಯುತ್ತದೆ. ಹಾಲುಮತ ಪುರಾಣ ಹಾಗೂ ಡೊಳ್ಳಿನ ಹಾಡುಗಳ ಪ್ರಕಾರ ಕುರುಬರ ಮೂಲ ಪುರುಷ ಪದ್ಮಗೊಂಡ. ಕುರಿಗಳ ರಕ್ಷಣೆಗೆ ಶಿವನು ಬೀರ ದೇವರನ್ನು ಅವನ ಜೊತೆ ಕಳುಹಿಸಿದ್ದಾನೆ. ಬೀರದೇವರು ಹಾಲುಕರೆದು ಹೈನು ಮಾಡುವುದನ್ನು ಕಲಿಸಿರುವುದಲ್ಲದೆ, ತಮಗೆ ತೊಂದರೆ ಕೊಡುತ್ತಿದ್ದ ಕೋಣ ಸೂರನನ್ನು ಕೊಂದು ತನ್ನ ಶಕ್ತಿಪ್ರದರ್ಶಿಸಿ ದೈವೀಪುರುಷನಾಗಿದ್ದಾನೆ ಎಂಬ ಗಾಢ ನಂಬಿಕೆಯಿಂದ ಈ ಸಮುದಾಯದವರು ಹಬ್ಬ, ಜಾತ್ರೆ-ಉತ್ಸವಗಳಲ್ಲಿ ಆತನ ಪವಾಡವನ್ನು ಕೊಂಡಾಡುತ್ತಾರೆ. ಇಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಅಂಶವೆಂದರೆ ಅಲೆಮಾರಿ ಕುರುಬರು ಕುರಿಗಳಿಗೆ ಮೇವು-ನೀರು ಹುಡುಕಿಕೊಂಡು ಹೊಲ-ಗದ್ದೆ, ಕಾಡು-ಮೇಡುಗಳಲ್ಲಿ ಅಲೆದಾಡುವ ಸ್ಥಳಗಳಲ್ಲಿಯೇ ಬೀರದೇವರ ಮೂರ್ತಿ ಇಟ್ಟು ಪ್ರತಿದಿನ ಮುಂಜಾನೆ ನಮಸ್ಕಾರ ಮಾಡಿ ಹಣೆಯ ತುಂಬಾ ಭಂಡಾರ ಹಚ್ಚಿಕೊಳ್ಳುವುದನ್ನು ಕಾಣುತ್ತೇವೆ. ಅಮವಾಸ್ಯೆ, ಹುಣ್ಣಿಮೆ, ಅದಿತ್ಯವಾರ ಹಾಗೂ ಹಬ್ಬದ ದಿನಗಳಲ್ಲಿ ಎಡೆ ಮಾಡಿ ಪೂಜೆ ಸಲ್ಲಿಸುವುದನ್ನು ನೋಡಿದಾಗ ಆ ದೇವರ ಮೇಲೆ ಇವರಿಗಿರುವ ನಂಬಿಕೆ ಮತ್ತು ಅವರ ಮೇಲೆ ಬೀರದೇವರು ಬೀರಿರುವ ಪ್ರಭಾವ ಎಷ್ಟರ ಮಟ್ಟಿಗೆ ಇದೆ ಎಂಬುದು ಸ್ಪಷ್ಟವಾಗುತ್ತದೆ.

ಬೀರದೇವರು ತಮ್ಮ ಇಷ್ಟಾರ್ಥಗಳನ್ನು ಪೂರೈಸುತ್ತಾನೆಂಬ ನಂಬಿಕೆಯಿಂದ ಅವನ ಸಮೀಪ ಇರುವ ಹೆಣ್ಣು ದೇವತೆಗೆ ಕುರಿಬಲಿ ಕೊಡುತ್ತಾರೆ. ಮಾಂಸದ ಅಡಿಗೆಯನ್ನು ಬೀರದೇವರ ಪೂಜೆಗೆ ಸಲ್ಲಿಸುವುದಿಲ್ಲ. ಈ ದೇವರನ್ನು ಗುಡಿಯಲ್ಲಿ ಪೂಜೆಗೈಯುವಾಗ ಪೂಜಾರಿ ಹಣೆಯ ಮೇಲೆ ಭಂಡಾರ ಹಚ್ಚಿಕೊಂಡು ಕೈಯಲ್ಲಿ ಭಂಡಾರದ ಚೀಲ ಹಾಕಿಕೊಂಡು ತಲೆಯ ಮೆಲೆ ಎರಡೂವರೆ (೨ ೧/೨) ಏಡಿನ ಕಂಬಳಿ ಹಾಕಿಕೊಂಡು ದಿನಕ್ಕೆ ಎರಡು ಸಲ; ಅಂದರೆ ಮುಂಜಾನೆ ಮತ್ತು ಸಾಯಂಕಾಲ ಪೂಜೆ ಮಾಡಬೇಕು. ಪೂಜೆ ಮಾಡುವುದು ಪೂಜಾರಿಗಳಿಗೆ ವಂಶಪರಂಪರೆಯಿಂದ ಬಂದಿದ್ದಾಗಿದೆ. ಇವರು ಕೈಯಲ್ಲಿ ನಾಗಬೆತ್ತ ಕೊಂಕಳದಲ್ಲಿ ಭಂಡಾರ ಚೀಲ, ಹೆಗಲ ಮೇಲೆ ಕರಿಯ ಕಂಬಳಿ ಹಾಕಿಕೊಂಡು ಅಲೆಮಾರಿ ಕುರುಬರು ಅಲೆದಾಡುವ ಪ್ರದೇಶಗಳಿಗೆ ಬಂದು ಕುರಿಮರಿಯನ್ನು ಕಾಣಿಕೆ ರೂಪದಲ್ಲಿ ಪಡೆದುಕೊಂಡು ಹೋಗುತ್ತಾರೆ. ಭಕ್ತರು ಪೂಜಾರಿಯನ್ನು ಕಂಡಕೂಡಲೆ ಬೀರದೇವರೇ ಬಂದಿದ್ದಾನೆಂದು ಭಾವಿಸಿ ಕಾಲಿಗೆ ಬಿದ್ದು ನಮಸ್ಕಾರ ಮಾಡುತ್ತಾರೆ. ಪ್ರತಿಯಾಗಿ ಪೂಜಾರಿಗಳು ಆರ್ಶಿವಾದ ಸಂಕೇತವಾಗಿ ಭಂಡಾರವನ್ನು ಹಣೆಗೆ ಹಚ್ಚುವದನ್ನು ಕಾಣುತ್ತೇವೆ. ಅಲೆಮಾರಿ ಕುರುಬರು ತಮ್ಮವನೇ ಆದ ದೇವರನ್ನು ಸೃಷ್ಟಿಸಿಕೊಂಡು ಬಂದಂತೆ ಕಾಣುತ್ತದೆ. ಈಗಲೂ ಇವರು ಹಾಡಿ-ಹೊಗಳಿ, ಹಬ್ಬ, ಜಾತ್ರೆ-ಉತ್ಸವಾದಿಗಳಲ್ಲಿ ನೆಡೆಸಿಕೊಂಡು ಬಂದಿರುವ ಪದ್ಧತಿ, ಆ ಸಮುದಾಯದ ಸಂಸ್ಕೃತಿಯ ಪ್ರತೀಕವಾಗಿದೆ.

ii) ಮಾಳಿಂಗರಾಯ

ಅಲೆಮಾರಿ ಕುರುಬ ಸಮುದಾಯದ ಹಲವಾರು ಕುಟುಂಬಗಳ ಮನೆದೇವರಾದ ಹಾಗೂ ಬಹಳಷ್ಟು ಕುರುಬರಿಂದ ಪೂಜೆಗೊಳ್ಳುವ ದೇವರುಗಳಲ್ಲಿ ಹುಲಿಜಂತಿ ಮಾಳಿಂಗರಾಯ ಕೂಡ ಒಬ್ಬ. ಇವರ ಜೀವಿತ ಕಾಲ ಮತ್ತು ಚರಿತ್ರೆಯ ಬಗ್ಗೆ ನಿರ್ದಿಷ್ಟ ದಾಖಲೆಗಳು ಅಲಭ್ಯವಾಗಿವೆ. ಆದರೆ ಈ ದೇವರ ಬಗ್ಗೆ ಚರಿತ್ರೆ ಕಟ್ಟಿ ಹಾಡಿಕೊಂಡು ಬಂದ ಜನಪದ ಕಥೆ ಹಾಗೂ ಅವನ ಬಗ್ಗೆ ಹಾಡಲ್ಪಡುವ ಡೊಳ್ಳಿನ ಹಾಡುಗಳು ಸಮಗ್ರ ಮಾಹಿತಿ ಒದಗಿಸುತ್ತವೆ. ಈ ದೇವರ ಬಗೆಗೆ ಮಾಹಿತಿ ದೊರೆಯುವ ಡೊಳ್ಳಿನ ಪದ ಹೀಗಿದೆ.

"ಅಚ್ಚಭಕುತಿಯ ಮಾಳಿಂಗನು
ನಿಚ್ಚನಿಚ್ಚಲು ಪವಾಡ ಮಾಡುತ
ಬಿಚ್ಚಿ ಕಂಬಳಿ ಬೀಸಿ ಮಳೆಯನು ಕರೆಯುತ್ತಿದ್ದನು!
ಮೆಚ್ಚಿ ದೇವನು ಇವನ ಭಕ್ತಿಗೆ
ಉಚ್ಚ ಮಟ್ಟದ ವರವ ಕೊಟ್ಟನು
ಹೆಚ್ಚು ಹೇಳುವುದೇನು ಬೇಡಿದ ವರಹ ಕೊಟ್ಟೆಹನು!!"

(ಬ.ಪ.ನಾಯ್ಕರ: ೨೦೦೩:೫೨)

ಈ ರೀತಿಯಲ್ಲಿ ಕೇಳಿ ಬರುವ ಪ್ರಸ್ತುತ ಅಲೆಮಾರಿ ಕುರುಬರ ಆರಾಧ್ಯ ದೈವರಲ್ಲಿ ಒಬ್ಬನಾದ ಮಾಳಿಂಗರಾಯನಿಗೆ ಮಹಾರಾಷ್ಟ್ರ ರಾಜ್ಯದ ಸೋಲ್ಲಾಪುರ ಜಿಲ್ಲೆಯ ಮಂಗಳವಾಡ ತಾಲ್ಲೂಕಿನ ಹುಲಿಜಂತಿ ಗ್ರಾಮದಲ್ಲಿ ದೇವಸ್ಥಾನ ಕಟ್ಟಿಸಲಾಗಿದೆ. ಈತ ಕರ್ನಾಟಕ, ಮಹಾರಾಷ್ಟ್ರ ಹಾಗೂ ಆಂಧ್ರಪ್ರದೇಶದಿಂದ ಭಕ್ತರನ್ನು ಹೊಂದಿದ್ದಾನೆ. ಈತನ ಚರಿತ್ರೆಯನ್ನು ಅನೇಕ ಹಾಡುಗಾರರು ತಮ್ಮದೇ ಆದ ಶೈಲಿಯಲ್ಲಿ ಹಾಡಿಕೊಂಡು ಬಂದಿದ್ದಾರೆ. ಹುಲಿಜಂತಿಯ ಪೂಜ್ಯರಾದ ಅಡಿವೆಪ್ಪ ಮಾಳಪ್ಪ ಸೋಮುತ್ತೆ ಬರೆದ "ಹಾಲುಮತ ಪುರಾಣ" ಮಹತ್ವದ ಸಂಗ್ರಹವಾಗಿದೆ. ಇವರ ಚರಿತ್ರೆಯ ಬಗೆಗೆ ಅನೇಕ ಹಾಡುಗಾರರು ಹೇಳುವ ಪ್ರಕಾರ ಹಾಗೂ ಬರೆಯಲ್ಪಟ್ಟ ಪುರಾಣದಲ್ಲಿ ಮಾಳಿಂಗರಾಯ ತುಕ್ಕಪ್ಪನ ಹಿರಿಯ ಮಗನೆಂದೂ ಇನ್ನೊಂದು ಹಾಡಿನ ಪ್ರಕಾರ ಬೀರದೇವನು ಹನ್ನೆರಡು ವರ್ಷ ವಯಸ್ಸು ತಪ್ಪಸ್ಸು ಮಾಡಿ ಶಿವನನ್ನೊಲಿಸಿಕೊಂಡು ಪಡೆದನೆಂದು ತಿಳಿದುಬರುತ್ತದೆ.

"ಬಾರಾ ವರ್ಷ ಭಯಂಕರ ತಪಮಾಡಿ
ಅಮ್ಯಾಲ ಮಹಾದೇವ ಬಂದಾನ ಓಡಿ
ಏನ್ ಬೇಡತಿ ಬೇಡಪ್ಪ ಬಂದೀನಿ ನಿನ್ನ ಭಕ್ತಿ ನೋಡಿ"

(ಚನ್ನಪ್ಪಕಟ್ಟಿ:೧೯೭೭:೨೧)

ಈ ಪ್ರಕಾರ ಬೀರದೇವರು ಬಾರಾಮತಿಯಲ್ಲಿ ಹುಟ್ಟಿದ ಮಾಳಿಂಗರಾಯನನ್ನು ಸವಿಯಲಾರದ ಶಿಷ್ಯ ಮಗನನ್ನು ದಯಪಾಲಿಸು ಎಂದು ಬೇಡಿ ಪಡೆದನೆಂಬ ನಂಬಿಕೆಯೂ ಇದೆ. ಬೀರೇಶ್ವರ ತನ್ನ ಶಿಷ್ಯನನ್ನು ವಿವಿಧ ಪರೀಕ್ಷೆಗೆ ಒಳಗಾಗುವಂತೆ ಮಾಡಿರುವ ಸನ್ನಿವೇಶಗಳು ನಾಡಿನ ಡೊಳ್ಳು ಹಾಡುಗಳ ತುಂಬಾ ಹರಡಿಕೊಂಡಿವೆ.

ಮಾಳಿಂಗರಾಯನ ಸಾಹಸ ಕಾರ್ಯಗಳು

ಏಳುನೂರು ಬೇಡರನ್ನು ಕೊಂದದ್ದು : ಬೇಡರು ದನ-ಕುರಿಗಳನ್ನು ಅಪಹರಿಸಿ ಜನರಿಗೆ ತೊಂದರೆಯನ್ನು ನೀಡುತ್ತಿದ್ದರು. ಇಂತಹ ಪ್ರಸಂಗದಲ್ಲಿ ಸೋಮರಾಜನಿಗೆ ವಚನ ನೀಡಿ, ತನ್ನ ತಮ್ಮ ಜಕ್ಕರಾಯನೊಡಗೂಡಿ ಬೇಡರನ್ನು ಸೆದೆಬಡಿದು ಅವರ ರುಂಡಗಳನ್ನು ಚೆಂಡಾಡಿ ರಾಶಿ ಹಾಕಿಕೊಂಡು ಚಕ್ರ ಕಟ್ಟೆಯನ್ನು ಕಟ್ಟಿದನು. ಈ ಸ್ಥಳವನ್ನು ಉಮೇದಿಯಲ್ಲಿ ಈಗಲೂ ತೋರಿಸಿ ವಿವರಿಸುತ್ತಾರೆ. ಅನಂತರ ಬೀರದೇವರು ತನ್ನ ಶಿಷ್ಯನಿಗೆ ಮದುವೆ ಮಾಡಿಸಿ ಜಂತಿನಾರಾಯಣಪುರದಲ್ಲಿ ವಾಸ ಮಾಡಿರೆಂದು ಅಜ್ಞಾಪಿಸಿದನು.

ಹುಲಿಗಿಣ್ಣ ಕಾಸಿಕೊಟ್ಟಿದ್ದು : ಬೀರೇಶನು ಮಾಳಿಂಗರಾಯನ ಸಾಹಸ, ಶೌರ್ಯವನ್ನು ಜನತೆಗೆ ತೋರಿಸಲು ತನಗೆ ಹುಲಿಗಿಣ್ಣವನ್ನು ಮಾಡಿಕೊಡಲು ಅಜ್ಞಾಪಿಸುವನು. ಅದರಲ್ಲೂ ಕರಿ ಹುಲಿಯ ಗಿಣ್ಣ ಬೇಕೆಂದು ಬಯಸುತ್ತಾನೆ. ಗುರುವಿನ ಆದೇಶದಂತೆ ಮಾಳಿಂಗರಾಯ ಹುಲಿಗಿಣ್ಣದ ಹಾಲನ್ನು

ಅರ್ಪಿಸಿ, ಗುರುವಿನ ಆದಾರಭಿಮಾನಗಳಿಗೆ ಪಾತ್ರನಾಗುತ್ತನೆ. ಇದಕ್ಕೆ ಸಂಬಂಧಿಸಿದ ಡೊಳ್ಳಿನ ಹಾಡು ಹೀಗಿದೆ.

> “ಹುಲಿಹಾಲ ಹೊತಗೊಂಡ ಗುರುವಿನ ಸೇವಕ ಬಂದಾನಾಗ
> ಹೊರಗೆ ಹೋಮ ಮಾಡಿ ಸಿದ್ದಮಾಳಪ್ಪ ಗಿಣ್ಣ ಕಾಸ್ಯಾನಾಗ
> ಮಾಳಪ್ಪ ಗುರುವಿಗೆ ಉಣಿಸಾನ ಆಗ
> ಗುರುವಿನ ಉಣಿಸಿ ಸಿದ್ದಮಾಳಪ್ಪ ಅಲಗ ಹಾದಾನಾಗ”
>
> (*ಬಿ.ಪ.ನಾಯ್ಕರ:೨೦೦೩:೫೩*)

ಮಾಳಿಂಗರಾಯನನ್ನು ಪವಾಡ ಪುರುಷನನ್ನಾಗಿ ಮಾಡಿದ ಸಂಗತಿ ಡೊಳ್ಳಿನ ಹಾಡಿನಿಂದ ಸ್ಪಷ್ಟವಾಗುತ್ತದೆ. ಸಾಮಾನ್ಯವಾಗಿ ಹಸಿವಿನಿಂದ ಬಳಲಿದ ಹುಲಿಗಿಂತಲೂ ಮರಿ ಹಾಕಿದ ಹುಲಿಯು ಹೆಚ್ಚು ಅಘಾತಕಾರಿ. ಇಂಥ ಹುಲಿಯ ಮೊಲೆಯನ್ನು ಕರೆದು ಗುರುವಿಗಾಗಿ ಗಿಣ್ಣದ ಹಾಲು ತಂದ ಮಾಳಿಂಗರಾಯನ ಧೈರ್ಯ ಮತ್ತು ಸಾಹಸ ಒಂದು ಕಡೆಯಾದರೆ, ಇನ್ನೊಂದು ಕಡೆಗೆ ಕ್ರೂರ ಮೃಗಗಳನ್ನು ತನ್ನ ವಶ ಮಾಡಿಕೊಳ್ಳುವಂತಹ ಆಗಾದ ಶಕ್ತಿ ಹೊಂದಿದ್ದಕ್ಕಾಗಿ ಅವನೊಬ್ಬ ಪವಾಡ ಪುರುಷನಾಗಿ ಗ್ರಾಮೀಣ ಜನರ ಆರಾಧ್ಯದೈವನಾಗಿ ರೂಪಾಂತರಗೊಂಡನೆಂದು ಹೇಳಬಹುದು.

ಮಾಳಿಂಗರಾಯನು ಹುಲಿಯ ಮರಿಗಳನ್ನು ತಂದು ಸಲುಹಿದಂತೆ, ಎಡ-ಬಲಕ್ಕೊಂದು ಹುಲಿ ಮರಿಗಳನ್ನು ತಬ್ಬಿಕೊಂಡಿರುವ ಚಿತ್ರ ಈಗಲೂ ಹುಲಿಜಂತಿಯಲ್ಲಿ ಹಾಗೂ ವಿವಿಧ ಬೀರದೇವರ ದೇವಸ್ಥಾನಗಳ ಗೋಡೆಗಳ ಮೇಲೆ ರಾರಾಜಿಸುವುದನ್ನು ಕಾಣಬಹುದು. ಆ ಗ್ರಾಮಕ್ಕೆ ಹುಲಿಜಂತಿ ಎಂದು ಹೆಸರು ಬರಲು ಮಾಳಿಂಗರಾಯ ಹುಲಿಗಳ ಜೊತೆಗೆ ಇದ್ದುದೇ ಕಾರಣವಾಗಿರಬೇಕು. ಹುಲಿಯ ಗಿಣ್ಣದ ಹಾಲನ್ನು ಹಿಂಡಿ, ಗುರುವಿಗೆ ಅರ್ಪಿಸಿ, ಹುಲಿಯ ಮರಿಗಳನ್ನು ಎತ್ತಿಕೊಂಡು ಬಂದು ಹುಲಿಯ ಜಯಂತಿಯನ್ನು ಆಚರಿಸಿದ್ದಕ್ಕಾಗಿ ಮಾಳಿಂಗರಾಯ ನೆಲೆಸಿದ ಗ್ರಾಮಕ್ಕೆ “ಹುಲಿಯ ಜಯಂತಿಪುರ” ಎಂದು ಹೆಸರು ಬಂದಿರುವುದಾಗಿ ‘ಅಡಿವೆಪ್ಪ ಒಡೆಯರು’ ತಮ್ಮ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ. ಇದಕ್ಕೆ ಭಾಷಾಶಾಸ್ತ್ರದ ಪುಷ್ಟಿಯು ದೊರೆಯುತ್ತದೆ. ಅದರ ಪ್ರಕಾರ ಹುಲಿಜೊತೆ> ಹುಲಿಜತಿ> ಹುಲಿಜತ್ತಿ> ಹುಲಿಜಂತಿ ಎಂದಾಗಿರಬೇಕು.

ಮುಂಡಾಸದ ಸಾಹಸ : ಹುಲಿಜಂತಿಯಲ್ಲಿ ಪ್ರತಿವರ್ಷ ದೀಪಾವಳಿ ಅಮಾವಾಸ್ಯೆಗೆ ಮಾಳಿಂಗರಾಯನ ಜಾತ್ರೆ ಜರುಗುತ್ತದೆ. ಆ ಜಾತ್ರೆಯ ವಿಶೇಷವೆಂದರೆ ಅಮಾವಾಸ್ಯೆಯ ಮಧ್ಯರಾತ್ರಿಯಲ್ಲಿ ಮಾಳಿಂಗರಾಯನ ಸಮಾಧಿಯ ಪಕ್ಕದಲ್ಲಿರುವ ಬನ್ನಿಗಿಡ ಹಾಗೂ ಅವನ ಗುಡಿಯ ಪಂಚಕಳಸಗಳಿಗೆ ಶಿವನೇ ಬಂದು ಮುಂಡಾಸು ಸುತ್ತುತ್ತಾನೆ. ಈ ಪವಾಡವು ಕ್ಷಣಾರ್ಧದಲ್ಲಿ ನಡೆದು ಹೋಗುತ್ತದೆ. ಈ ಪವಾಡವನ್ನು ನೋಡಲೆಂದೆ ಸಾವಿರಾರು ಭಕ್ತರು ಅಲ್ಲಿ ಸೇರುತ್ತಾರೆ. ವಿಚಿತ್ರವೆಂದರೆ ಪವಾಡ ಜರಗುವ ರಾತ್ರಿ ಗುಡಿಯ ಆವರಣದಲ್ಲಿ ಯಾರಿಗೂ ಪ್ರವೇಶವಿರುವುದಿಲ್ಲ. “ಪವಾಡವನ್ನು

ನೋಡಿದರೆ ನೋಡುವವರ ಕಣ್ಣು ಹೋಗುತ್ತದೆ ಎಂಬ ಭಯ ಭಕ್ತರಲ್ಲಿದೆ. ಕಾರಣ ಬ್ರಿಟೀಷ್ ಅಧಿಕಾರಿಗಳಲ್ಲಿ ಓರ್ವ ಅಧಿಕಾರಿ ಮುಂಡಾಸ ಸುತ್ತುವುದನ್ನು ನೋಡಲು ಹೋಗಿ ಕಣ್ಣು ಕಳೆದು ಕೊಂಡನೆಂದು ಹೇಳಲಾಗುತ್ತದೆ"(ಶಿವಾನಂದ ಗುಬ್ಬಣ್ಣನವರ:೧೯೯೩:೬೮). ಪವಾಡ ಹೇಗೆ ಘಟಿಸುತ್ತದೆ ಎಂಬ ರಹಸ್ಯವನ್ನು ಇಂದಿನ ಆಧುನಿಕ ಯುಗದಲ್ಲಿ ಇಂದಿನವರೆಗೂ ಈ ಗುಡಿಯ ಪೂಜಾರಿಗಳು ಕಾಪಾಡಿಕೊಂಡು ಬಂದಿದ್ದಾರೆ.

ಜಾತ್ರೆಯಲ್ಲಿ ಭಂಡಾರ ಹಾಗೂ ಕುರಿಯ ಉಣ್ಣೆಯನ್ನು ದೇವರ ಗುಡಿ ಹಾಗೂ ಜಾತ್ರೆ ಸಮಯದಲ್ಲಿ ಪಾಲ್ಗೊಳ್ಳುವ ಪಲ್ಲಕ್ಕಿಗಳ ಮೇಲೆ ಹಾರಿಸುವುದರ ಮೂಲಕ ಕುರಿಯ ಉಣ್ಣೆಯನ್ನು ದೇವರಿಗೆ ಸಮರ್ಪಿಸಲಾಗುತ್ತದೆ. ಉಣ್ಣೆ ಮತ್ತು ಭಂಡಾರ ಎಸೆಯುವಿಕೆಯು ನೋಡುಗರನ್ನು ಮಂತ್ರಮುಗ್ಧರನ್ನಾಗಿ ಮಾಡುತ್ತದೆ.

ದೀಪಾವಳಿ ಪಾಡ್ಯದಂದು ಪಲ್ಲಕ್ಕಿ ಉತ್ಸವ ನಡೆಯುತ್ತವೆ. ಈ ಪಲ್ಲಕ್ಕಿ ಉತ್ಸವ ನೋಡಲು ಮಹಾರಾಷ್ಟ್ರ, ಕರ್ನಾಟಕ ಹಾಗೂ ಆಂಧ್ರಪ್ರದೇಶದಿಂದ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಬಂದಿರುತ್ತಾರೆ. ಡೊಳ್ಳಿನ ಪೆಟ್ಟು ಹಾಗೂ ಡೊಳ್ಳಿನ ಹಾಡು ಹೇಳುವುದು ಹಾಗೂ ಅಲಗ ಹಾಯುವುದು ಜಾತ್ರೆಯ ವಿಶೇಷವಾಗಿದೆ. ಜಾತ್ರೆಯ ದಿನದ ರಾತ್ರಿ ಮಾಳಿಂಗರಾಯನ ಕುರಿತು ನಾಟಕ ಪ್ರದರ್ಶಿಸಲಾಗುತ್ತದೆ. ಐದನೇ ದಿನದಂದು ಮುಂಡಾಸ ಇಳಿಸಿ ಪೂಜೆ ಮಾಡಿ ನದಿಯಲ್ಲಿ ಬಿಡುವರು. ನೀರಿನಲ್ಲಿ ಬಿಟ್ಟ ಕ್ಷಣ ಮಾತ್ರದಲ್ಲಿ ಮುಂಡಾಸ ಕಣ್ಣಿಗೆ ಕಾಣದಂತೆ ಮರೆಯಾಗುವು ದೆಂದು ಹೇಳಲಾಗುತ್ತದೆ.

iii) ಚಿಂಚಲಿ ಮಾಯಮ್ಮ

ಬೆಳಗಾವಿ ಜಿಲ್ಲೆಯ ತಾಲೂಕು ಸ್ಥಳವಾದ ರಾಯಭಾಗದ ಉತ್ತರಕ್ಕೆ ಹತ್ತು ಕಿ.ಮೀ.ಗಳ ಅಂತರದಲ್ಲಿರುವ ಚಿಂಚಲಿ ಗ್ರಾಮದ ಮಾಯವ್ವ ಅಲೆಮಾರಿ ಕುರುಬರ ಅಧಿದೇವತೆ ಹಾಗೂ ಗ್ರಾಮದೇವತೆಯಾಗಿದ್ದು ದೇವಿಯ ಮಹಿಮೆಯ ಫಲವಾಗಿ 'ಮಾಯಕ್ಕನ ಚಿಂಚಲಿ' ಎಂದೇ ಗುರುತಿಸಲ್ಪಡುತ್ತದೆ. ಮಾಯಕ್ಕ ದೇವಿಯ ದರ್ಶನಕ್ಕೆ ಕರ್ನಾಟಕದ ವಿವಿಧ ಜಿಲ್ಲೆಗಳ ಭಕ್ತರಲ್ಲದೆ ನೆರೆ ರಾಜ್ಯವಾದ ಮಹಾರಾಷ್ಟ್ರದಿಂದ ಭಕ್ತರೂ ಬಹಳಷ್ಟು ಆಗಮಿಸುತ್ತಾರೆ. ಈ ದೇವಿಗೆ ಎಲ್ಲಾ ಜಾತಿಯ ಭಕ್ತರಿದ್ದಾರೆ. ಆದರೆ ಅವಳೊಂದಿಗೆ ಹೆಚ್ಚು ನಿಕಟವಾದ ಸಂಬಂಧವನ್ನು ಕುರುಬ ಜನಾಂಗ ದವರು ಹೊಂದಿರುವುದು ಕಂಡುಬರುತ್ತದೆ. ಮಾಯಕ್ಕನ ಬಗೆಗಿನ ಕಥೆಗಳಲ್ಲಿ, ಭಕ್ತರ ಸಂಖ್ಯೆಯ ದೃಷ್ಟಿಯಿಂದ, ಆಕೆಯ ಸೇವಕರ ಸಂಖ್ಯೆಯಿಂದ, ಅಲೆಮಾರಿ ಕುರುಬರು ಹೆಚ್ಚು ಮಾಯಕ್ಕನನ್ನು ಆರಾಧಿಸುವುದು ತಿಳಿದುಬರುತ್ತದೆ.

"ಮಾಯಕ್ಕದೇವಿಯ ಮೂಲ ಸ್ಥಳ, ಸ್ಥಳಾಂತರ ಇತ್ಯಾದಿಗಳ ಕುರಿತು ಪಾರಂಪರಿಕ

ಹೇಳಿಕೆಗಳಿವೆ. ಅವಳು ಮಹಾರಾಷ್ಟ್ರದ ಮಾನದೇಶ(ಕೊಂಕಣ)ದಿಂದ ಬಂದವಳು ಎಂದು ಹೇಳುವುದಿದೆ. ಅಲ್ಲಿಯ ನಿಶ್ಚಿತವಾದ ಸ್ಥಳದ ಕುರಿತು ಸ್ಪಷ್ಟವಾಗುವುದಿಲ್ಲ. ಅವಳ ಸ್ಥಳಾಂತರಕ್ಕೆ ಕಾರಣಗಳನ್ನು ಜನ ಕೊಡುತ್ತಾರೆ. ಮಾಯಕ್ಕದೇವಿ ರಾಕ್ಷಸರನ್ನು ಬೆನ್ನಟ್ಟಿಕೊಂಡು ಇಲ್ಲಿಗೆ ಬಂದಳೆಂದೂ, ಇಲ್ಲಿ ರಾಕ್ಷಸರನ್ನು ಸಂಹಾರ ಮಾಡಿ ನೆಲೆ ನಿಂತಳೆಂದೂ ಕಥೆಗಳಿವೆ. ಮಾಯಕ್ಕನನ್ನು ಪಾರ್ವತಿಯ ಅವತಾರವೆಂದು ಹಲವಾರು ದೇವತೆಗಳನ್ನು ಹೋಲಿಸುವಂತೆ ಇಲ್ಲಿಯೂ ಹೋಲಿಸುವುದು ಕಂಡು ಬರುತ್ತದೆ. ಅವಳು ಕೊಂಕಣದ ಕಡೆಯಿಂದ ಬಂದವಳೆಂಬ ಅಭಿಪ್ರಾಯ ಹೆಚ್ಚು ಕಂಡುಬಂದು ಅವಳು ಇಲ್ಲಿಯ 'ವಿಷ್ಣುವಿನ ಅವತಾರ', 'ಅರ್ಧನಾರೀಶ್ವರಿಯ ಅವತಾರ' ಎಂಬ ನಂಬಿಕೆ ಕೇಳಿ ಬರುತ್ತದೆ"(ವಿಷ್ಣು ಎಂ.ಶಿಂದೆ:೨೦೦೦:೯).

ಮಾಯಕ್ಕನ ಕುರಿತು ಹಲವಾರು ಪುರಾಣ ಕಥೆಗಳು ಪ್ರಚಾರದಲ್ಲಿವೆ. ಅವುಗಳಲ್ಲಿ ಒಂದು ಚಾಮರಾಯನ ಆರು ಸಾಕು ಮಕ್ಕಳಲ್ಲಿ ಒಬ್ಬಳಾದ ಮಾಯವ್ವ ತನ್ನ ಸೋದರಿಯರೊಂದಿಗೆ ಅಡವಿಯಲ್ಲಿ ಕುರಿ ಮೇಯಿಸುತ್ತಿರುವಾಗ ಆಕಸ್ಮಾತ್ ಆಕೆಗೆ 'ಮಗು' ಸಿಗುತ್ತದೆ. ಈ ಮಗುವೇ 'ಬೀರೇಶ್ವರ'. ಈತ ಅಲೆಮಾರಿ ಕುರುಬರ ಸಂಪತ್ತಾದ ಕುರಿಗಳನ್ನು ಸಂರಕ್ಷಿಸುವ ಮೂಲಕ ಹಾಲುಮತದ ಅಧಿದೈವವಾಗಿ ಕುರುಬರಿಂದ ಪೂಜಿಸಲ್ಪಡುತ್ತಿದ್ದಾನೆ. ಶಿವನ ಅಜ್ಞೆಯಂತೆ ಬೀರೇಶ್ವರ ಕೈಲಾಸಕ್ಕೆ ಹೊರಟು ನಿಂತಾಗ ಮಾಯವ್ವನನ್ನು ಕರೆದುಕೊಂಡು ಹೋಗುವುದು ಬೀರೇಶ್ವರನ ಜೀವನದಲ್ಲಿ ಮಾಯವ್ವನ ಮಹತ್ವ ಸೂಚಿಸುತ್ತದೆ.

"ಇನ್ನೊಂದು ಪುರಾಣ ಕಥೆಯ ಪ್ರಕಾರ ಶಿವನ ಸತಿಯಾದ ಪಾರ್ವತಿ ಮಾಯವ್ವನ ಅವತಾರ ಪಡೆದು ಋಷಿ ಜನರಿಗೆ ತೊಂದರೆ ಕೊಡುತ್ತಿದ್ದ ಮಧುಕೈಟಭರನ್ನು ಸಂಹರಿಸಿದ ಮೇಲೆ ಹಾಲುಹಳ್ಳಕ್ಕೆ ಹೋಗಿ ಸ್ನಾನ ಮಾಡುತ್ತಾಳೆ. ಅನಂತರ ಹಳ್ಳದ ಬದಿಯಲ್ಲಿ ಕುರಿಗಳನ್ನು ಮೇಯಿಸುತ್ತಿದ್ದ ಕುರುಬರಿಗೆ ಕುಡಿಯಲು ಸ್ವಲ್ಪ ಹಾಲು ಕೊಡುವಂತೆ ಕೇಳಿದಾಗ ಅವರು ನಿರಾಕರಿಸುತ್ತಾರೆ. ಕುಪಿತ ಗೊಂಡ ಮಾಯಕ್ಕ ನಿಮ್ಮಲ್ಲಿರುವ ಹಾಲು ನೀರಾಗಲಿ ಹಾಗೂ ಕುರಿಗಳು ಕಲ್ಲಾಗಲೆಂದು ಶಾಪವಿತ್ತು ಚಿಂಚಲಿಗೆ ಬಂದು ಕಲ್ಲಾಗಿ ಕುಳಿತಳೆಂದು ಹೇಳಲಾಗಿದೆ"(ಶಿವಾನಂದ ಗುಬ್ಬಣ್ಣನವರ:೧೯೯೩:೭೧).

ಮಾಯಕ್ಕದೇವಿಯ ಜೊತೆಗೆ ಅಲೆಮಾರಿ ಕುರುಬ ಜನಾಂಗದವರು ಹೆಚ್ಚು ಸಂಬಂಧ ಹೊಂದಿರುವುದು ತಿಳಿದುಬರುತ್ತದೆ. ಆಕೆಯ ಪುರಾಣ ಅಥವಾ ದಂತಕಥೆಗಳಲ್ಲಿ ಕುರಿಗಳ ಪ್ರಸ್ತಾಪ ಬರುತ್ತದೆ. ತಮ್ಮ ಕುರಿಗಳಿಗೆ ರೋಗ ರುಜಿನಗಳು ಬಾರದಿರಲೆಂದು ತಮ್ಮ ಹಿಂಡಿನಲ್ಲಿ ಕೆಲವು ಕುರಿಗಳನ್ನು ಮೀಸಲು ಬಿಟ್ಟಿರುವುದು ಕಂಡುಬರುತ್ತದೆ. ದೇವಿಯ ಪಲ್ಲಕ್ಕಿ, ಕೆಳಗೆ ಹಾಸಲು ಕಂಬಳಿ ಡೊಳ್ಳಿನ ಚರ್ಮ, ಪಲ್ಲಕ್ಕಿಯ ಮೇಲೆ ಎಸೆಯಲು ಕುರಿಯ ಉಣ್ಣೆಯನ್ನು ಬಳಸಲಾಗುತ್ತದೆ. ದೇವಿಗೆ ಮಾಂಸ ಆಹಾರ ನಿಷಿದ್ಧವಾದ್ದರಿಂದ ಕುರಿಯ ಬಲಿ ನಡೆಯುವುದಿಲ್ಲ. ಕುರಿ ಹಾಲನ್ನು ದೇವತೆಗೆ ನೈವೇದ್ಯ ಮಾಡಿ ಅರ್ಪಿಸುವುದುಂಟು. ಹೀಗೆ ಕುರಿಗಳು ಮಾಯಕ್ಕನ ಸಂಪ್ರದಾಯದಲ್ಲಿ ಮಹತ್ವದ ಪಾತ್ರವಹಿಸಿವೆ.

ಕರಿಯ ಕಲ್ಲಿನಲ್ಲಿ ಕೆತ್ತಿದ ಮಾಯವ್ವನ ಮೂರ್ತಿಗೆ ನಾಲ್ಕು ಕೈಗಳಿದ್ದು ಕೈತುಂಬ ಹಸಿರು ಬಳೆಗಳಿವೆ. ಬಲಗೈಯಲ್ಲಿ ಖಡ್ಗ, ಇನ್ನೊಂದು ಕೈಯಲ್ಲಿ ತ್ರಿಶೂಲವು, ಎಡಗೈಯಲ್ಲಿ ಹಾವು ಕಂಡು ಬರುತ್ತದೆ. ತಲೆಯ ಮೇಲೆ ಐದು ತಲೆಯ ಸರ್ಪ ಹೆಡೆ ಎತ್ತಿ ನಿಂತಿದೆ. ಮೈಮೇಲೆ ತುಂಬಿದ ಬಂಗಾರದ ಒಡವೆಗಳು, ಹಣೆಯಲ್ಲಿ ಕುಂಕುಮ ಎದ್ದು ಕಾಣುತ್ತದೆ. ಹೆಚ್ಚಾಗಿ ಹಸಿರು, ಕೆಂಪು ಸೀರೆಗಳಲ್ಲಿ ಪೂಜೆ ಮಾಡುವ ದೇವಿಯು ಭಕ್ತರಿಗೆ ದರ್ಶನ ನೀಡಿ ಮಂತ್ರಮುಗ್ಧಗೊಳಿಸುತ್ತಾಳೆ.

ಮಾಯಕ್ಕನ ಪೂಜೆ ಬಹಳಷ್ಟು ಸರಳ ರೀತಿಯಲ್ಲಿ ಮೂಡಿಬರುತ್ತದೆ. ದಿನದಲ್ಲಿ ಎರಡು ಸಲ ನಡೆಯುವ ಪೂಜೆ ಬೆಳಗಿನ ಜಾವದಲ್ಲಿ ಮತ್ತು ಸಂಜೆಯ ಸಮಯದಲ್ಲಿ ನೆರವೇರುತ್ತದೆ. ದೇವಿಗೆ ಸಸ್ಯಾಹಾರವನ್ನೆ ಪೂಜೆಗೆ ನೈವೇದ್ಯ ಮಾಡಬೇಕು. ಪ್ರಾಣಿಬಲಿ ಕೊಡುವಂತಿಲ್ಲ. ದಿನನಿತ್ಯವೂ ಪೂಜಾಕಾರ್ಯ ನಡೆಯುತ್ತಿದ್ದರೂ ರವಿವಾರ ಹಾಗೂ ಹುಣ್ಣಿಮೆಯ ದಿನದಂದು ದೇವಿ ವಿಶಿಷ್ಟ ಅಲಂಕಾರಗೊಂಡಂತೆ ಕಂಡುಬರುತ್ತಾಳೆ. ಅಂದು ಆಕೆಯ ವಾರವಾದ್ದರಿಂದ ಭಕ್ತರ ಸಂಖ್ಯೆ ಹೆಚ್ಚಿರುತ್ತದೆ. ಅಂದು ಊರಲ್ಲಿಯ ಜನರು ಹಾಗೂ ಅಲೆಮಾರಿ ಕುರುಬರು ಉಪವಾಸವಿರುವ ಸಂಪ್ರದಾಯವಿದೆ. ಕುರುಬ ಮತ್ತು ಲಿಂಗಾಯತ ಜಾತಿಗೆ ಸೇರಿದವರು ೮ ದಿನಗಳ ಸರದಿಯಂತೆ ದೇವಿಯ ಪೂಜೆ ಮಾಡುತ್ತಾರೆ. ಪೂಜೆ ಮಾಡುವ ಸರದಿಯ ದಿನಗಳಲ್ಲಿ ಪೂಜಾರಿಯ ಸಹೋದರರಲ್ಲಿ ಯಾರಾದರೂ ತೀರಿಕೊಂಡರೆ ಅಥವಾ ಮಗು ಜನಿಸಿದರೆ ಮೈಲಿಗೆಯೆಂದು ಪೂಜೆ ಮಾಡುವಂತಿಲ್ಲ. ಆ ಸಮಯದಲ್ಲಿ ಮತ್ತೊಬ್ಬ ಸರದಿಯವರು ಪೂಜೆ ಮಾಡಬೇಕೆಂಬ ನೇಮವಿರುವುದು. ಪೂಜೆಗೈಯುವಾಗ ಪೂಜಾರಿ ತಲೆಯ ಮೇಲೆ ಕಂಬಳಿ ಹಾಕಿಕೊಳ್ಳಲೇಬೇಕು. ಕಂಬಳಿ ಇಲ್ಲದೇ ಯಾವುದೇ ಪೂಜೆ ಕಾರ್ಯ ಮಾಡುವಂತಿಲ್ಲ.

ಹಬ್ಬ-ಜಾತ್ರೆಗಳು : ನವರಾತ್ರಿಯೆಂದು ದೇವಿಗೆ ವಿಶೇಷ ಪೂಜೆ ಮಾಡಲಾಗುತ್ತದೆ. ನವರಾತ್ರಿ ಮುಗಿಯುವವರೆಗೆ ದೇವಿಯ ಮುಂದೆ ನಂದಾದೀಪ ಉರಿಯುವುದಲ್ಲದೆ, ದಿನಂಪ್ರತಿ ಒಂಬತ್ತು ದಿನಗಳವರೆಗೆ ಒಂದೊಂದು ಬಗೆಯಾಗಿ ದೇವಿಯನ್ನು ಅಲಂಕರಿಸಲಾಗುತ್ತದೆ. ಆಯುಧ ಪೂಜೆಯ ದಿನ ದೇವಿಯ ಮೂರ್ತಿಯನ್ನು ಪಲ್ಲಕ್ಕಿಯಲ್ಲಿಟ್ಟು, ವಾದ್ಯ ವೈಭವದೊಂದಿಗೆ ಹಾಲುಹಳ್ಳಕ್ಕೆ ಒಯ್ದು ಸ್ನಾನ ಮಾಡಿಸಿಕೊಂಡು ದೇವಸ್ಥಾನಕ್ಕೆ ಹಿಂದಿರುಗುತ್ತಾರೆ. ಆ ದಿನ ದೇವಿ ಜಾಗರಣೆ ಮಾಡುವಳೆಂದು ಭಕ್ತರು ಭಾವಿಸಿದ್ದಾರೆ.

ಕಾರಹುಣ್ಣಿಮೆ ದಿನ ಉತ್ತರ ಕರ್ನಾಟಕದಲ್ಲಿ ಎತ್ತುಗಳನ್ನು ಕರಿ ಹರಿಸಿ ಆಚರಿಸುವಂತೆ ಎಲ್ಲ ಕಡೆಗೆ ಸಾಮಾನ್ಯವಾಗಿ ಕಂಡುಬಂದರೆ ಚಿಂಚಲಿಯಲ್ಲಿ ಇದರ ಜೊತೆಗೆ ವಿಶೇಷ ಜಾಗರಣೆ ಉತ್ಸವ ಕಂಡುಬರುತ್ತದೆ. ಅಂದು ರಾತ್ರಿ ಹನ್ನೆರಡು ಗಂಟೆ ಸುಮಾರಿಗೆ ಮಾಯಕ್ಕನ ಪಲ್ಲಕ್ಕಿ, ಕುದುರೆ, ಭಕ್ತರೆಲ್ಲ ಸೇರಿ ಹೊರಗಿನ ಕಿಲಕಟ್ಟೆಗೆ ಬರುತ್ತಾರೆ. ಸಾವಿರಾರು ದೀಪಗಳನ್ನು ಹಿಡಿದ ಗ್ರಾಮಸ್ಥರು ಇದರಲ್ಲಿ ಭಾಗವಹಿಸುತ್ತಾರೆ. ಜನರು ಮಾಯಕ್ಕನ ಭಂಡಾರವನ್ನು ಎರಚುತ್ತ ಖುಷಿ

ಪಡುತ್ತಾರೆ. ಬೆಳಗಾದ ಮೇಲೆ ಪಲ್ಲಕ್ಕಿ ಗುಡಿ ತಲುಪುತ್ತದೆ. ಬೆಳಿಗ್ಗೆ ಹತ್ತರ ಸುಮಾರಿಗೆ ಮತ್ತೆ ಹಾಲುಹಳ್ಳಕ್ಕೆ ಸಾಗುತ್ತದೆ. ಮಾಯಕ್ಕ ಸ್ನಾನ ಮಾಡುವಳೆಂಬ ಪ್ರತೀತಿ ಇದೆ. ಅಲ್ಲಿ 'ಒರತಿ' ನೀರಿನಲ್ಲಿಯೇ ಅವಳಿಗೆ ಸ್ನಾನವಾಗುತ್ತದೆ. ಮಾಯಕ್ಕನನ್ನು ಪೂಜಿಸಿದ ಮೇಲೆ ಪೂಜಾರಿಯ ಮೈಯಲ್ಲಿ ದೇವಿ ಬರುವ ಮೂಲಕ 'ಹೇಳಿಕೆ' (ನುಡಿ) ಹೇಳುತ್ತಾಳೆ. ಹೇಳಿಕೆಯು ಮುಂಬರುವ ಮಳೆ, ಬೆಳೆ ಕುರಿತು ಭವಿಷ್ಯವಾಗಿರುವುದರಿಂದ ಭಕ್ತರು ಆಸಕ್ತಿಯಿಂದ ಆಲಿಸುತ್ತಾರೆ.

ಭರತಹುಣ್ಣಿಮೆ ಹಸ್ತ ನಕ್ಷತ್ರದ ದಿನದಂದು ಪ್ರತಿವರ್ಷ ಮಾಯಕ್ಕನ ಬೃಹತ್ ಜಾತ್ರೆ ಜರುಗುತ್ತದೆ. ಮುಖ್ಯವಾಗಿ ಐದು ದಿನಗಳ ಮಹತ್ವದ್ದಾಗಿದ್ದರೂ ಒಂದು ತಿಂಗಳವರೆಗೆ ಮುಂದುವರೆಯುತ್ತದೆ. ಮನೆದೇವರಾಗಿ ಹೊಂದಿರುವ ಅಲೆಮಾರಿ ಕುರುಬರು ತಾವು ಕರ್ನಾಟಕ ಅಥವಾ ಮಹಾರಾಷ್ಟ್ರದ ಯಾವುದೇ ಭಾಗದಲ್ಲಿ ಕುರಿಗಳನ್ನು ತಬ್ಬಿರಲಿ, ಕುಟುಂಬದ ಸದಸ್ಯರೊಬ್ಬರು ಆ ಜಾತ್ರೆಗೆ ಬಂದು ದೇವಿಯ ದರ್ಶನ ಪಡೆದು ಹರಕೆ ಅರ್ಪಿಸಿ ಕೃತಾರ್ಥರಾಗುತ್ತಾರೆ. ಕರ್ನಾಟಕ ಮತ್ತು ಮಹಾರಾಷ್ಟ್ರಗಳಿಂದ ಲಕ್ಷಾಂತರ ಭಕ್ತರು ಜಾತ್ರೆಗೆ ಸೇರುತ್ತಾರೆ. ಬಂದ ಭಕ್ತರು ಕೃಷ್ಣಾ ನದಿಯಲ್ಲಿ ಅಥವಾ ಹಾಲಹಳ್ಳದಲ್ಲಿ ಸ್ನಾನ ಮಾಡಿ ದೇವಿಗೆ ಹೋಳಿಗೆಯ ನೈವೇದ್ಯವನ್ನು ಮಾಡಿಕೊಂಡು ಡೊಳ್ಳು ಬಾರಿಸುತ್ತಾ ಶಹನಾಯಿ ಊದುತ್ತ "ಹೊಕ ಬಲೋ ಚಾಂಗ ಭಲೋ" ಎಂದು ಕೂಗುತ್ತ ಕುಣಿಯುತ್ತಾ ಗುಡಿಗೆ ಬಂದು ಹರಕೆ ಸಲ್ಲಿಸುತ್ತಾರೆ. ಅವರಲ್ಲಿ ಕೆಲವರಿಗೆ ದೇವತೆ ಮೈಯಲ್ಲಿ ಬಂದು ಕುಣಿಯುವವರು ಇರುತ್ತಾರೆ. ಅವರು ಕೈಯಲ್ಲಿ ಬೆತ್ತದ ಕೋಲನ್ನು ಹಿಡಿದು, ಹಣೆಗೆ ಭಂಡಾರ ಬಳಿದುಕೊಂಡಿರುತ್ತಾರೆ. ಅವರನ್ನು ಮಾಯಕ್ಕನ ಅವತಾರ ಎಂದು ಜನ ನಂಬಿದ್ದಾರೆ. ಅವರಿಂದ ಕಣಿ ಕೇಳುವುದು ಕಂಡುಬರುತ್ತದೆ.

ಚಿಂಚಲಿ ಜಾತ್ರೆಗೆ ಧಾರ್ಮಿಕ ಮಹತ್ವದ ಜೊತೆಗೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರಾಮುಖ್ಯತೆ ಬಹಳ ದೊಡ್ಡದಾಗಿದೆ. ಅಂದು ದನ, ಕುದುರೆ, ಕತ್ತೆಗಳ ಮಾರಾಟವಾಗುತ್ತದೆ. ಕುದುರೆ ಮಾಯವ್ವನ ವಾಹನವೆಂದು ಭಾವಿಸಿದ್ದರಿಂದ ಜಾತ್ರೆಯಲ್ಲಿ ಕುದುರೆಗೆ ಅಗ್ರಸ್ಥಾನ. ಕೃಷಿಗೆ ಬೇಕಾಗುವ ಸಲಕರಣೆ, ಸಾಮಾಗ್ರಿಗಳು, ಅಲೆಮಾರಿ ಕುರುಬರಿಗೆ ಬೇಕಾಗುವ ಕಂಬಳಿ, ಬಿದುರು, ಗುಡಾರದ ತಾಡಪಾಲು, ಕುರಿಬಲೆ, ಮರಿಬಲೆ ಇತ್ಯಾದಿಗಳನ್ನು ಮಾರಾಟಕ್ಕಿಟ್ಟಿರುತ್ತಾರೆ. ಬಂದಂತಹ ಭಕ್ತರಿಗೆ ದೇವಿಯ ನಮನ ಒಂದಾದರೆ ತಮಗೆ ಬೇಕಾಗುವ ಅವಶ್ಯಕ ವಸ್ತುಗಳ ಕೊಂಡುಕೊಳ್ಳುವಿಕೆ ಮತ್ತೊಂದಾಗಿರುತ್ತದೆ. ಮೂರು ವರ್ಷಕ್ಕೊಮ್ಮೆ ಕೀಲಕಟ್ಟರ ಜಾತ್ರೆ ನಡೆಯುತ್ತದೆ. ಹಿಂದೆ ಚಿಂಚಲಿಯಲ್ಲಿ ಜನರಿಗೆ ತೊಂದರೆ ಕೊಡುತ್ತಿದ್ದ ಕೀಲಕಟ್ಟ ರಾಕ್ಷಸರನ್ನು ಸಂಹರಿಸಿದ ಸ್ಮರಣಾರ್ಥವಾಗಿ ಜರಗುವುದು.

ಅಲೆಮಾರಿ ಕುರುಬರ ಅಧಿದೇವತೆಯಾದ ಮಾಯಕ್ಕನ ಹಬ್ಬ ಮತ್ತು ಜಾತ್ರೆಗಳಲ್ಲಿ ಕುರುಬರು ಪಾಲ್ಗೊಳ್ಳುವುದಲ್ಲದೆ ಕುರುಬೇತರರು ಪಾಲ್ಗೊಂಡು ದೇವತೆಯ ಕೃಪಾಕಟಾಕ್ಷಕ್ಕೆ ಪಾತ್ರರಾಗುವುದರ

ಮೂಲಕ ಮತೀಯ ಸಾಮರಸ್ಯ ಹಾಗೂ ಸಾಮಾಜಿಕ ಶಾಂತಿ ನೆಲೆಗೊಳ್ಳಲು ಕಾರಣವಾಗಿರುವುದು ಕಂಡುಬರುತ್ತದೆ.

ಮಾಯಕ್ಕದೇವಿಯ ಬಗೆಗಿನ ನಿಷಿದ್ಧಗಳು

- ಮಾಯಕ್ಕನ ಪೂಜೆ ಮಾಡುವ ಪೂಜಾರಿ ಮದುವೆಯಾದ ನಂತರವೇ ಆಕೆಯ ಗದ್ದುಗೆ ಏರಿ ಪೂಜೆ ಮಾಡಲು ಅರ್ಹನೆನಿಸುತ್ತಾನೆ.
- ಪುರುಷರು ಮಾತ್ರ ಪೂಜೆ ಮಾಡಬೇಕು.
- ಪೂಜಾರಿಗಳು ಕುಳಿತುಕೊಳ್ಳಲು ಕುದುರೆಯನ್ನು ಬಳಸುವಂತಿಲ್ಲ. ಇದಕ್ಕೆ ಕಾರಣ ಮಾಯಕ್ಕ ಕುದುರೆಯನ್ನು ವಾಹನವನ್ನಾಗಿ ಹೊಂದಿರುವಳೆಂದು ಹೇಳುತ್ತಾರೆ.
- ದೇವಿಯ ಸೇವಕರಾದ ಈರಗಾರರು ಮದುವೆಯಾಗದೆ ಆಲಗ ಹಾಯುವಂತಿಲ್ಲ.
- ಮೈಯಾಗ ಬಂದು ಕುಣಿಯುವ ಭಕ್ತರನ್ನು ಅಣುಕಿಸುವಂತಿಲ್ಲ ಹಾಗೂ ಹೀಯಾಳಿಸು ವಂತಿಲ್ಲ.

iv) ಕರೆಸಿದ್ಧೇಶ್ವರ

ವಿಶಿಷ್ಟ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವ ಬೆಳಗಾವಿ ಜಿಲ್ಲೆಯ ರಾಯಭಾಗ ತಾಲೂಕಿನ ಅಲಕನೂರಿನಲ್ಲಿ ಕರೆಸಿದ್ಧೇಶ್ವರನ ದೇವಸ್ಥಾನವಿದೆ. ಆ ದೇವಸ್ಥಾನವು ಹಿರಿಹೊಳೆಯ ಬೆನ್ನಿಗಂಟಿ ಕೊಂಡು, ಚಿಕ್ಕ-ಚಿಕ್ಕ ಬೆಟ್ಟಗುಡ್ಡಗಳಿಂದೊಡಗೂಡಿದ ವಿಶಾಲ ಬಯಲಿನಲ್ಲಿದೆ. ಈ ವಿಶಾಲ ಮೈದಾನ ಒಂದು ಕಾಲದಲ್ಲಿ ಕುರುಚಲು ಕಾಡಾಗಿತ್ತು. ಕುರಿ ಸಂಗೋಪನೆ ಜನರ ಪ್ರಮುಖ ಕಸುಬಾಗಿತ್ತು. ಇಲ್ಲಿ ಕುರುಬ ಸಮುದಾಯದವರೇ ಬಹುಸಂಖ್ಯಾತರಾಗಿದ್ದು, ಹಾಲುಮತ ಪರಂಪರೆಯ ತೊಟ್ಟಿಲಾಗಿದೆ.

ದೇವಸ್ಥಾನದ ಮುಖಮಂಟಪ ಕಬ್ಬಿಣ ಕಂಬಿಗಳಿಂದ ನಿರ್ಮಾಣಗೊಂಡಿದ್ದು, ಮುಖಮಂಟಪಕ್ಕೆ ಎದುರಾಗಿ ಜೋಡು ಟಗರುಗಳ ಮೂರ್ತಿಗಳಿವೆ. ಗರ್ಭಗುಡಿಯಲ್ಲಿ ಅಸ್ಪಷ್ಟ ಆಕೃತಿಯ ಮೂರ್ತಿ ಶಿಲ್ಪವಿದೆ. ಅದಕ್ಕೆ ಬಂಗಾರದ ಮುಖ ತೊಡಿಸಲಾಗಿದೆ. ಪೂಜಾರಿಯನ್ನು ಹೊರತುಪಡಿಸಿ ಬೇರೆ ಯಾರಿಗೂ ಗರ್ಭಗೃಹದಲ್ಲಿ ಪ್ರವೇಶವಿರುವುದಿಲ್ಲ. ಕರೆದೇವರ ಬಲಗಡೆ ಮಾಯಕ್ಕನ ಮೂರ್ತಿಯಿದೆ. ಪೂಜಾರಿ ಬಿಳಿಪಂಚೆ, ಬಿಳಿ ಅಂಗಿಯನ್ನು ತೊಟ್ಟುಕೊಂಡು ತಲೆಗೆ ಶುಭ್ರ ರೂಮಾಲು ಸುತ್ತಿಕೊಂಡು ಹಣೆಗೆ ಭಂಡಾರ ಹಚ್ಚಿಕೊಂಡು ಹೆಗಲ ಮೇಲೆ ಕರಿಕಂಬಳಿ ಹಾಕಿಕೊಂಡು ದಿನಕ್ಕೆರಡು ಸಲ ಪೂಜೆಗೈಯಬೇಕು. ಸುತ್ತಿಗೆ, ನಿಶಾನೆ, ಕಂಬಳಿ, ಡೊಳ್ಳು- ಇವು ದೇವರ ಲಾಂಛನಗಳು, ರವಿವಾರ ದಂದು ದರ್ಶನಕಾಂಕ್ಷಿಗಳ ಸಂಖ್ಯೆ ಅಧಿಕವಾಗಿರುತ್ತದೆ. ಉಪ್ಪಿಲ್ಲದ ಸಪ್ಪೆ ಅನ್ನ ಮತ್ತು ತುಪ್ಪವನ್ನು ದೇವರಿಗೆ ನೈವೇದ್ಯವಾಗಿ ಅರ್ಪಿಸುತ್ತಾರೆ.

ಕರೆಸಿದ್ಧ ಯಾರು ಎಂಬುದು ಯಾರಿಗೂ ಸ್ಪಷ್ಟವಾಗಿಲ್ಲ. ಆತನೊಬ್ಬ ಸಿದ್ಧಪುರುಷನೋ ತಿಳಿಯದು. ಜನರು ಮಾತ್ರ ಆತನನ್ನು ದೈವಿಪುರುಷನೆಂದೇ ನಂಬಿರುವರು. ಅಲ್ಲಿಯ ಜನರು ಹುನ್ನೂರ ಬೀರಪ್ಪ, ಕೊಣ್ಣೂರು ಕರಿಯಪ್ಪ, ಅಲಕನೂರು ಕರಿಸಿದ್ಧ ಎಂಬುವ ಬೀರದೇವರ ಬಿರುದುಗಳಲ್ಲೊಂದು. 'ಕ್ಯಾಣಗನೂರು' 'ಕ್ಯಾಣೇಸೂರನ' ವಧೆ ಮಾಡಿದ ಬೀರಪ್ಪನೇ ಕರಿದೇವರೆಂದು ಪ್ರಸಿದ್ಧನಾಗಿರುವುದಾಗಿ ವೀರಣ್ಣದಂಡೆಯವರು ಬರೆದ 'ಜನಪದ ಹಾಲುಮತ ಮಹಾಕಾವ್ಯ'ದಿಂದ ತಿಳಿದುಬರುವುದು. ಕರಿಸಿದ್ಧನು ಬೀರಪ್ಪನ ಅವತಾರವೆಂದು ಬಹಳಷ್ಟು ಜನರ ಅಭಿಪ್ರಾಯ. ಈ ದೇವರಂತೆ ಜಮಖಂಡಿ ತಾಲ್ಲೂಕಿನ ಕೊಣ್ಣೂರು, ರಾಯಭಾಗ ತಾಲೂಕಿನ ಹಾರೂಗೇರಿ, ಗೋಕಾಕ ತಾಲೂಕಿನ ಬಸಳಗುಂದಿ ಮೊದಲಾದೆಡೆಗಳಲ್ಲಿಯೂ ಕರೆಸಿದ್ಧನ ದೇವಾಲಯಗಳು ಕಂಡುಬರುತ್ತವೆ.

ಪತ್ರಿಕೌಲು : ದೇವರ ಮೇಲೆ ಅಪಾರ ನಂಬಿಕೆ ಇಟ್ಟಿರುವ ಅಲೆಮಾರಿ ಕುರುಬರು ದೇವರ ಮೈಗೇರಿಸಿದ ಪತ್ರಿಯ ಮೂಲಕ ಭವಿಷ್ಯವಾಣಿಯನ್ನು ಕೇಳುತ್ತಾರೆ. ಭಕ್ತರು ಸ್ನಾನಮಾಡಿ ವಿಷಯವನ್ನು ಮನಸ್ಸಿನಲ್ಲಿಟ್ಟುಕೊಂಡು ದೇವರ ಮುಂದೆ ಕೂಡುವರು. ದೇವರ ಮೈಗೇರಿಸಿದ ಪತ್ರಿ ನೆಲಕ್ಕುರುಳಿದಂತೆ ಶುಭ-ಅಶುಭ ತಿಳಿಯುವರು. ಪೂಜಾರಿಯು ಪತ್ರಿಯ ಫಲಶ್ರುತಿ ಹೇಳುವನು. ಆ ಭಾಗದ ಜನರು ದೇವರವಾಣಿ ಎಂದಿಗೂ ಹುಸಿಯಾಗುವುದಿಲ್ಲವೆಂದು ನಂಬಿದ್ದಾರೆ. ಸಾಮಾನ್ಯವಾಗಿ ದಿನಂಪ್ರತಿ, ವಿಶೇಷವಾಗಿ ಆದಿತ್ಯವಾರ ಮುಂಜಾನೆ ಮತ್ತು ಸಂಜೆ ಪೂಜೆಯ ವೇಳೆಯಲ್ಲಿ ಪತ್ರಿಕೌಲು ಕೇಳಲು ಕಾದು ನಿಲ್ಲುವರು. "ಕೆಲವರು ಸಣ್ಣ-ಸಣ್ಣ ವಿಷಯಗಳಿಗೂ ಕೌಲು ಕೇಳುತ್ತಾರೆ. ಕೆಲವರಂತೂ ಕೌಲು ಕೇಳದೇ ಯಾವುದೇ ಕಾರ್ಯವನ್ನು ಮಾಡುವುದಿಲ್ಲ. ಅಲೆಮಾರಿ ಕುರುಬರು ತಮ್ಮ ಕುರಿ ಹಿಂಡನ್ನು ಯಾವ ಪ್ರದೇಶದ ಕಡೆ ಕರೆದೊಯ್ಯಬೇಕೆಂಬುದನ್ನು ಕರಿಸಿದ್ಧನ ಕೌಲಿನಿಂದಲೇ ನಿರ್ಧರಿಸುವರು. ತಮ್ಮ ಕುರಿಗಳಿಗೆ ಯಾವ ರೋಗ-ರುಜಿನಗಳು ಬಾರದಿರಲಿ ಎಂದು ಹರಕೆ ಹೊತ್ತು, ಹರಕೆ ಒಪ್ಪಿಸುತ್ತಾರೆ. ಒಂದು ವೇಳೆ ದೇವರು ಮನಸ್ಸಿಗೆ ಒಪ್ಪಿಗೆಯಾಗುವ ಪತ್ರಿಕೌಲು ನೀಡದಿದ್ದಲ್ಲಿ ಭಕ್ತರು ಇಂತಿಷ್ಟು ಕುರಿ ಅಥವಾ ಮರಿ ಒಪ್ಪಿಸುವುದಾಗಿ ಹರಕೆ ಹೊತ್ತು ಮತ್ತೆ ಕೌಲು ಕೇಳುವ ಸಂಪ್ರದಾಯ ರೂಢಿಯಲ್ಲಿದೆ"(ಶ್ರೀರಾಮ ಇಟ್ಟಣ್ಣವರ:೨೦೦೨:೧೯೯).

ಜಾತ್ರೆ ಉತ್ಸವಗಳು : ಮಹಾನವಮಿ, ದೀಪಾವಳಿ, ಭಾರತಹುಣ್ಣಿಮೆ ಹಾಗೂ ಯುಗಾದಿ ಸಂದರ್ಭಗಳಲ್ಲಿ ಕರಿಸಿದ್ಧೇಶ್ವರ ದೇವಸ್ಥಾನದಲ್ಲಿ ವಿಶೇಷ ಉತ್ಸವ ಜರುಗುತ್ತವೆ. ಮಹಾನವಮಿಯ ದಿನ ದೇವರ ಪಲ್ಲಕ್ಕಿ ಗುಡಿಯಿಂದ ಹೊರಬಂದು ಗುಡಿಯ ಸುತ್ತ ಐದು ಸುತ್ತು ತಿರುಗುತ್ತದೆ. ಅಂದು ಹುನ್ನೂರು ಬೀರಪ್ಪ, ಹುಲಿಜಂತಿ ಮಾಳಿಂಗರಾಯ ಮತ್ತು ಕೊಣ್ಣೂರು ಕರಿಸಿದ್ಧನ ಪಲ್ಲಕ್ಕಿಗಳು ಇಲ್ಲಿಗೆ ಆಗಮಿಸುತ್ತವೆ. ಇಡೀ ದಿನ ಅನ್ನ ದಾಸೋಹ ನಡೆಯುವುದು.

ದೀಪಾವಳಿ ಹಬ್ಬದಂದು ದೇವರಿಗೆ ವಿಶೇಷ ಪೂಜೆ ಸಲ್ಲುವುದು. ಚತುರ್ದಶಿ ದಿನ ಸತ್ತಿಗೆ,

ಕಂಬಳಿ, ನಿಶಾನೆ, ಡೊಳ್ಳುಗಳೊಂದಿಗೆ ದೇವರ ಪಲ್ಲಕ್ಕಿ ಗುಡಿ ಸುತ್ತುವುದು. ಡೊಳ್ಳು ಕುಣಿತಗಳಾದ ಕೈಪಟ್ಟು, ದಟ್ಟಿ ಗುಣಿತ, ಲಾಗ ಹಾಕುವ ಅನೇಕ ಕಾರ್ಯಕ್ರಮಗಳು ನಡೆಯುತ್ತವೆ. ಹನ್ನೆರಡು ವರ್ಷಗಳಿಗೊಮ್ಮೆ ಹನ್ನೆರಡು ಊರುಗಳ ದೇವರು ಕರಿಸಿದ್ಧನ ಬೆಟ್ಟಕ್ಕೆ ಬರುತ್ತವೆ.

ಭಾರತ ಹುಣ್ಣಿಮೆಯ ರಾತ್ರಿ ಹತ್ತು ಗಂಟೆಗೆ ಆನೆ-ಕುದುರೆ-ಲಾಂಛನಗಳೊಂದಿಗೆ ದೇವರ ಪಲ್ಲಕ್ಕಿ ದೇವಸ್ಥಾನದಿಂದ ಹೊರಬಂದು, ಹೊರವಲಯದಲ್ಲಿರುವ ಆಲದ ಕಟ್ಟೆಯ ಮೇಲೆ ವಿಶ್ರಮಿಸಿ, ಮಧ್ಯರಾತ್ರಿ ಹೊತ್ತಿಗೆ ಮತ್ತೇ ದೇವಸ್ಥಾನಕ್ಕೆ ಮರಳುವುದು. ಆ ಸಮಯದಲ್ಲಿ ದೇವಾಲಯದ ಪ್ರವೇಶ ದ್ವಾರದಲ್ಲಿ ಪೂಜಾರಿಯೊಬ್ಬ ಕುರಿಮರಿಯೊಂದನ್ನು ಕತ್ತರಿಸುತ್ತಾನೆ. ಆದರೆ ಕರಿಸಿದ್ಧನಿಗೆ ಬೇಟೆಯ ಅಡಿಗೆ ನಿಷಿದ್ಧ. ಜಾತ್ರೆ ಉತ್ಸವಗಳ ವೆಚ್ಚವನ್ನು ಭಕ್ತರು ನೀಡುವ ಹರಕೆಯ ಹಣದಿಂದಲೇ ಸರಿದೂಗಿಸುತ್ತಾರೆ.

ಸಾಂಸ್ಕೃತಿಕ ಕೇಂದ್ರ : ಈ ದೇವಸ್ಥಾನ ಬುಡಕಟ್ಟು ಸಮುದಾಯವೊಂದರ ಸಾಂಸ್ಕೃತಿಕ ಕೇಂದ್ರ ವಾಗಿದೆ. ಇದು ಡೊಳ್ಳಿನ ಮೇಳಗಳ ತವರು. ಇಲ್ಲಿ ೧೦-೧೨ ಡೊಳ್ಳು ಹಾಡುವ ಮೇಳಗಳಿವೆ. ಭಕ್ತರ ಆಹ್ವಾನದ ಮೇರೆಗೆ ಕಂಟಿಕಾರನು (ಡೊಳ್ಳು-ಮೇಳಗಳ ನಾಯಕ) ಸರದಿಯಂತೆ ಅವಕಾಶ ನೀಡುತ್ತಾನೆ. ಭಕ್ತರು ಕೊಡುವ ಹಣವನ್ನು ಕಂಟಿಕಾರನಿಗೆ ಒಪ್ಪಿಸುವರು. ಅವನು ಅದರಲ್ಲಿಯೂ ಅರ್ಧದಷ್ಟು ಹಣವನ್ನು ದೇವರ ಭಂಡಾರಕ್ಕೆ ಸೇರಿಸಿಕೊಂಡು ಉಳಿದ ಹಣವನ್ನು ಮೇಳಕ್ಕೆ ಕೊಡ ಮಾಡುವನು. ಅದನ್ನೇ ಅವರು ಮಹಾಪ್ರಸಾದವೆಂದು ಸ್ವೀಕರಿಸುವರು. ದೇವಸ್ಥಾನದ ನೆರಳಲ್ಲಿ ಹಾಡುಗಾರಿಕೆಯ ಕಲೆ ಸುಭದ್ರ ನೆಲೆ ಪಡೆದುಕೊಂಡಿದೆ.

v) ಅಮೋಘಸಿದ್ಧ

ಹನ್ನೆರಡನೆಯ ಶತಮಾನದಲ್ಲಿ ಜರುಗಿದ ಧಾರ್ಮಿಕ ಕ್ರಾಂತಿ ಬಸವಣ್ಣನಿಂದ ಪ್ರಾರಂಭವಾಗಿದ್ದೇನೋ ನಿಜ. ಆದರೆ ಅವರ ನಂತರ ಅದನ್ನು ಉಳಿಸಿ, ಬೆಳೆಸಿಕೊಂಡು ಬಂದವರು ಸಿದ್ಧರು. ಸಿದ್ಧರ ಸಿದ್ಧರೆಂಬ ಗೌರವಕ್ಕೆ ಪಾತ್ರನಾದ ಗುರು ರೇವಣಸಿದ್ಧರ ಸಮಕಾಲೀನರಾದ ಸಿದ್ಧರಾಮ, ಮರಳುಸಿದ್ಧ ಹಾಗೂ ಅಮೋಘಸಿದ್ಧ ಮುಂತಾದವರು ಅಗ್ರಗಣ್ಯರು. ಇವನು ಅಲೆಮಾರಿ ಕುರುಬ ಕುಲದವನು ಎನ್ನುವುದರಲ್ಲಿ ಎರಡು ಮಾತಿಲ್ಲ. ಬಿಜಾಪುರ ಜಿಲ್ಲೆ ಅರಿಕೇರಿ, ಜಾಲಗೇರಿ ಹಾಗೂ ಸಿದ್ಧಾಪುರ ಮೂರು ಗ್ರಾಮಗಳ ಸೀಮೆಗಳು ಸೇರುವ ಸ್ಥಳದಲ್ಲಿರುವ ಚಿಕ್ಕ ದಿನ್ನೆಯ ಮೇಲೆ ಇವನ ಗದ್ದುಗೆ ಇದೆ. ಇದು ಮೂರು ಮೆಟ್ಟಿನ ಸೀಮೆ ಸ್ಥಳದಲ್ಲಿರುವುದರಿಂದ ಇದನ್ನು ಮುಮ್ಮಟಗಿರಿ ಎಂದೂ ಮೂರು ದಿನ್ನೆಗಳ ನಡುವೆ ಇರುವುದರಿಂದ ಮುಮ್ಮಟಿಗುಡ್ಡ ಎಂತಲೂ ಸ್ಥಳೀಯರು ಕರೆಯುತ್ತಾರೆ.

ಸ್ಥಳೀಯ ಪುರಾಣದ ಪ್ರಕಾರ ಅಮೋಘಸಿದ್ಧನು "ಶಿವನಿಂದ ವರಪಡೆದು ಕೈಲಾಸದಿಂದ

ಗುರು ಸೋಮಲಿಂಗನೊಂದಿಗೆ ಭೂಲೋಕಕ್ಕೆ ಬರುತ್ತಾನೆ. ಮಾರ್ಗ ಮಧ್ಯದಲ್ಲಿ ತಪ್ಪಿಯೂ ಹಿಂದಿರುಗಿ ನೋಡಕೂಡದು ಎಂಬುದಾಗಿ ಕರಾರು ಆಗುತ್ತದೆ. ಭೂಮಿಯ ಮೇಲೆ ಪವಾಡ ತೋರಿಸುತ್ತ ಬರುವಾಗ ಹಿಂದಿರುಗಿ ನೋಡುತ್ತಾನೆ. ನೋಡಿದ ಸ್ಥಳದಲ್ಲಿಯೇ ಗುರು ಸೋಮಲಿಂಗನು ಮಾಯವಾಗುತ್ತಾನೆ. ಆಗ ಅಮೋಘಸಿದ್ಧನು ಅಲ್ಲಿಯೇ ನೆಲೆ ನಿಲ್ಲುತ್ತಾನೆ. ಹೀಗೆ ನಿಂತ ಸ್ಥಳವೇ 'ಮುಮ್ಮಟಗಿರಿ' ಆಗಿದೆ"(ಶ್ರೀರಾಮ ಇಟ್ಟಣ್ಣವರ:೨೦೦೨:೮೮).

ಮುಮ್ಮಟಗಿರಿಯಲ್ಲಿ ನೆಲೆಸಿದ ಅಮೋಘಸಿದ್ಧನ ವಂಶಾವಳಿಯು ಅವನ ತಂದೆ ಸೋಮಲಿಂಗ ತಾಯಿ ಗೌರದೇವಿಯಿಂದ ಪ್ರಾರಂಭವಾಗುವುದಾಗಿ ಹಾಗೂ ಅಮೋಘಸಿದ್ಧನಿಗೆ ಪದ್ಮಾವತಿ ಎಂಬ ಪತ್ನಿಯಿಂದ ನಾಲ್ಕು ಗಂಡು ಮಕ್ಕಳು ಒಬ್ಬ ಹೆಣ್ಣು ಮಗಳಿದ್ದಳೆಂಬ ಬಗೆಗೆ ಹೆಳವರಲ್ಲಿ ದಾಖಲೆಗಳಿವೆ ಎಂಬುದು ತಿಳಿದು ಬಂದಿದೆ. ಈ ಸಂತತಿಯಿಂದ ಇವರ ನೂರಾರು, ಸಾವಿರಾರು ಸಂತತಿಗಳು ಬೆಳೆದವೆಂದು ಹೇಳಲಾಗುತ್ತಿದೆ. ಅಮೋಘಸಿದ್ಧನ ಗುಡಿ, ಗದ್ದುಗೆಯ ಮಠಗಳು ಬಿಜಾಪುರ, ಬಾಗಲಕೋಟೆ, ಬೆಳಗಾವಿ, ಗುಲಬರ್ಗಾ, ಮಹಾರಾಷ್ಟ್ರದ ಸೋಲಾಪುರ, ಸಾಂಗ್ಲಿ, ಕೊಲ್ಹಾಪುರ ಮುಂತಾದ ಜಿಲ್ಲೆಗಳಲ್ಲಿ ಸುಮಾರಾಗಿ ೨೦೦ಕ್ಕಿಂತ ಹೆಚ್ಚು ಸ್ಥಳಗಳಲ್ಲಿರುವುದು ಕಂಡುಬರುತ್ತದೆ.

ಅಮೋಘಸಿದ್ಧನ ಮೂಲ ಮತ್ತು ವಂಶಾವಳಿ ಬಗ್ಗೆ ಏನೇ ಇರಲಿ ಇವನು ಅಲೆಮಾರಿ ಕುರುಬರ ಮನೆದೇವರಾಗಿರುವುದರ ಜೊತೆಗೆ ಆರಾಧ್ಯ ದೇವರಾಗಿದ್ದಾನೆ. ಇವನು ಅಲೆಮಾರಿ ಕುರುಬ ಗುರುಗಳಾದ ಒಡೆಯರ ಮೂಲ ಪುರುಷ. ಈತನು ಶಿವಭಕ್ತನಾಗಿದ್ದು ಅಮೋಘವಾದ ದೈವಶಕ್ತಿ ಪ್ರಕಟ ಮಾಡಿದುದ್ದಕ್ಕೆ ಅಮೋಘ ಎಂಬ ಹೆಸರು ಬಂದಿರಬೇಕೆಂದು ಹೇಳಲಾಗುತ್ತದೆ. ಈ ದೇವರ ಪೂಜಾರಿಗಳು ಒಡೆಯರಾಗಿದ್ದು ಧಾರ್ಮಿಕ ವಿಧಿ-ವಿಧಾನಗಳನ್ನು ನಡೆಸಿಕೊಂಡು ಹೋಗುತ್ತಾರೆ. ದೇವರ ಪೂಜೆಗೈಯುವಾಗ ತಲೆಯ ಮೇಲೆ ಮೂರು ಏಡಿನ (ಅಂಚಿನ) ಕರಿಯ ಕಂಬಳಿ ಹಾಕಿಕೊಂಡು ಹಣೆಯ ಮೇಲೆ ಭಂಡಾರ ಹಚ್ಚಿಕೊಳ್ಳಬೇಕೆಂಬುದು ಸಂಪ್ರದಾಯವಿದೆ. ದಿನಕ್ಕೆರಡು ಸಲ ಪೂಜೆ ಮಾಡಲಾಗುತ್ತದೆ. ಆದಿತ್ಯವಾರ, ಹುಣ್ಣಿಮೆ ಹಾಗೂ ಅಮಾವಾಸ್ಯೆಯ ದಿನದಂದು ವಿಶೇಷ ಪೂಜೆಗಳು ಜರುಗುತ್ತವೆ. ಈ ದಿನಗಳಂದು ಹರಕೆ ಹೊತ್ತ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಾರೆ. ಈ ದೇವರಿಗೆ ಮಾಂಸಾಹಾರ ನೈವೇದ್ಯ ನಿಷಿದ್ಧವಾಗಿದೆ ಹಾಗೂ ಯಾವುದೇ ಕಾರಣಕ್ಕೂ ಪ್ರಾಣಿಬಲಿ ಕೊಡುವಂತಿಲ್ಲ. ಪೂಜಾರಿಗಳು ಭಕ್ತರಿಂದ ಕಾಣಿಕೆ ಪಡೆಯಲು ಹೊರಡುವಾಗ ಕೈಯಲ್ಲಿ ನಾಗಬೆತ್ತ, ಭಂಡಾರ ಚೀಲ, ಮೂರುಏಡಿನ ಕಂಬಳಿ ಹೆಗಲ ಮೇಲೆ ಹಾಕಿಕೊಂಡು ಅಲೆಮಾರಿ ಕುರುಬರು ಅಲೆದಾಡುವ ಪ್ರದೇಶಕ್ಕೆ ಹೋಗಿ ಕಾಣಿಕೆ ಪಡೆದುಕೊಂಡು ಬರುತ್ತಾರೆ. ಭಕ್ತರು ಮೂರು ವರ್ಷಕ್ಕೊಮ್ಮೆ ಇಂತಿಷ್ಟು ಹಣ ಅಥವಾ ಕುರಿಮರಿಯನ್ನು ಕೊಡಬೇಕೆಂಬ ಕರಾರು ಇದೆ. ಆದ್ದರಿಂದ ಪೂಜಾರಿಗಳು ಅವರಿದ್ದ ಸ್ಥಳಕ್ಕೆ ತೆರಳಿ ಸಂಗ್ರಹಿಸಿಕೊಂಡು ಬಂದು ಪೂಜೆಗೈಯುವ ಸರದಿಯ ಆಧಾರದಂತೆ ತಮ್ಮ ತಮ್ಮಲ್ಲೆ ಹಂಚಿಕೊಳ್ಳುತ್ತಾರೆ.

ಆಧಾರ ಗ್ರಂಥಗಳು

೧. ಮನೋಹರ ಕುಮಾರ ಸಿ.ಬಿ., ***ಸಮಾಜಶಾಸ್ತ್ರದ ಮೂಲ ತಂತ್ರಗಳು***, ಶ್ರವಣ್ ಪ್ರಕಾಶನ, ಶಿವಮೊಗ್ಗ, ೨೦೦೪

೨. ರಾಮಚಂದ್ರ ಜೋಷಿ., ***ಸಮಾಜಶಾಸ್ತ್ರದ ಮೂಲ ತತ್ವಗಳು***, ಶ್ರೀ ಸಿದ್ದಲಿಂಗೇಶ್ವರ ಪ್ರಕಾಶನ, ಗುಲ್ಬರ್ಗಾ, ೨೦೦೪

೩. ಗುರುಲಿಂಗಯ್ಯ ಎಂ., ***ಕರ್ನಾಟಕದ ಗೊಲ್ಲ ಸಮುದಾಯ***, ಶಕ್ತಿ ಪ್ರಿಂಟರ್ಸ್ ಮತ್ತು ಪಬ್ಲಿಷರ್ಸ್, ಬೆಂಗಳೂರು, ೨೦೦೫

೪. ಅಂಬಳಿಕೆ ಹಿರಿಯಣ್ಣ., ***ಕಟ್ಟೆ ಗೌಳಿಗರ ಸಂಸ್ಕೃತಿ***, ಉಪಸಂಸ್ಕೃತಿ ಮಾಲೆ, ಕರ್ನಾಟಕ ಸಾಹಿತ್ಯ ಆಕಾಡೆಮಿ, ಬೆಂಗಳೂರು, ೧೯೯೩

೫. ಒಡೆಯರ್ ಡಿ. ಹೆಗ್ಗಡೆ., ***ಹಾಲುಮತ ಕುರುಬ ಜನಾಂಗದ ಇತಿಹಾಸ***, ಅಖಿಲ ಏಜನ್ಸಿಸ್, ಮೈಸೂರು, ೨೦೦೫

೬. ಶಿವಾನಂದ ಗುಬ್ಬಣವರ., ***ಕರ್ನಾಟಕದ ಕುರುಬರು***, ಅಕ್ಷಯ ಪ್ರಕಾಶನ, ಧಾರವಾಡ, ೧೯೯೩

೭. ಸಿದ್ಧರಾಮಯ್ಯ ಎಸ್.ಜಿ., ***ಯಡಕುಂಟೆ ಗೆಣೆಸಾಲು***, ಅನ್ವೇಷಣ ಪ್ರಕಾಶನ, ಬೆಂಗಳೂರು, ೧೯೯೫

೮. ಚನ್ನಪ್ಪಕಟ್ಟಿ., ವಾಡೇದ ಆರ್.ಎಸ್., ***ಕುರುಬರ ಜನಪದ***, ಕನಕ ಜಯಂತ್ಯೋತ್ಸವ ಸಮಿತಿ, ಸಿಂದಗಿ, ಬಿಜಾಪುರ, ೧೯೯೭

೯. ನಾಯ್ಕರ್ ಬ.ಪ., ***ಹಾಲುಮತಸ್ಥರು***, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೩

೧೦. ವಿಷ್ಣು ಎಂ. ಶಿಂದೆ., ***ಮಹಾಶಕ್ತಿ ಚಿಂಚಲಿ ಮಾಯಕ್ಕದೇವಿ***, ಪ್ರಕಾಶಕರು ಮಾಯಕ್ಕದೇವಿ ಕಮಿಟಿ, ಚಿಂಚಲಿ, ೨೦೦೦

೧೧. ಶ್ರೀರಾಮ್ ಇಟ್ಟಣ್ಣವರ., (ಸಂ), ***ಹಾಲಕೆನೆ***, ಶ್ರೀಕಾಳಿದಾಸ ಶಿಕ್ಷಣ ಸಂಸ್ಥೆ, ಬಿಜಾಪುರ, ೨೦೦೨

ಅಧ್ಯಾಯ ೭

ಅಲೆಮಾರಿ ಕುರುಬರ ಸಮಸ್ಯೆಗಳು ಮತ್ತು ಪರಿಹಾರೋಪಾಯಗಳು

ಸಮಸ್ಯೆಗಳು ಮತ್ತು ಪರಿಹಾರೋಪಾಯಗಳು

೭.೧ ಸಮಸ್ಯೆಗಳು

ಇಂದು ಬಹುತೇಕ ಜನರು ಗ್ರಾಮ, ಪಟ್ಟಣ ಹಾಗೂ ನಗರಗಳಲ್ಲಿ ವಾಸಿಸುತ್ತಿದ್ದಾರೆ. ಇವರಲ್ಲಿಯೇ ಹಲವು ಜನರಿಗೆ ಮೂಲಭೂತ ಅವಶ್ಯಕತೆಗಳು ಮತ್ತು ಸಾಮಾಜಿಕ ಸೌಕರ್ಯಗಳು ದೊರೆಯದಿರುವುದು ಎಲ್ಲರಿಗೂ ತಿಳಿದಿರುವ ಸಂಗತಿ. ಸದಾ ಅಡವಿಯಲ್ಲಿಯೆ ಗಾಳಿ, ಮಳೆ, ಚಳಿ ಎನ್ನದೆ ಬೆಟ್ಟ-ಗುಡ್ಡ, ಹೊಲ-ಗದ್ದೆಗಳಲ್ಲಿ ಕುಟುಂಬ ಕಟ್ಟಿಕೊಂಡು ಕುರಿಗಳ ಜೊತೆಯಲ್ಲಿಯೇ ಅಲೆದಾಡುತ್ತಾ ಜೀವನ ಸಾಗಿಸುವ ಅಲೆಮಾರಿ ಕುರುಬರು ಇನ್ನೆಷ್ಟು ಸಮಸ್ಯೆಗಳನ್ನು ಎದುರಿಸುತ್ತಿರಬಹುದು ಎಂಬುದನ್ನು ಕುರಿತು ಯೋಚಿಸಿದಾಗ ಉತ್ತರ ಸುಲಭವಾಗಿ ದೊರೆಯುವುದಿಲ್ಲ. ಪ್ರಕೃತಿಯ ಮಡಿಲಲ್ಲಿಯೇ ಗುಡಾರ ಹೂಡಿ ಜೀವಿಸುವ ಇವರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.

i) ಹುಲ್ಲುಗಾವಲುಗಳ ಕೊರತೆ

ಕೃಷಿ ಉತ್ಪಾದನೆಯ ಅಭಿವೃದ್ಧಿ ಹೆಸರಿನಲ್ಲಿ ಇತ್ತೀಚಿನ ದಿನಗಳಲ್ಲಿ ಹುಲ್ಲುಗಾವಲುಗಳು ಬೇಸಾಯದ ಭೂಮಿಗಳಾಗಿ ಪರಿವರ್ತನೆಗೊಳ್ಳುತ್ತಲಿವೆ. ಹೀಗಾಗಿ ಕುರಿಗಳಿಗೆ ಆಹಾರ ಸಿಗುವುದೇ ಕಷ್ಟಕರವಾದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಅಲೆಮಾರಿತನಕ್ಕೆ ಪ್ರಮುಖ ಕಾರಣವೇ ಈ ಹುಲ್ಲುಗಾವಲುಗಳು. ಕುರಿಗಳು ಆಹಾರ ಸೇವಿಸಿ ಬದುಕುಳಿದರೆ ಮಾತ್ರ ಅಲೆಮಾರಿ ಕುರುಬರು ಬದುಕುಳಿಯುತ್ತಾರೆ. ಹೀಗೆ ಅವಿನಾಭಾವ ಸಂಬಂಧವಿರುವ ಹುಲ್ಲುಗಾವಲುಗಳೇ ನಾಶವಾದ ಮೇಲೆ ಕುರಿ ಸಂತತಿಯನ್ನು ಉಳಿಸಿಕೊಳ್ಳುವುದೇ ಕಷ್ಟವಾಗುತ್ತದೆ. ಅದರ ಪರಿಣಾಮವನ್ನು ಕುರಿತು ಬರಹಗಾರ ಅಗರ್‌ವಾಲ್ ಅವರು "An expansion of crop lands on grazing sites has made grazing areas less and still lesser. This turn has led to the overstocking of grazing lands, destroying thier productivity and impovershing the

grazier in the process" (Pragya Sharma:2005:292). ಮಂಕಡ್ ಅವರು ಅಲೆಮಾರಿ ಕುರುಬರ ಭವಿಷ್ಯದಲ್ಲಾಗುವ ಸಮಸ್ಯೆಯನ್ನು ಕುರಿತು ಈ ರೀತಿ ಹೇಳಿದ್ದಾರೆ. "The forests are being cut down so they are slowely giving up their original occupation and have thought it proper to settle down and take to agricutlture. They take to cultivate for others as servants and get a settled sum of money of their work"(Mankad B.L:1939:79).

ನೀರಾವರಿ ಯೋಜನೆಗಳೂ ಹುಲ್ಲುಗಾವಲನ್ನು ಕಡಿಮೆಗೊಳಿಸಿವೆ. ರೈತರು ಮೊದಲು ಒಂದೇ ಬೆಳೆಯನ್ನು ಬೆಳೆಯುತ್ತಿದ್ದರು. ಆ ಬೆಳೆಗಳು ನವೆಂಬರ್ ಅಥವಾ ಡಿಸೆಂಬರ್ ತಿಂಗಳೊಳಗೆ ಬಹಳಷ್ಟು ಜಮೀನುಗಳಲ್ಲಿ ಕಟಾವು ಆಗುತ್ತಿದ್ದರಿಂದ ನಂತರ ದಿನಗಳಲ್ಲಿ ಕುರಿಗಳನ್ನು ಮೇಯಿಸಲು ವಿಶಾಲವಾದ ಭೂ ಪ್ರದೇಶ ದೊರೆಯುತ್ತಿತ್ತು. ಆದರೆ ನೀರಾವರಿ ಯೋಜನೆಗಳು ಜಾರಿಗೆ ಬಂದ ನಂತರ ರೈತರು ವರ್ಷದಲ್ಲಿ ಒಂದು ಬೆಳೆಯ ಬದಲಾಗಿ ಎರಡು ಬೆಳೆಗಳನ್ನು ಬೆಳೆಯಲು ಆರಂಭಿಸಿದರು. ಪರಿಣಾಮವಾಗಿ ಹುಲ್ಲುಗಾವಲಿನ ಪ್ರದೇಶ ಕಡಿಮೆಯಾಯಿತು. ಬೆಳಗಾವಿ ಜಿಲ್ಲೆಯವರಾದ ಇವರು ತಮ್ಮ ಗ್ರಾಮಗಳನ್ನು ತ್ಯಜಿಸಿ ಕುರಿಗಳಿಗೆ ಮೇವು ಹುಡುಕಿಕೊಂಡು ಬರಲು ಇದು ಕೂಡ ಒಂದು ಪ್ರಮುಖ ಕಾರಣವಾಗಿದೆ. ಆದರೆ ವಲಸೆ ಬಂದ ಅಲೆಮಾರಿ ಕುರುಬರಿಗೆ ತುಂಗಭದ್ರ ನೀರಾವರಿ ಯೋಜನೆಯು ಬೇಸಿಗೆಯ ಕಾಲದಲ್ಲಿ ವರದಾನವಾಗಿ ಪರಿಣಮಿಸಿದೆ ಎಂಬುದನ್ನು ಮರೆಯುವಂತಿಲ್ಲ. ನೀರಾವರಿ ಸೌಲಭ್ಯದಿಂದ ಎರಡು ಬೆಳೆ ಬೆಳೆಯಲು ಆರಂಭಿಸಿದ ನಂತರ, ಕುರಿಗಳು ಬೆಳೆದು ನಿಂತ ಬೆಳೆಯನ್ನು ಹಾಳು ಮಾಡುತ್ತವೆಂಬ ನೆಪವೊಡ್ಡಿ ರೈತರು ಅಲೆಮಾರಿ ಕುರುಬರ ಮೇಲೆ ದೌರ್ಜನ್ಯ ಮಾಡುವುದು, ಬೈಯುವುದು, ಹೊಡೆಯುವುದು ಇತ್ಯಾದಿ ಮಾಡುತ್ತಾರೆ. ಇದು ಕೆಲವೊಮ್ಮೆ ಜಗಳಕ್ಕೆ ತಿರುಗಿ ಬಹಳಷ್ಟು ಅನಾಹುತಕ್ಕೆ ಕಾರಣವಾಗುತ್ತದೆ.

"The pasture lands are generally getting smaller and narrower, the rainfull in the following province is gradually becoming less. In these circumstances shephards find it extermely difficult to rear a number of Sheeps and Goats"(Mankad B.L:1939:31). ಸ್ವಾತಂತ್ರ ನಂತರ ಭಾರತ ಸರ್ಕಾರ ಹಲವಾರು ಯೋಜನೆ ಮತ್ತು ಘೋಷಣೆಗಳ ಮೂಲಕ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುತ್ತಾ ಸಾಗಿದೆ. ಅಂಥವುಗಳಲ್ಲಿ ಒಂದಾದ 'Grow more food' rather than 'Grow more wool'(Pragya Sharma:2005:293) ಎಂಬ ಘೋಷಣೆಯು ಅಲೆಮಾರಿ ಕುರುಬರಿಗೆ ಮಾರಕವಾಗಿ ಪರಿಣಮಿಸಿದೆ. ಇದು ರೈತರಿಗೆ ಕಾನೂನು ಬಾಹಿರವಾಗಿ ಹುಲ್ಲುಗಾವಲು ಒತ್ತುವರಿ ಮಾಡಿಕೊಳ್ಳಲು ದಾರಿ ಮಾಡಿಕೊಟ್ಟಿತು. ಪರಿಣಾಮವಾಗಿ ಕುರಿ ಮೇಯಿಸಲು ಹುಲ್ಲುಗಾವಲಿನ ಕೊರತೆ ಉಂಟಾಯಿತು. ಹುಲ್ಲುಗಾವಲಿನ ಕೊರತೆಗೆ ಇತರೆ ಕಾರಣಗಳನ್ನು ಕಾಣಬಹುದಾಗಿದೆ. "Along with agricul-

ture, other developments include increased availabity of tractors shortening of the following period, mining activities, creation of nature reserves"(Jodh:1985:294). ಹೀಗೆ ಹಲವಾರು ಕಾರಣಗಳಿಂದ ಮೇವಿನ ಕೊರತೆ ಉಂಟಾಗಿದೆ. ಇದು ಅಲೆಮಾರಿ ಕುರುಬನ ಮೂಲ ವೃತ್ತಿಯ ಮೇಲೆ ದುಷ್ಪರಿಣಾಮ ಬೀರಿದೆ.

ಗಣಿಗಾರಿಕೆ : ಗಣಿಗಾರಿಕೆಯು ಬಂಡವಾಳದಾರರಿಗೆ ವರವಾದರೆ ಅಲೆಮಾರಿ ಕುರುಬರಿಗೆ ಶಾಪವಾಗಿ ಪರಿಣಮಿಸಿದೆ. ವಿಶೇಷವಾಗಿ ಬಳ್ಳಾರಿ ಜಿಲ್ಲೆಯಲ್ಲಿ ಅಲೆದಾಡುವ ಅಲೆಮಾರಿ ಕುರುಬರಿಗೆ ಮಳೆಗಾಲದಲ್ಲಿ ಅಂದರೆ ಆಗಸ್ಟ್‌ನಿಂದ ನವ್ಹಂಬರ್ ತಿಂಗಳವರೆಗೆ ಕುರಿ-ಕುರುಬನ ಆಶ್ರಯ ತಾಣವಾಗಿದ್ದ ಗುಡ್ಡಗಾಡು ಗಣಿ ಪ್ರದೇಶ ಇಂದು ಗಣಿಗಾರಿಕೆಯಿಂದ ಸಾವಿರಾರು ಎಕರೆ ಹುಲ್ಲುಗಾವಲು ಇಲ್ಲದಂತಾಗಿವೆ. ಗಣಿಗಾರಿಕೆಯು ಅಲೆಮಾರಿ ಕುರುಬನ ಮೇಲೆ ಎರಡು ರೀತಿಯ ದುಷ್ಪರಿಣಾಮ ಬೀರಿದೆ. ಒಂದು ಕುರಿಗಳಿಗೆ ಮೇಯಿಸುವ ಭೂಪ್ರದೇಶ ಕಡಿಮೆಯಾಗಿರುವುದು. ಎರಡು ಗಣಿಗಾರಿಕೆಯಿಂದ ಹರಿದು ಬಂದ ನೀರನ್ನು ಕುಡಿದ ಕುರಿಗಳು ಹಲವಾರು ರೋಗಗಳಿಗೆ ತುತ್ತಾಗುತ್ತಿರುವುದು. ಇನ್ನೂ ಅಲ್ಪ-ಸ್ವಲ್ಪ ಹುಲ್ಲುಗಾವಲು ಪ್ರದೇಶವಿದ್ದರೂ ಗಣಿ ಮಾಲಿಕರು ತಂತಿ ಬೇಲಿಯನ್ನು ಹಾಕಿ ಕುರಿ ಮೇಯಿಸದಂತೆ ನಿರ್ಬಂಧಿಸಿದ್ದಾರೆ. ಸುಮಾರು ಹತ್ತು-ಹನ್ನೆರಡು ವರ್ಷಗಳ ಹಿಂದೆ ಈ ಪ್ರದೇಶದಲ್ಲಿ ಕುರಿಗಳಿಗೆ ಉತ್ಕೃಷ್ಟವಾದ ಮೇವು, ಗಿಡ-ಗಂಟೆಗಳ ತಪ್ಪಲು ದೊರೆಯುತ್ತಿತ್ತು. ಆದರೆ ಇಂದು ಗಣಿಗಾರಿಕೆಯು ಅಲೆಮಾರಿ ಕುರುಬನನ್ನು ಆತಂಕದ ಸ್ಥಿತಿಯಲ್ಲಿಡುವುದರ ಜೊತೆಗೆ ಪ್ರಾಣಿ ಸಂತತಿಗಳ ಭವಿಷ್ಯ ಕುರಿತು ಯೋಚಿಸುವಂತೆ ಮಾಡಿದೆ.

ii) ನೈಸರ್ಗಿಕ ವಿಕೋಪಗಳು

ಇವರು ಪ್ರಕೃತಿಯ ಮಡಿಲಲ್ಲಿ ಬದುಕುತ್ತಾರೆ. ಇವರ ಬದುಕುಗಳು ಹಲವಾರು ನೈಸರ್ಗಿಕ ವಿಕೋಪಗಳಿಗೆ ಬಲಿಯಾಗುತ್ತವೆ. ಪ್ರಕೃತಿಯ ವಿಕೋಪಗಳಾದ ಗುಡುಗು, ಸಿಡಿಲು, ಆಲಿಕಲ್ಲು ಮಳೆ, ಅತಿವೃಷ್ಟಿ, ಅನಾವೃಷ್ಟಿ, ನೆರೆಹಾವಳಿ ಇತ್ಯಾದಿ ಪ್ರತಿವರ್ಷವೂ ಸಾಮಾನ್ಯವಾಗಿರುತ್ತದೆ. ಸಿಡಿಲು ಮತ್ತು ಆಲಿಕಲ್ಲು ಮಳೆ ಬಡಿದು ಸಾವಿಗೀಡಾಗುವವರಲ್ಲಿ ಅಲೆಮಾರಿ ಕುರುಬರ ಸಂಖ್ಯೆಯೇ ಅಧಿಕವಾಗಿದೆ. ಸಾಕಷ್ಟು ಸಂಖ್ಯೆಯ ಕುರಿಗಳು ಸಿಡಿಲು ಮತ್ತು ಆಲಿಕಲ್ಲು ಮಳೆಗೆ ಬಲಿಯಾಗುತ್ತವೆ. ಅಷ್ಟೇ ಅಲ್ಲದೆ ದಿಡೀರ್ ಬಂದ ಪ್ರವಾಹದಲ್ಲಿ ಕೊಚ್ಚಿ ಹೋಗುವುದುಂಟು. ರಸ್ತೆ ಅಥವಾ ಒಳದಾರಿಗಳಲ್ಲಿ ಕುರಿಗಳನ್ನು ಸಾಗಿಸುವಾಗ ಯರ್‍ರಾಬಿರ್‍ರಿಯಾಗಿ ಓಡುವ ವಾಹನಗಳು ಡಿಕ್ಕಿ ಹೊಡೆದು ನೂರಾರು ಕುರಿಗಳು ಅಸು ನೀಗುತ್ತವೆ. ಉದಾಹರಣೆಗೆ ೧೮.೫.೨೦೦೭ ರಂದು ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ಪ್ರಕಟವಾದಂತೆ ಕೊಪ್ಪಳದ ಹತ್ತಿರ ಮೈಲಾರಪ್ಪ ಗಿಣಗೇರವರ ೫ ಕುರಿಗಳು ಮತ್ತು ೧೫ ಮರಿಗಳು ಆಲಿಕಲ್ಲು ಮಳೆ ಬಡಿದು ಸಾವಿಗೀಡಾಗಿವೆ. "೨೦.೫.೦೭ ರಂದು ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ಉಣ್ಣರಗಿ ಗ್ರಾಮದ ವಾಸಪ್ಪ ಬನ್ನೇ ಎಂಬುವವರು ಕಾರ್ಟಗಿ ಸಮೀಪ ಚೆನ್ನಳ್ಳಿಯಲ್ಲಿ

ಕುರಿ ತಬ್ಬಿದಾಗ ೪ ಜನರಿಗೆ ಸಿಡಿಲು ಬಡಿಯಿತು. ಅವರಲ್ಲಿ ಮೂರು ಜನರಿಗೆ ಗಾಯಗಳಾದರೆ ಒಬ್ಬರು ಸಾವಿಗೀಡಾಗಿದ್ದಾರೆ. ಇಂತಹ ಅನೇಕ ಸಂದರ್ಭಗಳಲ್ಲಿ ಕುರಿಗಳು ಮತ್ತು ಅಲೆಮಾರಿ ಕುರುಬರು ಮೃತಪಡುತ್ತಾರೆ.(ಮಾಹಿತಿದಾರರು: ಮಂಜುನಾಥ ದುರುಗಣ್ಣನವರ್:ಸೌಂದಲಗ)

iii) ಕುರಿಗಳ ಚಿಕಿತ್ಸೆ ಮತ್ತು ಆರೈಕೆ ಜ್ಞಾನದ ಕೊರತೆ

ಕುರಿಗಳಿಗೆ ಬಂದೊದಗಿದ ರೋಗ ಗುರುತಿಸುವುದು ಮತ್ತು ಆ ರೋಗಗಳಿಗೆ ಚಿಕಿತ್ಸೆ ನೀಡುವುದು ಅಲೆಮಾರಿ ಕುರುಬನ ಮತ್ತೊಂದು ಪ್ರಮುಖ ಸಮಸ್ಯೆ. ಪರಂಪರಾಗತವಾಗಿ ಹಿರಿಯರಿಂದ ಕಲಿತ ವಿದ್ಯೆಯ ಮೂಲಕ ಸಣ್ಣ ಪುಟ್ಟ ರೋಗಗಳಾದ ನೆಗಡಿ, ಗಾಯ, ಚರ್ಮರೋಗ, ಕೆಮ್ಮು, ಕಾಲು ಕಟ್ಟುವುದು ಇತ್ಯಾದಿ ರೋಗಗಳಿಗೆ ಗಿಡಮೂಲಿಕೆಗಳ ಸಹಾಯದಿಂದ ಪರಿಣಾಮಕಾರಿಯಾಗಿ ಚಿಕಿತ್ಸೆ ನೀಡುತ್ತಾರೆ. ವೈರಸ್, ಬ್ಯಾಕ್ಟೀರಿಯಾ, ಬೂಸ್ಟ್, ಪ್ರೋಟೋಜೋವ್ (ಏಕಾಣು ಜೀವಿಗಳು) ಕೀಟಗಳಿಂದ ಬರುವ ಸಾಂಕ್ರಮಿಕ ರೋಗಗಳನ್ನು ಗುರುತಿಸಿ ಚಿಕಿತ್ಸೆ ನೀಡಿ ಕುರಿಗಳನ್ನು ರಕ್ಷಿಸಿಕೊಳ್ಳುವಷ್ಟು ಜಾಣರಲ್ಲ. ಇವರು ಅಲೆಮಾರಿಗಳಾಗಿರುವುದರ ಜೊತೆಗೆ ಅವಿದ್ಯಾವಂತರಾಗಿರುವುದರಿಂದ, ಕುರಿಗಳಿಗೆ ಯಾವ ರೋಗ ಬಂದಿದೆ, ಯಾವ ಔಷಧ ಕೊಡಬೇಕು? ಔಷಧದ ಹೆಸರೇನು? ಎಷ್ಟು ಪ್ರಮಾಣದಲ್ಲಿ ನೀಡಬೇಕೆಂಬುದು ತಿಳುವಳಿಕೆಯಿಲ್ಲದಿರುವುದು. ಅವರಿಗೆ ರೋಗ ಕಾಣಿಸಿಕೊಂಡ ನಂತರ ಪಶುಚಿಕಿತ್ಸಾ ಲಯಕ್ಕೆ ಹೋಗಿ ರೋಗ ತಿಳಿಸಿ ಅವರು ಕೊಟ್ಟ ಔಷಧಿಯನ್ನು ತಂದು ಚಿಕಿತ್ಸೆ ನೀಡುತ್ತಾರೆ. ಸಾಂಕ್ರಮಿಕ ರೋಗಗಳಿಗೆ ಚಿಕಿತ್ಸೆಯು ಸಾಮಾನ್ಯವಾಗಿ ಚುಚ್ಚುಮದ್ದುಗಳ ಮೂಲಕ ನೀಡಬೇಕು. ಚುಚ್ಚು ಮದ್ದುಗಳ ಮೂಲಕ ನೀಡುವ ಔಷಧ ಅದು ಪೆನ್ಸಿಲಿನ್ ಔಷಧವೇ ಅಥವಾ ವಿಷಕಾರಿ ಬಿಳಿ ಪೌಡರೆ (BHC ಪೌಡರ್) ಎಂದು ಗುರುತಿಸುವಷ್ಟು ಬುದ್ಧಿವಂತಿಕೆಯೂ ಅಲೆಮಾರಿ ಕುರುಬರಿಗೆ ಇಲ್ಲ. ಕೆಲವೊಮ್ಮೆ ಔಷಧಿ ಅಂಗಡಿಯವರು ವಿಷಕಾರಿ ಔಷಧ ಕೊಟ್ಟಾಗ ಕುರಿಗಳ ರೋಗ ನಿಯಂತ್ರಣವಾಗುವುದರ ಬದಲು ಸಾವಿಗೀಡಾಗುತ್ತವೆ. ಇವರ ಅಮಾಯಕತನವನ್ನು ಬಳಸಿಕೊಂಡು ಅಂಗಡಿಯವರು ಮತ್ತು ಪಶು ಚಿಕಿತ್ಸಾಲಯಗಳು ಔಷಧದ ಕೊರತೆ ಸೃಷ್ಟಿಸಿ ಹೆಚ್ಚು ಬೆಲೆಗೆ ಮಾರಾಟ ಮಾಡುತ್ತಾರೆ. ಇವರು ಅವಿದ್ಯಾವಂತರಾದ್ದರಿಂದ ಔಷಧದ ಹೆಸರು, ಕಂಪನಿ ಮತ್ತು ಬೆಲೆ ಗುರುತಿಸುವಷ್ಟು ಶಕ್ತರಾಗಿಲ್ಲ.

ಸರ್ಕಾರಿ ದಾಖಲೆಗಳ ಪ್ರಕಾರ ಪಶುವೈದ್ಯಕೀಯ ಆಸ್ಪತ್ರೆಗಳು ಕುರಿಗಳ ರೋಗ ನಿಯಂತ್ರಿಸಲು ಸಾಕಷ್ಟು ಪ್ರಯತ್ನ ಪಟ್ಟಿವೆ ಮತ್ತು ಔಷಧಗಳನ್ನು ವಿತರಿಸಿವೆಯೆಂದು ತಿಳಿದುಬರುತ್ತದೆ. ಉದಾಹರಣೆ ಕರ್ನಾಟಕ ಸರ್ಕಾರವು ೨೦೦೫-೦೬ನೇ ಸಾಲಿನಲ್ಲಿ ೧,೯೨,೦೮೭ ಕುರಿಗಳಿಗೆ ಹಾಗೂ ೧,೬೪,೪೪೯ ಮೇಕೆಗಳಿಗೆ ಚಿಕಿತ್ಸೆ ನೀಡಲಾಗಿದೆ ಎಂದು ದಾಖಲಾಗಿದೆ. ಆದರೆ ವಾಸ್ತವಿಕವಾಗಿ ಹೇಳುವುದಾದರೆ ಸರ್ಕಾರಿ ಪಶುವೈದ್ಯಕೀಯ ಆಸ್ಪತ್ರೆಗಳು ಕುರಿಗಾರರಿಂದ ಅದರಲ್ಲೂ ವಿಶೇಷವಾಗಿ ಅಲೆಮಾರಿ ಕುರುಬರಿಂದ ಬಹಳಷ್ಟು ದೂರ ಇವೆ. ಸರ್ಕಾರ ಅಂದಾಜಿಸಿದಂತೆ ಔಷಧ ವಿತರಣೆ ಮತ್ತು ಚಿಕಿತ್ಸೆ

ನಡೆಯುತ್ತಿಲ್ಲ. ಅಲೆಮಾರಿ ಕುರುಬರು ಕುರಿಗಳ ಔಷಧ ಪಡೆಯಲು ಸರ್ಕಾರಿ ಆಸ್ಪತ್ರೆಗಳಿಗೆ ತೆರಳಿ ಔಷಧ ಕೇಳಿದರೆ ನೀವು ನಮ್ಮ ಜಿಲ್ಲೆಯವರಲ್ಲ, ಬೆಳಗಾವಿ ಜಿಲ್ಲೆಗೆ ಹೋಗಿ ಔಷಧಿ ಪಡೆಯಿರಿ ಎಂದು ಪಶುವೈದ್ಯರಿಂದ ಉತ್ತರ ಬರುತ್ತದೆ. ಒಂದು ವೇಳೆ ಹಣ ಕೊಟ್ಟರೆ ಔಷಧ ವಿತರಣೆ ಮಾಡುತ್ತಾರೆ. ಪಶುವೈದ್ಯರು ಕುರಿಗಳಿದ್ದಲ್ಲಿಗೆ ಬಂದು ಚಿಕಿತ್ಸೆ ನೀಡಿದರೆ ಕುರಿಯೊಂದಕ್ಕೆ ಎರಡು ರೂಪಾಯಿ ಬೇಡುತ್ತಾರೆ. ಚಿಕಿತ್ಸೆಗೆ ಹಣ ವ್ಯಯ ಮಾಡಲಾರದ ಸ್ಥಿತಿ ಇರುವುದರಿಂದ ಅಲೆಮಾರಿ ಕುರುಬರೇ ಚಿಕಿತ್ಸೆ ಮಾಡುತ್ತಾರೆ. ಕೆಲವೊಮ್ಮೆ ಅಂದಾಜಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಔಷಧ ಕೊಟ್ಟಾಗ ಕುರಿಗಳು ಪ್ರಾಣ ಕಳೆದುಕೊಳ್ಳುತ್ತವೆ.

ಅಲೆಮಾರಿ ಕುರುಬರಿಗೆ ಸ್ವಂತಿಕೆ ಅಥವಾ ಸ್ವತಂತ್ರ ನಿರ್ಧಾರ ಕಡಿಮೆ ಎಂದು ಹೇಳಬಹುದು. ಪಕ್ಕದ ಕುರಿಗಾರರು ಕುರಿಗಳಿಗೆ ಇಂಜಕ್ಷನ್ ಮಾಡುತ್ತಾರೆಂದರೆ ತಾವು ಕೂಡ ಮಾಡಬೇಕೆನ್ನುವ ಮನೋಭಾವದವರು. ತಮ್ಮ ಕುರಿಗಳಿಗೆ ರೋಗ ಇದೆ ಅಥವಾ ಇಲ್ಲ ಎಂದು ಗುರುತಿಸಲಾರದವರು. ಕೆಲವೊಮ್ಮೆ ದೇವರ ಮೇಲೆ ಭಾರ ಹಾಕಿ ಕೈಕಟ್ಟಿ ಕುಳಿತುಕೊಳ್ಳುತ್ತಾರೆ. ಈ ಎರಡು ರೀತಿಯ ವರ್ತನೆಯಿಂದ ಅಲೆಮಾರಿ ಕುರುಬರು ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತಾರೆ.

iv) ಮಾರುಕಟ್ಟೆಯ ಸಮಸ್ಯೆಗಳು

ಯಾವುದೆ ಉತ್ಪಾದನಕಾರನ ಉತ್ಪನ್ನವು ಉತ್ತಮ ಬೆಲೆ ಪಡೆಯಬೇಕಾದರೆ ಅದು ಮಾರುಕಟ್ಟೆ ಪ್ರವೇಶಿಸಿ ಮಾರಾಟವಾಗುವಂತಿರಬೇಕು. ಹಾಗಿದ್ದಾಗ ಮಾತ್ರ ಒಳ್ಳೆಯ ಬೆಲೆ ಬಂದು ಲಾಭಗಳಿಸಲು ಸಾಧ್ಯವಾಗುತ್ತದೆ. ಅಲೆಮಾರಿ ಕುರುಬನ ಬದುಕುಗಳು ಮಾರುಕಟ್ಟೆ ಪ್ರವೇಶಿಸದೆ ತಾನು ಅಲೆದಾಡುವ ಪ್ರದೇಶದಲ್ಲಿಯೇ ಮಾರಾಟ ಮಾಡುವುದರಿಂದ ಉತ್ತಮ ಬೆಲೆ ಪಡೆಯಲು ಸಾಧ್ಯವಾಗುತ್ತಿಲ್ಲ, ಅವನ್ನು ಮಾರುಕಟ್ಟೆಗೆ ಸಾಗಿಸುವುದು ಬಹಳ ಕಷ್ಟ. ಒಂದು ವೇಳೆ ಪ್ರಯತ್ನ ಪಟ್ಟು ಸಾಗಿಸಿದ ನಂತರ ಮಾರಾಟವಾಗದಿದ್ದ ಪಕ್ಷದಲ್ಲಿ ಮರಳಿ ಹಿಂದಕ್ಕೆ ಸಾಗಿಸುವುದು ಇನ್ನೂ ಕಷ್ಟಕರ. ಆದ್ದರಿಂದ ಅಲೆಮಾರಿ ಕುರುಬರು ತಾವು ಅಲೆದಾಡುವ ಪ್ರದೇಶದಲ್ಲಿಯೇ ಕುರಿ ವ್ಯಾಪಾರಸ್ಥರು(ಕಟುಕರು) ಕೇಳಿದ ಬೆಲೆಗೆ ಮಾರಾಟ ಮಾಡುತ್ತಾರೆ. ಮಾರಾಟ ಮಾಡುವಾಗ ಅವನ್ನು ತೂಕದ ಆಧಾರದಲ್ಲಿ ಮಾರುವುದಿಲ್ಲ. ಬದಲಾಗಿ ಗುಂಪಾಗಿ ಒಂದಕ್ಕೆ ಇಂತಿಷ್ಟು ಬೆಲೆಗೆ ಮಾರುತ್ತಾರೆ. ಕುರಿಗಾರರಿಗೆ ಮಾರುಕಟ್ಟೆಯಲ್ಲಾಗುವ ಶೋಷಣೆ ಕುರಿತಂತೆ ಲಕ್ಷ್ಮಣರಾವ್ ಚಿಂಗಳೆ ಈ ರೀತಿಯ ಅಭಿಪ್ರಾಯಪಡುತ್ತಾರೆ. "ವ್ಯಾಪಾರಸ್ಥರು ಕುರಿ-ಮರಿಗಳನ್ನು ಕೊಳ್ಳುವಾಗ ಮರಿಗಳಿಗೆ, ವಯಸ್ಕ ಕುರಿಗಳಿಗೆ ಮತ್ತು ವಯಸ್ಸಾದ ಕುರಿಗಳಿಗೆ ವಿವಿಧ ಬೆಲೆ ನಿಗದಿ ಮಾಡಿಕೊಂಡು ಕೊಳ್ಳುತ್ತಾರೆ. ಆದರೆ ತಾವು ಗ್ರಾಹಕರಿಗೆ ಮಾಂಸ ಮಾರಾಟ ಮಾಡುವಾಗ ಎಲ್ಲ ಕುರಿಗಳ ಮಾಂಸಕ್ಕೆ ಒಂದೇ ಬೆಲೆ ನಿಗದಿ ಮಾಡಿ ಮಾರಾಟ ಮಾಡುತ್ತಾರೆ. ಇಲ್ಲಿ ಗ್ರಾಹಕ ಮತ್ತು ಉತ್ಪಾದಕ ಇಬ್ಬರೂ ಮಧ್ಯಸ್ಥಗಾರರಿಂದ ಶೋಷಣೆಗೆ ಒಳಗಾಗುತ್ತಾರೆ. ಇದಕ್ಕೆ

ಉದಾಹರಣೆ ಎಂಬಂತೆ 'ಚಿಕನ್ ಗುನ್ಯಾ' (Bird flu) ರೋಗ ಕೋಳಿಗಳಿಗೆ ಹರಡಿದೆ ಎಂಬ ವದಂತಿಯಿಂದ ೧ ಕೆ.ಜಿ. ಕುರಿಗಳ ಮಾಂಸ ೧೩೦ ರಿಂದ ೧೮೦ ರೂ.ಗಳಿಗೆ ದಿಢೀರನೆ ಏರಿಕೆಯಾಗಿತ್ತು. ಆದರೆ ಕುರಿ-ಮರಿಗಳ ಬೆಲೆಯಲ್ಲಿ ಮಾತ್ರ ಏರಿಕೆ ಕಾಣಲಿಲ್ಲ". ಇದರಿಂದ ಕುರಿ ಮಾರುಕಟ್ಟೆಯು ಎಷ್ಟರ ಮಟ್ಟಿಗೆ ಮಧ್ಯವರ್ತಿಗಳ ಬಿಗಿ ಹಿಡಿತದಲ್ಲಿದೆ ಎಂಬುದು ತಿಳಿದುಬರುತ್ತದೆ. ೨೦೦೩ರ ಜಾನುವಾರು ಗಣತಿಯ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ೭೨.೬೫ ಲಕ್ಷ ಕುರಿಗಳು ಮತ್ತು ೪೪.೮೪ ಲಕ್ಷ ಮೇಕೆಗಳಿವೆ. ಇಷ್ಟೊಂದು ಕುರಿ-ಮೇಕೆಗಳಿದ್ದರೂ ಕ್ರಮಬದ್ಧ ಮಾರುಕಟ್ಟೆ ಇಲ್ಲದಿರುವುದನ್ನು ನೋಡಿದರೆ ಕುರಿ ಮಾರುಕಟ್ಟೆ ಎಷ್ಟರ ಮಟ್ಟಿಗೆ ಹಿಂದುಳಿದಿದೆ ಎಂಬುದು ಅರ್ಥವಾಗುತ್ತದೆ.

v) ಕುರಿಗಳ ಭದ್ರತೆಯ ಕೊರತೆ

ಬಯಲು ಅಥವಾ ಗುಡ್ಡಗಾಡು ಪ್ರದೇಶದಲ್ಲಿ ಕುರಿ ತಬ್ಬುವುದರಿಂದ ಕಾಡು ಪ್ರಾಣಿಗಳ ಹಾವಳಿ ಹೆಚ್ಚಾಗಿದೆ. ಚಿರತೆ, ತೋಳ, ನರಿ ಕತ್ತೆಕಿರುಬು ಮೊದಲಾದ ಕಾಡುಪ್ರಾಣಿಗಳು ಕುರಿಗಳನ್ನು ತಿನ್ನಲು ಬಂದು ಬಹಳ ತೊಂದರೆ ಕೊಡುತ್ತವೆ. ಕುರಿಗಳನ್ನು ರಕ್ಷಿಸಿಕೊಳ್ಳಲು ಇಡೀ ರಾತ್ರಿ ಬ್ಯಾಟರಿ ಹಿಡಿದು ನಾಯಿಗಳ ಸಹಾಯದಿಂದ ಕುರಿಗಳ ಸುತ್ತ ತಿರುಗುತ್ತಾ ಕಾಡುಪ್ರಾಣಿಗಳನ್ನು ಕಾಯಬೇಕು. ಕುರಿಗಾರ ಎಷ್ಟೇ ಎಚ್ಚರದಿಂದ ಇದ್ದರೂ ಕೆಲವೊಮ್ಮೆ ಅಪಾಯ ತಪ್ಪಿದ್ದಲ್ಲ.

ಇವರು ಕಳ್ಳರ ಕಾಟದಿಂದ ಮುಕ್ತರಾಗಿಲ್ಲ. ಕೆಲವರು ಹಗಲು ಕಳ್ಳತನ ಮಾಡಿದರೆ ಇನ್ನು ಕೆಲವರು ರಾತ್ರಿ ಕಳ್ಳತನ ಮಾಡುತ್ತಾರೆ. ಗುಡ್ಡಗಾಡು ಪ್ರದೇಶದಲ್ಲಿ ಕುರಿ ಮೇಯಿಸುವಾಗ ಹಗಲುಗಳ್ಳರು ಹಿಂದೆ ಬಿದ್ದ ಅಥವಾ ಹಿಂಡು ಬಿಟ್ಟು ದೂರ ಮೇಯುತ್ತಿರುವ ಕುರಿಗಳನ್ನು ಹಿಡಿದು, ಕಾಲುಕಟ್ಟಿ ನಂತರ ಅರಚದಂತೆ ನಾಲಿಗೆಗೆ ಪಿನ್ನು ಅಥವಾ ಮುಳ್ಳು ಹಾಕುತ್ತಾರೆ. ಕುರಿಗಳು ಗುಡಾರಕ್ಕೆ ಮರಳಿದ ನಂತರ ರಾತ್ರಿ ಸಾಗಿಸಿ ಮಾರಾಟ ಮಾಡುತ್ತಾರೆ. ರಾತ್ರಿ ಕಳ್ಳತನ ಮಾಡುವವರು ಕುರಿಗಾರರು ಸಂಪೂರ್ಣ ನಿದ್ರೆ ಹೋಗಿದ್ದನ್ನು ಗಮನಿಸಿ, ಕುರಿಗಳನ್ನು ಹೊತ್ತುಕೊಂಡು ಹೋಗುತ್ತಾರೆ. ಇತ್ತೀಚಿನ ದಿನಗಳಲ್ಲಿ ಕುರಿ ಕಳವು ಹೆಗಲ ಮೇಲೆ ಹೊತ್ತು ಸಾಗಿಸುವುದರ ಬದಲು ಟೆಂಪೋ ಅಥವಾ ಲಾರಿಗಳಲ್ಲಿ ಹೇರಿಕೊಂಡು ಹೋಗುತ್ತಿದ್ದಾರೆ. ಉದಾಹರಣೆಗೆ ಅಕ್ಷಯ ತದಗಿ ಅಮವಾಸ್ಯೆಯ ದಿನ ಅಂದರೆ ೧೭.೪.೨೦೦೭ರಂದು ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ಸೌಂದಲಗ ಗ್ರಾಮದ ಮಂಜುನಾಥ ದುರುಗಣ್ಣನವರ್, ಕಟಕಲಾಟ ಗ್ರಾಮದ ಖಾಸಪ್ಪ ಪೂಜಾರಿ ಮತ್ತು ನಾಯಿಂಗಳಾಜ್ ಗ್ರಾಮದ ದೇವರಸಿ ಖಾಸಪ್ಪನವರಿಗೆ ಸಂಬಂಧಿಸಿದ ೪೫ ಕುರಿಗಳನ್ನು ಬಳ್ಳಾರಿ-ಸಿರುಗುಪ್ಪ ಮುಖ್ಯ ರಸ್ತೆಯಲ್ಲಿರುವ ಶ್ರೀನಿವಾಸ ಕ್ಯಾಂಪ್ ಹತ್ತಿರ ಕುರಿಗಳನ್ನು ತಬ್ಬಿದಾಗ, ಕುರಿ ಕಳ್ಳತನವಾಗಿವೆ. ಇದು ಒಂದು ಉದಾಹರಣೆ. ಇಂತಹ ಕಳ್ಳತನಗಳು ವರ್ಷದಲ್ಲಿ ಎಷ್ಟು ಆಗುತ್ತವೆ ಎಂಬುದನ್ನು ಸ್ಪಷ್ಟವಾಗಿ ಹೇಳಲು ಸಾಧ್ಯವಿಲ್ಲ. ಪೋಲಿಸ ಇಲಾಖೆಗೆ ದೂರು ನೀಡಿದರೂ ಪ್ರಯೋಜನವಾಗುತ್ತಿಲ್ಲ. ಇತ್ತೀಚಿನ ದಿನಗಳಲ್ಲಿ ಈ ರೀತಿ ಕಳ್ಳತನ ಹೆಚ್ಚಾಗುತ್ತಿರುವುದರಿಂದ ಕೆಲವರು ವೃತ್ತಿಯಿಂದ ದೂರ ಸರಿಯುತ್ತಿದ್ದಾರೆ.

vi) ಮೂಲಭೂತ ಸೌಕರ್ಯ ವಂಚಿತರು

ಮಾನವನ ಬದುಕು ಸುಲಲಿತವಾಗಿ ನಡೆದುಕೊಂಡು ಹೋಗಲು ಮೂಲಭೂತ ಸೌಕರ್ಯಗಳು ಬೇಕು. ಅವುಗಳಲ್ಲಿ ಸಾರಿಗೆ-ಸಂಪರ್ಕ, ಕುಡಿಯುವ ನೀರು, ಶಿಕ್ಷಣ, ಆರೋಗ್ಯ, ವಸತಿ ಇತ್ಯಾದಿ ಮುಖ್ಯವಾದವು. ಆದರೆ ಅಲೆಮಾರಿ ಕುರುಬರು ಇವೆಲ್ಲವುಗಳಿಂದ ವಂಚಿತರಾಗಿದ್ದಾರೆ. ಇಂದು ಇಡೀ ಪ್ರಪಂಚವನ್ನು ತಿರುಗಲು ಸುಲಭ ಮಾರ್ಗಗಳಿವೆ. ಆದರೆ ಇವರು ಅಲೆದಾಡುವ ದಾರಿ ಮಾತ್ರ ದುರ್ಗಮವಾದದು. ಅದು ಬೆಟ್ಟ-ಗುಡ್ಡ, ಕಲ್ಲು-ಮುಳ್ಳು, ತೆಗ್ಗು-ದಿನ್ನೆ, ನೀರು-ಕೆಸರುಗಳಿಂದ ಕೂಡಿರುತ್ತದೆ. ಇಂತಹ ದಾರಿಯಲ್ಲಿಯೇ ತಮ್ಮ ಕೌಟುಂಬಿಕ ಸಾಮಾನುಗಳನ್ನು ಕುದುರೆಯ ಮೇಲೆ ಹೇರಿಕೊಂಡು, ಇನ್ನು ಕೆಲವನ್ನು ತಲೆಯ ಮೇಲೆ ಹೊತ್ತುಕೊಂಡೇ ಸಾಗಿಸಬೇಕು. ಹೀಗೆ ಸಾಮಾನುಗಳನ್ನು ಸಾಗಿಸುವಾಗ ಅವರು ಅನುಭವಿಸುವ ಕಷ್ಟ ಹೇಳತೀರದು. ಅಂತಹ ಕಷ್ಟ ವೈರಿಗೂ ಬರಬಾರದೆನ್ನಿಸುತ್ತದೆ.

ಗ್ರಾಮ-ನಗರಗಳ ಸಂಪರ್ಕದಿಂದ ಬಹುದೂರ ಇರುವುದರಿಂದ ಸಂತೋಷ ಅಥವಾ ದುಃಖದ ವಿಷಯವನ್ನು ಮುಟ್ಟಿಸಬೇಕು ಅಥವಾ ಬೇಟಿಯಾಗಬೇಕೆಂದರೆ ಇವರು ಪಡಬಾರದ ಕಷ್ಟ ಪಡುತ್ತಾರೆ. ಯಾವ ದಿನ ಯಾವ ಸ್ಥಳದಲ್ಲಿ ಕುರಿ ತಬ್ಬುತ್ತಾರೆ ಮತ್ತು ಯಾವತ್ತು ಎಲ್ಲಿಗೆ ಬದಲಾಯಿಸುತ್ತಾರೆಂಬುದು ಯಾರಿಗೂ ಗೊತ್ತಾಗುವುದಿಲ್ಲ. ಅದು ಬದಲಾಯಿಸುವವರಿಗೆ ಮಾತ್ರ ತಿಳಿದಿರುತ್ತದೆ. ಕೆಲವೊಂದು ಸಲ ಸ್ವಗ್ರಾಮದಿಂದ ಕಾಣಲು ಬಂದವರು ವಾರಗಟ್ಟಲೇ ಹುಡುಕಿ ಹಿಂತಿರುಗಿದ ಸಂದರ್ಭಗಳಿವೆ. ಆದರೆ ಇತ್ತೀಚಿಗೆ ಮೊಬೈಲ್ ಮತ್ತು ದೂರವಾಣಿ ಸೇವೆಯ ಇಂತಹ ಸಂದರ್ಭಗಳನ್ನು ಎದುರಿಸುವಲ್ಲಿ ಪ್ರಮುಖ ಸಾಧನವಾಗಿ ಹಾಗೂ ಅನುಕೂಲ ಸಿಂಧು ಮಾಧ್ಯಮವಾಗಿ ಅಲೆಮಾರಿ ಕುರುಬರಿಗೆ ಲಭಿಸಿದೆ.

ಕುಡಿಯುವ ನೀರು : ಇವರಿಗೆ ಶುದ್ಧ ಕುಡಿಯುವ ನೀರು ಕನಸಿನ ಮಾತು. ಮಳೆಯಿಂದ ಅಥವಾ ಬಸಿಯಿಂದ ಹರಿದು ಬಂದು ಕುಣಿ, ತಗ್ಗು, ಕೆರೆ, ಹಳ್ಳ ಇತ್ಯಾದಿ ಸ್ಥಳಗಳಲ್ಲಿ ನಿಂತ ನೀರನ್ನೇ ಕುಡಿಯಲು ಹಾಗೂ ದಿನ ಬಳಕೆ ಮಾಡಲು ಬಳಸುತ್ತಾರೆ. ಕೆಲವೊಮ್ಮೆ ನೀರಾವರಿ ಪ್ರದೇಶದಲ್ಲಿ ಸಿಂಪಡಿಸಿದ ಕ್ರಿಮಿನಾಶಕಗಳ ಮಿಶ್ರಣವು ಈ ನೀರಿನಲ್ಲಿ ಬೆರೆತು ಅಥವಾ ಸಾಂಕ್ರಾಮಿಕ ರೋಗಾಣುಗಳು ಸೇರಿ ಕುರಿಗಳ ಸಾವನ್ನಪ್ಪಿದ ಸಂದರ್ಭಗಳು ಹಾಗೂ ಕುರಿಗಾರರು ವಾಂತಿ ಭೇದಿಯಂತಹ ರೋಗಗಳಿಗೆ ತುತ್ತಾಗಿರುವ ಉದಹಾರಣೆಗಳೂ ಉಂಟು.

ಶಿಕ್ಷಣ : ಇವರಿಗೆ ಒಂದು ನಿರ್ದಿಷ್ಟ ನೆಲೆ ಇಲ್ಲದ ಕಾರಣ ಶಿಕ್ಷಣ ಸವಲತ್ತುಗಳನ್ನು ಒದಗಿಸುವುದು ಮತ್ತು ಪಡೆದುಕೊಳ್ಳುವುದು ಎರಡೂ ಕಷ್ಟದ ಸಂಗತಿಗಳೇ ಆಗಿವೆ. ಸರ್ಕಾರವು ರಾಷ್ಟ್ರೀಯ ಶಿಕ್ಷಣ ಮಿಶನ್, ಸರ್ವಶಿಕ್ಷಣ ಅಭಿಯಾನ ಇತ್ಯಾದಿ ಜಾರಿಗೊಳಿಸಿ ಕಾರ್ಯರೂಪಕ್ಕೆ ತಂದಿದ್ದರೂ ಇವರಿಗೆ ತಲಪದಿರುವುದು ವಿಪರ್ಯಾಸವಾಗಿದೆ.

ಆರೋಗ್ಯ : ಇವರು ಸದಾ ಅಡವಿಯಲ್ಲಿ ಅಲೆದಾಡುತ್ತಿರುವುದರಿಂದ ವಾತಾವರಣ ಮತ್ತು ನೀರಿನಲ್ಲಿ ಬದಲಾವಣೆಯಾಗುತ್ತವೆ. ಪರಿಣಾಮವಾಗಿ ಇವರ ಕುರಿಗಳಿಗೆ ಮತ್ತು ಇವರಿಗೆ ಹಲವಾರು ರೋಗಗಳು ಕಾಣಿಸಿಕೊಳ್ಳುತ್ತವೆ. ಕೆಲವೊಮ್ಮೆ ಗರ್ಭಿಣಿ ಸ್ತ್ರೀಗೆ ಕುರಿ ತಬ್ಬಿದ ಸ್ಥಳದಲ್ಲಿಯೇ ಹೆರಿಗೆ ನೋವು ಕಾಣಿಸಿಕೊಂಡು ಅಲ್ಲೆ ಹೆರಿಗೆಯಾದ ಪ್ರಸಂಗಗಳನ್ನು ಕಾಣುತ್ತೇವೆ. ಉದಾಹರಣೆ ೨೦೦೬ ಸೆಪ್ಟೆಂಬರ್ ತಿಂಗಳಲ್ಲಿ ಚಿಕ್ಕೋಡಿ ತಾಲೂಕಿನ ನಾಯಿಂಗಳಾಜ್ ಗ್ರಾಮದ ದೇವರಸಿ ಖಾನಪ್ಪನವರ ಸೊಸೆ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ ಬೈಲುವದ್ದಿಗೇರಿಯ ಗ್ರಾಮದ ಹತ್ತಿರವಿರುವ ಗುಡ್ಡದಲ್ಲಿ ಹೆರಿಗೆಯಾಯಿತು. ಅವರು ಒಂದೆರಡು ದಿನ ಬೈಲುವದ್ದಿಗೇರಿಯಲ್ಲಿದ್ದುಕೊಂಡು ನಂತರ ತಮ್ಮ ಸ್ವಗ್ರಾಮಕ್ಕೆ ತೆರಳಿದರು. ಇಂತಹ ಸ್ಥಳದಲ್ಲಿ ವೈದ್ಯರು ಮತ್ತು ಸೂಲಗಿತ್ತಿ ಇಲ್ಲದಿರುವ ಕಾರಣ ತಾಯಿ ಮತ್ತು ಮಗುವಿಗೆ ತೊಂದರೆಯಾಗುವ ಲಕ್ಷಣಗಳು ಹೆಚ್ಚಿರುತ್ತವೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವರ್ಷಕ್ಕೊಮ್ಮೆ ಅಥವಾ ಎರಡೂ ಬಾರಿ ಐದು ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಪಲ್ಸ್ ಪೋಲಿಯೋ ಲಸಿಕೆಯನ್ನು ಹಾಕಿಸುತ್ತವೆ. ಅಡವಿಯಲ್ಲಿರುವ ಅಲೆಮಾರಿ ಕುರುಬರ ಮಕ್ಕಳಿಗೆ ಪಲ್ಸ್ ಪೋಲಿಯೋ ಹಾಕುವವರ್‍ಯಾರು? ಏತಕ್ಕಾಗಿ ಹಾಕಿಸಬೇಕು? ಯಾರು ಹಾಕುತ್ತಾರೆ? ಎಂಬುದರ ಬಗ್ಗೆ ಇವರಿಗೆ ತಿಳಿದಿರುವುದಿಲ್ಲ.

vii) ಉತ್ತಮ ತಳಿಗಳ ಕೊರತೆ

ಅಲೆಮಾರಿ ಕುರುಬರು ಸ್ಥಳೀಯ ಕಪ್ಪು ಕುರಿಗಳನ್ನೇ (ಬಳ್ಳಾರಿ ಮತ್ತು ಡೆಕ್ಕನಿ) ಸಾಕಣೆ ಮಾಡುವುದರಿಂದ ಅವುಗಳ ಉತ್ಪನ್ನವು ರಾಜ್ಯದ ಹಾಗೂ ರಾಷ್ಟ್ರೀಯ ಇತರೆ ತಳಿಗಳಿಗಿಂತ ಕೆಳಮಟ್ಟದಲ್ಲಿವೆ. ಅನುವಂಶೀಯ ತಳಿಗಳನ್ನೇ ಮುಂದುವರಿಸಿಕೊಂಡು ಬಂದಿರುವುದು ಇದಕ್ಕೆ ಕಾರಣವಾಗಿದೆ. ಇವು ಮಾರುಕಟ್ಟೆಯಲ್ಲಿ ಕಡಿಮೆ ಬೆಲೆಗೆ ಮಾರಾಟವಾಗುವುದರಿಂದ ಆರ್ಥಿಕ ಪ್ರತಿಫಲ ಕಡಿಮೆಯಾಗುತ್ತದೆ. ಕುರಿ ಉತ್ಪನ್ನಗಳ ಪ್ರಮಾಣ ಮತ್ತು ಗುಣಮಟ್ಟ ಎರಡರಲ್ಲಿ ಉತ್ತಮತೆ ಕಂಡುಕೊಳ್ಳಲು ಸರ್ಕಾರ ರ್‍ಯಾಂಬ್ಯೋಲೇ, ಮೆರಿನೋ, ಸೌತ್‌ಡೌನ್ ಮುಂತಾದ ಉತ್ತಮ ತಳಿಯ ಕುರಿಗಳನ್ನು ಅಮದು ಮಾಡಿಕೊಂಡಿದೆ. ಇವನ್ನು ನಾಡು ತಳಿಯೊಂದಿಗೆ ಸಂವರ್ಧನೆ ಮಾಡಿ ಮಿಶ್ರತಳಿ ಟಗರುಗಳನ್ನು ಕುರಿಗಾರರಿಗೆ ವಿತರಿಸಲಾಗುತ್ತಿದೆ. ಈ ತಳಿಗಳು ಅಲೆಮಾರಿ ಕುರುಬರ ಉಪಯೋಗಕ್ಕೆ ಬರುತ್ತಿಲ್ಲ. ಇವರು ಅಲೆದಾಡುವ ವಾತಾವರಣಕ್ಕೆ ಹೊಂದಿಕೊಳ್ಳುತ್ತಿಲ್ಲ, ಬಹುದೂರ ಸಾಗಿ ಮೇವು ಮೇಯುವುದಿಲ್ಲ ಮತ್ತು ದಾರಿಯಲ್ಲಿ ಸಿಗುವ ಗಿಡ-ಬಳ್ಳಿ ಹುಲ್ಲು-ಮೇವನ್ನು ತಿನ್ನುವುದಿಲ್ಲ. ಇಂತಹ ತಳಿಗಳನ್ನು ಅಲೆಮಾರಿ ಕುರುಬರು ಸಾಕಲು ಸಾಧ್ಯವಾಗದು. ಇವರಿಗೆ ಬೇಕಾಗಿರುವುದು ಸಿಕ್ಕಿದ್ದನ್ನು ಮೇಯ್ದು ಕೆಟ್ಟ ಪರಿಸ್ಥಿತಿಯಲ್ಲಿಯೂ ಬದುಕುವ ತಳಿಗಳಾದುದರಿಂದ ಇವರು ತಳಿಯನ್ನು ಬದಲಾಯಿಸಲು ಮನಸ್ಸು ಮಾಡುತ್ತಿಲ್ಲ.

ಕಡಿಮೆ ಗುಣಮಟ್ಟದ ಉಣ್ಣೆ : ಇವರು ಉತ್ಪಾದಿಸುವ ಉಣ್ಣೆ ಒರಟು ಉತ್ಪನ್ನಗಳಿಗೆ ಮಾತ್ರ ಬಳಕೆಯಾಗುತ್ತಿದೆ. ಇದಕ್ಕೆ ಬೇಡಿಕೆ ಕಡಿಮೆ. ರಾಜ್ಯದಲ್ಲಿ ಉತ್ಪಾದನೆಯಾಗುತ್ತಿರುವ ಉಣ್ಣೆಯಲ್ಲಿ ಶೇ. ೨೦ ರಷ್ಟು ಮಾತ್ರ ಉಪಯೋಗವಾಗುತ್ತಿದೆ. ಉಳಿದ ಶೇ. ೮೦ ರಷ್ಟು ಭಾಗ ವ್ಯರ್ಥವಾಗುತ್ತದೆ. ಕರ್ನಾಟಕದಲ್ಲಿ ಉಣ್ಣೆಯನ್ನು ಉಣ್ಣೆಯ ವಸ್ತುಗಳಾಗಿ ಮಾರ್ಪಡಿಸುವ ಕಾರ್ಖಾನೆಗಳೇ ಇಲ್ಲದಿರುವುದೇ ಇದಕ್ಕೆ ಕಾರಣವಾಗಿದೆ. ಜೊತೆಗೆ ಸರ್ಕಾರ ಜವಳಿ ಇಲಾಖೆಯ ರೇಷ್ಮೆ ಮತ್ತು ಹತ್ತಿ ಉದ್ಯಮಕ್ಕೆ ನೀಡಿದ ಪ್ರಾಮುಖ್ಯತೆಯನ್ನು ಉಣ್ಣೆ ಉದ್ಯಮಕ್ಕೆ ನೀಡುತ್ತಿಲ್ಲ. ಉಣ್ಣೆ ಉತ್ಪಾದನೆಯಲ್ಲಿ ದೇಶದಲ್ಲಿಯೇ ಎರಡನೆ ಸ್ಥಾನದಲ್ಲಿರುವ ಕರ್ನಾಟಕದಲ್ಲಿ ಉಣ್ಣೆ ಸಂಸ್ಕರಣಾ ಘಟಕ ಸ್ಥಾಪನೆಗೆ ಸರ್ಕಾರ ಆಸಕ್ತಿ ಹೊಂದಿಲ್ಲ. ರಾಣೆಬೆನ್ನೂರಿನಲ್ಲಿ ೨೦೦೩-೦೪ನೇ ಸಾಲಿನಲ್ಲಿ ಒಂದೂವರೆ ಕೋಟಿ ರೂಪಾಯಿ ವೆಚ್ಚದಲ್ಲಿ ಉಣ್ಣೆ ಘಟಕಕ್ಕೆ ಅಡಿಗಲ್ಲು ನಿರ್ಮಿಸಿದರು. ಆದರೆ ಈವರೆಗೆ ಆ ಘಟಕ ಕಾರ್ಯಾರಂಭ ಮಾಡಿಲ್ಲ.

೭.೨ ಸರ್ಕಾರ

ಕರ್ನಾಟಕ ಸರ್ಕಾರವು ರಾಜ್ಯದಲ್ಲಿರುವ ಕುರಿಗಾರರ ಹಿತರಕ್ಷಣೆ ಕಾಯುವ ಉದ್ದೇಶದಿಂದ ಕುರಿ ತಳಿಗಳ ಸಮಗ್ರ ಅಭಿವೃದ್ಧಿಗಾಗಿ ಮತ್ತು ಅವುಗಳ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕ್ರಿ.ಶ. ೧೯೭೫ರಲ್ಲಿ ಕರ್ನಾಟಕ ಕುರಿ ಮತ್ತು ಕುರಿ ಉಣ್ಣೆ ಅಭಿವೃದ್ಧಿ ಮಂಡಳಿಯನ್ನು ಸ್ಥಾಪಿಸಿದೆ. ಸದರಿ ಮಂಡಳಿಯ ಕಾರ್ಯ ತತ್ಪರತೆಯಿಂದ ಹಾಗೂ ಕುರಿಗಾರರ ಶ್ರಮದ ಫಲದಿಂದ ೧೯೯೧ರಲ್ಲಿ ೪೭.೨೪ ಲಕ್ಷ ಕುರಿಗಳ ಸಂಖ್ಯೆಯು ೧೯೯೯ರಲ್ಲಿ ಗಣನೀಯ ಮಟ್ಟದಲ್ಲಿ ವೃದ್ಧಿಕೊಂಡು ೮೦.೦೩ ಲಕ್ಷಕ್ಕೆ ಮುಟ್ಟಿತು. ಇತ್ತೀಚಿನ ೨೦೦೩ನೇ ಗಣತಿಯ ಪ್ರಕಾರ ೭೨.೫೦ ಲಕ್ಷಕ್ಕೆ ಇಳಿದಿದೆ. ಆದರೂ ರಾಜ್ಯವು ರಾಷ್ಟ್ರದ ಕುರಿ ಸಂಖ್ಯೆಯಲ್ಲಿ ೭ನೇ ಸ್ಥಾನವನ್ನು ಪಡೆದಿದೆ. ಕುರಿ ಸಂಖ್ಯೆಯ ಇಳಿಮುಖಕ್ಕೆ ಬಹುಮುಖ್ಯ ಕಾರಣವೆಂದರೆ ರಾಜ್ಯವು ಕ್ರಿ.ಶ. ೨೦೦೦ ರಿಂದ ೨೦೦೩ರವರೆಗೆ ಸತತವಾಗಿ ಮೂರು ವರ್ಷದ ಬರಗಾಲ, ಮೇವಿನ ಕೊರತೆ ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಕುರಿಗಳನ್ನು ಮಾಂಸಾಹಾರಕ್ಕೆ ಬಲಿ ಕೊಡುವುದು ಇತ್ಯಾದಿ. ಮುಂದಿನ ದಿನಗಳಲ್ಲಿ ಕುರಿಗಳ ಸಂಖ್ಯೆ ಮತ್ತು ಅವುಗಳ ಉತ್ಪದನಾ ಸಾಮರ್ಥ್ಯವನ್ನು ಹೆಚ್ಚಿಸುವ ಸಲುವಾಗಿ ಹಾಗೂ ಮಂಡಳಿಯನ್ನು ಬಲಪಡಿಸಿ ಆರ್ಥಿಕವಾಗಿ ಸ್ವಾವಲಂಬಿಯಾಗಿಸಲು ಮಂಡಳಿಯನ್ನು ದಿನಾಂಕ ೦೧.೦೪.೨೦೦೨ ರಿಂದ ಜಾರಿಗೆ ಬರುವಂತೆ ನಿಗಮವನ್ನಾಗಿ ಪರಿವರ್ತಿಸಲಾಗಿದೆ. ಈ ನಿಗಮವು ಹೊಂದಿರುವ ಪ್ರಮುಖ ಉದ್ದೇಶಗಳು ಈ ಕೆಳಗಿನಂತಿವೆ.

* ಕುರಿಸಾಕಣೆ, ವ್ಯವಸ್ಥಾಪನೆ ಮತ್ತು ಮೇಯಿಸುವುದು.

* ಕುರಿತಳಿ ಸಂವರ್ಧನೆ.

* ಕುರಿಗಳ ಉಣ್ಣೆ ಕಟಾವಣೆ ಮತ್ತು ಉಣ್ಣೆ ಉತ್ಪನ್ನಗಳ ತಯಾರಿಕೆ.
* ಕುರಿ, ಮಾಂಸ, ಉಣ್ಣೆ ಮತ್ತು ಕುರಿಗಳ ಆಹಾರ ಕ್ರಯ-ವಿಕ್ರಯ.
* ಕುರಿ ಮತ್ತು ಕುರಿ ಉತ್ಪನ್ನಗಳ ಸಂಗ್ರಹಣೆ ಮತ್ತು ವೈಜ್ಞಾನಿಕ ಮಾರುಕಟ್ಟೆ ಪದ್ಧತಿಗಳನ್ನು ಆವಿಷ್ಕರಿಸುವುದು.
* ಕುರಿ ಸಾಕಣೆದಾರರು ಉತ್ಪಾದಿಸುವ ಉತ್ಪನ್ನಗಳಿಗೆ ಉತ್ತಮ ಮಾರುಕಟ್ಟೆ ದರ ದೊರಕಿಸುವುದು.
* ಕುರಿ ಮತ್ತು ಕುರಿ ಉತ್ಪನ್ನಗಳ ಮಾರಾಟ ವ್ಯವಸ್ಥೆಯಲ್ಲಿ ಮಧ್ಯವರ್ತಿಗಳನ್ನು ತಪ್ಪಿಸುವುದು.
* ಕುರಿ ಮತ್ತು ಕುರಿ ಉತ್ಪನ್ನಗಳ ಸಹಕಾರ ಸಂಘಗಳನ್ನು ಬಲಪಡಿಸುವುದು.

೭.೨.೧ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಕಾರ್ಯ ಚಟುವಟಿಕೆಗಳು

ನಿಗಮವು ರಾಜ್ಯದ ಕುರಿ-ಮೇಕೆ ಸಂಗೋಪನಾ ಕಾರ್ಯ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸಲು ಹಲವಾರು ಕ್ರಮಗಳನ್ನು ಕೈಗೊಂಡಿದೆ. ಆದರೆ ಅಲೆಮಾರಿ ಕುರುಬರು ಮತ್ತು ಅವರ ಬದುಕುಗಳ ಅಭಿವೃದ್ಧಿಗಾಗಿ ಪ್ರತ್ಯೇಕವಾಗಿ ಯಾವುದೇ ಯೋಜನೆಗಳನ್ನು ಕೈಗೊಂಡಿಲ್ಲ. ಆದರೂ ಸಹ ನಿಗಮದ ಅಡಿಯಲ್ಲಿ ಬರುವುದರಿಂದ ನಿಗಮದ ಕಾರ್ಯಚಟುವಟಿಕೆಗಳೇನು? ಅವು ಎಷ್ಟರ ಮಟ್ಟಿಗೆ ಅಲೆಮಾರಿ ಕುರುಬರನ್ನು ತಲುಪಿವೆ ಎಂಬುದನ್ನು ಈ ಕೆಳಗಿನ ಅಂಶಗಳಿಂದ ತಿಳಿದುಕೊಳ್ಳಬಹುದಾಗಿದೆ.

ಕುರಿಗಳ ಆರೋಗ್ಯ ರಕ್ಷಣೆ : ಕುರಿಗಳಿಗೆ ಕಾಡುವ ಸಾಂಕ್ರಮಿಕ ರೋಗಗಳನ್ನು ನಿಯಂತ್ರಿಸಲು ಮತ್ತು ಮುಂಜಾಗ್ರತೆ ಕ್ರಮವಾಗಿ ಪಶು ಮತ್ತು ಆರೋಗ್ಯ ಜೈವಿಕ ಸಂಸ್ಥೆ, ಬೆಂಗಳೂರು, ಇವರ ಸಹಯೋಗದಿಂದ ಸರ್ಕಾರ ಕಡಿಮೆ ಬೆಲೆಯಲ್ಲಿ ಹಾಗೂ ಉಚಿತವಾಗಿ ಔಷಧ ಪೂರೈಸಿ ವಿತರಿಸುವ ಕ್ರಮ ಕೈಗೊಂಡಿದೆ. ಅಲೆಮಾರಿ ಕುರುಬರಿಗೆ ಹಾಗೂ ಕುರಿಗಾರರಿಗೆ ಸಮಯಕ್ಕೆ ಸರಿಯಾಗಿ ಪೂರೈಸದಿರುವುದು, ಅವಶ್ಯಕತೆಗಿಂತ ಕಡಿಮೆ ಪೂರೈಸುತ್ತಿರುವುದು ಹಾಗೂ ವಿತರಣೆಯಲ್ಲಿ ಗೊಂದಲಗಳಿರುವುದು ಕಂಡುಬಂದಿದೆ.

ಕಂಬಳಿ ನೇಯ್ಗೆ ತರಬೇತಿ : ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿರುವ ವಿದ್ಯಾವಂತ ನಿರುದ್ಯೋಗಿ ಯುವಕ ಯುವತಿಯರನ್ನು ಸ್ವಾವಲಂಬಿಗಳನ್ನಾಗಿ ಮಾಡುವ ಉದ್ದೇಶದಿಂದ ಕೋಲಾರ, ಮುಳಬಾಗಿಲು, ಮೈಸೂರು, ರಾಣೆಬೆನ್ನೂರು, ಘಟಪ್ರಭಾ, ಗುಲಬರ್ಗಾ ಮತ್ತು ಹಾವೇರಿಗಳಲ್ಲಿ ಕಂಬಳಿ ತರಬೇತಿ ಕೇಂದ್ರಗಳನ್ನು ತೆರೆದಿದೆ. ತರಬೇತಿ ಪಡೆದವರು ಉದ್ಯೋಗ ಖಾಯಂ ಮಾಡಿ ಎಂದು ಮಂತ್ರಿಗಳ ಮೂಲಕ ಒತ್ತಡ ತಂದಿದ್ದರ ಪರಿಣಾಮವಾಗಿ ಸದ್ಯ ತರಬೇತಿಯನ್ನು ನಿಲ್ಲಿಸಲಾಗಿದೆ. ಆದರೆ ನಿಗಮವು ತರಬೇತಿ ಪಡೆಯಲು ವಿದ್ಯಾರ್ಹತೆ ಮಾನದಂಡ ಮಾಡಿರುವ ಪ್ರಯುಕ್ತ ಅಲೆಮಾರಿ ಕುರುಬರು ಈ ಯೋಜನೆಯಿಂದ ವಂಚಿತರಾಗಿದ್ದಾರೆ.

ಯಾಂತ್ರಿಕೃತ ಉಣ್ಣೆ ಕಟಾವಣೆ ತರಬೇತಿ : ಕುರಿ ಸಾಕಣೆಯಲ್ಲಿ ತೊಡಗಿರುವ ಕುಟುಂಬಗಳ ಯುವಕ ಮತ್ತು ಯುವತಿಯರಿಗೆ ಯಂತ್ರಗಳ ಸಹಾಯದಿಂದ ಕುರಿಉಣ್ಣೆ ಕಟಾವಣೆ ಮಾಡಲು ಕುರಿ ಸಂವರ್ಧನಾ ಕೇಂದ್ರಗಳಾದ ಕುಂದಾಪುರ, ಚಳ್ಳಕೆರೆ ಮತ್ತು ಉಳ್ಳವರ್ತಿಗಳಲ್ಲಿ ತರಬೇತಿ ಕೇಂದ್ರಗಳನ್ನು ತೆರೆಯಲಾಗಿದೆ. ಪ್ರತಿ ಕೇಂದ್ರದಲ್ಲಿ ಪ್ರತಿ ವರ್ಷ ೪೦ ಜನರಿಗೆ ೪ ತಿಂಗಳ ಅವಧಿಯ ತರಬೇತಿಯನ್ನು ನೀಡಲಾಗುತ್ತಿದೆ. ಅಲೆಮಾರಿ ಕುರುಬರು ಅಡವಿಯಲ್ಲೆ ಜೀವಿಸುವುದರಿಂದ ತರಬೇತಿಯನ್ನು ಪಡೆದುಕೊಂಡು ಯಂತ್ರಗಳ ಮೂಲಕ ತಮ್ಮ ಕುರಿಗಳ ಉಣ್ಣೆ ಕತ್ತರಿಸುವುದು ಅಸಾಧ್ಯವಾದ ಮಾತು. ಏಕೆಂದರೆ ಯಂತ್ರಗಳಿರುವಲ್ಲಿಗೆ ಕುರಿಗಳನ್ನು ಸಾಗಿಸುವುದಾಗಲಿ ಅಥವಾ ಕುರಿ ತಬ್ಬಿದ ಸ್ಥಳಕ್ಕೆ ಯಂತ್ರಗಳನ್ನು ತರುವುದಾಗಲಿ ಆಗುವುದಿಲ್ಲ.

ವೈಜ್ಞಾನಿಕ ಕುರಿ ಸಾಕಣಿಕೆಗೆ ತರಬೇತಿ : ಕುರಿ ಸಂಗೋಪನೆಯಲ್ಲಿ ತೊಡಗಿರುವ ಕುರಿಗಾರರು ಪರಂಪರಾಗತ ಪದ್ಧತಿಗಳನ್ನು ಅಳವಡಿಸಿಕೊಂಡಿರುವುದರಿಂದ ಆರ್ಥಿಕ ಲಾಭ ಕಡಿಮೆಮಟ್ಟದಲ್ಲಿದೆ. ಇದನ್ನು ಉತ್ತಮಪಡಿಸುವ ದೃಷ್ಟಿಯಿಂದ ಕುಂದಾಪುರ, ಚಳ್ಳಕೆರೆ ಮತ್ತು ಉಳ್ಳವರ್ತಿ ಕುರಿ ಸಂವರ್ಧನಾ ಕೇಂದ್ರಗಳಲ್ಲಿ ಪ್ರತಿವರ್ಷ ೧೨೦೦ ಜನರಿಗೆ ತರಬೇತಿ ನೀಡುವ ಉದ್ದೇಶ ಹೊಂದಿದೆ. ಪ್ರತಿ ತಂಡದಲ್ಲಿ ೨೦ ಜನರಂತೆ ೨ ದಿನದ ತರಬೇತಿಯನ್ನು ನೀಡಲಾಗುತ್ತಿದೆ. ಅಲೆಮಾರಿ ಕುರುಬರು ಇಂತಹ ತರಬೇತಿಗಳಿಗೆ ಅಡವಿಯಲ್ಲಿ ಇರುವುದರಿಂದ ಆಹ್ವಾನ ಕಡಿಮೆ. ಒಂದು ವೇಳೆ ಆಹ್ವಾನಿಸಿದರೂ ಕಾರ್ಯದೊತ್ತಡದ ಪರಿಣಾಮವಾಗಿ ಬಹಳಷ್ಟು ಕುರುಬರು ಹಾಜರಾಗುವುದಿಲ್ಲ. ಕೆಲವೊಬ್ಬರು ಹಾಜರಾದವರು ತರಬೇತಿ ನೀಡುವವರಿಗಿಂತ ನಮಗೆ ಹೆಚ್ಚಿಗೆ ತಿಳಿದಿದೆ ಎಂದು ಎದ್ದು ಹೋಗುವುದನ್ನೇ ಕಾಣುತ್ತೇವೆ.

ತಳಿ ಅಭಿವೃದ್ಧಿ : ರಾಜ್ಯದಲ್ಲಿರುವ ಸ್ಥಳೀಯ ಜಾತಿಯ ಕುರಿಗಳಾದ ಬಳ್ಳಾರಿ ಡೆಕ್ಕನಿ, ಹಾಸನ, ಕೆಂಗುರಿ, ತಳಿಯ ಕುರಿಗಳಲ್ಲಿ ದೇಹದ ತೂಕ ತುಲನಾತ್ಮಕವಾಗಿ ಕಡಿಮೆ ಇರುವುದರ ಜೊತೆಗೆ ಅವುಗಳಿಂದ ಬರುವ ಉಣ್ಣೆ ಒರಟಾಗಿದೆ. ಇವುಗಳ ಮಾಂಸದ ಪ್ರಮಾಣ ಅಥವಾ ಉಣ್ಣೆಯ ಮಟ್ಟ ಹೆಚ್ಚಿಸುವ ಸಲುವಾಗಿ ವಿದೇಶಿ ಮೂಲದ 'ರಾಂಬುಲೇ' ತಳಿಯೊಂದಿಗೆ ಸಂಕರಣಗೊಳಿಸಿ ಮಿಶ್ರತಳಿ ಟಗರುಗಳನ್ನು ಕುರಿಗಾರರಿಗೆ ನಿಗದಿತ ರಿಯಾಯತಿ ದರಗಳಲ್ಲಿ ಪೂರೈಸಲಾಗುತ್ತಿದೆ. ಈ ರೀತಿ ಕ್ರಮ ಕೈಗೊಂಡಿರುವುದು ಅಲೆಮಾರಿ ಕುರುಬರ ದೃಷ್ಟಿಯಿಂದ ಅನೂಕುಲವೆನಿಸಿದರೂ ತಮ್ಮ ಮೂಲ ತಳಿಯನ್ನು ಬದಲಾಯಿಸಲು ಇಷ್ಟಪಡುತ್ತಿಲ್ಲ. ಈಗಾಗಲೇ ಇರುವ ತಳಿಗಳು ಅಲೆಮಾರಿ ಬದುಕಿಗೆ ಹೊಂದಿಕೊಂಡಿರುವುದೇ ಪ್ರಮುಖ ಕಾರಣವಾಗಿದೆ.

ಉಣ್ಣೆ ಸಂಗ್ರಹಣೆ ಗೋದಾಮುಗಳ ಸ್ಥಾಪನೆ : ಸಹಕಾರಿ ಆಂದೋಲನಕ್ಕೆ ಪೂರಕವಾಗಿ ಕುರಿಗಾರರಿಂದ ಸಂಗ್ರಹವಾಗುವ ಬೃಹತ್ ಪ್ರಮಾಣದ ಉಣ್ಣೆಯನ್ನು ಸಂಗ್ರಹಿಸಲ್ಪಟ್ಟು ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವುದು. ಅದಕ್ಕಾಗಿ ರಾಜ್ಯದ ಬೆಳಗಾವಿ, ವಿಜಾಪುರ, ಹೊಸಪೇಟೆ, ರಾಣೆಬೆನ್ನೂರು,

ಕೋಲಾರ, ಗುಲಬರ್ಗಾ, ಚಳ್ಳಕೆರೆ, ತುಮಕೂರು, ಮಂಡ್ಯ ಮತ್ತು ಮೈಸೂರುಗಳಲ್ಲಿ ಒಂದು ಕೋಟಿ ವೆಚ್ಚದಲ್ಲಿ ಗೋದಾಮುಗಳನ್ನು ನಿರ್ಮಿಸಲು ಯೋಜನೆ ಕೈಗೊಳ್ಳಲಾಗಿದೆ. ಈ ರೀತಿ ಮಾಡುವುದರಿಂದ ಅಲೆಮಾರಿ ಕುರುಬರಿಗೆ ಉಣ್ಣೆಯಿಂದ ಸ್ವಲ್ಪ ಹೆಚ್ಚಿನ ಆದಾಯ ನಿರೀಕ್ಷಿಸಬಹುದು.

ಸಮಗ್ರ ಕುರಿ ಮತ್ತು ಉಣ್ಣೆ ಅಭಿವೃದ್ಧಿ ಯೋಜನೆ : ಕೇಂದ್ರೀಯ ಉಣ್ಣೆ ಅಭಿವೃದ್ಧಿ ಮಂಡಳಿಯ ಸಹಾಯದಿಂದ ೫೦ ಸಾವಿರ ಕುರಿ ಸಂಖ್ಯೆಯ ಪ್ರದೇಶವನ್ನು ಗುರುತಿಸಿ ಆ ಪ್ರದೇಶದಲ್ಲಿ ೫೦ ಸಾವಿರ ಕುರಿಗಳ ಸಮಗ್ರ ಅಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸ ಲಾಗುವುದು. ಅಂತಹ ಕಾರ್ಯಕ್ರಮಗಳೆಂದರೆ ಕುರಿಗಳ ಆರೋಗ್ಯ ರಕ್ಷಣೆ, ತಳಿ ಅಭಿವೃದ್ಧಿ, ಮಾರುಕಟ್ಟೆ ಸಹಾಯ ಇತ್ಯಾದಿ.

ಕುರಿ ಸಂಗೋಪನಾ ಕೇಂದ್ರಗಳ ನಿರ್ವಹಣೆ ಅಥವಾ ಮಿಶ್ರತಳಿಗಳ ವಿತರಣೆ : ಕುರಿ ಸಾಕಣೆದಾರರಿಗೆ ಉತ್ತಮ ತಳಿಯ ಮಿಶ್ರತಳಿ ಮತ್ತು ಶುದ್ಧ ತಳಿಯ ಯೋಗ್ಯ ಟಗರುಗಳನ್ನು ಉತ್ಪಾದಿಸಿ ವಿತರಿಸುವ ಉದ್ದೇಶದಿಂದ ನಿಗಮವು ತನ್ನ ಆಧೀನದಲ್ಲಿ ೬ ಸಂವರ್ಧನಾ ಕೇಂದ್ರಗಳನ್ನು ಹೊಂದಿವೆ.

೧. ಕುರಿ ಸಂವರ್ಧನಾ ಕೇಂದ್ರ ಕುಂದಾಪುರ, ಚಳ್ಳಕೆರೆ ತಾ. ಚಿತ್ರದುರ್ಗ ಜಿಲ್ಲೆ

೨. " ಉಳ್ಳವರ್ತಿ, ಚಳ್ಳಕೆರೆ ತಾ. ಚಿತ್ರದುರ್ಗ ಜಿಲ್ಲೆ

೩. " ಗುತ್ತಲ, ಹಾವೇರಿ ತಾ. ಹಾವೇರಿ ಜಿಲ್ಲೆ

೪. " ಸುತ್ತಟ್ಟಿ, ಅಥಣಿ ತಾ. ಬೆಳಗಾವಿ ಜಿಲ್ಲೆ

೫. " ಅಗನವಾಡಿ, ಬಿಳಗಿ ತಾ. ಬಾಗಲಕೋಟೆ ಜಿಲ್ಲೆ

೬. " ಧನಗೂರು, ಮಳವಳ್ಳಿ ತಾ. ಮಂಡ್ಯ ಜಿಲ್ಲೆ

ಕುರಿ ಮತ್ತು ಕುರಿ ಉತ್ಪನ್ನಗಳಿಗೆ ವೈಜ್ಞಾನಿಕ ಮಾರುಕಟ್ಟೆ ಅಬಿವೃದ್ಧಿ ಯೋಜನೆ : ಸದ್ಯದ ಪರಿಸ್ಥಿತಿಯಲ್ಲಿ ಕುರಿಗಾರರು ಎದುರುಸುತ್ತಿರುವ ಮಾರುಕಟ್ಟೆ ವ್ಯವಸ್ಥೆ ಕೊರತೆಯನ್ನು ಸ್ವಲ್ಪ ಮಟ್ಟಿಗೆ ಹೋಗಲಾಡಿಸಲು ೨೦೦೩-೦೪ನೇ ಸಾಲಿನಲ್ಲಿಯೇ ಒಂದು ಕೋಟಿ ರೂ.ಗಳ ವೆಚ್ಚದಲ್ಲಿ ಯೋಜನೆ ಹಮ್ಮಿಕೊಳ್ಳಲಾಗಿದೆ. ಈ ಯೋಜನೆ ಅಡಿ ಚಳ್ಳಕೆರೆ ತಾಲೂಕು, ಕುಂದಾಪುರ, ಕುರಿ ಸಂವರ್ಧನ ಕೇಂದ್ರದಲ್ಲಿ ಕುರಿ ಸಂಗ್ರಹಣಾ ಆಶ್ರಯ ಶೆಡ್ ನಿರ್ಮಿಸಿ, ಇಲ್ಲಿಗೆ ಕುರಿಗಾರರು ಉತ್ಪಾದಿಸುವ ಕುರಿ-ಮೇಕೆಗಳನ್ನು ಖರೀದಿಸಿ ನಂತರ ಮಾರುಕಟ್ಟೆಯಲ್ಲಿ ಅವನ್ನು ಮಾಂಸಕ್ಕಾಗಿ ಮಾರಾಟ ಮಾಡುವ ವ್ಯವಸ್ಥೆ ಯೋಜಿಸಲಾಗಿದೆ. ಇಲ್ಲಿ ಪ್ರತಿ ತಿಂಗಳು ೩೦,೦೦೦ ಕುರಿಗಳನ್ನು ಖರೀದಿಸಿ ಮಾರಾಟ ಮಾಡುವ ಗುರಿ ಹೊಂದಲಾಗಿದೆ.

೭.೩ ಪರಿಹಾರೋಪಾಯಗಳು

ಅಲೆಮಾರಿ ಕುರುಬರ ಜೀವನ ವಿಧಾನವೇ ವೈಶಿಷ್ಟ್ಯವಾಗಿದೆ. ಅವರು ಇತರೆ ಸಮುದಾಯಗಳಿಗಿಂತ ಭಿನ್ನ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಆದ್ದರಿಂದ ಅವರಿಗೆ ವಿಶೇಷವಾದ ಮತ್ತು ಪ್ರತ್ಯೇಕವಾದ ಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕಾಗಿರುವುದು ಅಗತ್ಯ ಮತ್ತು ಅನಿವಾರ್ಯವಾಗಿದೆ. ಪ್ರಸ್ತುತ ಅಧ್ಯಯನದ ಅವಧಿಯಲ್ಲಿ ಕಂಡುಕೊಂಡು ಪರಿಹಾರೋಪಾಯಗಳನ್ನು ಈ ಕೆಳಗಿನ ಅಂಶಗಳ ಮೂಲಕ ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ.

೧. ಹುಲ್ಲುಗಾವಲು ಮೀಸಲಿಡುವುದು

ಇವರು ಎದುರಿಸುವ ಹಲವಾರು ಸಮಸ್ಯೆಗಳಲ್ಲಿ ಹುಲ್ಲುಗಾವಲಿನ ಕೊರತೆ ಪ್ರಮುಖವಾದದು. ರಾಜ್ಯವು ಸತತವಾಗಿ ಅಥವಾ ಆಗಿಂದಾಗ್ಗೆ ಎಧುರಿಸುತ್ತಿರುವ ಬರಗಾಲ ಇದಕ್ಕೆ ಕಾರಣವಾಗಿದೆ. ಬರಗಾಲದ ಪರಿಣಾಮಗಳನ್ನು ನಿವಾರಿಸುವ ನಿಟ್ಟಿನಲ್ಲಿ ಶಾಶ್ವತ ಪರಿಹಾರಗಳನ್ನು ಕಂಡುಕೊಳ್ಳುವುದು ಅನಿವಾರ್ಯವಾಗಿದೆ. ಇವರು ಅಲೆದಾಡುವ ಗ್ರಾಮಗಳಲ್ಲಿರುವ ಸರ್ಕಾರಿ ಒಡೆತನದ ಅರಣ್ಯಭೂಮಿ, ರಾಜಸ್ವಭೂಮಿ, ಗೋಮಾಳ ಮತ್ತು ಇತರ ಭೂಪ್ರದೇಶಗಳನ್ನು ಪ್ರತಿ ಹೊಬಳಿ ಮಟ್ಟದಲ್ಲಿ ಗುರುತಿಸುವುದು ಹಾಗೂ ಆ ಭೂಮಿಯನ್ನು ಅಲೆಮಾರಿ ಕುರುಬರ ಕುರಿಗಳಿಗೋಸ್ಕರ ಮೀಸಲಿಡುವುದು. ಮೀಸಲಿಟ್ಟ ಭೂಮಿಗೆ ಶಾಶ್ವತ ನೀರಾವರಿ ಸೌಲಭ್ಯಗಳನ್ನು ಒದಗಿಸುವುದು ಹಾಗೂ ಕುರಿಗಳಿಗೆ ಹಿತವೆನಿಸುವ ಸುಧಾರಿತ ತಳಿಯ ಮೇವಿನ ಬೆಳೆಗಳನ್ನು ಬೆಳೆಯುವುದು- ಇದರ ನಿರ್ವಹಣೆಯನ್ನು ಅಲೆಮಾರಿ ಕುರುಬರ ಸಹಕಾರದೊಂದಿಗೆ ಸರ್ಕಾರ ಕೈಗೊಳ್ಳುವದು. ಇದರಿಂದ ಬರಗಾಲದ ಅವಧಿಯಲ್ಲಿ ಮತ್ತು ಕುರಿಗಳಿಗೆ ಮೇವಿನ ಕೊರತೆ ಕಂಡುಬಂದಾಗ ಮೇವಿನ ಸಮಸ್ಯೆಯನ್ನು ಬಗೆಹರಿಸಬಹುದು.

೨. ಕುಡಿಯುವ ನೀರಿನ ವ್ಯವಸ್ಥೆ

ಸದಾ ಅಡವಿಯಲ್ಲಿ ಗುಡಾರವನ್ನು ಹೂಡಿ ಜೀವಿಸುವುದರಿಂದ ಇವರು ಮತ್ತು ಇವರ ಬದುಕು(ಕುರಿ)ಗಳಿಗೆ ಕುಡಿಯುವ ನೀರು ಲಭ್ಯವಾಗದೇ ಬಹಳಷ್ಟು ತೊಂದರೆ ಎದುರಿಸುತ್ತಿದ್ದಾರೆ. ಈ ಬವಣೆಯನ್ನು ಹೋಗಲಾಡಿಸಲು ಅಲೆಮಾರಿ ಕುರುಬರು ಅಲೆದಾಡುವ ಮಾರ್ಗಗಳಲ್ಲಿ ಕೊಳವೆ ಬಾವಿಗಳನ್ನು ಕೊರೆದು, ನೀರಿನ ತೊಟ್ಟಿಗಳನ್ನು ನಿರ್ಮಿಸಿ, ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಬೇಕು. ಇದರಿಂದ ಕುರಿಗಳಿಗೆ ಮತ್ತು ಕುರಿಗಾರರಿಗೆ ಕಾಣಿಸಿಕೊಳ್ಳುವ ರೋಗ-ರುಜಿನಗಳನ್ನು ಕಡಿಮೆ ಗೊಳಿಸಬಹುದು.

೩. ರಾಜ್ಯಮಟ್ಟದ 'ಬಂದೂಕು ಪರವಾನಗಿ' ನೀಡುವುದು

ಅಲೆಮಾರಿ ಕುರುಬರು ಅರಣ್ಯ ಪ್ರದೇಶಗಳಲ್ಲಿ ವಾಸಿಸುವುದರಿಂದ ಅವರಿಗೆ ಮತ್ತು ಕುರಿಗಳಿಗೆ ವನ್ಯಮೃಗಗಳು ಹಾಗೂ ಆಗಂತುಕರಿಂದ ಜೀವಭಯವಿದೆ. ಆದ್ದರಿಂದ ಆತ್ಮರಕ್ಷಣೆಗಾಗಿ ಬಂದೂಕು

ಹೊಂದುವ ಪರವಾನಗಿಯನ್ನು ಸೂಕ್ತ ಪ್ರಾಧಿಕಾರದಿಂದ ನೀಡುವುದು ಹಾಗೂ ಸದರಿ ಬಂದೂಕನ್ನು ಯಾವುದೇ ಜಿಲ್ಲೆಗಳ ಗಡಿ ನಿರ್ಬಂಧವಿಲ್ಲದೆ ಇಡೀ ರಾಜ್ಯದಾದ್ಯಂತ ತೆಗೆದುಕೊಂಡು ಹೋಗಲು ಪರವಾನಗಿಯನ್ನು ನೀಡುವುದು ಅವಶ್ಯವಾಗಿದೆ.

೪. ಎಲ್ಲೆಲ್ಲಿ ವಲಸೆಯೋ ಅಲ್ಲಿ ಶಾಲೆ

ಅಲೆಮಾರಿ ಕುರುಬರು ವರ್ಷವಿಡೀ ಕುರಿಗಳ ಜೊತೆ ಕುಟುಂಬ ಸಮೇತ ಅಲೆದಾಡುವುದರಿಂದ ಅವರ ಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದಾರೆ. ಈ ಸಮಸ್ಯೆಯನ್ನು ಬಗೆಹರಿಸಲು ಬಿಹಾರ ಸರ್ಕಾರ ಮಾದರಿಯಲ್ಲಿ 'ಎಲ್ಲಿ ವಲಸೆಯೋ; ಅಲ್ಲಿ ಶಾಲೆ' ಎಂಬ ಯೋಜನೆಯನ್ನು ಜಾರಿಗೊಳಿಸುವುದು ಅಗತ್ಯವಾಗಿದೆ. ಈ ಯೋಜನೆಯಡಿ ಕ್ಷೇತ್ರಶಿಕ್ಷಣ ಸಂಪನ್ಮೂಲ ಕೇಂದ್ರಗಳಿಂದ ಅಲೆಮಾರಿ ಕುರುಬರ ಮಕ್ಕಳಿಗೆ ವರ್ಗಾವಣೆ ಪತ್ರವನ್ನು ವಿತರಿಸುವುದು. ವಲಸೆಯ ಸಮಯದಲ್ಲಿ ನೆಲೆಸಬಹುದಾದ ಗ್ರಾಮದ ಶಾಲೆಯಲ್ಲಿ ಇವರ ಮಕ್ಕಳಿಗೆ ದಾಖಲಾತಿ ಮತ್ತು ಶಿಕ್ಷಣವನ್ನು ದೊರಕಿಸಿ ಕೊಡುವುದು. ಮುಂದಿನ ಗ್ರಾಮದ ಭೂ ಪ್ರದೇಶಕ್ಕೆ ವಲಸೆ ಹೋಗುವ ಮುನ್ನ ವರ್ಗಾವಣೆ ಪತ್ರದಲ್ಲಿ ದಾಖಲಿಸಿ, ಮುಂದಿನ ಶಾಲೆಗೆ ವರ್ಗಾಯಿಸುವ ಪದ್ಧತಿಯನ್ನು ಅನುಸರಿಸುವುದು. ಹಾಗೆಯೇ ಮಕ್ಕಳನ್ನು ಕುರಿ ತಬ್ಬಿದ ಸ್ಥಳದಿಂದ ಬೆಳಿಗ್ಗೆ ಶಾಲೆಗೆ ಕರೆತರಲು ಮತ್ತು ಸಂಜೆ ಕುರಿ ತಬ್ಬಿದ ಸ್ಥಳಕ್ಕೆ ಬಿಟ್ಟು ಬರಲು ವಾಹನದ ವ್ಯವಸ್ಥೆ ಮಾಡಬೇಕು.

ಋತುಮಾನಕ್ಕನುಗುಣವಾಗಿ ಒಂದು ಪ್ರಮುಖ ಊರಿನ ಸುತ್ತಮುತ್ತಲಿನ ಗ್ರಾಮಗಳ ಭೂ ಪ್ರದೇಶದಲ್ಲಿ ಅಲೆದಾಡುವುದರಿಂದ ಆ ಪ್ರದೇಶಗಳಲ್ಲಿ ವಸತಿ ಶಾಲೆಗಳನ್ನು ತೆರೆಯಬೇಕು. ಅಂತಹ ಪ್ರಮುಖ ಊರುಗಳೆಂದರೆ ಬಳ್ಳಾರಿ ಜಿಲ್ಲೆಯ ಕಮಲಾಪುರ, ಕಂಪ್ಲಿ, ಸಿರುಗುಪ್ಪ, ಸೋಮಸಮುದ್ರ, ಮೈಲಾರ ಇಂತಹ ಸ್ಥಳಗಳಲ್ಲಿ ವಸತಿ ಶಾಲೆ ತೆರೆಯುವುದರಿಂದ ಹದಿನೈದು ಅಥವಾ ತಿಂಗಳಿಗೊಮ್ಮೆ ತಮ್ಮ ಮಕ್ಕಳನ್ನು ನೋಡಿಕೊಂಡು ಬರಲು ಅಲೆಮಾರಿ ಕುರುಬರ ತಂದೆ-ತಾಯಿಗಳಿಗೂ ಅನುಕೂಲ ವಾಗುತ್ತದೆ ಮತ್ತು ಸರ್ಕಾರದ ಸರ್ವರಿಗೂ ಶಿಕ್ಷಣ ಎಂಬ ಯೋಜನೆಯು ಕಾರ್ಯಗತವಾದಂತಾಗುತ್ತದೆ.

೫. ಕುರಿ ಮೇಕೆಗಳಿಗೆ ಮಾರುಕಟ್ಟೆ ಸೌಲಭ್ಯ

ಅಲೆಮಾರಿ ಕುರುಬರಲ್ಲಿ ಆಗಾಧವಾದ ಕುರಿ-ಮೇಕೆ ಸಂಪತ್ತಿದೆ. ಇದು ರಾಜ್ಯದ ಆರ್ಥಿಕ ಅಭಿವೃದ್ಧಿಗೆ ಮೂಲ ಬಂಡವಾಳವಾಗಿದೆ. ಸದ್ಯದ ಕುರಿ-ಮೇಕೆ ಮಾರುಕಟ್ಟೆ ವ್ಯವಸ್ಥೆ ಮಧ್ಯವರ್ತಿಗಳ ಬಿಗಿ ಹಿಡಿತದಲ್ಲಿರುವುದರಿಂದ ಅಲೆಮಾರಿ ಕುರುಬರಿಗೆ ನ್ಯಾಯಯುತವಾದ ಬೆಲೆ ದೊರೆಯುತ್ತಿಲ್ಲ. ಆದ್ದರಿಂದ ಕೃಷಿಉತ್ಪನ್ನಗಳ ಮಾರುಕಟ್ಟೆ ಮಾದರಿಯಲ್ಲಿ "ಕುರಿ-ಮೇಕೆ ಉತ್ಪನ್ನಗಳ ಮಾರುಕಟ್ಟೆ ಕಾಯಿದೆ" ಜಾರಿಗೆ ಬರಬೇಕು. ಕುರಿಗಳ ನಡುವನ್ನು ಒತ್ತಿ ಕುರಿ ವ್ಯಾಪಾರ ಮಾಡುವುದನ್ನು ಬಿಟ್ಟು ಕುರಿಗಳ ತೂಕದ ಆಧಾರದ ಮೇಲೆ ಬೆಲೆ ನಿರ್ಧಾರವಾಗಬೇಕು. ಮಧ್ಯಸ್ಥಗಾರರಿಂದ ಶೋಷಣೆ

ಕಡಿಮೆ ಮಾಡಲು ಅಲೆಮಾರಿ ಕುರುಬರು ಅಲೆದಾಡುವ ಪ್ರದೇಶಗಳಲ್ಲಿ ಉತ್ತಮ ಮಾರುಕಟ್ಟೆ ಸೌಲಭ್ಯ ಒದಗಿಸುವ ಸಲುವಾಗಿ ಹೊಸಪೇಟೆಯಲ್ಲಿ ಸುಸಜ್ಜಿತವಾದ ಕಸಾಯಿಖಾನೆಯನ್ನು ಸ್ಥಾಪಿಸಬೇಕು.

೬. ರೋಗ ನಿರೋಧಕ ಲಸಿಕೆ

ಅಲೆಮಾರಿ ಕುರುಬರ ಬದುಕುಗಳನ್ನು ಕಾಡುತ್ತಿರುವ ದೊಡ್ಡರೋಗ, ಪಿ.ಪಿ.ಆರ್. ಮೈಲಿಬೇನೆ, ನೀಲಿನಾಲಿಗೆ, ಸಿಡುಬು, ಕಾಲು-ಬಾಯಿ ಬೇನೆ ಇತ್ಯಾದಿ ರೋಗಗಳ ನಿಯಂತ್ರಣ ಮಾಡುವ ಸಲುವಾಗಿ 'ಪಲ್ಸ್ ಪೋಲಿಯೋ ಅಭಿಯಾನ' ಮಾದರಿಯಂತೆ ಇವರ ಬದುಕುಗಳಿಗೆ ರೋಗ ನಿರೋಧಕ ಲಸಿಕೆ ಹಾಕುವ ಆಂದೋಲವನ್ನು ಸರ್ಕಾರ ಕೈಗೊಳ್ಳಲೇಬೇಕು. ರಾಜ್ಯದಲ್ಲಿರುವ ಸಮಸ್ತ ಕುರಿ-ಮೇಕೆಗಳ ಆರೋಗ್ಯ ರಕ್ಷಣೆಗೆ ಸರ್ಕಾರ ಜಂತುನಾಶಕ ಔಷಧಗಳನ್ನು ಸರಬರಾಜು ಮಾಡಬೇಕು.

೭. ಅಲೆಮಾರಿ ಕುರುಬರಿಗೆ 'ಜನಶ್ರೀ ವಿಮಾ' ಮತ್ತು ಕುರಿಗಳಿಗೆ 'ಸಮಗ್ರ ವಿಮಾ' ಯೋಜನೆಗಳು ಜಾರಿಗೊಳಿಸುವುದು

ಅಕಾಲಿಕ ಮಳೆಗಾಲ ಮತ್ತು ಅನಿರ್ದಿಷ್ಟ ವರಮಾನದಿಂದಾಗಿ ತತ್ತರಿಸಿರುವ ಅಲೆಮಾರಿ ಕುರುಬರು, ಆಕಸ್ಮಿಕ ದುರಂತಗಳಿಗೆ ತುತ್ತಾದ ಸಂದರ್ಭಗಳಲ್ಲಿ ದುಡಿಯುವ ವ್ಯಕ್ತಿ ಇಲ್ಲದೆ ಕುಟುಂಬಗಳು ಬೀದಿ ಪಾಲಾಗುತ್ತವೆ. ಇಂತಹ ದುರಂತಮಯ ಸನ್ನೀವೇಶಗಳನ್ನು ತಡೆಗಟ್ಟಲು ಕುರಿಗಾರರಿಗೆ 'ಜನಶ್ರೀ' ವಿಮೆ ಯೋಜನೆಯನ್ನು ಜಾರಿಗೊಳಿಸುವುದು ಅವಶ್ಯವಿದೆ.

ಅತಿವೃಷ್ಟಿ, ಅನಾವೃಷ್ಟಿ ಮತ್ತು ಇತರೆ ಪ್ರಕೃತಿ ವಿಕೋಪಗಳಿಗೆ ತುತ್ತಾಗುವ ಕುರಿಗಳಿಗೆ ರಾಜ್ಯ ಮಟ್ಟದ ಒಂದು "ಸಮಗ್ರ ವಿಮಾ" ಯೋಜನೆಯನ್ನು ಸಂಪೂರ್ಣವಾಗಿ ರಾಜ್ಯಸರ್ಕಾರದಿಂದಲೇ ಜಾರಿಗೊಳಿಸುವುದು ಅವಶ್ಯಕವಾಗಿದೆ. ಏಕೆಂದರೆ ಅಲೆಮಾರಿ ಕುರುಬರು ಕ್ಷಣಾರ್ಧದಲ್ಲಿ ತನ್ನದೆನ್ನುವ ಎಲ್ಲವನ್ನು ಕಳೆದುಕೊಂಡು ಬಿಡುತ್ತಾರೆ. ಇದಕ್ಕೆ ಪರಿಹಾರ ಕಂಡುಕೊಳ್ಳುವ ಉದ್ದೇಶದಿಂದ ಜಮ್ಮು ಮತ್ತು ಕಾಶ್ಮೀರ ರಾಜ್ಯದ ಮಾದರಿಯಲ್ಲಿ "ಜನಶ್ರೀ ವಿಮಾ" ಯೋಜನೆಯನ್ನು ಇತ್ತೀಚಿಗೆ ರಾಜ್ಯ ಸರ್ಕಾರ ಆರಂಭಿಸಿದೆ. ಈ ವಿಮಾ ಸೌಲಭ್ಯವನ್ನು ನೈಸರ್ಗಿಕ ವಿಕೋಪದ ವೇಳೆ ಮರಣ ಹೊಂದುವ ಕುರಿಗಳಿಗೆ ಮಾತ್ರ ನೀಡಲಾಗಿದೆ. ಆದರೆ ವರ್ಷಗಟ್ಟಲೆ ಮನೆ, ಮಠಗಳನ್ನು ತೊರೆದು ಪ್ರಾಣವನ್ನು ಕೈಯಲ್ಲಿ ಹಿಡಿದು ಕುರಿಗಳೊಡನೆ ಅಲೆಯುವ ಅಲೆಮಾರಿ ಕುರುಬರನ್ನು ವಿಮಾ ಸೌಲಭ್ಯ ಪಡೆಯುವುದರಿಂದ ಅನರ್ಹಗೊಳಿಸಲಾಗಿದೆ. ಬಡತನದ ರೇಖೆ ಎಂಬ ಮಾನದಂಡ ಅಳವಡಿಸಿದ್ದರಿಂದ ನೂರರಿಂದ ಐದು ನೂರು ಕುರಿಗಳನ್ನು ಹೊಂದಿರುವ ಅಲೆಮಾರಿ ಕುರುಬರು ಈ ಸೌಲಭ್ಯದಿಂದ ವಂಚಿತರಾಗುತ್ತಾರೆ. ಪ್ರತಿ ಕುರಿ ಕನಿಷ್ಟ ೧,೫೦೦ ರೂಪಾಯಿ ಬೆಲೆ ಇರುವುದರಿಂದ ನೂರಿನ್ನೂರು ಕುರಿಗಳ ಒಡೆಯರ ಆಸ್ತಿಯ ಮೌಲ್ಯ ಲಕ್ಷ ರೂಪಾಯಿ ದಾಟುತ್ತದೆ. ಅಂತಹ ಅಲೆಮಾರಿ ಕುರುಬರು ಬಡತನದ ರೇಖೆಗಿಂತ ಕೆಳಗಿನ ವರ್ಗ ಸೇರದಿರುವುದರಿಂದ ವಿಮಾ ಸೌಲಭ್ಯದ ವ್ಯಾಪ್ತಿಗೆ ಬರುವುದಿಲ್ಲ.

ವಿಚಿತ್ರ ಕಾಯಿಲೆ, ನೈಸರ್ಗಿಕ ವಿಕೋಪ, ಸಿಡಿಲಿನ ದಾಳಿಗೆ ಒಳಗಾಗಿ ಎಲ್ಲಾ ಕುರಿಗಳು ಸತ್ತು ಹೋದರೆ ಕುರಿಗಾರರು ಬೀದಿಪಾಲಾಗುವ ಸಾಧ್ಯತೆಗಳು ಇರುವುದರಿಂದ ಜಾಸ್ತಿ ಕುರಿಗಳನ್ನು ಹೊಂದಿರುವ ಅಲೆಮಾರಿ ಕುರುಬರನ್ನು ಈ ಯೋಜನೆ ವ್ಯಾಪ್ತಿಗೆ ಒಳಪಡಿಸಬೇಕು. ನೈಸರ್ಗಿಕ ವಿಕೋಪಗಳಿಂದ ಜೀವ ಕಳೆದುಕೊಳ್ಳುವ ಇವರಿಗೆ ೭೫ ಸಾವಿರದಿಂದ ಒಂದು ಲಕ್ಷದವರೆಗೆ ವಿಮಾ ಸೌಲಭ್ಯ ನೀಡಬೇಕು.

೮. ಅಲೆಮಾರಿ ಕುರುಬರ ಮಹಿಳೆಯರಿಗೆ ಸ್ತ್ರೀ-ಶಕ್ತಿ ಯೋಜನೆ ಅಡಿ ಪ್ರಾಮುಖ್ಯತೆ

ಅಬಲೆಯಾದ ಮಹಿಳೆಯನ್ನು ಸಬಲೆಯನ್ನಾಗಿಸುವ ದೃಷ್ಟಿಯಿಂದ ಸರ್ಕಾರ ಹಲವಾರು ಸ್ತ್ರೀಶಕ್ತಿ ಯೋಜನೆಗಳನ್ನು ಜಾರಿಗೆ ತಂದಿದೆ. ಅದೇ ಮಾದರಿಯಲ್ಲಿ ಅಲೆಮಾರಿ ಕುರುಬರ ಮಹಿಳೆಯರಿಗೆ ಸೂಕ್ತವಾದ ಕುರಿ ಸಂಗೋಪನೆ ಯೋಜನೆಗಳನ್ನು ರೂಪಿಸಿ ಜಾರಿಗೊಳಿಸಬೇಕು. ಆಗ ಮಾತ್ರ ಇವರ ಕುಟುಂಬದ ಆರ್ಥಿಕ ಮಟ್ಟವನ್ನು ಸುಧಾರಿಸಲು ಸಾಧ್ಯವಾಗುತ್ತದೆ.

೯. ಕಂಬಳಿ ಉದ್ಯಮಕ್ಕೆ ಕಾಯಕಲ್ಪ

ಪರಂಪರಾಗತ ಪದ್ಧತಿಗಳಲ್ಲಿಯೇ ಕಂಬಳಿ ನೇಯ್ಗೆ ಮಾಡುತ್ತಿರುವುದರಿಂದ ಆಧುನಿಕ ವಸ್ತುಗಳ ಪೈಪೋಟಿಯಿಂದ ಕಂಬಳಿ ಉದ್ಯಮ ನೆಲಕಚ್ಚಿದೆ. ಬದುಕಿಗೆ ಬದಲಿ ಆಸರೆ ಇಲ್ಲದೆ ತತ್ತರಿಸಿ ಆತ್ಮಹತ್ಯೆಯ ದಾರಿ ತುಳಿಯುತ್ತಿದ್ದಾರೆ. ಆದ್ದರಿಂದ ಕಂಬಳಿ ಉದ್ಯಮಕ್ಕೆ ಕಾಯಕಲ್ಪ ನೀಡುವುದು ತಕ್ಷಣದ ಅವಶ್ಯಕತೆಯಾಗಿದೆ. ಇದಕ್ಕಾಗಿ ಸರ್ಕಾರದ ಅಧೀನದ ವಿದ್ಯಾರ್ಥಿ ನಿಲಯಗಳು, ಜೈಲುಗಳು, ರಿಮೆಂಡ್ ಹೋಮ್‌ಗಳು, ಅನಾಥ ಆಶ್ರಮಗಳು ಮತ್ತು ಇತರೆ ಯಾವುದೇ ಹೊದಿಕೆಗಳನ್ನು ಖರೀದಿಸುವ ಸಂಸ್ಥೆಗಳಿಗೆ ಕಂಬಳಿಗಳನ್ನು ಖರೀದಿಸುವುದನ್ನು ಕಡ್ಡಾಯಗೊಳಿಸಿ ಆದೇಶಿಸಬೇಕು. ಈ ರೀತಿ ಆದೇಶ ಮಾಡುವುದರಿಂದ ಕುರಿ ಉಣ್ಣೆಗೆ ಹೆಚ್ಚಿನ ಬೇಡಿಕೆ ಬರುವುದರಿಂದ ಅಲೆಮಾರಿ ಕುರುಬರ ಆರ್ಥಿಕ ಪರಿಸ್ಥಿತಿ ಸುಧಾರಿಸುವುದು.

೧೦. ಕುರಿ ಸಾಕಣಿಕೆ ಫಾರ್ಮ್ ಸ್ಥಾಪಿಸಬೇಕು

ಇವರು ಹೆಚ್ಚು ಅಲೆದಾಡುವ ಹತ್ತಿರದ ಪ್ರದೇಶಗಳಲ್ಲಿ ಕುರಿಸಾಗಣಿಕೆಯ ಫಾರ್ಮ್‌ಗಳನ್ನು ಸ್ಥಾಪಿಸಬೇಕು. ಅಂತಹ ಸ್ಥಳಗಳೆಂದರೆ ಹೊಸಪೇಟೆ, ಬಳ್ಳಾರಿ, ಸಿರುಗುಪ್ಪ ಸ್ಥಳಗಳಲ್ಲಿ ಕುರಿ ಸಾಕಾಣಿಕೆ ಫಾರ್ಮ್‌ಗಳನ್ನು ಸ್ಥಾಪಿಸಿದರೆ. ಅಲೆಮಾರಿ ಕುರುಬರಿಗೆ ಅನುಕೂಲವಾಗುತ್ತದೆ. ಇವರು ತಮ್ಮ ಕುರಿಗಳಿಗೆ ಔಷಧ ಮತ್ತು ಕುಟುಂಬದ ಸಂತೆ ತರಲು ಪಟ್ಟಣಗಳಿಗೆ ಆಗಾಗ್ಗೆ ಹೋದಾಗ ಕುರಿ ಸಾಕಾಣಿಕೆ ಫಾರ್ಮ್‌ಗೆ ಭೇಟಿ ನೀಡಲು ಅನುಕೂಲವಾಗುತ್ತದೆ. ಫಾರ್ಮ್‌ನಲ್ಲಿ ಯಾವ ಜಾತಿಯ ಕುರಿಗಳಿವೆ. ಯಾವುದನ್ನು ಸಾಕಬೇಕು, ಯಾವುದನ್ನು ಸಾಕಿದರೆ ಲಾಭದಾಯಕ ಎನ್ನುವ ಮಾಹಿತಿಗಳು ದೊರೆಯುತ್ತವೆ, ಪ್ರತ್ಯಕ್ಷವಾಗಿ ಗಮನಿಸಲು ಸಾಧ್ಯವಾಗುತ್ತದೆ.

೧೧. ಕುರಿ ಸಾಕಣೆ ಸಂಶೋಧನಾ ಕೇಂದ್ರ ಸ್ಥಾಪನೆ

ಕರ್ನಾಟಕ ರಾಜ್ಯದಲ್ಲಿ ಕುರಿ ಸಾಕಾಣಿಕೆಗೆ ವಿಪುಲ ಅವಕಾಶಗಳಿದ್ದು ಸಂಶೋಧನಾ ಕೇಂದ್ರ ಸ್ಥಾಪನೆಯ ಅವಶ್ಯಕತೆಯಿದೆ. ಈಗಾಗಲೇ ದೇಶದಲ್ಲಿಯೇ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಜೈಪುರದ 'ಕುರಿ ಸಾಕಾಣಿಕೆ ಸಂಶೋಧನಾ ಕೇಂದ್ರ'ದ ಮಾದರಿಯಲ್ಲಿಯೇ ಕರ್ನಾಟಕ ರಾಜ್ಯದ ಬಳ್ಳಾರಿ ಜಿಲ್ಲೆಯ ಹೊಸಪೇಟೆಯಲ್ಲಿ ಕುರಿ ಸಾಕಾಣಿಕೆ ಸಂಶೋಧನಾ ಕೇಂದ್ರ ಸ್ಥಾಪನೆಯಾಗಬೇಕು. ಇದರಿಂದ ಅಲೆಮಾರಿ ಕುರುಬರು ವೈಜ್ಞಾನಿಕವಾಗಿ ಕುರಿಸಾಕಾಣಿಕೆ ವಿಧಾನ ಕಂಡುಕೊಳ್ಳಲು ಸಾಧ್ಯವಾಗುತ್ತದೆ.

೧೨. ಅರಣ್ಯದೊಳಗೆ ಕುರಿ ಮೇಯಿಸಲು ಅವಕಾಶ

ಕುರಿಗಳು ಮುಖ ಎತ್ತಿ ಮೇಯುವುದಿಲ್ಲ. ಕುರಿಹಿಂಡು ಮತ್ತು ಮೇಕೆ ಹಿಂಡುಗಳನ್ನು ಭಾಗ ಮಾಡಿ ಮೇಕೆ ಹಿಂಡು ಹೊರತು ಪಡಿಸಿದ ಕುರಿಹಿಂಡನ್ನು ಮಾತ್ರ ಅರಣ್ಯದೊಳಗೆ ಮೇಯಿಸಲು ಅವಕಾಶ ನೀಡಬೇಕು. ಇದು ಸಾಮಾನ್ಯ ಜ್ಞಾನವಾಗಿದ್ದು ಅರಣ್ಯ ಅಧಿಕಾರಿಗಳು ಪ್ರಾಯೋಗಿಕವಾಗಿ ತಿಳಿದುಕೊಂಡು ಮಳೆಗಾಲದ ಅವಧಿಯಲ್ಲಿ ಕುರಿ ಮೇಯಿಸಲು ಅವಕಾಶ ನೀಡಬೇಕು.

೧೩. ಪಡಿತರ ಚೀಟಿ ನೀಡಬೇಕು

ಸರ್ಕಾರವು ಅಲೆಮಾರಿ ಕುರುಬರಿಗಾಗಿ ವಿಶೇಷ ಪಡಿತರ ಚೀಟಿ ನೀಡಬೇಕು. ಆ ಚೀಟಿಯಿಂದ ಅವರು ಅಲೆದಾಡುವ ಯಾವುದೇ ಗ್ರಾಮಗಳಲ್ಲಿಯ ನ್ಯಾಯಬೆಲೆ ಅಂಗಡಿಗಳಲ್ಲಿ ದೊರೆಯುವ ವಸ್ತುಗಳನ್ನು ಕೊಳ್ಳಲು ಅವಕಾಶ ಮಾಡಿಕೊಡಬೇಕು.

ಆಧಾರ ಗ್ರಂಥಗಳು

1. Jodh., ***Indian Population and Development Review***, NewDelhi, 1985
2. Mankad B.L., ***Rabaris of Kathiwad- A social Study***, Jurnal of University of Bombay, 1939
3. Pragya Sharma., ***Tribal Society in a Flux (Raika)***, Panchasheela Prakashan, Jaipur, 2005

ಅಧ್ಯಾಯ ೮

ಸಮಾರೋಪ

ಸಮಾರೋಪ

ಸಮಾಜ ವಿಜ್ಞಾನಗಳ ಸಂಶೋಧನೆಯು ಒಂದು ಮಹತ್ತರವಾದ ವಿಷಯವಾಗಿದೆ. ಸಮಾಜ ಎಂಬುದು ವಿಶಾಲತೆಯ ದೃಷ್ಟಿಯಿಂದ ಕೈಗೆಟಕದಿರುವ ವ್ಯಾಪ್ತಿಯನ್ನು ಹೊಂದಿದೆ. ವಿಜ್ಞಾನವು ನಿಗೂಢ ವಿಸ್ಮಯಗಳ ತವರೂರಾಗಿದೆ. ಈ ಎರಡೂ ವಿಷಯಗಳು ಮನುಷ್ಯನನ್ನು ಹೊರತುಪಡಿಸಿ ನಿಲ್ಲುವುದಿಲ್ಲ. ಮಾನವನ ಬೌದ್ಧಿಕ ಶಕ್ತಿಯ ಫಲವಾಗಿ ಜಗತ್ತಿನಲ್ಲಿ ಎಷ್ಟೋ ಹೊಸ ಹೊಸ ಆವಿಷ್ಕಾರಗಳನ್ನು ಮಾಡಿದರೂ ಕೆಲವೊಂದು ಸಮುದಾಯಗಳ ಮೂಲ ವೃತ್ತಿಯನ್ನು ಬದಲಾಯಿಸಿಕೊಳ್ಳಲು ಸಾಧ್ಯವಾಗಿಲ್ಲ. ಅಂತಹ ಸಮುದಾಯಗಳಲ್ಲೊಂದಾದ ಅಲೆಮಾರಿ ಕುರುಬರು ತಮ್ಮ ವೃತ್ತಿ ಜೀವನವನ್ನು ಬದಲಾಯಿಸಿ ಕೊಳ್ಳದ, ಬದಲಾಯಿಸಿಕೊಂಡರೆ ಜೀವನಕ್ಕೆ ಬೇರೆ ಗತಿ ಇಲ್ಲದ ಸ್ಥಿತಿಯಲ್ಲಿರುವರು. ನೈಸರ್ಗಿಕ ವಿಜ್ಞಾನದೊಂದಿಗೆ ಹಾಗೂ ಸಮಾಜದ ವಿವಿಧ ಆಚರಣೆಗಳಿಗೆ ಹೊಂದಿಕೊಂಡು ಇಂದಿಗೂ ತಾವು ಬದುಕುವ ಪ್ರಾಣಿ ಸಂತತಿಗಳನ್ನು ಅಭಿವೃದ್ಧಿಪಡಿಸುತ್ತಾ ಮಾನವನ ಆಹಾರ ಸರಪಳಿಗೆ ಕೊಂಡಿ ಯಾಗಿದ್ದಾರೆ. ಅವರ ನಿತ್ಯದ ಬದುಕು, ಕೌಟುಂಬಿಕ ಪರಿಸರ, ದುಡಿಮೆಯ ಥಲ, ಸಾಧು ಪ್ರಾಣಿಗಳಿಗೆ (ಕುರಿ-ಮೇಕೆ) ವರವಾದರೆ, ಮನುಷ್ಯ ನಿರ್ಮಿತ ಮೂಲ ಸೌಕರ್ಯಗಳಿಂದ ದೂರವಾಗಿದ್ದಾನೆ.

ಪ್ರಸ್ತುತ ಸಂಶೋಧನೆಯ ಹಾದಿ ಅಲೆಮಾರಿ ಕುರುಬರಂತೆ ಅಲೆದಾಡುತ್ತಾ ಸಾಗಿದಾಗ ಜನವಸತಿ ಪ್ರದೇಶಗಳಲ್ಲಿ ಜೀವಿಸುವ ಅಕ್ಷರಸ್ಥ, ವಿದ್ಯಾವಂತ, ಜ್ಞಾನವಂತ ಮನುಷ್ಯರೆ ಸೌಲಭ್ಯಗಳಿಲ್ಲವೆಂದು ಗೋಗರಿಯುವರು. ಯಾವುದೇ ನಿರ್ದಿಷ್ಟ ಸ್ಥಳದಲ್ಲಿ ವಾಸಿಸದೆ, ಅಕ್ಷರ ಲೋಕ ಕಾಣದ ಇವರ ಬದುಕಿನ ಸಮಸ್ಯೆಗಳು ಅನಂತವಾಗಿವೆ. ಈ ಸಮಸ್ಯೆಗಳಿಗೆ ಸೂಚಿಸುವ ಪರಿಹಾರೋಪಾಯಗಳು ಕೂಡ ಅಷ್ಟೇ ಜಟಿಲವಾಗಿವೆ. ಅದರೂ ಸಹ ಸಮಸ್ಯೆಗಳ ನಡುವೆಯೂ ಪರರದನ್ನು ಬಯಸದೆ, ವೃತ್ತಿ ಜೀವನವನ್ನು ಬಿಡದೆ, ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಉಳಿಸಿಕೊಂಡು ಪರಿಸರ ಸ್ನೇಹಿಯಾಗಿರುವಂಥ "ಅಲೆಮಾರಿ ಕುರುಬರ ಆರ್ಥಿಕ ಅಧ್ಯಯನ" ಮಾಡಲಾಗಿದೆ.

ಪ್ರಸ್ತುತ "ಅಲೆಮಾರಿ ಕುರುಬರ ಆರ್ಥಿಕ ಅಧ್ಯಯನ" ಎಂಬ ನಿಬಂಧವು ಬಳ್ಳಾರಿ ಜಿಲ್ಲೆಯ ಭೂಪ್ರದೇಶದಲ್ಲಿ ಅಲೆದಾಡುತ್ತಿರುವ ಅಲೆಮಾರಿ ಕುರುಬ ಸಮುದಾಯವನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ. ಈ ನಿಬಂಧವು ಕ್ಷೇತ್ರ ಮಾಹಿತಿ, ಹಲವು ಪೂರಕ ಗ್ರಂಥಗಳ ನೆರವು ಮತ್ತು ಮಾಹಿತಿಯ ಸಹಾಯದಿಂದ ರೂಪಗೊಂಡಿದೆ. ಇಲ್ಲಿ ಅಧ್ಯಯನಕ್ಕೆ ಅನುಕೂಲವಾಗುವಂತೆ ಎಂಟು ಅಧ್ಯಾಯಗಳನ್ನು ರೂಪಿಸಿಕೊಂಡಿದ್ದು, ಪ್ರತಿಯೊಂದು ಅಧ್ಯಾಯದಲ್ಲಿ ವಿಷಯಕ್ಕೆ ಸಂಬಂಧಿಸಿದಂತೆ ವಿಶ್ಲೇಷಣೆ, ವಿವರಣೆಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ಈ ಪ್ರಬಂಧದ ಮೊದಲ ಅಧ್ಯಾಯವು 'ಪ್ರವೇಶ' ಎಂಬ ಪೀಠಿಕಾ ಭಾಗದಿಂದ ಪ್ರಾರಂಭಿಸಲಾಗಿದೆ. ಈ ಅಧ್ಯಾಯದಲ್ಲಿ ಅಧ್ಯಯನದ ಶೋಧನೆ, ವ್ಯಾಪ್ತಿ, ಉದ್ದೇಶ, ಮಹತ್ವ ಹಾಗೂ ಅಧ್ಯಯನದ ವಿಧಾನಗಳನ್ನು ಕುರಿತು ವಿಶ್ಲೇಷಿಸಲಾಗಿದೆ.

ಎರಡನೆಯ ಅಧ್ಯಾಯವು 'ಅಲೆಮಾರಿ ಕುರುಬರ ಹಿನ್ನೆಲೆ' ಎಂಬ ಶೀರ್ಷಿಕೆಯನ್ನು ಹೊಂದಿದೆ. ಈ ಅಧ್ಯಾಯದಲ್ಲಿ ಕುರುಬ ಪದದ ಪದ ನಿಷ್ಪತ್ತಿ, ಪೌರಾಣಿಕ ಹಿನ್ನೆಲೆಯಲ್ಲಿ ಕುರುಬ ಸಮುದಾಯ, ಕುರಿಗಳ ಜನನ ಹೇಗಾಯಿತು, ಕುರುಬರ ಚಾರಿತ್ರಿಕ, ಧಾರ್ಮಿಕ ಹಿನ್ನೆಲೆ ಹಾಗೂ ಅವರ ಒಳಪಂಗಡ ಗಳನ್ನು ವಿಶ್ಲೇಷಿಸಲಾಗಿದೆ.

ಮೂರನೆಯ ಅಧ್ಯಾಯವು ಕುರಿ-ಮೇಕೆಗಳ ಹುಟ್ಟು ಮತ್ತು ಬೆಳವಣಿಗೆ ಎಂಬ ಶೀರ್ಷಿಕೆಯನ್ನು ಹೊಂದಿದೆ. ಈ ಅಧ್ಯಾಯದಲ್ಲಿ ಕುರಿ-ಮೇಕೆಗಳ ಮೂಲ, ಅವುಗಳನ್ನು ಪಳಗಿಸಿದ ಇತಿಹಾಸ, ಪ್ರಸರಣವನ್ನು ಭೌಗೋಳಿಕ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. ಭಾರತದ ಭೂಪ್ರದೇಶದಲ್ಲಿ ಸಾಕುವ ಕುರಿ ತಳಿಗಳನ್ನು ಭೌಗೋಳಿಕ ಹಿನ್ನೆಲೆಯಲ್ಲಿ ಹಿಮಾಲಯದ ಉಷ್ಣವಲಯದ ತಳಿಗಳು, ಈಶಾನ್ಯ ವಲಯದ ತಳಿಗಳು ಮತ್ತು ದಕ್ಷಿಣವಲಯದ ತಳಿಗಳೆಂದು ವಿಂಗಡಿಸಲಾಗಿದೆ. ಈ ತಳಿಗಳ ಮೂಲ, ಲಕ್ಷಣಗಳನ್ನು, ಪ್ರಸರಣ ಮತ್ತು ವೈಶಿಷ್ಟ್ಯಗಳನ್ನು ಕುರಿತು ವಿಶ್ಲೇಷಿಸಲಾಗಿದೆ.

ಕರ್ನಾಟಕ ರಾಜ್ಯವನ್ನು ಕೇಂದ್ರವಾಗಿಟ್ಟುಕೊಂಡು ಕುರಿ ಸಾಕಣಿಕೆ ಮೇಲೆ ಮಳೆಯ ಪ್ರಮಾಣವು ಯಾವ ರೀತಿಯ ಪ್ರಭಾವ ಬೀರಿದೆ, ಜಿಲ್ಲಾವಾರು ಕುರಿ-ಮೇಕೆಗಳ ಸಂಖ್ಯೆ, ಸಾಂದ್ರತೆ, ಕುರಿ ತಳಿಗಳು, ಅವುಗಳ ಮೂಲ, ಲಕ್ಷಣಗಳು, ಪ್ರಸರಣ, ಉತ್ಪಾದನೆಯನ್ನು ಕುರಿತು ಚರ್ಚಿಸಲಾಗಿದೆ. ಕುರಿ-ಮೇಕೆಗಳಿಗೆ ಕಾಣಿಸಿಕೊಳ್ಳುವ ರೋಗಗಳು, ರೋಗಕ್ಕೆ ಕಾರಣವಾದ ಅಂಶಗಳು, ಪ್ರಸರಣ, ನಿಯಂತ್ರಿಸುವ ವಿಧಾನ ಮತ್ತು ಮುಂಜಾಗ್ರತೆ ಕ್ರಮಗಳನ್ನು ವಿಶ್ಲೇಷಿಸಲಾಗಿದೆ.

ನಾಲ್ಕನೆಯ ಅಧ್ಯಾಯವು 'ಅಲೆಮಾರಿ ಕುರುಬರ ಅಲೆಮಾರಿತನ'ವಾಗಿದ್ದು, ಅಲೆಮಾರಿ ಬದುಕಿನ ಭಿನ್ನ ಆಯಾಮಗಳನ್ನು ವಿಶ್ಲೇಷಣೆ ಮಾಡಲಾಗಿದೆ. ಈ ಅಧ್ಯಾಯದಲ್ಲಿ ಅಲೆಮಾರಿ ಕುರುಬರ ಮೂಲ, ಬಳ್ಳಾರಿ ಜಿಲ್ಲೆಯ ಭೂಪ್ರದೇಶಕ್ಕೆ ವಲಸೆ ಬಂದ ಜನಸಂಖ್ಯೆ, ವಲಸೆ ಬರಲು ಕಾರಣಗಳು,

ವಲಸೆ ಮಾರ್ಗ, ಪ್ರಸರಣ, ಆ ಸಮುದಾಯವನ್ನು ಗುರುತಿಸುವುದು ಹೇಗೆ ಎಂಬುದನ್ನು ಕುರಿತು ಚರ್ಚಿಸಲಾಗಿದೆ.

ಗುಡಾರ ಹೂಡುವ ವಿಧಾನ, ಎಷ್ಟು ದಿನಗಳಿಗೊಮ್ಮೆ ಗುಡಾರ ಬದಲಾಯಿಸುತ್ತಾರೆ. ಕುರಿ ಮೇಯಿಸುವ ವಿಧಾನ, ಮೇಯಿಸಲು ತೆಗೆದುಕೊಂಡು ಹೋಗುವ ಸಾಮಾಗ್ರಿಗಳು, ಕುರಿ-ಮರಿ ಬಲೆ, ಸರದಿ ಕಾಯುವುದು, ಹಾಲು ಹಿಂಡುವ ಶೈಲಿ, ಕುರಿಗಳ ಪ್ರಸೂತಿ ಕಾರ್ಯ ವಿಧಾನ, ಬೀಜದ ಟಗರಿನ ಆಯ್ಕೆ, ಕುರಿ-ಮೇಕೆಗಳು ಮೇಯಿಸುವ ಮೇವಿನ ಹೆಸರುಗಳು, ಕುರಿಗಳ ಸಂವರ್ಧನೆ ಮತ್ತು ಸಂತಾನಾಭಿವೃದ್ಧಿ, ಮರಿಗಳ ಆರೈಕೆ ಮತ್ತು ಆಹಾರ, ಕುರಿಗಳನ್ನು ಗುರುತಿಸುವಿಕೆ ಇತ್ಯಾದಿ ಅಂಶಗಳನ್ನು ವಿಶ್ಲೇಷಣೆ ಮಾಡಲಾಗಿದೆ.

ಐದನೆಯ ಅಧ್ಯಾಯವು 'ಅಲೆಮಾರಿ ಕುರುಬರ ಆರ್ಥಿಕ ಜೀವನ' ಎಂಬ ಶೀರ್ಷಿಕೆಯನ್ನು ಹೊಂದಿದೆ. ಈ ಅಧ್ಯಾಯದಲ್ಲಿ ಅವರ ಆರ್ಥಿಕತೆಯ ಭಿನ್ನ ಆಯಾಮಗಳನ್ನು ವಿಶ್ಲೇಷಣೆ ಮಾಡಲಾಗಿದೆ. ಕುಟುಂಬದ ಖರ್ಚು-ವೆಚ್ಚಗಳನ್ನು ಸರಿದೂಗಿಸಲು ಯಾವ ಮೂಲಗಳಿಂದ ಆದಾಯವನ್ನು ಪಡೆಯುತ್ತಾರೆ. ಆದಾಯದ ಮೂಲಗಳಾದ ಕುರಿಗಳ ಮಾರಾಟ, ಮರಿಗಳ ಮಾರಾಟ, ಭೂಒಡೆತನ, ಕುರಿ ತಬ್ಬುವಿಕೆಯ ಭತ್ಯ, ಉಣ್ಣೆ, ಚರ್ಮ ಇತ್ಯಾದಿ ಅಂಶಗಳನ್ನು ಕುರಿತು ವಿಶ್ಲೇಷಿಸಲಾಗಿದೆ.

ಖರ್ಚಿನ ಮೂಲಗಳಾದ ಆಹಾರ ಧಾನ್ಯಗಳು, ಕಂಬಳಿ, ಭಂಡಾರ, ಮೆಟ್ಟು, ಹೊಟ್ಟೆಚೀಲ, ಕುರಿಗಳ ಔಷಧ, ಕುರಿ-ಮರಿ ಬಲೆ, ಕುರಿ ಮಕ್ಕಳ ಭತ್ಯ, ಕಟುಕರೊಂದಿಗಿನ ಸಂಬಂಧ, ಶೈಕ್ಷಣಿಕ ಮತ್ತು ರಾಜಕೀಯ ಸ್ಥಿತಿಗತಿಗಳನ್ನು ಕುರಿತು ಚರ್ಚಿಸಲಾಗಿದೆ.

ಆರನೆಯ ಅಧ್ಯಾಯವು 'ಅಲೆಮಾರಿ ಕುರುಬರ ಸಾಮಾಜಿಕ ಜೀವನ' ಕುರಿತದ್ದಾಗಿದೆ. ಈ ಅಧ್ಯಾಯದಲ್ಲಿ ಕುಟುಂಬ ಮತ್ತು ಬಂಧುತ್ವ, ವೈವಾಹಿಕ ಸಂಬಂಧ ಬೆಳೆಸುವಾಗ ಬಳಿ-ಬೆಡಗುಗಳ ಪಾತ್ರ, ಆಹಾರ ಪದ್ಧತಿ, ಉಡುಗೆ-ತೊಡುಗೆ, ಕುಲಪಂಚಾಯ್ತಿ, ನಾಟಿ ವೈದ್ಯಪದ್ಧತಿ, ಜೀವನಾವರ್ತ ಆಚರಣೆಗಳು, ವಾರ್ಷಿಕ ಆಚರಣೆಗಳು, ವಿಶೇಷ ಆಚರಣೆಗಳು ಹಾಗೂ ಅವರ ಆರಾಧ್ಯ ದೈವಗಳನ್ನು ಕುರಿತು ವಿಶ್ಲೇಷಿಸಲಾಗಿದೆ.

ಏಳನೆಯ ಅಧ್ಯಾಯದಲ್ಲಿ 'ಅಲೆಮಾರಿ ಕುರುಬರ ಸಮಸ್ಯೆಗಳು ಮತ್ತು ಪರಿಹಾರೋಪಾಯಗಳು' ಕುರಿತು ಚರ್ಚಿಸಲಾಗಿದೆ. ಅಲೆಮಾರಿ ಕುರುಬರು ಗುಡಾರ ಹೂಡಿದಾಗ, ಬದಲಾಯಿಸುವಾಗ, ಕುರಿ ಮೇಕೆಗಳನ್ನು ಮೇಯಿಸುವಾಗ ಅನುಭವಿಸುತ್ತಿರುವ ತೊಂದರೆಗಳು, ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಕಾರ್ಯಚಟುವಟಿಕೆಗಳು, ಸಮಸ್ಯೆಗಳ ನಿವಾರಣೆಗೆ ಸರ್ಕಾರ ಕೈಗೊಳ್ಳಬೇಕಾದ ಪರಿಹಾರೋಪಾಯಗಳನ್ನು ಕುರಿತು ಹೇಳಲಾಗಿದೆ.

ಮಹಾಪ್ರಬಂಧದ ಕೊನೆಯ ಅಧ್ಯಾಯವಾಗಿ 'ಸಮಾರೋಪ'ವಾಗಿದ್ದು, ಇದರಲ್ಲಿ ಎಲ್ಲ

ಅಧ್ಯಾಯಗಳ ಸಾರಾಂಶ ಒಳಗೊಂಡಿದೆ. ಈ ಅಧ್ಯಾಯದಲ್ಲಿ ಅಧ್ಯಯನದ ಫಲಿತಗಳು, ಅಧ್ಯಯನದ ಸಾಧ್ಯತೆಗಳ ಮಾಹಿತಿಗಳನ್ನು ಒಳಗೊಂಡಿದೆ. ಸಮಾರೋಪದ ನಂತರ ಅನುಬಂಧದಲ್ಲಿ ಅಂಕಿ ಅಂಶಗಳು, ಮಾಹಿತಿದಾರರ ಪಟ್ಟಿ, ಹಾಗೂ ಗ್ರಂಥಋಣಗಳನ್ನು ನೀಡಲಾಗಿದೆ.

ಫಲಿತಗಳು

ಪ್ರಸ್ತುತ ಅಧ್ಯಯನದಿಂದ ಕಂಡುಕೊಂಡ ಫಲಿತಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಲಾಗಿದೆ.

೧. ಪುರಾಣ ಪುಸ್ತಕಗಳ ಪ್ರಕಾರ ಪದ್ಮಗೊಂಡ ಕುರುಬರ ಮೂಲ ಪುರುಷ. ಇವನಿಂದಲೇ ಹತ್ತಿ ಮತ್ತು ಉಣ್ಣೆ ಕಂಕಣಗಳು ಹುಟ್ಟಿಕೊಂಡವು.

೨. ಹಾಲುಮತ ಪುರಾಣಗಳ ಪ್ರಕಾರ ಶಿವಪಾರ್ವತಿಯರು ಕುರಿ-ಮೇಕೆಗಳನ್ನು ಕಾದು ಹುತ್ತದಲ್ಲಿ ಅಡಗಿಸಿದ್ದರು. ಪದ್ಮಗೊಂಡನು ಹುತ್ತವನ್ನು ಅಗೆದಾಗ ಅದರೊಳಗಿಂದ ಕುರಿಗಳು ಹುಟ್ಟಿದವು. ಪ್ರಾಣಿಶಾಸ್ತ್ರದ ಪ್ರಕಾರ ಕುರಿ-ಮೇಕೆಗಳು ಆಕಳು ಕುಟುಂಬಕ್ಕೆ ಸೇರಿದವು ಅವನ್ನು ಪಶ್ಚಿಮ ಏಶಿಯಾದಲ್ಲಿ ಮೊದಲು ಪಳಗಿಸಲಾಯಿತು.

೩. ಉಷ್ಣ ಮತ್ತು ಸಮಶೀತೋಷ್ಣ ಹವಾಮಾನದಲ್ಲಿ ಕುರಿ-ಮೇಕೆಗಳ ಸಾಂದ್ರತೆ ಹೆಚ್ಚು. ೫೪೫ ರಿಂದ ೭೦೦ ಮಿ.ಮೀ. ಮಳೆ ಬೀಳುವ ಭೂಪ್ರದೇಶ ಕುರಿ ಸಾಕಾಣಿಕೆಗೆ ಉತ್ತಮವಾದದು.

೪. ಕುರಿಗಳ ಸಂಖ್ಯೆಯಲ್ಲಿ ಬೆಳಗಾವಿ ಜಿಲ್ಲೆ, ಮೇಕೆಗಳ ಸಂಖ್ಯೆಯಲ್ಲಿ ಗುಲ್ಬರ್ಗಾ ಜಿಲ್ಲೆ ಮೊದಲ ಸ್ಥಾನದಲ್ಲಿದೆ. ಉಡುಪಿ ಜಿಲ್ಲೆ ಕುರಿ-ಮೇಕೆಗಳೆರಡರಲ್ಲೂ ಕೊನೆಯ ಸ್ಥಾನದಲ್ಲಿದೆ. ಕುರಿ-ಮೇಕೆಗಳೆರಡರ ಸಾಂದ್ರತೆ(Density)ಯಲ್ಲಿ ಚಿತ್ರದುರ್ಗ ಮೊದಲ ಸ್ಥಾನದಲ್ಲಿದೆ. ಉಡುಪಿ ಕೊನೆಯ ಸ್ಥಾನದಲ್ಲಿದೆ.

೫. ಕರ್ನಾಟಕ ರಾಜ್ಯದಲ್ಲಿ ಡೆಕ್ಕನಿ, ಬಳ್ಳಾರಿ, ಹಾಸನ, ಬನ್ನೂರು, ಕೆಂಗುರಿ ಮತ್ತು ಯು.ಎ.ಎಸ್. ತಳಿಗಳನ್ನು ಸಾಕಲಾಗುತ್ತಿದೆ. ಬಳ್ಳಾರಿ ಜಿಲ್ಲೆಯಲ್ಲಿಯ ಅಲೆಮಾರಿ ಕುರುಬರು ಡೆಕ್ಕನಿ ಮತ್ತು ಬಳ್ಳಾರಿ ತಳಿಗಳನ್ನು ಸಾಕುತ್ತಿದ್ದಾರೆ.

೬. ಸಾಮಾನ್ಯವಾಗಿ ಕುರಿ-ಮೇಕೆಗಳ ಜೀವಿತಾವಧಿ ೧೦ ರಿಂದ ೧೨ ವರ್ಷಗಳು. ಕುರಿಗಳು ೯ ರಿಂದ ೧೩ ತಿಂಗಳು, ಮೇಕೆಗಳು ೧೦ ರಿಂದ ೧೨ ತಿಂಗಳೊಳಗೆ ಬೆದೆಗೆ ಬರುತ್ತವೆ. ಕುರಿ-ಮೇಕೆಗಳ ಗರ್ಭಧಾರಣೆಯ ಅವಧಿ ಸುಮಾರು ೫ ತಿಂಗಳು. ಮರಿ ಹಾಕಿದ ೨-೩ ತಿಂಗಳಲ್ಲಿ ಮತ್ತೇ ಬೆದೆಗೆ ಬರುತ್ತವೆ. ಟಗರು ಮತ್ತು ವೋತ ೧೨ ರಿಂದ ೧೫ ತಿಂಗಳ ಅವಧಿಗೆ ಪ್ರಾಯಕ್ಕೆ ಬರುತ್ತವೆ.

೭. ಕುರಿ-ಮೇಕೆಗಳು ಸಾಂಕ್ರಮಿಕ ರೋಗಗಳಿಗೆ ತುತ್ತಾಗುತ್ತಿದ್ದು, ವಾತಾವರಣದಿಂದ ಹರಡುತ್ತವೆ. ರೋಗಗಳ ನಿಯಂತ್ರಣಕ್ಕೆ ಅಲೆಮಾರಿ ಕುರುಬರು ಸೂಕ್ತ ಮಾಹಿತಿ ಹೊಂದಿರಬೇಕಾದ ಅಗತ್ಯವಿದೆ.

೮. ಅಲೆಮಾರಿ ಕುರುಬರು ಕರ್ನಾಟಕದ ಬೆಳಗಾವಿ ಜಿಲ್ಲೆಯವರು. ಇವರ ಚಲನವಲನಗಳು (ಅಲೆದಾಡುವಿಕೆ) ಬಳ್ಳಾರಿ ಜಿಲ್ಲೆಯಲ್ಲದೆ ಇತರೆ ಜಿಲ್ಲೆಗಳಿಗೂ ಪಸರಿಸಿದೆ.

೯. ವಲಸೆ ಬರಲು ಕುರಿ ಸಾಕಣೆ ಕುಟುಂಬಗಳ ಸಂಖ್ಯೆ ಅಧಿಕವಾಗಿರುವುದು. ಅಧಿಕ ಮಳೆಯಾಗುತ್ತಿರುವುದು, ವಾರ್ಷಿಕ ಬೆಳೆಗಳನ್ನು ಬೆಳೆಯುತ್ತಿರುವುದು.

